ಗೃಹಲಕ್ಷ್ಮಿ

ಅ. ನ. ಕೃಷ್ಣರಾಯ

ವಾಹಿನಿ ಪ್ರಕಾಶನ
ಯುಚಾಮರಾಜ ರಸ್ತೆ, ಬೆಂಗಳೂರು-೨

ಮೊದಲನೆಯ ಮುದ್ರಣ: ಜುಲೈ ೧೯೫೩

ಮುಖಚಿತ್ರ :
ಶ್ರೀ ಎಂ. ಟಿ. ವಿ. ಆಚಾರ್ಯ.

ಮುದ್ರಕರು
ಎಂ. ಎಸ್. ಚಿಂತಾಮಣಿ ಬಿ. ಎಸ್ಸಿ.,
"ಈಸ್ಟರ್ನ್ ಪ್ರೆಸ್", ಜಯಚಾಮರಾಜ ರಸ್ತೆ
ಬೆಂಗಳೂರು—೨.

ಮುನ್ನುಡಿ

...ರ್ನಾಟಕದಾದ್ಯಂತ ನೂತನ ವಿಚಾರ ಪ್ರಭಾವವನ್ನು ಬೀರಿದ
...ಾಹಿತ್ಯ ಮತ್ತು ಕಾಮಪ್ರಚೋದನೆ' ಗ್ರಂಥವನ್ನು ಪ್ರಕ
...ಾಹಿನಿ ಸಾಹಿತ್ಯ ಪ್ರಕಾಶಕರಾದ ಶ್ರೀ ಎಂ. ಎಸ್. ಚಿಂತಾಮಣಿ
... ಗೃಹಲಕ್ಷ್ಮಿ' ಕಾದಂಬರಿಯನ್ನು ಪ್ರಕಟಿಸುತ್ತಿರುವುದು ನನಗೆ
...ಸಂತೋಷವನ್ನುಂಟುಮಾಡಿದೆ. ಕನ್ನಡ ಓದುಗರಲ್ಲಿ ವಾಚನಾಭಿ
...ಕಷ್ಟು ಬೆಳೆದಿದೆ. ಪ್ರಕಟವಾಗುವ ಕಾದಂಬರಿಯ ಪ್ರತಿಗಳನ್ನು
...ದ ಇನ್ನೂರು ಜನರವರೆಗೆ ಓದುತ್ತಾರೆ. ಆದರೆ ಹಣಕೊಟ್ಟು
...ಕೊಳ್ಳುವವರ ಸಂಖ್ಯೆ ಇದೇ ಪ್ರಮಾಣದಲ್ಲಿ ಬೆಳೆದಿಲ್ಲ.
...ಗಳ ಬೆಲೆ ಹೆಚ್ಚು. ಕೊಳ್ಳುವುದು ಸಾಧ್ಯವಿಲ್ಲ' ಎಂಬುದೇ
... ವಾದ. ಆದರೆ ಇಂದಿನ ಮುದ್ರಣ, ಕಾಗದ, ಕೂಲಿಗಳ
...ೆಯಲ್ಲಿ ನೂರುಪುಟಕ್ಕೆ ಒಂದು ರೂಪಾಯಿಯಂತೆ ಪುಸ್ತಕಗಳ
...ಡಬೇಕಾದುದು ಪ್ರಕಾಶಕರಿಗೆ ಅನಿವಾರ್ಯವಾಗಿದೆ. ಪುಸ್ತಕ
... ಕೊಳ್ಳುವವರ ಸಂಖ್ಯೆ ಬೆಳೆದ ಹೊರತೂ ಅವುಗಳ ಬೆಲೆ
... ಸಾಧ್ಯವಿಲ್ಲ; ಪುಸ್ತಕಗಳ ಬೆಲೆ ಕಡಿಮೆಯಾದ ಹೊರತೂ
...ನ್ನು ಕೊಳ್ಳುವವರ ಸಂಖ್ಯೆ ಬೆಳೆಯುವುದಿಲ್ಲ. ಈ ವಿಷವ್ಯೂಹ
...ಾರಾಗುವುದು ಹೇಗೆ ಎಂಬ ಚಿಂತೆ ಸಾಹಿತಿಗಳು ಪ್ರಕಾಶಕರು
...ನ್ನು ಕಾಡುತ್ತಿದೆ. ಶ್ರೀ ಎಂ. ಎಸ್. ಚಿಂತಾಮಣಿಯವರು ಈ
...ಮನ್ನು ಪರಿಹರಿಸಲು ಧೈರ್ಯದಿಂದ ಮುನ್ನುಗ್ಗಿದ್ದಾರೆ.
... ಅಂದಚೆಂದದ ಕಡೆಗೇ ಲಕ್ಷ್ಯವಿಟ್ಟು ಪುಸ್ತಕದ ಬೆಲೆ ಏರುವಂತೆ
..., ಕಡಿಮೆ ಬೆಲೆಗೆ ಎಟಕುವಂತೆ ಅಂದಚೆಂದವನ್ನು ಹೊಂದಿ
... ಸಾಧಾರಣವಾಗಿ ರೂ ೩||, ರೂ ೪ ಬೆಲೆಯಿಡಬೇಕಾದ
...ವನ್ನು ರೂ ೧||ಗೆ ಕೊಡಲು ನಿಶ್ಚಯಿಸಿರುವ ಪ್ರಕಾಶಕರ ಸಾಹಸ

ಅಭಿನಂದನೀಯವಾದುದು. ಈ ಪ್ರಯತ್ನ ಸಫಲವಾದಲ್ಲಿ ಶ್ರೀ ಹಗಾ ಹಲವು ಉತ್ತಮ ಗ್ರಂಥಗಳನ್ನು ಕಡಿಮೆ ಬೆಲೆಯಲ್ಲಿ ವ ತ ಒದಗಿಸಲು ಸಮರ್ಥರಾಗುತ್ತಾರೆ. ಪ್ರಕಾಶಕರ ತ್ಯಾಗಬ ಣುತ್ತ ಅನುಲಕ್ಷಿಸಿ ಓದುಗರು ಪುಸ್ತಕ ಕೊಂಡು ಓದುವ ಅಭಿ ರ್ಣತಿ ಕೊಂಡರೆ ಅವರ ಸದುದ್ದೇಶ ಸಾರ್ಥಕವಾಗುತ್ತದೆ. ವನ

'ಗೃಹಲಕ್ಷ್ಮಿ' ಕಾದಂಬರಿಯಲ್ಲಿ ಕಳೆದ ತಲೆಮಾರಿನ ಜನ ಯನ್ನು ನಾನು ಚಿತ್ರಿಸಿದ್ದೇನೆ. ಇದರಲ್ಲಿ ಬರುವ ವ್ಯಕ್ತಿಗಳು ಒಂದ ಸಂಪ್ರದಾಯದ ಜಾಡಿನಲ್ಲಿ ಬೆಳೆದು ಬಂದವರು. ಇಂದು ಈ ಸಂಪ್ರ ದಾಯ ಜನತೆಗಷ್ಟು ಪ್ರಿಯವಾಗಿಲ್ಲ. ವೈಜ್ಞಾನಿಕ ಮನೋಭಾವ ಬೆಳೆ ಕೊಳ್ಳುತ್ತಿರುವ ಜನ ಪರಂಪರಾಗತ ಆಚಾರ ವಿಚಾರಗಳನ್ನು ಆದರಿಸ ವುದು ದುಸ್ತರ. ಮೂಲಭೂತ ಸಮಸ್ಯೆಯನ್ನು ನಾವು ಕೆದಕ ನೋಡೋಣ. ಈ ವೈಜ್ಞಾನಿಕ ಮನೋಭಾವ ನಮ್ಮನ್ನೆಲ್ಲಿ ಕ ದೊಯ್ಯುತ್ತಿದೆ ? ಇದರಿಂದ ನಮ್ಮ ವ್ಯಕ್ತಿತ್ವ ವಿಕಾಸವಾಗುತ್ತಿದೆಯೇ ? ಸಮಾಜ ಸಂಘಟಿತವಾಗುತ್ತಿದೆಯೇ ? ರಾಷ್ಟ್ರ ಬಲಗೊಳ್ಳುತ್ತಿದೆಯೇ ? ಪ್ರಾಚೀನ ಪರಂಪರೆಯನ್ನು ತಿರಸ್ಕರಿಸಲು ಸಿದ್ಧವಾಗುತ್ತಿರುವ ನಾವು ಅದರ ಸ್ಥಾನದಲ್ಲಿ ಯಾವದನ್ನು ಪ್ರತಿಷ್ಠಿಸಲು ಸಿದ್ಧರಾಗಿದ್ದೇವೆ— ಅಮೇರಿಕಾದ ಡಾಲರಿಸಮ್ಮೆ (Dollarism)—ರಷ್ಯಾದ ಕಮ್ಯೂನಿಸಮ್ಮೆ !

ಸಾಹಿತ್ಯ, ವಿಜ್ಞಾನ, ಕಲೆ, ಧರ್ಮದ ಅಂತಿಮಗುರಿ ಮಾನವ ಕಲ್ಯಾಣಸಾಧನೆ. ಈ ಉದ್ಯಮದಲ್ಲಿ ಕೃತಕೃತ್ಯತೆ ಪಡೆಯಲಿಚ್ಛಿಸುವ ನಾಡು ತನ್ನ ಅಜ್ಞಾನವನ್ನು ನೀಗಿಕೊಳ್ಳಬೇಕು. ಪರಂಪರೆ ಅಜ್ಞಾನ ಪೋಷಕವಾದಲ್ಲಿ ಅದನ್ನು ನಿರಾಕರಿಸಬೇಕು – ಅರ್ವಾಚೀನ ತತ್ವ ಸಮುದಾಯ ಅಜ್ಞಾನ, ಅಶಾಂತಿ, ಅನೈಕ್ಯ, ಅವಿಶ್ವಾಸ ಪೋಷಕವಾದಲ್ಲಿ ಅದನ್ನೂ ನಿರಾಕರಿಸಬೇಕು. ಪ್ರಾಚೀನ, ಅರ್ವಾಚೀನಗಳೆರಡನ್ನೂ ನಿರಾಕರಿಸಿದ ಮಾನವನ ಗತ್ಯಂತರವೇನು ?

ಸಮಸ್ಯೆಯನ್ನೆದುರಿಸಲು 'ಗೃಹಲಕ್ಷ್ಮಿ'ಯಲ್ಲಿ ನಾನು ...ಸ್ಟೇನೆ. ಋಜು ಬಾಳ್ವೆಯನ್ನು ಪರಿಶುದ್ಧ ಮನಸ್ಕತೆಯನ್ನು ...ಮಾನವಪ್ರೇಮವನ್ನು ಬೆಳಸುವ ಪ್ರಾಚೀನ ಪರಂಪರೆಯ ...ಸ್ಕಾರಗಳನ್ನು ನಾವು ಉಳಿಸಿಕೊಳ್ಳಬೇಕು. ರಂಗಮ್ಮ, ...ಮ್ಮ, ಅಚ್ಯುತಪ್ಪ, ಷರೀಫ್, ಜವರೇಗೌಡರು ಪ್ರಾಚೀನ ...ತಿಯ ವಿಕಸಿತ ಕುಸುಮಗಳು. ಅದೇ ಪರಂಪರೆಯನ್ನು ಅಪಾರ್ಥ ...ಕೊಂಡಿದ್ದ ರಾಘವೇಂದ್ರರಾಯ ಸೋಮೇಶ್ವರ ಅಯ್ಯರ್, ...ತದೇವರು, ಕೇಶವಯ್ಯಂಗಾರ್, ವೆಂಕಣ್ಣ ಇವರು ವಿಪರ್ಯಾ... ಮಾಧವರಾಯನ ಮಾನವವಾದ, ರುಕ್ಮಿಣಿಯಮ್ಮನ ...ಾದ ಎರಡರಲ್ಲಿಯೂ ನಮ್ಮ ನಾಡಿನ ಸಂಸ್ಕೃತಿಯ ಜೀವಜೀವಾಳ ...ವಾಗಿದೆ.

'ಗೃಹಲಕ್ಷ್ಮಿ' ಪ್ರಚೋದಿಸುವ ಇನ್ನೊಂದು ವಿಚಾರ ...ಯ ಕಡೆಗೆ ಓದುಗರ ಲಕ್ಷ್ಯವೆಳೆಯಲು ಬಯಸುತ್ತೇನೆ. ...ದಮ್ಮ, ರಾಮಣ್ಣಾಚಾರ್ಯರ ಮೂಢಭಕ್ತಿ ಆಧುನಿಕ ವಿಚಾರ ...ಸರಣಿಗೆ ಒಗ್ಗುವುದಿಲ್ಲ. ರಾಮಣ್ಣಾಚಾರ್ಯರ ಶ್ರದ್ಧಾಭಕ್ತಿಯನ್ನು ... ತುಂಬ ಗೌರವಿಸುತ್ತೇನಾದರೂ ಅವರ ಜೀವನವನ್ನು ಅನು...ಲು ಅನುಸರಿಸಲು ನಾನು ಬಯಸುವುದಿಲ್ಲ. ಇದಕ್ಕೆ ಜೀವನ ...ುದ ದೃಷ್ಟಿವೈವಿಧ್ಯವೂ ಕಾರಣವಾಗಿರಬಹುದು. ಸಹನೆ, ...ಷ್ಣುತೆಯೇ ಸಂಸ್ಕೃತಿಯ ಸಂಕೇತಗಳೆಂದು ನಾವು ಒಪ್ಪುವುದಾದರೆ ...ಣ್ಣಾಚಾರ್ಯರ ಹಾಗೂ ಗೋದಮ್ಮನವರ ಧಾರ್ಮಿಕ ಜೀವನ ... ನಾವು ಗೌರವಿಸಲೇಬೇಕು. ವೈವಿಧ್ಯದಲ್ಲಿರುವ ಏಕರೂಪತೆ...ನ್ನು ಅರಸುವ ಜೀವ, ಎಲ್ಲಿ ಶ್ರದ್ಧೆ, ಭಕ್ತಿ, ಸಾಧನ, ತ್ಯಾಗವಿದೆಯೋ ... ತಲೆಬಾಗುತ್ತದೆ. ಪರಸ್ಪರ ಗೌರವ, ಸಹಾನುಭೂತಿ ...ುದೆ ನಾಡಿನ ಸಂಸ್ಕೃತಿ ಬೆಳೆಯುವುದಿಲ್ಲ.

'ಗೃಹಲಕ್ಷ್ಮಿ'ಯನ್ನು ನಾನು ಪರಮ ಸಂತೋಷದಿಂದ

ಓದುಗರಿಗೆ ಅರ್ಪಿಸುತ್ತಿದ್ದೇನೆ. ಕ್ರಿಯಾಶಾಲಿಯಾದ ಬರಹಗಾರ ನಿತ್ಯ - ಅತೃಪ್ತ ಜೀವಿ. ಪೂರ್ಣತೆಯನ್ನರಸುವ ಜೀವ ತ ಪ್ರತಿಯೊಂದು ಕೃತಿಯಲ್ಲಿಯೂ ಅಪೂರ್ಣತೆಯನ್ನೇ ಕಾಣುತ್ತ ಆದರೆ ಆ ಜೀವಕ್ಕೂ ಒಮ್ಮೊಮ್ಮೆ ಧೈರ್ಯಕೊಡಲೆಂಬಂತೆ ಪೂರ್ಣತೆ ಛಾಯಾದರ್ಶನವಾಗುತ್ತದೆ. 'ಗೃಹಲಕ್ಷ್ಮಿ' ಈ ದರ್ಶನಭಾಗ್ಯವನ್ನು ಒದಗಿಸಿ ನನ್ನನ್ನು ಧನ್ಯನಾಗಿ ಮಾಡಿದೆ. ಹಲವು ಪವಿತ್ರ ಜೀವಿಗ ಪವಿತ್ರಾದರ್ಶ, ಪವಿತ್ರೋಪದೇಶಗಳೊಂದಿಗೆ ವಿಹರಿಸಿರುವ ನನ್ನ ಅಂತರಾತ್ಮ ಅಭೂತಪೂರ್ವ ಆನಂದವನ್ನನುಭವಿಸಿದೆ. ಆ ಆನಂದಾನು ಭವವೇ ನನ್ನ ಓದುಗರಿಗಾಗಲಿ ಎಂದು ಬಯಸುತ್ತೇನೆ.

'ಗೃಹಲಕ್ಷ್ಮಿ' ಯ ಕಥೆ ಇಲ್ಲಿಗೆ ಮುಗಿದಿಲ್ಲ. ಮುಂದಿನ ಭಾಗದಲ್ಲಿ ಇದು ಪೂರ್ಣತೆ ಪಡೆಯುತ್ತದೆ.

ಈ ಗ್ರಂಥ ಹೊರಬೀಳಲು ನೆರವಾದ ಗೆಳೆಯ ಶ್ರೀ ಡಿ ಕಾಮೇಶ್ ಅವರಿಗೂ, ಶ್ರೀ ಎಂ. ಎಸ್. ಚಿಂತಾಮಣಿಯವರಿಗೂ ನನ ನೆನಕೆ ಸಲ್ಲುತ್ತದೆ.

"ಅನ್ನಪೂರ್ಣ" ಅ. ನ. ಕೃಷ್ಣರಾಯ

ವಿಶ್ವೇಶ್ವರಪುರಂ, ಬೆಂಗಳೂರು ೨.

೧-೮-೧೯೫೩

ಗೃಹಲಕ್ಷ್ಮೀ

೧

ರಂಗಮ್ಮ ಹೊರಲಾರದೆ ನೀರು ಹೊತ್ತು ತಂದರು. ತಲೆಯ ಮೇಲೆ ಒಂದು ದೊಡ್ಡ ಬಿಂದಿಗೆ, ಅದರ ಮೇಲೆ ಒಂದು ಸಣ್ಣ ಬಿಂದಿಗೆ ಅದರ ಮೇಲೊಂದು ತಂಬಿಗೆ, ಕೊಂಕುಳಲ್ಲಿ ಮತ್ತೊಂದು ದೊಡ್ಡ ಬಿಂದಿಗೆ.

ಮನೆ ಮುಟ್ಟಿದೊಡನೆಯೇ, ಜಗುಲಿಯ ಮೇಲೆ ಸ್ವಲ್ಪ ನೀರು ಚೆಲ್ಲಿ ಕಂಕುಳಲ್ಲಿದ್ದ ಬಿಂದಿಗೆಯನ್ನು ಇಳಿಸಿ, ಮೆಲ್ಲನೆ ತಲೆಯ ಮೇಲಿನ ಹೊರೆಯನ್ನು ಕೆಳಗಿಳಿಸಿದರು.

ಬಿಂದಿಗೆಯನ್ನೆತ್ತಿಕೊಂಡು ಒಳಗೆ ರಂಗಮ್ಮ ಪ್ರವೇಶಿಸಿದಾಗ ಅವರ ಕಣ್ಣಿಗೆ ಮೊದಲು ಬಿದ್ದುದು ಒಂದು ದೊಡ್ಡ ಗಂಟು. ನೀರಿನ ಪಾತ್ರೆಗಳನ್ನೆಲ್ಲಾ ಒಳಗೆ ಸಾಗಿಸಿ 'ರುಕ್ಮಿಣಿ' ಎಂದು ಕೂಗಿದರು. ಮನೆಯ ಹಿಂದೆ ಆಡುತ್ತಿದ್ದ ರುಕ್ಮಿಣಿ ತಾಯಿಯ ಧ್ವನಿ ಕೇಳಿ ಓಡಿ ಬಂದು 'ಏನಮ್ಮ' ಎಂದಳು.

"ಯಾರದೇ ಗಂಟು ?"

"ಯಾರೋ ಆಚಾರ್ರಂತಮ್ಮ, ಬಂದಿದ್ದಾರೆ."

"ಎಲ್ಲಿಗೆ ಹೋದರು."

"ಗಿಡ್ಡಪ್ಪನ ಕೊಳಕ್ಕೆ ಹೋಗಿ ಸ್ನಾನಮಾಡಿಕೊಂಡು ಬರುತ್ತೇನೆಂದು ಹೋದರು."

ಹೊರಲಾರದೆ ಹೊರೆ ಹೊತ್ತುಕೊಂಡು ಬಿಸಿಲಿನಲ್ಲಿ ಬಂದಿ ರಂಗಮ್ಮ ತೊಟ್ಟಿಯ ಕಂಬ ಒರಗಿಕೊಂಡು ಕುಳಿತುಬಿಟ್ಟರು.

ಆಚಾರ್ರು ಸ್ನಾನ ಮುಗಿಸಿಕೊಂಡು ಬರುವುದಕ್ಕೆ ತಡವಾಗಲಿ ದ್ವಾದಶನಾಮ ಧರಿಸಿಕೊಂಡು ಬಾಯಲ್ಲಿ ವಾಯುಸ್ತುತಿ ಹೇ ಕೊಂಡು, ಕೈಯಲ್ಲಿ ದೇವರ ಪೆಟ್ಟಿಗೆ ಹಿಡಿದು ಬಂದ ಆಚಾರ್ರನ ರಂಗಮ್ಮ ಸ್ವಾಗತಿಸಿ

"ಯಾವಾಗ ಬಂದಿರಿ ಆಚಾರ್ರೇ" ಎಂದು ಕೇಳಿದರು.

"ನಿನ್ನೆ ರಾತ್ರಿ ಬೆಂಗಳೂರಿಗೆ ಬಂದೆನಮ್ಮ. ಈಗ ಇಲ್ಲಿಗೆ ಬಂದೆ

"ಯಾತ್ರೆ ಸಾಂಗವಾಗಿ ನೆರವೇರಿತೇ ?"

"ದಿವ್ಯವಾಗಿ ಆಯಿತಮ್ಮ. ಕೇಳಬೇಕಾದದ್ದೇನು. ಕಾಶಿ ರಾಮೇಶ್ವರ ಹರಿದ್ವಾರ, ಗಯಾ ಯಾತ್ರೆ ಮಾಡಲನುಕೂಲ ಮಾ ಕೊಟ್ಟು ರಾಯರೂ ನೀವೂ ಪುಣ್ಯ ಕಟ್ಟಿಕೊಂಡಿರಿ."

ರಾಯರ ಹೆಸರು ಕಿವಿಯ ಮೇಲೆ ಬಿದ್ದೊಡನೆಯೇ ರಂಗಮ್ಮನ ವರ ಕಣ್ಣಲ್ಲಿ ಕೋಡಿ ಹರಿಯಿತು. ಆಚಾರ್ರ ಮನಸ್ಸಿಗೂ ತುಂ ವ್ಯಥೆಯಾಯಿತು.

"........ ವರ್ಷದ ಮೇಲಾಯಿತಲ್ಲವೇ !"

"ವರ್ಷ ಆರು ತಿಂಗಳಾಯಿತು ಆಚಾರ್ರೇ."

"ಅನಂತ, ಶ್ರೀನಿವಾಸಮೂರ್ತಿ ಯಾರೂ ಕಾಣುವುದೇ ಇಲ್ಲ.

"ಅಯ್ಯೋ ! ಅದು ದೊಡ್ಡ ಕಥೆ. ಊಟವಾಗಲಿ ನಿಧಾ ವಾಗಿ ಹೇಳುತ್ತೇನೆ." ಎಂದು ಎದ್ದರು.

"ಈಗ ನನಗೋಸ್ಕರ ಪುನಃ ಅಡಿಗೆ ಮಾಡಬೇಕಾಗುತ್ತದೊ ಏನೋ ?"

"ಏನೂ ಇಲ್ಲ. ಎಲ್ಲಾ ಇದೆ. ಅನ್ನವೊಂದು ಮಾಡಿದರ ಯಿತು." ಎಂದು ರಂಗಮ್ಮನವರು ಒಳಕ್ಕೆ ಹೋದರು.

ರಂಗಮ್ಮನವರ ಕೊರಳಲ್ಲಿ, ಕೈಗಳಲ್ಲಿ ಇದ್ದ ಒಡವೆಗಳೆಲ್ಲಾ ಮಾಯವಾಗಿದ್ದುದು ಆಚಾರ್ರ ಸೂಕ್ಷ್ಮ ನೇತ್ರಗಳಿಗೆ ಬೀಳದಿರಲಿಲ್ಲ.

ಆಚಾರ್ರು ಮನೆಯ ಸುತ್ತ ಕಣ್ಣು ಹೊರಳಿಸಿದರು. ಶೂನ್ಯತೆ
ಸಿಸಿತ್ತು. ಮನೆ 'ಬಿಕೋ' ಎನ್ನುತ್ತಿತ್ತು. ಸದಾ ಜನಭರಿತವಾ
ಮನೆಯ ತೊಟ್ಟಿ ಹಾಳು ಹಾಳು ಸುರಿಯುತ್ತಿತ್ತು. ಅದು
ಯರಿಲ್ಲದ ಮನೆ' ಎಂಬುದನ್ನು ಯಾರೂ ಹೇಳಬೇಕಾಗಿರಲಿಲ್ಲ.
ಯ ಪ್ರತಿಯೊಂದು ಮೂಲೆಯೂ ಆ ಸಂಸಾರದ ದುರಂತ ಕಥೆ
ನ್ನಿಸುರುತ್ತಿತ್ತು.

ಆಚಾರ್ರ ಸ್ಮೃತಿ ಹಿಂದಕ್ಕೆ ಹೋಗಿ ರಾಯರ ಜೀವನ ಚಿತ್ರಗ
ತಂದು ಎದುರಿಗೆ ನಿಲ್ಲಿಸಿತು.

ಪಕ್ಕದ ಮನೆಗೆ ಆಟಕ್ಕೆ ಹೋಗಿದ್ದ ರಾಮು 'ಅಮ್ಮಾ' ಎಂದು
ಕೊಂಡೇ ಒಳಗೆ ಬಂದ. ತೊಟ್ಟಿಯಲ್ಲಿ ಕುಳಿತಿದ್ದ ಆಚಾರ್ರನ್ನು
ತೂಹಲದಿಂದ ನೋಡಿಕೊಂಡು ಅಡಿಗೆಯ ಮನೆ ಪ್ರವೇಶಿಸಿದ.

ರಾಮುವನ್ನು ನೋಡಿ ಆಚಾರ್ರ ಅಂತಃಕರಣ ಕಲಕಿ ಹೋಯಿತು.
ಸಿರುಬಿಟ್ಟು 'ಶ್ರೀ ಹರಿ – ಶ್ರೀ ಹರಿ' ಎಂದರು.

ಆಚಾರ್ರು, ಅವರ ಹಾಗೆ ನೂರಾರು ಜನ ವೆಂಕಟರಾಯರ
ಯಲ್ಲಿ ಉಂಡು ತಿಂದು ಬದುಕಿ ಹೋಗಿದ್ದರು. ಗಂಡ ಉದಾರಿ
ಗಿದ್ದರೆ ಹೆಂಡತಿ ಜಿಪುಣಿಯಾಗಿರುವುದು ಸ್ವಾಭಾವಿಕ. ಆದರೆ
ಕಟರಾಯರು ರಂಗಮ್ಮ ಈ ನಿಯಮವನ್ನತಿಕ್ರಮಿಸಿದ್ದರು. ಪುಟ್ಟ
ಮನಹಳ್ಳಿಯಲ್ಲಿ ಮಾತ್ರವೇ ಅಲ್ಲದೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ,
ಪದಲ್ಲಿದ್ದ ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ರಾಯರ ಹೆಸರು
ರ್ಯಕ್ಕೆ ಪ್ರಸಿದ್ಧವಾಗಿತ್ತು. ಅವರ ಔದಾರ್ಯದ ಪ್ರಯೋಜನ
ಮಕೊಳ್ಳದಿದ್ದವರು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿರಳ.

ಪೌರಾಣಿಕರು, ಹರಿಕಥೆ ದಾಸರು, ಶಾಸ್ತ್ರ ಹೇಳುವವರು,
ರು, ಪಂಡಿತರು ರಾಯರ ಮನೆಯಲ್ಲಿ ತಿಂಗಳು ಗಟ್ಟಲೆ ನಿಂತು
ರ ಆದರಾತಿಥ್ಯದ ಲಾಭ ಪಡೆಯುತ್ತಿದ್ದರು ಔದಾರ್ಯ ದೈವಭಕ್ತಿ
ತೂ ಸಮವಾಗಿ ಬೆರೆತು ರಾಯರ ಮನೆಯನ್ನು 'ಧರ್ಮ ಛತ್ರ'
ಡಿತ್ತು.

ವೆಂಕಟರಾಯರು ಜೀವನವನ್ನು ಬರಿಗೈಯಿಂದ ಆರಂಭಿಸ ದ್ದರೂ ಅವರ ಅಭಿವೃದ್ಧಿಗೆ ದೈವಬಲವಿತ್ತೆಂದು ಧಾರಾಳವಾಗಿ ಹೇ ಬಹುದಾಗಿತ್ತು. ರಾಯರು ಮನೆ ಕಟ್ಟಿಸುವಾಗ ಎರಡು ಕೊಪ್ಪರಿ ಹೊನ್ನು ಸಿಕ್ಕಿತು ಎಂದು ಜನ ಆಡಿಕೊಳ್ಳುತ್ತಲೂ ಇದ್ದರು. ಆದ ಹೊನ್ನನ್ನು ರಾಯರು ಕೊಪ್ಪರಿಗೆಗಳಲ್ಲಿ ಕಾಣಲಿಲ್ಲ—ಮಾನವಹೃದಂ ದಲ್ಲಿ ಕಂಡರು.

ರಾಯರು ವಂಶ ಪಾರಂಪರ್ಯವಾಗಿ ಬಂದಿದ್ದ ಆಸ್ತಿಯನ್ನು ರೂ ಸಿಕೊಳ್ಳುವುದರ ಜತೆಗೆ ತಾವೂ ಆಸ್ತಿ ಕೂಡಿಸುತ್ತ ಬಂದರು. ಮ ಬೆಳೆ ಚೆನ್ನಾಗಿ ನಡೆಯುತ್ತಿತ್ತು. ರೈತರ ಬೆಂಬಲವೂ ಇತ್ತು. ರಾಯ ಆರ್ಥಿಕ ಪರಿಸ್ಥಿತಿ ದಿನದಿನಕ್ಕೆ ಸುಧಾರಿಸ ತೊಡಗಿತು.

ಬೇಸಾಯದ ಜತೆಗೆ ರಾಯರು ಆಗಾಗ್ಗೆ ಕಂಟ್ರ್ಯಾಕ್ಟ್ ಕೆಲ ಗಳನ್ನು ಮಾಡುತ್ತಿದ್ದರು ಸುತ್ತಮುತ್ತಲಿನ ಕೆರೆಗಳ ಕೆಲಸವೆಲ್ ರಾಯರ ಪಾಲಿಗೇ ಬೀಳುತ್ತಿತ್ತು. ಕಂಟ್ರ್ಯಾಕ್ಟಿನಲ್ಲಿ ಅನ್ಯಾಯ ಸಂಪಾದನೆಗೆ ರಾಯರು ಹೋಗದಿದ್ದುದರಿಂದ ಜನಾನುರಾಗ ಅಧಿಕಾ ಗಳ ಅನುರಾಗ ಎರಡನ್ನೂ ಸಂಪಾದಿಸಿಕೊಂಡಿದ್ದರು.

ರಾಯರ ಯಶಸ್ಸನ್ನು ಊರ್ಜಿತಗೊಳಿಸಿದವರು ರಂಗಮ ಅಚ್ಚುಕಟ್ಟಾಗಿ ಮನೆಯ ವ್ಯವಸ್ಥೆ ನೋಡಿಕೊಳ್ಳುತ್ತಿದ್ದುದಲ್ಲದೆ, ಎಲ್ಲ ಕಷ್ಟದಲ್ಲಿಯೂ ನೆರವಾಗಿ, ಎಲ್ಲರ ಭಕ್ತಿ ಗೌರವವನ್ನೂ ರಂಗವ ದೊರಕಿಸಿಕೊಂಡಿದ್ದರು.

ರಾಯರಿಗೆ ವಂಶಪಾರಂಪರ್ಯವಾಗಿ ಸ್ವಲ್ಪ ಆಸ್ತಿ ಬಂದಂತೆ ವೈ ವಿದ್ಯೆಯೂ ಬಂದಿತ್ತು. ವೆಂಕಟರಾಯರು ಜೀವನಕ್ಕಾಗಿ ವೈದ್ಯವ ಯನ್ನು ಅವಲಂಬಿಸಬೇಕಾಗಿರಲಿಲ್ಲ. ವಂಶಪಾರಂಪರ್ಯವಾಗಿ ಬಂ ವಿದ್ಯೆಯನ್ನು ಕಳೆದುಕೊಳ್ಳಬಾರದೆಂಬ ಅಭಿಮಾನ; ಜತೆಗೆ ಹ ಜನಕ್ಕೆ ಉಪಕಾರಮಾಡುವ ಮನೋವೃತ್ತಿ ಅವರು ವೈದ್ಯವನ್ನು ರೂ ಸಿಕೊಳುವುದಕ್ಕೆ ಕಾರಣವಾಯಿತು. ಯಾರಿಗೆ ಎಂಥ ಘನಔಷ ಮಾಡಿಕೊಟ್ಟರೂ ಚಿಕ್ಕಾಸು ಮುಟ್ಟುತ್ತಿರಲಿಲ್ಲ. ಹತ್ತು ಜನಕ್ಕೆ ಪ್ರಯೆ

ಜನವಾಗುವ ವಿದ್ಯೆ ತಮ್ಮಲ್ಲಿಯೇ ಇದ್ದು ಹೋಗಬಾರದೆಂದು ತಮ್ಮ ಹೆಂಡತಿಗೂ ವೈದ್ಯ ಹೇಳಿ ಕೊಟ್ಟಿದ್ದರು. ದಂಪತಿಗಳಿಬ್ಬರೂ ಜನ ಸೇವೆಯನ್ನು ನಿಷ್ಕಲ್ಮಷ ಹೃದಯದಿಂದ ಮಾಡುತ್ತಿದ್ದರು.

ರಾಯರ ಸ್ಥಿತಿ ದಿನದಿನಕ್ಕೆ ಸುಧಾರಿಸುತ್ತ ಹತ್ತು, ಹನ್ನೆರಡು ವರ್ಷಗಳಲ್ಲಿ ತುಂಬ ಉಚ್ಛ್ರಾಯಕ್ಕೆ ಬಂದಿತು. ಮನೆಯಲ್ಲಿ ಮೂರು ಎಮ್ಮೆ, ನಾಲ್ಕು ಹಸು, ಆರಂಬಕ್ಕೆ ನಾಲ್ಕು ಜತೆ ಎತ್ತು, ಎರಡು ಬಂಡಿಗಳಲ್ಲದೆ, ರಾಯರ ಓಡಿಯಾಟಕ್ಕೆ ಕುದುರೆಗಾಡಿ.

ರಾಯರು, ರಂಗಮ್ಮ ಇಬ್ಬರಲ್ಲಿಯೂ ಧನಸಂಗ್ರಹ ಮಾಡುವ ಬುದ್ಧಿಯಿರಲಿಲ್ಲ. ಆಗಿನ್ನೂ ನೋಟುಗಳು ಚಲಾವಣೆಗೆ ಬಂದಿರಲಿಲ್ಲ. ರೂಪಾಯಿ, ಎಂಟಾಣೆ, ಪಾವಲಿ, ಎರಡಾಣೆ ನಾಣ್ಯಗಳ ಚಲಾವಣೆಯ ಕಾಲ. ರಾಯರು ನಗದು ಹಣವನ್ನೆಲ್ಲಾ ಎರಡು ಹಂಡೆಗಳಲ್ಲಿ ತುಂಬಿಡು ತ್ತಿದ್ದರು. ಯಾರಿಗಾದರೂ ದಾನಧರ್ಮ ಕೊಡಬೇಕಾದರೆ ಹಂಡೆ ಯೊಳಗೆ ಕೈಯಿಟ್ಟು ಕೈಗೆ ಸಿಕ್ಕಿದಷ್ಟು ಹಣವೆತ್ತಿಕೊಂಡು ದಾನಕೊಡು ವುದು ಅವರ ಪದ್ಧತಿಯಾಗಿತ್ತು.

ರಾಯರಿಗೆ ಯಾವ ಕೊರತೆಯಿಲ್ಲದಿದ್ದರೂ ಮನಸ್ಸಿಗೆ ನೆಮ್ಮದಿ ಯಿರಲಿಲ್ಲ. ದೊಡ್ಡ ಮಗ ಅನಂತನ ರೀತಿನೀತಿಗಳನ್ನು ಕಂಡು ರಾಯರು ಒಳಗೇ ಕೊರಗುತ್ತಿದ್ದರು. ಹೈಸ್ಕೂಲ್‌ವರೆಗೆ ಓದಿದ ಅನಂತ ಶಾಲೆ ಯನ್ನು ಬಿಟ್ಟು ಮನಸ್ಸಿಗೆ ತಿರುಗಿಕೊಂಡಿದ್ದ. ದುಷ್ಟಸಹವಾಸವೂ ಗಂಟುಬಿದ್ದಿತ್ತು. ಸಹವಾಸ ದೋಷದಿಂದ ದುಷ್ಟಹವ್ಯಾಸಗಳೂ ಗಂಟು ಬಿದ್ದಿದ್ದವು ಹತ್ತು ಹದಿನೈದು ದಿನ ಕಾಣೆಯಾಗುತ್ತಿದ್ದ ಅನಂತ ಒಂದು ದಿನ ಇದ್ದಕ್ಕಿದ್ದಂತೆ ಅವತರಿಸಿ, ಕೈಗೆ ಸಿಕ್ಕಿದಷ್ಟು ಹಣ, ಒಡವೆಗಳನ್ನು ಹೊತ್ತುಕೊಂಡು ಹೋಗುತ್ತಿದ್ದ. ಅನಂತನನ್ನು ದಾರಿಗೆ ತರಲು ವಿಶ್ವ ಪ್ರಯತ್ನಮಾಡಿ ರಾಯರು ನಿರಾಶೆಗೊಂಡಿದ್ದರು.

"ಅನಂತನಿಗೆ ಮದುವೆಮಾಡಿದರೆ ಸರಿಹೋಗುತ್ತಾನೆ ನೋಡಿ. ಅವನ ಕಾಲಿಗೆ ಬೇಡಿ ಬಿದ್ದ ಹೊರತೂ ಅವನಿಗೆ ಬುದ್ಧಿ ಬರುವುದಿಲ್ಲ." ಎಂದು ರಂಗಮ್ಮನವರು ಗಂಡನಿಗೆ ಹೇಳಿ ನೋಡಿದರು. ರಾಯರು

ಯೋಚನೆಮಾಡಿ

"ಅನಂತನ ಹಾಗೆ ಒಬ್ಬ ಹುಡುಗ ಇದ್ದರೆ ಅವನಿಗೆ ನಿನ
ಮಗಳನ್ನು ಕೊಟ್ಟು ಮದುವೆಮಾಡಲೊಪ್ಪುವೆಯಾ ?" ಎಂದರು.

ರಂಗಮ್ಮನವರ ಬಾಯಿ ಕಟ್ಟಿದಂತಾಯಿತು.

"ಕಂಡವರು ಸಾಕಿದ ಗಿಣಿತಂದು ಈ ಬೆಕ್ಕಿನಪಾಲು ಮಾಡ
ವುದು ಯಾವ ನ್ಯಾಯ ? ಅವನ ಹಣೆಯಲ್ಲಿ ಏನು ಬರೆದಿದೆಯೋ ಅದೆ
ಆಗುತ್ತದೆ. ಅವನ ಗ್ರಹಚಾರ ಬದಲಿಸಲು ನಮ್ಮಿಂದ ಸಾಧ್ಯವೇ ?
ಎಂದು ಹೇಳಿದ್ದರು.

ಶ್ರೀನಿವಾಸ ಅಣ್ಣನಜಾಡು ಹಿಡಿಯದಿರಲೆಂದು ಅವನನ್ನು ತಮ
ಜತೆ ಕರೆದುಕೊಂಡು ಹೋಗುತ್ತಿದ್ದರು. ವ್ಯವಸಾಯ, ಕಂಟ್ರಾಕ್
ಕೆಲಸದ ಪರಿಚಯ ಮಾಡಿಕೊಂಡು ಶ್ರೀನಿವಾಸನಾದರೂ ಮನೆಗೆ ದಿಕ್ಕಾ
ಗಲಿ ಎಂಬುದು ರಾಯರ ಉತ್ಕಟೇಚ್ಛೆಯಾಗಿತ್ತು.

ರುಕ್ಮಿಣಿ ರಾಯರ 'ಪ್ರೇಮದ ಪುತ್ಥಳಿ' ಯಾಗಿದ್ದಳು. ಅವ
ಗೆಷ್ಟು ಬಟ್ಟೆ ಹೊಲಿಸಿದರೂ ಸಾಲದು; ಅವಳ ಮೈಮೇಲೆ ಎಷ್ಟ
ಒಡವೆ ಹೇರಿದರೂ ಸಾಲದು. ರಾಯರೇ ಕಲಿಸಿಕೊಟ್ಟದ್ದ ಯಾವ
ದಾದರೂ ದೇವರನಾಮ ರುಕ್ಮಿಣಿ ಹೇಳಿದರೆ ರಾಯರ ಆನಂದಕ
ಪಾರವೇ ಇರುತ್ತಿರಲಿಲ್ಲ.

ರಾಯರ ಆಶ್ರಿತರಲ್ಲಿ ಒಬ್ಬರಾಗಿದ್ದ ಪೌರಾಣಿಕ ಶೇಷಾಚಾರ್ರ
ರುಕ್ಮಿಣಿಗೆ ರಾಮಾಯಣ, ಭಾರತ, ಭಾಗವತದ ಕಥೆಗಳನ್ನು ಪಾ
ಮಾಡಿಸಿದ್ದರು. ರಾಯರು ಮನೆಗೆ ಬಂದೊಡನೆಯೇ ಮಗಳನ್ನು
ಕೂಡಿಸಿಕೊಂಡು ರಾಮಾಯಣ, ಭಾರತ, ಭಾಗವತದ ಕಥೆ ಹೇಳಿ
ಬೇಕು. ಅದನ್ನು ಕೇಳುತ್ತಾ ಕಂಬನಿ ಸುರಿಸಬೇಕು.

ರಾಯರ ಮಾತುಕತೆ, ನಡತೆ, ಸರಳಜೀವನ ಆಚಾರ್ಯರ ಸ್ಮೃ
ಪಟಲದ ಮೇಲೆ ಸುಳಿದು ಹೋಯಿತು. ಅವರ ಕಣ್ಣುಗಳೂ ತೇವ
ಗೊಂಡಿದ್ದವು.

"ದೇವರ ಪೂಜೆಮಾಡಿ ಆಚಾರ್ರೇ." ಎಂದು ರುಕ್ಮಿಣಿ ಹೇಳಿದ

ಆಚಾರ್ರ ಕಿವಿಯ ಮೇಲೇ ಬಿದ್ದಿರಲಿಲ್ಲ. ರುಕ್ಮಿಣಿ ಆಚಾರ್ರಿಗೆ ಮತ್ತೆ ನೆನಪು ಕೊಟ್ಟಳು.

ಆಚಾರ್ರು ಎದ್ದು ಪುನಃ ಸ್ನಾನಮಾಡಿ ದೇವರ ಪೂಜೆಗೆ ಕುಳಿತರು. ದೇವರ ಚಿನ್ನ, ಬೆಳ್ಳಿಯ ಸಾಮಾನುಗಳೂ ಮಾಯವಾಗಿದ್ದವು. ರಾಯರ ಮನೆಯ ದೇವರಿಗೂ ಬಡತನ ಬಂದಿತ್ತು.

ಪೂಜೆ ಮುಗಿಸಿ ತಾವು ತಂದಿದ್ದ ಗಂಗೆಥಾಲಿ, ತುಲಸೀ ಮಣಿ ಹಾರ, ಗೋಪಿಚಂದನ ದೇವರ ಮುಂದಿಟ್ಟು, ಮಂಗಳಾರತಿ ಮಾಡಿ ಎಲ್ಲರಿಗೂ ತೀರ್ಥಕೊಟ್ಟರು. ರಂಗಮ್ಮನವರು ಹಣ್ಣು ಕಾಯಿ ತಾಂಬೂಲ ಜತೆಗೆ ಎರಡು ರೂಪಾಯಿ ದಕ್ಷಿಣೆ ಇಟ್ಟು ಆಚಾರ್ರಿಗೆ ಕೊಟ್ಟು ನಮಸ್ಕಾರ ಮಾಡಿದರು. ರುಕ್ಮಿಣಿ, ರಾಮು ಇಬ್ಬರೂ ನಮಸ್ಕಾರ ಮಾಡಿದರು.

ದೊಡ್ಡ ಅಗ್ರದ ಬಾಳೆಲೆಯನ್ನು ಹಾಕಿ, ಅದರ ತುಂಬ ಬಡಿಸ ಲಾಗಿತ್ತು. ಆಚಾರ್ರು ಸಂತೋಷವಾಗಿ ಊಟಮಾಡಿ ಬಂದು, ತೊಟ್ಟಿಯಲ್ಲಿ ಹಾಕಿದ್ದ ಚಾಪೆಯ ಮೇಲೆ ಪವಡಿಸಿದರು ಹತ್ತು ನಿಮಿಷದಲ್ಲಿ ಆಚಾರ್ರ ಗೊರಕೆ ಮನೆಯ ಕಿಟಕಿ ಬಾಗಿಲುಗಳ ಮೇಲೆ 'ಕಾಷ್ಠಾತರಂಗ' ಆಡತೊಡಗಿತು.

ಆಚಾರ್ರು ಏಳುವವೇಳೆಗೆ ನಾಲ್ಕು ಗಂಟೆಯಾಗಿತ್ತು. ರಂಗಮ್ಮ ನವರ 'ವೈದ್ಯ ಸೇವೆ' ಹೊರಗಡೆ ಜಗುಲಿಯ ಮೇಲೆ ನಡೆದಿತ್ತು. ಅವರು ರೋಗಿಗಳಿಗೆ ಔಷಧ ಕೊಟ್ಟು, ಪಥ್ಯ ಹೇಳಿ ಕಳುಹಿಸುತ್ತಿದ್ದರು. ರಂಗಮ್ಮನವರು ಒಳಕ್ಕೆ ಬರುವವೇಳೆಗೆ ಆರುಗಂಟೆ ಹೊಡೆಯುತ್ತಿತ್ತು.

"ಎಲ್ಲಾ ಯಥಾಪ್ರಕಾರವೇ ನಡೆದಿದೆ," ಎಂದರು ಆಚಾರ್ರು.

"ಯಾವದೂ ನಿಲ್ಲುವುದಿಲ್ಲ ಆಚಾರ್ರೇ—ಎಲ್ಲಾ ನಡೆಯುತ್ತೆ. —ಆದರೆ ಮನೆಯ ದೀಪ ಮಾತ್ರ ಆರಿಹೋಯಿತು!"

ಎನ್ನುತ್ತಾ ತೊಟ್ಟಿಯ ಒಂದು ಮೂಲೆಯಲ್ಲಿದ್ದ ಗೂಡಿನಲ್ಲಿ ಜೋಡಿಸಿಟ್ಟಿದ್ದ ಕಂದೀಲುಗಳನ್ನು ತೆಗೆದು ಹಚ್ಚಿಟ್ಟು ಗೋಡೆಗೆ ಒರಗಿ

ಕೊಂಡು ಒಂದೆಡೆ ಕುಳಿತರು. ಆಟ ಮುಗಿಸಿಕೊಂಡು ಬಂದ ರು
ತಾಯಿಯ ಬಳಿ ಬಂದು ಕುಳಿತಳು.

"ಕತ್ತಲಾಯಿತು. ರಾಮೂನ ಒಳಕ್ಕೆ ಕರೆಯಮ್ಮ."

"ಇನ್ನೂ ಸ್ವಲ್ಪಹೊತ್ತು ಆಡಿಕೊಂಡು ಬರುತ್ತಾನಂತಮ್ಮ."

"ಎಲ್ಲಿದ್ದಾನೆ."

"ಶಾಮುಭಟ್ಟರ ಮನೆಯಲ್ಲಿ ಆಡುತ್ತಾ ಇದ್ದಾನೆ."

ಆಚಾರ್ರು ಧ್ವನಿ ಎಳೆದೆಳೆದು ಮೆಲ್ಲನೆ "ನಾನು ಯಾ
ಹೋಗುವಾಗ ನಂದಗೋಕುಲದ ಹಾಗೆ ಇದ್ದ ಮನೆ ಹೇಗೆ
ಹೋಯಿತಮ್ಮ. ರಾಯರಿಗೇನಾಗಿತ್ತು ?"

"ಸೋಮನಹಳ್ಳಿ ಕೆರೆ ಕಂಟ್ರ್ಯಾಕ್ಟ್ ಹಿಡಿದಿದ್ದರು ಆಚಾರ್ರೆ
ದೊಡ್ಡ ಕಂಟ್ರಾಕ್ಟ್ ಸುಮಾರು ಇಪ್ಪತ್ತು ಸಾವಿರ ರೂಪಾಯಿನ
ಹಗಲೂ ರಾತ್ರಿ ಅದೇ ಕೆಲಸ. ಅದೇ ಚಿಂತೆ. ಬಿಸಿಲಿನಲ್ಲಿ ಒಣಗಿ ಒ
ಕಾಷ್ಠವಾಗುತ್ತ ಬಂದರು. ಒಂದು ದಿನ ಮನೆಗೆ ಬಂದವರೇ 'ಏಕ
ಕಣ್ಣುಗತ್ತಲೆ ಇಟ್ಟುಕೊಂಡು ಬಂದಿದೆ' ಎಂದು ಮಲಗಿದರು. ಸ್ವ
ಜ್ವರ ಬಂದಿತ್ತು. ಇಪ್ಪತ್ತು ದಿವಸ ಜ್ವರ ಒಂದೇ ಸಮನಾಗಿ ಕಾಯಿ
ಅವರೂ ವೈದ್ಯರು—ನಾನೂ ವೈದ್ಯಳು. ಇಬ್ಬರಿಗೂ ಇಂಥ ಚ
ಎಂದು ಪತ್ತೆ ಸಿಕ್ಕಲಿಲ್ಲ. ನನ್ನ ಬುದ್ಧಿಯನ್ನೆಲ್ಲಾ ಖರ್ಚುಮ
ಔಷಧೋಪಚಾರ ಮಾಡಿದೆ, ಯಾವದೂ ಸಾರ್ಥಕವಾಗಲಿಲ್ಲ.
ಕೆರೆ ಕಂಟ್ರಾಕ್ಟು ಮುಗಿಯಲಿಲ್ಲವಲ್ಲಾ ಎಂಬುದೇ ಅವ
ಕೊರಗಾಗಿತ್ತು.

"ಅನಂತ ಊರಿನಲ್ಲಿಯೇ ಇದ್ದನೇ ?"

"ಇಲ್ಲ. ಸುದ್ದಿಕೇಳಿ ಬಂದ. ಅವನು ಬರುವ ಹೊತ್ತಿಗೆ ಎಲ
ಮುಗಿದೇ ಹೋಗಿತ್ತು. ಕರ್ಮಾಂತರ ಮುಗಿದಮೇಲೆ ಅನಂತ
ಎಲ್ಲಾ ವಹಿವಾಟು ಕೈಗೆ ತೆಗೆದುಕೊಂಡ. ನನ್ನ ದುಃಖ ನನಗೆ—ನಾ
ಅತ್ತ ಲಕ್ಷ್ಯಕೊಡಲಿಲ್ಲ. ಏನು ಮಾಡಿದನೋ – ಎಂತು ಮಾಡಿದನ
ಒಂದೇ ವರ್ಷದಲ್ಲಿ ಕೈಯಲ್ಲಿದ್ದ ಹಣ ಹೋಯಿತು – ರಾಸುಗಳ

ಹೋದವು – ಎರಡು ಜಮೀನು ಹೋಯಿತು. ಅನಂತನ ಮೇಲೆ ವಾರೆಂಟೂ ಹೊರಟಿತು – ಆವೇಳೆಗೆ ಅವನು ತಲೆಮರಸಿಕೊಂಡು ಓಡಿಹೋಗಿದ್ದ. ಅವನು ಹೋದ ಹತ್ತು ಹದಿನೈದು ದಿವಸಗಳಲ್ಲಿ ಶ್ರೀನಿವಾಸ ನನ್ನ ಒಡವೆಗಳನ್ನೆಲ್ಲಾ ತೆಗೆದುಕೊಂಡು ಹೊರಟುಹೋದ. ನನಗೆ ಹುಚ್ಚು ಹಿಡಿಯುವುದೊಂದೇ ಬಾಕಿ – ಬಾಳಿ ಬದುಕಿದ್ದ ಊರಿನಲ್ಲಿ ನಮ್ಮ ಮಾನ ಮರ್ಯಾದೆ ಚಿಕ್ಕಾಸಿಗಿಂತ ಕಡೆಯಾಯಿತು. ನನ್ನ ಸ್ಥಿತಿ ಏನಾಗಿರಬಹುದು ನೀವೇ ಊಹಿಸಬಹುದು. ಬದುಕಿರುವುದಕ್ಕಿಂತ ಕೆರೆ, ಬಾವಿಯಲ್ಲಿ ಬಿದ್ದು ಪ್ರಾಣ ನೀಗಿಸಿಕೊಳ್ಳುವುದು ಲೇಸೆಂದೆನಿಸಿತು. ಆದರೆ ಈ ಎರಡು ಮಕ್ಕಳು ನನ್ನ ಕೊರಳಿಗೆ ಗಂಟುಬಿದ್ದಿದ್ದವು. ನನಗೆ ಏನೂ ತೋರದೆ ಯಜಮಾನರ ಭಾವಂದಿರು ಲಕ್ಷ್ಮಣರಾಯರನ್ನು ಕರೆಸಿಕೊಂಡೆ. ಅವರು ಧೈರ್ಯಹೇಳಿ, ಎಲ್ಲಾ ಕಾಗದಪತ್ರಗಳನ್ನೂ ಪರಾಮರ್ಶಿಸಿದರು. ಅನಂತನ ಸಾಲಗಾರರನ್ನೆಲ್ಲಾ ಕಂಡು ಬಂದರು. ಒಟ್ಟು ಹನ್ನೆರಡು ಸಾವಿರ ರೂಪಾಯಿ ಸಾಲ ಉಳಿದಿತ್ತು. ಊರ ಮುಂದೆಯಿದ್ದ ಕೊಳದ ತೋಟ ಮಾರಿ ಸಾಲ ತೀರಿಸಿದ್ದಾಯಿತು. ಲಕ್ಷ್ಮಣರಾಯರನ್ನು ಇಂಥ ತಂಪು ಹೊತ್ತಿನಲ್ಲಿ ನೆನಸಿಕೊಳ್ಳಬೇಕು ನೋಡಿ. – ಮಹಾರಾಯರು."

"ಅನಂತ ಶ್ರೀನಿವಾಸ ಎಲ್ಲಿಗೆ ಹೋದರಮ್ಮ ?"

"ರಂಗೂನಿಗೆ ಹೊರಟು ಹೋದರೆಂದು ಸುದ್ದಿ"

"ಎಂಥಾ ತಾಯಿ ತಂದೆ ಹೊಟ್ಟೆಯಲ್ಲಿ ಎಂಥಾ ಮಕ್ಕಳು ! ಇದು ಪೂರ್ವಾರ್ಜಿತ ಕರ್ಮ ಎಂದುಕೊಂಡೇ ಸಮಾಧಾನ ತಂದುಕೊಳ್ಳಬೇಕು ತಾಯಿ. ನೀವೂ ಯಜಮಾನರೂ ಒಬ್ಬರಿಗೆ ಕೇಡು ಬಯಸಿದವರಲ್ಲ. ಒಂದು ಕೆಡಕು ಮಾತು ಆಡಿದವರಲ್ಲ. ಸಾವಿರಾರು ಜನಗಳಿಗೆ ಅನ್ನವಿಟ್ಟಿರಿ – ನೂರಾರು ಸಂಸಾರಗಳನ್ನು ಉದ್ಧಾರ ಮಾಡಿದಿರಿ – ದೇಹಿ ಎಂದು ನಿಮ್ಮಲ್ಲಿ ಬಂದವರು ಯಾರೂ ಬರಿಗೈಯಲ್ಲಿ ಹೋದುದಿಲ್ಲ. ನಿಮಗೆ ಇಂಥ ಕಷ್ಟ ಬರುವುದೆಂದರೆ ಏನು ಹೇಳಬೇಕು."

"ನನ್ನ ಕಷ್ಟ ಕುರಿತು ನಾನು ಯೋಚಿಸುವುದಿಲ್ಲ ಆಚಾರ್ರೆ.

ಮಹಾರಾಯರು ಇರುವವರೆಗೆ ರಾಣಿಯ ಹಾಗಿದ್ದೆ. ಒಂದು ದಿನ ನನ್ನ ಕೈ ತಡೆದವರಲ್ಲ. ಲಕ್ಷ್ಮಿ ಚಂಚಲೆಯೆಂಬುದನ್ನು ಬಲ್ಲೆ. ಈ ಎರಡು ಮಕ್ಕಳಿಗೊಂದು ದಾರಿಯಾಗಿ ನಾನು ಅವರ ಮುಂದೆ ಕಣ್ಣುಮುಚ್ಚಿ ಕೊಂಡಿದ್ದರೆ ನನ್ನಷ್ಟು ಭಾಗ್ಯಶಾಲಿಯೇ ಇರುತ್ತಿರಲಿಲ್ಲ."

"ಮಕ್ಕಳ ಬಗ್ಗೆ ಏಕೆ ಯೋಚನೆಮಾಡುವಿರಿ? ನೀವೂ ಯಜ ಮಾನರೂ ಮಾಡಿರುವ ಧರ್ಮ, ಪುಣ್ಯಗೆಲಸ ವ್ಯರ್ಥವಾಗುತ್ತದೆಯೇ?

"ರುಕ್ಕು ಕೈನೋಡಿ ಆಚಾರ್ರೇ. ಮದುವೆಗೆ ಅವಳಿಗೆ ಗುರುಬಲ ಯ್ಯಾವಾಗ ಒದಗುತ್ತದೆ."

ಆಚಾರ್ರು 'ಹೀಗೆ ಬಾರೇ ತಾಯಿ' ಎಂದು ರುಕ್ಮಿಣಿಯನ್ನು ಕರೆದರು. ರುಕ್ಮಿಣಿ ಎದ್ದು ಬಂದು ಆಚಾರ್ರ ಎದುರಿಗೆ ಕುಳಿತಳು. ರಂಗಮ್ಮನವರು ಅವರ ಬಳಿ ಬಂದು ಕಂದೀಲನ್ನು ತಂದಿಟ್ಟು ಸ್ವಲ್ಪ ದೂರದಲ್ಲಿ ಕುಳಿತರು.

ಆಚಾರ್ರು ರುಕ್ಮಿಣಿಯ ಕೈ ನೋಡುತ್ತ ನೋಡುತ್ತ 'ತಾಯಿ ನಿಮ್ಮ ಕೈತೋರಿಸಿ' ಎಂದರು. ರಂಗಮ್ಮನವರು ಎಡಗೈ ಮುಂದೆ ಹಿಡಿದರು. ರಂಗಮ್ಮನವರ ಕೈ, ರುಕ್ಮಿಣಿಯ ಕೈ ಹೋಲಿಸಿ ನೋಡುತ್ತ

"ಇಲ್ಲಿ ನೋಡಿ – ಎಷ್ಟು ವಿಚಿತ್ರವಾಗಿದೆ!"

"ಏನು ವಿಚಿತ್ರ ಆಚಾರ್ರೇ?"

"ಎರಡು ಕೈಗಳೂ ಒಂದೇ ತರಹ ಇದೆಯಮ್ಮ – ಹೇಳಿ ಮಾಡಿಸಿದ ಹಾಗಿದೆ."

"ನನ್ನ ಕಷ್ಟ............"

"ಅದೇನಿಲ್ಲ ಹೆದರಬೇಡಿ. ಒಳ್ಳೆಯ ಪುಣ್ಯವಂತೆಯಾಗುತ್ತಾಳನ್ನು ನಮ್ಮ ರುಕ್ಕಮ್ಮ. ಒಳ್ಳೆಯ ಗಂಡನ ಕೈಹಿಡಿಯುತ್ತಾಳೆ. ಗಂಡ ಹೆಂಡತಿ ಸಾಯುವವರೆಗೂ ಅನ್ಯೋನ್ಯವಾಗಿರುತ್ತಾರೆ. ಧನ, ಕನಕ, ವಾಹನ ಭೋಗಗಳಿವೆ. ನಿಮ್ಮ ಹಾಗೆಯೇ ರುಕ್ಕಮ್ಮನೂ ಸಾವಿರಾರು ಜನಕ್ಕೆ ಅನ್ನವಿಡುತ್ತಾಳೆ. ರುಕ್ಕಮ್ಮನ ಪುಣ್ಯಪ್ರಭಾವದಿಂದ ಅವಳ ಗಂಡ ಲೋಕಪೂಜ್ಯನಾಗುತ್ತಾನೆ."

ರಂಗಮ್ಮನವರ ಮನಸ್ಸಿಗೆ ಅಪರಿಮಿತ ಆನಂದವಾಯಿತು.

"ಆದರೆ........" ಎಂದು ಆಚಾರ್ರು ಚಿಂತಾಕ್ರಾಂತರಾದರು.

"ಏನು. ಆದರೆ........ಸುಮಂಗಲಿಯಾಗಿಯೇ........"

"ನಿಸ್ಸಂದೇಹವಾಗಿ."

"ಸಾಕು ಬಿಡಿ ಅದಕ್ಕಿಂತ ಇನ್ನೇನು ಸೌಭಾಗ್ಯಬೇಕು."

"ಮಗು ಸುಖಪಟ್ಟಷ್ಟೇ ಕಷ್ಟವೂ ಪಡುತ್ತದೆ. ಆದರೆ ಗುರುರಾಯರ ಕೃಪೆಯಿಂದ ಎಲ್ಲವೂ ಪರಿಹಾರವಾಗುತ್ತದೆ........ಆದರೆ ಸದಾ ಹೇಸಿಗೆಯಲ್ಲಿ ಕೈತೊಳೆಯುವುದು ಮಾತ್ರ ತಪ್ಪುವುದಿಲ್ಲ."

ರಂಗಮ್ಮನವರು ನಕ್ಕು.

"ಹೆಣ್ಣು ಜನ್ಮಕ್ಕೂ ಹೇಸಿಗೆಗೂ ಗಂಟಲ್ಲವೇ ಆಚಾರ್ರೇ....ಲಗ್ನದ ಯೋಗ ಹೇಗಿದೆ ನೋಡಿ."

"ಬರುವ ಉಗಾದಿ ಒಳಗೆ ಲಗ್ನವಾಗಲೇ ಬೇಕಮ್ಮ."

"ವರ ಯಾರು ?"

"ನಿಮ್ಮ ಸಂಬಂಧದ್ದೇ ಯಾರನ್ನಾದರೂ ನೋಡಿರುವಿರಾ ?"

ರುಕ್ಮಿಣಿ ನಾಚಿಕೊಂಡು ಆಚಾರ್ರ ಕೈಯಿಂದ ಮೆಲ್ಲನೆ ತನ್ನ ಕೈ ಬಿಡಿಸಿಕೊಂಡು ಒಳಗೆದ್ದು ಹೋದಳು. ಆಚಾರ್ರು, ರಂಗಮ್ಮ ಇಬ್ಬರೂ ನಕ್ಕರು.

"ಯಜಮಾನರು ಒಂದು ಸಂಕಲ್ಪಮಾಡಿಕೊಂಡಿದ್ದರು."

"ಏನು ಸಂಕಲ್ಪ ?"

"ಒಂದೆ ಒಂದು ಸ್ವಾರಸ್ಯವಾದ ಪ್ರಸಂಗ ನಡೆಯಿತು, ಆಚಾರ್ರೇ. ಬೆಂಗಳೂರಿಗೆ ನಾವೆಲ್ಲಾ ಒಂದು ಲಗ್ನಕ್ಕೆ ಹೋಗಿದ್ದೆವು. ಅಲ್ಲಿಗೆ ಹೆಡ್ ಗುಮಾಸ್ತೆ ಜಯರಾಯರೂ ಸಂಸಾರಸಮೇತ ಬಂದಿದ್ದರು. ಲಗ್ನ ಮುಗಿಯಿತು. ನಾವು ಊರಿಗೆ ಹೊರಟೆವು. ಜಯರಾಯರೂ ಅವರ ಸಂಸಾರ ಇನ್ನೂ ಕೆಲವು ದಿನ ಬೆಂಗಳೂರಿನಲ್ಲಿಯೇ ಯಾವುದೋ ಕೆಲಸಕ್ಕಾಗಿ ಉಳಿಯಬೇಕಾಯಿತು. ಜಯರಾಯರು ಯಜಮಾನರಲ್ಲಿ ಒಂದು 'ನನ್ನ ಮಗ ಮಾಧೂ ಚಿಕ್ಕರಾಯನಪುರಕ್ಕೆ' ಹೋಗಬೇಕಾಗಿದೆ.

ಅವನ ಸ್ಕೂಲು ತಪ್ಪಿಹೋಗುತ್ತದೆ. ನಿಮಗೆ ತೊಂದರೆಯಾಗದಿದ್ದ
ಜತೆಯಲ್ಲಿ ಕರೆದುಕೊಂಡು ಹೋಗಿ ಚಿಕ್ಕರಾಯನಪುರಕ್ಕೆ ಕಳುಹಿ
ಕೊಡುವಿರಾ' ಎಂದು ಕೇಳಿದರು. ಇಲ್ಲಿಗೆ ಚಿಕ್ಕರಾಯನಪುರ ನಾಲ್
ವೈಲಿ. ಆಗಲಿ ಎಂದು ಯಜಮಾನರು ಒಪ್ಪಿಕೊಂಡರು. ನಾ
ಬೆಂಗಳೂರು ಬಿಟ್ಟು ಹೊರಡುವುದೇ ತಡವಾಯಿತು. ಚಿತ್ರಾವ
ಬಳಿ ಬಂದೆವು. 'ಇಲ್ಲೇ ಅಡಿಗೆಮಾಡಿ ಊಟಮಾಡಿಕೊಂ
ಹೋಗೋಣ' ಎಂದು ಯಜಮಾನರು ಸೂಚಿಸಿದರು. ಅಲ್ಲೇ ಇಳಿ
ಅಡಿಗೆ ಏರ್ಪಾಟುಮಾಡಿದೆವು. ಅಡಿಗೆ ಆಗುವವರೆಗೂ ಮಕ್ಕಳು ಆ
ಕೊಳ್ಳುತ್ತಿದ್ದವು. ನಮ್ಮ ರುಕ್ಕೂಗೂ ಜಯರಾಯರ ಮಗ ಮಾಧೂಗ
ಸ್ನೇಹ ಬೆಳೆದಿತ್ತು. ಇಬ್ಬರೂ ಮಾವಿನಕಾಯಿ ಆಯ್ದು ತಿಂದುಕೊಂ
ನದಿಯಲ್ಲಿ ಒಬ್ಬರ ಮೇಲೊಬ್ಬರು ನೀರೆರೆಚಿಕೊಂಡು ಸಂತೋಷವಾ
ಕಾಲಕಳೆಯುತ್ತಿದ್ದರು. ಯಜಮಾನರು ನನ್ನನ್ನು ಕರೆದು ತೋರಿ
ಜತೆ ಎಷ್ಟು ಚೆನ್ನಾಗಿದೆ ನೋಡು. ಜಯರಾಯರೂ ಒಳ್ಳೆಯ ದೈ
ಭಕ್ತರು, ಸಂಪನ್ನರು. ಈ ಸಂಬಂಧವಾದರೆ ಚೆನ್ನಾಗಿರುತ್ತದೆ' ಎಂದರ
ಆಗಿನ್ನೂ ರುಕ್ಕೂಗೆ ಆರುವರ್ಷ – ಯಜಮಾನರ ಮಾತಿಗೆ ನಕ
ಸುಮ್ಮನಾದೆ."

"ಯಾಕಾಗ ಬಾರದಮ್ಮ. ಜಯರಾಯರನ್ನೂ ನಾನು ಚೆನ್
ಗಿ ಬಲ್ಲೆ. ನೀವು ಒಪ್ಪುವುದಾದರೆ ಈ ವಿಷಯ ಅವರಲ್ಲಿ ಪ್ರಸ್ತಾಪಿಸ
ತ್ತೇನೆ."

"ಹಾಗೇ ಮಾಡಿ. ಲಕ್ಷ್ಮಣರಾಯರನ್ನು ಜತೆಯಲ್ಲಿ ಕರೆದ
ಕೊಂಡು ಹೋದರೆ ಒಳ್ಳೆಯದು."

"ಅವಶ್ಯಕವಾಗಿ ಹಾಗೆ ಮಾಡುತ್ತೇನೆ. ನಾಳೇನೇ ನಾನ
ಪ್ರಯಾಣಮಾಡಬಹುದಷ್ಟೆ. ರುಕ್ಕಮ್ಮನ ಜಾತಕ ಇದೆಯಲ್ಲವೇ?

"ಇದೆ – ಕೊಡುತ್ತೇನೆ. ಮದುವೆ ಇಲ್ಲೇ ಆಗಲಿ. ಎರಡ
ಖರ್ಚೂ ನಮಗೇ ಇರಲಿ. ಇದನ್ನೂ ನೀವು ತಿಳಿಸಿಬಿಡಬೇಕು.

"ಹೆಚ್ಚು ಖರ್ಚು ನೈಮೇಲೆ ಏಕೆ ಹಾಕಿಕೊಳ್ಳುತ್ತೀರಮ್ಮ

ಕಾಲ ನಾಜೂಕಾಗುತ್ತಿದೆ."

"ಆಚಾರ್ರೇ – ಯಾಜಮಾನರಿದ್ದಿದ್ದರೆ ಅವರು ಮಗಳ ಮದುವೆ ಎಷ್ಟು ವಿಜೃಂಭಣೆಯಿಂದ ನಡೆಸುತ್ತಿದ್ದರೊ. ಈಗ ನಾನು 'ಬೇಕಾಬಿಟ್ಟೆ' ಮಾಡಿದರೆ ಅವರ ಆತ್ಮಕ್ಕೆ ಶಾಂತಿಯಾಗುತ್ತದೆಯೇ?"

"ಕ್ಷಮಿಸಿ ತಾಯಿ, ನೀವು ಹೇಳಿದಂತೆ ಮಾಡುತ್ತೇನೆ."

ಬೆಳಿಗ್ಗೆ ಸ್ನಾನ, ಸಂಧ್ಯಾವಂದನೆ ದೇವರಪೂಜೆ ಮುಗಿಸಿಕೊಂಡು ಉಪಾಹಾರಮಾಡಿಕೊಂಡು ಆಚಾರ್ರು ಹೊರಡಲು ಸಿದ್ಧರಾದರು. ಅವರಿಗೇನೋ ನೆನಪಾಯಿತು. ರುಕ್ಮಿಣಿಯನ್ನು ಕೂಗಿ ಕರೆದು, ತಮ್ಮ ಚೀಲದಿಂದ ಏನನ್ನೋ ತೆಗೆದು "ರುಕ್ಕಮ್ಮ ಕಣ್ಣು ಮುಚ್ಚಿಕೋ"ಎಂದರು.

ಆಚಾರ್ರು ಹೇಳಿದಂತೆ ರುಕ್ಮಿಣಿ ಮಾಡಿದಳು. ಅವಳ ಕೈಯಲ್ಲಿ ಏನೋ ಪದಾರ್ಥವಿಟ್ಟು

"ಕಣ್ಣು ಬಿಟ್ಟು ನೋಡು." ಎಂದರು.

ರುಕ್ಮಿಣಿ ಕಣ್ಣು ಬಿಟ್ಟು ನೋಡಿ ಸಂತೋಷ, ಆಶ್ಚರ್ಯದಿಂದ

"ಕೃಷ್ಣ! – ಕೃಷ್ಣ!!" ಎಂದಳು.

ಅವಳಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಓಡಿಹೋಗಿ ತಾಯಿಗೆ ತನ್ನ ಕೈಯಲ್ಲಿದ್ದ ವಿಗ್ರಹ ತೋರಿಸಿ

"ಶ್ರೀ ಕೃಷ್ಣನ ವಿಗ್ರಹ – ಆಚಾರ್ರು ಕೊಟ್ಟರು" ಎಂದಳು.

"ರಂಗಮ್ಮನವರ ಹೃದಯ ಕೃತಜ್ಞತೆಯಿಂದ ತುಂಬಿತು. ರಾಯರು ಬದುಕಿದ್ದರೆ ಮಗಳಿಗೆ ಚಿನ್ನದಲ್ಲಿ ಶ್ರೀ ಕೃಷ್ಣನ ವಿಗ್ರಹ ಮಾಡಿಸಿಕೊಡುತ್ತಿದ್ದರು. ನಾನೊಂದು ಕಂಚಿನ ವಿಗ್ರಹ ಕೊಟ್ಟುದಕ್ಕೆ ಈ ತಾಯಿ ಎಷ್ಟು ಸಂತೋಷ ಪಟ್ಟುಕೊಂಡರು." ಎಂದು ಆಚಾರ್ರು ಯೋಚಿಸಿದರು.

ರಂಗಮ್ಮನವರು ಆಚಾರ್ರ ಖರ್ಚಿಗೆ ಹಣವಿತ್ತು ಚಿಕ್ಕರಾಯನಪುರಕ್ಕೆ ಹೊರಡಲಿದ್ದ ಬಸ್ಸಿನಲ್ಲಿ ಕಳುಹಿಸಿಕೊಟ್ಟರು.

೨

ತಾಲ್ಲೂಕು ಕಛೇರಿಯ ಸೇವೆಗೆ ಎಲ್ಲ ವಿಧದಿಂದಲೂ ಜಯರಾ
ಯರು ಅನರ್ಹರಾಗಿದ್ದರು. ಅವರ ಕೆಲಸದ ದಕ್ಷತೆಯ ವಿಚಾರದ
ಯಾರಿಗೂ ಅನುಮಾನ, ಅಸಮಾಧಾನಗಳಿರದಿದ್ದರೂ 'ಮೇಲ
ಸಂಪಾದನೆ'ಗೆ ಕೈಹಾಕದೆ ಜಯರಾಯರು ಅನೇಕರ ಕೋಪಕ್ಕೆ ಪಾತ್ರ
ರಾಗಿದ್ದರು. ಜಯರಾಯರ ಕಾಟ ತಾಳಲಾರದೆ ಅಮಲ್ದಾರರುಗಳ
ವರ್ಗಮಾಡಿಸಿಕೊಂಡು ಬೇರೆ ಕಡೆಗೆ ಹೋದುದೂ ಉಂಟು. ಜಮಾ
ಬಂದಿ ಕಾಲದಲ್ಲಿ ಕೂಡ, ಊರಿನವರಿಂದ ಒಂದು ಪಾವು ಹಾಲನ್ನೂ
ಉಚಿತವಾಗಿ ಜಯರಾಯರು ಪರಿಗ್ರಹಿಸುತ್ತಿರಲಿಲ್ಲ. ಅಮಲ್ದಾರರಿಗೆ
ಜತೆಯ ಕಾರಕೂನರಿಗೆ ತಾವೇ ಅಡಿಗೆ ಮಾಡಿ ಬಡಿಸುತ್ತಿದ್ದರು
ಊರಿನಲ್ಲಿ ಹಾಲು ಮೊಸರು, ತರಕಾರಿ ಕೊಳ್ಳಬೇಕಾದ ಪ್ರಸಂ
ಬಂದರೆ, ತಾವೇ ಕೈಯಿಂದ ಹಣಕೊಡುತ್ತಿದ್ದರು.

ಜಯರಾಯರ ಪರಮ ಸ್ನೇಹಿತರು ಪ್ಲೀಡರ್ ಅಚ್ಯುತಪ್ಪನವರ
ಒಮ್ಮೆ ಕೇಳಿದರು,

"ನೀವು ಯಾವ ನಕ್ಷತ್ರದಲ್ಲಿ ಹುಟ್ಟಿದಿರಿ ಜಯರಾಯರೇ ?"

"ಏಕೆ ಸ್ವಾಮಿ ?"

"ಹೀಗೆ ಪ್ರಯತ್ನಪೂರ್ವಕವಾಗಿ ಬಡತನ ಗಂಟುಹಾಕಿಕೊಳ್ಳು
ವರನ್ನ ನಾನು ನೋಡಿಯೇ ಇಲ್ಲ. ಇಪ್ಪತ್ತು ವರ್ಷ ಸರ್ವಿಸ

ಮಾಡಿರುವಿರಿ – ಏನು ಪ್ರಯೋಜನ ?"

"ಲಂಚ ರುಷವತ್ತು ತೆಗೆದುಕೊಂಡು ಆಸ್ತಿಮಾಡಬೇಕಾಗಿತ್ತೆಂದು ನಿಮ್ಮ ಅಭಿಪ್ರಾಯವೇ ?"

"ಅಲ್ಲ ಜಯರಾಯರೇ – ನೀವೂ ಮಕ್ಕಳೊಂದಿಗರು. ನಾಳೆ ಮಗನ ಕೈಯಲ್ಲಿ 'ಚಿಕ್ಕನಾಯಕನಹಳ್ಳಿ ಬೆಳ್ಳಿಯ ಬಟ್ಟಲು ಕೊಡುವಿರೇನು ?"

"ಹಾಲು ಕುಡಿದ ಮಕ್ಕಳೇ ಬದುಕುವುದಿಲ್ಲ, ಇನ್ನು ವಿಷಕುಡಿದ ಮಕ್ಕಳು ಬದುಕುತ್ತವೆಯೇ ಅಚ್ಯುತಪ್ಪನವರೇ. ನನ್ನ ಮಕ್ಕಳಿಗೆ ನಾನು ಲೌಕಿಕ ಆಸ್ತಿ ಇಡುವುದಿಲ್ಲ. ನನ್ನ ಶಕ್ತಿಮೀರಿ ಮಾಧೂನ ಓದಿಸಿಬಿಡುತ್ತೇನೆ. ಅವನ ಅನ್ನ ಅವನು ನ್ಯಾಯವಾಗಿ ಸಂಪಾದಿಸಿಕೊಳ್ಳಲಿ. ಇನ್ನು ಮಗಳ ಲಗ್ನ – ಭಗವಂತ ಹೇಗೋ ಮಾಡಿಸುತ್ತಾನೆ. ಮಕ್ಕಳಿಗೆ ದೊಡ್ಡದೊಂದು ಆಸ್ತಿ ಇಡಬೇಕೆಂದು ಪ್ರಯತ್ನಿಸುತ್ತಿದ್ದೇನೆ ಅಚ್ಯುತಪ್ಪನವರೇ"

"ಅದು ಯಾವದಪ್ಪಾ ಆಸ್ತಿ. ನಮಗೆ ತಿಳಿಸದೆ ಒಳಗೇ 'ಪುಟ್ಟಗಂಟು' ಇಟ್ಟಿರುವಿರೋ ?"

"ಪುಟ್ಟಗಂಟಲ್ಲ – ದೊಡ್ಡ ಗಂಟೇ ! ಭಗವದ್ಭಕ್ತಿ, ದೀನಸೇವೆ ಸತ್ಯಜೀವನ ಇದಕ್ಕಿಂತ ಆಸ್ತಿ ಬೇಕೇ ಸ್ವಾಮಿ."

ಆಡಂಬರ, ಅಟ್ಟಹಾಸಗಳಿಗೆ ಮನಸೋಲದ ನಿಜವಾದ ಸಾತ್ವಿಕ ದೈವಭಕ್ತಿ ಜಯರಾಯರಲ್ಲಿ ಮನೆಮಾಡಿತ್ತು. ತಮ್ಮ ಜೀವನದ ಬಹು ಭಾಗವನ್ನು ಭಗವತ್ಸೇವೆಗೆ ಮೀಸಲಿಟ್ಟು ಉಳಿದ ವೇಳೆಯನ್ನು ಸಂಸಾರ ಚಿಂತನೆಗೆ ವಿನಿಯೋಗಿಸುತ್ತಿದ್ದರು.

ಪ್ಲೀಡರ್ ಅಚ್ಯುತಪ್ಪನವರೂ, ಜೋಡಿದಾರ್ ರಾಮಲಿಂಗಯ್ಯನವರೂ ರಾಯರ ನೆರೆಹೊರೆಯವರಾಗಿದ್ದರು. ಅಚ್ಯುತಪ್ಪನವರು ಸಾಕಷ್ಟು ಗಳಿಸಿಕೊಂಡು ನೆಮ್ಮದಿಯಾಗಿದ್ದರು. ರಾಮಲಿಂಗಯ್ಯನವರಿಗೂ ಕಷ್ಟಕಾರ್ಪಣ್ಯವಿರಲಿಲ್ಲ.

ಜಯರಾಯರು ಬೆಳಿಗ್ಗೆ ನಾಲ್ಕು ಗಂಟೆಗೆದ್ದು ಗೆಳೆಯರನ್ನು

ಎಬ್ಬಿಸಿಕೊಂಡು ಊರಿಗೆ ಎರಡು ಮೈಲಿ ದೂರದಲ್ಲಿದ್ದ ಹುಣಿಸೆ
ತೋಪಿಗೆ ಬರುತ್ತಿದ್ದರು. ತೋಪಿನಲ್ಲಿ ಪ್ರಶಸ್ತವಾದ ಇಳಿಯು
ಭಾವಿಯಿತ್ತು. ತೋಪಿನ ಅತ್ತಿತ್ತ ಈಶ್ವರ, ಆಂಜನೇಯನ ದೇವಸ್ಥಾ
ಗಳಿದ್ದವು. ರಾಯರೂ ಅವರ ಮಿತ್ರರೂ ಪ್ರಾತರ್ವಿಧಿಗಳನ್ನು ತೀರಿ
ಕೊಂಡು, ಕೊಳದಲ್ಲಿ ಸ್ನಾನ ಮಾಡಿ, ಬಟ್ಟೆ ಒಗೆದು ಮಡಿಮಾ
ಕೊಂಡು, ಹೂಗಳನ್ನಾಯ್ದುಕೊಂಡು ಆಂಜನೇಯಸ್ವಾಮಿಗೆ ಅಭಿಷೇ
ಪುಷ್ಪಾರ್ಚನೆ ಮಂಗಳಾರತಿ ಮಾಡಿ ತೀರ್ಥ ಪ್ರಸಾದ ತೆಗೆದುಕೊಂ
ಎಂಟು ಗಂಟೆಯ ವೇಳೆಗೆ ಮನೆ ತಲುಪಿ, ಅಲ್ಪಾಹಾರ ತೆಗೆದುಕೊಂ
ಕಛೇರಿಗೆ ಹೋಗುತ್ತಿದ್ದರು. ಕಛೇರಿಯಲ್ಲಿ ಹನ್ನೆರಡು ಗಂಟೆ
ವರೆಗೂ ಇದ್ದು ಮನೆಗೆ ಬಂದು ಮತ್ತೆ ಸ್ನಾನ, ದೇವತಾರ್ಚನೆ, ಮಾ
ಊಟ ಮುಗಿಸಿ ಮೂರು ಗಂಟೆಯವರೆಗೆ ವಿಶ್ರಾಂತಿ ತೆಗೆದುಕೊಂ
ಕಛೇರಿಗೆ ಹೋಗುತ್ತಿದ್ದರು. ಎಂಟು ಒಂಭತ್ತು ಗಂಟೆಯವರೆಗೆ ಕ
ರಿಯ ಕೆಲಸವಾಗುತ್ತಿತ್ತು. ಮನೆಗೆ ಬಂದೊಡನೆಯೇ ಮತ್ತೆ ಸ್ನಾ
ಪೂಜೆ ಮಾಡಿ ಊಟ ಮುಗಿಸಿ 'ಗೋಪಿಕಾಗೀತೆ, 'ಗೀತ ಗೋವಿಂದ
'ರಾಘವೇಂದ್ರ ಸ್ತೋತ್ರ' ಹೇಳಿಕೊಳ್ಳುತ್ತಾ ಮಲಗಿ ನಿದ್ರಿಸುತ್ತಿದ್ದರು

ತೋಪಿನ ಮಗ್ಗುಲಲ್ಲಿದ್ದ ಆಂಜನೇಯ ದೇವಸ್ಥಾನಕ್ಕೆ ಒಬ
ಪೂಜಾರಿ ಇದ್ದ. ಅವನು ವಾರಕೊಮ್ಮೆ ದೇವಸ್ಥಾನಕ್ಕೆ ಹೋ
ಬರುವುದು ವಾಡಿಕೆಯಾಗಿತ್ತು. ನಿತ್ಯ ದೇವಸ್ಥಾನಕ್ಕೆ ಹೋಗಿ ಬ
ತ್ತಿದ್ದ ಜಯರಾಯರಿಗೆ ಅವನು ಬೀಗದಕೈ ಒಪ್ಪಿಸಿಬಿಟ್ಟಿದ್ದ.

ಒಮ್ಮೆ ಶ್ರಾವಣ ಮಾಸ ಬಂದಿತು. ಈಶ್ವರನ ಗುಡಿಯಲ್ಲಿ ವಿಶೇ
ಸಂಭ್ರಮ. ರಥೋತ್ಸವ ನೋಡಲು ನೂರಾರು ಜನರ ಗುಂಪು
ರಾಯರು ಯಥಾವಿಧಿಯಂತೆ ಆಂಜನೇಯ ದೇವಾಲಯದಲ್ಲಿ ಪೂ
ನೆರವೇರಿಸುತ್ತಿದ್ದರು. ಈಶ್ವರ ದೇವಾಲಯಕ್ಕೆ ಬಂದಿದ್ದ ಯಾರೋ
ಭಕ್ತರು ಆಂಜನೇಯ ದೇವಾಲಯಕ್ಕೆ ಬಂದು ಹಣ್ಣುಕಾಯಿ ಒಪ್ಪಿ
ದರು. ರಾಯರು ಮಂಗಳಾರತಿ ಮಾಡಿದರು. ಭಕ್ತರು ಒಂದ
ಕಾಯಿಹೋಳು, ದಕ್ಷಿಣೆ ರಾಯರ ಕೈಗೆ ಹಾಕಿದರು. ಒಬ್ಬರಹಿಂದೆ

ಪ್ಪರು ಭಕ್ತರು ಬರಲಾರಂಭಿಸಿದರು. ರಾಯರ ಹಾದಿ ಕಾದು ಕಾದು ಬೇಸತ್ತ ಅಚ್ಯುತಪ್ಪ, ರಾಮಲಿಂಗಯ್ಯನವರು ರಾಯರ ಅಪ್ಪಣೆ ಪಡೆದು ಮನೆಗಳಿಗೆ ಹಿಂದಿರುಗಿದರು. ಭಕ್ತಾದಿಗಳಿಗಾಗಿ ಪೂಜಾರಿ ವೃತ್ತಿ ಕೈಗೊಳ್ಳುವುದು ರಾಯರಿಗೆ ಅನಿವಾರ್ಯವಾಯಿತು. ಸುಮಾರು ಒಂದು ಗಂಟೆಯವೇಳೆಗೆ ಸ್ವಲ್ಪ ವಿರಾಮ ಸಿಕ್ಕಿತು. ರಾಯರು ಕಾಯಿ ಹೋಳುಗಳನ್ನೂ, ದಕ್ಷಿಣೆಯ ಕಾಸನ್ನೂ ಹೊತ್ತುಕೊಂಡು, ಅರ್ಚಕರ ಮನೆಗೆ ಬಂದು ಅವುಗಳನ್ನೊಪ್ಪಿಸಿ ಎರಡು ಗಂಟೆಯ ಸುಮಾರಿಗೆ ತಮ್ಮ ಮನೆ ತಲುಪಿದರು. ಸ್ನಾನ, ಊಟ, ವಿಶ್ರಾಂತಿ ಮುಗಿಸಿಕೊಂಡು ರಾಯರು ಕಛೇರಿಗೆ ಹೋಗಬೇಕಾದರೆ ನಾಲ್ಕು ಗಂಟೆಯಾಯಿತು. ಅಮಲ್ದಾರರಿಗೆ ಕೋಪ ಬಂದಿರಬಹುದೆಂದು ರಾಯರು ತರ್ಕಮಾಡಿ ಕೊಂಡು, ಅವರಲ್ಲಿ ಹೋಗಿ ತಮ್ಮ ಅನುಭವ ನಿರೂಪಿಸಿದರು. ಅಮ ಲ್ದಾರರು ಪ್ರಸನ್ನವದನರಾಗಿ

"ನಿಮ್ಮ ಕೈಯಲ್ಲಿ ಏಷ್ಟು ಸೇವೆ ಮಾಡಿಸಿಕೊಂಡರೂ ಭಗವಂತನಿಗೆ ತೃಪ್ತಿಯಿಲ್ಲ ಜಯರಾಯರೇ. ನಿಮ್ಮ ಅನುಕೂಲದಂತೆ ಕಛೇರಿಗೆ ಬನ್ನಿ ನನ್ನದೇನೂ ಆಕ್ಷೇಪಣೆಯಿಲ್ಲ." ಎಂದುಬಿಟ್ಟರು.

ಯೋಚನೆಗೀಡಾಗಿದ್ದ ಜಯರಾಯರ ಮನಸ್ಸಿಗೆ ಶಾಂತಿ ಲಭಿಸಿತು. ಇದೂ 'ಭಗವಂತನ ಆಟ'ವೆಂದು ದೃಢವಾಗಿ ನಂಬಿದರು.

ಶುಕ್ರವಾರ, ಮಂಗಳವಾರ ರಾಯರ ಕ್ರಮ ಸ್ವಲ್ಪ ತಪ್ಪುತ್ತಿತ್ತು. ಅವರೇ ಅಡಿಗೆಮಾಡಿ ಮಕ್ಕಳಿಗೆ ಊಟಕ್ಕೆ ಬಡಿಸಿ, ತಾವೂ ಊಟಮಾಡಿಕೊಂಡು ಹನ್ನೆರಡು ಗಂಟೆಗೆ ಕಛೇರಿಗೆ ಹೋಗುತ್ತಿದ್ದರು. ರಾಯರ ಹೆಂಡತಿ ಗೋದೂಬಾಯಿಯವರ ಮೇಲೆ ಆಗಾಗ್ಗೆ ಮುತ್ತೈದೆ ಯರು ಅವತರಿಸುತ್ತಿದ್ದರು. ಎಂದು ಗೋದೂಬಾಯಿಯವರು ತಲೆಗೆ ಸ್ನಾನಮಾಡುತ್ತಾರೋ ಅಂದು ಮುತ್ತೈದೆಯರ ಸವಾರಿ ಚಿತ್ತೈಸುತ್ತ ದೆಂದು ರಾಯರು ಬಲ್ಲರು.

ಸ್ನಾನಮಾಡಿಬಂದು ಗೋದೂಬಾಯಿ ದೇವರ ಮನೆಯಲ್ಲಿ ಕೂಡುತ್ತಿದ್ದರು. ಈ ಸಮಯದಲ್ಲಿ ಅತ್ತ ಒಂದು ಗಂಡುಪಿಳ್ಳೆಯೂ

ಸುಳಿಯುವಂತಿರಲಿಲ್ಲ. ಗೋದೂಬಾಯಿಯವರ ಸ್ವಭಾವವೇ ವಿಚಿತ್ರ
ಬದಲಾವಣೆಗೊಳಗಾಗುತ್ತಿತ್ತು. ಅವರ ಮುಖ ಪ್ರಜ್ವಲಸುತ್ತಿತ್ತು
ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು. ಒಮ್ಮೊಮ್ಮೆ ದೇವರ ಕಟ್ಟೆ
ಗಟ್ಟಿಯಾಗಿ ತಲೆಹೊಡೆದುಕೊಳ್ಳುತ್ತಿದ್ದರು. ಸುಮಾರು ನಾಲ್ಕುಗಂ
ವೇಳೆಗೆ ಶಾಂತಸ್ಥಿತಿ ಒದಗುತ್ತಿತ್ತು. ಆಗ ನೂರಾರು ಜನ ಸುಮಂಗ
ಯರು ಬಂದು ಹಣ್ಣುಕಾಯಿ ಒಪ್ಪಿಸಿ 'ಫಲ'ಗಳನ್ನು ಬೇಡುತ್ತಿದ್ದರ
ಸುಮಾರು ಏಳುಗಂಟೆಯ ವೇಳೆಗೆ ಗೋದೂಬಾಯಿ ಮುತ್ತೈದೆಯ
ಪ್ರಭಾವದಿಂದ ಮುಕ್ತಿಪಡೆಯುತ್ತಿದ್ದರು. ಆಗ ರಾಯರ ಮಗಳ
ಶ್ರೀದೇವಿ ತಾಯಿಗೆ ಸ್ನಾನಮಾಡಿಸಿ ಹಾಲು ಹಣ್ಣು ಕೊಡುತ್ತಿದ್ದಳ

ಒಂದು ಶುಕ್ರವಾರ ರಾಯರು ದೇವಸ್ಥಾನದಿಂದ ಹಿಂದಿರುಗು
ವೇಳೆಗೆ ಆಚಾರ್ರು, ಲಕ್ಷ್ಮಣರಾಯರು ಬಂದರು. ರಾಯರು ಅವರನ
ಆದರದಿಂದ ಬರಮಾಡಿಕೊಂಡರು. ಕುಶಲಪ್ರಶ್ನೆಗಳಾದವು. ಆಚಾರ್ರು
ಲಕ್ಷ್ಮಣರಾಯರು ಅಲ್ಲೇ ಊಟಮಾಡಬೇಕೆಂದು ಜಯರಾಯರ
ಹಟಹಿಡಿದರು.

ರಾಯರೇ ಅಡಿಗೆಮಾಡಿ ಬಡಿಸುವುದನ್ನು ಕಂಡು ಆಚಾರ್ರಿ
ಲಕ್ಷ್ಮಣರಾಯರಿಗೆ ಆಶ್ಚರ್ಯವಾಯಿತು.

"ಇದೇನು ಸ್ವಾಮಿ, ಮನೆಯವರು ಊರಿನಲ್ಲಿಲ್ಲವೇ?" ಎಂದ

ಆಚಾರ್ರು ಕೇಳಿದರು.

ಮುತ್ತೈದೆಯರು ಬರುವ ವಿಷಯವನ್ನು ರಾಯರು ವಿವರಿ
ಬೇಕಾಯಿತು.

"ಎಂಥಾ ಪುಣ್ಯವಂತೆ ಸ್ವಾಮಿ – ಮಹಾತಾಯಿ." ಎಂದ
ಆಚಾರ್ರು ಬಾಯಿತುಂಬ ಹೊಗಳಿದರು.

ಅಂದು ಕಛೇರಿಗೆ ಬರುವುದಿಲ್ಲವೆಂದು ಹೇಳಿಕಳುಹಿಸಿ ರಾಯರ
ಮನೆಯಲ್ಲಿಯೇ ನಿಂತರು. ರಾಯರ ಊಟವೂ ಮುಗಿದ ಮೇಲೆ
ಎಲ್ಲರೂ ತಾಂಬೂಲ ಚರ್ವಣಕ್ಕೆ ಕುಳಿತಾಗ

"ಇದೇನು ಇಷ್ಟುದೂರ ಪಾದ ಬೆಳೆಯಿಸಿದ್ದು. ಬಡವನ ಮನೆ

ಸಾಗ್ಯಲಕ್ಷ್ಮಿ ಬಂದ ಹಾಗೆ.” ಎಂದು ಕೇಳಿದರು.

“ಒಂದು ಕೆಲಸದಮೇಲೆ ಬಂದಿದ್ದೇವೆ ರಾಯರೇ.”

“ಹೇಳಿ. ನನ್ನ ಕೈಯ್ಯಲ್ಲಿ ಸಾಧ್ಯವಾದುದಾದರೆ ಅಗತ್ಯವಾಗಿ ಮಾಡಿಕೊಡುತ್ತೇನೆ.”

“ನಿಮಗೆ ಪುಟ್ಟಸೋಮನಹಳ್ಳಿ ವೆಂಕಟರಾಯರ ಪರಿಚಯ ಇರಬಹುದು.”

“ಮಹಾನುಭಾವರು. ಅವರ ಪರಿಚಯ ಯಾರಿಗಿಲ್ಲ ಆಚಾರ್ರೇ. ಅವರು ನಮಗೆ ದೂರದ ಬಂಧುಗಳೂ ಆಗಬೇಕು.”

“ಅವರ ತಂಗಿಯನ್ನೇ ನನಗೆ ಕೊಟ್ಟು ಲಗ್ನವಾಗಿರುವುದು.” ಎಂದು ಲಕ್ಷ್ಮಣರಾಯರು ಹೇಳಿದರು.

“ಬಹಳ ಸಂತೋಷ. ಅಂಥ ಧರ್ಮಿಷ್ಟರನ್ನು ಇನ್ನು ನಾವು ನೋಡಲಾರೆವು ಸ್ವಾಮಿ. ಕಲಿಯುಗವನ್ನು ಕೃತಯುಗ ಮಾಡಿದ ಪುಣ್ಯಾತ್ಮರು.”

“ತಮ್ಮ ಸಂಬಂಧ ಬೆಳೆಸಬೇಕೆಂದು ಲಕ್ಷ್ಮಣರಾಯರು ಬಂದಿದ್ದಾರೆ.”

“ದೈವಚಿತ್ತವಿದ್ದರೆ ಆಗಬಹುದು.”

“ವೆಂಕಟರಾಯರಿಗೆ ಒಬ್ಬಳೇ ಮಗಳು. ಆ ಹುಡುಗಿ ಲಗ್ನ ಈ ವರ್ಷಮಾಡಬೇಕೆಂದು ಅವರ ತಾಯಿ ಉತ್ಸುಕರಾಗಿದ್ದಾರೆ. ನಿಮ್ಮ ಮಗನಿಗೇ ಕೊಟ್ಟು ಮದವೆಮಾಡಬೇಕೆಂದು ವೆಂಕಟರಾಯರು ಸಂಕಲ್ಪ ಮಾಡಿಕೊಂಡಿದ್ದರಂತೆ.”

“ಹುಡುಗಿಗೆ ಎಷ್ಟು ವಯಸ್ಸು.”

“ಹನ್ನೆರಡು.”

“ನನ್ನ ಮಗ ಚಿಕ್ಕವನಲ್ಲ ಆಚಾರ್ರೇ.”

“ಅವನ ವಯಸ್ಸೆಷ್ಟು ?”

“ಹದಿನಾರು.”

“ಆಗಬಹುದಲ್ಲ.”

"ಇನ್ನೂ ನಾಲ್ಕೆಂಟು ವರ್ಷ ಮಗನಿಗೆ ಓದಿಸಬೇಕೆಂದು ಇ
ಯಿದೆ. ನಾನು ಸುಧಾಮ. ಮಕಳ್ಳಿಗೆ ಏನೂ ಆಸ್ತಿ ಬಿಡು
ಸ್ಥಿತಿಯಲ್ಲಿಲ್ಲ. ವಿದ್ಯವೇ ಅವರ ಆಸ್ತಿಯಾಗಬೇಕು."

"ಮದುವೆಯಾದ ಮೇಲೆ ಓದು ಮುಂದುವರಿಸುವುದಕ್ಕೆ ಯಾ
ದೂ ಅಭ್ಯಂತರವಿಲ್ಲ. ನಾಲ್ಕೆಂಟು ವರ್ಷ ಕಳೆದ ಮೇಲೆ ಪ್ರಸ್ತದ ಶಾ
ಮಾಡಿದರಾಯಿತು."

"ವೆಂಕಟರಾಯರು ತೀರಿಕೊಂಡ ಮೇಲೆ ಅವರ ಮನೆಯವ
ತುಂಬ ಕಷ್ಟಕ್ಕೆ ಸಿಕ್ಕಿಕೊಂಡರೆಂದು ಕೇಳಿದೆ."

ವೆಂಕಟರಾಯರ ಸಂಸಾರದ ಕಥೆಯನ್ನು ಲಕ್ಷ್ಮಣರಾಯ
ಕೂಲಂಕುಷವಾಗಿ ವಿವರಿಸಿ

"ಈಗೆಲ್ಲಾ ಹದ್ದು ಬಸ್ತಿಗೆ ಬಂದಿದೆ" ಎಂದರು.

"ಇಬ್ಬರು ಗಂಡು ಮಕ್ಕಳ ಸುದ್ದಿ ಸಮಾಚಾರವೇ ಇಲ್ಲವೆ ?"

"ಅವರು ರಂಗೂನಿನಲ್ಲಿದ್ದಾರೆಂದು ಸುದ್ದಿ. ಅವರಿಂದ ಕಾಗ
ಬಂದಿಲ್ಲ."

"ಯಾವುದಕ್ಕೂ ನೀವು ಯೋಚಿಸಬೇಡಿ ಜಯರಾಯರೇ. ಸೊ
ಸಾಗಿ ಮದುವೆ ಮಾಡುತ್ತಾರೆ. ಎರಡು ಖರ್ಚನ್ನೂ ಅವರೇ ವಹಿ
ಕೊಳ್ಳಲು ಸಿದ್ಧರಾಗಿದ್ದಾರೆ. ಸಾಲಂಕೃತ ಕನ್ಯಾದಾನ ಮಾ
ಯೋಗ್ಯ ವರೋಪಚಾರವನ್ನೂ ಮಾಡುತ್ತಾರೆ."

ಆಚಾರ್ರ ಮಾತು ಜಯರಾಯರ ಮನಸ್ಸಿಗೆ ನೋವನ್ನುಂ
ಮಾಡಿತು. ಕ್ಷಣಕಾಲ ಮೌನ ತಳೆದು ಜಯರಾಯರು,

"ಆಚಾರ್ರೇ, ನನ್ನ ಮಾತಿನರ್ಥ ತಾವು ಸರಿಯಾಗಿ ಗ್ರಹಿ
ದಂತೆ ಕಾಣುವುದಿಲ್ಲ. ವೆಂಕಟರಾಯರ ಕುಟುಂಬ, ನಮ್ಮ ಮನೆ
ತಮ್ಮ ಮಗಳನ್ನು ಕೊಡಲೊಪ್ಪಿರುವುದೇ ದೊಡ್ಡ ವಿಷಯ. ನಮ
ಮನೆ ಮಂಗಳ ಲಕ್ಷ್ಮಿಯಾಗುವ ಸೊಸೆ ಬರುವಾಗ ಅಲ್ಪವಾದ ಒಡ
ವಸ್ತುಗಳನ್ನು ಬಯಸುತ್ತೇನೆಂದು ಭಾವಿಸಿದಿರಾ ? ಅವರು ಒಂ
ತುಳಸೀದಳವಿಟ್ಟು ಲಗ್ನ ಮಾಡಿಕೊಟ್ಟರೂ ಸಂತೋಷ."

ಆಚಾರ್ರು ತಲೆತಗ್ಗಿಸಿ ಕುಳಿತು ಬಿಟ್ಟರು. ಲಕ್ಷ್ಮಣರಾಯರು ರಿಸ್ಥಿತಿಯನ್ನು ಸುಧಾರಿಸಲೆತ್ನಿಸಿ.

"ತಮಗೆ ಹೇಗೆ ಸಂತೋಷವೊ ಹಾಗೇ ಆಗಲಿ ಸ್ವಾಮಿ" ಂದರು.

"ನಮ್ಮದು ಒಂದು ಕಟ್ಟಳೆ ರಾಯರೇ. ಮುತ್ತೈದೆಯರನ್ನು ಕೇಳದೆ ಾವು ಮನೆಯಲ್ಲಿ ಯಾವ ಮಂಗಳ ಕಾರ್ಯವನ್ನೂ ಮಾಡುವುದಿಲ್ಲ. ವರನ್ನೂ ಒಂದು ಮಾತು ಕೇಳಿ ಬಿಡುವುದು – ಅವರು ಅಪ್ಪಣೆ ೊಟ್ಟರೆ ಅಗತ್ಯವಾಗಿ ಆಗಬಹುದು."

"ಅಲ್ಲಿಗೆ ಯಾರೂ ಗಂಡಸರು ಹೋಗುವ ಹಾಗಿಲ್ಲವೆಂದು ಹೇಳಿ ರಿ."

"ಯೋಚನೆ ಮಾಡಬೇಡಿ. ನನ್ನ ಮಗಳು ಶ್ರೀದೇವಿ ಕೇಳಿ ೊಂಡು ಬರುತ್ತಾಳೆ."

ರಾಯರು ತಮ್ಮ ಎಂಟು ವರ್ಷದ ಮಗಳು ಶ್ರೀದೇವಿಯನ್ನು ರೆದು

"ಮುತ್ತೈದೆಯರು ಬಂದಿದ್ದಾರೆಯೇಮ್ಮ."

"ಬಂದಿದ್ದಾರೆ ಅಣ್ಣ."

"ಅಮ್ಮ ಏನು ಮಾಡುತ್ತಿದ್ದಾಳೆ."

"ಸುಮ್ಮನೆ ಕೂತಿದ್ದಾಳೆ. ಕಣ್ಣಲ್ಲಿ ನೀರು ಸುರಿಯುತ್ತಿದೆ."

"ಹೆಂಗಸರು ಯಾರಾದರೂ ಬಂದಿದ್ದಾರೆಯೋ ?"

"ಇನ್ನೂ ಯಾರೂ ಬಂದಿಲ್ಲ."

"ನೀನು ಒಂದು ಕೆಲಸ ಮಾಡುತ್ತೀಯಾ ?"

"ಏನು ಮಾಡಲಿ ಹೇಳಣ್ಣ."

"ತಲೆಗೆ ಸ್ನಾನಮಾಡಿ ಒಂದು ಒಟ್ಟೆ ಬಟ್ಟೆ ಸುತ್ತಿಕೋ – ತಟ್ಟೆ ುಲ್ಲಿ ಕರ್ಪೂರ ಹಾಕಿಕೊಂಡು ಮಂಗಳಾರತಿ ಮಾಡಿ, ಕಾಯಿ ಒಡೆ ುಟ್ಟು ಸಾಷ್ಟಾಂಗ ನಮಸ್ಕಾರ ಮಾಡಿ 'ತಾಯಿಗಳಿರಾ – ವೆಂಕಟ ಾಯರ ಮಗಳನ್ನು ನಮ್ಮ ಮಾಧೂಗೆ ತಂದು ಕೊಳ್ಳಬಹುದೇ ಅಪ್ಪಣೆ

ಕೊಡಿಸಬೇಕು' ಎಂದು ಕೇಳು. ಅವರು ಏನು ಹೇಳುತ್ತಾರೋ ನನು
ಬಂದು ತಿಳಿಸು."

'ಆಗಲಿ' ಎಂದು ಶ್ರೀದೇವಿ ಒಳಗೆ ಹೊದಳು.

ಅವಳು ಹಿಂದಕ್ಕೆ ಬರಬೇಕಾದರೆ ಒಂದು ಗಂಟೆ ಹಿಡಿಯಿತು
ಆಚಾರ್ರು, ಲಕ್ಷ್ಮಣರಾಯರು ಜೀವ ಕೈಯಲ್ಲಿ ಹಿಡಿದುಕೊಂಡು ಕು
ತಿದ್ದರು.

ಶ್ರೀದೇವಿ ಉತ್ಸಾಹದಿಂದ ಹೊರಗೆ ಬರಲು ಜಯರಾಯರ
ಆತುರದಿಂದ

"ಕೇಳಿದೆಯಾ ?" ಎಂದರು.

"ಕೇಳಿದೆ."

"ಪೂಜೆಮಾಡಿ ಕೇಳಿದೆಯೋ ಇಲ್ಲವೋಮ್ಮಾ,"

"ನೀನು ಹೇಳಿದ ಹಾಗೇ ಮಾಡಿದೆ ಅಣ್ಣ."

"ಏನು ಅಪ್ಪಣೆಕೊಡಿಸಿದರು ?

"ರುಕ್ಮಿಣಿ ಮಾಧವನ ಕೈಹಿಡಿದರೆ ಹಾಲಿಗೆ ಸಕ್ಕರೆ ಬೆರ
ದಂತಾಗುತ್ತದೆ ಎಂದರು."

ಜಯರಾಯರು ಆಶ್ಚರ್ಯದಿಂದ

"ಹುಡುಗಿ ಹೆಸರು ರುಕ್ಮಿಣಿಯೇನು ಸ್ವಾಮಿ."

"ಹೌದು, ಹೌದು." ಎಂದು ಲಕ್ಷ್ಮಣರಾಯರೂ ಆಚಾರ್ರೂ
ಏಕಕಂಠದಿಂದ ನುಡಿದರು.

"ತಾಯಂದಿರ ಆಜ್ಞೆಯಾಗಿದೆ. ಇನ್ನು ನನ್ನದೇನೂ ಅಭ್ಯಂತ
ವಿಲ್ಲ ಸ್ವಾಮಿ."

ಎಂದು ಜಯರಾಯರು ಹೇಳಿದರು. ಆಚಾರ್ರು, ಲಕ್ಷ್ಮಣರಾಯ
ಮುಖವರಳಿತು. ತಾವು ಬಂದ ಕೆಲಸ ಇಷ್ಟು ಸುಸೂತ್ರವಾಗಿ ಆಗುತ್ತ
ದೆಂದು ಅವರು ಕನಸುಮನಸಿನಲ್ಲಿಯೂ ಎಣಿಸಿರಲಿಲ್ಲ.

ಮಾರನೆಯದಿನ ಜಯರಾಯರು ಅತಿಥಿಗಳನ್ನು ಉಳಿ
ಕೊಂಡರು. ಗೋದೂಬಾಯಿಯವರೇ ಔತಣದ ಅಡಿಗೆ ಮಾ

ಎಲ್ಲರಿಗೂ ಬಡಿಸಿದರು.

ಊಟ ಮುಗಿದ ಮೇಲೆ ರಾಯರು ಲಕ್ಷ್ಮಣರಾಯರಿಗೆ ಫಲ ತಾಂಬೂಲ ಕೊಟ್ಟರು. ಆಚಾರ್ರಿಗೆ ಫಲತಾಂಬೂಲದ ಜತೆಯಲ್ಲಿ ಒಂದು ವಲ್ಲಿಯೂ ಕೊಡಲ್ಪಟ್ಟಿತು.

ಆಚಾರ್ರು, ಲಕ್ಷ್ಮಣರಾಯರು ಸಂತೋಷಗೊಂಡು ಸಂಜೆಯ ಬಸ್ಸಿನಲ್ಲಿ ಪುಟ್ಟಸೋಮನ ಹಳ್ಳಿಗೆ ಪ್ರಯಾಣ ಮಾಡಿದರು.

೩

ಮಾರ್ಗಶಿರ ಮಾಸದಲ್ಲಿ ಮದುವೆಯೆಂದು ನಿಷ್ಕರ್ಷೆಯಾಗಿತ್ತು. ರಂಗಮ್ಮನವರು ಮದುವೆಗೆ ಬೇಕಾದ ಹಪ್ಪಳ, ಸಂಡಿಗೆ, ಅವಲಕ್ಕಿ, ಚಕ್ಕುಲಿಹಿಟ್ಟು, ಉಪ್ಪಿನಕಾಯಿ, ಇತ್ಯಾದಿ ಸಾಮಾನುಗಳನ್ನು ಮಾಡಿಸುವುದರಲ್ಲಿ ನಿರತರಾದರು. ಆಚಾರ್ರು ಪುಟ್ಟಸೋಮನಹಳ್ಳಿಯಲ್ಲಿಯೇ ಉಳಿದುಕೊಂಡು ಮದುವೆ ವ್ಯವಸ್ಥೆಗೆ ನೆರವಾದರು. ಲಕ್ಷ್ಮಣರಾಯರು ವಾರಕ್ಕೊಮ್ಮೆ ಬಂದು ಹೊರಗಣ ವ್ಯವಸ್ಥೆ ನೋಡಿಕೊಂಡು ಹೋಗುತ್ತಿದ್ದರು.

ರಂಗಮ್ಮನವರ ಮನೆಯ ಹಣದ ಹಂಡೆಗಳೆಲ್ಲಾ ಬರಿದಾಗಿದ್ದವು. ಹೆಚ್ಚಿನ ಒಡವೆಗಳೂ ಮಾಯವಾಗಿದ್ದವು. ಋಣಬಾಧೆ ಪರಿಹರಿಸಿಕೊಳ್ಳಲು ಬೆಲೆಬಾಳುವ ಜಮೀನುಗಳೂ ಹೋಗಿದ್ದವು. ಮದುವೆಗೆ ಹಣ ಎಲ್ಲಿಂದ ಒದಗಿಸುವುದು ಎನ್ನುವ ಚಿಂತೆ ರಂಗಮ್ಮನವರನ್ನು ಕಾಡತೊಡಗಿತು. ಆಚಾರ್ರಿಗಾಗಲಿ ಲಕ್ಷ್ಮಣರಾಯರಿಗಾಗಲಿ ಸುಳುಹುಕೊಡದೆ ಅವರು ಕೆಲಸ ಸಾಗಿಸಿದ್ದರು.

ರಾತ್ರಿ ರಂಗಮ್ಮನವರಿಗೆ ನಿದ್ರೆ ಬರುತ್ತಿರಲಿಲ್ಲ. ಹಾಸಿಗೆಯ ಮೇಲೆ ಕುಳಿತುಕೊಂಡು ಕಣ್ಣೀರು ಸುರಿಸುವರು. 'ವಯಸ್ಸಿಗೆ ಬಂದ ಇಬ್ಬರು ಗಂಡುಮಕ್ಕಳಿದ್ದರೂ ನನ್ನ ಭಾಗಕ್ಕೆ ಯಾರೂ ಇಲ್ಲವಾದರೇ' ಎಂದು ದುಃಖಿಸುವರು.

ಮದುವೆಯಕಾಲ ಸಮೀಪಿಸಿದಂತೆ ರಂಗಮ್ಮನವರಿಗೆ ಮನೋ
ೀಗ ಹೆಚ್ಚುತ್ತ ಬಂದಿತು.

ಒಂದು ದಿನ ಸಂಜೆ ರಂಗಮ್ಮನವರು ರೋಗಿಗಳಿಗೆ ಔಷಧ
ಡುತ್ತ ಜಗುಲಿಯ ಮೇಲೆ ಕುಳಿತುಕೊಂಡಿದ್ದರು. ಕರೀಮ್ ಬಂದು
ರ ನಿಂತುಕೊಂಡ.

"ಏನು ಬಂದೆ ಕರೀಮ್ ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾ
ನೋ ?"

"ಚಂದಾಕಿದ್ದಾರವ್ವಾ"

"ನಿನ್ನ ಸೊಸೆ ಹೆತ್ತಳೇನೋ ?"

"ಇನ್ನೂ ಇಲ್ರವ್ವಾ."

"ಏನು ಬಂದಿದ್ದೆ ಯಾರಿಗಾದರೂ ಔಷಧ ಬೇಕಾಗಿತ್ತೊ ?"

"ಇಲ್ರವ್ವಾ – ನಿಮ್ತಾವ ಮಾತಾಡಬೇಕಾಗಿತ್ತು ಬಂದೆ."

"ಕೂತುಕೊ."

ರೋಗಿಗಳ ಕೆಲಸ ಮುಗಿಯುವ ವೇಳೆಗೆ ಆರುಗಂಟೆಯಾಯಿತು.
ಲ್ಲರೂ ಹೋದಮೇಲೆ ಕರೀಮನ ಕಡೆ ತಿರುಗಿ

"ಏನು ಬಂದಿದ್ದೆ. ಹೇಳು." ಎಂದರು.

"ಚಿಕ್ಕಮ್ಮಣ್ಣಿಯವರ ಮದ್ವೆ ಗೊತ್ತಾಗೈತಂತೆ !"

"ಗೊತ್ತಾಗಿದೆಯಪ್ಪ – ಮಾರ್ಗಶಿರಮಾಸದಲ್ಲಿ ಲಗ್ನ."

"ಯಾರವ್ವಾ ಗಂಡು."

"ಚಿಕ್ಕರಾಯನಪುರದ ಹೆಡ್‌ಗುಮಾಸ್ತರು ಜಯರಾಯರ ಮಗ
ಾಧವರಾಯ."

"ಖರ್ಚಿಗೇನು ಮಾಡ್ತೀರವ್ವಾ. ಮದುವೇಗೇಂತ ದೊಡ್ಡ
ಯ್ಯು ಏನಾದ್ರು ತೆಗೆದು ಮಡಗೌರಾ ?"

ರಂಗಮ್ಮನವರ ಬಾಯಲ್ಲಿ ಮಾತು ಹೊರಡಲಿಲ್ಲ. ಕಣ್ಣಿನಿಂದ
ಸಿಗಳು ಮಿಡಿದವು.

"ಕಣ್ಣಲ್ಲಿ ಯಾಕೆ ನೀರು ಆಕ್ತೀರವ್ವಾ. ಮಾರಾಯರು, ದೊಡ್ಡ

ರಾಯ್ರು, ನೀವೂ ಊರಿಗೆ ಊರೇ ಸಾಕಿದ್ರಿ. ನೂರಾರು ಜನ
ಅನ್ನಕೊಟ್ರಿ. ನಿಮ್ಮ ಧರ್ಮ ನಿಮ್ಮನ್ನು ಕಾಪಾಡಾಕಿಲ್ವಾ."

"ನನಗೂ ಅದೇ ಧೈರ್ಯ ಕರೀಮ್."

"ನಂಗೆ ಒಂದು ವಿಸ್ಯ ಜ್ಞಾಪ್ಕ ಬಂತವ್ವ. ಹೇಳಿ ಹೋಗೆ
ಣಾಂತ ಬಂದೆ."

"ಹೇಳಪ್ಪ."

"ದೊಡ್ಡರಾಯ್ರು ಕೇಳಿಕೇಳಿದೋರಿಗೆ ಹಣ ಕೊಡ್ತಾ ಇದ್ರ
ಅದರ ಪೈಕಿ ಯಾವದಾರಾ ಹಿಂದಕ್ಕೆ ಬಂತೇನ್ರವ್ವಾ."

"ಇದುವರೆಗೆ ಒಂದು ಕಾಸೂ ಕಂಡಿಲ್ಲಪ್ಪಾ."

"ಬೆಂಗಳೂರಿನಲ್ಲಿ ಶಾಮರಾಯರು ಎಂತ ಒಬ್ಬರು ಲಾಯ
ಇದ್ದಾರೆ."

"ಬಲ್ಲೆ–ನಮ್ಮ ಯಜಮಾನರು ಅವರ ವಿಷಯ ಹೇಳುತ್ತಿದ್ದರು

"ಶಾಮರಾಯರಿಗೆ ದೊಡ್ಡರಾಯರು ಹಣ ಕೊಟ್ಟಿದ್ದಂ
ಕಾಣುತ್ತೆ. ಅವರನ್ನ ಒಂದು ಮಾತು ಕೇಳಿದ್ರೆ ಒಳ್ಳೇದು."

"ಹ್ಯಾಗೆ ಕೇಳೋದೋ ಕರೀಮ್."

"ಅದಕ್ಕೇನ್ರವ್ವಾ – ನಾನು ಕೇಳ್ತೇನೆ. ನನ್ನ ಜತೆ ಯಾರ್ನಾದ್ರು
ಕಳಿಸಿಕೊಡಿ."

ರಂಗಮ್ಮನವರು ಸ್ವಲ್ಪ ಯೋಚಿಸಿ ಆಗಲಿ ಎಂದರು.

ಅದೇ ಶನಿವಾರ ಲಕ್ಷ್ಮಣರಾಯರು ಬಂದಾಗ, ಅವರಿಗೆ
ವಿಷಯ, ತಿಳಿಸಿ ಕರೀಮನ ಜತೆ ಲಕ್ಷ್ಮಣರಾಯರನ್ನು ಕಳುಹಿ
ಕೊಟ್ಟರು.

ಕರೀಮನ ಸಲಹೆ ಫಲಕಾರಿಯಾಗುತ್ತದೆಂದು ರಂಗಮ್ಮನವರಿ
ಸ್ವಲ್ಪವೂ ನಂಬಿಕೆಇರಲಿಲ್ಲ. ಕರೀಮನ ಸ್ವಾಮಿಭಕ್ತಿ ಅವರ ಮನಸ್ಸಿ
ಆನಂದವನ್ನುಂಟುಮಾಡಿದ್ದರೂ 'ದುಡ್ಡಿನ ಕೊರಗು' ಕಡಿಮೆಯಾಗಲಿ

ಮಾರನೆಯ ದಿನ ಸಂಜೆ ಬಸ್ಸಿನಲ್ಲಿ ಲಕ್ಷ್ಮಣರಾಯರೂ ಕರೀಮನ
ಬೆಂಗಳೂರಿನಿಂದ ಹಿಂದಿರುಗಿದರು. ಅವರ ಮುಖ ಗೆಲುವಾಗಿದ್ದುದನ

ಕಂಡು ರಂಗಮ್ಮನವರಿಗೆ ಸಂತಸವಾಯಿತು.

"ಹೋದ ಕೆಲಸವೇನಾಯಿತಪ್ಪ;"

"ಹಣ್ಣಮ್ಮ – ಹಣ್ಣು."

"ಹಣ್ಣು !"

"ಹೌದು. ನಾವು ನಿನ್ನೆ ಬಸ್ ಇಳಿದವರೇ ನೇರವಾಗಿ ಶಾಮ ರಾಯರ ಕಛೇರಿಗೇ ಹೋದೆವು. ಏಳು ಗಂಟೆಯ ಹೊತ್ತಿಗೆ ಅವರು ಬಂದರು. ಇಲ್ಲಿ ಲಗ್ನ ನಿಷ್ಕರ್ಷೆಯಾಗಿರುವ ವಿಷಯ ಕರೀಮ್ ತಿಳಿಸಿ, 'ದೊಡ್ಡರಾಯರು ಯಾರಿಗಾದರೂ ಹಣ ಕೊಟ್ಟಿರುವ ವಿಷಯ ನಿಮಗೆ ಗೊತ್ತಿದೆಯೇ ?' ಎಂದು ಕೇಳಿದ. ಶಾಮರಾಯರು ತಮ್ಮ ಮೇಜು ಹುಡುಕಿ ಒಂದು ಹಳೆಯ ಡೈರಿ ತೆಗೆದು – ಈಗ್ಗೆ ಮೂರೂವರೆ ವರ್ಷದ ಕೆಳಗೆ ನಾನು ವೆಂಕಟರಾಯರ ಹತ್ತಿರ ನನ್ನ ಮಗಳ ಮದುವೆಗಾಗಿ ಮೂರು ಸಾವಿರ ರೂಪಾಯಿ ಸಾಲ ತೆಗೆದು ಕೊಂಡಿದ್ದೆ. ಮದು ವೆಯೂ ಸಾಂಗವಾಗಿ ನೆರವೇರಿತು. ನಾಲ್ಕಾರು ತಿಂಗಳಲ್ಲಿ ನನ್ನ ಕೈಗೆ ಹಣ ಬಂತು. ರಾಯರಿಗೆ ಅದನ್ನು ಕೊಡ ಹೋದೆ. ಅವರು – ಈಗ ನನಗೆ ಹಣದ ಅವಶ್ಯಕತೆಯಿಲ್ಲ. ನಿಮ್ಮಲ್ಲಿಯೇ ಇರಲಿ. ನನಗೆ ಅವಶ್ಯಬಿದ್ದಾಗ ಕೇಳುತ್ತೇನೆ. ಕೊಡುವಿರಂತೆ – ಎಂದರು. ನಾನು ಹಣ ಬ್ಯಾಂಕಿನ ಫಿಕ್ಸೆಡ್ ಡಿಪಾಸಿಟ್ಟಿನಲ್ಲಿ ಹಾಕಿಟ್ಟಿದ್ದೇನೆ. ಬಡ್ಡಿ ಇನ್ನೂರು ಎಪ್ಪತ್ತು ರೂಪಾಯಿ ಆಗಿದೆ. ನೀವು ಸೋಮವಾರ ಇಲ್ಲಿ ರುವ ಹಾಗಿದ್ದರೆ ಹಣ ಬಿಡಿಸಿ ಕೊಡುತ್ತೇನೆ. ತೆಗೆದು ಕೊಂಡು ಹೋಗ ಬಹುದು – ಎಂದರು."

"ಇನ್ನೇನು ಹೇಳಿದರು ?"

"ಹಣ ಸಾಲದಿದ್ದರೆ ನನಗೆ ತಿಳಿಸಿ – ನಾನು ಒದಗಿಸಿಕೊಡು ತ್ತೇನೆ. ರಾಯರು ನನಗೆ ಮಾಡಿರುವ ಉಪಕಾರಕ್ಕೆ ನಾನು ಯಾವ ಪ್ರತ್ಯುಪಕಾರ ಮಾಡಿದರೂ ಸಾಲದಾಗಿದೆ. ಅಮ್ಮಾವರು ಮನಸ್ಸಿನಲ್ಲಿ ಯಾವ ವ್ಯಥೆಯನ್ನು ಇಟ್ಟುಕೊಳ್ಳದೆ ಸಂತೋಷವಾಗಿ ಲಗ್ನ ಮಾಡಲಿ. ಅವರಿಗೆ ಇಲ್ಲಿಂದ ಏನು ನೆರವು ಬೇಕು ತಿಳಿಸಿದರೆ ಶಿರಸಾ ವಹಿಸಿ

ಮಾಡುತ್ತೇನೆ – ಎಂದರು."

"ಎಂಥ ಧರ್ಮಾತ್ಮರಪ್ಪ, ಇನ್ನೂ ಇಂಥವರು ಇದ್ದಾರಲ್ಲಾ ! ನಿನ್ನ ಉಪಕಾರ ಹೇಗೆ ತೀರಿಸಲಪ್ಪಾ !"

"ನೀವು ಹೀಗೆಲ್ಲಾ ಹೇಳಬೇಡಿ ತಾಯಿ – ನಾನು ನಿಮ್ಮಗಾ."

"ಹೌದಪ್ಪ ಹೌದು. ಸಂದೇಹವೇ ಇಲ್ಲ."

ರಂಗಮ್ಮನವರಿಗೆ ಹೋದ ಜೀವ ಬಂದಂತಾಗಿತ್ತು. ಅಪ್ರಾರ್ಥಿ ನಾಗಿ ಒದಗಿದ ಈ ಸಹಾಯ, ಭಗವಂತನೇ ಅನುಗ್ರಹಿಸಿದನೆಂದು ದೃಢವಾಗಿ ನಂಬಿದರು.

ರಂಗಮ್ಮನವರ ಬಾಯಿಂದ ಈ ಸುದ್ದಿ ಕೇಳಿ ಆಚಾರ್ರಿಗೆ ಪರಮಾ ಶ್ಚರ್ಯವಾಯಿತು.

"ಯಾವ ಧೈರ್ಯದ ಮೇಲೆ ಮದುವೆ ನಿಶ್ಚಯಿಸಿ, ಏರ್ಪಾಟು ಮಾಡುತ್ತಿದ್ದಿರಮ್ಮಾ?"

"ಭಗವಂತನ ಮೇಲೆ ಭಾರ ಹಾಕುವುದೊಂದೇ ನನಗಿದ್ದ ದಾರಿ, ಆಚಾರ್ರೇ."

"ಇದು ಅಲೌಕಿಕ ದೈವಭಕ್ತಿ."

"ಯಜಮಾನರು ಒಂದು ಕಥೆ ಹೇಳಿದ್ದರು. ಅದು ನನ್ನ ಬಾಳ ಬೆಳಕಾಗಿ ನಡಸಿಕೊಂಡು ಬಂದಿದೆ."

"ಹೇಳೀಮ್ಮ. ನಾನೂ ಕೇಳಿ ಪುನೀತನಾಗುತ್ತೇನೆ."

"ಒಮ್ಮೆ ವೈಕುಂಠದಲ್ಲಿ ಶ್ರೀಮನ್ನಾರಾಯಣ, ಲಕ್ಷ್ಮಿದೇವಿ ಪಗಡೆಯಾಡುತ್ತ ಕುಳಿತಿದ್ದರಂತೆ ಭಗವಂತ ಇದ್ದಕ್ಕಿದ್ದಂತೆ ಎದ್ದು ನಿಂತ. ದೇವಿ 'ಏಕೆ' ಎಂದು ಕೇಳಿದಳು. 'ನನ್ನ ಭಕ್ತ ಕಷ್ಟಕ್ಕೆ ಸಿಕ್ಕಿ ಕೊಂಡಿದ್ದಾನೆ. ಅವನ ಸಹಾಯಕ್ಕೆ ನಾನು ಹೋಗಬೇಕಾಗಿದೆ' ಎಂದು ಹೇಳಿ ಹೊರಗೆ ಹೋದವನು ಒಂದೇ ಕ್ಷಣದಲ್ಲಿ ಮರಳಿ ಹಿಂದಕ್ಕೆ ಬಂದ. ಲಕ್ಷ್ಮೀದೇವಿಗೆ ಆಶ್ಚರ್ಯವಾಯಿತು. 'ಭಕ್ತನನ್ನು ಕಾಪಾಡಿದ್ದಾಯಿತೇ ಸ್ವಾಮಿ' ಎಂದು ಕೇಳಿದಳು. ನಾರಾಯಣ ನಸುನಗುತ್ತ 'ನನ್ನ ಭಕ್ತ ನನ್ನ ಧ್ಯಾನಮಾಡಿಕೊಂಡು ಹೋಗುತ್ತಾ ಮೈಮರೆತು ಅಗಸರು

ಲುವೆಮಾಡಿ ಹರವಿದ್ದ ಬಿಳಿಯವಸ್ತ್ರಗಳ ಮೇಲೆ ನಡೆದು ಹೋದ. ಾಪಿತರಾದ ಅಗಸರು ಅವನನ್ನು ಹೊಡೆಯಲು ಬಂದರು – ಆಗಲೇ ಾನು ಅವನ ನೆರವಿಗೆ ಹೊರಟಿದ್ದು. ಭಕ್ತ ಕೂಡಲೇ ತನ್ನ ಕೈಗೆ ನೆಲದ ೀಲಿದ್ದ ಒಂದು ಇಟ್ಟಿಗೆ ತೆಗೆದುಕೊಂಡಿದ್ದ – ನಾನು ಅವನ ಸಹಾ ುಕ್ಕೆ ಹೋಗುವ ಅಗತ್ಯವೇ ಬೀಳಲಿಲ್ಲ'."

"ಸತ್ಯ – ಸತ್ಯ – ಭಗವಂತನನ್ನು ನಂಬಿದರೆ ಮನಃಪೂರ್ವಕ ಾಗಿ ನಂಬಿಬಿಡಬೇಕು. ನಾನು - ನನ್ನದು ಎನ್ನುವ ಅಭಿಮಾನ ಭಕ್ತ ೀಗಿಕೊಳ್ಳುವವರೆಗೆ ಅವನಿಗೆ ಭಗವಂತನ ಕೃಪೆ ಲಭಿಸುವುದಿಲ್ಲ."

ರಂಗಮ್ಮನವರ ಅಂತಃಕರಣ ಉಕ್ಕೇರಿ ಬಂದು ಪಕ್ಕದಲ್ಲ ುಳಿತಿದ್ದ ರುಕ್ಮಿಣಿಯನ್ನು ತಬ್ಬಿಕೊಂಡು ಕಂಬನಿಸುರಿಸಿದರು. ುಕ್ಮಿಣಿಗೂ ದುಃಖವಾಯಿತು.

"ನೀನು ಸುಮ್ಮನೆ ಅಳಬೇಡಮ್ಮ" ಎಂದಳು.

"ಅಳುತ್ತಿಲ್ಲ ರುಕ್ಕೂ – ಸಂತೋಷಪಡುತ್ತಿದ್ದೇನೆ. ನೀನು ತುಂಬ ುಣ್ಯವಂತೆಕಣೇಮ್ಮ."

"ನನ್ನ ಭವಿಷ್ಯ ಸುಳ್ಳಾಗುವುದಿಲ್ಲ ತಾಯೀ." ಎಂದು ಆಚಾರ್ರು ುಡಿದರು.

ರುಕ್ಮಿಣಿ ಅದೃಷ್ಟಶಾಲಿ ಎನ್ನುವುದಕ್ಕೆ ರಂಗಮ್ಮನವರಿಗೆ ಕ್ಷಿಪ್ರ ಲ್ಲಿಯೇ ಮತ್ತೊಂದು ದೃಷ್ಟಾಂತ ಒದಗಿತು.

ಒಂದು ದಿನ ಮಧ್ಯಾಹ್ನ ಸುಮಾರು ಹನ್ನೆರಡು ಗಂಟೆ ಸಮಯ. ಾಚಾರ್ರು ದೇವರ ಪೂಜೆ ಮಾಡುತ್ತಿದ್ದರು. ರಂಗಮ್ಮನವರು ಅಡಿಗೆ ಲಸ ಮುಗಿಸುತ್ತಿದ್ದರು. ತಲೆಬಾಗಿಲಿನಲ್ಲಿ ಯಾರೋ ಕೂಗಿ ಂತಾಯಿತು.

"ಯಾರು" ಎಂದುಕೊಂಡು ರಂಗಮ್ಮನವರು ಹೊರಗೆ ಬಂದರು.

"ನಾನ್ರವ್ವಾ – ಅಮಲ್ದಾರರ ಜವಾನ."

"ಏನಪ್ಪಾ ಬಂದಿದ್ದೆ."

"ಸಾಹೇಬರು ನಿಮ್ಮನ್ನು ನೋಡೋಕೆ ಬತ್ತಾರಂತೆ. ತಿಳಿಸಿ

ಬಿಟ್ಟು ಬಾ ಅಂದ್ರು."

"ನನ್ನ ನೋಡೋಕೆ ಯಾಕೆ ?"

"ಯಾಕೊ ಕಾಣ್ರವ್ವ."

ಅಮಲ್ದಾರರೂ ಬಂದರು. ಹೊರಗೇ ಕುಳಿತು ಕಾ
ಹಾಕಿದ್ದ ಬೂಟ್ಸ್ ಬಿಚ್ಚಿಟ್ಟು ಒಳಕ್ಕೆ ಬಂದರು. ರುಕ್ಮಿಣಿ ಒಂದು ಚ
ಹಾಸಿದಳು. ಅಮಲ್ದಾರರು ಕುಳಿತುಕೊಂಡು

"ವೆಂಕಟರಾಯರ ಕುಟುಂಬ ತಾವೇನೆ ತಾಯೀ" ಎಂ
ಕೇಳಿದರು.

"ಹೌದಪ್ಪ. ಏಕೆ ?"

"ನಿಮ್ಮ ಯಜಮಾನರು ಅನೇಕಕೆರೆ ಕಂಟ್ರಾಕ್ಟ್ ಮಾಡುತ್ತಿದ್ದರ

"ಹೌದಪ್ಪ."

"ಅವರು ವೈಕುಂಠವಾಸಿಗಳಾದ ಮೇಲೆ ನಿಮ್ಮ ಹಿರಿಯಮುಕ್ಕ
ಅನಂತರಾಯರು ಕಂಟ್ರ್ಯಾಕ್ಟು ಮಾಡುತ್ತಿದ್ದರು."

"ಹೌದಪ್ಪಾ. ಎಲ್ಲಾ ವೈಭವವೂ ಮುಗಿಯಿತಲ್ಲ."

"ಕೆಲಸ ಸಮರ್ಪಕವಾಗಿ ಆಗಲಿಲ್ಲವೆಂದು ಸರ್ಕಾರ ಅವರಿ
ನಾಲ್ಕು ಸಾವಿರ ರೂಪಾಯಿ ವಸೂಲ್ಮಾಡಿಕೊಂಡಿತ್ತಲ್ಲವೇ ?"

ರಂಗಮ್ಮ ಹೆದರಿದರು. 'ಇದು ಯಾವ ಹೊಸಗಂಡಾಂತ
ಎಂದುಕೊಂಡು.

"ಆ ವ್ಯವಹಾರ ಮುಗಿಯಿತಲ್ಲ ಅಮಲ್ದಾರರೇ."

"ಇಲ್ಲಮ್ಮ ಮುಗಿದಿಲ್ಲ."

"ನಾವು ಇನ್ನೂ ಏನಾದರೂ ಕೊಡಬೇಕಾಗಿದೆಯೇ ?"

"ಇಲ್ಲ ತಾಯೀ. ನಿಮ್ಮಿಂದ ನಾಲ್ಕು ಸಾವಿರ ತೆಗೆದುಕೊಂಡದ
ನ್ಯಾಯವಲ್ಲವೆಂದು ಇತ್ಯರ್ಥವಾಗಿ, ನಿಮಗೆ ಆ ನಾಲ್ಕು ಸಾವಿ
ಹಿಂದಿರುಗಿಸಬೇಕೆಂದು ಸರ್ಕಾರ ನಿಶ್ಚಯಿಸಿದೆ."

'ಇದೇನು ಭ್ರಮೆಯೆ – ಸತ್ಯವೋ' ಎಂದು ಕೊಂಡು ರಂಗವ
ನವರು

"ನಿಜವೇ ?" ಎಂದು ಕೇಳಿದರು.

"ನಿಜ ತಾಯಿ, ಇಲ್ಲಿ ನೋಡಿ – ಅದಕ್ಕೆ ಸಂಬಂಧಪಟ್ಟ ಕಾಗದ ತ್ರಗಳು. ನೀವು ರಶೀತಿಗೆ ರುಜು ಮಾಡಿ ಕೊಟ್ಟರೆ ಹಣ ಕಳುಹಿಸಿ ೂಡುತ್ತೇನೆ."

ರಂಗಮ್ಮ ರಶೀತಿಗೆ ರುಜು ಮಾಡಿ ಅಮಲ್ದಾರರಿಗೆ ಕೊಟ್ಟರು.

"ಮನೆಯಲ್ಲಿ ಮದುವೆ ಏರ್ಪಾಟು ಮಾಡಿರುವಿರಂತೆ !"

"ಹೌದು. ನಿಮಗೆ ಹೇಗೆ ಗೊತ್ತಾಯಿತು."

"ನಮ್ಮ ಹೆಡ್‌ಗುಮಾಸ್ತರು ಜಯರಾಯರು ನಿಮ್ಮ ಬೀಗರಂತೆ!"

"ಹೌದು."

"ಬಹಳ ಸಂತೋಷ. ಹಣ ಬೇಗ ನಿಮ್ಮ ಕೈಸೇರುವಂತೆ ಾಡುತ್ತೇನೆ. ನಿಮ್ಮ ಯಜಮಾನರ ಖ್ಯಾತಿ ಬಹಳ ಕೇಳಿದ್ದೇನೆ."

"ಇಲ್ಲೇ ಊಟ ಮಾಡಿಕೊಂಡು ಹೋಗೀಯಪ್ಪ."

"ಇಲ್ಲ ತಾಯಿ – ನಾನೀಗಲೇ ಚಿಕ್ಕರಾಯನಪುರ ಸೇರಬೇಕಾ ದೆ. ಮದುವೆಗೆ ಬರುತ್ತೇನಲ್ಲ."

"ಬಿಸಿಲಿನಲ್ಲಿ ಬಂದಿದ್ದೀರಿ – ಸ್ವಲ್ಪ ಪಾನಕವಾದರೂ ಮಾಡಿ ೂಡುತ್ತೇನೆ." ಎಂದು ಒಳಗೆ ಹೋಗಿ ರಾಮುವನ್ನು ಪೇಟೆಗೆ ಕಳುಹಿಸಿ ಳನೀರು ತರಸಿದರು. ಕಾಲು ಗಂಟೆಯೊಳಗಾಗಿ ಅಮಲ್ದಾರರಿಗೆ ಾನಕ, ಎಳನೀರು, ಬಾಳೆಯಹಣ್ಣು, ಕಾಯಿ ಬೆಲ್ಲ ಹಾಕಿದ ಅವಲಕ್ಕಿ, ಪ್ಪೆಳ್ಳಂಗಾಯಿ ಉಂಡೆ ಬಂದಿತು. ಅಮಲ್ದಾರರು ಉಪಾಹಾರ ಾಡುತ್ತ.

"ಮೃಷ್ಟಾನ್ನ ಭೋಜನ ಮಾಡಿದ ಹಾಗಾಯಿತು. ಸಾವಿರಾರು ಜನಕ್ಕೆ ಅನ್ನವಿಟ್ಟ ಕೈ." ಎಂದು ನಮಸ್ಕಾರ ಮಾಡಿ ಪ್ರಯಾಣ ಬೆಳಸಿದರು.

ರಂಗಮ್ಮನವರು ನೇರವಾಗಿ ದೇವರ ಮನೆಗೆ ಹೋಗಿ ಅಡ್ಡ ಬಿದ್ದು "ಸ್ವಾಮಿ – ನಿನ್ನನ್ನು ನಂಬಿದವರನ್ನು ನೀನು ಕೆಡಿಸಲ್ಲಪ್ಪ" ಂದರು.

೪

ರುಕ್ಮಿಣಿಯ ಮದುವೆಯ ಸಂಭ್ರಮ, ಸಡಗರ ರಂಗಮ್ಮನವ
ಮನೆಗೇ ಅಡಕವಾಗಲಿಲ್ಲ; ಇಡಿಯ ಊರಿಗೇ ವ್ಯಾಪಿಸಿತು. ಲಕ್ಷ್ಮ
ರಾಯರು ಹದಿನೈದು ದಿವಸ ಮುಂಚಿತವಾಗಿಯೇ ಸಂಸಾರ ಸಮೇ
ಬಂದು ಪುಟ್ಟಸೋಮನಹಳ್ಳಿಯಲ್ಲಿ ನೆಲಸಿದರು.

ಕ್ರಿಸ್‌ಮಸ್ ರಜೆಯಿದ್ದುದರಿಂದ ಶಾಲೆಯ ಕಟ್ಟಡವೂ ಸಿಕ್ಕಿತ
ಅಲ್ಲಿಯೇ ಬೀಗರನ್ನೂ ಅವರ ಪರಿವಾರವನ್ನೂ ಇಳಿಸಲು ವ್ಯವ
ಯಾಯಿತು.

ಕರೀಮ್ ಚಪ್ಪರದ ಕೆಲಸದ ಜವಾಬ್ದಾರಿ ಹೊತ್ತುಕೊಂ
ರಂಗಮ್ಮನವರ ಮನೆಯಿದ್ದ ರಸ್ತೆಯನ್ನೆಲ್ಲಾ ಅವನ ಭವ್ಯವಾದ ಚಪ್ಪ
ವ್ಯಾಪಿಸಿತು. ಶಾಲೆಯ ಮುಂದೆಯೂ ಒಂದು ಚಪ್ಪರ ಹಾಕಲಾಗಿತ್ತು
ಊರ ಮುಂದಿನ ತೋಟವನ್ನು ಕೊಂಡು ಕೊಂಡಿದ್ದ ಗಿಡ್ಡಪ್ಪ ಮದು
ಗಾಗ ಷ್ಟು ತೆಂಗಿನಕಾಯಿ, ಎಳನೀರು ತಂದುಕೊಟ್ಟ. ರಾಯ
ರೈತರು ಅಕ್ಕಿ ಪೂರೈಸಿದರು. ರೈತರ ಹೆಣ್ಣುಮಕ್ಕಳು ಮನೆಗೆಲಸ
ನಿಂತರು. ಎಲ್ಲೆಲ್ಲಿಂದಲೋ ಹಣ್ಣು, ತರಕಾರಿ, ಹೂವು, ಬಾಳೆಯ
ವೀಳೆಯದೆಲೆ ಸರಬರಾಯಿ ಆಯಿತು.

ವರಪೂಜೆಯ ಬೆಳಿಗ್ಗೆಯೇ ಬೆಂಗಳೂರಿನಿಂದ ಶಾಮರಾಯರ
ಸಂಸಾರಸಮೇತ ಬಂದರು. ಅವರು ಬೆಂಗಳೂರಿನಿಂದಲೇ ಹನ್ನೆರಡ

ಪ್ಸನ್ ದೀಪಗಳನ್ನು ತೆಗೆಸಿಕೊಂಡು ಬಂದರು.

ವರನ ಕಡೆಯವರು ಸ್ಪೆಷಲ್ ಬಸ್ ಮಾಡಿಕೊಂಡು ಸಂಜೆ ವಕ್ಕೆ ಬಂದರು. ಅವರು ಬಂದಕೂಡಲೆ ಉಪಾಹಾರವಾಗಿ, ಮೆರ ಣಿಗೆಯ ಸಿದ್ಧತೆಯಾಯಿತು. ವರನನ್ನು ಕುದುರೆಯ ಮೇಲೆ ಕೂಡಿಸಿ ರವಣಿಗೆಯಾಯಿತು. ಶಾಮರಾಯರು ತಂದಿದ್ದ ದೀಪಗಳ ಜತೆಗೆ ತರು ಪಂಜುಗಳನ್ನು ಹಚ್ಚಿ ಮೆರವಣಿಗೆಗೆ ವಿಶೇಷ ಕಳೆಯನ್ನಿತ್ತರು.

ರಾತ್ರಿ ಬೀಗರಕಡೆಯವರಿಗೆ ಮಾತ್ರವಲ್ಲದೆ ಊರಿನವರಿಗೂ ಿಸಲಡಿಗೆ' ಊಟವಾಯಿತು.

ಮಾರನೆಯ ದಿನವೇ ಧಾರೆಯ ಮುಹೂರ್ತ, ಹೆಣ್ಣಿನ ಕಡೆ ಕ್ಷ್ಮಣರಾಯರು, ಅವರ ಕುಟುಂಬ ಹಸೆಯ ಮೇಲೆ ಕುಳಿತುಕೊಳ್ಳ ೀಕಾಯಿತು. ರಂಗಮ್ಮನವರು ಮಗಳಿಗೆ ಮನೆಯಲ್ಲಿದ್ದ ಅಲ್ಪಸ್ವಲ್ಪ ನ್ನದ ಜತೆಗೆ, ಮತ್ತಷ್ಟು ಚಿನ್ನ ಸೇರಿಸಿ ಒಂದು ಕಾಸಿನಸರ, ಒಂದು ುಂಡುಸರ, ಕೈಗೆ ನಾಲ್ಕುಜತೆ ಬಳೆ, ಕಿವಿಗೆ ವಜ್ರಕೆಂಪು ಹಾಕಿದ ಓಲೆ, ೂಂಟಕ್ಕೆ ಚಿನ್ನದ ಪಟ್ಟೆಯಿಟ್ಟು ಸಾಲಂಕೃತ ಕನ್ಯಾದಾನಮಾಡಿದರು. ರನಿಗೆ ಜರತಾರಿಪಂಚೆ, ನಿಲುವಂಗಿ, ವಜ್ರದುಂಗುರ ಕೊಟ್ಟರು.

ಜಯರಾಯರು ತಮ್ಮ ಬಡತನ ಮರೆತು, ಸೊಸೆಗೆ ಒಂದು ತೆ ಬಳೆ, ಎರಡು ಎಳೆಯ ಚಿನ್ನದ ಸರ ಮಾಡಿಸಿ ತಂದಿದ್ದರು.

ಮದುವೆ ವಿಜೃಂಭಣೆಯಿಂದ ನೆರವೇರಿತು. ನಾಗವಲ್ಲಿಯ ದಿನ ಧೂವರರನ್ನು ಕುದುರೆಯ ಮೇಲೆ ಕೂಡಿಸಿ ಮೆರವಣಿಗೆ ಮಾಡಿಸ ಾಯಿತು. ಬೀಗರು, ಬೀಗರ ಸಮೀಪ ಬಂಧುಗಳಿಗೆ ಯೋಗ್ಯ ುಡುಗೊರೆಗಳನ್ನು ಕೊಟ್ಟದ್ದಾಯಿತು.

ಯಾವ ಕಾರ್ಪಣ್ಯ, ಕ್ಲೇಶ, ಮನಃಸ್ತಾಪವಿಲ್ಲದೆ ಮದುವೆ ವೈಭ ದಿಂದ ನಡೆಯಿತು. ಬೀಗರು ಸಂತುಷ್ಟರಾಗಿ ಊರಿಗೆ ಪ್ರಯಾಣ ಳೆಸಿದರು.

ರಂಗಮ್ಮನವರನ್ನು ಊರಿಗೆ ಊರೇ ಹೊಗಳಿತು. ಪತಿವಿಯೋಗ, ಾಲ ಸೋಲಗಳ ಬಾಧೆ, ಮಕ್ಕಳ ನಿಷ್ಕರುಣ ವರ್ತನೆ ಎಲ್ಲವನ್ನೂ

ಸಹಿಸಿಕೊಂಡು ಇಷ್ಟೊಂದು ವೈಭವದಿಂದ ಮದುವೆ ಮಾಡು
ಹೆಚ್ಚಿನದೆಂದು ಎಲ್ಲರೂ ಹೊಗಳಿದರು.

ಜಯರಾಯರು ಮದುವೆ ಮುಗಿಸಿಕೊಂಡು ಊರು ತಲ
ಎರಡು ವಾರಗಳಲ್ಲಿ ಅವರಿಗೆ ರಿಟೈರ್‌ಮೆಂಟ್ ಆರ್ಡರ್ ಬಂ
ಅಮಲ್ದಾರರು ಜಯರಾಯರನ್ನು ಕರೆಸಿ

"ನೀವು ಒಂದು ಅಪ್ಲಿಕೇಷನ್ ಬರೆದುಕೊಡಿ ಜಯರಾಯ
ಎಕ್ಸ್‌ಟೆನ್‌ಷನ್ ಕೊಡುವುದಕ್ಕೆ ನಾನು ಶಿಫಾರಸು ಮಾಡುತ್ತೇನೆ."

"ಎಕ್ಸಟೆನ್‌ಷನ್ ನನಗೆ ಬೇಕಿಲ್ಲ ಸ್ವಾಮಿ."

"ನೀವು ಹೋಗಿ ಬಿಟ್ಟರೆ ನನ್ನ ಕೈ ಮುರಿದ ಹಾಗಾಗುತ್ತದೆ.
ಗೋಸ್ಕರವಾಗಿಯಾದರೂ ಎಕ್ಸಟೆನ್‌ಷನ್ ತೆಗೆದುಕೊಳ್ಳಿ."

"ನನಗೂ ವಯಸ್ಸಾಯಿತು. ಒಂದು ಜೀವಮಾನವೆಲ್ಲಾ ದ
ದಲ್ಲಿ ಕಳೆದಿದ್ದೇನೆ. ಉಳಿದಿರುವ ಆಯುಷ್ಯವನ್ನಾದರೂ ರಾಮ ಕೃ
ಎಂದುಕೊಂಡು ಕಳೆಯಲು ಅವಕಾಶಕೊಡಿ."

"ನಿಮ್ಮ ಪೂಜೆ ಪುರಸ್ಕಾರಗಳಿಗೆ ಸರ್ಕಾರಿ ನೌಕರಿ ಅಡ್ಡಿಯಾ
ಲಿಲ್ಲವಲ್ಲ ಜಯರಾಯರೇ."

"ಇಲ್ಲ. ಪುಣ್ಯಾತ್ಮರು ನೀವು ಕಛೇರಿ ಕೆಲಸವನ್ನೇ ನನ್ನ ಅ
ಕೂಲಕ್ಕೆ ಮಾರ್ಪಾಡು ಮಾಡಿದಿರಿ. ಸೋದರನಂತೆ ನಡಸಿಕೊಂ
ಅದಕ್ಕೆ ನಾನು ತುಂಬ ಋಣಿಯಾಗಿದ್ದೇನೆ."

"ನಿಮ್ಮ ಮಗನ ವಿದ್ಯಾಭ್ಯಾಸ ಮುಂದುವರಿಯಬೇಕು ಮ
ಮದುವೆಯಾಗಬೇಕು. ಕೈಯಲ್ಲಿದ್ದುದನ್ನು ಮಗನ ಮದುವೆಗೆ ಖ
ಮಾಡಿರುವಿರಿ. ವರ್ಷ, ಎರಡು ವರ್ಷ ನೌಕರಿಯಲ್ಲಿದ್ದು ಮಗ
ಒಂದು ಕೆಲಸ ಮಾಡಿಸಿಕೊಟ್ಟು ನೀವು ನಿವೃತ್ತರಾಗುವುದು ನ
ಸೂಕ್ತವಾಗಿ ಕಾಣುತ್ತದೆ."

"ತಮ್ಮ ಅಭಿಮಾನಕ್ಕೆ ಪ್ರತಿಹೇಳಲು ನನಗೆ ಬಾಯೇ ಬರ
ದಿಲ್ಲ. ಕರ್ಮಬಂಧನ ನಾವು ದುರ್ಬಲರಾಗಿದ್ದಷ್ಟು ದಿವಸವೂ ಕಾ
ಕಾಡುತ್ತದೆ. ಒಮ್ಮೆ ಗಟ್ಟಿಮನಸ್ಸುಮಾಡಿ ಇದನ್ನು ಕಳೆದುಕೊಳ್ಳಬೇ

ನನ್ನ ಮಗ ಬುದ್ಧಿವಂತ, ಸತ್ಯಸಂಧ – ಭಗವಂತ ಅವನಿಗೆ ಒಂದು ತುತ್ತು ಅನ್ನಕ್ಕೆ ಕೊರತೆಮಾಡುತ್ತಾನೆಂದು ನಾನು ತಿಳಿದಿಲ್ಲ. ತಾವು ಮನಸ್ಸಿಗೆ ಕ್ಲೇಶವುಂಟುಮಾಡಿಕೊಳ್ಳದೆ ನನ್ನನ್ನು ಬಿಟ್ಟುಕೊಡಬೇಕು." ಎಂದು ವಿನಯಪೂರ್ವಕವಾಗಿ ಪ್ರಾರ್ಥಿಸಿಕೊಂಡರು. ಅಮಲ್ದಾರರಿಗೆ ಗತ್ಯಂತರವೇ ಉಳಿಯಲಿಲ್ಲ.

ಕೆಲಸದಿಂದ ನಿವೃತ್ತಿಯಾದುದು ಜಯರಾಯರಿಗೆ ಸೆರೆಮನೆಯಿಂದ ಬಿಡುಗಡೆಯಾದಂತಾಗಿತ್ತು. ನೂತನವಾಗಿ ದೊರೆತ ಸ್ವಾತಂತ್ರ್ಯಕ್ಕೆ ಹೊಂದಿಕೊಳ್ಳುವುದು ಅವರಿಗೆ ಸ್ವಲ್ಪ ಕಷ್ಟವಾಗಿಯೂ ಕಂಡು ಬಂದಿತು. ಪ್ರತಿನಿತ್ಯ ಎಂಟುಗಂಟೆಗಳಿಗೆ ಕಡಿಮೆಯಿಲ್ಲದೆ ಕಛೇರಿಯಲ್ಲಿ ಕಳೆಯುತ್ತಿದ್ದವರಿಗೆ ಹೆಗಲಮೇಲೆ ಎಂಟು ಗಂಟೆಗಳು ಬಂದು ಕುಳಿತಹಾಗಾಯಿತು.

ಜಯರಾಯರ ಪರಿಸ್ಥಿತಿಯನ್ನರಿತ ಅಚ್ಚುತಪ್ಪನವರು, ರಾಮಲಿಂಗಯ್ಯನವರನ್ನು 'ಮಹಾಭಾರತ' ಓದುವುದಕ್ಕೆ ಹಚ್ಚಿ ಜಾಣ್ಮೆಯಿಂದ ಸಮಸ್ಯೆ ಬಗೆಹರಿಸಿದರು. ಬೆಳಿಗ್ಗೆ ಆಂಜನೇಯಸ್ವಾಮಿ ಸೇವೆ ಮುಗಿಸಿಕೊಂಡು ಬಂದು ಊಟದ ವೇಳೆಯವರೆಗೆ ಗೆಳೆಯರು ಭಾರತಶ್ರವಣಕ್ಕೆ ಕೂಡುತ್ತಿದ್ದರು. ಮಧ್ಯಾಹ್ನ ಊಟ, ವಿಶ್ರಾಂತಿ ಮುಗಿದ ಮೇಲೆ ರಾತ್ರಿಯವರೆಗೂ ಶ್ರವಣ ಸಾಗುತಿತ್ತು.

ಮದುವೆಯಾದ ಮಾರನೆಯ ವರ್ಷವೇ ಮಾಧವ ಹನ್ನೆರಡು ರೂಪಾಯಿ ಪರೀಕ್ಷೆಗೆ ಕಟ್ಟಬೇಕಾಗಿತ್ತು. ಅವನಿಗೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ವಿಷಯದಲ್ಲಿ ಯಾರಿಗೂ ಸಂದೇಹವಿರಲಿಲ್ಲ.

ಮದುವೆ ಮುಗಿದ ಮೇಲೆ ಗಣೇಶಚೌತಿಗೆ, ದೀಪಾವಳಿ ಹಬ್ಬಕ್ಕೆ ಮಾಧವ ಮಾವನಮನೆಗೆ ಹೋಗಿ ಬಂದಿದ್ದ. ಮದುವೆಯಲ್ಲಂತೂ ಹೆಂಡತಿಯ ಮುಖ ನೋಡುವುದಕ್ಕೆ ಅವಕಾಶವಾಗಿರಲಿಲ್ಲ. ಮೊದಲನೆಯ ಬಾರಿಗೆ ಗಣೇಶಚೌತಿಗೆ ಮಾವನಮನೆಗೆ ಹೋದಾಗ ಹೆಂಡತಿಯ ಮುಖನೋಡಿ ಅವನಿಗೆ ಅತ್ಯಾನಂದವಾಯಿತು. ಹೆಂಡತಿಯ ಜತೆ ಏನು ಮಾತನಾಡಬೇಕೆಂಬುದು ತಿಳಿಯದು. ರುಕ್ಮಿಣಿಯಾದರೊ

ತೀರಾ ಮುಗ್ಧೆ.

ಗಣೇಶಚೌತಿ ಮುಗಿಸಿಕೊಂಡು, ಹೊಸಧೋತ್ರ ಉಟ್ಟುಕೊಂಡ ಮನೆಗೆ ಹಿಂದಿರುಗಿ ಬಂದ ಮೇಲೆ ಮಾಧವನ ಮನಸ್ಸಿಗೆ ತುಂಬ ಬೇಸ ವಾಯಿತು.

'ನಾನೆಂಥ ಪೆಚ್ಚು ಕೆಲಸ ಮಾಡಿಬಿಟ್ಟೆ. ಅವಳನ್ನು ಮಾತ ಆಡಿಸಲಿಲ್ಲವಲ್ಲ?' ಎಂದು ತನ್ನ ಅವಿವೇಕಕ್ಕೆ ಪಶ್ಚಾತ್ತಾಪ ಪಟ್ ಕೊಂಡ.

ದೀಪಾವಳಿಗೆ ಮಾವನ ಮನೆಯವರು ಕರೆಸಿಕೊಳ್ಳುತ್ತಾರೆಂದ ಮಾಧವನಿಗೆ ಗೊತ್ತಿತ್ತು. 'ಆಗಲಾದರೂ ರುಕ್ಮಿಣಿಯನ್ನು ಮಾತನಾಡಿ ಬೇಕು' ಎಂದು ಹಗಲೂರಾತ್ರಿ ಲೆಕ್ಕಹಾಕಿಕೊಂಡ.

ದೀಪಾವಳಿಯೂ ಬಂದಿತು. ಮಾಧವ ಮಾವನ ಮನೆಗ ಹೋದ. ರುಕ್ಮಿಣಿಯ ದರ್ಶನವೂ ಆಯಿತು - ಆದರೆ ಬಾಯಿಂ ಮಾತು ಹೊರಡಲೇ ಇಲ್ಲ. 'ಇದೇನು ಬಂತು ನನಗೆ ಮಂಕು' ಎಂದ ತನ್ನನ್ನೇ ಹಳಿದುಕೊಂಡ. ಮಾರನೆಯ ದಿನ ಅಳಿಯ ಮಗಳು ಸ್ವತಂತ್ ವಾಗಿರಲೆಂದು, ರಂಗಮ್ಮನವರು ರಾಮುವನ್ನು ಜತೆಯಲ್ಲಿ ಕರೆದ ಕೊಂಡು ಹೋಗಲು ನಿಶ್ಚಯಿಸಿದ್ದರು. ರುಕ್ಮಿಣಿಯೇ ಕಾಫಿಮಾ ತಂದುಕೊಡಬೇಕಾಯಿತು. ಅಳಿಯನಿಗೆ ಕೇಳಿಸಲಿ ಎಂದು ರಂಗಮ ನವರು ಹೋಗುವಾಗ ಮಗಳಿಗೆ

"ನಾನು ಬರುವುದು ಸ್ವಲ್ಪ ಹೊತ್ತಾಗಬಹುದು. ಯಜಮಾನರಿ ನೀನೇ ಕಾಫಿಮಾಡಿಕೊಡು." ಎಂದು ಹೇಳಿ ಹೋಗಿದ್ದರು.

ರುಕ್ಮಿಣಿ ಕಾಫಿತಂದು ರೂಮಿನ ಮೇಜಿನ ಮೇಲಿಟ್ಟು ಹೊರಕ ಹಾರುವುದರಲ್ಲಿದ್ದಳು. ಮಾಧವ ಮೆಲ್ಲನೆ

"ಅತ್ತೆಮ್ಮನವರು ಎಲ್ಲಿಗೆ ಹೋಗಿದ್ದಾರೆ?" ಎಂದು ಕೇಳಿದ.

ರುಕ್ಮಿಣಿಯ ಮುಖ ಕೆಂಪೇರಿತು. ಹಣೆಯ ಮೇಲೆ ಸಣ ಬೆವರನಿ ಸಾಲುಗಟ್ಟಿತು.

"ಕಾಫಿ ನೀನೇ ಮಾಡಿದೆಯಾ?"

ರುಕ್ಮಿಣಿ ಉತ್ತರ ಕೊಡಲಿಲ್ಲ.

ಮಾಧವ ಕಾಫಿಯನ್ನೊಮ್ಮೆ ಸವಿದು

"ಚೆನ್ನಾಗಿ ಮಾಡಿದ್ದೀ. ಅಡಿಗೆಯನ್ನೂ ಚೆನ್ನಾಗಿ ಮಾಡುತ್ತೀ ...ತೆ !"

'ನಿಮಗೆ ಯಾರು ಹೇಳಿದರು' ಎಂದು ಕೇಳಲು ರುಕ್ಮಿಣಿಯ ...ಸ್ಸು ತವಕಪಟ್ಟಿತು. ಗಂಡನ ಬಾಯಿಂದ ಕೇಳಿದ ಒಳ್ಳೆಯ ಮಾತು ...ಣಿಯ ಮನಸ್ಸಿಗೆ ಸಂತೋಷವುಂಟುಮಾಡಿತ್ತು.

"ನಿಮ್ಮ ತಾಯಿಯವರನ್ನು ನೋಡಿದರೆ ದೇವರನ್ನು ನೋಡಿದ ...ಗಾಗುತ್ತದೆ."

ರುಕ್ಮಿಣಿಯ ಬಾಯಿತಪ್ಪಿ 'ಏಕೋ' ಎಂಬ ಪ್ರಶ್ನೆ ಹೊರಬಿತ್ತು.

"ಏಕೋ ಕಾಣೆ ದೇವರನ್ನು ನೋಡಿದರೆ ಭಕ್ತಿ ಹುಟ್ಟುತ್ತದೆ ...ಲ್ಲ – ಏಕೆ ಹುಟ್ಟುತ್ತದೆ ? "

"ನನಗೇನು ಗೊತ್ತು."

"ದೇವರನ್ನು ನೋಡಿದರೆ ನಿನಗೆ ಭಕ್ತಿ ಹುಟ್ಟುವುದಿಲ್ಲವೆ ? "

"ಹುಟ್ಟುತ್ತದೆ. ಏಕೆ ಎಂಬುದು ಗೊತ್ತಿಲ್ಲ."

"ಮದುವೆಯಾದ ಮೇಲೆ ನಾವು ಮಾತನಾಡುತ್ತಿರುವುದು ಇದೇ ...ದಲು"

ರುಕ್ಮಿಣಿ ನಾಚಿ ತಲೆತಗ್ಗಿಸಿದಳು.

"ನಾವು ಮಾತನಾಡಲಿ ಎಂದೇ ನಿಮ್ಮ ತಾಯಿ ಹೊರಗೆ ...ೇದುದು."

ರುಕ್ಮಿಣಿಗೆ ಮತ್ತಷ್ಟು ನಾಚಿಕೆಯಾಯಿತು.

ಮುಂದೆ ಮಾತು ಹೇಗೆ ಬೆಳೆಸಬೇಕೆಂಬುದು ಮಾಧವನಿಗೆ ಸಮಸ್ಯೆ ...ಾಯಿತು. ಮೇಜಿನ ಮೇಲಿದ್ದ ಕಂಚಿನ ಕೃಷ್ಣನನ್ನು ಕೈಗೆತ್ತಿ ...ಂಡು ನೋಡುತ್ತಾ,

"ವಿಗ್ರಹ ಎಷ್ಟು ಚೆನ್ನಾಗಿದೆ. ನಿಮ್ಮ ತಂದೆ ತಂದು ಕೊಟ್ಟರೇ ?"

"ಇಲ್ಲ, ಆಚಾರ್ರು ತೀರ್ಥಯಾತ್ರೆ ಹೋಗಿದ್ದರು. ಬರುವಾಗ

ತಂದು ಕೊಟ್ಟರು."

"ಕೃಷ್ಣನನ್ನು ಕಂಡರೆ ನಿನಗೆ ತುಂಬ ಪ್ರೀತಿಯೇ ?"

"ಕೃಷ್ಣನನ್ನು ಕಂಡರೆ ಯಾರಿಗೆ ಪ್ರೀತಿಯಿಲ್ಲ ?"

"ರಾಮಾಯಣ, ಭಾರತ, ಭಾಗವತ ಎಲ್ಲಾ ನಿನಗೆ ಪಾ
ವಾಗಿದೆಯಂತೆ !"

"ಯಾರು ಹೇಳಿದರು."

"ನಮ್ಮ ಮನೆಯಲ್ಲಿ ದಿನವೂ ನಿನ್ನದೇ ಮಾತು – ಸೊಸೆಯನ
ಬೇಗ ಕರೆಸಿಬಿಡಿ ಎಂದು ಅಮ್ಮ ವರಾತ ಹಚ್ಚಿದ್ದಾಳೆ....ನೀ
ಬೇಗ ಬರಬೇಕಾಗುತ್ತದೆ."

ರುಕ್ಮಿಣಿಯ ಮುಖ ಗಂಭೀರವಾಯಿತು.

"ತೌರುಮನೆ. ಬಿಡಬೇಕೂಂತ ಮನಸ್ಸಿಗೆ ದುಃಖವಾಗು
ದೆಯೇ ?"

"ಆಗುತ್ತದೆ. ಆದರೆ........"

"ಏನು ಆದರೆ....ಹೇಳು, ಸಂಕೋಚಪಟ್ಟುಕೊಳ್ಳಬೇಡ."

"ನೀವು ನಗುತ್ತೀರೇನೋ ?"

"ಇಲ್ಲ ಹೇಳು ರುಕ್ಕು."

"ಪತಿಸೇವೆ ಮಾಡದೆ ಸ್ತ್ರೀಜನ್ಮ ಸಫಲವಾಗುವುದಿಲ್ಲ."

"ಹಾಗೆ ಯಾರು ಹೇಳಿದರು. ತಾಯಿ ಹೇಳಿದರೇ ?"

"ತಾಯಿ ಹೇಳಿದ್ದಾರೆ – ನನ್ನ ಮನಸ್ಸಿಗೂ ಹಾಗೇ ತೋರ
ತ್ತದೆ."

"ರುಕ್ಕು, ನಾನು ತುಂಬ ಬಡವ. ನನ್ನ ತಂದೆಯವರೂ ಬಡವರು
ನೀನು ರಾಜಕುಮಾರಿಯ ಹಾಗೆ ಬೆಳೆದವಳು........"

"ಈಗ ನಾವೂ ಬಡವರೇ !"

"ನಿಮ್ಮ ತಂದೆ ದೊರೆ ಇದ್ದಹಾಗೆ ಇದ್ದವರು. ನಿಮ್ಮನ್ನೆಲ್ಲಾ
ಚಿನ್ನದ ತೊಟ್ಟಲಿನಲ್ಲಿಟ್ಟು ಸಾಕಿದ್ದಾರೆ."

"ಅಪ್ಪ ಒಂದು ಮಾತು ಹೇಳುತ್ತಿದ್ದರು – ಹೇಳಲೇ ?"

"ಖಂಡಿತ ಹೇಳು."

"ಬಡತನ, ಸಿರಿತನ ಶಾಶ್ವತವಲ್ಲ - ಮನುಷ್ಯನ ಗುಣಕ್ಕೆ ಬೆಲೆ ಡಬೇಕಲ್ಲದೆ ಅವನ ಸಂಪತ್ತಿಗಲ್ಲ. ಗುಹ, ವಿದುರ ಬಡವರು; ವಣ, ದುರ್ಯೋಧನ ಚಕ್ರವರ್ತಿಗಳು—ಇವರಲ್ಲಿ ದೊಡ್ಡವರು ಾರು?"

"ನಿನ್ನ ಪುಣ್ಯದಿಂದ ನಮ್ಮ ಮನೆ ಬಂಗಾರವಾಗತ್ತೇಂತ ಅಮ್ಮ ಳುತ್ತಿರುತ್ತಾಳೆ."

"ಅವರೆಷ್ಟು ಒಳ್ಳೆಯವರು! ಅವರ ಮೇಲೆ ಮುತ್ತೈದೆಯರು ುತ್ತಾರಂತೆ!"

"ಹೌದು."

"ಮಹಾಪತಿವ್ರತೆಯರ ಮೇಲೆ ಮಾತ್ರ ಮುತ್ತೈದೆಯರು ಬರುವು ಂದು ಅಮ್ಮ ಹೇಳುತ್ತಿದ್ದಳು."

"ನಿಜ. ಅಮ್ಮ ಒಂದು ದಿನ ಒಬ್ಬರನ್ನು ಕೆಟ್ಟಮಾತು ಆಡಿದ ಳಲ್ಲ. ಅಪ್ಪ ತರುತ್ತಿದ್ದ ಮೂವತ್ತು ನಲವತ್ತು ರೂಪಾಯಿಯಲ್ಲಿಯೇ ಂತೋಷವಾಗಿ ಸಂಸಾರಮಾಡುತ್ತಿದ್ದಳು. ಒಂದು ದಿನ ಒಡವೆ, ಸ್ತ್ರಕ್ಕೆ ಆಸೆಪಟ್ಟವಳಲ್ಲ."

ಅತ್ತೆಯ ಗುಣವರ್ಣನೆ ಕೇಳಿ ರುಕ್ಮಿಣಿಯ ಕಣ್ಣಲ್ಲಿ ಆನಂದ ಾಷ್ಪಗಳುದರಿದವು. ರುಕ್ಮಿಣಿ ಮನಸ್ಸನ್ನು ಕೊರೆಯುತ್ತಿದ್ದ ಪ್ರಶ್ನೆ ೀಳಲು ಧೈರ್ಯಮಾಡಿದಳು.

"ನನಗೆ ಕಾಗದ ಬರೆಯುವುದಿಲ್ಲವೇ?"

"ಬರೆಯುತ್ತೇನೆ – ಏನು ಬರೆಯಲಿ?"

"ನನಗೇನು ಗೊತ್ತು?"

"ನೀನು ಉತ್ತರ ಬರೆಯುವೆಯಾ?"

"ನನಗೆ ಚೆನ್ನಾಗಿ ಬರೆಯುವುದಕ್ಕೆ ಬರುವುದಿಲ್ಲ. ತಪ್ಪುಗಳಾ ುತ್ತವೆ. ನೀವು ನಗುತ್ತೀರಿ."

"ಚಿಂತೆಯಿಲ್ಲ. ನಿನಗೆ ಬಂದಂತೆ ಬರಿ."

"ಹಾಗೇ ಆಗಲಿ."

ಹೊರಬಾಗಿಲಿನಲ್ಲಿ ರಂಗಮ್ಮನವರು ಮಾತನಾಡಿದುದು ಕೇಳಿಸಿ

"ಅಮ್ಮಾ ಬಂದಳು"

ಎಂದು ರುಕ್ಮಿಣಿ ಮಿಂಚಿನಂತೆ ಮಾಧವನ ಪಾದಕ್ಕೆ ನಮಸ್ಕ
ಹೊರಗೆ ಹೋದಳು. ಮಾಧವ ಚಕಿತನಾಗಿ ಕುಳಿತುಬಿಟ್ಟ.

೫

ಚಿಕ್ಕರಾಯನಪುರ 'ಹನ್ನೆರಡು ರೂಪಾಯಿ ಪರೀಕ್ಷೆ'ಯ ಸೆಂಟರ್ entre) ಆಗಿರಲಿಲ್ಲ. ಪರೀಕ್ಷೆಗೆ ಬೆಂಗಳೂರಿಗೇ ಹೋಗಬೇಕಾ ತ್ತು. ಜಯರಾಯರು ಮಗನನ್ನು ಲಾಯರ್ ಶಾಮರಾಯರ ನೆಗೆ ಕಳುಹಿಸಿಕೊಟ್ಟರು.

ಮಾಧವ ಪರೀಕ್ಷೆ ಮುಗಿಸಿಕೊಂಡು ಬರುವ ವೇಳೆಗೆ ಅವನ ಷೇಕ ಪ್ರಸ್ತ ನಿಶ್ಚಯಿಸಲ್ಪಟ್ಟಿತು. ಜಯರಾಯರು ಸಂಸಾರದೊಂದಿಗೆ ಟ್ಟಸೋಮನ ಹಳ್ಳಿಗೆ ಹೋಗಿ ಮಗನ ಪ್ರಸ್ತದ ಸಮಾರಂಭ ುಗಿಸಿಕೊಂಡು ಊರಿಗೆ ಮರಳಿ ಬಂದರು.

ಸೊಸೆ ಮನೆಗೆ ಬಂದುದು ಗೋದೂಬಾಯಿಯವರಿಗೆ ನಾಲ್ಕು ುಜದಂತಾಗಿತ್ತು. ಮಗನನ್ನು ಕಂಡರಂತೂ ತಾಯಿಗೆ ಪಂಚ ್ರಾಣ. ಅದೇ ಪ್ರೀತಿ ಸೊಸೆಯ ಕಡೆಗೂ ಪ್ರವಹಿಸಿತು.

ಮಗಳು ಗಂಡನ ಮನೆಗೆ ಹೋದ ಮೇಲೆ ರಂಗಮ್ಮನವರಿಗೆ ುಟ್ಟಸೋಮನ ಹಳ್ಳಿ ನೀರಸವಾಯಿತು. ರಾಮು ವಿದ್ಯಾಭ್ಯಾಸ ುಂದುವರಿಸುವುದಕ್ಕೆ ಹಳ್ಳಿಯಲ್ಲಿ ಅನುಕೂಲವಿರಲಿಲ್ಲ. ಮಗನ ಲುವಾಗಿ ಬೆಂಗಳೂರೋ, ತುಮಕೂರೋ ಸೇರಲು ರಂಗಮ್ಮನವರು ರ್ಧರಿಸಿದರು.

ರಂಗಮ್ಮನವರು ಮತ್ತೆ ಲಕ್ಷ್ಮಣರಾಯರ ಸಹಾಯ ಕೋರ

ಬೇಕಾಯಿತು. ಉಳಿದಿದ್ದ ಜಮೀನುಗಳನ್ನು ಗುತ್ತಿಗೆಗೆ ಕೊಟ
ರಂಗಮ್ಮನವರು ವಾಸವಾಗಿದ್ದ ಮನೆಯನ್ನು ಪೋಸ್ಟ್ ಆಫೀಸಿಗೆ ಬ
ಗೆಗೆ ಕೊಟ್ಟು, ಲಕ್ಷ್ಮಣರಾಯರು ಅವರಿಗೆ ತುಮಕೂರಿನಲ್ಲಿ ಒ
ಮನೆ ಬಾಡಿಗೆಗೆ ಗೊತ್ತು ಮಾಡಿ ಕೊಟ್ಟರು.

ಹೊಸ ಊರು – ಹೊಸ ಮನೆ – ಹೊಸ ವಾತಾವರಣ
ಹೊಂದಿಕೊಳ್ಳಲು ರಂಗಮ್ಮನವರಿಗೆ ತುಂಬ ಕಷ್ಟವಾಯಿತು.
ಮನೆಯು ಹಾಗಿದ್ದ ಮನೆ ಬಿಟ್ಟು, ಈ ಮೂರು ರೂಮಿನ 'ಗುಹೆ'ಯ
ವಾಸಮಾಡುವುದು ಹೇಗೆ ಎಂಬ ಸಮಸ್ಯೆ ತಲೆದೋರಿತು. ಆದರೆ ಲಕ್ಷ
ರಾಯರು ಮಾಡಿದ್ದ ವ್ಯವಸ್ಥೆ ಅನುಕೂಲವಾಗಿದ್ದುದರಿಂದ ಪರಿಸ್ಥಿ
ಕಾಲಕ್ರಮೇಣ ಹೊಂದಿಕೊಳ್ಳಲಾರಂಭಿಸಿದರು. ಪುಟ್ಟಸೋಮ
ಹಳ್ಳಿ ಮನೆಗೆ ಇಪ್ಪತ್ತೈದು ರೂಪಾಯಿ ಬಾಡಿಗೆ ಬರುತ್ತಿತ್ತ
ತುಮಕೂರು ಮನೆಯ ಬಾಡಿಗೆಯಾದರೂ ಹತ್ತೇ ರೂಪಾಯ
ಉಳಿದ್ದ ಹದಿನೈದು ರೂಪಾಯಿ, ಗುತ್ತಿಗೆ ಹಣ ಸಂಸಾರಕ್ಕೆ ಸಾ
ತ್ತಿತ್ತು. ಮನೆಗಾಗುವಷ್ಟು ಭತ್ತ ರೈತರು ತಂದು ಕೊಡುತ್ತಿದ್ದ

ರಂಗಮ್ಮನವರಿಗೆ ಒಂದೇ ಕೊರಗು. ಅವರ ಕೈಪೂರಾ ಕ
ಹಾಕಿದಂತಾಗಿತ್ತು. ಯಾರಾದರೂ 'ದೇಹಿ' ಎಂದು ಬಂದರೆ ನಾಲ
ಕಾಸು ಕೊಡುವುದಕ್ಕೆ ಹಿಂದೆ ಮುಂದೆ ನೋಡಬೇಕಾಗಿತ್ತು.

ತುಮಕೂರಿಗೆ ಹೋಗಿ ಸಂಸಾರ ಹೂಡಿದ ಮೇಲೆ ಅಳಿಯ
ಮಗಳನ್ನು ನಾಲ್ಕು ದಿವಸ ಕರೆಸಿಕೊಳ್ಳಬೇಕೆಂದು ರಂಗಮ್ಮನ
ಮನಸ್ಸಿನಲ್ಲಿ ಪ್ರಬಲ ಆಕಾಂಕ್ಷೆಮೂಡಿತು. ರಾಮು ಕೈಯಲ್ಲಿ ಬೀಗ
ಕಾಗದ ಬರೆಸಿ, ತಾವೇ ಬೀಗಿತ್ತಿಗೆ ಕಾಗದ ಬರೆದರು.

ರಾಮು ಕಾಗದ ನೋಡಿದ ಕೂಡಲೆ ಜಯರಾಯರು ಹೆಂಡತಿ

"ಅಳಿಯ, ಮಗಳನ್ನು ಕಳಿಸಿಕೊಡಿ ಎಂದು ಬೀಗಿತ್ತಿ ಬರ
ದ್ದಾರೆ" ಎಂದರು.

"ನನಗೂ ಬರೆದಿದ್ದಾರೆ. ಏನು ಮಾಡುತ್ತೀರಿ ?"

"ನೀನು ಹೇಗೆ ಹೇಳಿದರೆ ಹಾಗೆ."

"ನಾಲ್ಕು ದಿವಸ ಹೋಗಿ ಬರಲಿ."

"ಮಾಧೂ ಪರೀಕ್ಷೆ ಫಲಿತಾಂಶ ಬರುವ ದಿನವಾಯಿತು. ಅವನಿಗೆ ತೇರ್ಗಡೆಯಾದರೆ ಬೆಂಗಳೂರಿಗೆ ಕಳಿಸಿಕೊಡಬೇಕು."

"ದುಡ್ಡು ಎಲ್ಲಿಂದ ತರುತ್ತೀರಿ."

"ದುಡ್ಡುಕೊಟ್ಟು ಕಾಲೇಜಿನಲ್ಲಿ ಅವನನ್ನು ಓದಿಸುವ ಸ್ಥಿತಿಯಲ್ಲಿ ನಾನಿದ್ದೇನೆಯೇ ?"

"ಮುಂದೆ ದಾರಿ."

"ಒಂದು ಯೋಚನೆ ಹೊಳೆದಿದೆ. ನಿನ್ನ ಕೇಳಿ ನಿರ್ಧಾರ ಮಾಡೋಣ-ಎಂದು ಸುಮನಿದ್ದೆ."

"ಏನು ಹೇಳಿ."

"ಶಾಮರಾಯರು ನಮ್ಮ ವಿಷಯದಲ್ಲಿ ತುಂಬ ವಿಶ್ವಾಸ ವಿಟ್ಟು ಕೊಂಡಿದ್ದಾರೆ. ಅವರನ್ನು ಆಶ್ರಯಿಸಿದರೆ ಯಾವದಾದರೂ ಹಾಸ್ಟಲಿನಲ್ಲಿ ಸ್ಥಳಮಾಡಿಕೊಡುತ್ತಾರೆ.

"ಎಲ್ಲದಕ್ಕೂ ಶಾಮರಾಯರನ್ನು ಹಿಡಿಸಿದರೆ ಚೆನ್ನಾಗಿರುತ್ತದೆ ಯೇಂದ್ರೆ."

"ಕೈಯೆತ್ತಿ ಕೊಡುವವರ ಬಳಿಗೆ ತಾನೇ ಎಲ್ಲರೂ ಜೋಳಿಗೆ ತೆಗೆದುಕೊಂಡು ಹೋಗುವುದು."

ಜಯರಾಯರ ಹೃದಯಕ್ಕೆ ಉತ್ಕಟವೇದನೆಯಾಯಿತು. ಅವರ ಮುಖ ಕಳೆಗುಂದಿದುದನ್ನು ಕಂಡು ಗೋದೂಬಾಯಿಯವರು

"ಇನ್ನೇನು ಯೋಚಿಸುತ್ತಿದ್ದೀರೀಂದ್ರೆ ? " ಎಂದರು

"ನನ್ನ ಮಗನನ್ನು ಓದಿಸುವಷ್ಟು ಯೋಗ್ಯತೆ ನನಗಿಲ್ಲವಾಯಿತಲ್ಲ ಎಂದು ಯೋಚಿಸುತ್ತಿದ್ದೇನೆ. ಸಂಪಾದನೆ ಮಾಡುವ ಕಾಲದಲ್ಲಿ ಧರ್ಮಕ್ಕೆ ಕಟ್ಟು ಬಿದ್ದು ಬಡತನ ತಬ್ಬಿಕೊಂಡೆ. ಈಗ ವಯಸ್ಸಾಯಿತು ಸಂಪಾದನೆ ಮಾಡಬೇಕೆಂದರೂ ಸಾಧ್ಯವಿಲ್ಲ."

"ಬೆಳಿಗ್ಗೆಯಿಂದ ಸಂಜೆಯವರೆಗೂ ಪೂಜೆ ಮಾಡಿದುದಕ್ಕೆ ಇದೇ ಯೇನು ಸಾರ್ಥಕ ? ಭಗವತ್ಸಂಕಲ್ಪ ಮೀರುವುದು ನಮ್ಮ ಕೈಯಲ್ಲಿ

ದೆಯೇ? ಮಾಧೂ ವಿದ್ಯಾಭ್ಯಾಸ ಶಾಮರಾಯರ ಸಹಾಯ
ದಿಂದಾಗಬೇಕೆಂದು ಶ್ರೀ ಹರಿಯ ಇಚ್ಛೆಯಿದ್ದರೆ ಹಾಗೇ ಆಗಲಿ. ಅದಕ್ಕೆ
ನೀವೇಕೆ ಪಶ್ಚಾತ್ತಾಪ ಪಡಬೇಕು. ನೀವು ಹಣವಿಡಲಿಲ್ಲ. ಆಸ್ತಿ
ಮಾಡಲಿಲ್ಲ ಎಂದು ನಾನು ಎಂದಾದರೂ ಆಕ್ಷೇಪಣೆಮಾಡಿದೆನೇ?"

"ಇಲ್ಲ ಗೋದು – ಯಾವ ಬಾಯಲ್ಲಿ ಆ ಮಾತು ಹೇಳಲಿ? –
ಒಂದು ದಿನ ಒಂದು ಒಳ್ಳೆಯ ಸೀರೆ ನಾನು ತಂದು ಕೊಡಲಿಲ್ಲ –
ಒಂದು ಒಡವೆ ಮಾಡಿಸಿಕೊಡಲಿಲ್ಲ."

"ಅಯ್ಯೋ – ಯಾಕೇಂದ್ರೆ ನಿಮಗೆ ಮಂಕು ಕವಿದುಕೊಂಡಿತು
ತೃಪ್ತಿಗಿಂತ ಸೀರೆ ಒಡವೇನೇ? – ಲಕ್ಷಾಧೀಶ್ವರರ ಮನೆಯ ಹೆಂಗಸ
ರಿಗೆ ನನಗಿರುವ ತೃಪ್ತಿ, ಸಂತೋಷದಲ್ಲಿ ಒಂದು ಅಂಶದಷ್ಟಾದರೂ
ತೃಪ್ತಿ ಸಂತೋಷ ಇದೆಯೆಂದುಕೊಂಡಿದ್ದೀರಾ? ನೀವೂ ಏಕೆ ಅಜ್ಞಾನಿ
ಗಳಂತೆ ಮಾತನಾಡುತ್ತಿರುವಿರಿ?"

ಜಯರಾಯರನ್ನು ಯಾರೋ ಬಲವಾಗಿ ಥಳಿಸಿದಂತಾಯಿತು
ಎಚ್ಚರಗೊಂಡು 'ಮಾರುತಿ – ಮಾರುತಿ – ಮಾರುತಿ' ಎಂದು ಜಪಿಸಿ

"ನೀನು ಹೇಳಿದ್ದು ನ್ಯಾಯ ಗೋದು – ಸಕಾಲದಲ್ಲಿ ನನಗೆ
ವಿವೇಕ ಹೇಳಿದೆ."

"ಬೆಂಗಳೂರಿಗೆ ಹೋಗಿ ಬನ್ನಿ. ಎಲ್ಲಾ ನಿಮ್ಮ ಮನಸ್ಸಿನಂತೆಯೇ
ಆಗುತ್ತದೆ."

ಜಯರಾಯರು ಮಾರನೆಯ ದಿವಸವೇ ಮಗನನ್ನೂ ಸೊಸೆ
ಯನ್ನೂ ತುಮಕೂರಿಗೆ ಕಳುಹಿಸಿಕೊಟ್ಟು ತಾವು ಬೆಂಗಳೂರಿಗೆ ಹೊರ
ಟರು.

ಮಗಳು, ಅಳಿಯ ಬಂದುದನ್ನು ನೋಡಿ ರಂಗಮ್ಮನವರ ಹೃದಯ
ಸಂತೋಷದಿಂದ ಬಿರಿಯಿತು. ರುಕ್ಮಿಣಿಗೆ ತನ್ನ ಅತ್ತೆಯನ್ನು ಎಷ್ಟು
ವರ್ಣಿಸಿದರೂ ತೃಪ್ತಿಯಿಲ್ಲ.

"ನಿನ್ನ ಕಾಗದ ನೋಡಿದ ಕೂಡಲೆ ಅತ್ತೆಮ್ಮನವರು ನನ್ನನ್ನು
ಕರೆದು – ರುಕ್ಕೂ, ನಿಮ್ಮಮ್ಮ ನೋಡಬೇಕೂಂತ ಬಯಸುತ್ತಾರೆ.

ುನುಕೂರಿಗೆ ಹೋಗಿ ಬರುತ್ತೀಯಾ? ಎಂದು ಕೇಳಿದರು. ಏನು ೇಳಬೇಕೊ ತೋರಲಿಲ್ಲ. ಸುಮ್ಮನಿದ್ದೆ. ಹತ್ತಿರ ಕರೆದು ಪಕ್ಕದಲ್ಲಿ ೂಡಿಸಿಕೊಂಡು, ನನ್ನ ತಲೆ ಸವರಿ, ಗಲ್ಲ ಹಿಡಿದು – ಹೋಗಿ ಬಾ ಗೂ ಅದೂ ತಾಯಿಯ ಕರಳು, ಎಂದರು."

"ಅವರು ನಿನ್ನತ್ತೆಯಲ್ಲ ರುಕ್ಕೂ – ಯಾವುದೋ ಜನ್ಮದಲ್ಲಿ ನ್ನ ತಾಯಿಯಾಗಿದ್ದರೆಂದು ಕಾಣುತ್ತದೆ. ಪುಣ್ಯವಂತರು–ದೇವರು ವರನ್ನು ಚೆನ್ನಾಗಿಟ್ಟರಲಿ."

"ಅವರನ್ನು 'ಅತ್ತೆ' ಎಂದು ಕೂಗುವುದಕ್ಕೆ ಮನಸ್ಸೇ ಬರ ್ಲಮ್ಮ."

"ಏನೆಂದು ಕೂಗುತ್ತೀ?"

"ಒಂದು ದಿನ ನಾನೂ ಅವರೂ ತುಳಸೀಕಟ್ಟೆ ಪ್ರದಕ್ಷಿಣೆ ಮಾಡು ್ತಿದ್ದೆವು ಅವರಿಗೆ ಮೈ ಮರೆತು ಹೋಗಿತ್ತು. ನಾನು ಕರ್ಪೂರ ಹಚ್ಚಿ ಆರತಿ ತಟ್ಟೆ ಕೈಯಲ್ಲಿ ಹಿಡಿದುಕೊಂಡು! ಅಮ್ಮ...ಎಂದು ಕೂಗಿದೆ. ಅವರು ನನ್ನ ಕಡೆ ತಿರುಗಿ ನೋಡಿ ಮಂದಹಾಸ ಬೀರಿ ದರು. ಇಬ್ಬರೂ ಒಳಕ್ಕೆ ಬರುವಾಗ ನಾನು ನಿಮ್ಮನ್ನು 'ಅಮ್ಮ' ಂತಲೇ ಕರೆಯುತ್ತೇನೆ – ಹಾಗೆ ಕರೆದರೆ ನಿಮಗೆ ಅಸಮಾಧಾನವಾ ಗುತ್ತದೆಯೇ? ಎಂದು ಕೇಳಿದೆ. ಅವರು ನನ್ನ ಮುಂದಲೆ 'ನೇವರಿಸಿ' ಹಾಗೇ ಕರಿ ನನ್ನಪ್ಪ – ನಿನ್ನ ತಾಯಿ ಆಗುವ ಭಾಗ್ಯ ಸಾಮಾನ್ಯವಾ ದದ್ದೇ' ಎಂದರು."

ರಂಗಮ್ಮನವರ ಕಣ್ಣುಗಳು ತೇವಗೊಂಡವು. ಹೃದಯದ ಕಟ್ಟೆಯೊಡೆಯುವಂತೆ ಆನಂದ ತುಂಬಿತು.

"ಹೆಣ್ಣು ಹೆತ್ತ ಹೊಟ್ಟೇಗೆ ನಿಮ್ಮತ್ತೆ ಹಾಲೆರೆದಿದ್ದಾರೆ ರುಕ್ಕೂ. ನನ್ನ ಮಗಳಿಗೆ ಒಳ್ಳೆಯ ಅತ್ತೆ ಮಾವಂದಿರು ಗಂಡ ಸಿಕ್ಕಲಿ ಎಂದು ಪ್ರಾರ್ಥಿಸುತ್ತಿದ್ದೆ. ದೇವರು ನನ್ನ ಕೋರಿಕೆ ಈಡೇರಿಸಿದ."

ಅಳಿಯನಿಗೆ ಎಷ್ಟು ಉಪಚಾರಮಾಡಿದರೂ ರಂಗಮ್ಮನವರ ಮನಸ್ಸಿಗೆ ಸಮಾಧಾನವಿಲ್ಲ.

ಮಾರನೆಯ ದಿನ ಬೆಳಿಗ್ಗೆ ನಾಲ್ಕು ಗಂಟೆಗೇ ರಂಗಮ್ಮ ಚಟುವಟಿಕೆ ಆರಂಭವಾಯಿತು. ಮಾಧವ ಏಳುವ ಹೊತ್ತಿಗೆ ಯಲ್ಲಿ ನೀರು ಕುತಕುತ ಮರಳುತ್ತಿತ್ತು. ಕಾಫಿ ತಿಂಡಿ ಆದ ವೆ ರುಕ್ಮಿಣಿ ಕೈಯಲ್ಲಿ ಎಣ್ಣೆಯ ಬಟ್ಟಲು ಹಿಡಿದು ಬಂದಳು. ಮಾಧವ

"ಏನಿದು ?" ಎಂದು ಕೇಳಿದ.

"ಏನು ನೋಡಿ – ಎಣ್ಣೆ."

"ಏಕೆ ?"

"ಷರಟು ತೆಗೆದು ಕುಳಿತುಕೊಳ್ಳಿ – ಗೊತ್ತಾಗುತ್ತೆ."

"ಎಣ್ಣೆ ನೀರು ಹಾಕಿ ಕೊಳ್ಳಬೇಕೇ."

"ಹೂ !"

"ಇವತ್ತು ನನ್ನ ಹುಟ್ಟಿದ ಹಬ್ಬವಲ್ಲವಲ್ಲಾ ?"

"ನನ್ನ ಹುಟ್ಟಿದ ಹಬ್ಬ."

"ನಿನ್ನ ಹುಟ್ಟಿದ ಹಬ್ಬವಾದರೆ ನೀನು ಎಣ್ಣೆ ನೀರು ಕೊಳ್ಳಬೇಕು."

"ಹಾಗಲ್ಲ – ನನ್ನ ಹುಟ್ಟಿದ ಹಬ್ಬದ ದಿವಸ ನೀವು ಹಾಕಿಕೊಳ್ಳಬೇಕು. ನಿಮ್ಮ ಹುಟ್ಟಿದ ಹಬ್ಬದ ದಿವಸ ನ ಹಾಕಿಕೊಳ್ಳಬೇಕು."

"ಇದು ಒಳ್ಳೆಯ ತಿರುಗುಮುರುಗು ವ್ಯಾಪಾರವಾಯಿತಲ್ಲ."

"ಷರ್ಟು ತೆಗೆಯುತ್ತೀರೋ ಹಾಗೇ ಎಣ್ಣೆ ಇಡಲೋ ? ಷ ಮೇಲೆ ಬಿದ್ದರೆ ನನ್ನ ಮೇಲೆ ಮಾತಿಲ್ಲ."

"ಒಳ್ಳೆ ಮೊಂಡು ಕಣೇ ನೀನು"

ಎಂದು ಮಾಧವ ಷರ್ಟು ಬಿಚ್ಚಿ ಕುಳಿತ. ರುಕ್ಮಿಣಿ ತಲೆ ಮೇಲೆ ಎಣ್ಣೆಯಿಟ್ಟು 'ಚಟಪಟ' ತಟ್ಟಿದಳು.

"ನನ್ನ ತಲೆಯ ಮೇಲೆ ಮುಟ್ಟುವುದಕ್ಕೆ ಒಳ್ಳೆ ಅವಕಾಶ ಸಿಕ್ಕಿ ಚೆನ್ನಾಗಿ ಉಪಯೋಗಿಸಿಕೋ" ಎಂದ.

ರುಕ್ಮಿಣಿ ಗಹಗಹಿಸಿ ನಕ್ಕಳು.

ಮಾಧೂ ಎಷ್ಟು ಒಲ್ಲೆನೆಂದರೂ ಕೇಳದೆ ರುಕ್ಮಿಣಿಯೇ ಅವನಿಗ
ೀರೆರೆದಳು.

ರುಕ್ಮಿಣಿಗೆ ರಂಗಮ್ಮನವರು ನೀರೆರೆದರು. ಮಧ್ಯಾಹ್ನ ಸೊಗ
ಾದ ಔತಣವೂ ಆಯಿತು.

ಮಾರನೆಯ ದಿನ ಮಾಧೂ ಹೆಸರಿಗೆ ಬಂದ ಟೆಲಿಗ್ರಾಂ ನೋಡಿ
ುಕ್ಮಿಣಿಯ ಜಂಘಾ ಬಲವೇ ಉಡುಗಿ ಹೋದಂತಾಯಿತು.

ಮಾಧೂ ಟೆಲಿಗ್ರಾಂ ಒಡೆದು ಓದಿದ – ಅವನ ಪರೀಕ್ಷೆಯಲ್ಲಿ
ೇರ್ಗಡೆಯಾಗಿದೆಯೆಂದು ತಂದೆ ಬೆಂಗಳೂರಿನಿಂದ ತಂತೀ ವರ್ತಮಾನ
ೂಟ್ಟಿದ್ದರು.

ರುಕ್ಮಿಣಿ ಒಳಗೆ ಓಡಿಹೋಗಿ ತಾಯಿಗೆ ಈ ಸಂತೋಷ ಸಮಾ
ಾರ ತಿಳಿಸಿದಳು. ರಂಗಮ್ಮನವರು ದೇವರಿಗೆ ತುಪ್ಪದ ದೀಪ ಹಚ್ಚಿ
ಡ್ಡ ಬಿದ್ದರು – ರುಕ್ಮಿಣಿಯೂ ದೇವರಿಗೆ ತನ್ನ ಕೃತಜ್ಞತೆ, ಭಕ್ತಿ ಅರ್ಪಿ
ದಳು.

ಇನ್ನೊಂದು ದಿನ ಮಾಧೂ ಊಟ ಮುಗಿಸಿಕೊಂಡು ಹೊರಗೆ
ರುವಲ್ಲಿ ಅಂಚೆಯಾಳು ಒಂದು ಮನಿಯಾರ್ಡರ್ ಫಾರ್ಮ್ ಅವನ
ೈಯಲ್ಲಿಟ್ಟ. ಮಾಧೂ ರುಕ್ಮಿಣಿಯನ್ನು ಕರೆದು.

"ನಿಮ್ಮ ತಾಯಿಯವರ ಹೆಸರಿಗೆ ಒಂದು ಮನಿಯಾರ್ಡರ್ ಬಂದಿದೆ.
ಳಕ್ಕೆ ಕೊಡು. ಪುಟ್ಟಸೋಮನ ಹಳ್ಳಿಗೆ ಹೋಗಿ ಇಲ್ಲಿಗೆ ಬಂದಿದೆ."

"ಯಾರು ಕಳಿಸಿದ್ದಾರೆ ನೋಡಿ....ಎಲ್ಲಿಂದ ?"

"ಅನಂತ – ರಂಗೂನ್ – ಅನಂತ ನಿಮ್ಮಣ್ಣ ಅಲ್ಲವೇ ?"

ರುಕ್ಮಿಣಿ ಮಾಧು ಕೈಯಿಂದ ಮನಿಯಾರ್ಡರ್ ಫಾರ್ಮ್ ಕಿತ್ತು
ೊಂಡು ಒಳಕ್ಕೆ ಹೋದಳು.

ಕೈಯಲ್ಲಿ ಫಾರ್ಮ್ ಹಿಡಿದರೂ, ರಂಗಮ್ಮನವರು ತಮ್ಮ ಕಣ್ಣು
ಾವು ನಂಬದಾದರು.

"ಅನಂತ – ಅನಂತ ಕಳಿಸಿದ್ದಾನೆ"ಎಂದು ಕೊಂಡರು.

"ಅಂಚೆಯಾಳು ಕಾಯುತ್ತಿದ್ದಾನಮ್ಮ – ಬೇಗ ರುಜುಮಾಡಿ

ಕೊಡು."

ಅಂಚೆಯಾಳು ಗುರುತು ಹಾಕಿದ್ದ ಕಡೆ ರುಜುಮಾಡಿ ರಂಗಮ್ಮನವರು ಮಗಳ ಕೈಗೆ ಫಾರ್ಮ್ ಇತ್ತರು. ರುಕ್ಮಿಣಿ ಅದನ್ನು ತಂದು ಗಂಡನ ಕೈಗಿತ್ತು, ಅಂಚೆಯಾಳು ಕೊಟ್ಟಿದ್ದ ನಲವತ್ತು ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ತಾಯಿಯ ಕೈಯಲ್ಲಿತ್ತಳು.

"ನೀನೂ ಅಳಿಯಂದಿರೂ ಬಂದ ಹೊತ್ತು ತುಂಬ ಒಳ್ಳೇದು ಕಣೇ ರುಕ್ಕೂ."

"ಅಣ್ಣನಿಗೆ ಈಗಲಾದರೂ ನಮ್ಮೆಲ್ಲರ ಜ್ಞಾಪಕ ಬಂದಿತಲ್ಲ."

"ಕಾಗದವನ್ನೇ ಬರೆದಿಲ್ಲ."

"ಕಾಗದ ನಾಳೆ ಬರಬಹುದು."

ರಂಗಮ್ಮನವರ ಬಾಯಲ್ಲಿ ಹೆಚ್ಚು ಮಾತು ಹೊರಡಲಿಲ್ಲ. ಒಂದೆಡೆ ಕುಳಿತು ಅತ್ತುಬಿಟ್ಟರು. ರುಕ್ಮಿಣಿಯೂ ಕಂಬನಿ ಸುರಿಸಿದಳು.

ಮಾಧವ ರುಕ್ಮಿಣಿ ಹೆಚ್ಚು ದಿನ ತುಮಕೂರಿನಲ್ಲಿ ನಿಲ್ಲುವಂತಿರಲಿಲ್ಲ. ಬೆಂಗಳೂರಿನಲ್ಲಿ ಓದು ಮುಂದುವರಿಸುವ ವಿಷಯ ತಂದೆ ಏನು ಮಾಡಿಕೊಂಡು ಬಂದಿದ್ದಾರೋ ತಿಳಿಯಬೇಕೆಂಬ ಆತುರ ಮಾಧವನ ಮನಸ್ಸಿನಲ್ಲಿ ಮೂಡಿತು.

ರುಕ್ಮಿಣಿ ಹೊರಡುವ ವಿಷಯ ತಿಳಿಸಿದಾಗ ರಂಗಮ್ಮನವರ ಮನಸ್ಸಿಗೆ ಚೇಳು ಕುಟುಕಿದಂತಾಯಿತು.

"ಒಂದು ವಾರ ಕೂಡ ಇರಲಿಲ್ಲವಲ್ಲೇ ರುಕ್ಕೂ."

"ಊರಿಗೆ ಹೋದ ಕೂಡಲೆ ಅವರು ಬೆಂಗಳೂರಿಗೆ ಹೋಗಬೇಕಾಗುತ್ತದೋ ಏನೊ? ಈ ವೇಳೆಗೆ ಮಾವನವರು ಚಿಕ್ಕರಾಯನಪುರಕ್ಕೆ ಬಂದಿರುತ್ತಾರೆ."

"ಹೋಗಿ ಬಾಮ್ಮ – ಅವರು ಮನಸ್ಸಿಗೆ ಬೇಸರಪಟ್ಟುಕೊಳ್ಳಬಾರದು."

"ನೀನು ಯೋಚಿಸಬೇಡಮ್ಮ. ಅವರು ಬೆಂಗಳೂರಿಗೆ ಹೋದ

ರಾತ್ರಿ ರಜಕ್ಕೆ ಊರಿಗೆ ಬರುತ್ತಾರೆ. ಆಗ ಇಬ್ಬರೂ ಬರುತ್ತೇವೆ-"

ತಾಯಿಯ ಹೃದಯದಲ್ಲಿ ಸಾವಿರ ವಿಷಯ ತುಂಬಿತ್ತು. ಮಗಳಿಗೆ ಳಬೇಕೆಂದಿದ್ದುದೆಲ್ಲಾ ಮರೆತು ಹೋಯಿತು. ಅವರ ಸತತ ಬನಿಧಾರೆ, ಸೋತ ನಾಲಗೆಯ ಕರ್ತವ್ಯ ನಿರ್ವಹಿಸಬೇಕಾಯಿತು.

ಶನಿವಾರ ಸಂಜೆಯ ಬಸ್ಸಿನಲ್ಲಿ ಮಾಧವ ರುಕ್ಮಿಣಿ ಚಿಕ್ಕರಾಯನ ಕ್ಕೆ ಪ್ರಯಾಣ ಬೆಳಸಿದರು.

೬

ಬೆಳಿಗ್ಗೆ ಚಿಕ್ಕರಾಯನಪುರ ಬಿಟ್ಟ ಬಸ್ ಒಂಭತ್ತು ಗಂಟೆ
ಬೆಂಗಳೂರು ಸೇರುತ್ತಿತ್ತು. ಬಸ್‌ಸ್ಟ್ಯಾಂಡಿನಲ್ಲಿ ಇಳಿದ ಜಯರಾಯ
ನೇರವಾಗಿ ಚಾಮರಾಜಪೇಟೆ ಮೊದಲನೆ ರಸ್ತೆಯಲ್ಲಿದ್ದ ಶಾಮರಾಯ
ಮನೆಗೆ ಹೋದರು.

ಶಾಮರಾಯರು ತಮ್ಮ ಮನೆಯ ವರಾಂಡದಲ್ಲಿ ಶಥಪ
ತಿರುಗುತ್ತಾ, ಯಾರೋ ಕಕ್ಷಿಗಾರರ ಜತೆ ಮಾತನಾಡುತ್ತಿದ್ದರು
ಜಯರಾಯರು ಬಂದುದನ್ನು ನೋಡಿ ಆದರಪೂರ್ವಕವಾಗಿ ಸ್ವಾಗ
ಬಯಸಿದರು.

"ಇದೇನು ಸ್ವಾಮಿ ಪುರಸತ್ತಾಗಿದ್ದೀರಿ. ಕೋರ್ಟಿಲ್ಲವೇ ?"

"ಇದೆ – ಇವತ್ತು ನಾನು ಹೋಗಬೇಕಾದ ಅಗತ್ಯವಿಲ್ಲ. ಮ
ನೋಡಿಕೊಂಡು ಹೋಗುತ್ತಾನೆ. ಮನೆಯಲ್ಲಿ ಎಲ್ಲರೂ ಆರೋಗ
ವಷ್ಟೆ."

"ಎಲ್ಲರೂ ಆರೋಗ್ಯ."

"ಮಾರುತಿ ಔಪಾಸಕರು ದಯಮಾಡಿಸಿದ್ದೀರಿ. ಇವತ್ತು
ಚೆನ್ನಾಗಿ ದೇವರ ಪೂಜೆಮಾಡಿ ಸ್ವಾಮಿ."

"ಸಂತೋಷ. ನಾನು ಒಂದು ಕೆಲಸದ ಮೇಲೆ ತಮ್ಮಲ್ಲಿ ಬಂ
ದ್ದೇನೆ."

"ಸ್ನಾನ ಪೂಜೆಯಾಗಲಿ. ಊಟಮಾಡೋಣ. ನಿಮ್ಮ ಕೆಲಸ
ೇನು ಹೇಳುವಿರಂತೆ. ಅದು ಏನೇ ಆಗಿರಲಿ, ಮಾಡಿಕೊಡುವ ಜವಾ
ಬ್ದಾರಿ ನನಗಿರಲಿ. ತಾವು ನಿಶ್ಚಿಂತೆಯಾಗಿ ಪೂಜೆಮಾಡಿ – ಒಳಕ್ಕೆ
ಯಮಾಡಿಸಿ, ಇವರನ್ನು ಕಳಿಸಿ ನಾನು ಬರುತ್ತೇನೆ."

ರಾಯರ ಮನೆಯವರು ಜಯರಾಯರಿಗೆ ಸುಪರಿಚಿತರಾಗಿದ್ದರು.
ಯರಾಯರು ಒಳಗೆ ಹೋಗಿ ಶಾಮರಾಯರ ಕುಟುಂಬ ವೆಂಕಮ್ಮ
ವರನ್ನು ಮಾತನಾಡಿಸಿ, ಸ್ನಾನಕ್ಕೆ ಹೋದರು.

ಸ್ನಾನ, ಪೂಜೆ, ಸುಗ್ರಾಸ ಭೋಜನ ತೀರಿದ ಮೇಲೆ ಶಾಮ
ಾಯರು ಜಯರಾಯರಿಗೆ ತಾಂಬೂಲ ಕೊಟ್ಟು ತಾವೂ ತಾಂಬೂಲ
ರ್ಚರ್ವಣ ಮಾಡುತ್ತಾ

"ಈಗ ಹೇಳಿ – ನಿಮ್ಮ ಕೆಲಸವೇನು ?"

"ನನ್ನ ಮಗ ಮಾಧೂ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕಟ್ಟಿದ್ದಾನೆ.
ಪರೀಕ್ಷೆಗೆ ಇಲ್ಲೇ ಬಂದು ತಮ್ಮ ಆಶ್ರಯದಲ್ಲಿಯೇ ಇದ್ದನಲ್ಲ !"

"ಹೌದು ಬಲ್ಲೆ – ಅವನ ಪರೀಕ್ಷೆ ಫಲಿತಾಂಶವೇನಾಯಿತು ?"

"ಇವತ್ತೋ ನಾಳೆಯೋ ಗೊತ್ತಾಗತ್ತೆ."

"ಪಾಸಾಗತ್ತೇ ಬಿಡಿ – ಅದರಲ್ಲಿ ಸಂದೇಹವೇ ಇಲ್ಲ – ಹುಡುಗ
ಒಳ್ಳೆಯ ಚೂಟಿಯಾಗಿದ್ದಾನೆ."

"ಪಾಸಾದರೆ ಮುಂದೇನು ಮಾಡುವುದು ಎನ್ನುವುದೇ ಯೋಚನೆ"

"ಏನು ಮಾಡುವುದು – ಮುಂದಕ್ಕೆ ಓದುವುದು. ಅವನಿಗೆ
ಓದುವುದಕ್ಕೆ ಇಷ್ಟವಿದೆ ತಾನೆ !"

"ಅವನಿಗೇನೋ ಇಷ್ಟವಿದೆ – ನನ್ನ ಪರಿಸ್ಥಿತಿ ತಮಗೆ ಗೊತ್ತೇ
ಇದೆಯಲ್ಲ."

"ನನ್ನ ಮನೆಯಲ್ಲಿಯೇ ಇರಲಿ...."

"ಎಲ್ಲಿಯಾದರೂ ಉಂಟೇ ! ಒಂದು ದಿನವೇ, ಎರಡು ದಿನವೇ
ವರ್ಷಗಟ್ಟಳೆ ತಮಗೆ ತೊಂದರೆ ಕೊಡುವುದು ಯಾವ ನ್ಯಾಯ ?
ಯಾವದಾದರೂ ಹಾಸ್ಟಲ್ ಸೇರಿಸಿದರೆ, ವಿದ್ಯಾದಾನಮಾಡಿದ ಪುಣ್ಯ

ಬರುತ್ತದೆ."

"ಹಾಗೂ ಆಗಬಹುದು. ಚಿನ್ನಸ್ವಾಮಿಶೆಟ್ಟರವರ ಹಾಸ್ಟೆಲಿನಲ್ಲಿ ಸೀಟ್ ಕೊಡಿಸಬಹುದು. ಶೆಟ್ಟರು ನನ್ನ ಕಕ್ಷಿಗಾರರು. ನನ್ನ ಮಾತು ತೆಗೆದು ಹಾಕುವುದಿಲ್ಲ."

"ಅಷ್ಟು ತಾವು ಮಾಡಿದರೆ ತುಂಬ ಉಪಕಾರವಾಗುತ್ತದೆ."

"ಇದು ಉಪಕಾರವಲ್ಲ ಜಯರಾಯರೇ. ನಿಮ್ಮ ಬೀಗರು ನನಗೆ ಮಾಡಿರುವ ಮಹೋಪಕಾರಕ್ಕೆ ನಾನೇನು ಮಾಡಬಲ್ಲೆ! ನಾನಿನ್ನೂ ಹೊಸದಾಗಿ ಪ್ರ್ಯಾಕ್ಟೀಸ್ ಆರಂಭಿಸಿದ್ದೆ. ಊರಿನ ತುಂಬ ಘಟಾನು ಘಟಿಕರಾದ ಹಳೇ ಹುಲಿಗಳು ತುಂಬಿರುವಾಗ ನನ್ನಂಥ ಬಡಪಾಯಿ ಲಾಗ್ರಾಜುಯೇಟನನ್ನು ಕೇಳುವರಾರು? ಯಾವದೋ ಧರ್ಮ ಕರ್ಮ ಸಂಯೋಗದಿಂದ ನಿಮ್ಮ ಬೀಗರು ವೆಂಕಟರಾಯರ ಪರಿಚಯ ವಾಯಿತು. ತಮ್ಮದೊಂದು ಕೇಸು ಕೊಟ್ಟರು ಅಲ್ಲಿಂದ ನನ್ನದೂ ಅವರದೂ ಸ್ನೇಹ ಆರಂಭವಾಯಿತು ನೋಡಿ. ಪುಟ್ಟಸೋಮನ ಹಳ್ಳಿಯ ಕೇಸುಗಳೆಲ್ಲಾ ತಂದು ಕೊಡಲಾರಂಭಿಸಿದರು. ಮೂರು ನಾಲ್ಕು ವರ್ಷಗಳಲ್ಲಿ ನನ್ನ ಪಾಯ ಭದ್ರವಾಯಿತು. ಊರಿನಿಂದ ತಪ್ಪದೆ ನಮಗೆ ತೆಂಗಿನಕಾಯಿ, ಭತ್ತ, ಹುಣಿಸೇಹಣ್ಣು, ಸೀಗೆಕಾಯಿ ಸೌದೆ ಕಳಿಸಿಕೊಡುತ್ತಿದ್ದರು. ಒಂದು ಬಿಡಿ ಕಾಸು ಮುಟ್ಟಿದವರಲ್ಲ. ಒಪ್ಪತ್ತು ಅವರನ್ನು ಊಟಕ್ಕೆಬ್ಬಿಸಬೇಕಾದರೆ ನಮಗೆ ಸಾಕು ಸಾಕಾಗಿ ಹೋಗುತ್ತಿತ್ತು. ಕೊನೆಗೆ ನನ್ನ ಹೆಂಡತಿ ಬಂದು ಕಣ್ಣೀರು ಹಾಕಿ ಕೊಂಡು 'ಬಡವರ ಮನೆಯಲ್ಲಿ ಒಪ್ಪತ್ತು ಊಟಮಾಡಬಾರದೇನೋ' ಎಂದರೆ 'ಕಣ್ಣೀರು ಹಾಕ ಬೇಡಿ ತಾಯಿ – ನೀವು ಹೇಳಿದ ಹಾಗೆ ಕೇಳುತ್ತೇನೆ' ಎಂದು ಊಟಕ್ಕೇಳುತ್ತಿದ್ದರು. ನನ್ನ ಮಗಳ ಮದುವೆ ನಿಶ್ಚಯವಾಗಿ ಹೋಯಿತು ಸಮಯಕ್ಕೆ ಸರಿಯಾಗಿ ಹಣ ಒದಗಲಿಲ್ಲ. ಇಟ್ಟ ಲಗ್ನ ಮುಂದಕ್ಕೆ ತಳ್ಳಬೇಕಾದ ಪ್ರಸಂಗ ಒದಗಿತ್ತು. ರಾಯರಿಗೆ ಸಂದರ್ಭ ತಿಳಿಸಿದೆ. ಮಹಾರಾಯ ತುಟಿಯೆರಡು ಮಾಡಲಿಲ್ಲ. ಕಿಸೆಯಿಂದ ಮೂರು ಸಾವಿರ ರೂಪಾಯಿ ತೆಗೆದು ಎಣಿಸಿ 'ಸಾಲದೆ

ದ್ದರೆ ಹೇಳಿ – ಊರಿನಿಂದ ಕಳಿಸಿ ಕೊಡುತ್ತೇನೆ' ಎಂದರು. ಕಾಗ ನೇ – ಪತ್ರವೇ ಒಂದೂ ಇಲ್ಲ. ಕೆಲವು ತಿಂಗಳ ಮೇಲೆ ನನಗೆ ಹಣ ಂದಿತು. ರಾಯರಿಗೆ ಹಣ ಕೊಡಹೋದೆ 'ನಿಮ್ಮಲ್ಲಿಯೇ ಇರಲಿ. ಗ ನನಗೆ ಹಣದ ಅಗತ್ಯವಿಲ್ಲ' ಎಂದರು. ಅವರ ಹೆಸರು ಹೇಳಿ ಾವು ಮನೆ ದೀಪ ಹಚ್ಚುತ್ತೇವೆ ಜಯರಾಯರೇ. ಅವರ ಅಳಿಯನ ೋಗಕ್ಷೇಮ ಈಗ ನಾನು ನೋಡಿಕೊಳ್ಳದಿದ್ದರೆ ಭಗವಂತ ಮೆಚ್ಚು ್ತನೆಯೇ ? "

"ಪ್ರಪಂಚದಲ್ಲಿದ್ದ ಮೇಲೆ ಒಬ್ಬರ ಸಹಾಯ ಒಬ್ಬರು ಪಡೆಯಲೇ ೇಕು. ಆದರೆ ಉಪಕಾರ ಸ್ಮರಣೆಮಾಡಿಕೊಂಡು ನಿಮ್ಮ ಹಾಗೆ ತಜ್ಞರಾಗಿರುವವರು ವಿರಳ ರಾಯರೇ. ಇದೂ ಪೂರ್ವ ಸುಕೃತ ಶೇಷ."

"ನೀವು ಸುಖವಾಗಿ ಸ್ವಲ್ಪಹೊತ್ತು ವಿಶ್ರಾಂತಿ ತೆಗೆದುಕೊಳ್ಳಿ.... ನ್ಮ ಮಗನನ್ನು ಏಕೆ ಜತೆಯಲ್ಲಿ ಕರೆದುಕೊಂಡು ಬರಲಿಲ್ಲ."

"ಅವನ ಅತ್ತೆಯವರು ನೋಡಬೇಕೆಂದರು. ಗಂಡ, ಹೆಂಡತಿ ುಮಕೂರಿಗೆ ಹೋಗಿದ್ದಾರೆ."

"ಬಹಳ ಸಂತೋಷ."

"ನಾನು ಎಜುಕೇಷನ್ ಆಫೀಸಿನ ಹತ್ತಿರ ಹೋಗಿ ಮಾಧೂ ಸಲ್ಟ್ ಏನಾಯಿತು ನೋಡಿಕೊಂಡು ಬರುತ್ತೇನೆ."

"ಬಿಸಿಲಿನಲ್ಲಿ ಏಕೆ ಹೋಗುತ್ತೀರಿ. ಈಗ ನನ್ನ ಮಗ ಕೋರ್ಟಿ ಂದ ಬರುತ್ತಾನೆ. ಮಾಧೂ ರಿಸಲ್ಟ್ ನಾನು ವಿಚಾರಿಸುತ್ತೇನೆ. ುಮ್ಮನಿರಿ – ಮಾಧೂ ನಂಬರೆಷ್ಟು ? "

"೬೮೨"

ಜಯರಾಯರಿಗೆ ವಿಶ್ರಾಂತಿ ಬೇಕಾಗಿರಲಿಲ್ಲ. ಮಗನ ಫಲಿ ಾಂಶ ಏನಾಗುತ್ತದೋ ಎಂದು ಅವರ ಮನಸ್ಸು ಧಾವತಿಗೊಂಡಿತ್ತು. ಾಯರ ಮೇಜಿನ ಮೇಲಿದ್ದ 'ಮಹಾಭಾರತ ತಾತ್ಪರ್ಯ ನಿರ್ಣಯ' ್ರಂಥ ತೆಗೆದುಕೊಂಡು ಹಾಳೆ ಮಗುಚುತ್ತ ಕುಳಿತರು.

ಮಗ ಕೋರ್ಟಿನಿಂದ ಬಂದ ಕೂಡಲೆ ಶಾಮರಾಯರು

"ಕೇಶವ ಫೋನ್‌ಮಾಡಿ ೬೮೨ ನಂಬರಿನ ರಿಸಲ್ಟ್ ಏನಾಗಿದೆ ವಿಚಾರಿಸು" ಎಂದರು.

ಕೇಶವಮೂರ್ತಿ ಪೋಲೀಸ್ ಸ್ಟೇಷನ್ನಿಗೆ ಹೋಗಿ ಫೋನ್‌ಮಾಡಿ ರಿಸಲ್ಟ್ ತಿಳಿದು ಬಂದು.

"ಪಾಸಾಗಿದೆ ಅಣ್ಣ" ಎಂದು ಹೇಳಿದ.

ಶಾಮರಾಯರು ಸಂತೋಷದಿಂದ ಜಯರಾಯರನ್ನು ಕೂಗಿ

"ನಿಮ್ಮ ಮಗ ಗೆದ್ದು ಬಿಟ್ಟ ಸ್ವಾಮಿ – ಅವನಿಗೆ ವೈರ್‌ಮಾಡಿ ಈ ಸಂತೋಷದ ಸುದ್ದಿ ತಿಳಿಸಿ" ಎಂದರು.

ಕೇಶವಮೂರ್ತಿ, ಮಾಧವನ ಅಡ್ರೆಸ್ ತಿಳಿದುಕೊಂಡು ವೈರ್ ಮಾಡಿ ಬಂದ.

ಅಂದೇ ಸಂಜೆ ಶಾಮರಾಯರು ಜಯರಾಯರೊಂದಿಗೆ ಚಿನ್ನಸ್ವಾಮಿಶೆಟ್ಟರ ಮನೆಗೆ ಹೋಗಿ, ಅವರ ಹಾಸ್ಟೆಲಿನಲ್ಲಿ ಮಾಧೂಗೆ ಸೀಟ್ ಗೊತ್ತುಮಾಡಿಕೊಂಡು ಬಂದರು.

ಜಯರಾಯರು ಮಾರನೆಯ ಬೆಳಿಗ್ಗೆ ಚಿಕ್ಕರಾಯನಪುರಕ್ಕೆ ಪ್ರಯಾಣ ಬೆಳಸಿದರು.

ಮಾಧೂ ಪರೀಕ್ಷೆಯಲ್ಲಿ ತೇರ್ಗಡೆಯಾದುದು, ಅವನಿಗೆ ಹಾಸ್ಟೆಲಿನಲ್ಲಿ ಸ್ಥಳ ಸಿಕ್ಕಿದುದು ಮನೆಯಲ್ಲಿ ಎಲ್ಲರಿಗೂ ಸಂತೋಷವನ್ನುಂಟು ಮಾಡಿತ್ತು. ಗೋದೂಬಾಯಿ ಎಲ್ಲ ಯಶಸ್ಸನ್ನೂ ಸೊಸೆಯ ಮಡಲಿಗೆ ಕಟ್ಟಿ

"ನನ್ನ ಸೊಸೆ ಈ ಮನೆಗೆ ಕಾಲಿಟ್ಟ ಹೊತ್ತು ತುಂಬ ಒಳ್ಳೆಯದು. ಭಾಗ್ಯಲಕ್ಷ್ಮಿಯೇ ನಮ್ಮ ಮನೆಯಲ್ಲಿ ನೆಲಸಿದ್ದಾಳೆ" ಎಂದು ಊರಿನಲ್ಲಿ ಜಂಬಕೊಚ್ಚಿಕೊಂಡರು.

ಮಾಧೂ ಜತೆಯಲ್ಲಿ ಜಯರಾಯರೂ ಬೆಂಗಳೂರಿಗೆ ಹೋಗಿ, ಅವನಿಗೆ ಬೇಕಾದ ಎಲ್ಲ ಅನುಕೂಲಗಳನ್ನೂ ಮಾಡಿಕೊಟ್ಟು ಬರುವುದೆಂದು ನಿಶ್ಚಯವಾಯಿತು.

ಅಚ್ಯುತಪ್ಪನವರೂ, ರಾಮಲಿಂಗಯ್ಯನವರೂ ಸೊಗಸಾದ ಭೋಜನಕೂಟ ಏರ್ಪಡಿಸಿ ಜಯರಾಯರ ಮನೆಯವರನ್ನೆಲ್ಲಾ ಆದರಿಸಿದರು.

ಮಾಧೂ ಪ್ರಯಾಣ ಸನ್ನಿಹಿತವಾಗಲು ಅಚ್ಯುತಪ್ಪನವರು ಅವನನ್ನು ಹತ್ತಿರ ಕರೆದರು.

"ಮಾಧೂ, ಶಾಂತಮ್ಮನ ಮದುವೆ ಭಾದ್ರಪದದಲ್ಲಿ ಎಂದು ಗೊತ್ತಾಗಿದೆ. ನಾಲ್ಕು ದಿವಸ ಪುರಸತ್ತು ಮಾಡಿಕೊಂಡು ಬರಬೇಕಪ್ಪ. ನಿನ್ನದೇ ಓಡಾಟ. ದೊಡ್ಡ ಕಾಲೇಜು ಸೇರುತ್ತೀ – ಬಿ.ಎ., ಎಂ.ಎ. ಮಾಡಿಕೊಂಡ ಮೇಲೆ ನಮ್ಮನ್ನು ಮರೆತುಬಿಡಬೇಡ." ಎಂದರು.

ಉತ್ತರ ಹೇಳುವುದು ಮಾಧೂಗೆ ಪ್ರಯಾಸವಾಯಿತು.

"ನಿಮ್ಮನ್ನು ಮರೆಯುವುದೆಂದರೇನು ಮಾವಯ್ಯ. ಅಣ್ಣನ ಸ್ನೇಹಿತರು ನೀವು. ನನ್ನ ತೀರ್ಥರೂಪ ಸಮಾನ. ಶಾಂತಕ್ಕನ ಮದುವೆಗೆ ಖಂಡಿತ ಬರುತ್ತೇನೆ" ಎಂದು ಆಶ್ವಾಸನವನ್ನಿತ್ತ.

ಕಾಲೇಜು ಬಾಗಿಲು ತೆಗೆಯಿತು. ಮಾಧೂ ಬೆಂಗಳೂರಿಗೆ ಗುರುವಾರ ಹೊರಡುವುದೆಂದು ನಿಶ್ಚಯವಾಯಿತು. ಹಿಂದಿನ ರಾತ್ರಿ ರುಕ್ಮಿಣಿಗೂ ಮಾಧೂಗೂ ನಿದ್ರೆ ಹತ್ತಲಿಲ್ಲ. ರುಕ್ಮಿಣಿ ಒಂದೇ ಸಮನಾಗಿ ಕಣ್ಣೀರ್ಗರೆಯುತ್ತಿದ್ದಳು.

"ಅಳಬಾರದು ರುಕ್ಮಿಣಿ. ಬೆಂಗಳೂರು ಬಹಳ ದೂರವಿಲ್ಲ. ಬಸ್ಸಿನಲ್ಲಿ ಎರಡೇ ಗಂಟೆಯ ಪ್ರಯಾಣ – ಶನಿವಾರ, ಭಾನುವಾರ ರಜ ಇರುತ್ತದೆ – ಬಂದು ಹೋಗುತ್ತೇನೆ."

"ಕಾಗದ ಬರೆಯುತ್ತಿರುತ್ತೀರಾ ?"

"ತಪ್ಪದೆ ಬರೆಯುತ್ತೇನೆ."

"ಬೆಂಗಳೂರಿನಲ್ಲಿ ನಿಮ್ಮ ಫೋಟೋ ತೆಗೆಸಿ ಕಳಿಸಿಕೊಡಿ"

"ಆಗಲಿ – ನೋಡೋಣ."

"ಹಾಗನ್ನಬೇಡಿ. ಖಂಡಿತ ಕಳಿಸಿಕೊಡಿ."

ಮಾಧೂಗೂ ಕಣ್ಣು ತುಂಬಿ ಬಂದಿತ್ತು. ಅವನೂ ಮಕ್ಕಳಂತೆ

ಅತ್ತು ಬಿಟ್ಟ.

ಗುರುವಾರ ಒಂದು ದೊಡ್ಡ ಬುಟ್ಟಿಯ ತುಂಬ ಗೋದೂಬಾಯಿ ಮಗನಿಗೆ ತಿಂಡಿ ಪದಾರ್ಥಗಳನ್ನು ಸಜ್ಜುಗೊಳಿಸಿದರು. ಚಕ್ಕುಲಿ ಕೋಡುಬಳೆ, ಕಾಯಿ ಹುರಿಟ್ಟು, ಪುಳ್ಳಂಗಾಯಿ ಉಂಡೆ, ರವೇ ಉಂಡೆ ಹುರಿಗಾಳು, ಹುರುಕಲು, ಹುಳಿಯವಲಕ್ಕಿ, ಕೊಬ್ಬರಿ ಗಿಟುಕ ಇತ್ಯಾದಿ.

ಮಗನನ್ನು ಬೀಳ್ಕೊಡಲು ಗೋದೂಬಾಯಿಯವರೂ ಬಸ ಸ್ಟ್ಯಾಂಡಿನವರೆಗೆ ಹೊರಟರು. ಅಚ್ಯುತಪ್ಪನವರ ಮನೆಯ ಆಳು ರಂ ಹಾಸಿಗೆ, ಟ್ರಂಕು ಹೊತ್ತುಕೊಂಡ. ಗೋದೂಬಾಯಿ ತಿಂಡಿಯ ಬುಟ್ಟಿ ಕೈಯಲ್ಲಿ ಹಿಡಿದುಕೊಂಡರು.

ರುಕ್ಮಿಣಿ ಅಳುತ್ತ ಒಳಗೆ ಅವಿತುಕೊಂಡಿದ್ದಳು. ಗೋದೂಬಾಯಿ ಮನೆ ಬಿಟ್ಟು ಹೊರಟವರು, ಸೊಸೆಯನ್ನು ಜ್ಞಾಪಿಸಿಕೊಂಡು ಬಂದ 'ರುಕ್ಕೂ' ಎಂದು ಕೂಗಿದರು. ರುಕ್ಮಿಣಿ ಅವಸರವಸರವಾಗಿ ಕಣ್ಣ ಒರಸಿಕೊಂಡು ಬಂದು ಅತ್ತೆಯ ಎದುರಿಗೆ ನಿಂತಳು.

"ಬುಟ್ಟಿ ನೀನು ಹಿಡಿದುಕೊಂಡು, ಬಸ್ ಸ್ಟ್ಯಾಂಡಿಗೆ ನನ್ನ ಜತೆಯಲ್ಲ ಬಾರೇ ತಾಯಿ. ವಯಸ್ಸಾಯಿತು – ಬುಟ್ಟಿ ಕೂಡ ನಾನು ಎತ್ತಲಾರೆ ಎಂದು ಸೊಸೆಯ ಕೈಗೆ ಬುಟ್ಟಿಯನ್ನು ಕೊಟ್ಟರು.

ಬುಟ್ಟಿಯನ್ನು ನಿಮಿತ್ತಮಾಡಿಕೊಂಡ ಅತ್ತೆಯ ಉದ್ದೇ ರುಕ್ಮಿಣಿಗೆ ಅರ್ಥವಾಯಿತು. ಅವಳ ಹೃದಯ ಕೃತಜ್ಞತೆಯಿಂದ ತುಂಬ ಹೋಯಿತು.

ಬಸ್ ಹೊರಟರೂ ಅತ್ತೆ, ಸೊಸೆ ಸ್ಥಳ ಬಿಟ್ಟು ಕದಲಲಿಲ್ಲ ಇಬ್ಬರ ಕಣ್ಣಿನಲ್ಲಿಯೂ ನೀರು. ರುಕ್ಮಿಣಿ ಮೆಲ್ಲನೆ

"ಅಮ್ಮ – ಬಸ್ ಹೊರಟು ಹೋಯಿತು." ಎಂದಳು.

"ಹೌದು ಕಂದಾ – ನಡೀ ಮನೆಗೆ ಹೋಗೋಣ" ಎಂದರ ಗೋದೂಬಾಯಿ.

೬

ಅತ್ತೆಗೂ ಸೊಸೆಗೂ ಪ್ರತಿನಿತ್ಯ ಯಾವದಾದರೊಂದು ವಿಷಯಕ್ಕೆ ಪ್ರೇಮ ಕಲಹವಿದ್ದೇ ಇರುತ್ತಿತ್ತು. ಅತ್ತೆಯನ್ನು ಕೂಡಿಸಿ ಸೇವೆ ಮಾಡಬೇಕೆಂದು ಸೊಸೆ; ಸೊಸೆಯನ್ನು ಕೂಡಿಸಿ ಆದರಿಸಬೇಕೆಂದು ಅತ್ತೆ.

"ವಾರಕ್ಕೆ ಎರಡು ದಿವಸ, ಅದರ ಜತೆಗೆ ತಿಂಗಳಿಗೆ ನಾಲ್ಕು ದಿವಸ ದೇವರು ನನಗೆ ವಿಶ್ರಾಂತಿ ವಿಧಿಸಿದ್ದಾನೆ. ಉಳಿದ ದಿನಗಳಲ್ಲಿಯೂ ಏಕೆ ನೀನು ನನ್ನ ಕೈಕಟ್ಟಿಹಾಕುತ್ತೀ ರುಕ್ಕೂ ? "

"ನಾನು ಕೆಲಸಕಾರ್ಯ ಕಲಿತು ಕೊಳ್ಳಬೇಡವೇಮ್ಮ."

"ಕಲಿಸುವುದಕ್ಕೆ ನಿನ್ನ ತಾಯಿ ನನಗೇನೂ ಉಳಿಸಿಯೇ ಇಲ್ಲ. ಅತ್ತೆಯನ್ನು ಕಂಡರೆ ಹೀಗೆ ಮರುಗುವ ಸೊಸೆಯನ್ನು ನಾನು ಎಲ್ಲಿಯೂ ನೋಡಿಲ್ಲಮ್ಮ. ಸೊಸೆಯರ ಪಾಲಿಗೆ ಅತ್ತೆಯರೆಂದರೆ ಹುಲಿಗಳು."

"ಕೆಲವು ಅತ್ತೆಯರು ದೇವತೆಯರಾಗಿರುತ್ತಾರಮ್ಮ."

"ಹುಚ್ಚಿ ! ನಾನು ಯಾವ ದೇವತೆ ಹೇಳು ! ನಿನ್ನ ಕೈಯಲ್ಲಿ ಮಾಡಿಸಿಕೊಂಡು ತಿಂದು ತಿಂದು ಬೊಜ್ಜು ಬೆಳೆಸುತ್ತಿರುವ ಸೋಮಾರಿ."

"ನಿಮ್ಮ ಮಾತು ನಿಜವಾಗಲಿ ಎಂತ ನನ್ನ ಆಸೆ." ಎಂದು ರುಕ್ಮಿಣಿ ಮೆಲ್ಲನೆ ಮಾತನ್ನು ಬದಲಾಯಿಸಿಬಿಡುತ್ತಿದ್ದಳು.

ಪ್ರತಿನಿತ್ಯ ಸಂಜೆ ಗೋದಮ್ಮನವರ ಮನೆಯಲ್ಲಿ ಊರಿನ

ಮಹಿಳಾ ಮಂಡಳಿ ಸಭೆ ಸೇರುತ್ತಿತ್ತು. ಹೆಂಗಸರು ಕಾಡು ಹರಟೆ ಕೊಚ್ಚುವುದಕ್ಕೆ ಅವಕಾಶ ಕೊಡದೆ ಗೋದಮ್ಮ ಗೀತೆಯನ್ನೋ, ಹರಿಕಥಾಮೃತಸಾರವನ್ನೋ ಓದಿ ಅರ್ಥ ವಿವರಿಸುತ್ತಿದ್ದರು. ಒಂದೊಂದು ದಿನ ಸೊಸೆಯಿಂದ ರಾಮಾಯಣ, ಭಾರತ, ಭಾಗವತದ ಕಥೆಗಳನ್ನು ಹೇಳಿಸುತ್ತಿದ್ದರು.

ಗೋದಮ್ಮನವರ ಅಂಕೆಮೀರಿ ಒಂದೊಂದು ದಿನ ಮಾತು ಹರಟೆಯ ಕಡೆ ತಿರುಗುತ್ತಿತ್ತು. ಈ ವಿಷಯದಲ್ಲಿ ಸಾಮಾನ್ಯವಾಗಿ ಹಯಗ್ರೀವಾಚಾರ್ಯರ ಹೆಂಡತಿ ಜೀವೂಬಾಯಿಯವರದೇ ಮುಂದಾಳುತನ. ಗೋದೂಬಾಯಿ ಸ್ವಲ್ಪ ಹೊತ್ತು ಪುಸ್ತಕ ಕೆಳಗಿಟ್ಟು, ಕಣ್ಣು ಮುಚ್ಚಿಕೊಂಡು ಕೂಡುತ್ತಿದ್ದರು. ಜೀವೂಬಾಯಿಯವರ ಭಾಷಣ ಮುಗಿದ ಮೇಲೆ

"ಹೋಗಲಿ ಬಿಡಿ ಜೀವೂಬಾಯಿ. ಕಂಡವರ ಮನೆ ಕಾಷ್ಠಾ ವ್ಯಸನ ಕಟ್ಟಿಕೊಂಡು ನಮಗಾಗಬೇಕಾದುದೇನು? ರಾಮ, ಕೃಷ್ಣ ಎಂದುಕೊಂಡು ಕಾಲ ತಳ್ಳೋಣ".

"ಅಲ್ಲ ನೋಡಿ ಗೋದಮ್ಮ, ಪದ್ಮನಾಭನ ಹೆಂಡತಿ ಲಕ್ಷ್ಮೀ ಎಷ್ಟು ತಯಾರಾಗಿದ್ದಾಳೇಂತ! ಪಕ್ಕಕ್ಕೆ ಬೈತಲೆ ಬಾಚಿಕೊಂಡು ಮುಖಕ್ಕೆ ಬೂದಿ ಬಳಿದುಕೊಂಡು ಸೊಳ್ಳೆಪರದೆ ಸೀರೆ ಉಟ್ಟುಕೊಂಡು ದೊರಸಾನಿ ಹೊರಟ ಹಾಗೆ ಹೊರಟುಬಿಡುತ್ತಾಳೆ. ಯಾರದ್ದೂ ಅವಳಿಗೆ ಲಕ್ಷ್ಯವೇ ಇಲ್ಲ."

ಜೀವೂಬಾಯಿ ಮಾತೆಂದರೆ ಶೇಷಾಚಾರ್ರ ಕುಂಟುಂಬ ಸುಭದ್ರಮ್ಮನಿಗೆ ಆಪ್ಯಾಯಮಾನವಾಗಿರುತ್ತಿತ್ತು. ಜೀವೂಬಾಯಿ ಮಾತಿಗೆ ಪುಟಗೊಟ್ಟು, ಅವರ ನಾಲಗೆಗೆ ಸಾಣೆ ಹಿಡಿಯುವ ಜಾಣ್ಮೆ ಸುಭದ್ರಮ್ಮನಿಗೆ ಸಾಧಿಸಿದ್ದಂತೆ ಯಾರಿಗೂ ಸಾಧಿಸಿರಲಿಲ್ಲ.

"ಪದ್ಮನಾಭನಿಗೂ ಅವನ ಹೆಂಡತೀಗೂ ಅಷ್ಟಕ್ಕೆ ಅಷ್ಟೆ ಅಂತಲ್ರಿ ಜೀವೂಬಾಯಿ."

"ಸರಿ – ಆ ಕೆಟ್ಟಮುಖದ್ದು ಆಡೋ ಆಟ ನೋಡಿ ಯಾರ

ಸಹಿಸುವುದಕ್ಕಾಗುತ್ತದೆ ಹೇಳಿ – ”

“ಲಕ್ಷ್ಮಿ ಅಷ್ಟು ದಾರೀಗೆ ಬಂದಿದ್ದಾಳೆಯೇ ?”

“ಹೋಗಲಿ ಬಿಡಿ. ಮಾಡಿದವರ ಪಾಪ ಆಡಿದವರ ಬಾಯಲ್ಲಿ ಎಂದ ಹಾಗೆ ನಮಗೇಕೆ ಬೇಕು. ದಿವಸಕ್ಕೆ ಒಬ್ಬೊಬ್ಬರನ್ನು ಕಟ್ಟಿಕೊಂಡು ಅವಳು ಸಿನೀಮಾಕ್ಕೆ ಹೋಗಿ ಕುಕ್ಕುರಿಸಿದ್ದರೆ ನಮಗೇನಾಗಬೇಕು.”

ಹೂಬತ್ತಿ ಹೊಸೆಯುತ್ತ ಕುಳಿತಿದ್ದ ಗುಂಡಮ್ಮನ ನಾಲಗೆ ಕೆರೆಯುವುದಕ್ಕಾರಂಭಿಸಿತು.

“ಅಲ್ರೀ ಜೀವೂಬಾಯಿ – ನಿಮ್ಮ ಇಂದಿರಾಬಾಯಿಗೆ ಮಡಿ ಮಾಡಿಸುವುದಿಲ್ಲವೇನು ? ”

“ನಮ್ಮ ಇಂದಿರಾಬಾಯಿ ! ”

“ನಿಮ್ಮ ಪಕ್ಕದ ಮನೆಯಲ್ಲಿದಾರಲ್ಲಾ – ಅದಕ್ಕೋಸ್ಕರ ‘ನಿಮ್ಮ ಇಂದಿರಾಬಾಯಿ’ ಎಂದು ಹೇಳಿದೆ.”

“ಸದ್ಯ ಅವರನ್ನು ನಮ್ಮ ಜೊತೆಮಾಡಬೇಡಿ ಗುಂಡಮ್ಮ.”

“ಏಕೆ ! ”

“ಗಂಡ ಸತ್ತು ಐದು ವರ್ಷವಾಯಿತು. ಇನ್ನೂ ಕೈಯಲ್ಲಿ ಬಳೆ, ಕಿವಿಯಲ್ಲಿ ಓಲೆ, ಕೊರಳಲ್ಲಿ ಸರ, ಮೈಮೇಲೆ ಅರಳೀಪೇಟೆ ಸೀರೆ ತಪ್ಪಿಲ್ಲ. ನೋಡಿದವರು ಏನನ್ನುತ್ತಾರೆ ಹೇಳಿ.”

ಗೋದೂಬಾಯಿಯವರಿಗೆ ತಲೆ ಚಿಟ್ಟು ಹಿಡಿದು ಹೋಗಿತ್ತು. ರುಕ್ಮಿಣಿಯ ಮನಸ್ಸಿಗೂ ತುಂಬ ನೋವಾಗಿತ್ತು. ಜೀವೂಬಾಯಿಯ ಪುರಾಣಕ್ಕೆ ಮುಕ್ತಾಯ ಸೂಚಿಸದೆ ಗತ್ಯಂತರವೇ ಇರಲಿಲ್ಲ. ಗೋದೂಬಾಯಿ ಕೈಗೆ ಪುಸ್ತಕ ತೆಗೆದುಕೊಂಡು ಮೇಲಕ್ಕೆದ್ದು

“ನನಗೆ ಅಡಿಗೆಗೆ ಹೊತ್ತಾಯಿತಮ್ಮ ” ಎಂದರು.

ಮಹಿಳಾಮಂಡಳಿ ಚದುರಿತು. ಗೋದೂಬಾಯಿ ಸೊಸೆಯ ಬಳಿ ಬಂದು ಮೃದುವಾಗಿ

“ಕಣ್ಣಲ್ಲಿ ನೀರು ಹಾಕಿಕೊಳ್ಳಬೇಡ ಕಂದಾ. ಹೆಂಗಸಿನ ನಾಲಗೆ

ಗಿಂತ ನೊನಚಾದ ಅಲಗಿಲ್ಲ ಎಂಬುದನ್ನು ಕೇಳಿಲ್ಲವೇನು ?"

"ನೋಡಿ ಅಮ್ಮ – ಇಂದಿರಾಬಾಯಿ ವಿಷಯ ಎಷ್ಟು ಕೆಟ್ಟದ್ದು ಮಾತನಾಡುತ್ತಾರೆ. ಕಷ್ಟವೋ ಸುಖವೋ ಅವರ ಪಾಡಿಗೆ ಅವರಿದ್ದರೂ ಇವರಿಗೆ ಸಮಾಧಾನವಿಲ್ಲವಲ್ಲ ?"

"ಇಂದಿರಾಬಾಯಿ ನಿನ್ನ ವಿಷಯದಲ್ಲಿ ವಿಶ್ವಾಸವಾಗಿದ್ದಾರೇಂತ, ನಾಳೆ ಇವರುಗಳು ನಿನ್ನ ಮೇಲೆ ಕಥೆ ಕಟ್ಟುವುದಕ್ಕೂ ಹೇಸುವುದಿಲ್ಲ ರುಕ್ಕೂ."

ರುಕ್ಮಿಣಿ ಗಡಗಡನೆ ನಡುಗಿದಳು. ಗೋದಮ್ಮ ಸೊಸೆಯನ್ನಪ್ಪಿ ಕೊಂಡು

"ನಿನ್ನ ವಿಷಯ ಮಾತನಾಡಿದರೆ ಅವರನ್ನು ನಾನು ಜೀವದೊರಸೆ ಬಿಡುತ್ತೇನೆಯೇ ರುಕ್ಕೂ. ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಅನುಭವಿಸು ತ್ತಾರೆ – ನೋಡುತ್ತಿರು" ಎಂದು ಸಮಾಧಾನ ಹೇಳಿದರು.

ನಾಲ್ಕುದಿನ ಕಳೆಯಿತು. ಒಂದು ಮಧ್ಯಾಹ್ನ, ಚಕ್ಕುಲಿ ಮಾಡಿಟ್ಟು, ಗೋದಮ್ಮ ಚಕ್ಕುಲಿ ಒರಳು, ಬಾಣಲೆ ಹೊರಗೆ ತೊಳೆಯು ವುದಕ್ಕೆ ಹಾಕಿ, ಕೈ ತೊಳೆದುಕೊಂಡು ಬರುತ್ತಿದ್ದರು. ಇಂದಿರಾಬಾಯಿ ತಲೆಗೆದರಿಕೊಂಡು ಹುಚ್ಚಿಯ ಹಾಗೆ ಒಳಕ್ಕೆ ಪ್ರವೇಶಿಸಿದಳು. ಗೋದಮ್ಮನವರಿಗೆ ಗಾಬರಿಯಾಯಿತು. ರುಕ್ಮಿಣಿ ಅವಳ ಹತ್ತಿರ ಹೋಗಿ 'ಬನ್ನಿ – ಇಂದಿರಕ್ಕ – ಕುಳಿತುಕೊಳ್ಳಿ' ಎಂದಳು. ಇಂದಿರಮ್ಮ ಗೋಡೆಯಪಕ್ಕದಲ್ಲಿ ಕುಕ್ಕರಿಸಿಬಿಟ್ಟಳು. ಗೋದಮ್ಮ, ರುಕ್ಮಿಣಿ ಅವಳ ಅಕ್ಕಪಕ್ಕದಲ್ಲಿ ಕುಳಿತುಕೊಂಡರು. ಇಂದಿರಮ್ಮ ಗಟ್ಟಿಯಾಗಿ ಅಳಲುಪಕ್ರಮಿಸಿ

"ನಾನು ಬದುಕಿರಬಾರದು ಗೋದತ್ತೆ. ನನ್ನದು ಪಾಪಿಜನ್ಮ." ಎಂದು ನೆಲಕ್ಕೆ ಗಟ್ಟಿಯಾಗಿ ಹಣೆ ಬಡಿದುಕೊಂಡಳು.

"ನಿಮ್ಮ ಪಾದದ ಮೇಲೆ ಎರಡು ಮಕ್ಕಳನ್ನೂ ಹಾಕಿ ಕೆರೆಗೆ ಬೀಳುತ್ತೇನ್ರೀ" ಎನ್ನುತ್ತಾ ಬಲವಾಗಿ ತಲೆಚಚ್ಚಿಕೊಂಡಳು. ಗೋದಮ್ಮ ರುಕ್ಮಿಣಿ ಅವಳ ಎರಡು ಕೈಗಳನ್ನು ಹಿಡಿದುಕೊಂಡರು.

"ಏನಾಯಿತು ಇಂದಿರಮ್ಮ ಹೇಳು. ಸುಧಾರಿಸಿಕೋ. ದುಡುಕಿದರೆ ಏನು ಪ್ರಯೋಜನ ?"

"ಮಾನ ಹೋದಮೇಲೆ ಪ್ರಾಣವಿದ್ದೇನು ಪ್ರಯೋಜನ ಗೋದತ್ತೆ ?"

"ಮಾನ ಹೋಗುವ ಅಪರಾಧ ನೀನೇನೂ ಮಾಡಿಲ್ಲವಲ್ಲ !"

"ಜೀವೂಬಾಯಿ, ಸುಭದ್ರಮ್ಮ ಏನು ಹೇಳುತ್ತಿದ್ದಾರೆ, ಬಲ್ಲಿರಾ?"

"ಏನು ಹೇಳುತ್ತಿದ್ದಾರೆ. ?"

"ನನ್ನ ಯಜಮಾನರಿಗೆ ನಾನೇ ವಿಷಕೊಟ್ಟು ಕೊಂದು, ನನ್ನ ಮಾವನವರನ್ನು ಸರಿಮಾಡಿಕೊಂಡಿದ್ದೇನಂತೆ !"

"ಹರಿ ಹರಿ !"

"ಈ ಮಾತು ಕೇಳಿಕೊಂಡು ನಾನು ಬದುಕಿರಬೇಕೇನ್ರೀ ?"

"ನೀನು ಪ್ರಾಣ ನೀಗಿಕೊಂಡು ಅವರ ಮಾತು ನಿಜ ಮಾಡುತ್ತೀಯ ?"

"ನಾನೇನು ಮಾಡಲಿ ?"

"ಏನೂ ಮಾಡಬೇಡ. ದುಷ್ಟರನ್ನು ದೂರವಿಟ್ಟು ನಿನ್ನ ಕೆಲಸ ಕಾರ್ಯ ನೋಡಿಕೋ. ಇಂಥ ಹೊಲೆ ಮಾತಾಡಿದವರ ಬಾಯಲ್ಲಿ ಹುಳು ಸುರಿಯದಿರುತ್ತದೆಯೇ ?"

ಇಂದಿರಾಬಾಯಿ ಗೋದಮ್ಮನವರ ತೊಡೆಯಮೇಲೆ ತಲೆಯಿಟ್ಟು ಗೊಳೋ ಎಂದು ಅತ್ತುಬಿಟ್ಟರು. ಗೋದಮ್ಮನವರ ಕಣ್ಣಲ್ಲಿಯೂ ಧಾರಾಪ್ರವಾಹ.

"ನಾನು ಆಸೆಪಟ್ಟು ಬಳೆ, ಸರ, ಓಲೆ ಹಾಕಿಕೊಂಡಿಲ್ಲ ಗೋದತ್ತೆ. ಅವರು ಕಾಹಿಲೆ ಮಲಗಿದರು. ಆಗಲೇ ನಾನು ಒಡವೆಗಳನ್ನು ತೆಗೆದಿಡಲು ಹೋದೆ. ಅವರು ನನ್ನ ಕೈಹಿಡಿದುಕೊಂಡು 'ಒಡವೆಗಳನ್ನು ತೆಗೆಯಬೇಡ.........ನಾನು ಕಣ್ಣು ಮುಚ್ಚಿಕೊಂಡರೂ ನೀನು ತಲೆಗೂದಲನ್ನೂ, ಒಡವೆಗಳನ್ನೂ ತೆಗೆಸಕೂಡದು' ಎಂದು ಕಟ್ಟಪ್ಪಣೆ ಮಾಡಿದರು. ನನ್ನ ಸ್ವಾಮಿ ಮಾತುಕೇಳಬೇಕೋ, ಜೀವೂಬಾಯಿ ಮಾತು ಕೇಳಬೇಕೋ,

ನೀವೇ ಹೇಳಿ ಗೋದತ್ತೆ – ನೀವು ಹೇಳಿದಂತೆ ಮಾಡುತ್ತೇನೆ.”

“ಬೇಕಾದವರು ಬೇಕಾದ್ದು ಹೇಳಿಕೊಳ್ಳಲಿ – ನೀನು ತಲೆ ಗೂದಲನ್ನೂ ತೆಗೆಸಬೇಡ – ಒಡವೆಗಳನ್ನೂ ತೆಗೆಯಬೇಡ. ತಾಯಿ. ಪತಿಯ ಮಾತಿಗಿಂತ ಪವಿತ್ರವಾದುದು ಹೆಂಗಸಿಗೆ ಬೇರೆ ಯಾವುದೂ ಇಲ್ಲ ”ಎಂದು ಸಂತೈಸಿದರು. ಇಂದಿರಾಬಾಯಿಯ ಮನಸ್ಸಿಗೆ ತುಸು ಸಮಾಧಾನವಾಯಿತು. ಎದ್ದು ಕುಳಿತು

“ಜೀವೂಬಾಯಿ, ಸುಭದ್ರಮ್ಮ ದಿನಕ್ಕೆ ನೂರು ಸಲ ಸಾಲಕ್ಕೆ ಬರುತ್ತಿದ್ದರು. ಅವರಿಗೆ ಅಕ್ಕಿ ಮೊದಲುಗೊಂಡು ತರಕಾರಿವರೆಗೆ ಒದಗಿಸಿ ಒದಗಿಸಿ ನನಗೂ ಸಾಕಾಗಿ ಹೋಯಿತು. ಕೊಟ್ಟ ಪದಾರ್ಥ ಒಂದೂ ಹಿಂದಿರುಗುತ್ತಲೇ ಇರಲಿಲ್ಲ. ಮೊನ್ನೆ ನಾನೂ ಬೇಸತ್ತು ‘ನಾನೇನು ಶ್ರೀಮಂತಳಲ್ಲ ಜೀವೂಬಾಯಿ – ನಿತ್ಯ ನೀವು ಸಾಲಕ್ಕೆ ಬಂದರೆ ನಾನು ಎಲ್ಲಿಂದ ತರಲಿ’ ಎಂದು ಹೇಳಿದೆ ಜೀವೂಬಾಯಿ ರೇಗಿಕೊಂಡು ಹೊರಟು ಹೋದರು. ಅದಕ್ಕೋಸ್ಕರ ನನ್ನ ಮೇಲೆ ಇಲ್ಲ ಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ.”

“ಅದನ್ನು ನಾನು ವಿಚಾರಿಸಿಕೊಳ್ಳುತ್ತೇನೆ. ನೀನು ನಿಶ್ಚಿಂತಳಾಗಿರು. ದುಡುಕಬೇಡ” ಎಂದು ಹಿತೋಕ್ತಿ ಹೇಳಿ ಮನೆಯಲ್ಲಿ ಮಾಡಿದ್ದ ಚಕ್ಕುಲಿಯನ್ನು ಒಂದು ಎಲೆಯಲ್ಲಿ ಕಟ್ಟಿ ಇಂದಿರಾಬಾಯಿ ಕೈಗಿತ್ತರು. ಇಂದಿರಾಬಾಯಿ ಹೋಗಲೆದ್ದು ನಿಂತು

“ಗೋದತ್ತೆ – ನೀವೇ ನನ್ನ ಹಡದಮ್ಮ ಕಣ್ರೀ....ನಿಮ್ಮನ್ನು ನೋಡಿದರೇ ನನ್ನ ದುಃಖ ಪರಿಹಾರವಾಗುತ್ತದೆ” ಎಂದು ಕಾಲು ಮುಟ್ಟಿ ನಮಸ್ಕಾರಮಾಡಿ ಹೋದಳು. ಗೋದಮ್ಮ ನಿಟ್ಟುಸಿರು ಬಿಟ್ಟು ‘ಅಯ್ಯೋ – ಪ್ರಪಂಚವೇ !’ ಎಂದು ಉದ್ಗಾರ ತೆಗೆದರು.

ಗೋದಮ್ಮನವರ ಮನಸ್ಸಿನಲ್ಲಿ ಜೀವೂಬಾಯಿಯ ದುರ್ವರ್ತನೆ ಕುತಕುತನೆ ಕುದಿಯುತ್ತಿತ್ತು. ಒಂದುವಾರ ಕಳೆಯಲೆಂದು ಸುಮ್ಮನಿದ್ದರು. ಒಂದು ದಿನ ಮಹಿಳಾ ಮಂಡಳಿ ಸೇರಿದಾಗ

“ಪ್ರಪಂಚದಲ್ಲಿ ದುಃಖ, ನೋವು ಹೆಚ್ಚುತ್ತಿದೆ” ಎಂದರು.

ಜೀವೂಬಾಯಿ ಪರಮ ಜ್ಞಾನಿಯಂತೆ ತಲೆಯಳ್ಳಾಡಿಸುತ್ತ "ಪಾಪ ಹೆಚ್ಚಿತು; ಅದಕ್ಕೇ ದುಃಖ ನೋವೂ ಹೆಚ್ಚಿತು." ಎಂದರು.

"ಪಾಪ ತುಂಬ ಹೆಚ್ಚಿತಮ್ಮ. ಒಂದು ಬಗೆಯಲ್ಲ, ನಾನಾ ಬಗೆ."

"ಹಾಗಂದರೇನು ಗೋದೂಬಾಯಿ" ಎಂದು ಗುಂಡಮ್ಮ ಕೇಳಿದರು.

"ಮಾಡುವ ಪಾಪ ಒಂದಂಶವಾದರೆ, ಆಡುವ ಪಾಪ ಮೂರಂಶ ವಾಯಿತಮ್ಮ."

"ಆಡುವ ಪಾಪ!"

"ಹೌದು ಆಡುವ ಪಾಪ. ಸತ್ಯವಂತರ ಮೇಲೆ ಸುಳ್ಳು ಪ್ರಸಾರಮಾಡಿ ಅವರ ಮನಸ್ಸು ಹಿಂಡಿ, ಕಣ್ಣಲ್ಲಿ ನೀರು ತರಿಸುವ ಪಾಪಕ್ಕಿಂತ ಇನ್ನೂ ಪಾಪವಿದೆಯೋ ?"

"ತಪ್ಪನ್ನು ತಪ್ಪು ಎನ್ನದಿದ್ದರೆ ತಪ್ಪಿತಸ್ಥರು ತಿದ್ದಿಕೊಳ್ಳುವುದು ಹೇಗೆ?" ಎಂದು ಜೀವೂಬಾಯಿ ಸವಾಲು ಹಾಕಿದರು.

"ಮೊದಲು ತಪ್ಪಿತಸ್ಥರು ಯಾರು ಎಂಬುದು ಖಚಿತವಾಗಬೇಕು. ಎರಡನೆಯದಾಗಿ ಅವರಿಗೆ ಶಿಕ್ಷೆಕೊಡುವವರು ಯಾರು ಎಂಬುದು ನಿರ್ಧರವಾಗಬೇಕು. ಮೂರನೆಯದಾಗಿ ಶಿಕ್ಷೆಕೊಡುವವರೂ ತಪ್ಪಿತಸ್ಥರಾಗಿಲ್ಲವೇ ಎಂಬುದು ಇತ್ಯರ್ಥವಾಗಬೇಕು."

ಜೀವೂಬಾಯಿಯ ಮನಸ್ಸು ಅಳುಕಿತು. ಮಂಡಳಿಯ ಮಹಿಳೆಯರೆಲ್ಲಾ ಜೀವೂಬಾಯಿಯ ಕಡೆಯೇ ನೋಡಿದರು. ಗೋದಮ್ಮನವರ ವಿಮರ್ಶೆ ಜೀವೂಬಾಯಿಯನ್ನೇ ಕುರಿತಾಗಿದ್ದು ದೆಂಬುದರ ಬಗ್ಗೆ ಯಾರಿಗೂ ಸಂದೇಹವಿರಲಿಲ್ಲ.

ಜೀವೂಬಾಯಿ ಕೆಣಕಿದ ಫಣಿಯಂತಾಗಿ

"ಸ್ಪಷ್ಟವಾಗಿ ಮಾತನಾಡಿ ಗೋದಮ್ಮ. ಯಾರನ್ನೊ ಮನಸ್ಸಿನಲ್ಲಿಟ್ಟುಕೊಂಡು ನೀವು ಮಾತನಾಡುತ್ತಿರುವಂತಿದೆ."

"ಯಾರನ್ನೂ ಇಲ್ಲ ಜೀವೂಬಾಯಿ – ನಿಮ್ಮನ್ನೇ ಮನಸ್ಸಿ

ನಲ್ಲಿಟ್ಟುಕೊಂಡು ಈ ಮಾತನ್ನಾಡಿದೆ."

"ನಾನೇನು ಮಾಡಿದೆನಮ್ಮ ?"

"ಏನೂ ಮಾಡಲಿಲ್ಲ – ನಿರಪರಾಧಿ ಇಂದಿರಾಬಾಯಿಯನ ಅವಳ ಮಾವನವರಿಗೆ ಗಂಟು ಹಾಕಿದಿರಿ. ನೀವೂ ಹೆಣ್ಣು – ಇಂದಿರ ಬಾಯಿಯೂ ಹೆಣ್ಣು. ಆಕೆ ಸತ್ಕುಲ ಪ್ರಸೂತೆ – ಸಚ್ಚರಿತೆ – ಅವ ಮೇಲೆ ಇಂಥ ಕೆಟ್ಟಮಾತು ಆಡಿ ನಿಮಗೆ ಬಂದ ಭಾಗ್ಯವೇನು ನಾಲಗೆಯನ್ನು ನಾವು ಭಗವದ್ಮಂದಿರದ ಗಂಟೆ ಎಂದು ಭಾವಿಸಬೇಕ ನಮ್ಮ ಬಾಯಿಂದ ಒಳ್ಳೆಯ ಮಾತು ಬರಬೇಕಲ್ಲದೆ ಕೆಟ್ಟಮಾತ ಬರಬಾರದು. ನೀವೂ ಸಂಸಾರಿಗರು – ಮಕ್ಕಳೊಂದಿಗರು – ನಿಮಗ ದೊಡ್ಡಮಗಳಿದ್ದಾಳೆ. ನಿಮ್ಮ ಮಕ್ಕಳ ಮೇಲೆ ಯಾರಾದರೂ ಕೆ ಮಾತು ಆಡಿದರೆ ನಿಮಗೆ ವ್ಯಥೆಯಾಗುವುದಿಲ್ಲವೇ ? – ಇಂದಿರವ ಸ್ವಸಂತೋಷಕ್ಕಾಗಿ ಬಳೆ, ಓಲೆ, ಸರ ಹಾಕಿಕೊಳ್ಳುತ್ತಾಳೆಂದ ತಿಳಿದಿರುವಿರಾ ? ಆಕೆಯ ಗಂಡ ಸಾಯುವಾಗ 'ಇವುಗಳನ್ನು ತೆಗೆ ಬೇಡ' ಎಂದು ಆಜ್ಞೆ ಮಾಡಿಹೋದ. ಪತಿಯಾಜ್ಞೆಯನ್ನು ಪರಿಪಾಲಿ ದುದೇ ಇಂದಿರಮ್ಮನ ಅಪರಾಧವೇನು ?"

ಜೀವೂಬಾಯಿಯ ಬಾಯಿ ಕಟ್ಟಿಹೋಗಿತ್ತು. ಮೈ, ಮುಖದಿಂ ಬೆವರು ಸುರಿಯತೊಡಗಿತ್ತು. ಪರಮ ಶಾಂತಮೂರ್ತಿಯಾ ಗೋದಮ್ಮ ಹೀಗೆ ತನ್ನನ್ನು ಪ್ರತಿಭಟಿಸುವರೆಂದು ಅವಳು ಕನ ನಲ್ಲಿಯೂ ಯೋಚಿಸರಲಿಲ್ಲ.

"ಇನ್ನು ಮೇಲಾದರೂ ನೀವೂ ಸುಭದ್ರಮ್ಮ ಇಂಥ ನಡ ಬಿಟ್ಟುಬಿಡಿಯಂದ್ರೆ" ಎಂದರು.

"ನಮಗಾಗದವರು ಯಾರೋ ನಿಮಗೆ ಚಾಡೀ ಚುಚ್ಚಿದ್ದಾ ಯಾರು ಎತ್ತಲಾಗಿಯಾದರೂ ಹೋಗಲಿ – ನಮಗೇಕಮ್ಮ – ನಮ್ಮ ನಮಗೆ ಹಾಸಿ ಹೊದ್ದುಕೊಳ್ಳುವಷ್ಟಿದೆ" ಎಂದು ಆರ್ಭಟಿಸು ಜೀವೂಬಾಯಿ ಎದ್ದು ಹೋದರು. ಅವರನ್ನು ಸುಭದ್ರಮ್ಮ, ಗುಂಡವ ಅನುಸರಿಸಿ ಹೋದರು. ಉಳಿದವರಿಗೆ ಏಳುವುದಕ್ಕೆ ಧೈರ್ಯವಿಲ್ಲ

ೂಡುವುದಕ್ಕೆ ಮನಸ್ಸಿಲ್ಲ. ಅಚ್ಯುತಪ್ಪನವರ ಹೆಂಡತಿ ರಮಾಬಾಯಿ ಂತೋಷಗೊಂಡು

"ಚೆನ್ನಾಗಿ ಹೇಳಿದಿರಿ ಗೋದತ್ತೆ. ಜೀವೂಬಾಯಿ ಕಾಟ ಹಿಸಲಸಾಧ್ಯವಾಗಿತ್ತು. ಚೆನ್ನಾಗಿ ಬುದ್ಧಿ ಕಲಿಸಿದಿರಿ. ಕಂಡವರ ಮನೆ ುರಿಯುವುದರಲ್ಲಿ ನಿಸ್ಸೀಮಳು ಈ ಜೀವೂಬಾಯಿ" ಎಂದು ತಮ್ಮ ೆಚ್ಚುಗೆ ವ್ಯಕ್ತಪಡಿಸಿದರು.

ಮಂಡಳಿ ಚೆದುರಿತು. ಮಾರನೆಯ ದಿನದಿಂದ ಜೀವೂಬಾಯಿ, ುಭದ್ರಮ್ಮ, ಗುಂಡಮ್ಮ ಗೋದಮ್ಮನವರ ಮನೆ ಹೊಸಲು ುಳಿಯಲಿಲ್ಲ. 'ಅನಿಷ್ಟ ಕಳೆಯಿತು' ಎಂದು ರುಕ್ಮಿಣಿ ಹೇಳಿದಳು.

ಇಂದಿರಾಬಾಯಿ ಪಕ್ಷವಹಿಸಿ, ಅತ್ತೆ ನಡೆಸಿದ ಹೋರಾಟ, ುಕ್ಮಿಣಿ ಮನಸ್ಸಿನಲ್ಲಿ ವಿಶೇಷ ಪರಿಣಾಮವನ್ನುಂಟುಮಾಡಿತು.

"ನೀವು ಎಂಥಾ ಮೆದುಗಸ್ಥರು – ಅವತ್ತು ಎಷ್ಟು ಕೋಪ ಂದಿತ್ತು ನಿಮಗೆ ಅಮ್ಮ" ಎಂದು ರುಕ್ಮಿಣಿ ಹೇಳಲು ಗೋದಮ್ಮನವರು

"ನೀಚತನ, ದುಷ್ಟತನ್ನ, ಅಲ್ಪತನ ನೋಡಿ ಸುಮ್ಮನಿರಬಾರದು ುಕ್ಕೂ. ಒಳ್ಳೆಯದು ಉಳಿಯಬೇಕಾದರೆ ಕೆಟ್ಟದರೊಂದಿಗೆ ಹೋರಾ ಡಲೇ ಬೇಕು. ಕಾಳಿಂದಿ ನದಿಯಲ್ಲಿ ಕೃಷ್ಣಸರ್ಪ ಸೇರಿಕೊಂಡು ನೀರನ್ನು ಿಷಮಯಮಾಡಿತ್ತು. ಜನರಿಗೆ ಕುಡಿಯಲು ನೀರಿಲ್ಲದಂತಾಯಿತು. ಾಹತಾಳಲಾರದೆ ಕಾಳಿಂದಿ ನೀರು ಕುಡಿದವರು ಸತ್ತುಬಿದ್ದರು. ಆಗ ್ರೀ ಕೃಷ್ಣಪರಮಾತ್ಮ ತನ್ನ ಪ್ರಾಣದ ಮೇಲಣ ಹಂಗುತೊರೆದು, ಸರ್ಪದೊಂದಿಗೆ ಹೋರಾಡಿ, ಅದನ್ನು ಆಚೆಗಟ್ಟಲಿಲ್ಲವೇ ?—ನಮ್ಮಲ್ಲಿ ಸತ್ಯವಿದ್ದರೆ ಯಾವ ಕೃಷ್ಣಸರ್ಪವೂ ನಮ್ಮನ್ನು ಏನೂ ಮಾಡಲಾಗು ವುದಿಲ್ಲ." ಎಂದು ಸೊಸೆಗೆ ಉಪದೇಶಿಸಿದರು.

೮

ಶಾಂತೂ ಮದುವೆ ಏರ್ಪಾಟಿನ ಹೆಚ್ಚಿನ ಜವಾಬ್ದಾರಿ ಗೋದಮ್ಮ ನವರ ಮೇಲೇ ಬಿತ್ತು. ಶ್ರೀದೇವಿ ಶಾಂತನಿಗಿಂತ ಮೂರುವರ್ಷ ಚಿಕ್ಕವಳಾಗಿದ್ದರೂ, ಅವರವರಲ್ಲಿ ವಿಶೇಶ ಗೆಳೆತನವಿತ್ತು. ಶಾಂತು ಹೆಚ್ಚಿನವೇಳೆಯನ್ನು ಗೋದಮ್ಮನವರಮನೆಯಲ್ಲಿಯೇ ಕಳೆಯುತ್ತಿದ್ದಳು ಗೋದಮ್ಮ ತಮ್ಮ ಮಗಳು ಶ್ರೀದೇವಿಯನ್ನು ಪ್ರೀತಿಸುತ್ತಿದ್ದಂತೆಯೆ ಶಾಂತುವನ್ನೂ ಪ್ರೀತಿಸುತ್ತಿದ್ದರು.

ಶ್ರೀದೇವಿಗೆ 'ಅತ್ತಿಗೆ'ಯಾಗಿದ್ದ ರುಕ್ಮಿಣಿ ಶಾಂತುವಿಗೂ ಅತ್ತಿ ಯಾಗಿದ್ದಳು. ರುಕ್ಮಿಣಿ ಇವರಿಬ್ಬರಿಗಿಂತ ವಯಸ್ಸಿನಲ್ಲಿ ದೊಡ್ಡವಳಾ ದ್ದರೂ ಅವರ ಓರಗೆಯವಳಂತೆ ನಡೆದುಕೊಂಡು ಇಬ್ಬರ ಸಮಾ ಪ್ರೇಮ ಗೌರವಗಳಿಗೆ ಪಾತ್ರಳಾಗಿದ್ದಳು.

ಊಟ ವಿಶ್ರಾಂತಿ ಮುಗಿಸಿಕೊಂಡು ಗೋದಮ್ಮನವರು ರಮಾ ಬಾಯಿ ಮನೆಗೆ ಹೋದಕೂಡಲೆ ಶಾಂತು ರುಕ್ಮಿಣಿಯ ಬಳಿ ಓಡಿಬರುತ್ತಿದ್ದಳು. ರುಕ್ಮಿಣಿ ಅವಳನ್ನು ಕೂಡಿಸಿಕೊಂಡು ಹಾಡು, ಹ ಹೇಳಿಕೊಡುತ್ತಿದ್ದಳು.

ಶಾಂತು, ಶ್ರೀದೇವಿಯರನ್ನು ತಾಯಿಯಂತೆ ನಡೆಸಿಕೊಳ್ಳುತ್ತಿ ರುಕ್ಮಿಣಿಯನ್ನು ನೋಡಿ ರಮಾಬಾಯಿ, ಗೋದಮ್ಮ ಆಶ್ಚರ್ಯ ಪಡುತ್ತಿದ್ದರು.

"ನಿಮ್ಮ ಸೊಸೆ ತುಂಬ ಅಪರೂಪದ ವಸ್ತು ಕಣ್ರೀ ಗೋದಮ್ಮ. ಅವಳು ಹುಟ್ಟುವಾಗಲೇ ತಾಯಿಯಾಗಿಯೇ ಹುಟ್ಟಿದ್ದಾಳೆ. ರುಕ್ಮಿಣಿ ರುಕ್ಮಿಣಿಯೇ ಆಗಿದ್ದಾಳೆ."

"ನೀವು ಹೇಳುವುದು ನಿಜ ರಮಾಬಾಯಿ – ಅವಳು ನನಗೆ ಮಾಡುವ ಆದರ, ಶುಶ್ರೂಷೆ ನೋಡಿ ಒಮ್ಮೊಮ್ಮೆ 'ಯಾವದಾದರೂ ಜನ್ಮದಲ್ಲಿ ನಾನು ರುಕ್ಮಿಣಿಯ ಮಗಳಾಗಿದ್ದೆನೋ ಏನೋ' ಎಂದೆನಿಸುತ್ತದೆ. ಸ್ವಚ್ಛ ಭಂಗಾರದಂಥ ಮನಸ್ಸು – ವಯಸ್ಸುಮೀರಿದ ತಿಳುವಳಿಕೆ ಅವಳಿಗೇನೇ ಕೊಡಲಿ, ಮುಚ್ಚಿಟ್ಟದ್ದು ಶ್ರೀದೇವಿ ಬಂದ ಮೇಲೆ ಅವಳಿಗರ್ಧ ಕೊಟ್ಟೇ ತಿನ್ನುತ್ತಾಳೆ. ಅವಳ ವಯಸ್ಸಿನ ಮಕ್ಕಳು ಒಡವೆ, ವಸ್ತ್ರವೆಂದರೆ ಎಷ್ಟು ಆಸೆಪಡುತ್ತವೆ. ತನ್ನ ಒಡವೆಯನ್ನೆಲ್ಲಾ ಶ್ರೀದೇವಿಗಿಟ್ಟು, ತನ್ನದೇ ಒಳ್ಳೆಯ ಸೀರೆ ಉಡಿಸಿ, ತಲೆ ತುಂಬ ಹೂವು ಮುಡಿಸಿ 'ಅಮ್ಮ – ಶ್ರೀದೇವಿ ನೋಡಿ ಹೇಗಿದ್ದಾಳೆ. ಶ್ರೀದೇವಿಯನ್ನು ಶ್ರೀಮನ್ನಾರಾಯಣನಿಗೇ ಕೊಟ್ಟು ಮದುವೆ ಮಾಡಬೇಕಮ್ಮ' ಎನ್ನುತ್ತಾಳೆ. ಮೊನ್ನೆ ಎಂಥ ವಿಚಿತ್ರವಾಯಿತೂನ್ನಿ: – ದ್ವಾದಶಿ ಪಾರಣೇಗೆ ನಾನು ಹಯಗ್ರೀವ ಮಾಡಿದ್ದೆ. ರುಕ್ಮಿಣಿ ಅದನ್ನು ಕೈಯಿಂದಲೂ ಮುಟ್ಟಲಿಲ್ಲ. ನಾನು ಆಗ ಸುಮ್ಮನಿದ್ದು ಊಟವಾದ ಮೇಲೆ 'ಯಾಕೆ ರುಕ್ಕೂ ಹಯಗ್ರೀವ ತಿನ್ನಲೇ ಇಲ್ಲ. ನಿನಗೆ ಸೇರಲ್ಲವೇ ?' ಎಂದು ಕೇಳಿದೆ. ಅದಕ್ಕೆ ರುಕ್ಮಿಣಿ 'ಗಂಟಲಲ್ಲಿ ಇಳಿಯುಲ್ಲಮ್ಮ, ಅವರಿಗೆ ಹಯಗ್ರೀವ ಎಂದರೆ ತುಂಬ ಇಷ್ಟ. ಅವರನ್ನು ಬಿಟ್ಟು ಹೇಗೆ ತಿನ್ನಲಿ' ಎಂದಳು."

"ನಿಮ್ಮ ಭಾಗ್ಯಕ್ಕೆ ಎಣೆಯೇ ಇಲ್ರೀ ಗೋದಮ್ಮ" ಎಂದು ವಿಸ್ಮಯಗೊಂಡ ರಮಾಬಾಯಿ ನುಡಿದರು.

ಅಚ್ಯುತಪ್ಪನವರ ಮನೆಯ ಮದುವೆಗೆ ಬರಬೇಕೆಂದು ಜಯರಾಯರೂ ಮಗನಿಗೆ ಬರೆದರು. ನವರಾತ್ರಿ ರಜೆಗೆ ಮೂರೇ ದಿವಸ ಮೊದಲು ಲಗ್ನವಿದ್ದುದರಿಂದ ಕಾಲೇಜಿಗೆ 'ಚಕ್ಕರ್' ಹೊಡೆಯಲು ಮಾಧೂ ಹಿಂದೆ ಮುಂದೆ ನೋಡಲಿಲ್ಲ.

ಮದುವೆ ಮನೆಯಲ್ಲೆಲ್ಲಾ ಜಯರಾಯರು, ಮಾಧೂ, ಗೋದಮ್ಮ, ರುಕ್ಮಿಣಿ, ಶ್ರೀದೇವಿಯರ ಓಡಾಟವೇ ಓಡಾಟ.

ಮದುವೆ ಸಾಂಗವಾಗಿ ವಿಜೃಂಭಣೆಯಿಂದ ನೆರವೇರಿತು. ಬೀಗರ ಔತಣವಾದ ಮೇಲೆ ಎಲ್ಲರೂ ತಾಂಬೂಲ ಹಾಕಿಕೊಳ್ಳುತ್ತಾ ಕುಳಿತಿದ್ದಾಗ ಅಚ್ಯುತಪ್ಪನವರು, ಅತಿಥಿಗಳೊಬ್ಬರಿಗೆ ಜಯರಾಯರು, ಮಾಧೂ ಪರಿಚಯಮಾಡಿಕೊಟ್ಟರು. ಅತಿಥಿಗಳ ಪರಿಚಯ ಮಾಡಿಕೊಡುತ್ತಾ.

"ಇವರು ಕಾವೇರಿಪಟ್ಟಣದಲ್ಲಿ ಪ್ಲೀಡರಾಗಿರುವ ರಾಘವೇಂದ್ರ ರಾಯರು. ತುಂಬ ಖ್ಯಾತಿವಂತರು. ಕಾವೇರಿಪಟ್ಟಣದಲ್ಲಿ ಇವರ ಆಫೀಸೇ ದೊಡ್ಡ ಆಫೀಸು" ಎಂದರು.

ರಾಘವೇಂದ್ರರಾಯರು ಶ್ರೀಮದ್ಗಾಂಭೀರ್ಯದಿಂದ ಮಾಧೂ ಕಡೆ ತಿರುಗಿ

"ಎಫ್.ಎಗೆ ಕಟ್ಟಿದ್ದೀರಾ ?"

"ಇಲ್ಲ ಸರ್. ಇದೇ ಮೊದಲನೆಯ ವರ್ಷ – ಮುಂದಿನ ವರ್ಷ ಕಟ್ಟುತ್ತೇನೆ."

"ಮುಂದೇನು ಮಾಡಬೇಕೆಂದಿದ್ದೀರಿ ?"

"ಇನ್ನೂ ನಿರ್ಧಾರ ಮಾಡಿಲ್ಲ."

"ಪ್ಲೀಡರ್ ಪರೀಕ್ಷೆ ಪಾಸುಮಾಡಿಕೊಂಡು ಲಾಯರಾಗುವುದು ಒಳ್ಳೆಯದೆಂದು ಶಾಮರಾಯರು ಹೇಳುತ್ತಿದ್ದಾರೆ." ಎಂದು ಜಯ ರಾಯರು ಹೇಳಿದರು.

"ಪ್ಲೀಡರಾದರೆ ಒಳ್ಳೆಯದೇ ಆಯಿತಲ್ಲ. ರಾಘವೇಂದ್ರರಾಯರ ಆಫೀಸು ಇದ್ದೇ ಇದೆ." ಎಂದು ಅಚ್ಯುತಪ್ಪನವರು ಸರಳವಾಗಿ ನುಡಿದುಬಿಟ್ಟರು.

"ಮಾಧೂ ಪ್ಲೀಡರ್ ಪರೀಕ್ಷೆ ಪಾಸು ಮಾಡಿದರೆ ತಾವು ಆಶ್ರಯ ಕೊಟ್ಟು ಕಾಪಾಡಬೇಕು ಸ್ವಾಮಿ" ಎಂದು ಜಯರಾಯರು ನಿವೇದಿಸಿ ಕೊಂಡರು. ರಾಘವೇಂದ್ರರಾಯರು ತಮ್ಮ ಜರತಾರಿ ವಲ್ಲಿಯ ಅಂಚು

ನೀವುತ್ತ "ಆಗಲಿ - ನೋಡೋಣ" ಎಂದು ರಾಜರೀವಿಯಿಂದ ನುಡಿದರು.

ಮದುವೆ ಮುಗಿಯುವವೇಳೆಗೆ ನವರಾತ್ರಿ ರಜಾ ಆರಂಭವಾಗಿತ್ತು. ಮಾಧೂ ಬೆಂಗಳೂರಿಗೆ ಹೋಗಬೇಕಾಗಿರಲಿಲ್ಲ.

ನವರಾತ್ರಿ ರಜವನ್ನು ಊರಿನಲ್ಲಿ ಸುಖವಾಗಿ ಕಳೆಯಬಹುದೆಂದು ಮಾಧೂ ಹಾಕಿಕೊಂಡಿದ್ದ ಎಣಿಕೆ ತಿರುಕನ ಕನಸಾಯಿತು. ಮದುವೆಯಲ್ಲಿ ಆದ ಆಯಾಸದಿಂದಲೋ ಏನೋ ಜಯರಾಯರು, ವಾತ ನೋವಿನಿಂದ ಹಾಸಿಗೆ ಹಿಡಿದು ಮಲಗಿಬಿಟ್ಟರು.

ಡಾಕ್ಟರುಗಳ ಔಷಧದಿಂದ ಗುಣಕಂಡು ಬರುವುದರ ಬದಲು ರೋಗ ಉಲ್ಬಣಾವಸ್ಥೆಗೆ ಬಂದಿತು.

ರುಕ್ಮಿಣಿ ಧೈರ್ಯತಂದುಕೊಂಡು ತಾಯಿಗೆ ಕಾಗದ ಬರೆದು ಒಂದು ಎಣ್ಣೆ ತರಿಸಿಕೊಂಡಳು. ರಂಗಮ್ಮನವರು ಸೂಚಿಸಿದ್ದಂತೆ ಬೆನ್ನಿನಿಂದ ಕಾಲಿನವರೆಗೂ ಗಂಡನ ಕೈಯಲ್ಲಿ ಮಾವನವರಿಗೆ ಎಣ್ಣೆ ತಿಕ್ಕಿಸಿ ಬಿಸಿನೀರು ಹುಯ್ಯುತ್ತಿದ್ದಳು. ಎಂಟು ದಿವಸದ ಚಿಕಿತ್ಸೆಯಿಂದ ಸ್ವಲ್ಪ ಗುಣಕಂಡುಬಂದು, ಜಯರಾಯರಿಗೆ ಕಾಲು ಮಡಿಸಲು ಸಾಧ್ಯವಾಯಿತು.

ಮಾಧವನ ರಜಾ ಮುಗಿಯುತ್ತ ಬಂದಿತ್ತು. ಕಾಲೇಜು ಬಾಗಿಲೂ ತೆಗೆದಿತ್ತು. "ಅವನು ಹೆಚ್ಚುದಿನ ಚಿಕ್ಕರಾಯನಪುರದಲ್ಲಿ ನಿಲ್ಲುವ ಹಾಗಿರಲಿಲ್ಲ. ತಂದೆಯನ್ನು ಬಿಟ್ಟು ಹೋಗುವುದಕ್ಕೂ ಮನಸ್ಸು ಬಾರದು.

'ಬೆಂಗಳೂರಿಗೆ ಹೊರಡು' ಎಂದು ಜಯರಾಯರು ಎರಡು ಮೂರು ಬಾರಿ ಮಗನಿಗೆ ಹೇಳಿದರೂ, ಅವನು ಹೊರಡುವ ಚಿನ್ಹೆಯೇ ಕಂಡುಬರಲಿಲ್ಲ. ರುಕ್ಮಿಣಿ ಒಂದು ದಿನ ಗಂಡನಿಗೆ

"ಕಾಲೇಜು ಆರಂಭವಾಯಿತಲ್ಲವೇ ?" ಎಂದು ಕೇಳಿದಳು.

"ಕಾಲೇಜು ಬಾಗಿಲು ತೆಗೆದು ಮೂರುನಾಲ್ಕು ದಿವಸವಾಯಿತು."

"ನಿಮ್ಮ ಪಾಠ ಹೋಗುತ್ತಿದೆ ಎಂದು ಮಾವನವರು ಪೇಚಾಡಿ

ಕೊಳ್ಳುತ್ತಿದ್ದಾರೆ."

"ಈ ಸ್ಥಿತಿಯಲ್ಲಿ ಅಣ್ಣನನ್ನ ಬಿಟ್ಟು ಹೇಗೆ ಹೋಗಲಿ."

"ದೇವರಮೇಲೆ ಭಾರಹಾಕಿ ನೀವು ಪ್ರಯಾಣಮಾಡಿ ಎಲ್ಲವ ಅನುಕೂಲವಾಗುತ್ತದೆ."

"ಅಣ್ಣನಿಗೆ ಎಣ್ಣೆ ತಿಕ್ಕುವವರು ಯಾರು ?"

"ಅಮ್ಮ ಇದ್ದಾರೆ – ನಾನಿದ್ದೇನೆ."

"ನೀನು ಯಾವದೂಂತ ಮಾಡುತ್ತಿ ರುಕ್ಕೂ. ಅಮ್ಮ ಆರೋಗ್ಯವೂ ಚೆನ್ನಾಗಿಲ್ಲ. ಮನೆಗೆಲಸವೆಲ್ಲಾ ನಿನ್ನ ಮೇಲೇ ಬಿದ್ದಿದೆ.

"ನನ್ನ ಮನೆಗೆಲಸ ನಾನು ಮಾಡದೆ ಇನ್ನು ಯಾರು ಮಾ ಬೇಕು ?"

"ಬಡವನ ಕೈ ಹಿಡಿದುದರಿಂದ ಬಂದ ಲಾಭ ನೋಡಿದೆಯಾ ?

"ನೀವು ಹೀಗೆ ಮಾತನಾಡಿದರೆ ನನಗೆ ತುಂಬ ದುಃಖವಾಗುತ್ತದೆ ಅಮ್ಮನ ಹತ್ತಿರ ಎಂಥಾ ನಿಧಿ ಇದೆ ಬಲ್ಲಿರಾ ?"

"ಎಂಥಾ ನಿಧಿ.?"

"ದೈವಭಕ್ತಿ, ಭೂತದಯೆ, ಸತ್ಯಪ್ರೇಮ."

"ಈ ವೇದಾಂತ ನಿನಗೂ ಅಮ್ಮನಿಗೇ ಸರಿ – ನನಗೆ ಅರ್ಥ ವಾಗುವುದಿಲ್ಲ."

ರುಕ್ಮಿಣಿ ಗಂಡನ ಮಾತಿಗೆ ನಕ್ಕಳು.

ಮಾರನೆಯ ದಿನ ಬಲವಂತದಿಂದ ರುಕ್ಮಿಣಿ ಗಂಡನನ್ನು ಬೆಂಗಳೂರಿಗೆ ಹೊರಡಿಸಿ ಅವನು ಹೋದ ಮೇಲೆ ಗಟ್ಟಿಯಾಗಿ ಅಳುತ್ತ ಕುಳಿತಳು. ಗೋದಮ್ಮ ಬಂದು ಕಾರಣ ಕೇಳಿದಾಗ

"ನಾನೆಷ್ಟು ಕೆಟ್ಟವಳು ಅಮ್ಮ. ಬಲವಂತಮಾಡಿ ಅವರನ್ನು ಬೆಂಗಳೂರಿಗೆ ದೂಡಿದೆ."

"ತುಂಟ ಮಕ್ಕಳನ್ನು ಹತೋಟಿಗೆ ತರುವುದಕ್ಕೆ ತಾಯಿ ಒಮ್ಮೊಮ್ಮೆ ಅವರ ಮೇಲೆ ಕೈಮಾಡಬೇಕಾಗುತ್ತದೆ. ಇದರಿಂದ ತಾಯಿ ಮಕ್ಕಳ ಮೇಲೆ ಪ್ರೇಮವಿಲ್ಲ ಎಂದು ಭಾವಿಸಬಹುದೇ ?" ಎಂದ

ಗೋದಮ್ಮನವರು ಸೂಕ್ಷ್ಮವಾಗಿ ಉತ್ತರವಿತ್ತರು.

ರಂಗಮ್ಮನವರು ಕಳುಹಿಸಿದ್ದ ಎಣ್ಣೆಯಿಂದ ಅಲ್ಪಸ್ವಲ್ಪ ಗುಣ ಕಂಡು ಬಂದಿದ್ದರೂ, ಆದರಿಂದಲೇ ಜಯರಾಯರ ಬೇನೆ ನಿವೃತ್ತಿಯಾಗುವ ಸೂಚನೆ ಕಂಡು ಬರಲಿಲ್ಲ. ಇದು ಎಲ್ಲರ ಮನಸ್ಸಿಗೂ ವ್ಯಥೆಯನ್ನುಂಟುಮಾಡಿತು.

ಅಚ್ಯುತಪ್ಪನವರೂ ರಾಮಲಿಂಗಯ್ಯನವರೂ ತಮ್ಮ ಗುರುತಿನ ವೈದ್ಯರನ್ನೆಲ್ಲಾ ಕರೆದುಕೊಂಡು ಬಂದು ತೋರಿಸುತ್ತಿದ್ದರು. ನರಗಳ ಶಕ್ತಿ ಕಡಿಮೆಯಾಗಿದೆ, ಎಂದು ಒಬ್ಬರಂದರು; ಮೈಯಲ್ಲಿ ರಕ್ತವಿಲ್ಲ ಎಂದು ಇನ್ನೊಬ್ಬರಂದರು; ವಯಸ್ಸಿಗೆ ಯಾರೇನು ಮಾಡಲು ಸಾಧ್ಯ ಎಂದು ಮೂರನೆಯವರಂದರು. ಅಚ್ಯುತಪ್ಪನವರು ಒಂದು ದಿನ ತಡೆಯಲಾರದೆ

"ಚಳಿಗಾಲ, ಮಳೆಗಾಲ ನೋಡದೆ ತಣ್ಣೀರು ಸ್ನಾನಮಾಡಿ ಹನುಮಪ್ಪನ ಸೇವೆ ಮಾಡಿದುದರ ಫಲ "ಎಂದರು.

ಜಯರಾಯರಿಗೆ ಸಿಡಿಲು ಹೊಡೆದಂತಾಯಿತು.

"ನಿಮ್ಮ ದಮ್ಮಯ್ಯ ಹಾಗನ್ನಬೇಡಿ ಅಚ್ಯುತಪ್ಪನವರೇ. ಆ ನಮ್ಮಪ್ಪನ ಸೇವೆ, ನಾನೇನು ಮಾಡಬಲ್ಲೆ. ನನ್ನ ಪೂರ್ವಾರ್ಜಿತ ಕರ್ಮಕ್ಕೆ ಯಾರೇನು ಮಾಡಲು ಸಾಧ್ಯ. ಕರ್ಮ ಸವೆದರೆ ತಾನೇ ಎಲ್ಲಾ ಸರಿಹೋಗುತ್ತದೆ." ಎಂದು ಹೇಳುತ್ತಿದ್ದರು.

ಜಯರಾಯರ ಮನಸ್ಸನ್ನು ಯಾವದೋ ಕೊರಗು ಕೀಟದಂತೆ ಕೊರೆಯುತ್ತಿದೆಯೆಂಬುದನ್ನು ಸೂಕ್ಷ್ಮಮತಿಗಳಾದ ರಾಮಲಿಂಗಯ್ಯ ಕಂಡುಕೊಂಡು, ಒಂದು ದಿನ ತಾವೊಬ್ಬರೇ ಬಂದು ಜಯರಾಯರ ಜತೆ ಕುಳಿತರು.

"ಅಚ್ಯುತಪ್ಪನವರು ಬರಲಿಲ್ಲವೇ ?"

"ಬರಬಹುದು. ನಾನು ಬೇಕೆಂತಲೇ ಅವರಿಲ್ಲದಾಗ ಬಂದೆ. ನೀವು ನಮಗೆಲ್ಲಾ ತುಂಬ ಅನ್ಯಾಯಮಾಡುತ್ತಿದ್ದೀರಿ ಜಯರಾಯರೇ?"

"ಹರಿಹರಿ ; ಯಾಕಪ್ಪಾ ನಿಷ್ಕಾರಣವಾಗಿ ನನ್ನ ದೂರುತ್ತೀರಿ.?"

"ನಾವೆಲ್ಲಾ ನಿಮ್ಮ ಭಾಗಕ್ಕೆ ಜೀವಂತರಾಗಿದ್ದೇವೆಯೋ ಇಲ್ಲವೋ ಅಷ್ಟು ಹೇಳಿಬಿಡಿ."

"ಯಾಕಿವತ್ತು ವಿಚಿತ್ರವಾಗಿ ಮಾತನಾಡುತ್ತಿರುವಿ ರಾಮಲಿಂಗಪ್ಪ."

"ನಿಮ್ಮ ಮನಸ್ಸಿನಲ್ಲಿ ಏನು ಕೊರಗಿದೆ ಹೇಳಿ. ಕಷ್ಟ ಸು ಎರಡಕ್ಕೂ ಅನ್ವಯಿಸುತ್ತದೆ ಸ್ನೇಹಧರ್ಮ."

"ಒಂದು ವಿಷಯ ನಿಮ್ಮಿಂದ, ಅಚ್ಯುತಪ್ಪನವರಿಂದ ಮರೆಮಾ ನಾನು ಅಪರಾಧಿಯಾಗಿದ್ದೇನೆ."

"ನಾವು ಮೂವ್ವರೂ ಒಂದು ಸಂಸಾರದಹಾಗಿರುವಾಗ ನೀ ಮರೆಮಾಚಬೇಕಾದ ಪ್ರಮೇಯವಿರಲಿಲ್ಲ. ಈಗಲಾದರೂ ಹೇಳಿ."

"ಈ ವಿಷಯ ಒತ್ತಾಯಮಾಡಬೇಡಿ."

"ನೀವು ಹೇಳದಿದ್ದರೆ ನಾನು ಪುನಃ ನಿಮ್ಮ ಮುಖದರ್ಶ ಮಾಡುವುದಿಲ್ಲ."

ಜಯರಾಯರಿಗೆ ಕಷ್ಟಕ್ಕಿಟ್ಟುಕೊಂಡಿತು. ಉಭಯ ಸಂಕಟ ಸಿಕ್ಕಿಕೊಂಡು

"ಹೇಳಲೇಬೇಕೇ ?"

"ಹೇಳಲೇಬೇಕು."

"ಮಾಧೂನ ಕಾಲೇಜಿಗೆ ಸೇರಿಸಿದೆ. ಮಹಾರಾಯರು ಶಾ ರಾಯರು ಊಟ, ವಸತಿಯ ವ್ಯವಸ್ಥೆ ಮಾಡಿದರು. ಫೀಸು ಪುಸ್ತ ಮೇಲು ಖರ್ಚು ಎಲ್ಲಾ ಸೇರಿ ತಿಂಗಳಿಗೆ ಇಪ್ಪತ್ತು ರೂಪಾ ಯಾಗುತ್ತಿದೆ. ಹುಡುಗನನ್ನು ಕಾಲೇಜ್ ಬಿಡಿಸುವುದಕ್ಕೆ ಇಷ್ಟವಿ ನನಗೆ ಬರೋ ಮೂವತ್ತು ರೂಪಾಯಿ ಪಿಂಚನಿಯಲ್ಲಿ ಅವನಿಗೆ ಇಪ್ಪ ರೂಪಾಯಿ ಕೊಡೋದು ಹೇಗೆ ಎಂಬುದೇ ಚಿಂತೆಯಾಗಿದೆ. – ಇದ ಅಲ್ಲದೆ ಅವನ ಮದುವೆ ಪ್ರಸ್ತಕ್ಕೆ ತೆಗೆದ ಐದುನೂರು ರೂಪಾ ಸಾಲ ಹಾಗೇ ಉಳಿದಿದೆ."

"ಮುಂದಿನ ವರ್ಷಕ್ಕೆ ಮಾಧೂಗೆ ಎಫ್. ಎ. ಮುಗಿಯುತ್ತದೆ

"ಹೌದು ಅವನೊಂದು ಎಫ್. ಎ. ನಾದರೂ ಮಾಡಿಕೊಂಡರೆ ಮೂವತ್ತು ನಲವತ್ತು ರೂಪಾಯಿ ಕೆಲಸವಾದರೂ ಸಿಕ್ಕುತ್ತದೆ."

"ಅವನು ಎಫ್. ಎ. ಮುಗಿಸುವುದಕ್ಕೆ ಎಷ್ಟು ಬೇಕಾಗುತ್ತದೆ ರಾಯರೇ."

"ಇನ್ನೂ ಮುನ್ನೂರೈವತ್ತು – ನಾನೂರು ರೂಪಾಯಿ ಬೇಕಾಗ ಬಹುದು."

"ಇಷ್ಟು ಹಣ ನಾನು ತಂದು ಕೊಡುತ್ತೇನೆ – ನೀವು ನಿಶ್ಚಿಂತರಾಗಿರಿ."

"ತೀರಿಸುವ ಬಗೆ ?"

"ಹೇಗೋ ಆಗುತ್ತೆ – ನಿಮಗೆ ನಾನೂರು ರೂಪಾಯಿ ಕೊಟ್ಟರೆ ನನಗೇನೂ ಬಡತನ ಬರುವುದಿಲ್ಲ."

"ಇಷ್ಟು ಹಣ ಹೇಗೆ ತೆಗೆದುಕೊಳ್ಳಲಿ ಸ್ವಾಮಿ."

"ಸಾಲವೆಂದು ತೆಗೆದುಕೊಳ್ಳಿ, ದೇವರು ಅನುಕೂಲ ಕೊಟ್ಟಾಗ ತೀರಿಸಿ." ಎಂದು ಹೇಳಿದರು. ಅಚ್ಯುತಪ್ಪನವರಲ್ಲಿ ಕೂಡ ರಾಮಲಿಂಗಯ್ಯ ಈ ವಿಷಯ ಪ್ರಸ್ತಾಪಿಸಲಿಲ್ಲ.

ಜಯರಾಯರ ಮನಸ್ಸಿನಿಂದ ದೊಡ್ಡ ಭಾರ ಇಳುಹಿದಂತಾಯಿತು. ಅವರ ಆರೋಗ್ಯ ಮಂತ್ರಚಿಕಿತ್ಸೆಗೊಳಗಾದಂತೆ ಸುಧಾರಿಸುತ್ತ ಬಂದಿತು. ಈ ಸುಧಾರಣೆ ಡಿಸಂಬರ್ ತಿಂಗಳ ವೇಳೆಗೆ ಮಾಯವಾಯಿತು. ಚಳಿ ಸೇರಿದಂತೆ ಜಯರಾಯರ ವಾತಬೇನೆಯೂ ಉಲ್ಬಣಾವಸ್ಥೆಗೆ ಮುಟ್ಟುತ್ತಿತ್ತು.

ಮಾಧೂ ಕ್ರಿಸ್‌ಮಸ್ ರಜಕ್ಕೆ ಬಂದಿದ್ದವನು ರಜಾಮುಗಿಯು ತ್ತಲೇ ಬೆಂಗಳೂರಿಗೆ ಹೋದ.

ಒಂದು ಶುಕ್ರವಾರ ಬೆಳಗ್ಗೆ ಎದ್ದವರೇ ಗೋದೂಬಾಯಿ ತಲೆಗೆ ಎಣ್ಣೀರು ಸ್ನಾನ ಮಾಡಿದರು. ಮುತ್ತೈದೆಯರು ಬರುವ ಸೂಚನೆ ಕಂಡ ರುಕ್ಮಿಣಿ ಕೂಡಲೆ ಸ್ನಾನಮಾಡಿ ಪೂಜಾಸಾಮಗ್ರಿಗಳನ್ನು ಸಿದ್ಧಪಡಿಸಿದಳು. ಮುತ್ತೈದೆಯರು ಬಂದ ಕಾಲದಲ್ಲಿ, ರುಕ್ಮಿಣಿ ಗೋದೂ

ಬಾಯಿಯವರ ಮಗ್ಗಲುಬಿಟ್ಟು ಕದಲುತ್ತಿರಲಿಲ್ಲ.

ಅಂದು ಗೋದೂಬಾಯಿ ವಿಶೇಷ ಉದ್ರೇಕಗೊಂಡಿದ್ದರು. ಅವರ ಕಣ್ಣುಗಳಲ್ಲಿ ಕಿಡಿ ಚಿಮ್ಮುತ್ತಿತ್ತು. ರುಕ್ಮಿಣಿಯ ಮೈ ಆಗಾಗ ಕಂಪಿಸುತ್ತಿತ್ತು. ಇದ್ದಕ್ಕಿದ್ದಂತೆ ಗೋದೂಬಾಯಿ ಗಂಭೀರವಾ

"ರುಕ್ಮಿಣಿ" ಎಂದು ಕೂಗಿದರು.

"ತಾಯಿ........"

"ನಮ್ಮ ಕರ್ಮಕಾಲ ಕಳೆದುಹೋಯಿತು. ಇನ್ನು ನಾ ಹೊರಟು ಹೋಗುತ್ತೇವೆ."

"ತಾಯೀ........ ನೀವು ಇದ್ದುದು ನಮಗೇನೂ ಕಷ್ಟವಾಗಿರಲಿಲ್ಲ ನಮ್ಮಿಂದ ಏನಾದರೂ ಅಪಚಾರವಾಗಿದ್ದರೆ ಕ್ಷಮಿಸಬೇಕು."

"ಅಪಚಾರ! ತೌರುಮನೆಯಲ್ಲಿದ್ದ ಹಾಗೆ ಸುಖವಾಗಿದ್ದೆವು ನೀವೆಲ್ಲಾ ತುಂಬ ಆದರದಿಂದ ನಮ್ಮನ್ನು ನೋಡಿಕೊಂಡಿ ನಾವೆಲ್ಲಿದ್ದರೂ ನಿಮ್ಮ ಬೆನ್ನುಕಾಯುತ್ತೇವೆ – ಹೆದರ ಬೇಡಿ – ಕಷ್ಟಗ ಬರುತ್ತವೆ. ಅದನ್ನು ನಿವಾರಿಸಲು ಯಾರಿಗೂ ಸಾಧ್ಯವಿಲ್ಲ ಕಷ್ಟಗ ಕಳೆಯುವುದನ್ನೇ ಕಾದಿದ್ದು ನಾವು ಕೈತುಂಬ ಕೊಡುತ್ತೇವೆ. ಏನಾದರೂ ಕೇಳಿಕೊಳ್ಳಬೇಕೆಂದಿದ್ದರೆ ಬೇಗ ಕೇಳಿ ಬಿಡು – ನಮ ಹೊತ್ತಾಗುತ್ತದೆ, ನಾವು ಹೋಗಬೇಕು."

"ನನ್ನ ಮಾವನವರ ಆರೋಗ್ಯ ಯಾವಾಗ ಸರಿ ಹೋಗುತ್ತದೆ

ಮುತ್ತೈದೆಯರು ಕ್ಷಣಕಾಲ ಸುಮ್ಮನಿದ್ದು

"ಪ್ರಾಚೀನಕರ್ಮ ಅನುಭವಿಸಬೇಕು. ಅವರಿಗೇ ಇದೇ ಕೊನೆ ಜನ್ಮ."

ರುಕ್ಮಿಣಿಯ ಮನಸ್ಸಿನಿಂದ ಮತ್ತೊಂದು ಪ್ರಶ್ನೆ ಹೊರಬರ ತವಕಪಡುತ್ತಿತು. ಅದನ್ನು ಬಾಯಿಬಿಟ್ಟು ಕೇಳಲು ಅವಳಿಗೆ ಅಂಜಿ

ಮುತ್ತೈದೆಯರೇ "ಕೇಳು – ಹೆದರಬೇಡ – ನಿನ್ನ ಮನಸ್ಸಿನಲ್ಲೇ ನಾವು ಬಲ್ಲೆವು?" ಎಂದರು.

"ನನಗೆ ಮುತ್ತೈದೆ ಸಾವು........"

"ನಿನ್ನ ಆಸೆ ಖಂಡಿತ ಈಡೇರುತ್ತದೆ. ಎಲ್ಲರ ಕೈಯಲ್ಲೂ ಜಯ ಜಯ ಎನಿಸಿಕೊಂಡು ಹರಿದ್ರಾಕುಂಕುಮ ಪೂಜೆಮಾಡಿಸಿ ಕೊಂಡು ನೀನು ಹೊರಡುತ್ತೀ. ಜನ ನಿನ್ನ ದೇವತೆಯೆಂದು ಪೂಜೆ ಮಾಡುತ್ತಾರೆ. ಹುಟ್ಟಿದ ಮನೆ, ಸೇರಿದ ಮನೆ ಎರಡಕ್ಕೂ ಆಚಂದ್ರಾರ್ಕವಾದ ಕೀರ್ತಿತರುತ್ತೀ." ಎಂದು ಹೇಳಿ ಮುತ್ತೈದೆಯರು "ರುಕ್ಮಿಣಿ – ನಾವು ಹೋಗುವ ಕಡೆ 'ತೌರುಮನೆಗೆ ಹೋಗಿದ್ದಿರಲ್ಲಾ ಏನು ತಂದಿರಿ' ಎಂದು ಕೇಳುತ್ತಾರೆ, ಅದಕ್ಕೆ ನಾವೇನು ಉತ್ತರ ಹೇಳೋಣ."

"ತಾಯಿ – ನಾನು ನಿಮ್ಮ ಕಿರಿಯ ಮಗಳು. ನನಗೆ ಯಾವ ಲೋಕಾನುಭವವಿದೆ. ನೀವೇ ಹೇಳಿ. ನೀವು ಏನು ಹೇಳಿದರೂ ಶಿರಸಾವಹಿಸಿ ಮಾಡುತ್ತೇನೆ."

"ಸದ್ಗುಣಕ್ಕೆ ತಕ್ಕ ವಿನಯ ತುಂಬಿದೆ ನಿನ್ನಲ್ಲಿ ರುಕ್ಮಿಣಿ – ನಿನ್ನ ನೋಡಿ ನಮಗೆ ತುಂಬ ಸಂತೋಷವಾಗಿದೆ. ನಾಳೆ ಹನ್ನೆರಡು ಜನ ಮುತ್ತೈದೆಯರನ್ನು ಕರೆದು ಹೂವೀಳ್ಯ ಮಾಡು ನಮಗೆಲ್ಲಾ ತೃಪ್ತಿಯಾಗುತ್ತದೆ. ಮಾಡುತ್ತೀಯಾ ?"

"ಅವಶ್ಯಕವಾಗಿ ಮಾಡುತ್ತೇನೆ ತಾಯೀ."

"ಮನಸ್ಸಿನಲ್ಲಿ ಇನ್ನೂ ಏನೋ ಇಟ್ಟುಕೊಂಡಿದ್ದೀಯಲ್ಲ. ನೀನು ಹೀಗೆ ನಮ್ಮನ್ನು ಕಟ್ಟಿಹಾಕಿದರೆ ನಾವು ಹೋಗುವುದು ಹೇಗೆ ?"

"ತೌರುಮನೆಯಿಂದ ಯಾವ ತಾಯಿ, ಬೇಗ ಮಕ್ಕಳನ್ನು ಕಳಿಸಿಕೊಡುತ್ತಾಳೆ. ನಿಮಗೆ ಹೆಚ್ಚು ತೊಂದರೆ ಕೊಡುವುದಿಲ್ಲ – ನನ್ನ ಯಜಮಾನರು ಪರೀಕ್ಷೆಗೆ ಓದುತ್ತಿದ್ದಾರೆ........"

"ತೇರ್ಗಡೆಯಾಗುತ್ತೆ ಸುಮ್ಮನಿರು. ಜಯಭೇರಿ ಹೊಡೆಯುತ್ತಾನೆ ಇನ್ನು ನಾವು ಬರುತ್ತೇವೆ."

ಎಂದು ಹೇಳಿ ಹೊರಟುಹೋದರು.

ಗೋದಮ್ಮನವರು ಮೂರ್ಛಿತರಾಗಿ ಕೆಳಗೆ ಬಿದ್ದುಬಿಟ್ಟರು. ಅವರು ಮೂರ್ಛೆ ತಿಳಿದೆದ್ದ ಮೇಲೆ ರುಕ್ಮಿಣಿ ಎಲ್ಲ ಸಂಭಾಷಣೆಯನ್ನು

ನಿರೂಪಿಸಿದಳು. ಆದರೆ ಮಾವನವರ ಆರೋಗ್ಯದ ವಿಷಯ ತನ್ನ ಸಾವಿನ ವಿಷಯ ಮುತ್ತೈದೆಯರು ಹೇಳಿದ್ದುದನ್ನು ಅತ್ತೆಗೆ ತಿಳಿಸಲಿಲ್ಲ.

ಮುತ್ತೈದೆಯರು ಹೊರಟು ಹೋದ ಸಂಗತಿ ಕೇಳಿ ಗೋದಮ್ಮನವರು ತುಂಬ ಖಿನ್ನರಾದರು. 'ಇದು ಯಾವದಾದರೂ ವಿಪತ್ತಿನ ಪೂರ್ವ ಸೂಚನೆಯೇ' ಎಂದು ವಿಚಾರ ಮಾಡತೊಡಗಿದರು. ಅವರ ಮನಸ್ಸಿನಲ್ಲಿದ್ದುದನ್ನು ಗ್ರಹಿಸಿದ ರುಕ್ಮಿಣಿ 'ಏನೇ ಕಷ್ಟ ಬಂದರೂ ಹೆದರಬೇಡವೆಂದು ಮುತ್ತೈದೆಯರು ಆಜ್ಞೆ ಮಾಡಿದ್ದಾರಮ್ಮ' ಎಂದು ಹೇಳಿದಳು.

ಮಾರನೆಯ ದಿನದ ಹೂವೀಳ್ಯದ ಕಡೆಗೆ ಅತ್ತೆಯ ಲಕ್ಷ್ಯ ಸೆಳೆದು, ಅವರು ಚಿಂತೆಯನ್ನು ಬೇರೆ ಕಡೆ ಹೊರಳಿಸುವಂತೆ ಮಾಡಲು ರುಕ್ಮಿಣಿ

"ಹೂವೀಳ್ಯಕ್ಕೆ ಮುತ್ತೈದೆಯರನ್ನು ನಾವು ಈಗಲೇ ಕರೆದು ಬರಬೇಕಲ್ಲವೇ ?"

"ಹೌದು ಹೌದು – ನಡೀ ಇಬ್ಬರೂ ಹೋಗಿ ಬರೋಣ."

"ಹೂವೂ ಹಣ್ಣೂ ತರಬೇಕಾಗುತ್ತದೆ."

"ಮನೆಗೆ ಬರುವಾಗ ಅದನ್ನೂ ತಂದರಾಯಿತು. ರಮಾಬಾಯಿಯವರ ಮನೆಗೆ ಹೋದರೆ ಆಳು ಇರುತ್ತಾನೆ. ಅವರೇ ತರಿಸಿಕೊಡುತ್ತಾರೆ."

"ಮಾವನವರು ಒಬ್ಬರೇ ಇರಬೇಕಲ್ಲ."

ಹೇಗೂ ರಮಾಬಾಯಿಯವರ ಮನೆಗೆ ಹೋಗುತ್ತೇವಲ್ಲ. ಅಚ್ಯುತಪ್ಪನವರು ಮನೆಯಲ್ಲಿದ್ದರೆ ಇಲ್ಲಿಗೆ ಕಳಿಸಿಕೊಡೋಣ. ನಾವು ಬರುವವರೆಗೆ ಅವರು ಯಜಮಾನರ ಹತ್ತಿರ ಮಾತನಾಡುತ್ತ ಕುಳಿತಿರುತ್ತಾರೆ."

"ಹಾಗೇ ಆಗಲಿ." ಎಂದು ರುಕ್ಮಿಣಿ ಅತ್ತೆಯ ಜೊತೆ ಹೊರಟಳು.

೯

ಪರೀಕ್ಷೆ ಮುಗಿಸಿಕೊಂಡು ಬೇಸಿಗೆಯ ರಜಕ್ಕೆ ಮಾಧೂ ಊರು ಸೇರುವವೇಳೆಗೆ ಜಯರಾಯರು ಹಾಸಿಗೆಹಿಡಿದು ಮಲಗಿಬಿಟ್ಟಿದ್ದರು. ತಂದೆಯ ಪರಿಸ್ಥಿತಿ, ಸತತವಾಗಿ ಏರುತ್ತಿದ್ದ ಖರ್ಚುಗಳನ್ನು ನೋಡಿ ವಿದ್ಯೆಗೆ ತಿಲೋದಕ ಬಿಡುವುದೇ ಲೇಸೆಂದು ಮಾಧೂ ಭಾವಿಸಿದ. ಒಂದು ದಿನ ಜಯರಾಯರು ಮಗನನ್ನು ಹತ್ತಿರ ಕೂಡಿಸಿಕೊಂಡು ಕೇಳಿದರು.

"ಪರೀಕ್ಷೆಯಲ್ಲಿ ಹೇಗೆ ಮಾಡಿದ್ದೀ ಮಾಧೂ."

"ಚೆನ್ನಾಗಿ ಮಾಡಿದ್ದೇನಣ್ಣ. ಕ್ಲಾಸು ಪರೀಕ್ಷೆ."

"ಪಾಸಾಗಬಹುದಲ್ಲವೇ ?"

"ಅದರಲ್ಲಿ ಸಂದೇಹವೇ ಇಲ್ಲ."

"ಮುಂದಿನ ವರ್ಷ ಕಟ್ಟಬೇಕು."

"ಹೌದು....ನೀವು ಮನಸ್ಸಿಗೆ ಬೇಸರಪಟ್ಟುಕೊಳ್ಳದಿದ್ದರೆ ಒಂದು ವಿಷಯ ಹೇಳಬೇಕೆಂದಿದ್ದೇನೆ."

"ಹೇಳು."

"ಮುಂದಿನ ವರ್ಷ ನಾನು ಕಾಲೇಜಿಗೆ ಹೋಗುವುದಿಲ್ಲ."

"ಏಕೆ ?"

"ನಿಮ್ಮನ್ನು ಹೀಗೆ ಬಿಟ್ಟು ಕಾಲೇಜಿನಲ್ಲಿ ಹೇಗೆ ಓದಲಿ."

"ನೀನು ಬಂದು ಮನೆಯಲ್ಲಿ ಕುಳಿತುಕೊಂಡರೆ ನನ್ನ ಖಾಹಿಲೆ

ವಾಸಿಯಾಗುತ್ತದೆಯೇ ?"

"ನನ್ನ ಖರ್ಚಾದರೂ ಕಡಿಮೆಯಾಗುತ್ತದೆ."

"ನಿನ್ನ ಖರ್ಚಿಗೆ ನಾನು ವ್ಯವಸ್ಥೆ ಮಾಡಿದ್ದೇನೆ. ನೀನು ನಿರಾಂತ ವಾಗಿ ಓದು ಮುಂದುವರಿಸು. ಎಫ್. ಎ. ಮುಗಿಸಿಬಿಡು – ದೈವಾನ ಕೂಲ ಒಡಗಿದರೆ ಬಿ. ಎ.ಯನ್ನೂ ಮುಗಿಸುವಂತೆ."

"ನಿಮ್ಮ ಮಾತು ಮೀರಲಾರದೆ ಓದುತ್ತೇನೆ."

"ಮಾಧೂ ನನ್ನ ಮನಸ್ಸಿನ ದೊಡ್ಡ ಭಾರವೊಂದನ್ನು ಭಗವಂ ಇಳಿಸಲಿಲ್ಲ."

"ಅದು ಯಾವದು ?"

"ಶ್ರೀದೇವೀಗೆ ಮದುವೆ ಮಾಡಿಬಿಟ್ಟಿದ್ದರೆ ನಾನು ನಿಶ್ಚಿಂ ನಾಗಿರುತ್ತಿದ್ದೆ."

"ಅದಕ್ಕಿನ್ನೂ ಚಿಕ್ಕವಯಸ್ಸು. ನಾಲ್ಕು ವರ್ಷ ಬಿಟ ಮದುವೆ ಮಾಡಿದರಾಯಿತು."

"ಆ ಜವಾಬ್ದಾರಿಯನ್ನು ನಿನ್ನ ತಲೆಯ ಮೇಲೆ ಹೊರಸಿ ನಾನ ಹೋಗುತ್ತೇನೆ."

"ನೀವು ಹೀಗೆ ಮಾತಾಡಿ ನನ್ನನ್ನು ತುಂಬ ದುಃಖಕ್ಕೀಡ ಮಾಡುತ್ತೀರಿ."

"ಯಾರೂ ಶಾಶ್ವತರಲ್ಲ. ಹುಟ್ಟಿದ ಮೇಲೆ ಸಾಯಲೇಬೇಕ ಆದರೆ ನಮ್ಮ ಕರ್ತವ್ಯ ನಿರ್ವಹಿಸುವುದಕ್ಕೆ ಮುಂಚಿತವಾಗಿ ಕಣ ಮುಚ್ಚಬೇಕಲ್ಲ ಎಂದು ವ್ಯಥೆಪಡುತ್ತಿದ್ದೇನೆ."

"ದಯವಿಟ್ಟು ಹೀಗೆ ಮಾತನಾಡಬೇಡಿ."

"ನನಗೆ ಅಡ್ಡಿಮಾಡಬೇಡ ಮಾಧೂ....ಮನೆಯ ಹೆಚ ಖರ್ಚಿಗಾಗಿ ನಾನು ಸ್ವಲ್ಪ ಸಾಲಮಾಡಿದ್ದೇನೆ."

"ತಂದೆ ಮಾಡಿದ ಸಾಲ ತೀರಿಸುವುದು ಮಗನ ಕರ್ತವ್ಯವಲ್ಲವೇ

"ನಿನಗೆ ಇನ್ನೆಷ್ಟು ದಿವಸ ರಜ ಇದೆ."

"ಇನ್ನೂ ಎರಡು ವಾರವಿದೆ."

"ರುಕ್ಕೂನ ಕರೆದು ಕೊಂಡು ತುಮಕೂರಿಗೆ ಹೋಗಿಬಾ. ಈ ಮಗು ನಮ್ಮ ಮನೆಗೆ ಬಂದಕೂಡಲೆ ಸಂಸಾರ ತಾಪತ್ರಯವೇ ಆಗಿ ಹೋಯಿತು. ನಾಲ್ಕು ದಿವಸ ನೀವಿಬ್ಬರೂ ಸುಖವಾಗಿದ್ದು ಬನ್ನಿ."

"ನಿಮ್ಮನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗುವುದಕ್ಕೆ ಅವಳು ಒಪ್ಪುವುದಿಲ್ಲ."

"ನಿಮ್ಮ ತಾಯಿ ನೋಡಿಕೊಳ್ಳುತ್ತಾಳೆ – ಹೋಗಿ ಬನ್ನಿ."

ಮಾಧೂ ರುಕ್ಮಿಣಿಯನ್ನು ಕರೆದುಕೊಂಡು ತುಮಕೂರಿಗೆ ಹೋಗಲೇಬೇಕಾಗಿ ಬಂದಿತು.

ರುಕ್ಮಿಣಿ ತಾಯಿಗೆ ಮಾವನವರ ದೇಹಸ್ಥಿತಿಯನ್ನು ಕೂಲಂಕುಷವಾಗಿ ವರ್ಣಿಸಿದಳು. ರಂಗಮ್ಮನವರು ಪಥ್ಯ, ಅನುಪಾನ ಹೇಳಿ, ಬೇರೊಂದು ಎಣ್ಣೆ ಮಾಡಿಕೊಟ್ಟರು. ಒಂದೇವಾರದಲ್ಲಿ ರುಕ್ಮಿಣಿ, ಮಾಧೂ ಜತೆ ಹಿಂದಿರುಗಿ ಮಾವನವರ ಶಿಶ್ರೂಷೆ ಕೈಗೊಂಡಳು.

ಪರೀಕ್ಷೆಯ ರಿಸಲ್ಟ್ ನೋಡಿಕೊಂಡು ಮಾಧೂ ಬೆಂಗಳೂರಿಗೆ ಪ್ರಯಾಣ ಬೆಳಸಿದ ಮಗ ಈ ವರ್ಷ ಎಫ್. ಎ. ಪರೀಕ್ಷೆಗೆ ಕಟ್ಟುತ್ತಾನೆಂಬ ವಿಷಯ ಜಯರಾಯರಿಗೆ ಹೆಮ್ಮೆಯನ್ನುಂಟುಮಾಡಿತ್ತು

ವಾಯು ಸಂಬಂಧವಾದ ಯಾವ ಪದಾರ್ಥವನ್ನೂ ಜಯರಾಯರಿಗೆ ಕೊಡಕೂಡದೆಂದು ರಂಗಮ್ಮನವರು ವಿಧಿಸಿದ್ದರು. ಜಯರಾಯರಿಗೆ ಕಡಲೆಬೇಳೆ ಪದಾರ್ಥ – ಕೋಸುಂಬರಿ, ಪಾಯಸ, ಹಯಗ್ರೀವ ಕಂಡರೆ ಪಂಚಪ್ರಾಣ. ಕಾಯಿಲೆಯ ಉಪಟಳದಿಂದ ಬಾಯಿ ಚಾಪಲ್ಯವೂ ಹೆಚ್ಚಿತ್ತು. ಪ್ರತಿನಿತ್ಯ ಒಂದೊಂದು ಪದಾರ್ಥ ಬೇಡುತ್ತಿದ್ದರು. ಅವರ ಕಾಟ ತಡೆಯಲಾರದೆ ಒಂದು ದಿನ ಹೋದಮ್ಮ,

"ನಿಮ್ಮ ಚಿಕಿತ್ಸೆ ಜವಾಬ್ದಾರಿ ರುಕ್ಕೂ ಹೊತ್ತುಕೊಂಡಿದ್ದಾಳೆ. ಅವಳು 'ಬೇಡ' ಎಂದುದನ್ನು ನಾನು ಮಾಡಲು ಸಾಧ್ಯವಿಲ್ಲ. ನೀವು ಅವಳನ್ನೇ ಕೇಳಿ. ಅವಳು 'ಆಗಬಹುದು' ಎಂದರೆ, ಅಗತ್ಯವಾಗಿ ನಾನು ಮಾಡಿ ಹಾಕುತ್ತೇನೆ." ಎಂದರು. ಔಷಧ ಕುಡಿಸುವುದಕ್ಕೆ ಬಂದ

ರುಕ್ಮಿಣಿಯನ್ನು ಜಯರಾಯರು ದೈನ್ಯದಿಂದ

"ರುಕ್ಕಮ್ಮ, ನನಗಷ್ಟು ಹಯಗ್ರೀವ ಮಾಡಿಸಿ ಹಾಕಲ್ಲವೆ ತಾಯಿ." ಎಂದು ಬೇಡಿಕೊಂಡರು. ಮಾವನವರ ಕರುಣಾಜನಕ ಸ್ಥಿ ನೋಡಿ ರುಕ್ಮಿಣಿಗೆ ಅಪಾರವೇದನೆಯಾಯಿತು.

ಮಾವನವರ ಈಪ್ಸಿತವನ್ನು ಪೂರೈಸಿದರೆ ಕಾಹಿಲೆ ಪ್ರಕೋಪಕ ಹೋಗುತ್ತಿತ್ತು ; ಅವರ ಪ್ರಾರ್ಥನೆ ನಿರಾಕರಿಸಿದರೆ ಮನೋರೋಗಕ ಎಡೆಯಾಗುತ್ತಿತ್ತು. 'ಏನುಮಾಡಲಿ' ಎಂದು ರುಕ್ಮಿಣಿ ಒಂದೇಸಮ ನಾಗಿ ಯೋಚಿಸಿದಳು.

ಒಂದು ರಾತ್ರಿ ರುಕ್ಮಿಣಿಗೆ ಕನಸಾಯಿತು. ತೇಜಸ್ವಿಯಾದ ವೃ ಬ್ರಾಹ್ಮಣ. ಅವನು ಮೈತುಂಬ ಹೊದೆದಿದ್ದ ವಸ್ತ್ರದ ಮೇಲೆ ಶ್ರೀರಾ ತಾರಕಮಂತ್ರ. ಗಾಢ ನಿದ್ರೆಯಲ್ಲಿದ್ದ ರುಕ್ಮಿಣಿಯನ್ನು ಮೃದುವಾ ಎಚ್ಚರಗೊಳಿಸಿ "ನಾನು – ರುಕ್ಕಮ್ಮ ಹೆದರಬೇಡ – ಅಜ್ಜ."

ರುಕ್ಮಿಣಿ ವೃದ್ಧ ಬ್ರಾಹ್ಮಣನಿಗೆ ದೀರ್ಘದಂಡ ನಮಸ್ಕಾ ಮಾಡುತ್ತಾಳೆ.

"ಸಣ್ಣ ವಿಷಯಕ್ಕಾಗಿ ತುಂಬ ಯೋಚನೆ ಮಾಡಬಾರ ತಾಯೀ"

"ಏನು ಮಾಡಲಿ ತಾತಾ – ಮಾವನವರು ಹಯಗ್ರೀವ ಬೇ ಎಂದು ಮಕ್ಕಳ ಹಾಗೆ ಹಟಹಿಡಿದಿದ್ದಾರೆ."

"ಈಗ ನಿನ್ನ ಮಾವ ಮಗುವಲ್ಲದೆ ಇನ್ನೇನು ತಾಯಿ."

"ಏನು ಮಾಡಲಿ ತಾತಾ ?"

"ಮುತ್ತೈದೆಯರು ಏನು ಹೇಳಿದ್ದರು ಜ್ಞಾಪಿಸಿಕೋ."

"ಕಾಲ ಸಮೀಪಿಸಿತೇ ?"

"ಸಮೀಪಿಸುತ್ತಿದೆ. ಆ ಜೀವಕ್ಕೆ ಇನ್ನೂ ವಾಸನೆ ಕಾಡುತ್ತಿ ಅದೂ ಬೇಗ ಮುಗಿದು ಹೋಗಲಿ."

"ಅವರು ಕೇಳುತ್ತಿರುವುದನ್ನು ಕೊಡಲೇ ?"

"ಕೊಟ್ಟು ಬಿಡು. ಶ್ರೀರಾಮಚಂದ್ರಸ್ವಾಮಿಗೆ ಅರ್ಪಿ

...ಸಾದ ರೂಪವಾಗಿ ಕೊಡು."

"ನೀವು ಯಾರು ತಾತಾ ?"

ವೃದ್ಧ ನಸುನಕ್ಕು ಮಾಯವಾಗಿಬಿಟ್ಟ. ರುಕ್ಮಿಣಿ 'ಅಮ್ಮ' ...ಂದು ಚಿಟ್ಟನೆ ಚೀರಿದಳು. ಗೋದಮ್ಮ ಗಾಬರಿಯಾಗಿ ಓಡಿ ಬಂದು ...ಕ್ಮಿಣಿಯನ್ನು ಅಪ್ಪಿ ಹಿಡಿದರು. ರುಕ್ಮಿಣಿ ಗಡಗಡನೆ ನಡುಗುತ್ತಿದ್ದಳು. ...ವರಿನಿಂದ ಸ್ನಾನಮಾಡಿದಂತಾಗಿತ್ತು.

"ಏನಾಯಿತು ರುಕ್ಕೂ."

"ಕನಸಾಯಿತಮ್ಮ."

"ಕನಸಾದರೆ ಇಷ್ಟು ಹೆದರಿಕೊಳ್ಳುವುದೇ ? ಕೆಟ್ಟಕನಸೇ ?"

"ಇಲ್ಲಮ್ಮ. ತುಂಬ ಒಳ್ಳೆಯ ಕನಸು. ಒಬ್ಬರು ವೃದ್ಧ ...ಬ್ರಾಹ್ಮಣರು ಬಂದಿದ್ದರು. ನನ್ನನ್ನು ಪ್ರೀತಿಯಿಂದ ಮಾತನಾಡಿಸಿ ...ಮಾವನವರಿಗೆ ಹಯಗ್ರೀವ ಮಾಡಿಕೊಡು' ಎಂದು ಹೇಳಿದರು. ...ನೀವು ಯಾರು ತಾತಾ' ಎಂದು ಕೇಳಿದೆ, ವೃದ್ಧರು ನಸುನಕ್ಕು ...ಮಾಯವಾಗಿಬಿಟ್ಟರು. ಅವರು ಹೋದ ಕೂಡಲೆ ಕಗ್ಗತ್ತಲೆ ...ವಿದಂತಾಯಿತು."

ಗೋದಮ್ಮನವರು ಸೊಸೆಯನ್ನಪ್ಪಿ, ಮುದ್ದಾಡಿ, ಆನಂದ ...ಬಾಷ್ಪ ಸುರಿಸುತ್ತ,

"ಎಷ್ಟು ಪುಣ್ಯಶಾಲಿಯೇಮ್ಮ ನೀನು. ಪ್ರಾಣದೇವರು ಬಂದು ...ನಗೆ ದರ್ಶನವಿತ್ತರಲ್ಲಾ."

"ಆ ವೃದ್ಧರು ಪ್ರಾಣದೇವರೇ ! ಇರಬೇಕಮ್ಮ - ಅವರು ...ಹೊದೆದಿದ್ದ ವಸ್ತ್ರದ ಮೇಲೆಲ್ಲಾ 'ಶ್ರೀರಾಮತಾರಕಮಂತ್ರ'ವಿತ್ತು."

ಗೋದಮ್ಮನವರಿಗೆ ಹೋದ ಜೀವ ಬಂದಂತಾಯಿತು. ಬೆಳಿಗ್ಗೆ ...ದ್ದ ಕೂಡಲೆ ಶ್ರೀರಾಮದೇವರಪೂಜೆ ಮಾಡಿ, ಹಯಗ್ರೀವದ ನೇವೇದ್ಯ ...ಮಾಡಿದರು.

ಜಪುರಾಯರು ಪ್ರಸಾದ ರೂಪವಾಗಿ ಹಯಗ್ರೀವ ಸ್ವೀಕರಿ...ದರು. ಮಾವನವರು ಹಯಗ್ರೀವ ತಿನ್ನುತ್ತಿದ್ದುದನ್ನು ನೋಡುತ್ತಿದ್ದ

ರುಕ್ಮಿಣಿಗೆ ಕರುಳು ಕತ್ತರಿಸುತ್ತಿತ್ತು.

ಹಯಗ್ರೀವ ಸೇವನೆಯಿಂದ ಜಯರಾಯರಿಗೆ ಯಾ ಹಿಂಸೆಯೂ ಆಗಲಿಲ್ಲ. ಅಂದಿನಿಂದ ಅವರು ಅಪಥ್ಯ ಪದಾರ್ಥಗಳನ ಕೇಳುವುದನ್ನೂ ಬಿಟ್ಟುಬಿಟ್ಟರು. ಇದೆಲ್ಲಾ ಪ್ರಾಣದೇವರ ಪ್ರಭಾ ಎಂದು ರುಕ್ಮಿಣಿ ದೃಢವಾಗಿ ನಂಬಿದಳು.

೧೦

ಜಯರಾಯರ ಆರೋಗ್ಯ 'ಹಾವು ಸಾಯಬಾರದು, ಕೋಲು ಮುರಿಯಬಾರದು' ಎನ್ನುವ ಗಾದೆಯಂತಾಗಿತ್ತು. ನಾಲ್ಕು ದಿವಸ ಗುಣ ಕಂಡುಬರುತ್ತಿತ್ತು. ಹಸಿವಾಗುತ್ತಿತ್ತು. ಚೆನ್ನಾಗಿ ನಿದ್ರೆಯೂ ಬರುತ್ತಿತ್ತು. ಅದರ ಪ್ರತಿಕ್ರಿಯೆ ಶೋಚನೀಯವಾಗುತ್ತಿತ್ತು. ಮಲ ಬದ್ಧತೆಯುಂಟಾಗಿ, ನರ ನಾಡಿಗಳ ಸೆಳೆತವುಂಟಾಗುತ್ತಿತ್ತು. ಯಾತನೆ ಯಿಂದಾಗಿ, ರಾಯರ ಮುಖ ಕಪ್ಪಿಡುತ್ತಿತ್ತು. ಅಚ್ಯುತಪ್ಪನವರೂ, ರಾಮಲಿಂಗಯ್ಯನವರೂ ತಪ್ಪದೆ ಬಂದು ಧೈರ್ಯ ಹೇಳುತ್ತಿದ್ದರು.

ಗೋದಮ್ಮನವರಿಗೆ ಅರೆಹುಚ್ಚು ಹಿಡಿದಂತಾಗಿತ್ತು. ಪತಿಶಿಶ್ರೂಷೆ ಒಂದುಬಿಟ್ಟು ಅವರಿಗೆ ಏನೂ ಬೇಡವಾಯಿತು. ಅನೇಕ ದಿನಗಳು ಶ್ರೀದೇವಿಯನ್ನು ಮಾತನಾಡಿಸುವುದಕ್ಕೂ ಅವರು ಹೋಗುತ್ತಿರಲಿಲ್ಲ. ತಮ್ಮ ಕುಂಕುಮಸೌಭಾಗ್ಯಕ್ಕೂ ಊನ ಬರುತ್ತಿದೆಯೇನೋ ಎಂದು ಅವರು ಹೆದರಿದರು.

ಅತ್ತೆಗೆ ಧೈರ್ಯ ಹೇಳುವುದು, ಮಾವನವರಿಗೆ ಔಷಧ ಪಥ್ಯ ನೋಡಿಕೊಳ್ಳುವುದು, ಶ್ರೀದೇವಿಯ ಯೋಗಕ್ಷೇಮ ವಿಚಾರಿಸಿ ಕೊಳ್ಳುವುದು, ಗಂಡನಿಗೆ ಪ್ರತಿನಿತ್ಯ ಮಾವನವರ ಆರೋಗ್ಯದ ಬಗ್ಗೆ ಕಾಗದಬರೆಯುವುದು ಎಲ್ಲವನ್ನೂ ಸಹನೆಯಿಂದ ರುಕ್ಮಿಣಿ ನಿರ್ವಹಿಸು ತ್ತಿದ್ದಳು.

ಕ್ರಿಸ್‌ಮಸ್ ರಜಕ್ಕೆ ಮಾಧೂ ಬರುವವೇಳೆಗೆ ರಾಯರಿಗೆ ಅಸ್ತವ್ಯಸ್ತವಾಗಿತ್ತು. 'ಮಾಧೂ ಬೆಂಗಳೂರಿಗೆ ಹೋಗುವುದು ಬೇಡ' ಎಂದು ಗೋದಮ್ಮನವರು ಅಭಿಪ್ರಾಯ ವ್ಯಕ್ತಮಾಡಿದರು. ಜಯರಾಯರು ಹೆಂಡತಿಯನ್ನು ಗದರಿಸಿಕೊಂಡು, ಮಗನನ್ನು ಬೆಂಗಳೂರಿಗೆ ಕಳಿಸಿಕೊಟ್ಟರು.

ಮಾಧೂ ಬೆಂಗಳೂರು ಸೇರಿದ ಹತ್ತೇದಿವಸಗಳಲ್ಲಿ ಅಚ್ಯುತಪ್ಪನವರಿಂದ ಟೆಲಿಗ್ರಾಂ ಬಂದಿತು. ಅಂದೇ ಮಾಧೂ ಚಿಕ್ಕರಾಯನಪುರಕ್ಕೆ ಪ್ರಯಾಣ ಮಾಡಿದ.

ಮಾಧೂ ಬರುವವೇಳೆಗೆ ರಾಯರಿಗೆ ಉತ್ಕ್ರಮಣಾವಸ್ಥೆಯುಂಟಾಗಿತ್ತು. ಮಗನನ್ನು ನೋಡಲೆಂದೇ ಜೀವ 'ಕುಟು ಕುಟು' ಎನ್ನುತ್ತಿತ್ತು.

ರಾಯರು ಮಗನ ಕೈಹಿಡಿದುಕೊಂಡು 'ಗೊಳೋ' ಎಂದು ಅತ್ತುಬಿಟ್ಟರು.

ಸಮೀಪದಲ್ಲಿದ್ದ ಅಚ್ಯುತಪ್ಪನವರು

"ಯಾಕೆ ಯೋಚನೆ ಮಾಡುತ್ತೀರಿ – ಮಗ ಬುದ್ಧಿವಂತ, ಸತ್ಯವಂತ. ಎಲ್ಲವನ್ನೂ ದಕ್ಷತೆಯಿಂದ ನಿರ್ವಹಿಸುತ್ತಾನೆ" ಎಂದರು.

ರಾಯರ ಧ್ವನಿ ಕುಗ್ಗುತ್ತಿತ್ತು. ಕ್ಷೀಣಸ್ವರದಲ್ಲಿ "ಸಾಲ........ ಸಾಲ........ಮಾಧೂ. ಎಫ್.ಎ........ಎಫ್ಎ........ ಅನಾಥರು........ ....ಅನಾಥರು........" ಎಂದರು.

ರಾಮಲಿಂಗಯ್ಯನವರು ಸ್ವಲ್ಪ ಗಟ್ಟಿಯಾಗಿ

"ನಿಮ್ಮ ಸಾಲ ತೀರಿಸುವ ಯೋಗ್ಯತೆ ಮಾಧೂಗೆ ಇಲ್ಲವೇ ? ಏನು ಘನ ವಿಷಯವೆಂದು ಇಷ್ಟು ಯೋಚನೆಮಾಡುತ್ತೀರಿ." ಎಂದು ಗದರಿಸಿಕೊಂಡರು.

ಜಯರಾಯರಿಗೆ ತಾತ್ಕಾಲಿಕ ಶಾಂತಿಯೊದಗಿತು. ಕಣ್ಣುಗಳನ್ನರಳಿಸಿ ಎಲ್ಲರನ್ನೂ ನೋಡುತ್ತಾ ರುಕ್ಮಿಣಿಯ ಮೇಲೆ ದೃಷ್ಟಿನೆಟ್ಟರು.

ಸ್ವಲ್ಪ ದೂರದಲ್ಲಿ ನಿಂತಿದ್ದ ರುಕ್ಮಿಣಿಯನ್ನು, ಅಚ್ಯುತಪ್ಪನವರ

ಹತ್ತಿರ ಕರೆದು

"ನಿನ್ನ ಮಾವನವರು ನಿನಗೆ ಏನೋ ಹೇಳುವುದಕ್ಕೆ ಹವಣಿಸುತ್ತಿದ್ದಾರೆ. ಹತ್ತಿರ ಬಾಮ್ಮಾ" ಎಂದು ಕರೆದರು.

ರುಕ್ಮಿಣಿ ಮಾವನವರ ಸಮೀಪಕ್ಕೆ ಬಂದು ಕುಳಿತಳು. ವಿಜಯರಾಯರು ಮೆಲ್ಲನೆ ಕೈಗಳನ್ನೆತ್ತಿ – ಜೋಡಿಸಿ –

"ತಾಯಿ,........ ತಾಯಿ,........ ಸೀತಮ್ಮ" ಎಂದರು.

ಕೈಗಳು ಸೋತು ಹಾಸಿಗೆಯ ಮೇಲೆ ಬಿದ್ದವು. ಕಣ್ಣುಗಳು ಮುಚ್ಚಿದವು

ಪತಿಯ ಮುಖ, ಕೈ ಮುಟ್ಟಿನೋಡಿ ಗೋದಮ್ಮನವರು ಚೀರುತ್ತಾ ಮೂರ್ಛಿತರಾದರು.

—ಅಚ್ಚುತಪ್ಪನವರೇ ನಿಂತುಕೊಂಡು ಕರ್ಮಾಂತರವನ್ನು ಸಾಂಗವಾಗಿ ಮುಗಿಸಿದರು. ರಮಾಬಾಯಿ, ಇಂದಿರಾಬಾಯಿ, ಗೋದಮ್ಮ, ರುಕ್ಮಿಣಿಯನ್ನು ಸಂತೈಸಲೆತ್ನಿಸಿದರು.

ವೈಕುಂಠ ಸಮಾರಾಧನೆಯೂ ಮುಗಿಯಿತು. ಅಚ್ಯುತಪ್ಪನವರು, ಮಾಧುವನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ

"ದುಃಖಿಸಿ ಏನೂ ಪ್ರಯೋಜನವಿಲ್ಲ ಮಾಧೂ. ಮುಂದಿನ ಕರ್ತವ್ಯ ಆಲೋಚಿಸು. ನೀನು ಎಷ್ಟು ದುಃಖಿಸಿದರೂ ಹೋದ ಜೀವ ಮರಳಿ ಬರುವುದಿಲ್ಲ."

"ನನಗೆ ದಿಕ್ಕೇ ತೋರದ ಹಾಗಾಗಿದೆ ಮಾವಯ್ಯ."

"ಹೌದು ಹಾಗಾಗುತ್ತದೆ."

"ಅಣ್ಣ 'ಸಾಲ – ಸಾಲ' ಎಂದರಲ್ಲ. ಅದರ ವಿಷಯ ನಿಮಗೇನಾದರೂ ಗೊತ್ತಿದೆಯೋ?"

"ಅದೇನೂ ಮಹತ್ತ್ವದ ವಿಷಯವಲ್ಲ. ಈಗ ಆ ವಿಷಯ ಯೋಚನೆಮಾಡಿ ನೀನು ತಲೆಕೆಡಿಸಿಕೊಳ್ಳಬೇಡ. ನಾಳೆಯೇ ಬೆಂಗಳೂರಿಗೆ ಪ್ರಯಾಣಮಾಡಿ ನಿನ್ನ ಓದು ಮುಂದುವರಿಸು– ಪರೀಕ್ಷೆಗೆ ಇನ್ನು ಎರಡೇ ತಿಂಗಳು ಉಳಿದಿದೆಯಲ್ಲವೇ?"

"ಓದು ಬೇಡ ಏನೂ ಬೇಡ. ಇಲ್ಲಿಯೇ ಇದ್ದು ಯಾ
ದಾದರೂ ಕೆಲಸ ಹುಡುಕುತ್ತೇನೆ."

"ನಿಮ್ಮ ತಂದೆ 'ಎಫ್. ಎ. – ಎಫ್. ಎ.' ಎಂದು ಜಪಿಸಿದ್ದ
ನಿನಗೂ ಕೇಳಿಸತಲ್ಲವೇ ?"

"ಕೇಳಿಸಿತು. ನಾನು ಓದುವುದಕ್ಕೆ ಬೆಂಗಳೂರಿಗೆ ಹೋದ
ಇಲ್ಲಿ ಮನೆಯ ಗತಿ !"

"ಎರಡು ತಿಂಗಳು ಹೇಗೋ ನಡೆಯುತ್ತದೆ – ಯೋಚನೆ ಮಾ
ಬೇಡ. ನಾನೂ, ರಾಮುಲಿಂಗಯ್ಯ ನಿಮ್ಮ ತಂದೆ ಮೂರು ದೇ
ಒಂದು ಆತ್ಮ ಇದ್ದ ಹಾಗಿದ್ದೆವು...."

"ಅದರಲ್ಲಿ ಸಂದೇಹವೇನು ?"

"ಅವರ ಆತ್ಮದ ಒಂದೇ ಅಂಶ ವೈಕುಂಠಕ್ಕೆ ಹೋಗಿರುವುದ
– ಇನ್ನೂ ಎರಡು ಅಂಶ ಇಲ್ಲೇ ಉಳಿದಿದೆ."

"ಇಷ್ಟು ದುಃಖ ತುಂಬಿಕೊಂಡು ನಾನು ಬೆಂಗಳೂರಿಗೆ ಹೋದ
ವಿದ್ಯೆ ಹತ್ತುತ್ತದೆಯೇ – ನನಗೆ ಪಾಸಾಗುವ ಸಂಭವವಿದೆಯೇ ?"

"ವಿದ್ಯೆವೂ ಹತ್ತುತ್ತದೆ – ಪಾಸೂ ಆಗುತ್ತದೆ. ನಿಮ್ಮ ತಂ
ಪರಿಶುದ್ಧ ವ್ಯಕ್ತಿ. ಒಂದು ಹುಲು ಪ್ರಾಣಿಯ ಮನಸ್ಸನ್ನೂ ಅವರು ತಮ
ಜೀವಮಾನದಲ್ಲಿ ನೋಯಿಸಿಲ್ಲ. ಬಡತನವನ್ನಪ್ಪಿಕೊಂಡು ಭಗವಂತ
ಸೇವೆಗೆ ಜೀವ ಸವೆಸಿದರು. ನಾನು ಬಲ್ಲಂತೆ ಅವರು ಭಗವಂತನನ್
ಎಂದೂ ಯಾವದಕ್ಕೂ ಬೇಡಿದವರಲ್ಲ – ಕೊನೆಯಗಳಿಗೆಯಲ್ಲಿ ಮಾತ್
ನಿನಗೆ ಎಫ್. ಎ. ಆಗಬೇಕೆಂದು ಬಯಸಿದರು. ಭಗವಂ
ನಿಷ್ಕರುಣಿಯೇ – ರಾಯರ ಸಣ್ಣ ಬಯಕೆಯೊಂದನ್ನು ಅವ
ಪೂರೈಸದಿರುತ್ತಾನೆಯೇ ?"

"ನನ್ನನ್ನು ಪರೀಕ್ಷಿಸುತ್ತಿರುವಿರಿ !"

"ನಾನು ಪರೀಕ್ಷಿಸುತ್ತಿಲ್ಲ ಮಾಧೂ – ದೇವರೇ ಪರಿಕ್ಷಿಸುತ್ತಿದ್ದಾ
ಒಂದು ಪರೀಕ್ಷೆಯಲ್ಲಿ ನೀನು ಅಪಜಯ ಹೊಂದಿದರೆ ಮುಂದೆ ಯಾ
ಪರೀಕ್ಷೆಗೂ ಕೂಡುವಂತಿಲ್ಲ. ನೀನು ಬೆಂಗಳೂರಿಗೆ ಹೋಗಿ ಪರೀಕ್ಷೆ

ಕೊಡುವುದು ಅನಿವಾರ್ಯ."

"ದೊಡ್ಡವರು ನಿಮ್ಮ ಮಾತು ತೆಗೆದು ಹಾಕಲಾರೆ. ಆಗಲಿ ಹೋಗುತ್ತೇನೆ." ಎಂದು ಒಪ್ಪಿಕೊಂಡು ಬೆಂಗಳೂರಿಗೆ ಪ್ರಯಾಣ ಮಾಡಿದ.

ಗೋದಮ್ಮನವರಿಗೆ ಯಾರೂ ಸಮಾಧಾನ ಹೇಳಲು ಸಾಧ್ಯವಾಗ ಲಿಲ್ಲ. ಅವರ ಪರಿಸ್ಥಿತಿ ನೋಡಲಾಗದೆ ರಮಾಬಾಯಿಯವರೂ ಕಣ್ಣೀರಿಡುತ್ತಿದ್ದರು.

'ಅತ್ತೆಗೆ ಮತಿಭ್ರಾಂತಿಯಾಗಿರಬಹುದೇ' ಎಂದು ರುಕ್ಮಿಣಿ ಒಮ್ಮೊಮ್ಮೆ ಯೋಚಿಸುವಳು. ಮತಿಭ್ರಾಂತಿಯ ಎಲ್ಲ ಲಕ್ಷಣಗಳೂ ಗೋದಮ್ಮನವರಲ್ಲಿ ಸ್ಪಷ್ಟವಾಗಿ ಮೂಡಿದ್ದವು. ಒಂದೊಂದು ದಿನ ಬೆಳಿಗ್ಗೆಯಿಂದ ಸಂಜೆಯವರೆಗೂ ನೂರಾರು ಬಾರಿ ಸ್ನಾನ ಮಾಡುವರು; ಪೂಜೆಗೆ ಕುಳಿತರೂ ಹಾಗೆಯೇ, ಬೆಳಿಗ್ಗೆ ಆರಂಭವಾದ ಪೂಜೆ ಸಂಜೆಯಾದರೂ ಮುಗಿಯುತ್ತಿರಲಿಲ್ಲ. ಅಳುವುದಕ್ಕೆ ಉಪಕ್ರಮಿಸಿದರೂ ಕೊನೆಮೊದಲಿಲ್ಲ; ನಗುವುದೂ ಹಾಗೆಯೇ. ರಮಾಬಾಯಿ ಅಥವಾ ಇಂದಿರಾಬಾಯಿ ಯಾರಾದರೊಬ್ಬರು ರುಕ್ಮಿಣಿಯ ನೆರವಿಗಿರುತ್ತಿದ್ದರು.

ಒಂದು ದಿನ ಪೂಜೆಮಾಡುತ್ತ ಗೋದಮ್ಮ ತಮ್ಮಷ್ಟಕ್ಕೆ ತಾವೇ ಮಾತನಾಡಿಕೊಳ್ಳುತ್ತಿದ್ದರು.

"ಮುತ್ತೈದೆಯರು ಹೊರಟು ಹೋದಾಗಲೇ ನನಗೆ ಗೊತ್ತು. ಈ ಮನೆಗೆ ಯಾವುದೋ ಭಯಂಕರ ವಿಪತ್ತು ಕಾದಿದೆ ಎನಿಸಿತು."

ಎನ್ನುತ್ತಾ ಸೊಸೆಯ ಕಡೆಗೆ ತಿರುಗಿ

"ರುಕ್ಕೂ-ಮುತ್ತೈದೆಯರು ಏನು ಹೇಳಿದರು?"

"ಎಂದಮ್ಮ?"

"ಅವರು – ಹೊರಟು ಹೋಗುವ ದಿನ."

"ಮಾವನವರಿಗೆ ಯಾವಾಗ ಗುಣವಾಗುತ್ತದೆಂದು ನಾನೇ ಕೇಳಿದೆ. ಅದಕ್ಕವರು ಉತ್ತರ ಕೊಡಲಿಲ್ಲ."

"ನನಗೆ ಈ ವಿಷಯ ನೀನು ಹೇಳಲಿಲ್ಲ."

"ಯಾವ ಸಂತೋಷದ ಸುದ್ದಿ ಎಂದು ತಿಳಿಸಲಮ್ಮ."

"ಒಳ್ಳೆಯದು ಮಾಡಿದೆ – ಹೋಗಲಿಬಿಡು. ನಾನು ತಿಳಿದ ತಾನೆ ಏನು ಮಾಡಬಹುದಾಗಿತ್ತು."

"ಅಮ್ಮ – ಊಟಕ್ಕೇಳಿ."

"ನನ್ನ ಊಟ ಅವರು ಕಿತ್ತುಕೊಂಡು ಹೊರಟುಹೋದರು."

"ಅವರು ಎಲ್ಲಿಗೂ ಹೋಗಿಲ್ಲ. ನಿಮ್ಮಲ್ಲಿಯೇ ಸೇರಿಕೊಂಡ 'ಹಸಿವಾಗುತ್ತಿದೆ' ಎನ್ನುತ್ತಿದ್ದಾರೆ.

ಹಾಗೇನು – ಬಡಿಸು." ಎಂದು ಪೂಜೆಯನ್ನು ಅರ್ಧಕ ಬಿಟ್ಟು ಊಟಕ್ಕೆ ಏಳುತ್ತಿದ್ದರು. ಅಂಥ ವಿಕ್ಷಿಪ್ತಸ್ಥಿತಿಯಲ್ಲಿಯ ಸೊಸೆಯ ಮಾತು ಮೀರುತ್ತಿರಲಿಲ್ಲ.

ಗೋದಮ್ಮ ಪೂಜೆಗೆ ಕೂಡದಿದ್ದ ದಿವಸ, ರುಕ್ಮಿಣಿ ಅವರ ಕೈ ಹೂವಿತ್ತು ದೇವರ ಮನೆಗೆ ಕರೆದೊಯ್ಯುತ್ತಿದ್ದಳು. ಕೈಯಲ್ಲಿ ಹೂಹಿಡಿ ಗೋದಮ್ಮ ಶಿಲಾವಿಗ್ರಹದಂತೆ ನಿಂತುಬಿಡುತ್ತಿದ್ದರು. ರುಕ್ಮಿಣಿ ಮೆಲ್ಲ ಎಚ್ಚರಿಸಿ

"ಅಮ್ಮ – ದೇವರಿಗೆ ಹೂ ಅರ್ಪಿಸಿ. ಎಲೆ ಹಾಕಿದ್ದೇನೆ ಬಡಿಸುತ್ತೇನೆ." ಎಂದರೆ ಗೋದಮ್ಮ ಅವಳಕಡೆ ತಿರುಗಿ ಮುಗುಳ್ನ ನಕ್ಕು ನೀರು, ಹೂವನ್ನು ಅವಳ ಪಾದದಮೇಲೆ ಹಾಕಿ ಸಾಷ್ಟಾಂ ನಮಸ್ಕಾರ ಮಾಡುತ್ತಿದ್ದರು. ರುಕ್ಮಿಣಿ ಮೈಮುದುಡಿ ಹೋಗುತ್ತಿತ್ತು

"ಅಮ್ಮ – ಇದೇನು ಮಾಡುತ್ತಿರುವಿರಿ."

"ಸೀತಮ್ಮ.......ಸೀತಮ್ಮ.......ನಮ್ಮಮ್ಮ.......ನೀನೇ ನವ ಸೀತಮ್ಮ. ಅವರು ಹೇಳಿ ಹೋಗಿದ್ದಾರೆ."

ಗೋದಮ್ಮನವರ ಸಂಕಟನೋಡಲಾರದೆ ಒಮ್ಮೆ ರಮಾಬಾಯ

"ಆ ದೇವರಿಗೆ ಕಣ್ಣಿಲ್ಲಮ್ಮ. ಈ ಜೀವ ಹೀಗೆ ಹಿಂಡುವುದರ ಅವನಿಗೆ ಯಾವ ತೃಪ್ತಿ........ ಈ ಪುಣ್ಯಾತ್ಗಿತ್ತೀನ ಹೀಗೆ ಗೋ ಹುಯ್ದುಕೊಳ್ಳುವುದಕ್ಕಿಂತ ಸಾವಾದರೂ ಕೊಡಬಾರದೇ ?"

ರುಕ್ಮಿಣಿಗೆ ಆ ಮಾತುಗಳು ತಳಮಳವನ್ನುಂಟುಮಾಡುತ್ತಿದ್ದ

"ನಿಮ್ಮ ದಮ್ಮಯ್ಯ – ಹಾಗೆನ್ನಬೇಡಿ ಅತ್ತೇ; ಮಾವನವರು
ಮ್ಮನ್ನು ತಬ್ಬಲಿಗಳನ್ನಾಗಿ ಮಾಡಿಹೋಗಿದ್ದಾರೆ. ಅಮ್ಮನೂ ಹೊರಟು
ೋದರೆ ನಮಗೆ ಯಾರು ದಿಕ್ಕು." ಎಂದು ಗೋಗರೆಯುತ್ತಿದ್ದಳು.
ಮಾಬಾಯಿ ರುಕ್ಮಿಣಿಯನ್ನಪ್ಪಿಕೊಂಡು,

"ನನ್ನ ನಾಲಗೆ ಸುಟ್ಟಿತು ಕಂದಾ – ಕೆಟ್ಟಮಾತಾಡಿದೆ–ಕ್ಷಮಿಸು"
ಂದು ಸಂತೈಸುತ್ತಿದ್ದರು.

೧೧

ಮಾಧೂ ಪರೀಕ್ಷೆ ಮುಗಿಸಿಕೊಂಡು ಊರು ಸೇರಿದ ಕೂಡ
ಸಂಸಾರ 'ತಾಪತ್ರಯ' ಗಂಟು ಬಿತ್ತು. ಮುಂದೇನು ಮಾಡುವು
– ಸಂಸಾರ ಹೇಗೆ ನಿರ್ವಹಿಸುವುದು ಎನ್ನುವ ಚಿಂತೆ ಹಗಲಿರುಳ
ಅವನನ್ನು ಭಾಧಿಸತೊಡಗಿತು ತನ್ನ ದುಃಖ ಯಾರಲ್ಲಿ ತೋಡಿಕೊ
ಬೇಕು ?ಹೆಂಡತಿ ಇನ್ನೂ ಚಿಕ್ಕವಳು – ಮನೆಯನ್ನು ನೋಡಿಕೊಂ
ಗೋದಮ್ಮನವರ ಯೋಗಕ್ಷೇಮ ವಿಚಾರಿಸಿಕೊಳ್ಳುವುದೇ ಅವಳ
ಸಾಕುಸಾಕಾಗಿ ಹೋಗುತ್ತಿತ್ತು. ತಾಯಿಯಲ್ಲಿ ಹೇಳಿ ಕೊಳ್ಳೋ
ವೆಂದರೆ, ಪತಿವಿಯೋಗದ ದುಃಖ ಅವರನ್ನು ಅರೆಜೀವ ಕೋರೆಜೀ
ಮಾಡಿತ್ತು.

ಒಂದು ದಿನ ಮಾಧೂ ತಂದೆಯವರ, ಪಾರಾಯಣದ ಪುಸ್ತ
ಗಳನ್ನು ಜೋಡಿಸವಾಗ ಒಂದು ಸಣ್ಣ ಹಸಿರುರಟ್ಟಿನ ಪುಸ್ತ
ಕೆಳಗೆ ಬಿತ್ತು. ಮಾಧೂ ಕುತೂಹಲದಿಂದ ಅದನ್ನು ಕೈಗೆತ್ತಿಕೊಂ
ನೋಡುತ್ತ ಕುಳಿತ. ಅದನ್ನು ನೋಡುತ್ತನೋಡುತ್ತ ಮಾಧೂ
ಕಣ್ಣುಗತ್ತಲೆ ಕವಿಯುತ್ತ ಬಂತು.

ಒಂದು ಪುಟದಲ್ಲಿ ಜಯರಾಯರು ಸ್ಪಷ್ಟವಾಗಿ ತಮ್ಮ ನಿಧ
ತಾರೀಖನ್ನು ನಿರ್ದೇಶಿಸಿದ್ದರು.

ಮಾಧೂ ಚಕಿತನಾದ .

ಈ ಸಣ್ಣ ಪುಸ್ತಕದಲ್ಲಿ ಇನ್ನೂ ಯಾವ ಯಾವ ರಹಸ್ಯ ತುಂಬಿದೆಯೋ ಎಂದು ನೋಡುತ್ತ ಕುಳಿತ.

ನಾಲ್ಕಾರು ಪುಟಗಳಲ್ಲಿ ಆದಾಯ, ವೆಚ್ಚದ ವಿವರ ತುಂಬಿತ್ತು. ಕೊಟ್ಟ ಕೊನೆಯ ಪುಟದಲ್ಲಿ ಜಯರಾಯರು ತಮ್ಮ ಸಾಲಗಳನ್ನು ವಿವರಿಸಿದ್ದರು. — 'ದೊಂತಿ ರಾಮಯ್ಯಶೆಟ್ಟರವರಿಗೆ, ಕೊಡಬೇಕಾದದ್ದು ೬೦೦ರೂ ಅಸಲು ಮತ್ತು ಬಡ್ಡಿ; ಅಚ್ಯುತಪ್ಪನವರಿಗೆ ಕೊಡಬೇಕಾದದ್ದು ೪೦೦ರೂ ಅಸಲು ಮತ್ತು ಬಡ್ಡಿ; ರಾಮಲಿಂಗಯ್ಯನವರಿಗೆ ಕೊಡಬೇಕಾದ್ದು ೪೦೦ರೂ ಅಸಲು ಮತ್ತು ಬಡ್ಡಿ.' — ಸಾವಿರದ ನಾಲ್ಕು ನೂರು ರೂಪಾಯಿ ಸಾಲ !

ಮಾಧೂ ಜಂಘಾ ಬಲವೇ ಉಡುಗಿ ಹೋದಂತಾಯಿತು. 'ಇಷ್ಟು ಸಾಲ ಏಕಾಯಿತು?' ಎಂದು ವಿಚಾರಮಾಡುತ್ತಾ ತಾರೀಖುಗಳನ್ನು ಗಮನಿಸಿದ. ಅಚ್ಯುತಪ್ಪನವರ ಸಾಲವಂತೂ ತನ್ನ ಮದುವೆ ಖರ್ಚಿಗೆ ಆದದ್ದು; ರಾಮಲಿಂಗಯ್ಯನವರ ಸಾಲ ತನ್ನ ವಿದ್ಯಾಭ್ಯಾಸಕ್ಕೆ ಆದದ್ದು – ರಾಮಯ್ಯಶೆಟ್ಟರ ಸಾಲ? ತಂದೆಯವರು ವಿನಾಕಾರಣ ಸಾಲಮಾಡುವವರಲ್ಲ.' – ಶೆಟ್ಟರನ್ನೇ ಕೇಳಿ ಸಂದೇಹ ಪರಿಹರಿಸಿಕೊಳ್ಳುವುದು ಒಳ್ಳೆಯದೆಂದು ನಿರ್ಧರಿಸಿದ.

ಶೆಟ್ಟರನ್ನು ಹುಡುಕಿ ಕೊಂಡು ಮಾಧೂ ಹೋದಾಗ ಅವರು ಅಂಗಡಿಯಲ್ಲಿ ತಮ್ಮ ಗದ್ದುಗೆಯ ಮೇಲೆ ಕುಳಿತಿದ್ದರು. ಅತ್ತಿತ್ತ ಅವರ ಮಕ್ಕಳು ಲೆಕ್ಕ ಬರೆಯುತ್ತ ಕುಳಿತಿದ್ದರು.

ಶೆಟ್ಟರಿಗೆ ಎಪ್ಪತ್ತೆರಡು ವಯಸ್ಸಾಗಿದ್ದರೂ ಅಂಗಡಿಯ ವಹಿವಾಟನ್ನೆಲ್ಲ ತಾವೇ ನಿರ್ವಹಿಸುತ್ತಿದ್ದರು. ಒಂದು ಬಿಡಿಕಾಸನ್ನೂ ಮಕ್ಕಳು ಸ್ವತಂತ್ರವಾಗಿ ಖರ್ಚುಮಾಡುವ ಹಾಗಿರಲಿಲ್ಲ. ಬೆಳಿಗ್ಗೆ ಶೆಟ್ಟರು ಎದ್ದಕೂಡಲೆ ಸ್ನಾನ, ದೇವರ ಪೂಜೆ ಮುಗಿಸಿಕೊಂಡು ಒಂದು ಲೋಟ ಹಾಲುಕುಡಿದು ಅಂಗಡಿಗೆ ಬಂದರೆ, ಒಂದು ಗಂಟೆಗೆ ಮುಂಚೆ ಮನೆ ಸೇರುತ್ತಿರಲಿಲ್ಲ. ಮೂರು ಗಂಟೆಯ ವೇಳೆಗೆ ಊಟ, ವಿಶ್ರಾಂತಿ ಮುಗಿಸಿಕೊಂಡು ಮತ್ತೆ ಅಂಗಡಿಗೆ ಬಂದರೆ ರಾತ್ರಿ ಒಂಬತ್ತು

ಗಂಟೆ ಹೊಡೆದ ಮೇಲೆ ಅಂಗಡಿ ಬಿಡುತ್ತಿದ್ದರು. ತಲೆಯ ಮೇಲೆ ದಪ್ಪ ರುಮಾಲು, ಹಣೆಯ ಮೇಲೆ ಎರಡು ಬಿಳಿ ನಾಮ, ಒಂದು ಕೆಂಪು ನಾಮ, ಕೊರಳಲ್ಲಿ ತುಳಸೀಮಾಲೆ, ಕೈಯಲ್ಲಿ ಎರಡು ವಜ್ರದುಂಗುರ ಶೆಟ್ಟರನ್ನು ಸದಾ ಅಲಂಕರಿಸಿರುತ್ತಿದ್ದವು.

ಮಾಧುವನ್ನು ನೋಡಿದಕೂಡಲೆ ಶೆಟ್ಟರು ಮಂದಹಾಸ ಬೀರುತ್ತಾ

"ಬಾಪ್ಪ – ಯಾವಾಗ ಬಂದೆ ಊರಿಗೆ" ಎಂದರು.

"ಮೂರುನಾಲ್ಕು ದಿವಸವಾಯಿತು ಶೆಟ್ಟರೇ"

"ಅಂಗಡಿ ಕಡೆ ಬರಲೇ ಇಲ್ಲ."

"ಎಲ್ಲಾ ನಿಮಗೆ ತಿಳಿದೇ ಇದೆಯಲ್ಲ."

"ಹೌದಪ್ಪಾ, ಯಜಮಾನರು ಇಷ್ಟುಬೇಗ ವೈಕುಂಠ ಯಾತ್ರೆ ಮಾಡುತ್ತಾರೆಂದು ಯಾರು ತಿಳಿದಿದ್ದರು. ಮನೆಯಲ್ಲಿ ಎಲ್ಲರೂ ಕ್ಷೇಮ ವಷ್ಟೆ!"

"ಎಲ್ಲರೂ ಕ್ಷೇಮ ಶೆಟ್ಟರೇ."

"ಏನು ಬಂದದ್ದು – ಕೆಲಸವಿತ್ತೇನು?"

"ಇತ್ತು – ನಿಮ್ಮಲ್ಲಿ ಸ್ವಲ್ಪ ಮಾತನಾಡಬೇಕಾಗಿತ್ತು."

"ಹೇಳು ಪರವಾಯಿಲ್ಲ – ನಮ್ಮ ಹುಡುಗರೇ ಇಲ್ಲಿ ಇರುವುದು."

"ನಮ್ಮ ಯಜಮಾನರು ನಿಮ್ಮಲ್ಲಿ ಏನಾದರೂ ಸಾಲ ತೆಗೆದು ಕೊಂಡಿದ್ದರೇ?"

"ಈಗಲೇ ಯಾಕಪ್ಪಾ ಆ ವಿಷಯ."

"ಹಾಗಲ್ಲ ಶೆಟ್ಟರೇ – ನನ್ನ ಸ್ಥಿತಿಗತಿ ನನಗೆ ಅರ್ಥವಾಗ ಬೇಡವೇ?"

"ಈಗ್ಗೆ ಸುಮಾರು ನಾಲ್ಕು ವರ್ಷಗಳ ಕೆಳಗೆ ಆರುನೂರು ರೂಪಾಯಿ ತೆಗೆದುಕೊಂಡಿದ್ದರು."

"ಕಾಗದ ಬರೆದು ಕೊಟ್ಟಿದ್ದಾರೆಯೇ?"

ಶೆಟ್ಟರು ನಕ್ಕು

"ಧರ್ಮಾತ್ಮರು. ನಿಮ್ಮ ಯಜಮಾನರ ಹತ್ತಿರ ಕಾಗದ ಬರೆಸಿ

ೊಳ್ಳಲೇ ಕಾಗದ, ಪತ್ರ ಬರೆಸಿಕೊಳ್ಳುವುದು ನಮ್ಮ ಕಾಲದಲ್ಲಿ ಇರಲೇ ಇಲ್ಲ ಮಾಧೂ – ಮನುಷ್ಯನ ಮಾತೇ ನಮಗೆ ಸಾಕಾಗಿತ್ತು."

"ನಿಮ್ಮಲ್ಲಿ ಆರುನೂರು ರೂಪಾಯಿ ಸಾಲ ತೆಗೆದುಕೊಂಡಿರುವ ಿಷಯ ಯಜಮಾನರು ಬರೆದಿಟ್ಟಿದ್ದಾರೆ ಶೆಟ್ಟರೇ. ಆ ಸಾಲ ನಾನು ೀರಿಸಲು ಸಿದ್ಧವಾಗಿದ್ದೇನೆ."

"ತೀರಿಸುವಿಯಂತೆ! ಏನೂ ಅವಸರವಿಲ್ಲ" ಎಂದು ಮಾಧೂ ್ಥಿತಿಗತಿಯನ್ನು ವಿಚಾರಿಸಿಕೊಂಡು

"ಇದನ್ನು ಒಂದು ಸಾಲವೆಂದು ಪರಿಗಣಿಸಬೇಡ. ಸಾಲವೆಂದೂ ಜಯರಾಯರಿಗೆ ನಾನು ಹಣ ಕೊಡಲಿಲ್ಲ. ತಂದೆ ಮಾಡಿದ ಸಾಲ, ೀರಿಸಲೇಬೇಕು ಎಂದು ನಿನ್ನ ಹಟವಾದರೆ ತೀರಿಸು. ಅದಕ್ಕಾಗಿ ೊಂದರೆಪಟ್ಟುಕೊಳ್ಳಬೇಡ. ನನ್ನ ಮೇಲೆ ರಾಯರ ಆಶೀರ್ವಾದ ಂದಿದ್ದರೆ ಸಾಕು."

ಹಣವೇ ಜೀವನದ ಸರ್ವಸ್ವ ಎಂದು ಭಾವಿಸಿದ್ದ ವರ್ತಕವರ್ಗಕ್ಕೆ ೇರಿದ್ದ ಶೆಟ್ಟರು ತೋರಿದ ಔದಾರ್ಯ, ಆಡಿದ ದಯಾಪೂರ್ಣ ನುಡಿ ಗಳು ಮಾಧೂಗೆ ಆಶ್ಚರ್ಯವುಂಟು ಮಾಡಿದವು.

"ಶೆಟ್ಟರೆ, ಇನ್ನೊಂದು ವಿಷಯ ಕೇಳಬೇಕಾಗಿದೆ. ದಯೆಯಿಟ್ಟು ಉತ್ತರ ಹೇಳಿ. ಯಜಮಾನರು ನಿಮ್ಮಲ್ಲಿ ಆರುನೂರು ರೂಪಾಯಿಗಳು ಸಾಲ ಮಾಡುವ ಕಾರಣವೇನಾದರೂ ತಿಳಿಸಿದ್ದರೇ?"

"ತಿಳಿಸಿದ್ದರು. ಅವರ ಆಫೀಸಿನಲ್ಲಿ ಒಬ್ಬ ಗುಮಾಸ್ತೆ ಇದ್ದ. ಅವನಿಗೇನೋ ಅಡಚಣೆ ಬಂದು ಆಫೀಸಿನ ಹಣದಲ್ಲಿ ಆರುನೂರು ರೂಪಾಯಿ ಸ್ವಾಹಾ ಮಾಡಿದ. ಹಣ ಇಪ್ಪತ್ತು ನಾಲ್ಕು ಗಂಟೆ ಯೊಳಗಾಗಿ ತಂದು ಕಟ್ಟದಿದ್ದರೆ ಕೆಲಸದಿಂದ ತೆಗೆದು ಹಾಕಿ ಜೈಲಿಗೆ ಕಳುಹಿಸುವುದಾಗಿ ಅಮಲ್ದಾರರು ಬೆದರಿಸಿದರು. ಗುಮಾಸ್ತೆ ಬಂದು ಜಯರಾಯರ ಕಾಲು ಹಿಡಿದುಕೊಂಡ. ರಾಯರದೋ ಮೊದಲೇ ಂಗರುಳು – ನನ್ನಲ್ಲಿ ಬಂದು ಸಂದರ್ಭ ತಿಳಿಸಿ ಹಣ ತೆಗೆದುಕೊಂಡು ಹೋದರು. ಗುಮಾಸ್ತೆ ಹಣ ತೀರಿಸಲಿಲ್ಲ – ಒಂದು ವರ್ಷದೊಳಗಾಗಿ

ಆವನು ಸತ್ತೂ ಹೋದ – ರಾಯರು ನನ್ನಲ್ಲಿ ಬಂದು 'ಶೆಟ್ಟರೇ – ನಿಮ
ಹಣಕ್ಕೆ ಆಪೋಹವಿಲ್ಲ. ನಾನು ತೀರಿಸುತ್ತೇನೆ' ಎಂದು ಹೇಳಿದರು
ಅವರಿಗೂ ಖರ್ಚುಗಳ ಮೇಲೆ ಖರ್ಚುಗಳು ಬಂದೊದಗಿದವು. ಈ
ಸಾಲ ಹಾಗೆಯೇ ಉಳಿದುಕೊಂಡಿತು."

ಮಾಧೂ ದೇಹದಲ್ಲಿ ಯಾವದೋ ಹೊಸ ಶಕ್ತಿ ಸಂಚಾರವಾದ
ತಾಯಿತು. ತಂದೆಗೆ ಹಲವು ಬಾರಿ ಮನಸ್ಸಿನಲ್ಲಿಯೇ ವಂದಿಸಿದ.

ಶೆಟ್ಟರಿಂದ ಬೀಳ್ಕೊಂಡು ಮಾಧೂ ನೇರವಾಗಿ ಅಚ್ಯುತಪ್ಪನವ
ಮನೆಗೆ ಬಂದ. ಅಚ್ಯುತಪ್ಪ, ರಾಮಲಿಂಗಯ್ಯ ಆದೇ ತಮ
'ವಾಯುವಿಹಾರ' ಮುಗಿಸಿಕೊಂಡು ಬಂದಿದ್ದರು. ಮಾಧುವನ
ಪ್ರೀತಿ ಪುರಸ್ಸರವಾಗಿ ಸ್ವಾಗತಿಸಿ

"ಊರಿಗೆ ಬಂದು ಮೂರು ದಿವಸವಾದರೂ ಮನೆಯಕಡ
ಬರಬಾರದಾಗಿತ್ತೇ ಮಾಧೂ" ಎಂದರು.

"ನಮ್ಮನೆ ಹೇಗಾಗಿದೆ ನಿಮಗೆ ಗೊತ್ತೇ ಇದೆಯಲ್ಲ....ನೂರೆಂಟ
ಕೆಲಸ."

"ಇರಲಿ ಬಾಪ್ಪ – ಬಾ, ಕೂತುಕೊ."

ಮಾಧೂ ಧ್ವನಿಕೇಳಿದೊಡನೆಯೇ ರಮಾಬಾಯಿಯವರ
ಒಳಗಿನಿಂದ ಬಂದು

"ಇಲ್ಲೇ ಊಟಕ್ಕೇಳು ಮಾಧೂ" ಎಂದರು.

"ಇವತ್ತು ಬೇಡಿಯಮ್ಮ. ಮನೆಯಲ್ಲಿ ಹೇಳಿ ಬಂದಿಲ್ಲ
ಇನ್ನೊಂದು ದಿವಸ ಬರುತ್ತೇನೆ."

"ರುಕ್ಕೂ ಬಯ್ಯುತ್ತಾಳೇನೋ ?" ಎಂದು ರಮಾಬಾಯ
ಹಾಸ್ಯ ಮಾಡಿದರು."

ಮಾಧೂ ಶೆಟ್ಟರವರನ್ನು ಕಂಡುಬಂದ ವಿಷಯ ತಿಳಿಸಿದ
ರಾಯರು ಯಾವ ಉತ್ತರವನ್ನೂ ಕೊಡದೆ ಮೌನವಾಗಿ ಕುಳಿತಿದ್ದರ

ರಮಾಬಾಯಿ ಬೆಳ್ಳಿಯ ಪಲ್ವಿ ಲೋಟದಲ್ಲಿ ಒಂದು ಕಪ್ ಕಾ
ತಂದು ಮಾಧೂ ಕೈಗಿತ್ತರು. ಅಚ್ಯುತಪ್ಪನವರು ಅದನ್ನು ನೋ

"ಊಟದ ಹೊತ್ತಿನಲ್ಲಿ ಕಾಫಿ ಕೊಡುತ್ತೀಯಲ್ಲೇ" ಎಂದರು.

"ಹುಡುಗರಿಗೆ ಕಾಫಿ ಕಂಡರೆ ಇಷ್ಟ – ಕುಡೀಲಿಬಿಡಿ."

ಮಾಧೂ ಕಾಫಿ ಕುಡಿದು ಲೋಟ ಕೆಳಗಿಟ್ಟು

"ನಿಮಗೆ ನಾಲ್ಕುನೂರು, ರಾಮಲಿಂಗಯ್ಯನವರಿಗೆ ನಾಲ್ಕುನೂರು ಕೊಡಬೇಕಾಗಿರುವ ವಿಷಯವನ್ನು ಅಣ್ಣ ಪುಸ್ತಕದಲ್ಲಿ ಬರೆದಿಟ್ಟಿದ್ದಾರೆ."

ಅಚ್ಯುತಪ್ಪನವರ ಹುಬ್ಬು ಗಂಟಿಕ್ಕಿಕೊಂಡಿತು. ತುಸುಬೇಸರದಿಂದ "ನಮಗೆ ಕೊಡುವುದಕ್ಕೆ ಈಗ ಹಣ ತಂದಿದ್ದೀಯೇನು?" ಎಂದು ಕೇಳಿದರು. ಮಾಧೂ ಅವರ ಶಬ್ದಘಾತದಿಂದ ಚೇತರಿಸಿಕೊಂಡು

"ಈಗ ಹಣವಿಲ್ಲ. ಸ್ವಲ್ಪ ಅನುಕೂಲವಾದೊಡನೆಯೇ ತೀರಿಸುತ್ತೇನೆ."

"ಈ ಕಾಲದ ಹುಡುಗರು, ನಿಮ್ಮ ರೀತಿನೀತಿಯೇ ನಮಗೆ ಅರ್ಥವಾಗುವುದಿಲ್ಲಪ್ಪ.– ಹಣದ ಮಾತಿರಲಿ. ನಿನ್ನ ವಿಷಯ ಏನು ಮಾಡಿರುವೆ ಅದನ್ನು ಮೊದಲು ತಿಳಿಸು."

"ಇನ್ನು ವಿದ್ಯಾಭ್ಯಾಸ ಮುಂದುವರಿಸುವುದಂತೂ ಕನಸಿನಮಾತು. ಯಾವದಾದರೂ ಕೆಲಸ ಹುಡುಕಬೇಕೆಂದಿದ್ದೇನೆ– ಪಥ ಸಾಗಬೇಕಲ್ಲ."

"ಇಲ್ಲಿಗೆ ಬಂದಿರುವ ಮುನಿಸೀಫರು ನನಗೆ ಬೇಕಾದವರು. ಅವರಿಗೆ ಒಂದು ಮಾತು ಹೇಳಲೇ ?"

"ನೀವಷ್ಟು ಮಾಡಿದರೆ ನನಗೆ ದೊಡ್ಡ ಉಪಕಾರಮಾಡಿದಂತಾಗುತ್ತದೆ."

"ನಾನು ಅವರನ್ನು ಕಂಡು ಮಾತನಾಡಿರುತ್ತೇನೆ. ರಿಸಲ್ಟ್ ಬಂದ ಮೇಲೆ ನೀನು ಹೋಗಿ ನೋಡು."

"ರಿಸಲ್ಟ್ ಬರುವುದಕ್ಕೆ ಇನ್ನೂ ಎರಡು ತಿಂಗಳಾಗುತ್ತದೆ. ಅಲ್ಲಿಯವರಿಗೆ..............."

ಅಚ್ಯುತಪ್ಪನವರು ತುಂಬಿದ ಹೃದಯದಿಂದ "ಮಾಧು, ನಾವುಗಳು ಜೀವಂತರಾಗಿದ್ದು ನೀವು ಉಪವಾಸವಿರಲು ಬಿಡುತ್ತೇವೆಯೇ ? ನಿಶ್ಚಿಂತೆಯಾಗಿರು. ಎರಡು ತಿಂಗಳು ಹೇಗೋ ಕಳೆದುಹೋಗುತ್ತದೆ. ಮಿತ್ರ

ಋಣ ಸ್ವಲ್ಪವಾದರೂ ತೀರಿಸಲು ನನಗೂ ಅವಕಾಶಕೊಡು” ಎಂದರು.

ಅಲ್ಲಿ ಹೆಚ್ಚು ಹೊತ್ತು ನಿಲ್ಲಲು ಮಾಧೂಗೆ ಸಾಧ್ಯವಾಗಲಿಲ್ಲ. ಅವನ ಕಣ್ಣುಗಳಿಂದ ಪ್ರವಾಹ ಹೊರಟುಬಿಟ್ಟಿತು. ತಂದೆಯ ಉಭಯಮಿತ್ರರಿಗೆ ನಮಸ್ಕರಿಸಿ ಅಲ್ಲಿಂದ ಹೊರಟುಬಿಟ್ಟ.

ಅಚ್ಯುತಪ್ಪನವರು ರಾಮಲಿಂಗಯ್ಯನವರ ಕಡೆ ತಿರುಗಿ

“ತಂದೆಯನ್ನು ಮಗ ಮೀರಿಸುತ್ತಾನೆ ರಾಮಲಿಂಗಯ್ಯನವರೇ. ಹುಡುಗನ ಮನಸ್ಸಿನಲ್ಲಿ ಧರ್ಮಬುದ್ಧಿ ಎಷ್ಟು ವಿಕಾಸವಾಗಿದೆ ನೋಡಿ.”

“ಸಿಂಹದ ಹೊಟ್ಟೆಯಲ್ಲಿ ಸಿಂಹ ಹುಟ್ಟುತ್ತದಲ್ಲದೆ ನರಿ ಹುಟ್ಟುತ್ತದೆಯೋ ಸ್ವಾಮಿ.” ಎಂದು ರಾಮಲಿಂಗಯ್ಯನವರು ತಮ್ಮ ಮೆಚ್ಚುಗೆ ವ್ಯಕ್ತಮಾಡಿದರು. ಗೆಳೆಯರಿಬ್ಬರ ಮನಸ್ಸಿಗೂ ಅವರ್ಣನೀಯ ಆನಂದವಾಗಿತ್ತು.

ಮಾಧೂ ಅಂತರಂಗದಲ್ಲಿ ಹುದುಗಿದ್ದ ಭಾವಗಳು ಕೆರಳಿ ನಿಂತಿದ್ದವು. ತಂದೆಯ ಹೆಸರು ಬಂದ ಕಡೆಯಲ್ಲೆಲ್ಲ ಜನರಾಡಿದ ನನ್ನಿಯ ನುಡಿ ಕೇಳಿ ಅವನ ಹೃದಯಕ್ಕೆ ಸಂತಸವಾಗಿತ್ತು.

“ಅಣ್ಣ ಬಡತನದಲ್ಲಿಯೇ ಬಾಳು ನೂಕಿದರು. ಬಡತನದ ಮಡುವಿನಲ್ಲಿಯೇ ತಮ್ಮ ಪ್ರಾಣ ಒಪ್ಪಿಸಿದರು.— ಆದರೆ ನನಗೆ ಎಂಥ ಆಸ್ತಿ ಬಿಟ್ಟುಹೋಗಿದ್ದಾರೆ. ಈ ಆಸ್ತಿಯನ್ನು ನಾನು ಉಳಿಸಿಕೊಳ್ಳುವುದು ಹೇಗೆ? ಈ ಸಾಲಗಳನ್ನು ತೀರಿಸಿ ಅಣ್ಣನ ಆತ್ಮಕ್ಕೆ ನಾನು ಶಾಂತಿಯನ್ನುಂಟುಮಾಡುವುದು ಯಾವಾಗ?” ಎಂದು ಚಿಂತಿಸುತ್ತ ಕುಳಿತ. ರುಕ್ಮಿಣಿ ಬಂದುದೂ ಅವನ ಗಮನಕ್ಕೆ ಬರಲಿಲ್ಲ. ರುಕ್ಮಿಣಿ

“ಏನು ಯೋಚಿಸುತ್ತಿರುವಿರಿ ?” ಎಂದು ಕೇಳಿದಳು.

“ಏನೂ ಇಲ್ಲ ರುಕ್ಕು.”

“ಪರೀಕ್ಷೆಯಲ್ಲಿ ಏನಾಗುತ್ತದೋ ಎಂದು ಚಿಂತಿಸುತ್ತಿರುವಿರಾ ?”

“ಇಲ್ಲ. ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತದೆನ್ನುವ ನಂಬಿಕೆ ನನಗಿದೆ.”

“ಮುಂದೇನು ಎಂದು ಯೋಚಿಸುತ್ತಿರುವಿರಾ ?”

ಮಾಧು ಉತ್ತರಕೊಡುವ ಸಾಹಸಮಾಡಲಿಲ್ಲ.

"ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ. ಅದಕ್ಕೇಕೆ ಇಷ್ಟು ಯೋಚಿಸುತ್ತಿರುವಿರಿ. ಮಾವನವರೂ, ಅಮ್ಮ ಇಬ್ಬರೂ ಭಕ್ತಿಯಿಂದ ಭಗವತ್ಸೇವೆ ಮಾಡಿದ್ದಾರೆ. ಯಾರಿಗೂ ಅನ್ಯಾಯ ಮಾಡಿದವರಲ್ಲ. ಯಾರ ಅನ್ನವನ್ನೂ ಕಿತ್ತುಕೊಂಡವರಲ್ಲ. ನಮ್ಮ ಅನ್ನಕ್ಕಾಗಿ ನಾವೇಕೆ ಯೋಚಿಸಬೇಕು."

"ನಾವು ಕೈಕಟ್ಟಿ ಮನೆಯಲ್ಲಿ ಕುಳಿತುಕೊಂಡರೆ, ದೇವರು ಬಂದು ನಮ್ಮ ಬಾಯಲ್ಲಿ ತುತ್ತಿಡುತ್ತಾನೆಯೇ ?"

"ಸಂಪೂರ್ಣವಾಗಿ ದೇವರ ಮೇಲೆ ಭಾರ ಹಾಕಿ ಕೈಕಟ್ಟಿ ಯಾರಾದರೂ ಕುಳಿತಿದ್ದಾರೆಯೇ ಹೇಳಿ. ಹಾಗೆ ಕುಳಿತವರ ಬಾಯಲ್ಲಿ ಭಗವಂತ ತುತ್ತು ಇಟ್ಟೇ ಇಡುತ್ತಾನೆ."

"ನಿನ್ನ ನಂಬಿಕೆಯನ್ನು ನಾನು ಅಲ್ಲಗಳೆಯುವುದಿಲ್ಲ ರುಕ್ಕೂ ಆದರೆ ಮನುಷ್ಯ ಪ್ರಯತ್ನವನ್ನೂ ಮಾಡಬೇಕು."

"ಮಾಡಲೇ ಬೇಕು. ಫಲ ಭಗವಂತನಿಗರ್ಪಿಸಬೇಕು. ಗೀತೆಯಲ್ಲಿ ಸ್ವಾಮಿ ಹೇಳಿರುವುದಾದರೂ ಇದೇ."

ರುಕ್ಮಿಣಿಯ ಮಾತು ಕೇಳಿ ಮಾಧೂಗೆ ನಗೆ ಬಂದರೂ, ಅದನ್ನು ತೃಣೀಕರಿಸಲು ಮನಸ್ಸು ಬರಲಿಲ್ಲ. ಅವಳ ಮುಗ್ಧ ಭಕ್ತಿಯಲ್ಲಿ ಒಂದು ಬಗೆಯ ಅನ್ಯಾದೃಶ ಸೌಂದರ್ಯವಿತ್ತು. ಆ ಸೌಂದರ್ಯದ ಬೆಳಕು ಮಾಧೂ ಕಣ್ಣು ಕೋರೈಸಿತ್ತು.

"ಊಟಕ್ಕೇಳಿ. ಅಮ್ಮ ಕಾದಿದ್ದಾರೆ" ಎಂದು ಮಾಧುವನ್ನು ಎಬ್ಬಿಸಿಕೊಂಡು ಹೋದಳು.

೧೨

ರಿಸಲ್ಟ್ ಬಂದ ಕೂಡಲೆ ಟೆಲಿಗ್ರಾಂ ಕೈಯಲ್ಲಿ ಹಿಡಿದುಕೊಂಡು ಮಾಧೂ ಅಚ್ಯುತಪ್ಪನವರನ್ನು ನೋಡಲು ಹೋದ. ಅವರ ಕೈಯಲ್ಲಿ ಟೆಲಿಗ್ರಾಂ ಇಟ್ಟು ಅವರಿಗೂ, ರಮಾಬಾಯಿಯವರಿಗೂ ನಮಸ್ಕರಿಸಿದ.

"ದೇವರಿಗೆ ಕಣ್ಣಿದ್ದರೆ ನಮ್ಮ ಮಾಧು ಬಿ.ಎ., ಎಂ.ಎ. ಮಾಡುತ್ತಿದ್ದ." ಎಂದು ರಮಾಬಾಯಿಯವರು ಹೇಳಿದರು.

ಅಚ್ಯುತಪ್ಪನವರು ಮಾಧೂ ಕೈಯಲ್ಲಿ ಕೆಲಸಕ್ಕೆ 'ವಿನಂತಿಪತ್ರ' ಬರೆಯಿಸಿ, ತಮ್ಮಲ್ಲಿಯೇ ಇಟ್ಟುಕೊಂಡು

"ನಾನೇ ತೆಗೆದುಕೊಂಡು ಹೋಗಿ ಕೊಟ್ಟು ಬರುತ್ತೇನೆ."ಎಂದರು.

"ನಿಮಗೇಕೆ ತೊಂದರೆ. ನಾನೇ ತೆಗೆದುಕೊಂಡು ಹೋಗಿ ಕೊಡುತ್ತೇನೆ."

"ಬೇಡ. ಮುನಸೀಫರನ್ನು ನಾನು ಕಂಡು ಬಂದ ಮೇಲೆ ನೀನು ಹೋಗು" ಎಂದು ಹೇಳಿದರು.

ಎರಡೇ ದಿವಸಗಳಲ್ಲಿ ಮಾಧೂಗೆ ಮುನಸೀಫರಿಂದ ಕರೆಬಂದಿತು. ಅವರ 'ಚೇಂಬರ್ಸಿ'ನಲ್ಲಿ (chambers) ಹೋಗಿ ಕಂಡ.

"ನೀವೇನೋ ಮಾಧವರಾಯರು ?"

"ಹೌದು ಸರ್."

"ನಿಮ್ಮ ಅಪ್ಲಿಕೇಷನ್ ಅಚ್ಯುತಪ್ಪನವರು ತಂದುಕೊಟ್ಟಿದ್ದಾರೆ.

"ನಾನೇ ತಂದುಕೊಡಬೇಕೆಂದಿದ್ದೆ ಸರ್........"

"ಚಿಂತೆಯಿಲ್ಲಪ್ಪ. ಅಚ್ಯುತಪ್ಪನವರೂ ನಾನು ತುಂಬ ಹಳೆಯ ಸ್ನೇಹಿತರು. ಎಫ್.ಎ. ಪಾಸಾದುದಕ್ಕೆ ನನ್ನ ಅಭಿನಂದನ ಸ್ವೀಕರಿಸಿ."

"ತಮ್ಮ ಆಶೀರ್ವಾದ ಸರ್."

"ಸದ್ಯಕ್ಕೆ ಖಾಯಂ ಕೆಲಸ ಖಾಲಿ ಇಲ್ಲ. ಒಬ್ಬ ಕ್ಲರ್ಕ್ ರಜದ ಮೇಲೆ ಹೋಗುತ್ತಾರೆ. ಆರು ತಿಂಗಳು ಅವರ ಬದಲಿ ನೋಡುತ್ತಿರಿ. ಆರು ತಿಂಗಳು ಕಳೆದಮೇಲೆ ಏನಾದರೂ ಮಾಡೋಣ."

"ತಮ್ಮ ಇಷ್ಟವಿದ್ದಂತಾಗಲಿ ಸರ್."

"ನಿಮ್ಮ ವಿಷಯ ಅಚ್ಯುತಪ್ಪನವರಿಂದ ಕೇಳಿ ಸಂತೋಷವಾಯಿತು. ಈ ದಿವಸದಲ್ಲಿ ತಂದೆಯ ಋಣ ತೀರಿಸಬೇಕೆಂಬ ಆಸೆ ದೊಡ್ಡ ಗುಣ ತೋರಿಸುತ್ತದೆ. ನಿಮ್ಮ ಧರ್ಮವೇ ನಿಮ್ಮ ಬೆನ್ನು ಕಾಯುತ್ತದೆ. ಭಯಪಡಬೇಡಿ."

"ಅಚ್ಯುತಪ್ಪನವರು ನನ್ನ ತೀರ್ಥರೂಪ ಸಮಾನ. ನನ್ನ ಮೇಲಣ ಪ್ರೀತಿಯಿಂದ ಅವರು ಉತ್ಪ್ರೇಕ್ಷೆ ಮಾಡಿದ್ದರೂ ಮಾಡಿರಬಹುದು."

"ಉತ್ಪ್ರೇಕ್ಷೆ ಅಚ್ಯುತಪ್ಪನವರ ಜಾಯಮಾನಕ್ಕೆ ಬಂದುದಲ್ಲ ಮಾಧವರಾವ್. ಅವರನ್ನು ನಾನು ಚೆನ್ನಾಗಿ ಬಲ್ಲೆ. ಸದ್ಯಕ್ಕೆ ನಿಮಗೆ ತಿಂಗಳಿಗೆ ನಲವತ್ತು ರೂಪಾಯಿ ಕೊಡಲು ಸಾಧ್ಯವಾಗುತ್ತದೆ. ಆಗಬಹುದೋ?"

"ತಮ್ಮ ಮಹೋಪಕಾರಕ್ಕೆ ನಾನು ತುಂಬ ಋಣಿ ಸರ್."

"ಕೋರ್ಟಿನ ಕೆಲಸ ಬೇಗ ಕಲಿತುಕೊಳ್ಳಬೇಕು."

"ಆಗಬಹುದು. ಅಚ್ಯುತಪ್ಪನವರು ನನಗೆ ದಾರಿ ತೋರಿಸುತ್ತಾರೆ."

"ಒಳ್ಳೆಯದು ಹೊರಡಿ. ನಾಳೆ ಆರ್ಡರ್ ಕಳುಹಿಸಿ ಕೊಡುತ್ತೇನೆ" ಎಂದರು.

ಮಾಧೂ ಓಡುತ್ತ ಬಂದು ಅಚ್ಯುತಪ್ಪನವರಿಗೆ ಸುದ್ದಿ ತಿಳಿಸಿಯೇ ಮನೆಗೆ ಬಂದ.

ಮಾಧೂ ಆಫೀಸಿಗೆ ಹೊರಟ ದಿನ ಅಚ್ಯುತಪ್ಪನವರೇ ತಮ್ಮ ಒಂದುರುಮಾಲು ಸುತ್ತಿ ಅವನ ತಲೆಯ ಮೇಲಿಟ್ಟರು. ಅವನ ಎಳೆಯ ಮುಖ ಮುಚ್ಚುತ್ತಿದ್ದ ದಪ್ಪ ರುಮಾಲು ನೋಡಿ ರಮಾಬಾಯಿ ನಸುನಕ್ಕರು.

ಮೊದಲನೆಯ ತಿಂಗಳ ಸಂಬಳ ಕೈಗೆ ಬಂದಾಗ ಮಾಧೂ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನಿಗೆ ದೊಡ್ಡ ನಿಧಿ ಸಿಕ್ಕಿ ದಂತಾಯಿತು. 'ನಾನು ಸಂಪಾದಿಸಿದ್ದು; ನನ್ನ ದುಡಿಮೆಯ ಫಲ' ಎಂದುಕೊಂಡು ಮನೆಗೆ ಓಡಿ ಬಂದು ರುಕ್ಮಿಣಿಯನ್ನು ಕರೆದು ಅವಳ ಕೈಯಲ್ಲಿ ಹಣವನ್ನಿತ್ತ.

"ಇದೇನು?" ಎಂದು ಕೇಳಿದಳು.

"ಗೊತ್ತಾಗಲಿಲ್ಲವೇ ? ನನ್ನ ಮೊದಲನೆಯ ತಿಂಗಳ ಸಂಬಳ!"

ರುಕ್ಮಿಣಿ ಮರುಮಾತನಾಡದೆ ಹಣವನ್ನು ಮಾಧೂ ಕೈಗೇ ಹಿಂದಕ್ಕೊಪ್ಪಿಸಿ

"ಮನೆಯಲ್ಲಿ ಹಿರಿಯರಿದ್ದಾರೆ. ಅಮ್ಮನ ಕೈಗೆ ಕೊಟ್ಟು ನಮಸ್ಕಾರ ಮಾಡಿ" ಎಂದಳು.

ಹೆಂಡತಿಯ ದೂರಾಲೋಚನೆ ನೋಡಿ ಮಾಧೂಗೆ ಸಂತಸ ವಾಯಿತು. ತಾಯಿಯ ಬಳಿ ಹೋಗಿ, ಅವರ ಮುಂದೆ ಹಣವಿಟ್ಟು ನಮಸ್ಕರಿಸಿ

"ನನ್ನ ಮೊದಲನೆಯ ತಿಂಗಳಸಂಬಳ ಕಣಮ್ಮ" ಎಂದ.

ಗೋದಮ್ಮ ಹಣವೆನ್ನೆತ್ತಿಕೊಂಡು ಕಣ್ಣಿಗೆ ಒತ್ತಿಕೊಂಡು

"ಮಾಧೂ, ಇವತ್ತು ನಲವತ್ತು ರೂಪಾಯಿ ತಂದಿದ್ದಿ, ನಾಳೆ ನಾಲ್ಕುನೂರು ತರಬಹುದು. ನಾಡಿದ್ದು ನಾಲ್ಕುಸಾವಿರ ತರಬಹುದು. ಹಣ ಹೆಚ್ಚು ಬಂದಂತೆ ನಿನ್ನ ಬುದ್ಧಿ ಬದಲಾಗದಿರಲಿ. ಹಣ ಲಕ್ಷ್ಮಿಯೂ ಹೌದು, ಪಿಶಾಚಿಯೂ ಹೌದು. ನಿನ್ನ ಭಾಗಕ್ಕೆ ಇದು ಯಾವಾಗಲೂ ಲಕ್ಷ್ಮಿಯಾಗಿಯೇ ಆಗಿರಲಿ. ನಿನ್ನ ಸಂಪಾದನೆಯ ಬಹುಭಾಗ ಬಡವರು ಬಗ್ಗರು, ದೇವರ ಸೇವೆಗೆ ವಿನಿಯೋಗವಾಗಲಿ." ಎಂದು ಹರಸಿ ಸೊಸೆಯನ್ನು

ಿದು ಅವಳ ಕೈಗೆ ಹಣವಿತ್ತರು.

ಎರಡು ತಿಂಗಳಲ್ಲಿ ಮಾಧೂ ಕಛೇರಿ ಕೆಲಸ ಕಲಿತುಕೊಂಡು ುನಸೀಫರ ಮೆಚ್ಚುಗೆಗೆ ಪಾತ್ರನಾದ. ಅಚ್ಯುತಪ್ಪನವರು ಕಾನೂನಿಗೆ ಂಬಂಧಪಟ್ಟ ವಿಷಯಗಳನ್ನು ಅವನಿಗೆ ಮೇಲಿಂದ ಮೇಲೆ ಿಸುತ್ತಿದ್ದರು. ಕಾನೂನಿನ ಕ್ಲಿಷ್ಟ ಭಾಗಗಳನ್ನು ಮಾಧೂ ಅರ್ಥ ಾಡಿಕೊಳ್ಳುತ್ತಿದ್ದ ಬಗೆ ಅಚ್ಯುತಪ್ಪನವರಿಗೆ ಆಶ್ಚರ್ಯವನ್ನುಂಟು ಾಡುತ್ತಿತ್ತು. ಅಚ್ಯುತಪ್ಪನವರ ಮೆಚ್ಚುಗೆ ಕೇಳಿದ ಾಮಲಿಂಗಯ್ಯನವರು

"ಹೇಗೂ ಮಾಧೂಗೆ ಕಾನೂನಿನ ಪರಿಚಯ ಮಾಡಿಕೊಡು ದ್ದೀರಿ. ಸರಿಯಾಗಿಯೇ ಅವನಿಗೆ ಪಾಠ ಹೇಳಿ ಪ್ಲೀಡರ್ ಪರೀಕ್ಷೆಗೆ ಏಕೆ ಟ್ಟಸಬಾರದು ? ಈ ಗೋಪಾಳದ ನಲವತ್ತು ರೂಪಾಯಿನಲ್ಲಿ ಆಗುವು ೇನು ಹೋಗುವುದೇನು ?"

"ಹೌದು ಹೌದು. ಅದು ಒಳ್ಳೆಯ ಯೋಚನೆ. ಅವನು ್ಲೀಡರಾದರೆ ಎಷ್ಟೋ ಮಂದಿ ಬಿ ಎ., ಬಿ. ಎಲ್. ಅಡ್ವೊಕೇಟರಿಗಿಂತ ೀರ್ತಿಶಾಲಿಯಾಗುತ್ತಾನೆಂಬ ನಂಬಿಕೆ ನನಗಿದೆ ಈ ಯೋಚನೆ ನನಗೆ ೊಳೆದೇ ಇತ್ತಿಲ್ಲ ನೋಡಿ" ಎಂದರು. ಅಂದಿನಿಂದಲೇ ಮಾಧೂಗೆ ್ಲೀಡರ್ ಪರೀಕ್ಷೆಯ ಪಾಠ ಪ್ರವಚನಗಳು ಆರಂಭವಾದವು.

ಒಂದು ದಿನ ಮಾಧೂ ತನ್ನ ಪಾಠ ಮುಗಿಸಿಕೊಂಡು ಚ್ಯುತಪ್ಪನವರ ಮನೆಯಿಂದ ಹೊರಡಲನುವಾಗುತ್ತಿದ್ದ. ುಾಬಾಯಿ ಬಂದು

"ನಮಗೆ ಹೋಳಿಗೆ ಊಟ ಯಾವಾಗ ಹಾಕುತ್ತೀಯೋ ಾಧೂ" ಎಂದರು.

"ಹೋಳಿಗೆ ಊಟದ ಪ್ರಮೇಯವೇನು ಅತ್ತೇ?"

"ಸಾಕು ಸುಮ್ಮನಿರೊ. ಏನೂ ತಿಳಿಯದವನಂತೆ ನಟಿಸಬೇಡ."

"ನಿಜವಾಗಿ ಗೊತ್ತಿಲ್ಲ ಹೇಳಿ ಅತ್ತೇ."

"ನಮ್ಮಮ್ಮ ಇನ್ನು ಮೂರು ನಾಲ್ಕು ತಿಂಗಳಲ್ಲಿ ಮೊಮ್ಮಗನನ್ನು

ಎತ್ತಿಕೊಳ್ಳುತ್ತಾರೆ."

"ನಿಜವೇ ಅತ್ತೇ."

"ನಾನು ಸುಳ್ಳು ಹೇಳುತ್ತೇನೇನೋ ಮಾಧೂ."

"ಅಮ್ಮ ನನಗೆ ಹೇಳಲೇ ಇಲ್ಲ."

"ನಿನ್ನಂಥ ಮಂಕುಪೂಜಾರೀನ ನಾನೆಲ್ಲೂ ನೋಡಿಲ್ಲ ಕಣೋ ಮಾಧೂ. ಬಯ್ದೇಂತ ಕೋಪಮಾಡಿಕೊಳ್ಳಬೇಡಪ್ಪ. ನಾಳೆ ದೊಡ್ಡ ಲಾಯರಾಗೋನು. ರೇಗಿಕೊಂಡು ನಮ್ಮನ್ನೆಲ್ಲಾದರೂ ದೂ ಮಾಡಿಬಿಟ್ಟೇಯಾ?"

"ನೀವು ಬಯ್ದರೂ ಅದು ನನಗೆ ಅಶೀರ್ವಾದವಾಗತ್ತೆ ಅತ್ತೇ."

"ಭಗವಂತ ನಿಮ್ಮ ಮನೆ ಮೇಲೆ ಪೂರ್ಣ ವಿಶ್ವಾಸ ತಳೆದಿದ್ದಾ ಮಾಧೂ."

"ಅದೇಕೆ ಹಾಗೆನ್ನುವಿರಿ ಅತ್ತೇ?"

"ನಿನಗೆ ಪಾಸಾಯಿತು – ಕೆಲಸವಾಯಿತು – ಈಗ ಕುಲದೀಪ ಹುಟ್ಟುತ್ತಾನೆ. ಇದೆಲ್ಲಾ ಏತಕ್ಕೇಂತ ತಿಳಿದುಕೊಂಡಿದ್ದೀ?"

"ಏತಕ್ಕೆ?"

"ನಿಮ್ಮಮ್ಮನನ್ನು ಈ ಮಾಯಪಾಶಗಳಿಂದ ಕಟ್ಟದಿದ್ದರೆ ಅವರ ಎಂದೋ ಪತಿಪಾದ ಸೇರುತ್ತಿದ್ದರು."

ಮಾಧು ಆಶ್ಚರ್ಯಚಕಿತನಾದ.

ಅಚ್ಯುತಪ್ಪನವರು ಹೆಂಡತಿಯ ಮಾತಿಗೆ ತಲೆದೂಗಿ

"ನೀನು ಪಾತಾಳಗರಡಿ ಕಣೇ ರಮಾ" ಎಂದರು.

ಆರು ತಿಂಗಳು ಮುಗಿಯುವದರೊಳಗೆ ಮುನಸೀಫ ಶ್ರೀಕಂ ಶಾಸ್ತ್ರಿಗಳು, ಸರ್ಕಾರಕ್ಕೆ ಬರೆದು ಒಬ್ಬ ಕಾರಕೂನನನ್ನು ಹೆಚ್ಚಿ ತೆಗೆದುಕೊಳ್ಳಲು ಅಪ್ಪಣೆ ದೊರಕಿಸಿಕೊಂಡರು. ಮಾಧೂ ಕೆಲ ಗಟ್ಟಿಯಾಯಿತು.

ದಿನ ತುಂಬಿದ ಮೇಲೆ ರುಕ್ಮಿಣಿ ಹೆಣ್ಣು ಮಗುವನ್ನು ಹಡೆದಳು ಗಂಡು ಮಗುವೇ ಆಗುತ್ತದೆಂದು ನಂಬಿದ್ದ ಗೋದಮ್ಮನವರಿಗೆ ತುಸ

ಅಸಮಾಧಾನವಾಯಿತು. ಅದನ್ನವರು ತೋರಗೊಡದೆ ಮೊಮ್ಮಗಳ ನ್ನೆತ್ತಿಕೊಂಡು ಮುದ್ದಾಡಿದರು. ತಾಯಿಯ ಮನಸ್ಸು ಲೋಕ ವ್ಯಾಪಾರದ ಕಡೆ ತಿರುಗಿದುದನ್ನು ನೋಡಿ ಮಾಧೂಗೆ ತೃಪ್ತಿ ಯಾಯಿತು.

ಮಗು ದುಂಡಗೆ ಮುದ್ದಾಗಿತ್ತು. ಅದರ ಮುಖವಂತೂ ಕಮಲದ ಹೂವಿದ್ದ ಹಾಗಿತ್ತು. ಗೋದಮ್ಮ ಮೊಮ್ಮಗಳಿಗೆ 'ಕಮಲ' ಎಂದು ನಾಮಕರಣಮಾಡಿದರು.

ಮಗಳ ಹೆರಿಗೆಗೆ ನಾಲ್ಕು ದಿವಸ ಮುಂಚಿತವಾಗಿಯೇ ರಂಗಮ್ಮ ತುಮಕೂರಿನಿಂದ ಬಂದರು. ಮೈಲಿಗೆ ಕಳೆದ ಮೇಲೆ, ಮೊಮ್ಮಗಳ ಕೈಗೆ ಒಂದು ಜತೆ ಚಿನ್ನದ ಬಳೆಯಿಟ್ಟು ಊರಿಗೆ ಪ್ರಯಾಣಮಾಡಿದರು.

ಮಾಧೂಗೆ ಸ್ವಲ್ಪವೂ ಬಿಡುವಿಲ್ಲವಾಯಿತು. ಬೆಳಿಗ್ಗೆ ಸಂಜೆ, ಅಚ್ಯುತಪ್ಪನವರ ಮನೆಗೆ ಹೋಗಿ ಪರೀಕ್ಷೆಗೆ ಓದಿಕೊಳ್ಳುತ್ತಿದ್ದ; ಮಧ್ಯಾನ್ಹದಿಂದ ಸಂಜೆಯವರೆಗೆ ಕಛೇರಿಯ ಕೆಲಸವಾಗುತ್ತಿತ್ತು. ಕಮಲನನ್ನೆತ್ತಿಕೊಂಡು ಮುದ್ದಾಡುವುದಕ್ಕೂ ಅವನಿಗೆ ಪುರಸತ್ತು ದೊರೆಯುತ್ತಿರಲಿಲ್ಲ.

ಮಗನ ದುಡಿಮೆ ಕಂಡು ಗೋದಮ್ಮನವರಿಗೆ ತುಂಬ ವಿಷಾದ ವಾಗುತ್ತಿತ್ತು. ಮಗ ನಾಲ್ಕು ದಿನ ಆಡಿಕೊಂಡು ಸುಖವಾಗಿರ ಬೇಕಾದ ವಯಸ್ಸಿನಲ್ಲೇ ಸಂಸಾರ ತಾಪತ್ರಯ ಗಂಟುಬಿದ್ದಿತಲ್ಲಾ ಎಂದು ಅವರ ಮನಸ್ಸು ಮಮ್ಮಲ ಮರುಗಿತು. ತಾಯಿಯ ನೊಂದ ನುಡಿಗೆ ಮಾಧುವೇ ಸಮಾಧಾನ ಹೇಳುತ್ತಿದ್ದ.

"ಈ ಕಷ್ಟಕಾರ್ಪಣ್ಯದ ನಿಮ್ಮನ್ನಿಟ್ಟಿರುವುದಕ್ಕೆ ನನಗೆ ಸ್ವಲ್ಪವೂ ಇಷ್ಟವಿಲ್ಲಮ್ಮ. ನಲವತ್ತು ರೂಪಾಯಿಗಳ ಈ ಕೆಲಸಕ್ಕೇ ನಾನು ಅಂಟ ಕೊಂಡಿದ್ದರೆ ರಿಟೈರ್ ಆಗುವ ವೇಳೆಗೆ ಅರವತ್ತೋ ಎಪ್ಪತ್ತೋ ಬರುತ್ತದೆ. ಪ್ಲೀಡರ್ ಪರೀಕ್ಷೆಯಾದ ಕೂಡಲೆ ಎಲ್ಲಿಯಾದರೂ ಪ್ರ್ಯಾಕ್ಟೀಸ್ ಮಾಡ ಬೇಕೆಂದಿದ್ದೇನೆ."

"ಅಚ್ಯುತಪ್ಪನವರು ಏನು ಹೇಳಿದರು?"

ಅಚ್ಯುತಪ್ಪನವರು ಹುಬ್ಬುಗಂಟುಹಾಕಿಕೊಂಡು, ಅಸಮಾಧಾನ ದಿಂದ

"ನೀನು ಸಲಸಲಕ್ಕೂ 'ತೊಂದರೆ - ತೊಂದರೆ' ಎಂದು ಉಪಚಾರ ಹೇಳಬೇಡಪ್ಪ. ನಮ್ಮ ಮನೆ ಮಕ್ಕಳ ಯೋಗಕ್ಷೇಮ ನಾವು ನೋಡಿ ಕೊಳ್ಳದೆ ಕಂಡವರು ನೋಡಿಕೊಳ್ಳುತ್ತಾರೆಯೇ?" ಎಂದು ಗದರಿ ಕೊಂಡರು.

೧೩

ತಾಯಿ, ಹೆಂಡತಿ, ಮಗುವಿನೊಂದಿಗೆ ಮಧ್ಯಾಹ್ನದ ಬಸ್ಸಿನಲ್ಲಿ ಮಾಧೂ ಹೊರಟು, ಮೂರು ಗಂಟೆಗೆ ಬೆಂಗಳೂರು ಸೇರಿ, ಅಂದೇ ಎಕ್ಸ್‌ಪ್ರೆಸ್ ಗಾಡಿಯಲ್ಲಿ ಪಟ್ಟಣಕ್ಕೆ ಪ್ರಯಾಣ ಬೆಳೆಸಿದ.

ರೈಲು ಆರೂವರೆಯ ವೇಳೆಗೆ ಪಟ್ಟಣ ತಲುಪಿತು. ಮಾಧೂ ರೈಲಿನಿಂದಿಳಿದು, ತಾಯಿಯನ್ನೂ ಹೆಂಡತಿ, ಮಗುವನ್ನೂ, ಸಾಮಾನುಗಳನ್ನೂ ಕೆಳಕ್ಕೆ ಇಳಿಸಿಕೊಂಡ.

ಮಾಧೂ ಕಣ್ಣು ಸ್ಟೇಷನ್ನಿನ ಸುತ್ತ ಚಲಿಸುತ್ತಿದ್ದಂತೆ ಯಾರೋ ಮುದುಕರು ಅವನಿದ್ದಲ್ಲಿಗೇ ನಡೆದುಬಂದು

"ಚಿಕ್ಕರಾಯನಪುರದಿಂದ ಬಂದಿರುವಿರಾ ?" ಎಂದು ಕೇಳಿದರು.

"ಹೌದು ತಾವು ವೆಂಕಟರಮಣಾಚಾರ್ರೇ."

"ಹೌದು – ನೀವೆ ಮಾಧೂರಾಯರಲ್ಲವೇ ? ಅಚ್ಯುತಪ್ಪನವರು ಕಾಗದ ಬರೆದಿದ್ದರು –; ಇವತ್ತು ನೀವು ಬರುವ ವಿಷಯ ತಿಳಿಸಿ ತಂತಿಯನ್ನೂ ಕಳಿಸಿದ್ದಾರೆ."

ವೆಂಕಟರಮಣಾಚಾರ್ರು ಗಾಡಿಯವನನ್ನು ಕರೆದು ಸಾಮಾನುಗಳನ್ನು ತೆಗೆದುಕೊಳ್ಳುವಂತೆ ಹೇಳಿದರು.

ಗಾಡಿಯಲ್ಲಿ ಸಾಮಾನುಗಳನ್ನು ಹಾಕಿದ ಮೇಲೆ ವೆಂಕಟರಮಣಾಚಾರ್ರು

"ಅಮ್ಮಾವರು, ನಿಮ್ಮ ಕುಟುಂಬ ಗಾಡಿಯಲ್ಲಿ ಹೋಗಲಿ. ನಾವು ನಡೆದು ಹೋಗೋಣ. ಮನೆ ಇಲ್ಲೇ ಇದೆ – ದೇವಸ್ಥಾನದ ಬೀದಿಯಲ್ಲಿ" ಎಂದು ಹೇಳಿದರು. ಗಾಡಿ ಮುಂದಕ್ಕೆ ಹೊರಟಿತು. ಅದರ ಹಿಂದೆ ಮಾಧೂ ವೆಂಕಟರಮಣಾಚಾರ್ರೂ ನಡೆದು ಬಂದರು. ದೊಡ್ಡ ರಸ್ತೆಯಲ್ಲಿ ಗಾಡಿ ಹೊರಟಿತು. ಅಡ್ಡ ರಸ್ತೆಯಲ್ಲ ವೆಂಕಟರಮಣಾಚಾರ್ರು ಮಾಧೂವನ್ನು ಮನೆಗೆ ಕರೆದುಕೊಂಡು ಬಂದರು.

ಗೋದಮ್ಮ ರುಕ್ಮಿಣಿಯನ್ನು ಸ್ವಾಗತಿಸುವುದಕ್ಕೆ ವೆಂಕಟರಮಣಾಚಾರ್ರ ಹೆಂಡತಿ ವೃಂದಮ್ಮ ಬಾಗಿಲಿನಲ್ಲಿಯೇ ನಿಂತಿದ್ದರು. ವೃಂದಮ್ಮನವರ ಜತೆಯಲ್ಲಿ ನಿಂತಿದ್ದ ಶಾಂತನನ್ನು ನೋಡಿ ರುಕ್ಮಿಣಿ ಸಂತೋಷದಿಂದ 'ಶಾಂತಾ' ಎಂದು ಕೂಗಿದಳು. ಶಾಂತಾ ರುಕ್ಮಿಣಿಯ ಸಮೀಪಕ್ಕೆ ಬಂದು, ಅವಳ ಕೈಯಿಂದ ಮಗುವನ್ನೆತ್ತಿಕೊಂಡಳು.

ಎಲ್ಲರೂ ಒಳಗೆ ಹೋಗಿ ಕುಳಿತ ಮೇಲೆ ಗೋದಮ್ಮನವರು

"ನೀನು ಯಾವಾಗ ಬಂದೆ ಶಾಂತಾ" ಎಂದು ಕೇಳಿದರು.

"ನೀವು ಬರುವುದು ತಿಳಿಯುತ್ತಲೆ ಶಾಂತನನ್ನು ಕರೆಸಿಕೊಂಡೆ"

ಎಂದು ವೃಂದಮ್ಮನವರು ಹೇಳಿದರು. ಅತಿಥಿಗಳಿಗೆ ಪಾನಕ, ಕಾಫಿ, ಉಪಾಹಾರವಾಯಿತು. ವೃಂದಮ್ಮನವರು ತೊಟ್ಟಿಲುಕಟ್ಟಿ

"ಮೊದಲು ಮಗುವನ್ನು ಮಲಗಿಸು ತಾಯಿ. ಬಿಸಿಲಿಗೆ ಎಷ್ಟು ಬಳಲಿದೆಯೋ" ಎಂದು, ಗೋದಮ್ಮನವರನ್ನು ಅಡಿಗೆಯ ಮನೆಗೆ ಕರೆದುಕೊಂಡು ಹೋದರು. ಶಾಂತಾ ರುಕ್ಮಿಣಿಯನ್ನು ಒಳಗಿನ ಪಡಸಾಲೆಗೆ ಕರೆದೊಯ್ದಳು.

ಮಾಧೂ ವೆಂಕಟರಮಣಾಚಾರ್ರೂ ಮಾತನಾಡುತ್ತ ಕುಳಿತರು.

"ನಿಮಗೆಲ್ಲಾ ತುಂಬ ತೊಂದರೆಕೊಡುತ್ತಿದ್ದೇವೆ." ಎಂದು ಮಾಧೂ ಉಪಚಾರ ಹೇಳಿದ.

"ತೊಂದರೆ ಕೊಡಬೇಕಾದುದೂ, ತೊಂದರೆ ತೆಗೆದುಕೊಳ್ಳಬೇಕಾದುದೂ ಎರಡೂ ಗೃಹಸ್ಥಧರ್ಮಕ್ಕೆ ಸೇರಿದ್ದು ಮಾಧೂರಾಯರೇ. ಇದೂ ನಿಮ್ಮ ಮನೆ ಎಂದು ತಿಳಿದುಕೊಂಡು ನಿಸ್ಸಂಕೋಚವಾಗಿರಿ

ಾಂತಮ್ಮನ ಮದುವೆಗೆ ನಾನು ಬಂದಿದ್ದೆ – ನಿಮಗೆ ಮರೆತುಹೋಗಿರ
ಹುದು. ನಿಮ್ಮದೇ ಓಡಾಟವಾಗಿತ್ತು."

"ಹೌದು ಸ್ವಾಮಿ. ಅಚ್ಯುತಪ್ಪನವರು ನನ್ನ ತಂದೆಯ ಸಮಾನ. ನ್ನ ಎಲ್ಲ ಶ್ರೇಯಸ್ಸೂ ಅವರ ಆಶೀರ್ವಾದದ ಫಲ" ಎಂದು ಅಚ್ಯುತಪ್ಪ ವರ ಉಪಕಾರವನ್ನು ಕೂಲಂಕಷವಾಗಿ ವಿವರಿಸಿದ.

"ಈಗಲೇ ರಾಘವೇಂದ್ರರಾಯರನ್ನು ನೋಡುವಿರೇನು ?"

"ತಾವು ಹೇಗೆ ಹೇಳಿದರೆ ಹಾಗಾಗಲಿ."

"ಈಗ ವಿಶ್ರಮಿಸಿಕೊಳ್ಳಿ. ದೇವಸ್ಥಾನಕ್ಕೆ ಹೋಗಿ ಬರೋಣ. ಬೆಳಿಗ್ಗೆ ರಾಘವೇಂದ್ರರಾಯರನ್ನು ನೋಡಿದರಾಯಿತು."

ಗೋದಮ್ಮನವರು ಸ್ನಾನಮುಗಿಸಿಕೊಂಡು ಸಿದ್ಧರಾದ ಕೂಡಲೆ ಎಲ್ಲರೂ ದೇವಸ್ಥಾನಕ್ಕೆ ಹೊರಟರು. ನಿರಾಪದದಿಂದ ಪ್ರಶಾಂತ ಚಿತ್ತನಾಗಿ ಮಲಗಿದ್ದ ರಂಗನಾಥಸ್ವಾಮಿಯನ್ನು ಕಂಡು ಗೋದಮ್ಮ ನವರಿಗೆ ಮೈಮರೆತುಹೋಯಿತು. ದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ

"ಬೇಗ ನಿನ್ನ ಪಾದ ಸೇರಿಸಿಕೋ ನಮ್ಮಪ್ಪ" ಎಂದು ಪ್ರಾರ್ಥಿ ಸಿದರು.

ರಾತ್ರಿ ಎಲ್ಲರ ಊಟವಾಯಿತು. ಗೋದಮ್ಮನವರು ಉಪವಾಸ ಮಲಗುವುದಕ್ಕೆ ವೃಂದಮ್ಮ ಅವಕಾಶಕೊಡಲಿಲ್ಲ. ಬಲವಂತದಿಂದ, ಅವರು ಬಾಳೆಯಹಣ್ಣು, ಹಾಲು ಸೇವಿಸುವಂತೆ ಮಾಡಿದರು.

ಬೆಳಿಗ್ಗೆ ಸಾಂಗವಾಗಿ ಕಾವೇರಿ ಸ್ನಾನ, ಪೂಜೆ, ದಾನಗಳಾದವು. ಮನೆಗೆ ಹಿಂದಿರುಗಿದ ಮೇಲೆ ಎಲ್ಲರಿಗೂ ಉಪಾಹಾರವಾಯಿತು. ನಾಥೂ ವೆಂಕಟರಮಣಾಚಾರ್ರಿಗೆ

"ಇನ್ನು ರಾಘವೇಂದ್ರರಾಯರನ್ನು ನೋಡಿ ಬರೋಣವೇ ?" ಎಂದು ಕೇಳಿದ.

"ಗಂಟೆಯೆಷ್ಟು ನೋಡಿ."

"ಒಂಭತ್ತು."

"ಆಫೀಸಿನಲ್ಲಿಯೇ ಇರುತ್ತಾರೆ. ನಿಮ್ಮ ಜತೆ ನಾನು ಬರುವುದಿಲ್ಲ- ಕ್ಷಮಿಸಬೇಕು. ಅವರ ಆಫೀಸಿನವರೆಗೆ ನಿಮ್ಮನ್ನು ಕರೆದೊಯ್ದು ಅಲ್ಲಿ ಬಿಟ್ಟು ನಾನು ಮುಂದಕ್ಕೆ ಹೋಗುತ್ತೇನೆ. ನೀವು ಮಾತನಾಡಿಕೊಂಡು ಬನ್ನಿ."

ಬಿಡಿಸಿ ಕಾರಣ ಕೇಳುವುದು ಅಧಿಕಪ್ರಸಂಗವಾಗಬಹುದೆಂದು ಹೆದರಿ ಮಾಧೂ, ಆಚಾರ್ರು ಹೇಳಿದಂತೆ ಮಾಡಲೊಪ್ಪಿಕೊಂಡ.

ವೆಂಕಟರಮಣಾಚಾರ್ರು ಮಾಧುವನ್ನು ರಾಘವೇಂದ್ರರಾಯರ ಕಛೇರಿಯ ಬಳಿ ಬಿಟ್ಟು ಮುಂದೆ ಹೋದರು. ಮಾಧೂ ಜೀವ ಕೈಯ್ಯಲ್ಲಿ ಹಿಡಿದುಕೊಂಡು ಒಳಕ್ಕೆ ಪ್ರವೇಶಿಸಿದ.

ರಾಘವೇಂದ್ರರಾಯರ ಕಛೇರಿಯ ವೈಭವ ಎಂಥವರಿಗೂ ದಂಗು ಬಡಿಸುತ್ತಿತ್ತು. ದೊಡ್ಡ ಹಜಾರ. ಹಜಾರದ ಮಧ್ಯೆ ರಾಯರ ಮೇಜು, ಅತ್ತಿತ್ತ ಅವರ ಸಹಾಯಕ ವಕೀಲರ ಮೇಜು, ಕುರ್ಚಿ; ಒಂದು ಮೂಲೆಯಲ್ಲಿ ನೆಲದಮೇಲೆ ಸಣ್ಣ ಮೇಜು, ಅದರ ಮುಂದೆ ಲಾಯರ ಗುಮಾಸ್ತೆ. ಹಜಾರದ ತುಂಬ ಲಾಪುಸ್ತಕಗಳ ಕಪಾಟುಗಳು. ಗುಮಾಸ್ತೆಯ ಎದುರಿಗೆ ಮತ್ತು ಪಕ್ಕದಲ್ಲಿ ಕೆಲವು ಜಾಕಾಯಿಮರದ ಬೆಂಚುಗಳು – ಕಕ್ಷಿಗಾರರು ಕೂಡುವುದಕ್ಕೆ.

ಮಾಧೂ ಹೋದಾಗ ಎಲ್ಲರೂ ಸ್ವಸ್ಥಾನದಲ್ಲಿ ಮಂಡಿಸಿ ಕಾಯಕ ನಿರತರಾಗಿದ್ದರು. ಕಛೇರಿಯ ತುಂಬ ಕಕ್ಷಿಗಾರರು.

ಮಾಧೂ ಮೆಲ್ಲನೆ ಹೋಗಿ ಒಂದು ಬೆಂಚಿನ ತುದಿಯಲ್ಲಿ ಕುಳಿತು ಕೊಂಡ. ಯಾರೂ ಅವನನ್ನು ಮಾತನಾಡಿಸಲಿಲ್ಲ.

ಅರ್ಧಗಂಟೆ ಕಳೆಯಿತು – ರಾಯರು ಕತ್ತೆತ್ತಿ ನೋಡುವ ಸಂಭವ ಕಂಡುಬರಲಿಲ್ಲ. ಕಕ್ಷಿಗಾರರು ಕೆಲವರು ಹೋದರು. ಹೊಸಬರು ಕೆಲವರು ಬಂದರು.

ಹತ್ತುಗಂಟೆ ಹೊಡೆಯಿತು. ರಾಯರು ಕತ್ತೆತ್ತಿ

"ಸಂಜೆಗೆ ಬನ್ನಿ – ಇನ್ನು ನಾನು ಕೋರ್ಟಿಗೆ ಹೋಗಬೇಕು" ಎಂದರು.

ಕಕ್ಷಿಗಾರರು ಚದುರಿದರು. ರಾಯರು ತಮ್ಮ ಗುಮಾಸ್ತೆಯನ್ನು ಕರೆದು

"ಅಲ್ಲಿ ಕುಳಿತಿರುವವರು ಯಾರು ?" ಎಂದು ಕೇಳಿದರು.

ಗುಮಾಸ್ತೆ ನಿಂತಲ್ಲಿಂದಲೇ ಮಾಧೂಕಡೆ ನೋಡಿ

"ಯಾರ್ರೀ........ಇಲ್ಲಿ ಬನ್ನಿ." ಎಂದು ಕೂಗಿದ. ಮಾಧೂ ಎದ್ದು ಅಂಜುತ್ತ ಅಳಕುತ್ತ ರಾಯರ ಮೇಜಿನ ಮುಂದೆ ನಿಂತು, ಕಿಸೆಯಿಂದ ಅಚ್ಯುತಪ್ಪನವರ ಕಾಗದ ತೆಗೆದು ರಾಯರ ಕೈಗಿತ್ತ.

ರಾಯರು ಕುಳಿತುಕೊಂಡೇ ಅಚ್ಯುತಪ್ಪನವರ ಕಾಗದ ಒಡೆದು ನೋಡಿಕೊಂಡು

"ಇದಕ್ಕಾಗಿ ಇಲ್ಲಿ ಬಂದಿರೋ ?"

"ಹೌದು ಸರ್."

"ನನ್ನ ಆಫೀಸಿನಲ್ಲಿ ಸ್ಥಳ ಖಾಲಿ ಇಲ್ಲ."

"ತಾವು ದೊಡ್ಡಮನಸ್ಸು ಮಾಡಬೇಕು ಸರ್. ಅಚ್ಯುತಪ್ಪನವರ ಮನೆ ಮದುವೆಗೆ ಬಂದಿದ್ದಾಗ ತಾವು ಆಶ್ವಾಸನಕೊಟ್ಟಿದ್ದಿರಿ."

"ಯಾವ ಓಬೀರಾಯನ ಕಾಲದ ಮಾತು ಹೇಳುತ್ತಿದ್ದೀರಿ. ಅವುಗಳೊಂದೂ ನನಗೆ ಜ್ಞಾಪಕವಿಲ್ಲ."

"ತಮ್ಮಲ್ಲಿ ನನಗೆ ಆಶ್ರಯಸಿಕ್ಕುತ್ತದೆಯೆಂಬ ಆಸೆಯಿಂದಲೇ ನಾನು ಪ್ಲೀಡರ್ ಪರೀಕ್ಷೆ ಮುಗಿಸಿಕೊಂಡೆ."

"ಏನೋ ಘನವಾದ ಕೆಲಸ ಮಾಡಿದಹಾಗೆ ಮಾತನಾಡುತ್ತಿರು ವಿರಲ್ಲ. ಬಿ.ಎ. ಎಂ.ಎ. ಎಲ್‌ಎಲ್ ಬಿ. ಮಾಡಿಕೊಂಡು ಎಷ್ಟುಜನ ನಮ್ಮ ಆಫೀಸಿಗೆ ಬರಲು ಹಾತೊರೆಯುತ್ತಿದ್ದಾರೆ ಬಲ್ಲಿರಾ ?"

"ಇರಬಹುದು ಸರ್. ಅರಳೀಮರ ಹುಡುಕಿಕೊಂಡು ಹಕ್ಕಿಗಳು ಬರುವುದರಲ್ಲಿ ಏನಾಶ್ಚರ್ಯ !"

"ಸಾರಿ (sorry !) ನಿಮ್ಮ ಕೈಯಲ್ಲಿ ಹೆಚ್ಚು ಮಾತನಾಡಲು ನನಗೆ ಪುರುಸತ್ತಿಲ್ಲ."

"ನನ್ನ ಪ್ರಾರ್ಥನೆ."

"ಸಾಧ್ಯವಿಲ್ಲವೆಂದು ಹೇಳಿದೆನಲ್ಲ."

"ಅಚ್ಯುತಪ್ಪನವರಿಗೆ ಮಾರುತ್ತರವಾದರೂ ಬರೆದುಕೊಡಿ."

"ಬರೆದುಕೊಡುವುದೇನಿದೆ – ನೀವೇ ಹೇಳಿಬಿಡಿ."

"ದೊಡ್ಡ ಮನುಷ್ಯರು ತಮಗೆ ಕಾಗದ ಬರೆದುಕೊಟ್ಟರೆ, ಅದಕ್ಕೆ ಉತ್ತರ ಕೊಡುವ ಸೌಜನ್ಯ ತೋರಿಸಬೇಡವೇ? "

"ಏನ್ರೀ, ಸೌಜನ್ಯಾಂತ ಬಹಳ ಮಾತನಾಡುತ್ತಿರುವಿರಿ. ಟೇಕ ಕೇರ್ (Take care) "

"ನಾನು ಕಳ್ಳತನ ಮಾಡುವುದಕ್ಕಾಗಿಯಾಗಲಿ ಭಿಕ್ಷೆಕೇಳ ವುದಕ್ಕಾಗಲಿ ಬಂದಿಲ್ಲ ಸರ್."

"ತಲೆಯೆಲ್ಲಾ ಹರಟಬೇಡಿ – ಇಲ್ಲಿಂದ ಹೊರಟುಹೋ get out."

ಎಂದು ಅರಚುತ್ತಾ ರಾಯರು ಅಚ್ಯುತಪ್ಪನವರ ಕಾಗದವನ್ನು ಮುದ್ದೆಮಾಡಿ ಮಾಧೂ ಮುಖದ ಮೇಲೆ ಎಸೆದರು. ಮಾಧೂ ಕಾಗದದ ಉಂಡೆಯನ್ನು ಕೈಗೆತ್ತಿಕೊಂಡ. ಅವನ ದೇಹಾದ್ಯಂತವು ಕೋಪದಿಂದ ಕಂಪಿಸುತ್ತಿತ್ತು. ಮುಖ ರಕ್ತವರ್ಣಕ್ಕೆ ತಿರುಗಿತ್ತು ಮಾಧೂ, ರಾಯರ ಎದುರಿಗೆ ನಿಂತು.

"ರಾಯರೇ, ಇವತ್ತಿನ ತಾರೀಖನ್ನು ನಿಮ್ಮ ಡೈರಿಯಲ್ಲಿ ಗುರುತು ಮಾಡಿಟ್ಟುಕೊಂಡಿರಿ. ನಿಮ್ಮ ದೌರ್ಜನ್ಯಕ್ಕೆ ತಕ್ಕ ಶಾಸ್ತಿಯನ್ನನು ಭವಿಸಬೇಕಾಗುತ್ತದೆ" ಎಂದು ಹೇಳಿ ದಡ ದಡನೆ ಹೊರಟು ಹೋದ ಅವನು ಬಾಗಿಲು ಸೇರುವಲ್ಲಿ ರಾಯರು 'ಡರ್ಟಿ ಬೆಗ್ಗರ್' (Dirty Beggar) ಎಂದದ್ದು ಕೇಳಿಸಿತು. ಮಾಧೂ ಹಿಂದಿರುಗಿ ನೋಡಲಿಲ್ಲ.

ರಾಯರ ಕಛೇರಿಯಲ್ಲಿ, ಅಷ್ಟೊಂದು ಜನಗಳ ಎದುರಿಗೆ ತನಗಾದ ಅವಮಾನಕ್ಕೆ ಮಾಧೂ ತಪ್ತನಾಗಿದ್ದ. ಅವನ ಹೃದಯದಲ್ಲಿ ಪ್ರತೀಕಾರದ ಭೀಷಣ ಜ್ವಾಲೆ ಎದ್ದಿತ್ತು. ಜೌಗುಭೂಮಿಯಲ್ಲಿ ನೀರು ನಿಲ್ಲುವಂತೆ ಕಣ್ಣುಗಳಲ್ಲಿ ನೀರು ನಿಂತಿತು.

ಮಾಧುವನ್ನು ಕಂಡಕೂಡಲೆ ವೆಂಕಟರಮಣಾಚಾರ್ರು ನಡೆದ

ದನ್ನೆಲ್ಲ ಊಹಿಸಿದರು. ಮಾಧೂ ಮುಖದ ಮೇಲೆ ಮೂಡಿದ್ದ ನೋವಿನ್ನ ಗೆರೆಗಳನ್ನು ಗುರುತಿಸಿ

"ರಾಯರನ್ನು ಕಂಡಿದ್ದಿರಾ ಮಾಧವರಾಯರೇ? ಏನು ಹೇಳಿದರು" ಎಂದು ಕೇಳಿದರು.

ಮಾಧೂ ನಡೆದುದನ್ನೆಲ್ಲಾ ವಿವರಿಸಿ, ಅಚ್ಯುತಪ್ಪನವರ ಕಾಗದಕ್ಕೆ ಒದಗಿದ್ದ ಅವಸ್ಥೆಯನ್ನು ತೋರಿಸಿದ. ಆಚಾರ್ರು ವಿಚಾರ ಮಾಡುತ್ತಾ

"ಹೀಗಾಗುತ್ತದೆಂದು ನನಗೆ ಗೊತ್ತಿತ್ತು. ಅದಕ್ಕೇ ನಾನು ನಿಮ್ಮ ಜತೆಯಲ್ಲಿ ಬರಲಿಲ್ಲ."

"ತಾವು ಪೂರ್ವಸೂಚನೆ ಕೊಟ್ಟಿದ್ದರೆ ನಾನು ಹೋಗುತ್ತಲೇ ಇರಲಿಲ್ಲ."

"ಎಲ್ಲಿಯಾದರೂ ಉಂಟೇ? ಅಚ್ಯುತಪ್ಪನವರು ಕಾಗದ ಬರೆದು ಕೊಟ್ಟ ಮೇಲೆ ನೀವು ಹೋಗಬೇಕಾದುದು ನ್ಯಾಯವಾಗಿತ್ತು. ರಾಘವೇಂದ್ರರಾಯರ ತಲೆ ಭೂಮಿಯ ಮೇಲಿಲ್ಲ, ಸ್ವರ್ಗದಲ್ಲಿ ಓಡಾಡುತ್ತಿದೆ."

"ಸ್ವಲ್ಪವಾದರೂ ನಡತೆ, ಸೌಜನ್ಯಬೇಡವೇ? ಎಷ್ಟಾದರೂ ಅಚ್ಯುತಪ್ಪನವರು ಹಿರಿಯರು. ರಾಘವೇಂದ್ರರಾಯರಂಥ ನೂರಾರು ಜನ ಅವರ ಹೆಸರು ಹೇಳಿಕೊಂಡು ಜೀವನಮಾಡಿಕೊಳ್ಳುತ್ತಿದ್ದಾರೆ. ನನಗೆ ಅಪಮಾನವಾದುದಕ್ಕೆ ನಾನು ಯೋಚಿಸುವುದಿಲ್ಲ; ಅಚ್ಯುತಪ್ಪನವರಿಗೆ ನನ್ನಿಂದ ಅವಮಾನವಾಯಿತಲ್ಲಾ!"

"ಸತ್ಪುರುಷರು ಅಯೋಗ್ಯರಿಂದ ಸನ್ಮಾನ ನಿರೀಕ್ಷಿಸುವುದಿಲ್ಲ ಮಾಧವರಾಯರೇ. ಈ ಪಂಗೋಳಿ ಸಣ್ಣಮಾತನಾಡಿದರೆ ಅಚ್ಯುತಪ್ಪನವರ ಕೀರ್ತಿಗೆ ಕುಂದುಂಟಾಗುತ್ತದೆಯೇ? ವಿಷನುಂಗಿದವರು ಬದುಕಬಹುದು, ಹಣ ನುಂಗಿದವರು ಬದುಕುವುದಿಲ್ಲ."

"ಹಣ ನುಂಗಿದವರು ಎಂದರೆ."

"ಕಂಡವರ ಗಂಟು ನುಂಗಿ ತಾನೇ ರಾಘವೇಂದ್ರರಾಯ ದೊಡ್ಡ

ಮನುಷ್ಯನಾಗಿರುವುದು. ಪಾಪದ ಕೂಳು ದಕ್ಕುವುದಿಲ್ಲ. ಅಹಂಕಾರ, ಈರ್ಷೆ, ಲೋಭಗಳೆಲ್ಲಾ ಅದರ ಸಂಕೇತಗಳು."

"ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ ಸ್ವಾಮಿ. ನೀವು ನನಗೆ ಸ್ವಲ್ಪ ಉಪಕಾರಮಾಡಬೇಕು."

"ಏನು ಹೇಳಿ."

"ನಾನು ಇದೇ ಊರಿನಲ್ಲಿ ನೆಲಸಿ, ಪ್ರ್ಯಾಕ್ಟೀಸ್ ಆರಂಭಿಸಲು ನಿರ್ಧರಿಸಿದ್ದೇನೆ. ಮುನಸೀಫ್ ಕೋರ್ಟಿನ ಗುಮಾಸ್ತಗಿರಿ ನನಗೆ ಸ್ವಲ್ಪ ಅನುಭವವನ್ನೂ ತಂದುಕೊಟ್ಟಿದೆ. ತಾವು ನನಗೊಂದು ಮನೆಗೊತ್ತು ಮಾಡಿಕೊಡಬೇಕು."

"ನೀವು ಯೋಚನೆಮಾಡುವುದಕ್ಕೆ ಮುಂಚೆಯೇ ನಾನು ಎಲ್ಲವನ್ನೂ ಯೋಚಿಸಿದ್ದೇನೆ, ಊಟಮಾಡಿ–ಸಾವಕಾಶವಾಗಿ ಮಾತ ನಾಡೋಣ." ಎಂದು ವೆಂಕಟರಮಣಾಚಾರ್ರು ಹೇಳಿದರು.

೧೪

ಸಂಜೆ ವೆಂಕಟರಮಣಾಚಾರ್ರು ಬಟ್ಟೆ ಧರಿಸಿಕೊಂಡು "ಮಾಧೂರಾಯರೇ–ಬನ್ನಿ ಹೋಗೋಣ" ಎಂದು ಕರೆದರು.

"ಎಲ್ಲಿಗೆ ಸ್ವಾಮಿ."

"ನೋಡಿದಿರಾ ಎಲ್ಲಿಗೆ ಎಂದು ಕೇಳುತ್ತೀರಲ್ಲ. ನನ್ನ ಜತೆ ಬನ್ನಿ. ನ್ನ ಸ್ನೇಹಿತರೊಬ್ಬರ ಪರಿಚಯ ಮಾಡಿ ಕೊಡುತ್ತೇನೆ."

"ನನಗೆ ಯಾರ ಪರಿಚಯವೂ ಸದ್ಯಕ್ಕೆ ಬೇಕಾಗಿಲ್ಲ ಸ್ವಾಮಿ."

"ನಿಮ್ಮ ಮನಃಸ್ಥಿತಿ ನಾನು ಬಲ್ಲೆ. ಬನ್ನಿ — ಎಲ್ಲಾ ರಿಹೋಗುತ್ತದೆ." ಎಂದು ಒತ್ತಾಯಮಾಡಿದರು.

ವೆಂಕಟರಮಣಾಚಾರ್ರ ಮನಸ್ಸಿಗೆ ಬೇಸರವನ್ನುಂಟುಮಾಡಾರದೆಂದು ಮಾಧು ಅವರ ಜತೆ ಹೊರಟ.

ಆಚಾರ್ರು ಮಾಧುವನ್ನು ನೇರವಾಗಿ ತಮ್ಮ ಗೆಳೆಯರು ಾರಾಯಣಸ್ವಾಮಿ ಅಯ್ಯಂಗಾರ್ರವರ ಮನೆಗೆ ಕರೆದೊಯ್ದರು. ಾರಾಯಣಸ್ವಾಮಿ ಅಯ್ಯಂಗಾರ್ರು ವಿಶ್ವಾಸಪೂರ್ವಕ ಸ್ವಾಗತ ಯಸಿದರು. ಪರಸ್ಪರ ಪರಿಚಯದ ಶಿಷ್ಟಾಚಾರ ಮುಗಿಯಿತು. ಳಗಿನಿಂದ ಉಪಾಹಾರ ಕಾಫಿ ಬಂತು.

"ಎಲ್ಲಾ ಮುಗಿಸಿಕೊಂಡೇ ಬಂದಿದ್ದೆವು" ಎಂದರು ಆಚಾರ್ರು.

"ಯಾರು ನಿನ್ನ ಮುಗಿಸಿಕೊಂಡು ಬಾ ಅಂದ್ರು. ನಿನ್ನ ಪಾಲಿನದು

ಇಲ್ಲಿ ಕಾದಿರುತ್ತೆ ಎಂದು ಗೊತ್ತಿಲ್ಲವೇನು ?"

"ವೃದ್ಧಾಪ್ಯ ಕಳೆದು ನಿನಗೆ ದ್ವಿತೀಯ ತಾರುಣ್ಯ ಆರಂಭವಾಗಿ
ನನಗೆ ಇನ್ನೂ ವೃದ್ಧಾಪ್ಯವೇ ನಡಿಯುತ್ತಿದೆಯಪ್ಪ."

ಎಂದು ಆಚಾರ್ರು ಪರಿಹಾಸ್ಯಮಾಡಿದರು.

ಉಪಾಹಾರ ಮುಗಿದಮೇಲೆ ಆಚಾರ್ರು ಮಾಧೂ ಕಡೆ ತಿರು

"ಬೆಳಿಗ್ಗೆ ನಡೆದುದನ್ನು ನಾರಾಯಣಸ್ವಾಮಿಗೆ ತಿಳಿಸಿ" ಎಂದರ

"ಹೋಗಲಿ ಬಿಡಿ ಸ್ವಾಮಿ. ಆದದ್ದು ಆಯಿತು. ಪುನಃ ಅದ
ಪ್ರಸ್ತಾಪವೇಕೆ ?"

"ಇರಲಿ. ಇದೊಂದು ಬಾರಿ ಹೇಳಿಬಿಡಿ."

ಎಂದು ಆಚಾರ್ರು ಒತ್ತಾಯ ಮಾಡಿದರು. ಮಾಧೂ ಬೆಳಿಗ್ಗೆ
ಅನುಭವವನ್ನು ವಿವರಿಸಿದ.

"ಅಚ್ಯುತಪ್ಪನವರ ಕಾಗದ ತೋರಿಸಿ"

ಮಾಧೂ ಕಾಗದ ತೋರಿಸಿದ. ನಾರಾಯಣಸ್ವಾ
ಅಯ್ಯಂಗಾರ್ಯರು ಕಾಗದ ಓದಿಕೊಂಡು

"ರಾಘವೇಂದ್ರರಾಯರು ಇಲ್ಲಿಗೆ ಬಂದಾಗ ನನ್ನ ಆಫೀಸಿನ
ಜೂನಿಯರ್ ಆಗಿದ್ದರು. ಮನುಷ್ಯ ಬುದ್ಧಿವಂತ—ಮೂರು ವ
ನನ್ನ ಆಫೀಸಿನಲ್ಲಿದ್ದು ಸ್ವತಂತ್ರವಾಗಿ ಪ್ರ್ಯಾಕ್ಟೀಸ್ ಮಾಡಲಾರಂಭಿಸಿ
ಪ್ರ್ಯಾಕ್ಟೀಸು ಚೆನ್ನಾಗಿ ಬೆಳೆಯಿತು. ನನ್ನ ಜೂನಿಯರ್ ಇಷ
ಪ್ರವೃದ್ಧಮಾನಕ್ಕೆ ಬಂದನಲ್ಲಾ ಎಂದು ನಾನು ಸಂತೋಷಪಟ್ಟುಕೊಂ
ಆದರೆ ಆತನ ಮನಸ್ಸು ಒಳ್ಳೆಯದಲ್ಲ. ಗುರುವಿಗೇ ತಿರುಮಂ
ಹೇಳಲಾರಂಭಿಸಿದ. ಅವನ ಮಟ್ಟಕ್ಕೆ ನಾನು ಇಳಿಯಲಾರದೆ ಎಲ್ಲವನ
ಸಹಿಸಿಕೊಳ್ಳಬೇಕಾಯಿತು. ಈಗ ನಾನು ಹೆಚ್ಚು ಪ್ರ್ಯಾಕ್ಟೀ
ಇಟ್ಟುಕೊಂಡಿಲ್ಲ. ನನ್ನ ಕಕ್ಷಿಗಾರರೆಲ್ಲ ರಾಘವೇಂದ್ರರಾಯ
ಕಕ್ಷಿಗಾರರಾಗಿದ್ದಾರೆ. ನಿಮಗಾದ ಅನುಭವ ಕೇಳಿ ನನ್ನ ಮನಸ್ಸಿ
ತುಂಬ ವ್ಯಸನವಾಯಿತು. ಅಚ್ಯುತಪ್ಪನವರನ್ನು ನಾನು ಬಲ್ಲೆ–ಇಲ್ಲಿ
ನಾಲ್ಕೈದು ಭಾರಿ ಬಂದಿದ್ದರು. ವೆಂಕಟರಮಣ ಪರಿಚಯ ಪ

ಟ್ಟಿದ್ದಾನೆ. ಭೂಮಿ ತೂಕದ ಮನುಷ್ಯರು ಅವರು. ಅವರ ಮಾತನ್ನು ಹಗುರಮಾಡಿದ್ದಕ್ಕೆ ನನಗೆ ತುಂಬ ವಿಷಾದವಾಗಿದೆ."

"ನಾನು ಇಲ್ಲಿಯೇ ನಿಂತು ಪ್ರ್ಯಾಕ್ಟೀಸ್ ಮಾಡಬೇಕೆಂದಿದ್ದೇನೆ."

"ಆಗಬಹುದು ಬಹಳ ಸಂತೋಷ. ನನ್ನಿಂದ ಏನು ಸಹಾಯ ಆಗಬೇಕು ತಿಳಿಸಿ. ಸಂತೋಷವಾಗಿ ಮಾಡುತ್ತೇನೆ."

"ಸುಮ್ಮನೆ ದ್ರಾವಿಡ ಪ್ರಾಣಯಾಮ ಮಾಡಿ, ಒಣ ಉಪಚಾರ ಹೇಳಬೇಡಯ್ಯ. ಮಾಧೂರಾಯರನ್ನು ನಿನ್ನ ಆಫೀಸಿಗೆ ತೆಗೆದುಕೊಂಡು, ಕೈತುಂಬ ಸಂಬಳಕೊಡು."

"ಈಗ ನನ್ನ ಪ್ರ್ಯಾಕ್ಟೀಸು ಹೇಗಿದೆ ಎನ್ನುವುದು ನಿನಗೆ ಗೊತ್ತಿಲ್ಲವೇನೋ ವೆಂಕಟರಮಣ."

"ಗೊತ್ತಿದೆ. ಒಂದು ಕಾಲದಲ್ಲಿ ಪಟ್ಟಣದ ಸರ್ವಾಧಿಕಾರ ನಡೆಸಿ ಗಂಟು ಮಾಡಿದೆಯಲ್ಲ, ಅದನ್ನು ಸ್ವಲ್ಪ ಬಿಚ್ಚು. ಒಬ್ಬರಾದರೂ ನಿನ್ನ ಹೆಸರು ಹೇಳಿಕೊಂಡು ನಿನ್ನ ಉಪಕಾರ ಸ್ಮರಿಸಿಕೊಳ್ಳಲಿ."

"ನಾನು ಯಾರಿಗೂ ಉಪಕಾರ ಮಾಡಿಯೇ ಇಲ್ಲವೇ ?"

"ಯಾರಿಗೋ ಉಪಕಾರ ಮಾಡಿದರೆ ನನಗೇನಯ್ಯ ಬಂತು ಲಾಭ. ಇವರು ನಮ್ಮವರು — ನಮ್ಮ ಬೀಗರ ಕಡೆಯವರು — ಇವರಿಗೆ ಉಪಕಾರ ಮಾಡಿದರೆ ನನಗೆ ಉಪಕಾರ ಮಾಡಿದಂತೆ ಆಗುತ್ತದೆ."

"ಆಗಲಪ್ಪ–ನೀನು ಹೇಳಿದಂತೆ ಆಗಲಿ. ನಿನ್ನ ಮಾತಿಗೆ ಪ್ರತಿ ಹೇಳುತ್ತೇನೆಯೇ ?" ಎಂದು ನಾರಾಯಣಸ್ವಾಮಿ ಅಯ್ಯಂಗಾರ್ಯರು ಸಂತೋಷವಾಗಿ ಒಪ್ಪಿಕೊಂಡರು.

"ನಾನು ಊರಿಗೆ ಹೋಗಿ ಹದಿನೈದು ಇಪ್ಪತ್ತು ದಿವಸಗಳ ಒಳಗೆ ಬಂದು ಬಿಡುತ್ತೇನೆ ಸರ್."

"ಹಾಗೆ ಮಾಡಿ. ಯಾವಾಗ ಅನುಕೂಲವೋ ಆಗ ಬನ್ನಿ."

ಮಾಧೂ ಪಟ್ಟಣದಲ್ಲಿ ಮಾಡಿಕೊಂಡ ವ್ಯವಸ್ಥೆ ಕಂಡು ಗೋದಮ್ಮನವರಿಗೆ ವಿಶೇಷತೃಪ್ತಿಯಾಯಿತು. ನಿತ್ಯ ಕಾವೇರಿ ಸ್ನಾನ, ರಂಗನಾಥ ಸ್ವಾಮಿಯ ದರ್ಶನ ಸಿಕ್ಕುತ್ತದೆಂದು ಅವರು ಹರ್ಷಚಿತ್ತರಾದರು.

ಚಿಕ್ಕರಾಯನಪುರಕ್ಕೆ ಹಿಂದಿರುಗಿದ ಮೇಲೆ ಮಾಧೂ ಮುನಸಿ
ಫರನ್ನು ಕಂಡು ತನ್ನ ರಾಜಿನಾಮೆಯ ವಿಷಯ ತಿಳಿಸಿದ. ಶ್ರೀಕಂ
ಶಾಸ್ತ್ರಿಗಳು ಮಾಧೂವನ್ನು ಹೃತ್ಪೂರ್ವಕವಾಗಿ ಹರಸಿ

"ಮೊದಲನೆಯ ತಾರೀಖಿನವರೆಗೆ ಕೆಲಸಮಾಡಿ ಸಂಬಳ ತೆಗೆ
ಕೊಂಡು ಹೋಗಿ ಮಾಧವರಾವ್" ಎಂದು ಸಲಹೆಯಿತ್ತರು.

ಚಿಕ್ಕರಾಯನಪುರದಲ್ಲಿ ಮಾಧೂಗೆ ಎಂಟು ಹತ್ತು ದಿವಸಗ
ಕೆಲಸವಿತ್ತು. ಎಲ್ಲ ಹಿತೈಷಿಗಳ ಆಶೀರ್ವಾದ ಪಡೆದು, ರಾಮಯ
ಶೆಟ್ಟರಿಗೆ ತಿಳಿಸಿ, ಸಾಮಾನುಗಳ ಸಾಗಾಣಿಕೆಗೆ ವ್ಯವಸ್ಥೆ ಮಾಡಿದ.

ಗೋದಮ್ಮ, ರುಕ್ಮಿಣಿ ಹೊರಟು ಹೋಗುವ ವಿಷಯ ಕೇ
ವಿಶೇಷ ವ್ಯಥೆ ಪಟ್ಟವರು ರಮಾಬಾಯಿ, ಇಂದಿರಾಬಾಯಿ. ರಮಾಬಾಯ
ಎಲ್ಲರನ್ನೂ ಮನೆಗೆ ಕರೆದು ಸೊಗಸಾದ ಔತಣಮಾಡಿ, ರುಕ್ಮಿಣಿ
ಕುಪ್ಪಸದ ಕಣ ಓದಿಸಿ, ಕಮಲನ ಕೈಗೆ ಐದು ರೂಪಾಯಿ ಇಟ್ಟರು.

ಇಂದಿರಾಬಾಯಿ ನೀರಿನಿಂದ ಹೊರಬಿದ್ದ ಮೀನಿನಂತೆ ಲಿಬಲಿಬ
ಒದ್ದಾಡಿದಳು. ಆಕೆಯನ್ನು ಸಮಾಧಾನಮಾಡುವಲ್ಲಿ ಗೋದಮ್ಮನವರಿ
ಸಾಕುಸಾಕಾಗಿ ಹೋಯಿತು.

ಮಾಧೂ, ಅವನ ಸಂಸಾರ ಪಟ್ಟಣ ತಲುಪುವ ವೇಳೆಗೆ ವೆಂಕಟ
ರಮಣಾಚಾರ್ರು ಪ್ರತ್ಯೇಕ ಮನೆ ಗೊತ್ತುಮಾಡಿದ್ದರು. ಪಟ್ಟ
ತಲುಪಿದ ಕೂಡಲೆ ಅವರು ಬೇರೆ ಮನೆಗೆ ಹೋಗುವುದಕ್ಕೆ ವೃಂದವ
ಸಮ್ಮತಿಸಲಿಲ್ಲ. ಮೂರು ದಿವಸ ತಮ್ಮಲ್ಲಿಯೇ ಉಳಿಸಿಕೊಂಡು ಮಾಧ
ಮನೆಯಲ್ಲಿ ಸಾಮಾನು, ಸರಂಜಾಮೆಲ್ಲಾ ವ್ಯವಸ್ಥೆಯಾದ ಮೇ
ಅವನ ಸಂಸಾರವನ್ನು ಕಳುಹಿಸಿಕೊಟ್ಟರು.

ತನಗೆ ವೆಂಕಟರಮಣಾಚಾರ್ರು ಗೊತ್ತುಮಾಡಿದ್ದ ಮನೆನೋ
ಮಾಧೂ ಗಾಬರಿಯಾದ. ದೊಡ್ಡ ಜಗಲಿ, ಒಳಗೆ ಪ್ರವೇಶಮಾಡಿದೊ
ನೆಯೇ ನಾಲ್ಕು ಕಂಬದ ತೊಟ್ಟಿ. ತೊಟ್ಟಿಯ ಅತ್ತಿತ್ತ ಎರಡೆರಡ
ರೂಮು, ಮುಂಬಾಗಿಲಿಗೆ ಎದುರಾಗಿ ದೇವರಮನೆ, ಅಡಿಗೆಯಮನ
ಅಡಿಗೆಯ ಮನೆಯ ದಕ್ಷಿಣಕ್ಕೆ ಸ್ನಾನಗೃಹ. ಮಹಡಿಯ ಮೇಲೆ ಒಂದ

ಶಾಲವಾದ ಹಜಾರ ಮನೆ ಬೀದಿಗೆ ಸೇರಿಕೊಂಡಂತೆ ಇತ್ತು. ಹಿಂದುಗಡೆ ಾಕಷ್ಟು ವಿಶಾಲವಾದ ಬಯಲಿತ್ತು. ಬಯಲಿನಲ್ಲಿ ಕುಡಿಯುವ ೀರಿನ ಭಾವಿ.

ವಿಶಾಲವಾಗಿದ್ದ ಹಿತ್ತಲು ನೋಡಿ ರುಕ್ಮಿಣಿ ಸಂತೋಷದಿಂದ ೋದಮ್ಮನವರಿಗೆ

"ತುಂಬ ಹೂವಿನಗಿಡ ಹಾಕಬೇಕು ಅಮ್ಮ" ಎಂದಳು.

"ತುಳಸೀವನಮಾಡಿ, ರಂಗನಾಥಸ್ವಾಮಿಗೆ ಪ್ರತಿನಿತ್ಯ ತುಳಸೀ ಾಲೆ ಅರ್ಪಿಸಬೇಕು" ಎಂದು ಗೋದಮ್ಮನವರು ನುಡಿದರು.

ಮನೆಯ ಉದ್ದಗಲವನ್ನೇ ಪರೀಕ್ಷಿಸುತ್ತಿದ್ದ ಮಾಧೂ

"ನಾವು ಇರುವವರು ನಾಲ್ಕು ಜನ. ನಮಗೇಕೆ ಸ್ವಾಮಿ ಇಷ್ಟು ೊಡ್ಡ ಮನೆ" ಎಂದ.

"ನಾಲ್ಕಲ್ಲ – ಐದು ಮಾಧವರಾವ್. ಕಮಲನನ್ನೇಕೆ ಮರೆತಿರಿ. ಈ ವರ್ಷ ಐದು – ಮುಂದಿನ ವರ್ಷ ಆರು. ಬೆಳೆಯುವ ಸಂಸಾರಕ್ಕೆ ೊಡ್ಡ ಮನೆ ಇರಬೇಕು."

"ಬಾಡಿಗೆ ಕೊಡೋ ಚೈತನ್ಯ ಬೇಕಲ್ಲ ಸ್ವಾಮಿ."

"ಬಾಡಿಗೆ ಎಷ್ಟೆಂದು ತಿಳಿದಿರುವಿರಿ? ಹೇಳಿ ನೋಡೋಣ."

"ಇಪ್ಪತ್ತೋ ಇಪ್ಪತ್ತೈದೋ ಇರಬಹುದು."

"ಮನೆ ಬಾಡಿಗೆ ಹನ್ನೆರಡು — ಲೈಟಿನ ಚಾರ್ಜು ಎರಡು ೂಪಾಯಿ – ಒಟ್ಟು ಹದಿನಾಲ್ಕೇ ರೂಪಾಯಿ."

"ಮನೆಯ ಮಾಲೀಕರು ಧರ್ಮಾತ್ಮರು ಸ್ವಾಮಿ."

"ಪಟ್ಟಣದ ವಾಸ ದುಬಾರಿಯಲ್ಲ ಮಾಧವರಾವ್. ನಾರಣ ಯ್ಯಂಗಾರ್ಯರು ತಿಂಗಳಿಗೆ ಎಪ್ಪತ್ತೈದು ರೂಪಾಯಿ ಕೊಡುವುದಕ್ಕೆ ಪ್ಪಿಕೊಂಡಿದ್ದಾರೆ. ಮೂರು ತಿಂಗಳು ಕಳೆದ ಮೇಲೆ ಹೆಚ್ಚು ಾಡುವರಂತೆ. ಮನೆ ಬಾಡಿಗೆ ಕಳೆದು ನಿಮ್ಮ ಕೈಯಲ್ಲಿ ಅರವತ್ತೊಂದು ೂಪಾಯಿ ಮಿಗುತ್ತದೆ. ಆ ಹಣದಲ್ಲಿ ದೊರೆಜೀವನ ಮಾಡಬಹುದು. ೂಪಾಯಿಗೆ ಹತ್ತು ಸೇರು ಅಕ್ಕಿ, ರೂಪಾಯಿಗೆ ಎಂಟು ಸೇರು ಜೆಣ್ಣೆ,

ಆರು ರೂಪಾಯಿಗೆ ಒಂದು ಖಂಡುಗ ಭತ್ತ, ದಿವಸಕ್ಕೆ ಅರ್ಧಾ
ಒಂದಾಣೆ ಖರ್ಚುಮಾಡಿದರೆ ಮನೆಮಂದಿಗಾಗುವಷ್ಟು ತರಕ
ಸಿಕ್ಕುತ್ತದೆ."

"ನಿಮ್ಮ ಆಶ್ರಯಕ್ಕೆ ಬಂದಿದ್ದೇನೆ. ನೀವು ಹೇಗೆ ಹೇಳಿದರೆ ಹ
ಮಾಡುತ್ತೇನೆ" ಎಂದು ಮಾಧವರಾಯ ಹೇಳಿದ.

೧೫

ಹೊಸಹುರುಪಿನಿಂದ ಮಾಧೂ ಸಂಸಾರ ಪಟ್ಟಣದಲ್ಲಿ ಆರಂಭವಾಯಿತು. ಬೆಳಿಗ್ಗೆ ಉಪಾಹಾರ ಮುಗಿಸಿಕೊಂಡು ಕಛೇರಿಗೆ ಹೋಗಿ, ಹನ್ನೊಂದು ಗಂಟೆಯ ವೇಳೆಗೆ ಮನೆಗೆ ಬಂದು ಊಟಮಾಡಿಕೊಂಡು ಕೋರ್ಟಿಗೆ ಹೋಗುತ್ತಿದ್ದ. ಕೋರ್ಟಿನಿಂದ ಹಿಂದಿರುಗುವ ವೇಳೆಗೆ ಐದು ಗಂಟೆಯಾಗುತ್ತಿತ್ತು. ಮನೆಗೆ ಬಂದವನೇ ಉಪಾಹಾರ ತೆಗೆದುಕೊಂಡು ಮತ್ತೆ ಕಛೇರಿಗೆ ಹೋಗಿ ರಾತ್ರಿ ಒಂಭತ್ತು ಗಂಟೆಯ ವೇಳೆಗೆ ಮನೆಗೆ ಹಿಂದಿರುಗುತ್ತಿದ್ದ.

ರುಕ್ಮಿಣಿ ಐದು ಗಂಟೆಗೆ ಹಾಸಿಗೆ ಬಿಟ್ಟು ಏಳುತ್ತಿದ್ದಳು. ಎದ್ದ ಕೂಡಲೆ ಗಂಡನಿಗೂ, ಅತ್ತೆಯವರಿಗೂ ನಮಸ್ಕರಿಸಿ, ತೊಟ್ಟಿಯಲ್ಲಿದ್ದ ಶ್ರೀ ರಾಘವೇಂದ್ರ ಗುರುಗಳ ಚಿತ್ರಕ್ಕೆ ನಮಿಸಿ ಮುಖಮಾರ್ಜನೆ ಮಾಡಿಕೊಂಡು ಹೊರಬಾಗಿಲನ್ನು ಸಾರಿಸಿ, ರಂಗವಲ್ಲಿ ಇಟ್ಟು, ತೊಟ್ಟಿಯನ್ನು ಶುಚಿಮಾಡಿ ಸ್ನಾನ ಮಾಡುತ್ತಿದ್ದಳು. ಸ್ನಾನ ಮುಗಿದೊಡನೆಯೆ ದೇವರಿಗೆ ದೀಪ ಹಚ್ಚಿಟ್ಟು, ಹೂ ತುಳಸಿ ಅರ್ಪಿಸಿ ಕಾಫಿ, ಉಪಾಹಾರ ಸಿದ್ಧಮಾಡುತ್ತಿದ್ದಳು.

ಸೊಸೆ ಅಡಿಗೆಯಮನೆಗೆ ಬರುವವರೆಗೆ ಗೋದಮ್ಮನವರು ಮನೆಯಲ್ಲಿಯೇ ಇದ್ದು ಮಗುವನ್ನು ನೋಡಿಕೊಳ್ಳುತ್ತಿದ್ದರು. ಅವಳಿಗೆ ಸ್ವಲ್ಪ ಪುರುಸತ್ತಾದ ಕೂಡಲೆ ಕಾವೇರಿಗೆ ಹೋಗಿ ಸ್ನಾನ ಮುಗಿಸಿ

ಕೊಂಡು, ರಂಗನಾಥಸ್ವಾಮಿಯ ದರ್ಶನ ತೆಗೆದುಕೊಂಡು ಮನೆಗೆ ಬಂದು, ತಾವೇ ಅಡಿಗೆಗೆ ಕೂಡುತ್ತಿದ್ದರು.

ಒಂದೊಂದು ದಿನ ರಾತ್ರಿ ಕಮಲೂ ಹಟಹಿಡಿದು ಕೂಡುತ್ತಿದ್ದಳು. ಅವಳ ಜತೆಗೂ ರುಕ್ಮಿಣಿ ಜಾಗರಣೆ ಮಾಡುತ್ತಿದ್ದಳು. ಅಜ್ಜಿಯ ಲಾಲನೆಗೂ ಬಗ್ಗುತ್ತಿರಲಿಲ್ಲ. ರಾತ್ರಿ ಪೂರ್ತಿ ಜಾಗರಣೆಯಾಗಿದ್ದರೂ ರುಕ್ಮಿಣಿ ಐದು ಗಂಟೆಗೆ ಏಳುವುದು ವ್ಯತ್ಯಾಸ ಹೊಂದುತ್ತಿರಲಿಲ್ಲ. ಮಧ್ಯಾಹ್ನದ ಊಟ ಮುಗಿದಮೇಲೆ, ಗೋದಮ್ಮ ಸೊಸೆಯನ್ನಾದರಿಸಿ

"ಸ್ವಲ್ಪಹೊತ್ತು ಮಲಗಿಕೊ ಹೋಗು ತಾಯಿ – ರಾತ್ರಿಯೆಲ್ಲಾ ಕಮಲೂ ಜಾಗರಣೆ ಮಾಡಿಸಿದ್ದಾಳೆ'' ಎನ್ನುತ್ತಿದ್ದರು.

"ಪರವಾಗಿಲ್ಲಮ್ಮ. ನನಗೆ ನಿದ್ರೆ ಬರುವ ಹಾಗಿಲ್ಲ.''

''ಮಲಗಿಕೊಂಡು, ಕಣ್ಣು ಮುಚ್ಚಿಕೊ – ತಾನೇ ನಿದ್ರೆ ಬರುತ್ತದೆ. ಎಳೇಮೈ ಈಗಲೇ ಇಷ್ಟು ಅಲಸಿಕೆ ಮಾಡಿಕೊಂಡರೆ ನಾಳೆ ತುಂಬ ಕಷ್ಟವಾಗುತ್ತದೆ." ಎಂದು ಒತ್ತಾಯಮಾಡಿ ರುಕ್ಮಿಣಿಯನ್ನು ಮಲಗಲು ಕಳಿಸುತ್ತಿದ್ದರು. ಮಧ್ಯಾಹ್ನ ನಿದ್ರೆ ಮಾಡದಿದ್ದ ದಿನ ರುಕ್ಮಿಣಿ ರಾಮಾಯಣ, ಭಾರತ, ಭಾಗವತ ಓದಿಕೊಳ್ಳುತ್ತಿದ್ದಳು.

ಸಂಜೆ, ಅತ್ತೆ ಸೊಸೆ ಕೂಡಿಯೇ ದೇವಸ್ಥಾನಕ್ಕೆ ಹೋಗಿ ರಂಗನಾಥ ಸ್ವಾಮಿಯ ದರ್ಶನ ಮಾಡಿಕೊಂಡು ಬರುತ್ತಿದ್ದರು.

ಊರಿಗೆ ಊರೇ ಗೋದಮ್ಮ, ರುಕ್ಮಿಣಿಯರ ಮೈತ್ರಿ ನೋಡಿ ಆಶ್ಚರ್ಯಪಡುತ್ತಿತ್ತು. ವೃಂದಮ್ಮ ಒಂದು ದಿನ

"ನೀವು ಅತ್ತೆ ಸೊಸೆ ಅಲ್ರೀ ಗೋದಮ್ಮ, ಅನೇಕ ಜನ್ಮಗಳಲ್ಲಿ ತಾಯಿ ಮಕ್ಕಳಾಗಿದ್ದಿರೆಂದು ಕಾಣುತ್ತದೆ."

"ಹೌದಮ್ಮ, ಅದರಲ್ಲಿ ಸಂದೇಹವೇ ಇಲ್ಲ. ರುಕ್ಕೂನೇ ತಾಯಿಯಾಗಿದ್ದಳು, ನಾನೇ ಮಗಳಾಗಿದ್ದೆ." ಎಂದು ಅಭಿಮಾನದಿಂದ ಹೇಳುತ್ತಿದ್ದರು.

ಪತಿವಿಯೋಗವಾದಂದಿನಿಂದ ಒಪ್ಪತ್ತು ಊಟ ಮಾಡುತ್ತಿದ್ದ

ಗೋದಮ್ಮನವರು, ರಾತ್ರಿ ಉಪವಾಸ ಮಲಗಲು ರುಕ್ಮಿಣಿ ಬಿಡುತ್ತಿರಲಿಲ್ಲ. ಅವಳ ಬಲವಂತಕ್ಕಾಗಿ ಗೋದಮ್ಮನವರು ಅಲ್ಪ ಉಪಾಹಾರ ಸ್ವೀಕರಿಸಲೇ ಬೇಕಾಗುತ್ತಿತ್ತು. ಗೋದಮ್ಮನವರು 'ಏನೂ ಬೇಡ', ಎಂದು ಹಟಹಿಡಿದರೆ ರುಕ್ಮಿಣಿ ಮುಖ ಚಿಕ್ಕದಾಗುತ್ತಿತ್ತು. ಮರುಕ್ಷಣವೇ ಗೋದಮ್ಮನವರ ಮನಸ್ಸು ಕರಗಿ

"ತೆಗೆದುಕೊಂಡು ಬಾ ತಾಯಿ. ಏನು ಮಾಡಿದ್ದೀಯೊ ಕೊಡು. ಚೆನ್ನಾಗಿ ಗದಗುತ್ತೇನೆ. ಒಪ್ಪತ್ತು ನಿನ್ನ ಕೂಡಿಸಿ ಇಕ್ಕಿ, ಎರೆದು ಉಪಚಾರ ಮಾಡಲಿಲ್ಲ. ನಿತ್ಯ ನಿನ್ನ ಕೈಯಲ್ಲಿ ಸೇವೆಯನ್ನು ನಿಸ್ಸಂಕೋಚವಾಗಿ ಮಾಡಿಸಿಕೊಳ್ಳುತ್ತಿದ್ದೇನೆ." ಎನ್ನುತ್ತಿದ್ದರು.

ಮನೆಯಲ್ಲಿ ತಾಯಿ, ಹೆಂಡತಿಗಿದ್ದ ಅನ್ಯೋನ್ಯ ಮಾಧೂ ಮನಸ್ಸಿಗೆ ಹೆಚ್ಚಿನ ಶಾಂತಿಯನ್ನು ಕೊಟ್ಟಿತ್ತು. ಮನೆಯ ಚಿಂತೆಯಿಟ್ಟುಕೊಳ್ಳದೆ ಅವನು ತನ್ನ ಕಛೇರಿ, ಕೋರ್ಟು ಕೆಲಸ ಸಾಗಿಸಿಕೊಂಡು ಹೋಗಲು ಸಾಧ್ಯವಾಗಿತ್ತು.

ನಾರಾಯಣಸ್ವಾಮಿ ಅಯ್ಯಂಗಾರ್ಯರು ಒಂದು ಕಾಲಕ್ಕೆ ಚೆನ್ನಾಗಿ ಬಾಳಿದವರು. ವಕೀಲವೃತ್ತಿಯಲ್ಲಿ ಅವರ ಹಾಗೆ ಗಳಿಸಿದವರೂ, ವ್ಯಯಮಾಡಿದವರೂ ಬೇರೊಬ್ಬರಿರಲಿಲ್ಲ. ಕಾಲು ಶತಮಾನ ವಕೀಲ ವೃಂದದ ಅನಭಿಷಿಕ್ತ ಚಕ್ರವರ್ತಿಗಳಂತೆ ಆಳಿದರು. ದಿವಾನರೂ, ಕೌನ್ಸಿಲರ್‌ಗಳೂ, ಸ್ಟೇಟ್ ಆಫೀಸರುಗಳೂ, ಡೆಪ್ಯುಟಿ ಕಮಿಷನರುಗಳೂ ಯಾರು ಪಟ್ಟಣದ ಮಾರ್ಗವಾಗಿ ಹೋದರೂ ನಾರಾಯಣ ಸ್ವಾಮಿ ಅಯ್ಯಂಗಾರ್ಯರ ಆತಿಥ್ಯವಾಗುತ್ತಿತ್ತು.

ಅಯ್ಯಂಗಾರ್ಯರ ಖರ್ಚಿನಲ್ಲಿ ಇತಿಮಿತಿ ಇಲ್ಲದಿದ್ದುದೊಂದೇ ಅವರಲ್ಲಿದ್ದ ದೊಡ್ಡ ಕೊರತೆ. ಒಂದು 'ವನಭೋಜನ' ಕೂಟಕ್ಕೆ ಸಾವಿರ, ಎರಡು ಸಾವಿರ ರೂಪಾಯಿ ಖರ್ಚುಮಾಡುವುದು ಅವರಿಗೆ ರೂಢಿಯಾಗಿತ್ತು. ಅದೇ ಪ್ರಮಾಣದಲ್ಲಿ ತಮ್ಮ ಹೆಣ್ಣುಮಕ್ಕಳೆಲ್ಲರ ಮತ್ತು ಕೆಲವು ಹೆಣ್ಣುಮಕ್ಕಳ ಮಕ್ಕಳ ಲಗ್ನವನ್ನೂ ನೆರವೇರಿಸಿದ್ದರು.

ಅಯ್ಯಂಗಾರ್ಯರಿಗೆ ಗಂಡು ಮಕ್ಕಳಿರಲಿಲ್ಲ. ಎಂಟು ಮಂದಿ

ಹೆಣ್ಣುಮಕ್ಕಳೂ ಲಗ್ನವಾಗಿ ಪತಿಗೃಹಗಳಲ್ಲಿದ್ದರು. ವೃದ್ಧಾಪ್ಯದಲ್ಲಿ ನೆರವಿಗೆ ಯಾರೂ ಇಲ್ಲವಲ್ಲ ಎನ್ನುವ ಚಿಂತೆ, ಅವರನ್ನು ಸದಾ ಕಾಡುತ್ತಿತ್ತು.

ಕೇವಲ ಆಫೀಸ್ ಕೆಲಸಕ್ಕೆ ಬಂದಿದ್ದ ' ಜೂನಿಯರ್ ಪ್ಲೀಡರ್ ' ಎಂಬ ಭಾವನೆಯನ್ನು ಮಾಧೂ ಬಗ್ಗೆ ತಳೆಯದೆ, ಅವನನ್ನು ಮಗನಂತೆ ಕಾಣತೊಡಗಿದ್ದರು. ಕಕ್ಷಿಗಾರರು ತಂದುಕೊಡುತ್ತಿದ್ದ ಹಣ್ಣು, ತರಕಾರಿ, ತುಪ್ಪ ಇತ್ಯಾದಿಗಳಲ್ಲಿ ಅರ್ಧಭಾಗವನ್ನು ಮಾಧೂ ಮನೆಗೆ ಕಳಿಸಿ ಕೊಡುತ್ತಿದ್ದರು. ಕಕ್ಷಿಗಾರರ ಕಡೆಯಿಂದ ಐದು, ಹತ್ತು, ಹದಿನೈದು ರೂಪಾಯಿಗಳು ಬಂದರೆ, ಅವುಗಳನ್ನು ಮಾಧೂಗೇ ಬಿಟ್ಟುಬಿಡುತ್ತಿದ್ದರು. ತಿಂಗಳಿಗೆ ಕ್ರಮವಾಗಿ ಸಂಬಳದಂತೆ ಅಯ್ಯಂಗಾರ್ಯರು ಕೊಡುತ್ತಿದ್ದ ಎಪ್ಪತ್ತೈದು ರೂಪಾಯಿಗಳ ಜತೆಗೆ ನಲವತ್ತು, ಐವತ್ತು ರೂಪಾಯಿಗಳು ಸಿಕ್ಕುತ್ತಿದ್ದವು.

ಒಮ್ಮೊಮ್ಮೆ ಅಯ್ಯಂಗಾರ್ಯರು ಪೂರ್ವಸ್ಮರಣೆ ಮಾಡಿಕೊಂಡು.

" ನೀವು ಈಗ ನನ್ನ ಆಫೀಸಿಗೆ ಬಂದಿದ್ದೀರಿ ಮಾಧವರಾವ್. ಹತ್ತು ವರ್ಷಗಳ ಹಿಂದೆ ಬರಬೇಕಾಗಿತ್ತು. ಆಗ ದುಡ್ಡಿನ ಲಕ್ಷ್ಯವಿರಲಿಲ್ಲ, ಈಗ ನನಗೂ ವಯಸ್ಸಾಯಿತು. ದುಡ್ಡಿಗೂ ಬೆಲೆಯೇರಿ ಬಿಟ್ಟಿತು." ಎಂದರೆ ಮಾಧೂ

" ನನಗೆ ತಾವು ಯಾವದಕ್ಕೂ ಕಡಿಮೆ ಮಾಡಿಲ್ಲ ಸರ್. ಹೆಚ್ಚು ನಾನು ಆಸೆಪಟ್ಟರೆ ಅದು ದುರಾಶೆಯಾಗುತ್ತದೆ" ಎಂದು ಉತ್ತರ ಕೊಡುತ್ತಿದ್ದ.

ಮಾಧೂಗೆ ನಾರಾಯಣಸ್ವಾಮಿ ಅಯ್ಯಂಗಾರ್ಯರ ಆಶ್ರಯ ದೊರೆತದ್ದು ರಾಘವೇಂದ್ರರಾಯರಿಗೆ ತಳಮಳವನ್ನುಂಟುಮಾಡಿತ್ತು. ನಾರಾಯಣಸ್ವಾಮಿ ಅಯ್ಯಂಗಾರ್ಯರ ಹೆಸರಿನ ಬಲದ ಜತೆಗೆ ಮಾಧೂ ಸದ್ವರ್ತನೆಯೂ ಸೇರಿಕೊಂಡು ಅವನ ಯಶಸ್ಸು ಬೆಳೆಯತೊಡಗಿತ್ತು. ರಾಘವೇಂದ್ರರಾಯರು ಮಾಧೂಗೆ ತಮ್ಮ ಆಫೀಸಿನಲ್ಲಿ ಆಶ್ರಯಕೊಡಲು ನಿರಾಕರಿಸಿದುದರ ಮೂಲಕಾರಣವೂ ಇದೇ ಆಗಿತ್ತು. ' ಇವನು

ಯಶಸ್ವಿಯಾಗಿ ನನಗೇ ಗುಟುಕು ನೀರಾಗುತ್ತಾನೆ. ಶಿಶುವಾಗಿರುವಾಗಲೇ ಶತ್ರುವನ್ನು ತುಳಿದುಬಿಡಬೇಕು' ಎಂದು ರಾಘವೇಂದ್ರರಾಯರು ಯೋಚಿಸಿಕೊಂಡೇ ಮಾಧುವನ್ನು ತುಚ್ಛೀಕರಿಸಿದ್ದರು.

ಅಂದಿನ ಪ್ರಕರಣ ರಾಘವೇಂದ್ರರಾಯರಿಗೆ ಮರೆತು ಹೋಗಿರಲಿಲ್ಲ, ಮಾಧುವೂ ಅದನ್ನು ಮರೆತಿರಲಿಲ್ಲ.

ಒಂದು ದಿನ ಆಫೀಸಿನಲ್ಲಿ ನಾರಾಯಣಸ್ವಾಮಿ ಅಯ್ಯಂಗಾರ್ಯರು, ಮಾಧೂ ಯಾವದೋ ಕೇಸಿಗೆ ಬೇಕಾಗಿದ್ದ ಆಧಾರಗಳನ್ನು ಹುಡುಕುತ್ತ ಕುಳಿತಿದ್ದರು. ಸುಮಾರು ಮೂವತ್ತು ವಯಸ್ಸಿನ ತರುಣ ಬಂದು ಕೈಮುಗಿದ.

ಅಯ್ಯಂಗಾರ್ಯರು ಕತ್ತೆತ್ತಿ ನೋಡಿ ಅವನ ಕೊಳಕು ಪಂಚೆ, ಹರಕು ಕೋಟು, ತೇಪೆಹಾಕಿದ ಗಾಂಧಿ ಟೋಪಿಯನ್ನು ಗಮನಿಸಿ.

"ಯಾರಪ್ಪಾ ? ಏನಾಗಬೇಕಾಗಿತ್ತು ?" ಎಂದು ಕೇಳಿದರು.

ಬಂದಿದ್ದವನು ಮತ್ತೆ ಕೈಮುಗಿದು, ಅತ್ಯಂತ ವಿನಯದಿಂದ

"ದೇವರನ್ನು ಮರೆಹೊಕ್ಕಂತೆ ನಿಮ್ಮ ಮರೆಹೊಕ್ಕಿದ್ದೇನೆ ಸ್ವಾಮಿ. ನನ್ನ ಉದ್ಧಾರ ಮಾಡಬೇಕು." ಎಂದ.

"ಏನು ಸಂದರ್ಭ ಹೇಳು."

"ನಾನು ಗಂಜಾಂ ಪಕ್ಕದ ನಾಗನಹಳ್ಳಿಯವನು ಸ್ವಾಮಿ."

"ನಿನ್ನ ಹೆಸರು."

"ಭರಮೇಗೌಡ."

"ಕೇಶವಯ್ಯಂಗಾರ್ರ ಗದ್ದೆಗಳಿರುವ ನಾಗನಹಳ್ಳಿಯೇ !"

"ಹೌದು ಮಾಸ್ವಾಮಿ."

"ಹೂ – ಮುಂದೆ."

"ಬೈರಮ್ಮನವರು ನನ್ನ ದತ್ತು ತೆಗೆದುಕೊಂಡಿದ್ದರು.'

"ಎಷ್ಟು ವರ್ಷಗಳ ಹಿಂದೆ."

"ಸುಮಾರು ೧೫–೧೬ ವರ್ಷಗಳಾಗಿರಬಹುದು. ಮನೆಗೆ ನಾನೇ ಯಜಮಾನನಾಗಿದ್ದೆ. ಹೊಲ ಗದ್ದೆಗಳನ್ನು ರೂಢಿಸಿ ಮುಂದಕ್ಕೆ

ತಂದೆ. ಬೈರಮ್ಮನವರೇ ನನಗೆ ಲಗ್ನಮಾಡಿಸಿದರು. ಈಗ ನನಗೆ ನಾಲ್ಕು ಮಕ್ಕಳು."

"ನಿನ್ನ ಕಷ್ಟವೇನು ಹೇಳಪ್ಪಾ."

"ಈಗ್ಗೆ ಒಂದು ವರ್ಷದಿಂದ ಬೈರಮ್ಮ ನನಗೆ ಕಾಟಕೊಡುವುದಕ್ಕಾರಂಭಿಸಿದರು. ನನಗೂ ಅಮ್ಮನಿಗೂ ಆಗಾಗ್ಗೆ ಸಣ್ಣಪುಟ್ಟ ಜಗಳವೂ ಆಗುತ್ತಿತ್ತು. ಮೂರು ತಿಂಗಳ ಹಿಂದೆ ಒಂದು ದಿನ ಮಾತಿಗೆ ಮಾತು ಬೆಳೆದು ಜಗಳ ವಿಪರೀತವಾಯಿತು. ಅಮ್ಮ ರೇಗಿಕೊಂಡು ನನ್ನ ಮನೆಬಿಟ್ಟು ಹೊರಗೆ ಹಾಕಿ, ನನ್ನ ಹೆಂಡತಿ ಮಕ್ಕಳನ್ನೂ ಹೊಡೆದಟ್ಟಿಬಿಟ್ಟಳು. ಆಸ್ತಿಯನ್ನೆಲ್ಲಾ ಧರ್ಮಕ್ಕೆ ಬರೆಯುವುದಾಗಿ ಎಲ್ಲರಲ್ಲಿಯೂ ಹೇಳುತ್ತಿದ್ದಾಳೆ."

"ವಹಿವಾಟೆಲ್ಲ ನಿಮ್ಮಮ್ಮನೇ ನಡಸುತ್ತಿದ್ದಳೋ ?"

"ಹೌದು ಸ್ವಾಮಿ. ಒಂದು ಚಿಕ್ಕಾಸು ಬೇಕಾದರೂ ಅವರನ್ನೇ ನಾನು ಕೇಳಬೇಕಾಗಿತ್ತು."

"ನಿನ್ನ ದತ್ತು ತೆಗೆದುಕೊಂಡದ್ದಕ್ಕೆ, ಮದುವೆ ಮಾಡಿಸಿದ್ದಕ್ಕೆ ದಾಖಲೆಗಳಿವೆಯೋ ?"

"ಇವೆ ಸ್ವಾಮಿ. ನನ್ನ ಲಗ್ನಪತ್ರಿಕೆ ಕೂಡ ಬೈರಮ್ಮನವರ ಹೆಸರಿನಲ್ಲೇ ಇದೆ."

"ನಿಮ್ಮಲ್ಲಿ ವೈಮನಸ್ಯ ಹುಟ್ಟುವುದಕ್ಕೇನು ಕಾರಣ ?"

"ಕೇಶವಯ್ಯಂಗಾರ್ರ ಪಿತೂರಿ. ಅವರು ರೈತರಿಗೆ ತುಂಬ ಅನ್ಯಾಯ ಮಾಡುತ್ತಿದ್ದರು. ನಾನು ಆಗಾಗ್ಗೆ ರೈತರ ಪಕ್ಷ ಹಿಡಿದು ಅವರ ಜತೆ ಜಗಳವಾಡುತ್ತಿದ್ದೆ. ಮೊನ್ನೆ ಚುನಾವಣೆ ಬಂದಾಗ ನನ್ನಲ್ಲಿ ಬಂದು, 'ಭರಮೇಗೌಡ – ನಿನ್ನ ಓಟುಗಳೆಲ್ಲಾ ನನಗೆ ಕೊಡಬೇಕಪ್ಪಾ' ಎಂದರು. ಮನಸ್ಸು ತಡೆಯದೆ ನಾನು ಹೇಳಿದೆ 'ಏಕೆ ಸ್ವಾಮಿ ಕೈಯಲ್ಲಿ ಅಧಿಕಾರವಿಲ್ಲದೆಯೇ ರೈತರನ್ನು ಹುರಿದು ಮುಕ್ಕುತ್ತೀರಿ. ಅಧಿಕಾರ ಬಂದರೆ ನಮ್ಮನ್ನೆಲ್ಲಾ ಭಿಕ್ಷಕ್ಕೇ ಕಳಿಸುತ್ತೀರಿ' ಎಂದೆ. ಅವರು ಕೋಪಮಾಡಿಕೊಂಡು 'ಇದೆಲ್ಲಾ ರಾಮಕೃಷ್ಣ

ಾಯನ ಚಿತಾವಣೆ ಎಂದು ಕಾಣುತ್ತದೆ' ಅಂದರು. ನಾನು ನಿಮ್ಮ ವಿಷಯ ನಮಗೆ ಗೊತ್ತಿಲ್ಲದಿದ್ದರೆ ರಾಮಕೃಷ್ಣರಾಯರನ್ನು ೕಳಬೇಕು. ಎಲ್ಲೋ ಇರೋ ಮಾರಾಯರನ್ನು ಇದಕ್ಕೆಲ್ಲ ಏಕೆ ಸ್ವಾಮಿ ಳೆಯುತ್ತೀರಿ' ಎಂದೆ. ಕೇಶವಯ್ಯಂಗಾರ್ರ ಮುಖ ಕೆಂಪಗಾಯಿತು. ಹಾಗಾದರೆ ನೀನೂ, ನಿನ್ನ ಕಡೆಯವರೂ ನನಗೆ ಓಟುಮಾಡುವುದಿಲ್ಲ!' ‘ಇಲ್ಲ ಸ್ವಾಮಿ, ಖಂಡಿತವಾಗಿ ಓಟುಮಾಡುವುದಿಲ್ಲ. ಮಾಡುವ ರಿಗೂ ಹೇಳಿ ಬಿಡಿಸುತ್ತೇನೆ.' ಎಂದೆ. ಕೇಶವಯ್ಯಂಗಾರ್ರು ವಕ್ರ ಾಗಿ ನನ್ನ ಕಡೆ ನೋಡಿ ‘ಇದರ ಫಲ ಅನುಭವಿಸುವೆಯಂತೆ!' ಂದು ಹೇಳಿ ಹೋದರು. ಚುನಾವಣೆಯಾಯಿತು. ಅದರಲ್ಲಿ ೕಶವಯ್ಯಂಗಾರ್ರಿಗೆ ಸೋಲಾಯಿತು. ರಾಮಕೃಷ್ಣರಾಯರಿಗೆ ಜಯ ಾಯಿತು. ಕೇಶವಯ್ಯಂಗಾರ್ರು ಮೆಲ್ಲನೆ ನಮ್ಮಮ್ಮನ್ನ ಆಶ್ರಯಿಸಿ, ವಳ ಬುದ್ಧಿ ಕೆಡಿಸಿ ನನ್ನ ಮೇಲೆ ಇಲ್ಲ ಸಲ್ಲದ ಚಾಡಿ ಹೇಳಿ ‘ಭರಮಾ ಸೂರೆಲೆ ಆಟ ಆಡುತ್ತಾನೆ – ಕುಡಿಯುತ್ತಾನೆ – ಹೆಂಗಸನ್ನು ಇಟ್ಟು ಕೊಂಡಿದ್ದಾನೆ. ನೀನು ಆಸ್ತಿ ಅವನಿಗೆ ಬಿಟ್ಟರೆ ಎಲ್ಲಾ ಹೆಂಡದಂಗಡಿ, ಸೂಳೆಮನೆ, ಜೂಜಿನಕಟ್ಟೆ ಪಾಲಾಗತ್ತೆ. ನಿನ್ನ ಹೆಸರು ಶಾಶ್ವತವಾಗಿ ಉಳಿಯುವ ಹಾಗೆ ಯಾವದಾದರೂ ಧರ್ಮಕ್ಕೆ ಬರೆದುಬಿಡು' ಎಂದು ಹೇಳಿಕೊಟ್ಟರು. ಅವರ ಮಾತು ಕೇಳಿಕೊಂಡು ಅಮ್ಮ ನಮ್ಮನ್ನ ಮನೆಬಿಟ್ಟು ಹೊರಗೆ ಕಳುಹಿಸಿದಳು. ನಾನೂ ನನ್ನ ಹೆಂಡತಿ, ಮಕ್ಕಳು ಭಿಕ್ಷೆ ಎತ್ತಿಕೊಂಡು ಬದುಕಬೇಕಾದ ಸ್ಥಿತಿಗೆ ಬಂದಿದ್ದೇವೆ."

“ನಿನ್ನ ರೈತರು ನಿಮ್ಮಮ್ಮನಿಗೆ ವಿವೇಕ ಹೇಳಲಿಲ್ಲವೇ?"

“ಹೇಳಿದರು. ಮುದುಕಿ ಅವರ ಮಾತು ಕೇಳಬೇಕಲ್ಲ, ಎಲ್ಲರೂ ನಮ್ಮಮ್ಮನಿಗೆ ಹೆದರಿ ಸಾಯುತ್ತಾರೆ."

“ಕೇಳಿದಿರಾ ಮಾಧವರಾವ್."

“ಕೇಳಿದೆ ಸಾರ್."

“ಕೇಶವಯ್ಯಂಗಾರ್ ಯಾರು ಗೊತ್ತೋ?"

“ಇಲ್ಲ ಸಾರ್."

" ರಾಘವೇಂದ್ರರಾಯರ ಬಲಭುಜ. ಇವರು ಮಾಡುವುದ
ಕ್ಕೆಲ್ಲಾ ಅವರ ಷಾಮೀಲು, ಅವರು ಮಾಡುವುದಕ್ಕೆಲ್ಲಾ ಇವರ
ಷಾಮೀಲು. ನಮ್ಮೂರಿನಲ್ಲಿ ಇವರಿಬ್ಬರೂ ಕರಟಕ, ದಮನಕ ಇದ್ದ
ಹಾಗೆ ಇದ್ದಾರೆ ನೋಡಿ."

" ಭರಮೇಗೌಡನ ವಕಾಲತ್ತು ನಾವು ವಹಿಸಿಕೊಂಡರೆ, ಎದುರ
ಪಕ್ಷದಲ್ಲಿ ರಾಘವೇಂದ್ರರಾಯರು ನಿಲ್ಲುತ್ತಾರೆ."

" ಅದರಲ್ಲಿ ಸಂದೇಹವೇ ಇಲ್ಲ."

ನಾರಾಯಣಸ್ವಾಮಿ ಅಯ್ಯಂಗಾರ್ಯರು ಯೋಚಿಸುತ್ತ, ಕು
ತರು. ಭರಮೇಗೌಡ ಮಾಧೂ ಕಡೆತಿರುಗಿ

" ದೊಡ್ಡ ಸ್ವಾಮಿಯವರಿಗೆ ನೀವಾದರೂ ಹೇಳಿ ಸ್ವಾಮಿ. ಬಡ
ಕೆಟ್ಟು ಹೋಗುತ್ತೇನೆ. ಮಕ್ಕಳು ಮರಿ ಬೀದಿ ಪಾಲಾಗುತ್ತಾರೆ."

" ಕೋರ್ಟಿಗೆ ಹೋಗದೆ ರಾಜಿ ಮಾಡಿಕೊಳ್ಳುವುದಕ್ಕಾಗುವುದ
ಲ್ಲವೇ ಭರಮೇಗೌಡ " ಎಂದು ನಾರಾಯಣಸ್ವಾಮಿ ಅಯ್ಯಂಗಾರ್ಯರ
ಕೇಳಿದರು.

" ಎಲ್ಲಾ ಪ್ರಯತ್ನ ಮಾಡಿ ಸುಮ್ಮನಾಗಿ ಬಿಟ್ಟಿದ್ದೇನೆ ಸ್ವಾಮಿ
ನಮ್ಮ ಜನಗಳ ಕೈಲೆಲ್ಲಾ ಹೇಳಿಸಿ ನೋಡಿದೆ. ' ಆಸ್ತೀನ ಕೋರ್ಟಿಗ
ದರೂ ಕುಕ್ಕುತ್ತೇನಲ್ಲದೆ ಆ ಭಡವನ ಕೈಗೆ ಸಿಕ್ಕಿಸಲ್ಲ ' ಎಂದು ಅವ
ಹೇಳುತ್ತಾ ಇದ್ದಾಳೆ."

" ಇದೂ ಒಂದು ಬಗೆಯ ಮಾತೃಪ್ರೇಮ ಮಾಧವರಾವ್."

" ಇವನ ವಿಷಯ ಏನು ಮಾಡುತ್ತೀರಿ ಸಾರ್."

" ಕೋರ್ಟು ಖರ್ಚಿಗೇ ಸಾವಿರಾರು ರೂಪಾಯಿ ಆಗುತ್ತದಲ್ಲಾ
ಗೌಡ."

" ನಾನು ಭಿಕಾರಿ ಸ್ವಾಮಿ. ನನ್ನ ಕೈಯಲ್ಲಿ ಬಿಡಿಕಾಸೂ ಇಲ್ಲ
ನೀವೇ ಎಲ್ಲಾ ಖರ್ಚಿಟ್ಟು ಕೇಸ್ ನಡಸಬೇಕು. ಆಸ್ತಿ ನನ್ನ ಕೈ
ಬಂದರೆ ಖರ್ಚು, ತಮ್ಮ ಪೀಜು ಎಲ್ಲಾ ಕೊಡುತ್ತೇನೆ."

"ಊರಿನವರ ಜತೆ ಜಗಳ ಅನವಶ್ಯಕವಾಗಿ ಗಂಟು ಬೀಳುತ್ತಿ

ಮಾಧವರಾವ್."

"ತಾವು ದೊಡ್ಡ ಮನಸ್ಸು ಮಾಡಿ ಸಾರ್. ಜಗಳ ಬಂದರೆ ಬರಲಿ. ಇಂಥಾವನಿಗೆ ಸಹಾಯ ಮಾಡಿದರೆ ಭಗವಂತ ಮೆಚ್ಚಿ ಕೊಳ್ಳುತ್ತಾನೆ."

ನಾರಾಯಣಸ್ವಾಮಿ ಅಯ್ಯಂಗಾರ್ಯರು ಒಂದು ಕ್ಷಣ ಯೋಚಿಸಿ

"ಕಾಗದಗಳನ್ನೆಲ್ಲಾ ಇಟ್ಟು ಹೋಗು. ಸಾಯಂಕಾಲ ಬಂದು ವಕಾಲತ್ತು ಫಾರ್ಮಿಗೆ ರುಜು ಹಾಕಿಕೊಡು" ಎಂದರು.

ಭರಮೇಗೌಡ ಸಾಷ್ಟಾಂಗ ನಮಸ್ಕಾರ ಮಾಡಿದ. ಅವನ ಕಣ್ಣುಗಳಲ್ಲಿ ಕೃತಜ್ಞತೆ ತುಂಬಿ ತುಳುಕುತ್ತಿತ್ತು.

"ಊಟಕ್ಕೇನು ಮಾಡ್ತೀ ಗೌಡ" ಎಂದು ಕೇಳಿದರು.

ಭರಮೇಗೌಡ ಉತ್ತರ ಕೊಡಲಿಲ್ಲ.

ನಾರಾಯಣಸ್ವಾಮಿ ಅಯ್ಯಂಗಾರ್ಯರು ಡ್ರಾಯರಿನಿಂದ ಹತ್ತು ರೂಪಾಯಿ ತೆಗೆದು ಗೌಡನ ಕೈಗೆ ಹಾಕಿ

"ಹೆಂಡತಿ ಮಕ್ಕಳನ್ನು ಉಪವಾಸ ಒಣಗಿಸಬೇಡ. ಧೈರ್ಯ ವಾಗಿರು. ನಿನ್ನ ಕೇಸಿನ ಜವಾಬ್ದಾರಿ ನನಗಿರಲಿ" ಎಂದು ಆಶ್ವಾಸನ ವಿತ್ತರು.

ಪಟ್ಟಣದ ಕೋರ್ಟಿನಲ್ಲಿ ಕೇಸು ಆರಂಭವಾಯಿತು. ಬೈರಮ್ಮನ ಪಕ್ಷ ರಾಘವೇಂದ್ರರಾಯರು ವಹಿಸಿಕೊಂಡಿದ್ದರು. ಊರಿನ ವಕೀಲರ ಕುತೂಹಲ ಕೆರಳಿತ್ತು. ಸ್ವಯಂ ನಾರಾಯಣಸ್ವಾಮಿ ಅಯ್ಯಂಗಾರ್ಯರೇ ಕೋರ್ಟಿಗೆ ಬಂದದ್ದನ್ನು ನೋಡಿ ವಕೀಲರ ಉತ್ಸಾಹ ಇಮ್ಮಡಿಸಿತು.

ಕೇಸಿಗೆ ಸಂಬಂಧಪಟ್ಟ ರಿಕಾರ್ಡುಗಳ ಪರೀಕ್ಷೆಯಾಯಿತು. ಸಾಕ್ಷಿಗಳ ವಿಚಾರಣೆಯಾಯಿತು. ರಾಘವೇಂದ್ರರಾಯರು ಸೃಷ್ಟಿಸಿದ್ದ ಕೆಲವು ಸಾಕ್ಷಿಗಳನ್ನುಳಿದು ಮಿಕ್ಕವರೆಲ್ಲಾ ಭರಮೇಗೌಡನ ಪರ ಸಾಕ್ಷಿ ಹೇಳಿದರು. ನಾರಾಯಣಸ್ವಾಮಿ ಅಯ್ಯಂಗಾರ್ಯರು ಕೇಸು ನಡಸುವ ಜವಾಬ್ದಾರಿಯನ್ನು ಮಾಧವರಾಯನಿಗೇ ಒಪ್ಪಿಸಿ, ಅವನಿಗೆ ಸೂಕ್ತ ಸಲಹೆಗಳನ್ನು ಮಾತ್ರ ಕೊಡುತ್ತಿದ್ದರು. ಮುಕ್ತಾಯವಾದವನ್ನು

ನಾರಾಯಣಸ್ವಾಮಿ ಅಯ್ಯಂಗಾರ್ಯರೇ ಮಾಡಬೇಕೆಂದು ಮಾಧವ ರಾಯ ಒತ್ತಾಯಮಾಡಲು ಅವರು ಒಪ್ಪಿಕೊಂಡರು. ನಾರಾಯಣ ಸ್ವಾಮಿ ಅಯ್ಯಂಗಾರ್ಯರು ತಮ್ಮ ವಾದವನ್ನು ಮುಕ್ತಾಯಗೊಳಿಸುತ್ತ

"ಭರಮೇಗೌಡನ ದತ್ತು ತಾಯಿ ಬೈರವ್ಮ ಚಿತ್ತವಿಕಲ್ಪದಿಂದಲೂ, ಹೇಳಿಕೆಯ ಮಾತಿನ ಪ್ರಭಾವದಿಂದಲೂ ಮಗ, ಸೊಸೆ, ಮೊಮ್ಮಕ್ಕಳಿಗೆ ಮಾಡುತ್ತಿರುವ ಅನ್ಯಾಯ ತಪ್ಪಿಸಲು, ಆಸ್ತಿಯನ್ನು ಭರಮೇಗೌಡನ ವಶಪಡಿಸಬೇಕು. ಅವಳು ಬದುಕಿರುವವರಿಗೆ ಕೋರ್ಟು ನಿರ್ಧರಿಸುವ ಜೀವನಾಂಶ ಕೊಡುವುದು ಭರಮೇಗೌಡನ ಜವಾಬ್ದಾರಿಯಾಗಿದೆ" ಎಂದು ಸೂಚಿಸಿದರು. ರಾಘವೇಂದ್ರರಾಯರು ಹುಲಿಯಂತೆ ಎದ್ದು ನಿಂತು

"ನನ್ನ ಕಕ್ಷಿಗಾರಳಿಗೆ ಚಿತ್ತವಿಕಲ್ಪವಾಗಿದೆಯೆಂದು ಹೇಳುವ ವಕೀಲರ ಚಿತ್ತವಿಕಲ್ಪವಾಗಿದೆ" ಎಂದರು.

ಕೋರ್ಟಿನಲ್ಲಿದ್ದವರೆಲ್ಲಾ ಅವರ ಮಾತು ಕೇಳಿ ನಡುಗಿಬಿಟ್ಟರು. ನಾರಾಯಣಸ್ವಾಮಿ ಅಯ್ಯಂಗಾರ್ಯರು ಸಾವಕಾಶವಾಗಿ ಎದ್ದು ನಿಂತು

"ಇದು ಕೋರ್ಟಿಗೆ ಬರಬೇಕಾದ ಜಗಳವಲ್ಲ. ತಾಯಿ ಮಕ್ಕಳ ವೈಮನಸ್ಯ ಕ್ಷಣಿಕವಾದುದು. ಮೂರನೆಯವರು ತಲೆ ಹಾಕದಿದ್ದರೆ ಇದು ಮನೆಯಲ್ಲಿಯೇ ಉಭಯತ್ರರಿಗೂ ಹಿತವಾಗುವ ರೀತಿಯಲ್ಲಿ ಇತ್ಯರ್ಥವಾಗುತ್ತಿತ್ತು. ಎದುರು ಪಕ್ಷದ ವಕೀಲರು ಅನ್ಯಾಯದ ಪಕ್ಷ ವಹಿಸಿರುವುದಲ್ಲದೆ, ನನಗೆ ಚಿತ್ತವಿಕಲ್ಪವಾಗಿದೆಯೆಂದು ಆರೋಪಿಸುತ್ತಿದ್ದಾರೆ. ಭರಮೇಗೌಡ ಚಿಕ್ಕವನು. ಬೀಜರೂಪವಾಗಿದ್ದ ಆಸ್ತಿ ಹೆಮ್ಮರವಾಗಿ ಬೆಳೆಯಲು ಅವನ ಸತತ ಪ್ರಯತ್ನವೇ ಕಾರಣ. ಅವನಿಗಾಗುತ್ತಿರುವ ಅನ್ಯಾಯ ತಪ್ಪಿಸಲೆತ್ನಿಸುವುದು ಚಿತ್ತವಿಕಲ್ಪದ ಲಕ್ಷಣವಾದರೆ, ನನಗೆ ಚಿತ್ತವಿಕಲ್ಪವಾಗಿದೆಯೆಂದು ಒಪ್ಪಿಕೊಳ್ಳುತ್ತೇನೆ." ಎಂದರು. ನ್ಯಾಯಮೂರ್ತಿಗಳಿಗೂ ರಾಘವೇಂದ್ರರಾಯರ ಬಿರುನುಡಿ ಅಸಮಾಧಾನವನ್ನುಂಟುಮಾಡಿತ್ತು.

"ಶ್ರೀಮಾನ್ ನಾರಾಯಣಸ್ವಾಮಿ ಅಯ್ಯಂಗಾರ್ಯರು ನಮ್ಮ

ದೇಶದ ಗಣ್ಯ ವಕೀಲರು. ಜ್ಞಾನವೃದ್ಧರು. ವಯೋವೃದ್ಧರು. ಅವರನ್ನು ಹೀಯಾಳಿಸಿ ಮಾತನಾಡುವುದು ನಿಮಗೆ ಗೌರವವಲ್ಲ ರಾಘವೇಂದ್ರರಾವ್. ಅವರ ಕ್ಷಮೆ ಕೇಳಿಕೊಳ್ಳಿ." ಎಂದರು.

ರಾಘವೇಂದ್ರರಾಯರಿಗೆ ಬಾಲಸುಟ್ಟ ಕಪಿಯ ಅವಸ್ಥೆಯಾಯಿತು ನ್ಯಾಯಮೂರ್ತಿಗಳ ಆಜ್ಞೆಯನ್ನು ಉಲ್ಲಂಘಿಸುವಂತಿಲ್ಲ.

"ತಪ್ಪು ಮಾತನಾಡಿದುದಕ್ಕೆ ವಿಷಾದಿಸುತ್ತೇನೆ ಯುವರ್ ಆನರ್" ಎಂದು ಹೇಳಿ ಕುಳಿತರು.

ತೀರ್ಪು ಹೇಗಾಗುವುದೆನ್ನುವ ವಿಷಯ ಸ್ವತಃಸ್ಸಿದ್ಧವಾಗಿತ್ತು. ರಾಘವೇಂದ್ರರಾಯರು 'ಅಪೀಲ್' ಹೋಗುವುದಾಗಿ ಸೂಚಿಸಿದರು. ನ್ಯಾಯವಾದಿಗಳು ಭರಮೇಗೌಡನ ಪರ ತೀರ್ಪು ಹೇಳಿ ಬೈರಮ್ಮನಿಗೆ ತಿಂಗಳಿಗೆ ಇಪ್ಪತ್ತು ರೂಪಾಯಿ ಜೀವನಾಂಶ ಕೊಡಬೇಕೆಂದು ಸೂಚಿಸಿದರು.

ರಾಘವೇಂದ್ರರಾಯರ 'ಅಪೀಲ್' ನಿಂದಲೂ ಏನೂ ಪ್ರಯೋಜನವಾಗುವುದಿಲ್ಲವೆಂದು ಎಲ್ಲರಿಗೂ ಗೊತ್ತಿತ್ತು. ಮುದುಕಿಯಿಂದ ಆದಷ್ಟು ಕೀಳಬೇಕೆಂಬುದೇ ಅವರ ಉದ್ದೇಶವಾಗಿತ್ತು.

ಕೋರ್ಟು ಮುಗಿಸಿಕೊಂಡು ಮನೆ ತಲುಪಿದೊಡನೆಯೇ ನಾರಾಯಣಸ್ವಾಮಿ ಅಯ್ಯಂಗಾರ್ಯರು, ಮಾಧವರಾಯನನ್ನು ಕರೆದು

"ನೀವು ಈಗಲೇ ಹೋಗಿ ಷರೀಫ್ ಸಾಹೇಬರನ್ನು ಕೇಳಿ ಅವರ ಕಾರು ತೆಗೆದುಕೊಂಡು ಬನ್ನಿ. ನನಗೆ ಬೇಕೆಂದು ಹೇಳಿ ಕೊಡುತ್ತಾರೆ."

"ಎಲ್ಲಿಗೆ ಹೋಗಬೇಕಾಗಿತ್ತು. ?"

"ಕಾರು ತೆಗೆದುಕೊಂಡು ಬನ್ನಿ. ಎಲ್ಲಾ ಹೇಳುತ್ತೇನೆ" ಎಂದರು.

ಮಾಧವರಾಯ ಷರೀಫ್ ಸಾಹೇಬರ ಕಾರಿನಲ್ಲಿಯೇ ಕುಳಿತು ಕೊಂಡುಬಂದ. ನಾರಾಯಣಸ್ವಾಮಿ ಅಯ್ಯಂಗಾರ್ಯರು ಮಾಧವನನ್ನೂ ಭರಮೇಗೌಡನನ್ನೂ ಕೂಡಿಸಿಕೊಂಡು ನಾಗನಹಳ್ಳಿಗೆ ಹೊರಟರು.

ಭರಮೇಗೌಡ ಮನೆ ತೋರಿಸಿ, ತಾನು ಹೊರಗೇ ನಿಂತುಕೊಂಡ. ಅಯ್ಯಂಗಾರ್ಯರು, ಮಾಧವರಾಯನೊಂದಿಗೆ ಒಳಗೆ ಪ್ರವೇಶಿಸಿದರು.

ಬೈರಮ್ಮ 'ಯಾರು' ಎಂದಳು.

"ನಿನ್ನ ನೋಡಬೇಕೆಂದೇ ಬಂದಿದ್ದೇನೆ ಮುದುಕಮ್ಮ" ಎಂದರು.

ಮುದುಕಿ ಒಂದು ಚಾಪೆ ಹಾಸಿ ಅತಿಥಿಗಳನ್ನು ಕೂಡಲು ಹೇಳಿದಳು.

"ನನಗೆ ಕಣ್ಣು ಚಂದಾಕಿ ಕಾಣೋಕಿಲ್ಲ. ನೀವು ಯಾರು ?"

ನಾರಾಯಣಸ್ವಾಮಿ ಅಯ್ಯಂಗಾರ್ಯರು ತಮ್ಮ ಮತ್ತು ಮಾಧೂ ಪರಿಚಯ ಮಾಡಿಕೊಟ್ಟು, ಅಂದಿನ ಕೋರ್ಟಿನ ತೀರ್ಪನ್ನು ವಿವರಿಸಿ.

"ನಿಮ್ಮ ಲಾಯರು, ಕೇಶವಯ್ಯಂಗಾರ್ಯರು ಮೇಲಿನ ಕೋರ್ಟಿಗೆ ಹೋಗೋಣಾಂತ ಹೇಳುತ್ತಾರೆ ಮುದುಕಮ್ಮ."

"ಅವರು ಹೇಳಿದ ಹಾಗೆ ಮಾಡುತ್ತೇನೆ ಸ್ವಾಮಿ."

"ಇದರಿಂದ ನಿನಗೇನು ಲಾಭ ?"

"ಆ ಮುಕ್ಕನಿಗೆ ಬುದ್ಧಿ ಕಲಿಸೋದೇ ಲಾಭ."

"ಈಗಾಗಲೇ ನಿನ್ನ ಕೈ ಎಷ್ಟು ಬಿಟ್ಟು ಹೋಯಿತು ಬೈರಮ್ಮ."

"ಯಾಕೆ ಸ್ವಾಮಿ ?"

"ಹೇಳು ಪರವಾಗಿಲ್ಲ."

"ಎರಡು ಸಾವಿರ ಹೋಗಿದೆ."

"ಮೇಲಿನ ಕೋರ್ಟಿನ ಖರ್ಚು ಎಷ್ಟಾಗತ್ತೆ ಬಲ್ಲೆಯಾ ?"

"ಎಷ್ಟಾಗತ್ತೆ ?"

"ಇನ್ನು ಮೂರು ಸಾವಿರ – ಒಟ್ಟು ಐದು ಸಾವಿರ."

"ಅಷ್ಟಾಗುತ್ತದೆಯೇ ?"

"ನಿಮ್ಮ ಲಾಯರು ಹೇಳಿಲ್ಲವೇ ?"

"ನಾನೊಂದೂ ಕಾಣೆನಪ್ಪ. ಕೇಶವಯ್ಯಂಗಾರ್ ಸ್ವಾಮಿ ಹೇಗೆ ಹೇಳಿದರೆ ಹಾಗೆ ಮಾಡುತ್ತೇನೆ."

"ನಿನ್ನ ಮಗನಿಗಿಂತ ಕೇಶವಯ್ಯಂಗಾರ್ರು ಹೆಚ್ಚೇ ಮುದುಕಮ್ಮ."

"ಎಂಥಾ ಮಗಾ ಬಿಡಪ್ಪ – ಮನೆಹಾಳ !"

"ನಿನ್ನ ಮಗ ಕೆಟ್ಟದಾರಿಯಲ್ಲಿ ಹೋಗುತ್ತಿರುವ ವಿಷಯ ನಿನಗೆ ತಿಳಿದುದು ಯಾವಾಗ ?"

"ಈಗ – ವರ್ಷದಿಂದ ?"

"ಭರಮೇಗೌಡನನ್ನು ನೀನು ಎಷ್ಟು ವರ್ಷಗಳಿಂದ ಬಲ್ಲೆ."

"ಚಿಕ್ಕ ಮಗುವಿನಿಂದ ಬಲ್ಲೆ."

"ಹಿಂದೆ ಯಾವಾಗಲಾದರೂ ಅವನು ಕೆಟ್ಟನಡತೆ ತೋರಿಸಿದ್ದನೇ ?"

"ಛೆ! ಪಾಪ! ಇಲ್ಲದ್ದು ಹೇಳಬಾರದು."

"ಚಿಕ್ಕ ವಯಸ್ಸಿನಲ್ಲಿ ಬರದಿದ್ದ ಕೆಟ್ಟನಡತೆ – ಈಗ – ವಯಸ್ಸಾದಮೇಲೆ – ನಾಲ್ಕು ಮಕ್ಕಳ ತಂದೆಯಾದಾಗ ಬರುತ್ತದೆಯೇ ಬೈರಮ್ಮ. ನೀನು ಇಷ್ಟು ತಿಳಿವಳಿಕಸ್ಥೆ – ವಯಸ್ಸಾದವಳು – ನಿನಗೆ ತಿಳಿಯ ಬೇಡವೇ? ಒಂದು ವೇಳೆ ಕೇಶವಯ್ಯಂಗಾರ್ರು ಹೇಳಿದ ಹಾಗೆ ಭರಮೇಗೌಡ ಕೆಟ್ಟದಾರಿ ಹಿಡಿದಿದ್ದಾನೆಂದೇ ನಂಬೋಣ. ನೀನು ಸಾಕಿ, ಸಲಹಿ, ಬೆಳಸಿದ ಮಗನನ್ನು ದಾರಿಗೆ ತರುವುದಕ್ಕೆ ನಿನಗೆ ಸಾಧ್ಯವಾಗಲಿಲ್ಲವೇ? ಅವನು ತಪ್ಪುಮಾಡಿದ್ದರೆ ಅವನಿಗೆ ಶಿಕ್ಷೆ ಕೊಡು. ನಾನು ಬೇಡವೆನ್ನುವುದಿಲ್ಲ; ಅವನ ಹೆಂಡತಿ, ಮಕ್ಕಳು ಯಾವ ತಪ್ಪುಮಾಡಿದ್ದಾರಮ್ಮ. ನೀನು ಹಾಲುಣ್ಣಿಸಿದ ಮಕ್ಕಳಿಗೆ ನೀನೇ ಕೈಯಾರೆ ವಿಷವುಣ್ಣಿಸುವೆಯಾ ? ನಿನ್ನ ಮೊಮ್ಮಕ್ಕಳ ಅನ್ನ ಕಿತ್ತುಕೊಂಡು ಅದನ್ನು ದೇವರಿಗೆ ಕೊಟ್ಟರೆ, ಆ ಅನ್ನ ದೇವರು ಸ್ವೀಕರಿಸುತ್ತಾನೆಯೇ? – ನಿನಗೆ ಸದ್ಗತಿ ಪ್ರಾಪ್ತವಾಗುತ್ತದೆಯೇ ?" ಎಂದರು. ಬೈರಮ್ಮನ ಕಣ್ಣುಗಳಿಂದ ಧಾರಾಕಾರವಾಗಿ ಪ್ರವಾಹ ಆರಂಭವಾಗಿತ್ತು.

"ನೋಡು ಬೈರಮ್ಮ– ನಾನು ನಿನ್ನ ಮಗನ ವಕಾಲತ್ತು ವಹಿಸಿ ಈ ಕೇಸು ನಡಸಿದೆ. ಯಾಕೆಂದು ಬಲ್ಲೆಯಾ ? ನನಗೂ ಮನೆ ತುಂಬ ಮಕ್ಕಳು, ಮೊಮ್ಮಕ್ಕಳು ಇವೆ. ಅವರು ಒಂದು ದಿನ ಮುಖ ಚಿಕ್ಕದು ಮಾಡಿಕೊಂಡರೆ ನನಗೆ ಮೂರು ದಿವಸ ಅನ್ನ ಸೇರುವುದಿಲ್ಲ, ನಿದ್ರೆ ಬರುವುದಿಲ್ಲ. ಮಕ್ಕಳು, ಮೊಮ್ಮಕ್ಕಳು ಚೆನ್ನಾಗಿರುವುದನ್ನು

ಕಣ್ತುಂಬ ನೋಡಿ ಸಂತೋಷಿಸುವುದಲ್ಲವೆ ಈ ವಯಸ್ಸಿನಲ್ಲಿ ನಿನಗೂ ನನಗೂ ಇರುವ ಕೆಲಸ."

ಬೈರಮ್ಮನ ಕಂಠವುಬ್ಬಿ ಬಂತು.

"ಕೇಶವಯ್ಯಂಗಾರ್ರು ಹೇಳಿದ್ದು ಸುಳ್ಳೇ ?"

"ನೂರಕ್ಕೆನೂರು ಸುಳ್ಳು. ನಿನ್ನ ಮಗ ಚುನಾವಣೆಯಲ್ಲಿ ಸಹಾಯ ಮಾಡಲಿಲ್ಲವೆಂದು ಅಯ್ಯಂಗಾರ್ರು ಈ ಪಿತೂರಿಮಾಡಿ ತಾಯಿ ಮಕ್ಕಳಿಗೆ ತಂದು ಹಾಕಿದ್ದಾರೆ. ಭರಮೇಗೌಡ ಚಿನ್ನದಂಥ ಮನುಷ್ಯ. ಅವನಿಗೆ ನೀನಿಷ್ಟು ಅನ್ಯಾಯಮಾಡಿದರೂ 'ನಮ್ಮಮ್ಮ ಮುದುಕಿ ಕಣ್ಣು ಚೆನ್ನಾಗಿ ಕಾಣುವುದಿಲ್ಲ. ಪಾಪ! ಊಟಮಾಡದೆ ಇದ್ದಾಳೇನೋ ? ಅವಳನ್ನು ಯಾರೂ ನೋಡಿಕೊಳ್ಳುವವರಿಲ್ಲ' ಎಂದು ಹಂಬಲಿಸುತ್ತಾನೆ."

"ನಾನು ತಪ್ಪುಮಾಡಿದೆನೇ ನನ್ನೊಡೆಯಾ ?"

"ದೇವರಂಥ ಮನುಷ್ಯನಿಗೆ ಅನ್ಯಾಯಮಾಡಿದರೆ ದೇವರಿಗೆ ಅನ್ಯಾಯಮಾಡಿದ ಹಾಗೇ ಬೈರಮ್ಮ."

ಬೈರಮ್ಮ ಗೊಳೋ ಎಂದು ಅಳುತ್ತ, ನೆಲಕ್ಕೆ ಹಣ್ಣೆ ಚಚ್ಚಿಕೊಂಡಳು. ಹೊರಗೆ ಕುಳಿತಿದ್ದ ಭರಮೇಗೌಡ ಅದನ್ನು ನೋಡಲಾರದೆ ಒಳಗೆ ಬಂದು ತಾಯಿಯನ್ನೆಬ್ಬಿಸಿದ. ಬೈರಮ್ಮ ಮಗನನ್ನು ಅಪ್ಪಿಕೊಂಡು ಗಟ್ಟಿಯಾಗಿ ಅತ್ತುಬಿಟ್ಟಳು.

"ಅಳಬೇಡ. ಸುಮ್ಮನಿರಮ್ಮ. ನನ್ನ ಗ್ರಹಚಾರ ಕಾಡಿಸಿತು. ನೀನೇನು ಮಾಡುತ್ತೀ" ಎಂದು ಭರಮೇಗೌಡ ಸಮಾಧಾನ ಹೇಳಿದ. ಮುದುಕಿ ತನ್ನ ಸೊಂಟದಲ್ಲಿದ್ದ ಬೀಗದ ಕೈಗೊಂಚಲು ತೆಗೆದು ಮಗನ ಕೈಗಿತ್ತು

"ಅಪ್ಪಯ್ಯಾ– ಎಲ್ಲಾ ನೀನೇ ವಹಿಸಿಕೊಂಡುಬಿಡು. ಇಷ್ಟವಿದ್ದರೆ ಮುದುಕೀಗೆ ಒಂದು ತುತ್ತು ಅನ್ನ ಹಾಕು – ಬೇಡವಾದರೆ ಆಚೆಗೆ ಅಟ್ಟಿಬಿಡು"

"ನೀನಿರೋತನಕಾ ನೀನೇ ಯಜಮಾನಿ ಕಣಮ್ಮ. ಎಲ್ಲಾ

ೂದಲಿನ ಹಾಗೇ ನಡೀಲಿ. ನೀನು ಸಂತೋಷವಾಗಿರು" ಎಂದು ೀಗದಕ್ಕೆ ಗೊಂಚಲನ್ನು ತಾಯಿಯ ಕೈಯಲ್ಲಿಟ್ಟ. ಬೈರಮ್ಮ ಾರಾಯಣಸ್ವಾಮಿ ಅಯ್ಯಂಗಾರ್ಯರ ಕಡೆ ತಿರುಗಿ

"ನನ್ನ ದೇವರ ಹಾಗೆ ಬಂದು ವಿವೇಕ ಕಲಿಸಿದೆ ನಮ್ಮಪ್ಪ. ಾಯಿ ಮಕ್ಕಳನ್ನು ಕೂಡಿಸಿ ಪುಣ್ಯ ಕಟ್ಟಿಕೊಂಡೆ ತಂದೆ." ಎಂದು ಾಷ್ಟಾಂಗ ನಮಸ್ಕಾರಮಾಡಿದಳು.

ಅಯ್ಯಂಗಾರ್ಯರು ಎದ್ದು ನಿಂತರು.

"ಬಡವಳ ಮನೆಗೆ ದಯಮಾಡಿಸಿದಿರಿ. ನಿಮಗೆ ಏನೂ ಕೊಡ ಿಲ್ಲವಲ್ಲಾ. ಸ್ವಲ್ಪ ಹಾಲಾದರೂ ತೆಗೆದುಕೊಳ್ಳಿ."

"ಹೊತ್ತಾಯಿತು ಬೈರಮ್ಮ. ಇನ್ನೊಂದು ದಿವಸ ಬರುತ್ತೇನೆ. ಾಲೂ ಹಣ್ಣು ಎಲ್ಲಾ ಕೊಡುವೆಯಂತೆ." ಎಂದು ಹೇಳಿ ಹೊರಟರು. ರಮೇಗೌಡನೂ ಅವರ ಜತೆ ಹೊರಟ.

"ಬೆಳಿಗ್ಗೆ ಹೆಂಡತಿ ಮಕ್ಕಳ್ನ ಕರ್ಕೊಂಡು ಸ್ವಾಮಿ ಮೂಡೋ ಹೊತ್ಗೆ ಬಂದು ಬಿಡು ಅಪ್ಪಯ್ಯ" ಎಂದು ಬೈರಮ್ಮ ಮಗನಿಗೆ ಹೇಳಿ ದಳು.

ಡ್ರೈವರ್ ಪಕ್ಕದಲ್ಲಿ ಭರಮೇಗೌಡ ಕುಳಿತುಕೊಂಡ. ಹಿಂದಿನ ಸೀಟಿನಲ್ಲಿ ಅಯ್ಯಂಗಾರ್ಯರು, ಮಾಧೂ ಕುಳಿತುಕೊಂಡರು. ಮಾಧೂ ಮೆಲ್ಲನೆ

"ಭರಮೇಗೌಡನ ಪರಿಚಯ ನಿಮಗೆ ಚೆನ್ನಾಗಿರುವ ಹಾಗೆ ಕಾಣುತ್ತದಲ್ಲ ಸಾರ್" ಎಂದ.

"ಏಕೆ ಮಾಧವರಾವ್ ?"

"ಅವನ ಕಲ್ಯಾಣಗುಣಗಳನ್ನು ಬೇಕಾದಷ್ಟು ಹೊಗಳಿದಿರಿ."

ಅಯ್ಯಂಗಾರ್ಯರು ನಕ್ಕು

"ನಮ್ಮ ವೃತ್ತಿಯಲ್ಲಿ ಬೇಕಾದಷ್ಟು ಕರ್ರೀ ಸುಳ್ಳುಗಳು ಹೇಳಿರ ತ್ತೇನೆ. ಒಂದು ಸಂಸಾರ ಉಳಿಸುವುದಕ್ಕೆ ನಾಲ್ಕು ಬಿಳೀ ಸುಳ್ಳು ಹೇಳಿದರೆ ತಪ್ಪೇನು ಮಾಧವರಾವ್." ಎಂದರು.

ಮಾರನೆಯ ಬೆಳಿಗ್ಗೆ ಭರಮೇಗೌಡ ಸಂಸಾರ ಸಮೇ
ತಾಯಿಯ ಮನೆ ಸೇರಿಕೊಂಡ.

ಈ ವ್ಯವಹಾರದಲ್ಲಿ ತಾವು ವಹಿಸಿದ ಪಾತ್ರಕ್ಕೆ ಅಯ್ಯಂಗ
ರ್ಯರು ತಮ್ಮ ಭುಜವನ್ನು ತಾವೇ ಚಪ್ಪರಿಸಿಕೊಂಡರು.

ಕೇಶವಯ್ಯಂಗಾರ್ಯರಿಗೆ ಮತ್ತೆ ಬೈರಮ್ಮನ ಮನೆಗೆ ಪ್ರವೇ
ಸಿಕ್ಕಲಿಲ್ಲ. ಕೇಶವಯ್ಯಂಗಾರ್ಯರಿಗೂ, ರಾಘವೇಂದ್ರರಾಯರಿಗ
ಆದ ಪರಾಭವ ಊರಿನಲ್ಲಿ ಬಹಳ ಜನಕ್ಕೆ ಸಂತೋಷವನ್ನುಂ
ಮಾಡಿತು. ರಾಘವೇಂದ್ರರಾಯರಿಂದ ನೊಂದಿದ್ದವರೆಲ್ಲಾ ಮಾಧ
ರಾಯರನ್ನು ಪುರಸ್ಕರಿಸತೊಡಗಿದರು.

ಭರಮೇಗೌಡನ ಪ್ರಕರಣ ಮಾಧವರಾಯನ ಕೀರ್ತಿಯನ
ವಿಸ್ತರಿಸಿತು. ಕೇಶವಯ್ಯಂಗಾರ್ ಮತ್ತು ರಾಘವೇಂದ್ರರಾಯ
ಹೃದಯಗಳು ದ್ವೇಷಭಂಡಾರಗಳಾದವು. ಇಬ್ಬರೂ ಪ್ರತೀಕಾರ
ಹಾತೊರೆಯುತ್ತಾ ಮಾಧವರಾಯನನ್ನು 'ಮಟ್ಟ' ಹಾಕಲು ಸಮ
ಕಾಯುತ್ತಿದ್ದರು.

೧೬

ವಾರವೆಲ್ಲಾ ದುಡಿದು ದಣಿಯುತ್ತಿದ್ದ ಮಾಧವರಾಯನಿಗೆ ಶನಿವಾರ ಸಂಜೆ ಪುರಸತ್ತು. ಭಾನುವಾರ ಕೋರ್ಟಿನ ಗಲಾಟೆ ಇರುತ್ತಿರಲಿಲ್ಲವಾದ್ದರಿಂದ ಕಛೇರಿಗೆ ಹೋಗುತ್ತಿರಲಿಲ್ಲ. ಭಾನುವಾರ ಸಂಜೆ ಹೋಗಿ ಮಾರನೆಯ ದಿನದ ಕೇಸುಗಳ ಸಂಬಂಧವಾದ ಕಾಗದ ಪತ್ರಗಳನ್ನು ಪರಿಶೀಲಿಸುತ್ತಿದ್ದ.

ಶನಿವಾರ ಕೋರ್ಟು ಮುಗಿಸಿಕೊಂಡು ಬಂದ ಮೇಲೆ ಮನೆಯಲ್ಲಿ ಸ್ವಲ್ಪಹೊತ್ತು ಆರಾಮವಾಗಿ ಕುಳಿತು, ಕಮಲನನ್ನೆತ್ತಿಕೊಂಡು ಆಡಿಸಿ, ಸಂಜೆ ಗೆಳೆಯರ ಗೋಷ್ಠಿಗೆ ಹೋಗುತ್ತಿದ್ದ.

ಒಂದು ಶನಿವಾರ ಸಂಜೆ, ಕಮಲನನ್ನೆತ್ತಿಕೊಂಡು ಕುಳಿತಿದ್ದ ತಾಯಿಯ ಬಳಿ ಬಂದು ಮಾಧವರಾಯ ಕುಳಿತುಕೊಂಡ. ಅಜ್ಜಿಯ ತೊಡೆಯಮೇಲೆ ಕಮಲೂ ಸುಖವಾಗಿ ನಿದ್ರಿಸಿದ್ದಳು.

"ಹೀಗೆ ಎಷ್ಟುಹೊತ್ತು ಕುಳಿತಿರುತ್ತೀಯಮ್ಮ. ಕಾಲು ನೋವು ಬರುತ್ತದೆ. ಅವಳನ್ನು ಕರೆದು ಮಗುಕೊಡು – ತೊಟ್ಟಲಿನಲ್ಲಿ ಮಲಗಿಸಲಿ."

"ರುಕ್ಕೂ ತಿಂಡಿ ಮಾಡುತ್ತಿದ್ದಾಳೆ. ಮಗುವನ್ನು ಈಗ ಮುಟ್ಟಿದರೆ ಎಚ್ಚರವಾಗಿ ಬಿಡುತ್ತದೆ. ಬೇಡ ಸುಮ್ಮನಿರು – ಮಲಗಿರಲಿ – ನನಗೇನೂ ತೊಂದರೆಯಿಲ್ಲ."

"ನಿನ್ನ ಅಚ್ಚರಿ ಮೊಮ್ಮಗಳನ್ನು ಎಷ್ಟು ಮುದ್ದುಮಾಡುತ್ತೀ

ಹೇಳು."

"ಅಚ್ಚರಿ ಮೊಮ್ಮಗಳಲ್ಲದೆ ಇನ್ನೇನೋ! ನೋಡು ಹೇಗೆ ಮಲಗಿದ್ದಾಳೆ. ಮುಕ್ಕ- ಕನಸಿನಲ್ಲೇ ನಗುತ್ತೇ – ಯಾವ ಜನ್ಮದ ಸ್ಮೃತಿ ಬಂದಿದೆಯೋ? – ಮಾಧೂ, ರುಕ್ಮೂ ನಿನಗೇನಾದರೂ ಹೇಳಿದಳೇ?"

"ಯಾವ ವಿಷಯ."

"ಕಮಲೂ ವಿಷಯ."

"ಏನೂ ಹೇಳಲಿಲ್ಲವೇ!"

"ನನಗೆ ಸ್ವಲ್ಪ ದುಡ್ಡು ಬೇಕಾಗಿತ್ತು."

"ಎಷ್ಟು ಬೇಕಾಗಿತ್ತಮ್ಮ?"

"ಐವತ್ತು ರೂಪಾಯಿ ಸಾಕಾಗಬಹುದು. ದುಡ್ಡಿದೆಯೋ?"

"ಇದೆಯಮ್ಮ. ನಾಳೆಕೊಡುತ್ತೇನೆ."

"ನನ್ನ ಕಂದನ ಕೊರಳು ಬಿಮ್ಮೆನ್ನುತ್ತದೆ. ಮೂರು ಸವರನ್ನಿಗೆ ಒಂದೆಳೆ ಸರವಾಗುತ್ತದೆ. ಕಮಲೂ ಅಜ್ಜಿ ಬಳೆಮಾಡಿಸಿಟ್ಟು ಹೋದ ಮೇಲೆ ನಾವು ಏನೂ ಮಾಡಿಸಿಲ್ಲ."

"ಮಾಡಿಸಮ್ಮ."

"ತೊಂದರೆ ಪಟ್ಟುಕೊಳ್ಳಬೇಡಪ್ಪ."

"ನಿನಗೆ ಒಂದು ವಿಷಯ ಹೇಳದೆ ಮರೆಮಾಚಿದೆ ಈಗ ಹೇಳುವುದಕ್ಕೆ ಅಡ್ಡಿಯಿಲ್ಲ. ಅಣ್ಣ ಹೋಗುವಾಗ ಸಾವಿರದ ನಾನೂರು ರೂಪಾಯಿ ಸಾಲವಾಗಿತ್ತು. ಅದನ್ನು ತೀರಿಸಿಬಿಡಬೇಕೆಂದು ನಾನು ಕಾಸಿಗೆ ಕಾಸು ಗಂಟುಹಾಕುತ್ತ ಬಂದಿದ್ದೇನೆ. ಆಫೀಸಿನಲ್ಲಿ ಬರುತ್ತಿರುವ ಮೇಲು ಸಂಪಾದನೆಯನ್ನೆಲ್ಲಾ ಅದಕ್ಕಾಗಿ ವಿನಾಸಲಿಡುತ್ತಿದ್ದೇನೆ. ಈ ವರ್ಷದಲ್ಲಿ ಆರುನೂರು ರೂಪಾಯಿ, ಜತೆಗೆ ಮೊನ್ನೆ ಭರಮೇಗೌಡನ ಕಡೆಯಿಂದ ಬಂದ ಇನ್ನೂರು – ಒಟ್ಟುಸೇರಿ ಎಂಟುನೂರು ಜಮಾಯಿಸಿದ್ದೇನೆ. ಇಲ್ಲಿಗೆ ಅರ್ಧಸಾಲ ತೀರಿದಂತಾಗುತ್ತದೆ. ಉಳಿದುದನ್ನು ಮುಂದಿದ ಆರುತಿಂಗಳಲ್ಲಿ ತೀರಿಸಿಬಿಡುತ್ತೇನೆ."

"ಸಾಲದ ವಿಷಯ ನೀನು ನನಗೆ ಹೇಳಲೇ ಇಲ್ಲವಲ್ಲೋ ಮಗೂ – ಕ್ಕೂನೂ ಬಾಯಿಬಿಡಲಿಲ್ಲ."

"ಅವಳಿಗೂ ನಾನು ಹೇಳಿರಲಿಲ್ಲ. ನಿನಗಿರುವ ದುಃಖಕ್ಕೆ ಇದನ್ನೂ ಕೆ ಸೇರಿಸಲಿ ಎಂದು ಸುಮ್ಮನಿದ್ದೆ."

"ನೀನು ಎಷ್ಟು ಕಷ್ಟ ಸೋಸಬೇಕಾಯಿತು ಮಾಧೂ."

"ಕಮಲೂಗೆ ಸರ ಮಾಡಿಸಮ್ಮ – ಯೋಚನೆಮಾಡಬೇಡ." ಂದು ಹೇಳಿದ. ರುಕ್ಮಿಣಿ ಬಿಸಿಯಾಗಿ ಉಪ್ಪಿಟ್ಟು ಕಾಫಿ ಮಾಡಿ ಗಂಡನಿಗೆ ಂದಿತ್ತಳು. ಗೋದಮ್ಮ ಸೊಸೆಯನ್ನು ನೋಡಿ

"ಕಮಲೂ ಹುಟ್ಟಿದ ಹಬ್ಬದ ವಿಷಯ ನೀನು ಮಾಧೂಗೆ ಹೇಳಲೇ ೇಡವೇ ?"

"ನೀವೇ ಹೇಳಲಿ ಎಂದು ಸುಮ್ಮನಿದ್ದೆ."

"ಯಾವತ್ತು ಹುಟ್ಟಿದ ಹಬ್ಬ ?" ಎಂದು ಮಾಧೂ ಕೇಳಿದ.

"ಮುಂದಿನ ವಾರ. ಅವತ್ತು ವೆಂಕಟರಮಣಾಚಾರ್ರ ಮನೆಯ ರನ್ನೂ ನಿನ್ನ ಸ್ನೇಹಿತರನ್ನೂ ಊಟಕ್ಕೆ ಕರೆದು ಕಮಲೂಗೆ ಒಂದು ರತಿ ಮಾಡಬೇಕು."

"ನಿನಗೇನು ಸಂತೋಷವೋ ಮಾಡಮ್ಮ."

"ನಾರಾಯಣಸ್ವಾಮಿ ಅಯ್ಯಂಗಾರ್ಯರನ್ನೂ ಅವರ ಮನೆಯವ ನ್ನೂ ಊಟಕ್ಕೆ ಕರೆ."

"ಅವರಿಗೆ ವಯಸ್ಸಾಗಿದೆ ಬರುವುದಿಲ್ಲ. ಅಮ್ಮಾವರು ತುಂಬ ಮಡಿ ಮಾಡುತ್ತಾರೆ. ಅವರು ಎಲ್ಲಿಗೂ ಊಟಕ್ಕೆ ಹೋಗುವುದಿಲ್ಲ – ತಮ್ಮ ನಗಳ ಮನೆಗೆ ಕೂಡಾ ಹೋಗುವುದಿಲ್ಲ........ ಸಂಜೆ ಆರತೀಗೆ ಕರೆ ಯಿರಿ – ಅಮ್ಮಾವರು ಬರುತ್ತಾರೆ."

"ನಮಗೆ ಅನ್ನಕೊಟ್ಟು ಕಾಪಾಡುತ್ತಿರೋ ದಂಪತಿಗಳಿಗೆ ಒಪ್ಪತ್ತು ಉಪಚಾರ ಮಾಡುವ ಹಾಗಿಲ್ಲವಲ್ಲೋ ಮಾಧೂ."

"ಊಟೋಪಚಾರದಿಂದ ಅವರ ಋಣ ತೀರಿಸಲು ಸಾಧ್ಯವಿಲ್ಲಮ್ಮ. ನಿನ್ನೆ ನೋಡು – ಭರಮೇಗೌಡ, ಅವರಮ್ಮ ಆಫೀಸಿಗೆ ಬಂದರು.

ಅವನ ಕೇಸಿನ ಖರ್ಚೆಲ್ಲಾ ಯಜಮಾನರೇ ಹಾಕಿದ್ದರು. ಅದರ ಬಾಬತ
ಆರುನೂರು ರೂಪಾಯಿ ಕೊಟ್ಟು ಫೀಸೆಂದು ಐದುನೂರು ರೂಪಾಯಿ
ಕೊಟ್ಟ. ಯಜಮಾನರು ನೂರರ ಎರಡು ನೋಟು ನನ್ನ ಕೈಯಲ್ಲಿತ್ತರು
'ನನಗೇಕೆ ಸಾರ್ ಎಂದೆ.' 'ಭತ್ತಕುಟ್ಟಿದವರು ನೀವು ಮಾಧವರಾವ್
ನಾನು ಪಕ್ಕದಲ್ಲಿ ನಿಂತುಕೊಂಡು ಹೆಗಲು ಹಾರಿಸಿದೆ. ನ್ಯಾಯವಾಗಿ
ಇಷ್ಟು ಹಣವೂ ನಿಮಗೇ ಸಲ್ಲಬೇಕು' ಎಂದರು. ನೀನು ಹೇಳುವ ಹಾಗ
ಇಂಥವರ ಆಶ್ರಯ ಸಿಕ್ಕಿದ್ದು ನನ್ನ ಪೂರ್ವಜನ್ಮದ ಸುಕೃತ."

"ಆರತಿ ಅಕ್ಷತೆ ಎಂದರೆ ಖರ್ಚು ಹೆಚ್ಚಾಗುತ್ತದೆ."

"ನಿನ್ನ ಕೈಗೆ ನೂರು ರೂಪಾಯಿ ಹಾಕಿಬಿಡುತ್ತೇನೆ. ನಿನ್ನ ಇಷ್ಟ
ಬಂದದ್ದು ಮಾಡಿಕೋ."

ಗೋದಮ್ಮನವರ ಮನಸ್ಸಿಗೆ ನೆಮ್ಮದಿಯಾಯಿತು.

"ಆರತಿ ದಿನದ ಹೊತ್ತಿಗೆ ಬರಬೇಕೂಂತ ಹೇಳಿ ನಿಮ್ಮ ಅತ್ತಿಮ
ನವರಿಗೆ ಕಾಗದ ಬರೆ ಮಾಧೂ. ನಾವು ಪಟ್ಟಣಕ್ಕೆ ಬಂದಮೇಲೆ ಅವರ
ಬಂದೇ ಇಲ್ಲ. ತಾಯಿಯನ್ನು ನೋಡಬೇಕೂಂತ ರುಕ್ಕೂ, ಪಾಪ ಎಷ್ಟ
ಹಂಬಲಿಸುತ್ತಿದೆಯೋ ?" ಎಂದು ಸೂಚಿಸಿದರು.

ಮಾಧೂ ಕಾಫಿ ಕುಡಿದು ಮುಗಿಸಿ ಹೊರಡಲನುವಾದ.

ಶನಿವಾರ ಸಂಜೆ ತಪ್ಪದೆ ಡಾ. ಸುಂದರಂ ಅವರ ಮನೆಯಲ್ಲ
ಗೆಳೆಯರ ಗೋಷ್ಠಿ ಸೇರುತ್ತಿತ್ತು. ಎಂಟು ವರ್ಷಗಳ ಹಿಂದೆಯೇ ಪಟ್ಟಣ
ಸೇರಿದ ಸುಂದರಂ ಸಾಕಷ್ಟು 'ಪ್ರೈವೇಟ್ ಪ್ರ್ಯಾಕ್ಟೀಸ್' (Private
Practice) ಬೆಳಸಿಕೊಂಡಿದ್ದರು. ಶನಿವಾರದ ಗೋಷ್ಠಿಗೆ ತಪ್ಪದ
ಬರುತ್ತಿದ್ದವರೆಂದರೆ ಪೋಸ್ಟ್‌ಮಾಸ್ಟರ್ ಪುಟ್ಟಯ್ಯನವರು, ಷರೀಫ
ಸಾಹೇಬರ ತಮ್ಮ ಮಸ್ತಾನ್. ಆಗಾಗ್ಗೆ ಜವರೇಗೌಡರೂ ಹಕೀ
ಹುಸೇನ್ ಸಾಹೇಬರೂ ಬಂದು ಗೋಷ್ಠಿಯ ಕಾರ್ಯಕಲಾಪಗಳಲ್ಲ
ಭಾಗವಹಿಸುತ್ತಿದ್ದರು.

ಜವರೇಗೌಡರು ಪಟ್ಟಣ ಪ್ರಾಂತ್ಯದಲ್ಲೆಲ್ಲಾ ಹೆಸರುವಾಸಿ
ಯಾಗಿದ್ದ ಜಮೀನುದಾರರಾಗಿದ್ದರು ಸಾವಿರರೂಪಾಯಿ ಮೇಲ್ಪಟ್ಟ

ಕಂದಾಯ ಕೊಡುತ್ತಿದ್ದರು. ಲೇವಾದೇವಿಯನ್ನೂ ಮಾಡುತ್ತಿದ್ದರು. ಗೌಡರಿಗೆ ಮೊದಲಿನಿಂದಲೂ ರಾಘವೇಂದ್ರರಾಯರೇ ಲಾಯರು, ಸುಂದರಂ ಅವರೇ ಡಾಕ್ಟರು. ಸುಂದರಂ ಆಹ್ವಾನಿಸಿದಾಗ ಶನಿವಾರದ ಗೋಷ್ಠಿಗೆ ಬರಲು ಗೌಡರು ಅನುಮಾನಿಸಿದರು. ರಾಘವೇಂದ್ರರಾಯರ ವಿರುದ್ಧಪಕ್ಷದಲ್ಲಿದ್ದ ಮಾಧವರಾಯರ ಜತೆಸೇರಿದರೆ, ತಮಗೂ ರಾಘವೇಂದ್ರರಾಯರಿಗೂ ವೈಮನಸ್ಯ ಹುಟ್ಟಬಹುದೆಂಬುದೇ ಅವರ ಭೀತಿಗೆ ಕಾರಣವಾಗಿತ್ತು. ಒಮ್ಮೆ ಸುಂದರಂ ಬಲವಂತಕ್ಕೆ ಬಂದವರು ಕ್ರಮವಾಗಿ ಬರಲಾರಂಭಿಸಿದರು. ಮಾಧವರಾಯ ರಾಘವೇಂದ್ರರಾಯರ ಬಗ್ಗೆ ಒಂದು ಸಣ್ಣ ಮಾತನ್ನೂ ಆಡದಿದ್ದುದು ಗೌಡರಿಗೆ ಆಶ್ಚರ್ಯ ವನ್ನುಂಟುಮಾಡಿತ್ತು. ನಾರಾಯಣಸ್ವಾಮಿ ಅಯ್ಯಂಗಾರ್ಯರ ಪಕ್ಷಪಾತಿಗಳಾದ ಮುಸ್ತಾನ್ ಸಾಹೇಬರು ಒಮ್ಮೊಮ್ಮೆ ಟೀಕೆ ಮಾಡಿದರೆ ಮಾಧವರಾಯ ಸೂಕ್ಷ್ಮವಾಗಿ

"ಇನ್ನೊಬ್ಬರ ವಿಷಯ ನಮಗೇಕೆ ಸಾಹೇಬರೇ" ಎಂದು ವಿಷಯಾಂತರ ಮಾಡುತ್ತಿದ್ದುದನ್ನೂ ಗೌಡರು ಗಮನಿಸಿದ್ದರು. ಮಾಧವ ರಾಯನ ಬಗ್ಗೆ ಗೌಡರಿಗೆ ವಿಶ್ವಾಸ, ಗೌರವ ಅವ್ಯಕ್ತವಾಗಿ ಮೊಳಕೆ ಹಾಕಿತ್ತು.

ಭರಮೇಗೌಡನ ಪ್ರಸಂಗದಲ್ಲಿ ರಾಘವೇಂದ್ರರಾಯರು ತಳೆದಿದ್ದ ಧೋರಣೆ ಜವರೇಗೌಡರಿಗೆ ಸಹ್ಯವಾಗಿರಲಿಲ್ಲ. ತಮಗೆ ಸಂಬಂಧಪಡದ ವಿಷಯಕ್ಕೇಕೆ ಬಾಯಿಹಾಕುವುದೆಂದು ಅವರು ತಾಟಸ್ಥ್ಯತಳೆದಿದ್ದರು. ನಾರಾಯಣಸ್ವಾಮಿ ಅಯ್ಯಂಗಾರ್ಯರೂ ಮಾಧವರಾಯರೂ ಭರಮೇ ಗೌಡನಿಗೆ ಮಾಡಿದ ಮಹೋಪಕಾರ ಕಂಡು ಜವರೇಗೌಡರ ವಿಚಾರವೇ ಬದಲಾಗಿ ಹೋಗಿತ್ತು.

ಮುಂದಿನ ಶನಿವಾರದ ಗೋಷ್ಠಿ ತನ್ನ ಮನೆಯಲ್ಲಿ ಸೇರಬೇಕೆಂದು ತಿಳಿಸಿ ಮಾಧವರಾಯ ಎಲ್ಲರನ್ನೂ ಉಪಾಹಾರಕ್ಕೆ ಆಹ್ವಾನಿಸಿದ.

"ಮನೆಯಲ್ಲೇನು ಹೆಚ್ಚುಗಟ್ಟಳೆ ಮಾಧವರಾಯರೇ" ಎಂದು ಡಾ. ಸುಂದರಂ ಕೇಳಿದರು.

"ನನ್ನ ಮಗುವಿನ ಹುಟ್ಟಿದ ಹಬ್ಬ. ಸಂಜೆಗೆ ಆರತಿ ಅಕ್ಷತೆ
ಇಟ್ಟುಕೊಂಡಿದ್ದಾರೆ."

"ನಾವು ಹೇಗಪ್ಪಾ ಬರುವುದು. ಹೆಣ್ಣುಮಕ್ಕಳ ಮಹಾಸಭೆ
ಸೇರಿಬಿಟ್ಟಿರುತ್ತದೆ."

"ಅದಕ್ಕೇನು ಡಾಕ್ಟರೇ. ಮಹಡಿಯ ಮೇಲೆ ಬೇಕಾದಷ್ಟು
ಸ್ಥಳವಿದೆ. ನಾವು ಅಲ್ಲಿ ಕುಳಿತರಾಯಿತು." ಎಂದು ತಿಳಿಸಿದ. ಇಸ್ಪೀಟ್
ಆಟ ಸಾಗಿದ್ದಂತೆ ಪೋಸ್ಟ್‌ಮಾಸ್ಟರ್ ಪುಟ್ಟಯ್ಯನವರು

"ನಿಮ್ಮ ಟೆನಿಸ್‌ಕೋರ್ಟು ಏನಾಯಿತು ಸಾಹೇಬರೇ" ಎಂದು
ಮಸ್ತಾನ್ ಸಾಹೇಬರನ್ನು ಕೇಳಿದರು.

"ಈಚೆಗೆ ನಾನೂ ಆಕಡೆ ಹೋಗಲಿಲ್ಲ ಸ್ವಾಮಿ.

"ನಿಮ್ಮ ಕೈಗಾದರೂ ತೆಗೆದುಕೊಂಡು ಏನಾದರೂ ಮಾಡಿಯಪ್ಪ
ಬೆಳಿಗ್ಗೆಯಿಂದ ಸಂಜೆಯವರೆಗೆ ಕುಳಿತು ಕುಳಿತೂ ಸಾಕಾಗಿ
ಹೋಗಿರುತ್ತದೆ. ಒಂದೆರಡು ಸೆಟ್ ಟೆನಿಸ್ ಆಡಿದರೆ ಸ್ವಲ್ಪ
ವ್ಯಾಯಾಮವಾಗುತ್ತದೆ."

"ಸಾಹೇಬರು ಮಾಡೋ ಪ್ರಯತ್ನವೆಲ್ಲಾ ಮಾಡಿದರು
ಪುಟ್ಟಯ್ಯನವರೇ. ರಾಘವೇಂದ್ರರಾಯರು 'ಸ್ವಯಂರಾಜ, ಸ್ವಯಂ
ಮಂತ್ರಿ'ಗಳಾಗಿ ಟೆನಿಸ್ ಕ್ಲಬ್ಬನ್ನು ಸರ್ವಮಾನ್ಯ ಮಾಡಿಕೊಂಡಿದ್ದಾರೆ
ಪುಣ್ಯಾತ್ಮರು ಸರಿಯಾಗಿ ನಡೆಸಲೂ ಒಲ್ಲರು – ಬೇರೆಯವರಿಗೆ ವಹಿಸಿ
ಕೊಡಲೂ ಒಲ್ಲರು"

ಎಂದು ಡಾಕ್ಟರು ತುಸು ಬಿರುಸಾಗಿಯೇ ನುಡಿದರು. ಪುಟ್ಟಯ್ಯ
ನಸುನಗುತ್ತಾ

"ರಾಘವೇಂದ್ರರಾಯರ ವಿಷಯ ಮಾತನಾಡಬೇಡಿ ಡಾಕ್ಟರೇ
ಜವರೇಗೌಡರಿಗೆ ಕೋಪ ಬರುತ್ತದೆ."

ಜವರೇಗೌಡರಿಗೆ ನಿಜವಾಗಿ ಕೋಪಬಂದಿತ್ತು.

"ರಾಘವೇಂದ್ರರಾಯರ ವಿರುದ್ಧ ಮಾತಾಡುವವರೆಲ್ಲರ ಬಾಯಿ
ಮುಚ್ಚಿಸುವ ವೃತ್ತಿ ನಾನು ಕೈಗೊಂಡಿಲ್ಲ ಪುಟ್ಟಯ್ಯನವರೇ. ರಾಯ

ಅನೇಕ ವ್ಯವಹಾರ ನನಗೆ ಸರಿಬೀಳುವುದಿಲ್ಲ. ಟೆನಿಸ್ ಕೋರ್ಟಿನ ವಿಷಯ ನಾನೇ ಅವರಲ್ಲಿ ಪ್ರಸ್ತಾಪಮಾಡಿದ್ದೆ. ನೀವು ಯಾರಾದರೂ ವಹಿಸಿ ಕೊಳ್ಳುವ ಹಾಗಿದ್ದರೆ ಹೇಳಿ. ರಾಯರ ರಾಜೀನಾಮೆ ನಾನು ತಂದು ಕೊಡುತ್ತೇನೆ."

"ನಮ್ಮ ಪೈಕಿ ಮಾಧವರಾಯರಿಗೆ, ಮಸ್ತಾನ್ ಸಾಹೇಬರಿಗೆ ಸ್ವಲ್ಪ ಪುರಸತ್ತಿದೆ. ಅವರು ವಹಿಸಿಕೊಂಡರೆ ಕೆಲಸ ಸುಸೂತ್ರವಾಗಿ ಸಾಗುತ್ತದೆ."

ಡಾಕ್ಟರ ಮಾತನ್ನು ಪುಷ್ಟೀಕರಿಸುತ್ತ ಪುಟ್ಟಯ್ಯ

"ಮಾಧವರಾಯರು ಅಧ್ಯಕ್ಷರಾಗಿರಲಿ, ಮಸ್ತಾನ್ ಸಾಹೇಬರು ಕಾರ್ಯದರ್ಶಿಗಳಾಗಿರಲಿ." ಎಂದರು. ಮಾಧವರಾವ್ ತಲೆ ಯಲ್ಲಾಡಿಸುತ್ತ

"ರಾಘವೇಂದ್ರರಾಯರ ಕೈಬಿಡಿಸಿ ದಯೆಯಿಟ್ಟು ನನ್ನ ತಲೆಗೆ ಈ ಅಧ್ಯಕ್ಷಸ್ಥಾನ ಕಟ್ಟಬೇಡಿ. ವೃತ್ತಿಯಲ್ಲಿ ಈಗ ನಾವು ವಿರೋಧಿ ಗಳಾಗಿದ್ದೇವೆ. ನಾಳೆ ಸಾಮಾಜಿಕ ಜೀವನದಲ್ಲಿಯೂ ವಿರೋಧಿಗಳಾಗುವ ಸಂಭವ ಬರುತ್ತದೆ."

ಮಾಧವರಾಯನ ವಾದವನ್ನು ಜವರೇಗೌಡರು ಪೂರ್ಣವಾಗಿ ಅನುಮೋದಿಸಿ

"ಅವರು ಹೇಳುವುದು ನ್ಯಾಯ ಸ್ವಾಮಿ. ಊರಿನಲ್ಲಿ ಪಾರ್ಟಿ ಗಳಾಗುವುದು ಚೆನ್ನಾಗಿಲ್ಲ" ಎಂದರು.

ಮಾರನೆಯ ಸಂಜೆ ಎಲ್ಲರೂ ಟೆನಿಸ್ ಕ್ಲಬ್ಬಿನಲ್ಲಿ ಸೇರುವುದೆಂದು ಇತ್ಯರ್ಥವಾಯಿತು. ಜವರೇಗೌಡರು ರಾಘವೇಂದ್ರರಾಯರನ್ನು ಅಲ್ಲಿಗೆ ಕರೆದುಕೊಂಡು ಬರಲೊಪ್ಪಿದರು.

ಆರು ಗಂಟೆಗೆ ಸರಿಯಾಗಿ ಟೆನಿಸ್ ಕ್ಲಬ್ಬಿನಲ್ಲಿ ಕ್ರೀಡಾಭಿಮಾನಿಗಳ ಸಭೆ ಸೇರಿತು. ಡಾಕ್ಟರು, ಪುಟ್ಟಯ್ಯ, ಮಸ್ತಾನ್, ಮಾಧವರಾಯರಲ್ಲದೆ ಹೆಡ್ ಮಾಸ್ಟರ್ ಅಚ್ಚಪ್ಪನವರು, ಲಾಯರ್ ರಂಗಯ್ಯನವರೂ ಇತರರೂ ಬಂದಿದ್ದರು. ಆರೂವರೆಯಾದರೂ ರಾಘವೇಂದ್ರರಾಯರಾಗಲಿ ಜವರೇ

ಗೌಡರಾಗಲಿ ಅತ್ತ ಸುಳಿಯಲಿಲ್ಲ. ನಾನಾ ಬಗೆಯ ಊಹಾಪೋ
ಗಳಿದ್ದವು.

"ಅವರೆಲ್ಲಿ ಬರುತ್ತಾರೆ. ಎಂಥದ್ದೇ ಆಗಲಿ. ಕೈಗೆ ಅಧಿಕಾ
ಸಿಕ್ಕಿದರೆ ಅದನ್ನು ಬಿಟ್ಟುಕೊಡಲು ರಾಘವೇಂದ್ರರಾಯರ ಪ್ರಾಣ
ಹೋಗುತ್ತದೆ" ಎಂದು ಡಾಕ್ಟರಂದರು.

"ರಾಘವೇಂದ್ರರಾಯರ ವಿಷಯವೇ ಆಗಿದ್ದರೆ, ಅವರು ಖಂ
ವಾಗಿ ಬರುತ್ತಿರಲಿಲ್ಲ. ಜವರೇಗೌಡರು ಜವಾಬ್ದಾರಿ ತೆಗೆದುಕೊಂಡಿ
ವುದರಿಂದ ನಾವು ನಿರಾಶರಾಗಬೇಕಾದದ್ದಿಲ್ಲ." ಎಂದು ಪುಟ್ಟಂ
ಸೇರಿಸಿದರು.

"ಗೌಡರು ಸರಿ ಸಾರ್. ಪ್ರಾಣ ಹೋದರೂ ಆಡಿದ ಮಾ
ತಪ್ಪುವವರಲ್ಲ." ಎಂದು ಮಸ್ತಾನ್ ಸಾಹೇಬರು ಪ್ರಶಂಸೆಮಾಡಿದರ

"ನಾನು ಒಂದು ಮಾತು ಹೇಳುತ್ತೇನೆ. ದಯೆಯಿಟ್ಟು ಎಲ್ಲ
ಕೇಳಿ – ಮಸ್ತಾನ್ ಸಾಹೇಬರು ಉತ್ಸಾಹಶಾಲಿಗಳು, ಸ್ವ
ಒಳ್ಳೆಯ ಆಟಗಾರರು, ಅವರು ಕಾರ್ಯದರ್ಶಿಗಳಾಗಿರುವುದು ನ್ಯಾ
ವಾಗಿಯೇ ಇದೆ. ಅಧ್ಯಕ್ಷಸ್ಥಾನದಲ್ಲಿ ರಾಘವೇಂದ್ರರಾಯರೇ ಇರಲಿ
ಇದಕ್ಕೆ ದಯೆಯಿಟ್ಟು ಎಲ್ಲರೂ ಒಪ್ಪಿಕೊಳ್ಳಿ."

"ಅವರು ಅಧ್ಯಕ್ಷರಾಗಿದ್ದರೆ ನಾನು ಖಂಡಿತ ಕಾರ್ಯದ
ಆಗುವುದಿಲ್ಲ. ಅವರ ಮರ್ಜಿ ಅನುಸರಿಸಿಕೊಂಡು, ಅವರ ಹಮಾ
ಮಾಡುವುದಕ್ಕೆ ಯಾರಿಗೆ ಸಾಧ್ಯ ಸ್ವಾಮಿ–" ಎಂದು ಮಸ್ತಾ
ಸಾಹೇಬರು ತಮ್ಮ ಅಸಮ್ಮತಿ ಸೂಚಿಸಿದರು.

ಅವರಿವರ ಬಳಿ ಸುಳಿದಾಡಿದ ಅಧ್ಯಕ್ಷ ಮಾಲೆ ಕೊನೆಗೆ ಡಾಕ್ಟ
ಕೊರಳಿಗೆ ಬಿತ್ತು.

"ಸದ್ಯಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಮೂರು ತಿಂಗಳ
ಮೇಲೆ ಮಾಧವರಾಯರು ಒಪ್ಪಿಕೊಂಡು ನನ್ನ ಬಿಟ್ಟುಕೊಡಬೇಕು
ಎಂದವರು ಸೂಚಿಸಲು ಎಲ್ಲರೂ ಒಪ್ಪಿಗೆಯಿತ್ತರು.

ನಸುದೂರದಲ್ಲಿ ರಾಘವೇಂದ್ರರಾಯರು, ಕೇಶವಯ್ಯಂಗಾರ್ಯ

ಜವರೇಗೌಡರು ಬರುವುದು ಕಾಣಿಸಿತು.

ರಾಘವೇಂದ್ರರಾಯರು ಬರಲು, ಎಲ್ಲರೂ ಎದ್ದು ನಿಂತು ಗೌರವ ಸೂಚಿಸಿದರು. ರಾಯರು ಕಣ್ಣು ಕೆಂಪಗೆ ಮಾಡಿಕೊಂಡು

"ಟೆನಿಸ್‌ಕ್ಲಬ್ಬಿನ ಆಡಳಿತ ನನ್ನ ಕೈಯಲ್ಲಿರುವುದು ಕೆಲವರಿಗೆ ಸಮಾಧಾನವಿಲ್ಲವೆಂದು ತಿಳಿದು ಬಂತು. ನಾನು ಕ್ಲಬ್ಬಿಗೆ ಮಾಡಿರುವ ಅನ್ಯಾಯವಾದರೂ ಏನು ತಿಳಿಸಿ" ಎಂದರು.

"ಕ್ಲಬ್ ಮಾಡಿರುವುದು ನಾವೆಲ್ಲಾ ಆಡುವುದಕ್ಕೆ. ನೀವು ಇತ್ತ ಸುಳಿಯುವುದಿಲ್ಲ. ವಾರಕ್ಕೊಮ್ಮೆಯೂ ಕೋರ್ಟನ್ನು ರೋಲ್ ಮಾಡಿ ನೀರುಹಾಕುವವರಿಲ್ಲ. ತಿಂಗಳುಗಟ್ಟಳೆಯಾದರೂ ಚೆಂಡುಗಳು ಬದಲಾಗುವುದಿಲ್ಲ."

"ಟೆನಿಸ್‌ಕ್ಲಬ್ಬಿನ ಕೆಲಸಮಾಡುವುದಕ್ಕೆ ನನಗೆ ಯಾರೂ ಸಂಬಳ ಕೊಡುವುದಿಲ್ಲ ಮಸ್ತಾನ್ ಸಾಹೇಬರೇ."

"ಸಂಬಳ ತೆಗೆದುಕೊಳ್ಳದಿದ್ದರೂ ದಕ್ಷತೆಯಿಂದ ಮಾಡಬೇಕಾದ ಕೆಲಸಗಳು ಎಷ್ಟೋ ಇವೆ ಸಾರ್ – ಅವುಗಳಲ್ಲಿ ಇದೂ ಒಂದು."

"ಟೆನಿಸ್‌ಕ್ಲಬ್ಬಿನ ನೆಪಮಾಡಿಕೊಂಡು ನೀವುಗಳು ನನ್ನ ಅವ ಮರ್ಯಾದೆ ಮಾಡಬೇಕೆಂದಿರುವ ಹಾಗೆ ಕಾಣುತ್ತದೆ."

"ತಾವು ಹಿರಿಯರು ಸಾರ್. ತಮಗೆ ಅವಮರ್ಯಾದೆ ಮಾಡುವ ಇಚ್ಛೆ ಯಾರಿಗೂ ಇಲ್ಲ. ಕ್ಲಬ್ಬು ಚೆನ್ನಾಗಿ ನಡೆಯಬೇಕೆಂಬುದೇ ಎಲ್ಲರ ಇಷ್ಟವಾಗಿದೆ. ತಾವೂ ಸಹಕರಿಸಬೇಕು." ಎಂದು ಮಾಧವರಾಯ ವಿನಯದಿಂದ ನಿವೇದಿಸಿಕೊಂಡ. ರಾಘವೇಂದ್ರರಾಯರಿಗೆ ಕೋಪ ಮತ್ತಷ್ಟು ಕೆರಳಿತು.

"ನಾನೆಲ್ಲಾ ಬಲ್ಲೆ ಮಾಧವರಾವ್. ಎದುರಿಗೇಕೆ ಬೆಣ್ಣೆಯಂಥ ಮಾತುಗಳನ್ನಾಡುವಿರಿ ?"

"ನಿಮ್ಮ ಹಿಂದೆಯೂ ನಾವು ಕೆಟ್ಟಮಾತು ಆಡಿಲ್ಲ ಸಾರ್. ನೆನ್ನೆ ಟೆನಿಸ್‌ಕ್ಲಬ್ಬಿನ ವಿಷಯ ಬಂದಾಗ ಜವರೇಗೌಡರೇ ಇದ್ದರು. ಅವರನ್ನೇ ಕೇಳಿ – ನಾವೇನು ಆಡಿಕೊಂಡೆವೆಂಬುದು ಗೊತ್ತಾಗುತ್ತದೆ."

"ನೀವು ಅಧ್ಯಕ್ಷರಾಗುವುದಕ್ಕೋ ಇಷ್ಟೆಲ್ಲಾ ಪ್ರಯತ್ನ."

ಮಾಧವರಾಯ ಉತ್ತರಕೊಡುವ ಗೋಜಿಗೆ ಬೀಳಲಿಲ್ಲ. ರಾಯರ ಮಾತಿಗೆ ನೊಂದುಕೊಂಡು ತಲೆತಗ್ಗಿಸಿ ನಿಂತುಬಿಟ್ಟ. ರಾಘವೇಂದ್ರ ರಾಯರಷ್ಟೇ ಶೀಘ್ರಕೋಪಿಯಾದ ಡಾಕ್ಟರಿಗೆ ಅವರ ಮಾತುಗಳು ಕೆರಳಿಸಿದವು.

"ಅವರಲ್ಲ ಸಾರ್ ಅಧ್ಯಕ್ಷರಾಗಬೇಕೆಂದಿರುವವರು – ನಾನು. ಕ್ಲಬ್ಬನ್ನು ಸರಿಯಾಗಿ ನಡಸುವುದು ನಿಮ್ಮಿಂದ ಸಾಧ್ಯವಾಗದಿದ್ದಮೇಲೆ ಯಾರು ವಹಿಸಿಕೊಂಡರೇನು ? ನಿಷ್ಕಾರಣವಾಗಿ ಮಾಧವರಾಯರನ್ನು ನೀವು ಆಕ್ಷೇಪಿಸುವುದು ಸರಿಯಲ್ಲ." ಎನ್ನಲು ರಾಘವೇಂದ್ರರಾಯರಿಗೆ ಕೋಪ ನೆತ್ತಿಗೇರಿತು. ಜೇಬಿನಿಂದ ಬೀಗದಕೈ ಗೊಂಚಲನ್ನು ತೆಗೆದು, ಕಂಕುಳಲ್ಲಿದ್ದ ಪುಸ್ತಕದೊಂದಿಗೆ ಅದನ್ನು ನೆಲದಮೇಲೆ ಬಿಸುಡಿ

"ನಿಮ್ಮ ಕ್ಲಬ್ಬು ನೀವೇ ನಡಸಿಕೊಳ್ಳಿ" ಎಂದು ಹೇಳಿ ಹೊರಟು ಹೋದರು. ಕೇಶವಯ್ಯಂಗಾರ್ಯರೂ ಜವರೇಗೌಡರೂ ಅವರನ್ನು ಹಿಂಬಾಲಿಸಿದರು.

ರಾಘವೇಂದ್ರರಾಯರ ವರ್ತನೆ ಎಲ್ಲರಿಗೂ ಬೇಸರವನ್ನುಂಟು ಮಾಡಿತು. ಯಾರ ಬಾಯಲ್ಲಿಯೂ ಮಾತು ಹೊರಡದು. ಮಸ್ತಾನ ಸಾಹೇಬರು ಪುಸ್ತಕ, ಬೀಗದಕೈ ಗೊಂಚಲ ಕೈಗೆತ್ತಿಕೊಂಡು

"ಹೋಗಲಿ ಬಿಡಿ ಸಾರ್. ತನ್ನ ಕೋಳಿ ಕೂಗದೆ ಇದ್ದರೆ ಬೆಳಗೇ ಆಗುವುದಿಲ್ಲ ಎಂದು ರಾಯರು ತಿಳಿದುಕೊಂಡಿದ್ದಾರೆ. ನಮ್ಮ ಕೋಳಿ ಕೂಗಿದರೂ ಬೆಳಗಾಗತ್ತೆ ಎನ್ನುವುದನ್ನು ತೋರಿಸೋಣ" ಎಂದರು. ರಂಗಯ್ಯ ಮೆಲ್ಲನೆ

"ಟಿಪ್ಪುಸುಲ್ತಾನರು ಹೋದಮೇಲೆ ರಾಯರು ನಮ್ಮ ಊರಿನ ನವಾಬರಾಗಿದ್ದಾರೆ – ಬೆಂಕಿ ನವಾಬರು. ಅವರ ಮಾತಿಗೆ ಪ್ರತಿ ಹೇಳಿ ಯಾರೂ ಬದುಕುವ ಹಾಗೇ ಇಲ್ಲ. ಕೋರ್ಟಿನಲ್ಲೂ ಇದೇ ದರ್ಬಾರು ತೋರಿಸುತ್ತಾರೆ. ಹಿರಿಯರು – ದೊಡ್ಡ ಲಾಯರು ಎಂದು ನಾವು ಗೌರವ ತೋರಿಸಿದರೆ, ನಮ್ಮ ಮೇಲೆ ಅಧಿಕಾರ ಚಲಾಯಿಸುತ್ತಾರೆ."

"ಹೋಗಲಿ ಬಿಡಿ ರಂಗಯ್ಯನವರೇ. ಅವರದು ಸ್ವಲ್ಪ ಮುಂಗೋಪದ ಸ್ವಭಾವ." ಎಂದು ಮಾಧವರಾಯನೇ ಸಮಾಧಾನ ಹೇಳಬೇಕಾಯಿತು.

ವಾದವಿವಾದ ಏನೇ ಆದರೂ, ಟೆನಿಸ್‌ಕ್ಲಬ್ಬು ರಾಘವೇಂದ್ರ ರಾಯರ ಕೈಬಿಟ್ಟಿತಲ್ಲ ಎಂದು ಎಲ್ಲರಿಗೂ ಸಂತೋಷ. ಕ್ಲಬ್ಬನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಸಾಕಷ್ಟು ಮಾತುಕತೆಗಳಾದ ಮೇಲೆ ಎಲ್ಲರೂ ಚದುರಿದರು.

೧೭

ರಂಗಮ್ಮನವರು ಮಗನನ್ನು ಕರೆದುಕೊಂಡು ಬುಧವಾರವೇ ಪಟ್ಟಣಕ್ಕೆ ಬಂದರು. ರುಕ್ಮಿಣಿ ತಾಯಿಯನ್ನಪ್ಪಿಕೊಂಡು ಆನಂದ ಭಾಷ್ಪ ಸುರಿಸಿದಳು. ರಂಗಮ್ಮನವರು ಮೊಮ್ಮಗಳನ್ನೆತ್ತಿಕೊಂಡು ಅಪ್ಪಿ ಮುದ್ದಾಡಿದರು. ಗೋದಮ್ಮ ಯೋಗಕ್ಷೇಮ ವಿಚಾರಿಸಿ

"ಯಾಕ್ರೀ – ಇಷ್ಟು ತೆಗೆದು ಹೋಗಿದ್ದೀರಿ – ಮೈಯಲ್ಲಿ ಸರಿಯಾಗಿಲ್ಲವೇ ?"

"ಮಲೇರಿಯ ಆಗಿತ್ತು ಈಗ ಆರೋಗ್ಯವಾಗಿದ್ದೇನೆ."

"ನಿನಗೆ ಮೈಯಲ್ಲಿ ಚೆನ್ನಾಗಿಲ್ಲವೆಂದು ಕಾಗದ ಬರೆಯಬಾರದಾಗಿತ್ತೇನಮ್ಮ" ಎಂದು ರುಕ್ಮಿಣಿ ಆಕ್ಷೇಪಿಸಲು

"ಏನು ದೊಡ್ಡ ವಿಷಯಾಂತ ಬರೆಯಲಮ್ಮ. ನಾಲ್ಕು ದಿವಸ ಜ್ವರ ಬಂತು – ಹೋಯಿತು."

ರುಕ್ಮಿಣಿ ತಾಯಿಯನ್ನೂ ತಮ್ಮನನ್ನೂ ಕರೆದುಕೊಂಡು ಹೋಗಿ ಮನೆ ತೋರಿಸಿಕೊಂಡು ಬಂದಳು.

ರಾತ್ರಿ ರಂಗಮ್ಮನವರು ಸ್ನಾನಮಾಡಿ ಗೋದಮ್ಮನವರ ಜತೆ ಫಲಾಹಾರ ಸ್ವೀಕರಿಸಿದರು. ಮಾಧವರಾಯ ರಾಮುವನ್ನು ಪಕ್ಕದಲ್ಲಿಯೇ ಊಟಕ್ಕೆ ಕೂಡಿಸಿಕೊಂಡು ಉಪಚಾರ ಮಾಡಿದ.

ರಾತ್ರಿಯೆಲ್ಲಾ ತಾಯಿ ಮಗಳಿಗೆ ಜಾಗರಣೆಯಾಯಿತು. ಮಗಳ

ಸಂಸಾರದ ಅಚ್ಚುಕಟ್ಟುತನ, ಮಗಳು ಬೀಗಿತ್ತಿಯ ಅನ್ಯೋನ್ಯ, ಅಳಿಯನ ಉಚ್ಛ್ರಾಯ ಕಂಡು ರಂಗಮ್ಮನವರಿಗೆ ಮಹದಾನಂದ ವಾಗಿತ್ತು.

ರುಕ್ಮಿಣಿ ಯೋಚನೆ ಮಾಡಿಕೊಂಡೇ

"ಅಣ್ಣ ಕಾಗದ ಬರೆಯುತ್ತಿದ್ದಾನೇನಮ್ಮ?" ಎಂದು ಕೇಳಿದಳು.

"ಕಾಗದ ಹೆಚ್ಚು ಬರೆಯುವುದಿಲ್ಲ. ಈಗ ತಪ್ಪದೆ ತಿಂಗಳಿಗೆ ಅರವತ್ತು ರೂಪಾಯಿ ಕಳಿಸುತ್ತಿದ್ದಾನೆ."

"ರಂಗೂನಿನಲ್ಲೇ ಇದ್ದಾನೆಯೇ ?"

"ಅಲ್ಲೇ ವ್ಯಾಪಾರ ಮಾಡುತ್ತಿದ್ದಾನಂತೆ ! ಸಂಪಾದನೆ ಚೆನ್ನಾಗಿದೆ ಎಂದು ಬರೆದಿದ್ದಾನೆ."

"ಊರಿಗೆ ಯಾವಾಗ ಬರುತ್ತಾನಂತೆ !"

"ಆ ಸುದ್ದಿಯೇ ಇಲ್ಲಮ್ಮ. 'ಕಳೆದು ಹೋದುದು ಹೋಯಿತು – ನೀನೂ ಶ್ರೀನಿವಾಸ ಬಂದು ಬಿಡಿ' ಎಂದು ನಾನು ಎಷ್ಟೋ ಸಲ ಬರೆದೆ. ಅದಕ್ಕೆ ಉತ್ತರವೇ ಕೊಡಲಿಲ್ಲ."

ತಾಯಿ, ಮಗಳು ಮಾತನಾಡಿಕೊಳ್ಳುವ ಹಲವಾರು ವಿಷಯಗಳಿದ್ದರೂ ಇಬ್ಬರಿಗೂ ಮಾತನಾಡಲಾಗಲಿಲ್ಲ. ಹೃದಯ ತುಂಬಿ ಮಾತು ನಿಂತುಹೋಯಿತು.

ಶನಿವಾರದ ಉತ್ಸವಕ್ಕೆ ಮಾರನೆಯ ದಿನದಿಂದಲೇ ವ್ಯವಸ್ಥೆ ಆರಂಭವಾಯಿತು. ಬೀಗಿತ್ತಿಯರು ಕುಳಿತುಕೊಂಡು ಕಾರ್ಯಕ್ರಮ ನಿರ್ಧರಿಸಿದರು. ಬೆಳಿಗ್ಗೆ ಮನೆಯಲ್ಲಿ ಪೂಜೆ, ಅಭಿಷೇಕ ಮಾಡಿಕೊಂಡು, ಮಗುವನ್ನು ದೇವಸ್ಥಾನಕ್ಕೆ ಕರೆದೊಯ್ದು ಅಲ್ಲಿ ಪೂಜೆ, ಅಭಿಷೇಕ ಮಾಡಿಸುವುದೆಂದು ನಿಶ್ಚಯವಾಯಿತು. ಮಧ್ಯಾಹ್ನ ಎಲ್ಲರಿಗೂ ಊಟ. ಸಂಜೆಗೆ ಆರತಿ ಅಕ್ಷತೆ. ಫಲತಾಂಬೂಲ ಮತ್ತು ಅವಲಕ್ಕಿಪುರಿ ಉಂಡೆ. ಶ್ರೀದೇವಿ, ವೃಂದಮ್ಮನವರ ಜತೆ ಹೋಗಿ ಎಲ್ಲರನ್ನೂ ಕರೆದು ಬರಬೇಕೆಂದು ಗೊತ್ತಾಯಿತು.

ಬೀಗಿತ್ತಿಯರಿಬ್ಬರಿಗೂ ಕೈತುಂಬ ಕೆಲಸವಾಯಿತು. ವೃಂದವ
ಅವರ ಸಹಾಯಕ್ಕೆ ಬಂದು ನಿಂತರು.

ಶುಕ್ರವಾರ ಬೆಳಿಗ್ಗೆ ಮಾಧವರಾಯ ಬಿಡುವು ಮಾಡಿಕೊಂಡ
ಭಾವಮೈದುನನನ್ನೂ ಜತೆಯಲ್ಲಿ ಕರೆದುಕೊಂಡು ಹೋಗಿ ಪೇಟೆಯಿಂ
ತರಬೇಕಾದ ಸಾಮಾನುಗಳನ್ನೆಲ್ಲಾ ತಂದು ಹಾಕಿದ.

ಮಾರನೆಯ ದಿನದ ಕೋರ್ಟು ಕೆಲಸ ತಾವು ನೋಡಿಕೊಳ್ಳು
ದಾಗಿ ನಾರಾಯಣಸ್ವಾಮಿ ಅಯ್ಯಂಗಾರ್ಯರು ಹೇಳಿದ್ದರು.
ಸಂಜೆ ಆಫೀಸಿಗೆ ಹೋಗಿ ಕಾಗದ ಪತ್ರಗಳನ್ನು ಸಿದ್ಧಪಡಿಸಿ ಬರು
ಕೆಲಸ ಅನಿವಾರ್ಯವಾಗಿತ್ತು.

ಮಾಧವರಾಯ ಮನೆಗೆ ಬರುವ ವೇಳೆಗೆ ತೊಟ್ಟಿಯಲ್ಲಿ ರಾ
ಯಾಗಿ ಬಿದ್ದಿದ್ದ ತೆಂಗಿನಕಾಯಿ, ಎರಡು ಕಟ್ಟು ಬಾಳೆಲೆ, ಒಂದ
ಗೊನೆಯ ಬಾಳೆಯ ಹಣ್ಣು ಕಂಡು ಆಶ್ಚರ್ಯದಿಂದ

"ಇದು ಎಲ್ಲಿಂದ ಬಂತು" ಎಂದು ಕೇಳಿದ.

"ಜವರೇಗೌಡರು ಕಳಿಸಿಕೊಟ್ಟರು ಎಂದು ಹೇಳಿ ಯಾವನೊ
ತೆಂಗಿನಕಾಯಿ ತಂದುಕೊಟ್ಟುಹೋದ. ಭರಮೇಗೌಡ ಬಾಳೆಯೆಲೆಯ
ಕಟ್ಟು, ಬಾಳೆಯಹಣ್ಣು ತಂದುಕೊಟ್ಟ" ಎಂದು ರುಕ್ಮಿಣಿ ಹೇಳಿದಳು

"ಜವರೇಗೌಡರು ಕಳಿಸಿಕೊಟ್ಟರಂತೇ!" ಎಂದು ಮಾಧವರಾಯ
ಮತ್ತೊಮ್ಮೆ ಕೇಳಿದ.

"ಹೌದು, ಅವನು ಹಾಗೆಯೇ ಹೇಳಿದ್ದು" ಎಂದು ರುಕ್ಮಿ
ಉತ್ತರಿಸಿದಳು.

ಶನಿವಾರ ಬೆಳಿಗ್ಗೆ ಕಮಲನಿಗೆ ನೀರೆರೆದು, ಅವಳನ್ನು ಹೊಸ
ಬಟ್ಟೆಗಳಿಂದ ಸಿಂಗರಿಸಿ, ರುಕ್ಮಿಣಿ ಅವಳ ಕೊರಳಿಗೆ ಹೊಸದಾಗಿ
ಮಾಡಿಸಿದ್ದ ಸರ ಹಾಕಿದಳು. ರಂಗಮ್ಮನವರು ತಾವು ಮಾಡಿಸಿ
ಕೊಂಡು ಬಂದಿದ್ದ ಒಂದೆಳೆಯ ಚಿನ್ನದ ಸರದಿಂದ ಮೊಮ್ಮಗಳನ್ನಲಂಕ
ರಿಸಿದರು. ಹನ್ನೊಂದು ಗಂಟೆಯ ವೇಳೆಗೇ ಅಡಿಗೆಯ ಕೆಲಸಮುಗಿ
ಎಲ್ಲರೂ ದೇವಸ್ಥಾನಕ್ಕೆ ಹೋಗಿ ಪೂಜೆ, ಅಭಿಷೇಕ ಮುಗಿಸಿಕೊಂಡ

ಂದರು.

ಮಧ್ಯಾಹ್ನ ಎಲ್ಲರಿಗೂ ದಿವ್ಯ ಔತಣವಾಯಿತು. ವೆಂಕಟರಮಣಾ ಚಾರ್ರ ಮನೆಯವರು, ಅವರ ಬಂಧು ಬಳಗ ಮೂರು ನಾಲ್ಕು ಮನೆಯವರಿಗೆ ಆಮಂತ್ರಣವಿತ್ತು.

ಊಟ ಮುಗಿದೊಡನೆಯೇ ಆರತಿಯ ವ್ಯವಸ್ಥೆಗೆ ರುಕ್ಮಿಣಿ ಂತಳು. ರಂಗಮ್ಮ, ಗೋದಮ್ಮನವರು ಸಂಜೆಯ 'ಸಂತೋಷ ಊಟ' ಕ್ಕೆ ತಿಂಡಿ ತಿನಿಸುಗಳನ್ನು ಮಾಡಲಾರಂಭಿಸಿದರು.

ಸಂಜೆ ಐದು ಗಂಟೆಯ ವೇಳೆಗೆ ಒಬ್ಬೊಬ್ಬರಾಗಿ ಬರಲಾರಂಭಿಸಿ ದರು. ಪುಟ್ಟಯ್ಯ, ಸುಂದರಂ, ರಂಗಯ್ಯ, ಅಚ್ಚಪ್ಪ, ಮಸ್ತಾನ್, ಹುಸೇನ್ ಸಾಹೇಬ್, ಜವರೇಗೌಡ ಎಲ್ಲರೂ ಬಂದು ಸೇರಿದ ಮೇಲೆ ಉಪಾಹಾರ, ಕಾಫಿಯಾಯಿತು. ಎಲ್ಲರೂ ತಾಂಬೂಲ ಸೇವಿಸುತ್ತ ಕುಳಿತಾಗ ಮಾಧವರಾಯ

"ರಾಘವೇಂದ್ರರಾಯರನ್ನೂ ಕೇಶವಯ್ಯಂಗಾರ್ಯರನ್ನೂ ಕರೆ ದಿದ್ದೆ. ಅವರು ಏಕೋ ಬರಲಿಲ್ಲ" ಎಂದ

"ಯಾವದೋ ಅರ್ಜೆಂಟು ಕೆಲಸದಮೇಲೆ ಅವರು ಹಿರೋಡೆಗೆ ಹೋಗಬೇಕಾಯಿತು. ಬರುವುದಕ್ಕಾಗಲಿಲ್ಲ, ತಿಳಿಸು ಎಂದು ಹೇಳಿ ದರು." ಎಂದು ಜವರೇಗೌಡರು ಸಮಾಧಾನ ಹೇಳಿದರು. ಡಾ. ಸುಂದರಂ ಮಸ್ತಾನ್ ಖಾನರ ಮುಖ ನೋಡಿದರು.

ತೊಟ್ಟಿಯಲ್ಲಿ ಆರತಿಯ ಸಡಗರ ನಡದಿತ್ತು. ಮಾಧವರಾಯನ ಬಂಧುವರ್ಗದವರಲ್ಲದೆ ಊರಿನ ಇತರ ಸುಮಂಗಲಿಯರೂ ನೆರೆದಿದ್ದರು. ಮಗುವನ್ನೆತ್ತಿಕೊಂಡು ಶ್ರೀದೇವಿ ಹಸೆಯಮೇಲೆ ಕೂಡಬೇಕಾಯಿತು, ರುಕ್ಮಿಣಿ ಸ್ವಾಗತಕ್ಕೆ ನಿಂತಿದ್ದಳು. ವೃಂದಮ್ಮನವರೂ ಅವರ ಮನೆಯ ಹೆಣ್ಣುಮಕ್ಕಳೂ ಎಲ್ಲರಿಗೂ ಅರಶಿನ, ಕುಂಕುಮ, ಹೂವು, ಗಂಧ. ಫಲತಾಂಬೂಲ, ಅವಲಕ್ಕಿಪುರಿಯುಂಡೆ ಕೊಡುತ್ತಿದ್ದರು.

ಡಾಕ್ಟರ್ ಹೆಂಡತಿ ಸಿಂಗಾರಮ್ಮ ಮಗುವಿಗೆ ದೊಡ್ಡ ಸಿಲಲಾಯಿಡ್ ಗೊಂಬೆ ಓದಿಸಿದರು; ವೃಂದಮ್ಮ ಪುಟ್ಟ ಬೆಳ್ಳಿಗಿಂಡಿ ಓದಿಸಿದರು;

ಪೋಸ್ಟಮಾಸ್ಟರ್ ಹೆಂಡತಿ ಕಾವೇರಮ್ಮ ಒಂದು ಗಜ ಸಿಲ್ಕ್ ಓದಿಸಿದರ

ಹಾಡಿನ ಪೈಪೋಟಿ ನಡೆದಿತ್ತು. ಎಲ್ಲರೂ ಬಲವಂತವಾ ರುಕ್ಮಿಣಿಯ ಕೈಯಲ್ಲಿ ಹಾಡಿಸುತ್ತಿದ್ದರು.

ಹೊರಗಡೆ ಯಾರೋ ಗಟ್ಟಿಯಾಗಿ 'ಮಾಧವರಾಯರೇ' ಎಂ ಕೂಗಿದಂತಾಯಿತು. ಗೆಳೆಯರೊಂದಿಗೆ ಹರಟುತ್ತ ಕುಳಿತಿ ಮಾಧವರಾಯ 'ನಾರಾಯಣಸ್ವಾಮಿ ಅಯ್ಯಂಗಾರ್ಯರ ಧ್ವನಿ ಇ ಹಾಗಿದೆ' ಎಂದು ಕೆಳಗಿಳಿದು ಬಂದ.

ರುಕ್ಮಿಣಿ, ಮಾಧವರಾಯ ಇಬ್ಬರೂ ಬಾಗಿಲುವರೆಗೆ ಹೋ ನಾರಾಯಣಸ್ವಾಮಿ ಅಯ್ಯಂಗಾರ್ಯರಿಗೂ, ಅವರ ಕುಟುಂ ಅಲಮೇಲಮ್ಮನವರಿಗೂ ಸ್ವಾಗತ ಬಯಸಿದರು. ರುಕ್ಮಿಣಿ ಅಲಮೇ ಮ್ಮನವರನ್ನು ಒಳಕ್ಕೆ ಕರೆದೊಯ್ದಳು. ಮಾಧವರಾಯ ಮೆಲ್ಲ ಅಯ್ಯಂಗಾರ್ಯರ ಕೈಹಿಡಿದುಕೊಂಡು ಅವರನ್ನು ಮಹಡಿ ಮೇಲಕ್ಕೆ ಕರೆದುಕೊಂಡು ಬಂದ.

ಅಯ್ಯಂಗಾರ್ಯರು ಬಂದೊಡನೆಯೇ ಎಲ್ಲರೂ ಎದ್ದು ನಿಂ ಅವರಿಗೆ ಗೌರವ ತೋರಿಸಿದರು. ಅಯ್ಯಂಗಾರ್ಯರು ನಸುನಗು ಕೈಮುಗಿದು, ಮಾಧವರಾಯನ ಬಲವಂತವನ್ನೂ ಲೆಕ್ಕಿಸದೆ ಎಲ್ಲರೊ ದಿಗೆ ನೆಲದಮೇಲೆ ಹಾಸಿದ ಜಮಖಾನದಮೇಲೆ ಕುಳಿತರು.

"ಸ್ವಲ್ಪ ಏನಾದರೂ ಉಪಾಹಾರ ತೆಗೆದುಕೊಳ್ಳಬೇಕು ಸಾರ್ ಎಂದು ಮಾಧೂರಾಯ ಉಪಚರಿಸಿದ.

"ತಿನ್ನುವಕಾಲ ಆಗಿಹೋಯಿತು. ಮಾಧವರಾವ್. ಈಗ ಕುಡಿ ನೀರೂ ಜೀರ್ಣವಾಗುವುದಿಲ್ಲ."

"ಕಾಫಿಯಾದರೂ ತೆಗೆದುಕೊಳ್ಳಿ, ಸಾರ್."

"ಮೊದಲೇ ನಿದ್ರೆಬರುವುದಿಲ್ಲ. ಈಗ ಕಾಫಿ ಕುಡಿದರೆ ತೀರ ನಿ ಹೋಗಿಬಿಡುತ್ತದೆ. ಏನೂ ಬೇಡಿಯಪ್ಪ – ನೀವೆಲ್ಲಾ ತೆಗೆದುಕೊಳ್ಳಿ

"ನಮ್ಮದೆಲ್ಲಾ ಆಯಿತು ಸಾರ್."

"ತಾವು ದಯಮಾಡಿಸಿದ್ದು ನನ್ನ ಪುಣ್ಯ."

"ಚಿಗುರುವ ಎಲೆ ನೋಡಿ ಸಂತೋಷಪಡುವುದೇ ಉದುರುವ ಹಣ್ಣೆಲೆಗೆ ಶ್ರೇಯಸ್ಸು. ಎಲ್ಲಾ ಸಾಂಗವಾಗಿ ಆಯಿತೋ ?"

"ತಮ್ಮ ದಯದಿಂದ ಆಯಿತು ಸಾರ್."

ಅಯ್ಯಂಗಾರ್ಯರು ಅಲ್ಲಿದ್ದ ಎಲ್ಲರನ್ನೂ ಮಾತನಾಡಿಸಿ ಎಲ್ಲರ ಯೋಗಕ್ಷೇಮವನ್ನು ಹಾರ್ದಿಕವಾಗಿ ವಿಚಾರಿಸಿದರು. ಮುಕ್ಕಾಲು ಗಂಟೆ ಕಳೆದಿರಬಹುದು, ಅಯ್ಯಂಗಾರ್ಯರು "ನೋಡಿ—ಅವರು ಹೊರಟರೇನೋ. ಬೆಳಕಾಗಿರುವಾಗಲೇ ಮನೆ ಸೇರಿಕೊಳ್ಳುವುದು ಒಳ್ಳೆಯದು."

ಮಾಧವರಾಯ ಕೆಳಗಿಳಿದು ಬಂದ. ಅಲಮೇಲಮ್ಮನವರು ಮಗುವನ್ನೆತ್ತಿಕೊಂಡು ಕುಳಿತಿದ್ದರು. ಕಮಲೂ ಖಿಲಖಿಲನೆ ನಗುತ್ತಾ ಅವರ ತೊಡೆಯಮೇಲೆ ಮಲಗಿ ನಗುತ್ತಿತ್ತು. ಮಾಧವರಾಯ ಮೆಲ್ಲನೆ ಸಂಜ್ಞೆಮಾಡಿ ಹೆಂಡತಿಯನ್ನು ಕರೆದು "ಯಜಮಾನರು ಹೊರಟಿದ್ದಾರೆ. ಅಮ್ಮಾವರಿಗೆ ತಾಂಬೂಲ ಕೊಟ್ಟೆಯಾ ?" ಎಂದು ಕೇಳಿದ.

ಮಾಧವರಾಯ ರುಕ್ಮಿಣಿಯನ್ನು ಕರೆದು ಮಾತನಾಡಿಸಿದುದನ್ನು ಗಮನಿಸಿದ ಅಲಮೇಲಮ್ಮನವರು ಮಗುವನ್ನು ಶ್ರೀದೇವಿಯ ಕೈಗಿತ್ತು "ಹೊತ್ತಾಯಿತಮ್ಮ ಅರಶಿನ ಕುಂಕುಮ ಕೊಡಿ" ಎಂದರು.

ರುಕ್ಮಿಣಿ ಅರಶಿನ, ಕುಂಕುಮ, ತಾಂಬೂಲ ಕೊಟ್ಟು ಅಲಮೇಲಮ್ಮನವರಿಗೆ ನಮಸ್ಕಾರ ಮಾಡಿದಳು.

ಅಲಮೇಲಮ್ಮನವರು ಎದ್ದುನಿಂತು ಗೋದಮ್ಮನವರನ್ನೂ, ರಂಗಮ್ಮನವರನ್ನೂ ಮಾತನಾಡಿಸಿ ತಾವು ತಂದಿದ್ದ ಬೆಳ್ಳಿಯ ತಟ್ಟೆಯನ್ನು ಮಗುವಿನ ಮುಂದಿಟ್ಟು, ತಾಂಬೂಲ ಕೈಯಲ್ಲಿ ಹಿಡಿದು ಹೊರಟರು.

ಮಾಧವರಾಯ ಮೆಲ್ಲನೆ ಕೈಹಿಡಿದು ನಾರಾಯಣಸ್ವಾಮಿ ಅಯ್ಯಂಗಾರ್ಯರನ್ನು ಕೆಳಗೆ ಇಳಿಸಿದ.

ದಂಪತಿಗಳು ಹೊರಟರು. ಮಾಧವರಾಯ ಸ್ವಲ್ಪದೂರ ಅವರ ಜತೆಯಲ್ಲಿ ಹೋದ. ಅಯ್ಯಂಗಾರ್ಯರು "ನೀವು ಹೋಗಿಯಪ್ಪ.

ಸ್ನೇಹಿತರು ಕಾದಿರುತ್ತಾರೆ" ಎಂದರು.

ಮಾಧವರಾಯ ಬರುತ್ತಲೇ ಗೆಳೆಯರು ನಾರಾಯಣಸ್ವಾಮಿ ಅಯ್ಯಂಗಾರ್ಯರ ಸೌಜನ್ಯವನ್ನು ಹಾಡಿ ಹೊಗಳಿದರು. ಜವರೇ ಗೌಡರು ಕೊನೆಯಲ್ಲಿ "ಅಪರಂಜಿ ಅಪರಂಜೀನೆ—ಹಿತ್ತಾಳೆ ಹಿತ್ತಾಳೇನೇ." ಎಂದರು.

ಉತ್ಸವ ಮುಗಿಯುವವೇಳೆಗೆ ರಾತ್ರಿ ಒಂಭತ್ತು ಗಂಟೆಯಾಯಿತು.

ಹಸೆಮಣೆ ತೆಗೆದಿಟ್ಟು, ಹಜಾರ ಶುಚಿಮಾಡುವುದಕ್ಕೆ ರಂಗಮ್ಮನವರು ಹೊರಟರು. ಗೋದಮ್ಮ ಅವರ ಕೈಹಿಡಿದು "ಒಂದು ಗಳಿಗೆ ಕುಳಿತುಕೊಂಡು ವಿಶ್ರಾಂತಿ ತೆಗೆದುಕೊಳ್ರೀ. ಅಪರೂಪಕ್ಕೆ ಮಗಳ ಮನೆಗೆ ಬಂದರೆ ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯೋದೇಆಯಿತು"

"ಇದೆಲ್ಲಾ ಎಂಥ ದುಡಿಮೆ ಗೋದಮ್ಮನವರೇ. ಮನಸ್ಸಿಗೆ ಪ್ರಿಯವಾದ ಕೆಲಸ ಮಾಡಿದರೆ ಆಯಾಸವಾಗುವುದಿಲ್ಲವಮ್ಮ" ಎಂದು ಕೆಲಸ ಮುಂದುವರಿಸಿದರು.

ಗೋದಮ್ಮ ಮಗುವಿಗೆ ಉಪ್ಪು ಮೆಣಸಿನಕಾಯಿಯಿಂದ ದೃಷ್ಟಿ ತೆಗೆದು, ಪರಕೆಕಡ್ಡಿಗಳನ್ನು ನೀವಾಳಿಸಿ ದೃಷ್ಟಿ ಪರಿಹಾರಮಾಡಿ "ನನ್ನ ಕಂದನಿಗೆ ಎಷ್ಟು ಆಯಾಸವಾಯಿತೋ—ಎಷ್ಟು ಜನರ ಕಣ್ಣು ಬಿತ್ತೋ. ತುಂಟಗೈನೆ ನೋಡಿದಿರಾ ಹೇಗೆ ಕಣ್ಣು ಪಿಳಿಪಿಳಿ ಬಿಟ್ಟುಕೊಂಡು ಎಚ್ಚರವಾಗಿದ್ದಳು."

"ಇದಕ್ಕೆ ಹೊಸಮುಖವೇ ಇಲ್ಲವಲ್ಲಮ್ಮ. ಅಲಮೇಲಮ್ಮನವರು ಎತ್ತಿಕೊಂಡರೆ ಹೇಗೆ ನಲಿಯುತ್ತಿದ್ದಳು ನೋಡಿ."

ರುಕ್ಮಿಣಿ ಬೀಗಿತ್ತಿಯರಿಬ್ಬರನ್ನೂ ಸ್ನಾನಕ್ಕೆ ಎಬ್ಬಿಸಿದಳು. ಅವರು ಸ್ನಾನ ಮುಗಿಸಿಕೊಂಡು ಬರುವಷ್ಟರಲ್ಲಿ ಮಾಧವರಾಯ, ಶ್ರೀದೇವಿ, ರಾಮು ಊಟವಾಗಿತ್ತು.

ಗೋದಮ್ಮನವರು ಸೊಸೆಯನ್ನು ಕೂಡಿಸಿ ಊಟಕ್ಕಿಟ್ಟು ತರುವಾಯ ಬೀಗಿತ್ತಿಯ ಜತೆ ಅಲ್ಪಾಹಾರ ಸ್ವೀಕರಿಸಿದರು.

ರುಕ್ಮಿಣಿಗೆ ತುಂಬ ಆಯಾಸವಾಗಿತ್ತು. ಆದರೆ ಮನಸ್ಸು ಹಗುರ

ವಾಗಿತ್ತು. ಮಾಧೂ ಅಂತಃಕರಣದಿಂದ

"ಅತ್ತೆಮ್ಮನವರ ಆರೋಗ್ಯ ಚೆನ್ನಾಗಿಲ್ಲ. ನಿನ್ನೆ ಮತ್ತು ಈ ಹೊತ್ತು ತುಂಬ ದುಡಿದಿದ್ದಾರೆ. ಅವರ ಆರೋಗ್ಯ ಮತ್ತೆಲ್ಲಿ ಕೆಡುತ್ತದೋ ಎಂದು ನನಗೆ ಭಯವಾಗಿದೆ."

"ಇವತ್ತಿನ ಉತ್ಸವ ಅವಳ ಮನಸ್ಸನ್ನು ಹಗುರಮಾಡಿದೆ."

"ರಾಮು ಮುಂದಿನ ವಿದ್ಯಾಭ್ಯಾಸದ ವಿಷಯ ಏನು ಮಾಡುತ್ತಾರೆ."

"ಆ ವಿಷಯ ನಾನು ಅಮ್ಮನ ಹತ್ತಿರ ಮಾತನಾಡಿಲ್ಲ - ತುಮಕೂರಿನಲ್ಲಿಯೇ ಮುಂದಕ್ಕೆ ಓದುತ್ತಾನೆ."

"ನನಗೊಂದು ಯೋಚನೆ ಬಂದಿದೆ."

"ಏನು ಯೋಚನೆ ?"

"ಅತ್ತೆಮ್ಮನವರೂ ರಾಮೂ ಇಲ್ಲೇ ಏಕೆ ಬಂದಿರಬಾರದು."

"ಅವಳಾಗಲೇ ಊರಿಗೆ ಹೋಗುವುದಕ್ಕೆ ಚಡಪಡಿಸುತ್ತಿದ್ದಾಳೆ. ಇಲ್ಲೇ ಬಂದಿರುವುದಕ್ಕೆ ಒಪ್ಪುತ್ತಾಳೆಯೇ ?"

"ಈಗಲೇ ಹೊರಡುವುದು ಸಾಧ್ಯವಿಲ್ಲ. ರಾಮೂ ಪರೀಕ್ಷೆ ಮುಗಿದಿದೆ. ಇನ್ನೇನು ಅವಸರ. ಅವರು ಇಲ್ಲೇ ನಿಲ್ಲುವ ಹಾಗೆ ಒಪ್ಪಿಸು."

"ಆಗಲಿ - ಹೇಳಿನೋಡುತ್ತೇನೆ. ಅಮ್ಮನೂ ಇದೇ ಮಾತು ಹೇಳಿದರು."

"ಈಗ ಮತ್ತೇಕೆ ಮಗುವಿಗೆ ಸರಮಾಡಿಸಿಕೊಂಡು ಬಂದರು."

"ನಾನು ಆ ಮಾತೆತ್ತಿದುದಕ್ಕೆ ಅಮ್ಮ ಸಿಟ್ಟಾದಳು. 'ನಿಮ್ಮ ತಂದೆ ಬದುಕಿದ್ದರೆ ಮೊಮ್ಮಗಳನ್ನು ಚಿನ್ನದ ರಥದಲ್ಲಿ ಕೂಡಿಸಿ ಮೆರವಣಿಗೆ ಮಾಡಿಸುತ್ತಿದ್ದರು' ಎಂದಳು."

"ಚಿನ್ನದ ರಥವೂ ಬೇಡ—ಬೆಳ್ಳಿಯ ರಥವೂ ಬೇಡ—ಅವರ ಆಶೀರ್ವಾದವೊಂದಿದ್ದರೆ ಸಾಕು........ಆಲಮೇಲಮ್ಮನವರು ಇನ್ನೇನು ಹೇಳಿದರು ?"

"ಏನೂ ಹೇಳಲಿಲ್ಲ–ನಿಮ್ಮ ತಾಯಿ ಊರಿಗೆ ಹೋಗುವುದರೊಳಗೆ ನಮ್ಮ ಮನೆಗೆ ಕರೆದುಕೊಂಡು ಬಾ ಎಂದು ಹೇಳಿದರು. ಅವರು ಓದಿಸಿದ ಬೆಳ್ಳಿಯ ತಟ್ಟೆ ನೋಡಿದಿರಾ.?"

"ಗಂಡ ಹೆಂಡತಿ ಇಬ್ಬರೂ ನನ್ನ ಮನೆ ನಿಲ್ಲಿಸಿದರು ರುಕ್ಕೂ. ಇವರ ಪರಿಚಯಮಾಡಿಸಿದ ವೆಂಕಟರಮಣಾಚಾರ್ರನ್ನು ನಾನೆಷ್ಟು ಕೊಂಡಾಡಿದರೂ ಸ್ವಲ್ಪವೇ."

"ನಾನೊಂದು ತಪ್ಪುಕೆಲಸ ಮಾಡಿದ್ದೀನೀಂದ್ರೆ. ಹೇಳುತ್ತೀನೆ – ಕೋಪ ಮಾಡಿಕೊಳ್ಳಬೇಡಿ."

"ಅದೇನು ತಪ್ಪುಮಾಡಿದ್ದೀ ಹೇಳು ಕೇಳೋಣ."

"ನೀವು ಕೊಟ್ಟಿದ್ದ ನೂರು ರೂಪಾಯಿಗಳೂ ಖರ್ಚಾದವು."

"ಖರ್ಚು ಮಾಡುವುದಕ್ಕೇ ನಾನು ಕೊಟ್ಟದ್ದು."

"ಅದರ ಮೇಲೆ ಹದಿನೈದು ಇಪ್ಪತ್ತು ರೂಪಾಯಿ ಖರ್ಚಾಗಿದೆ."

"ಇಷ್ಟೇ ತಾನೆ – ಆಗಲಿಬಿಡು. ಕಮಲೂ ಮೂವತ್ತು ನಲವತ್ತು ರೂಪಾಯಿ ಸಾಮಾನು ಸಂಪಾದನೆ ಮಾಡಿದ್ದಾಳಲ್ಲಾ !"

"ಎಂಥಾ ಮೂವತ್ತು ನಲವತ್ತು, ಜಾಸ್ತಿಯಿರಬೇಕು. ಅಲಮೇಲಮ್ಮನವರು ಕೊಟ್ಟಿರುವ ತಟ್ಟೆಯೇ ಮೂವತ್ತು ರೂಪಾಯಿಯಾಗಬಹುದು. ಚಿಕ್ಕವರು ಎರಡೂ ಮೂರೂ ರೂಪಾಯಿ ಬೇರೆ ಓದಿಸಿದ್ದಾರೆ. ಅದೇ ಇಪ್ಪತ್ತು ರೂಪಾಯಿ ಆಗಿದೆ."

"ಯಾರು ಯಾರು ಏನೇನು ಕೊಟ್ಟಿದ್ದಾರೆ ಜ್ಞಾಪಕವಿಟ್ಟುಕೊಂಡಿರು ರುಕ್ಕೂ. ಅವರುಗಳ ಮನೆಯಲ್ಲಿ ಏನಾದರೂ ಆದರೆ ನಾವೂ ಪ್ರತಿಯಾಗಿ ಓದಿಸಬೇಕಾಗುತ್ತದೆ." ಎಂದು ಹೆಂಡತಿಗೆ ತಿಳಿಸಿದ.

ಮಾರನೆಯ ಬೆಳಿಗ್ಗೆ ಬೀಗಿತ್ತಿಯರಿಬ್ಬರೂ ನದೀಸ್ನಾನಮಾಡಿಕೊಂಡು, ದೇವರ ದರ್ಶನಮಾಡಿಕೊಂಡು ಮನೆಗೆ ಬಂದರು. ಅವರು ಬಂದ ಸ್ವಲ್ಪ ಹೊತ್ತಿನೊಳಗೆ ವೃಂದಮ್ಮನವರು ತಾವು ತೆಗೆದುಕೊಂಡು ಹೋಗಿದ್ದ ಪಾತ್ರೆಗಳನ್ನು ಹಿಂದಿರುಗಿಸಲು ಬಂದರು.

"ಇಷ್ಟು ಬೇಗ ಏನವಸರವಾಗಿತ್ರೀ – ನಿಧಾನವಾಗಿ ಕೊಟ್ಟಿದ್ದರೆ

ಆಗಿತ್ತು" ಎಂದು ರುಕ್ಮಿಣಿ ಹೇಳಿದಳು.

ಗೋದಮ್ಮನವರು ವೃಂದಮ್ಮನವರನ್ನು ನೋಡಿ.

"ನಿನ್ನೆ ನಿಮಗೆಲ್ಲಾ ತುಂಬ ಕೆಲಸವಾಯಿತು – ರಾತ್ರಿ ನೀವೂ ನಿದ್ರೆ ಮಾಡಿದ ಹಾಗೇ ಕಾಣುತ್ತಿಲ್ಲ. ಆಯಾಸಕ್ಕೆ ನಿದ್ರೆ ಬರಲಿಲ್ಲವೇ?"

"ಆಯಾಸವೇನೂ ಆಗಲಿಲ್ಲ. ಗೋದತ್ತೆ. ನನ್ನ ವಾರಗಿತ್ತಿ ಕೊನೆ ಮಗುವಿಗೆ ರಾತ್ರಿ ಎಳವು ಬಂದು ಕಣ್ಣು ಕಣ್ಣು ಬಿಡುವ ಹಾಗಾಯಿತು."

"ಅದಕ್ಕೇನು ಮಾಡಿದಿರಿ ?"

"ಡಾ. ಸುಂದರಂ ಬಂದು ಇಂಜಕ್ಷನ್ ಚುಚ್ಚಿದರು."

"ಅಯ್ಯೋ! – ಇಲ್ಲಿಗೆ ಒಂದು ಮಾತು ಹೇಳಿ ಕಳಿಸಬಾರದಾಗಿತ್ತೇ ವೃಂದಮ್ಮ. ನನ್ನ ಬೀಗಿತ್ತಿ ಘನವೈದ್ಯರು."

"ಯಾರು ರಂಗಮ್ಮನವರೇ ?"

"ಹೂ! ಇದೇನು ನಿಮಗೆ ಗೊತ್ತಿಲ್ಲವೇ. ಅವರ ಯಜಮಾನರು ಪ್ರಸಿದ್ಧ ವೈದ್ಯರಾಗಿದ್ದರು."

"ಇದಕ್ಕೇ ಪ್ರಾರಬ್ಧಕರ್ಮ ಅನ್ನುವುದು ಗೋದತ್ತೆ. ಮನೆಯಲ್ಲಿಯೇ ಅಮೃತದ ಬಳ್ಳಿ ಇಟ್ಟುಕೊಂಡು ಊರು ಊರು ಅಲೆದಂತಾಯಿತು. ರಂಗಮ್ಮನವರು ಬಂದು ಮಗುವನ್ನು ನೋಡಿದರಾಗಿತ್ತು."

"ನಡೀರಿ – ಈಗಲೇ ಅವರನ್ನು ಕರೆದುಕೊಂಡು ಬರುತ್ತೇನೆ." ಎಂದು ಹೇಳಿ ರಂಗಮ್ಮನವರನ್ನು ಹೊರಡಿಸಿದರು.

ರಂಗಮ್ಮನವರು ಮಗುವನ್ನು ಪರೀಕ್ಷಿಸಿ ನೋಡಿದರು. ಕಣ್ಣು ಮುಚ್ಚಿ ಒಂದೆರಡು ನಿಮಿಷ ನಿದ್ರೆ ಮಾಡುವಷ್ಟರಲ್ಲಿ ಮಗು ಬೆಚ್ಚಿ ಎಚ್ಚರಗೊಳ್ಳುತ್ತಿತ್ತು. ಮುಖ ಸ್ವಲ್ಪ ವಿಕಾರಮಾಡಿಕೊಂಡು ಚಿಟ್ಟನೆ ಚೀರುತ್ತಿತ್ತು.

"ಹೀಗೇಮ್ಮ – ರಾತ್ರಿಯೆಲ್ಲಾ ಹೀಗೇ ನೋಡಿ."

"ಡಾಕ್ಟರ ಇಂಜಕ್ಷನ್ನಿನಿಂದ ಏನೂ ಗುಣ ಕಾಣಲಿಲ್ಲವೇ ?"

"ಇಂಜಕ್ಷನ್ ಕೊಟ್ಟಮೇಲೆ ಮಗು ಸ್ವಲ್ಪ ಹೊತ್ತು ಮಲಗಿ

ನಿದ್ರಿಸಿತು. ಬೆಳಿಗ್ಗೆಯಿಂದ ಪುನಃ ಹೀಗಾಗಿದೆ ನೋಡಿ. ರಾತ್ರಿಯಷ್ಟು ಜೋರಿಲ್ಲ."

"ಇಂಜಕ್ಷನ್ ತಾತ್ಕಾಲಿಕ ಉಪಶಾಂತಿಮಾಡಿದೆ ವೃಂದಮ್ಮ. ಮಗುವಿಗೆ ಗುಣವಾಗಿಲ್ಲ. ನೀವು ಹೆದರಬೇಡಿ. ಇಪ್ಪತ್ತುನಾಲ್ಕು ಗಂಟೆಗಳಲ್ಲಿ ಮಗು ಎದ್ದು ಕುಳಿತುಕೊಳ್ಳುವ ಹಾಗೆ ನಾನು ಮಾಡುತ್ತೇನೆ." ಎಂದು ನಾಲ್ಕು ಸಾಮಾನುಗಳನ್ನು ಹೇಳಿ

"ಇವುಗಳನ್ನು ಈಗಲೇ ತರಿಸಿಕೊಡಿ" ಎಂದರು.

ಆಳು ಸಾಮಾನು ತರುವಷ್ಟರಲ್ಲಿ ರಂಗಮ್ಮನವರು ಇದ್ದಿಲು ಒಲೆಯಮೇಲೆ ಬಾಣಲೆ ಇಟ್ಟಿದ್ದರು. ಸಾಮಾನುಗಳು ಬಂದ ಕೂಡಲೆ ಬಾಣಲೆಗೆ ಬೇವಿನ ಎಣ್ಣೆ ಹಾಕಿ, ಬೆಳ್ಳುಳ್ಳಿಯ ರಸ ತೆಗೆದು ಅದಕ್ಕೆ ಸುರಿದು ಉಳಿದ ಒಂದೆರಡು ಮೂಲಿಕೆಗಳನ್ನು ಪುಡಿಮಾಡಿ ಹಾಕಿದರು. ಎಣ್ಣೆ ಚೆನ್ನಾಗಿ ಕುದಿದಮೇಲೆ ಅದನ್ನು ಕೆಳಗಿಳಿಸಿಕೊಂಡು ಆರಿಸಿ, ಶೋಧಿಸಿ, ಒಂದು ಶೀಷೆಗೆ ತುಂಬಿ

"ಒಂದು ಚಮಚ, ಸ್ವಲ್ಪ ಹಾಲು ಕೊಡಿ" ಎಂದರು. ವೃಂದಮ್ಮ ಚಮಚ, ಹಾಲು ತಂದು ಕೊಡಲು ರಂಗಮ್ಮನವರು ಚಮಚಕ್ಕೆ ಸ್ವಲ್ಪ ಹಾಲು ಹಾಕಿ, ಅದರಲ್ಲಿ ಎರಡು ತೊಟ್ಟು ಎಣ್ಣೆ ಬಿಟ್ಟು ಮಗುವಿಗೆ ಕುಡಿಸಿದರು. ಹಾಲಿಗೆ ನಾಲ್ಕು ತೊಟ್ಟು ಎಣ್ಣೆ ಹಾಕಿ ತಾಯಿಗೂ ಕುಡಿಸಿ

"ರಾತ್ರಿಗೊಂದು ಸಲ ಕೊಡಿ – ಹೀಗೇ ನಾಳೆ, ನಾಡಿದ್ದು ಎರಡೆರಡು ಸಲ ಕೊಡಿ." ಎಂದು ಮಗುವಿನ ತಾಯಿಕಡೆ ತಿರುಗಿ "ನೀನು ಎಣ್ಣೆ, ಕುಂಬಳಕಾಯಿ ಮೊದಲಾದ ವಾಯು ಪದಾರ್ಥಗಳನ್ನು ಮಾತ್ರ ಮುಟ್ಟಬೇಡ. ನೀನೂ ಮೂರು ದಿವಸ ಈ ಎಣ್ಣೆ ತೆಗೆದುಕೋ" ಎಂದು ವೃಂದಮ್ಮನವರ ಕಡೆ ತಿರುಗಿ "ಸಾಯಂಕಾಲ ಬಂದು, ಮಗುವಿಗೆ ಹೇಗಿದೆ ತಿಳಿಸಿ" ಎಂದರು. ವೃಂದಮ್ಮ ಚಿಂತೆಯಿಂದ

"ಈ ಎಳವು ತಿರುಗಿ ಬಾರದಹಾಗೆ ಏನಾದರೂ ಮಾಡಿರಮ್ಮ ನಿಮ್ಮ ಧಮ್ಮಯ್ಯ" ಎಂದರು.

"ಇನ್ನು ಜನ್ಮಜನ್ಮಕ್ಕೂ ಎಳವು ಬರುವುದಿಲ್ಲ. ನೀವು ಸ್ವಲ್ಪವೂ ಭಯಪಡಬೇಡಿ ವೃಂದಮ್ಮ. ಎಣ್ಣೆ ಭದ್ರವಾಗಿಟ್ಟು ಕೊಂಡಿರಿ. ಯಾರಿಗಾದರೂ ಬೇಕಾದರೆ ಕೊಡಿ" ಎಂದು ಹೇಳಿದರು.

ಸಂಜೆಗೆ ವೃಂದಮ್ಮ ಸಂತೋಷಗೊಂಡು ಗೋದಮ್ಮನವರ ಮನೆಗೆ ಬಂದು

"ಮಗೂ ಚೆನ್ನಾಗಿ ನಿದ್ರೆ ಮಾಡುತ್ತಿದೆ ರಂಗಮ್ಮನವರೇ. ಬೆಚ್ಚಿ ಬೀಳೋದು ನಿಂತು ಹೋಗಿದೆ" ಎಂದರು.

"ಸಂಪೂರ್ಣವಾಗಿ ಗುಣವಾಗುತ್ತದೆ. ಇವತ್ತೂ ರಾತ್ರಿ ಮತ್ತು ನಾಳೆ ನಾಡಿದ್ದು ಎರಡು ಹೊತ್ತು ತಪ್ಪದೆ ಎಣ್ಣೆಹಾಕಿ. ಮಗುವಿಗೆ ತಾಯಿಹಾಲು ಕೊಡುವವರೆಗೆ ಪಥ್ಯವಾಗಿರಬೇಕಾದುದು ಅಗತ್ಯ."

"ಮಗುವನ್ನು ಕಾಪಾಡಿದಿರಿ ಮಾತಾಯಿ. ನಿಮ್ಮ ಉಪಕಾರಕ್ಕೆ ನಾವೆಷ್ಟು ಕೃತಜ್ಞರಾಗಿದ್ದರೂ ಸಾಲದು" ಎಂದು ಬಾಯಿ‌ತುಂಬ ರಂಗಮ್ಮನವರನ್ನು ಹಾಡಿ ಹೊಗಳಿದರು.

ಮೂರು ದಿವಸಗಳಲ್ಲಿ ಮಗುವಿಗೆ ಸಂಪೂರ್ಣವಾಗಿ ಗುಣ ವಾಯಿತು. ಆ ವೇಳೆಗೆ ವೃಂದಮ್ಮನವರ ಪ್ರಸಾರವೈಖರಿಯಿಂದ ಇಡಿಯ ಪಟ್ಟಣಕ್ಕೆ ರಂಗಮ್ಮನವರ ವೈದ್ಯಜ್ಞಾನ ತಿಳಿದು ಹೋಯಿತು. ಬೆಳಗಾಗುವುದರಲ್ಲಿಯೇ ರೋಗಿಗಳು ಬಂದು ಬಿಡುತ್ತಿದ್ದರು. ಕಾವೇರಿ ಸ್ನಾನ ರಂಗನಾಥಸ್ವಾಮಿ ದರ್ಶನಕ್ಕೆ ಗೋದಮ್ಮನವ ರೊಬ್ಬರೇ ಹೋಗಬೇಕಾಗುತ್ತಿತ್ತು.

ಒಂದು ದಿನ ರಂಗಮ್ಮನವರು ಮಗಳಿಗೆ

"ದೇವರು ಒಳ್ಳೆಯ ಕೆಲಸ ಅಂಟಿಸಿದನಲ್ಲೇ ರುಕ್ಕೂ. ಹೀಗಾ ದರೆ ನಾನು ಊರಿಗೆ ಹೋಗುವುದು ಹೇಗೆ?"

"ಪಟ್ಟಣ ಬಿಟ್ಟು ನಿನ್ನ ಕಳಿಸುವುದಕ್ಕೆ ರಂಗನಾಥಸ್ವಾಮಿಗೆ ಇಷ್ಟವಿಲ್ಲಮ್ಮ."

"ಏನೋ ನಾಲ್ಕು ದಿವಸ ಕಾವೇರಿ ಸ್ನಾನ, ರಂಗನಾಥಸ್ವಾಮಿಯ ದರ್ಶನ ಮಾಡಿಕೊಂಡು ಮನಸ್ಸಿನ ಮಾಲಿನ್ಯ ಕಳೆದುಕೊಳ್ಳಬೇಕೆಂದು

ಬಂದೆ. ಸ್ವಾಮಿ ಸಾನ್ನಿಧ್ಯದಲ್ಲಿದ್ದರೂ ಅವನ ದರ್ಶನ ಮಾಡು
ಭಾಗ್ಯ ನನಗಿಲ್ಲ."

ಆ ಮಾತು ಕೇಳಿದ ಗೋದಮ್ಮನವರು

"ಅಮ್ಮ, ಸ್ವಾಮಿಯನ್ನು ಹುಡುಕಿಕೊಂಡು ನಾವು ದೇವಸ್ಥಾನಕ್
ಹೋಗುತ್ತೇವೆ; ಅವನು ನಿಮ್ಮನ್ನು ಹುಡುಕಿಕೊಂಡು ಇಲ್ಲಿಗೇ ಬರ
ತ್ತಾನೆ. ನೂರಾರು ರೋಗಿಗಳ ರೂಪದಲ್ಲಿ ನಿಮಗೆ ದರ್ಶನ ಕೊಡುತ್
ದ್ದಾನೆ. ಸ್ವಾಮಿ ಸೇವೆ ಮಾಡಲಿಲ್ಲ ಎಂದೇಕೆ ದುಃಖಪಡುತ್ತಿರುವಿರಿ
ನೀವು ಮಾಡುತ್ತಿರುವ ಸೇವೆಗಿಂತ ಇನ್ನೂ ಸ್ವಾಮಿ ಸೇವೆ ಬೇಕೇ?"
ಎಂದು ಮರುನುಡಿದರು.

ವಿನಾಯಕನ ಲಗ್ನದಂತೆ ರಂಗಮ್ಮನವರ ಪ್ರಯಾಣ ಮುಂ
ಮುಂದಕ್ಕೆ ಬೀಳುತ್ತ ಬಂತು. ಹೊರಡುವ ತಾರೀಖು ನಿಶ್ಚಯಿ
ಅವರು ಸಿದ್ಧರಾಗುತ್ತಿರುವಲ್ಲಿ ಯಾರಾದರು ರೋಗಿಗಳು ಬಂದು ಮೊ
ಯಿಡುತ್ತಿದ್ದರು. ನಡುನೀರಿನಲ್ಲಿ ಕೈಬಿಟ್ಟು ಊರಿಗೆ ಹೊರಡುವುದಕ್
ರಂಗಮ್ಮನವರ ಮನಸ್ಸು ಒಪ್ಪುತ್ತಿರಲಿಲ್ಲ.

ರಾಮು ಪರೀಕ್ಷೆಯ ಫಲಿತಾಂಶ ಹೊರಬಿದ್ದಿತು. ಅವನ
ಎರಡನೆಯ ತರಗತಿಯಲ್ಲಿ ತೇರ್ಗಡೆ ಹೊಂದಿದ್ದ. ಮಗನನ
ಹೈಸ್ಕೂಲಿಗೆ ಸೇರಿಸುವ ಹೊಣೆಗಾರಿಕೆಯೂ ಇತ್ತು. ರುಕ್ಮಿ
ತಾಯಿಯ ಆತುರ ಕಂಡು

"ರಾಮೂ ಇಲ್ಲೇ ಓದಿದರಾಗದೇಮ್ಮ" ಎಂದಳು.

"ಇಲ್ಲಿ ಓದೋದೂಂದರೇನು ರುಕ್ಕೂ."

"ನೀನೂ, ರಾಮೂ ಇಲ್ಲೇ ಇರುವುದಾದರೆ ತುಂಬ ಸಂತೋ
ಎಂದು ಅವರು ಹೇಳಿದರು. ನೀನು ಇಲ್ಲಿಯೇ ನಿಲ್ಲಬೇಕೆಂದು ಅತ್ತೆಮ
ನವರೂ ತುಂಬ ಅಪೇಕ್ಷಿಸುತ್ತಿದ್ದಾರೆ."

"ಹೇಗೆ ಸಾಧ್ಯವೇ ರುಕ್ಕೂ. ನಿನ್ನ ಬಿಟ್ಟು ದೂರವಿರುವುದ
ನನಗೇನೂ ಸಂತೋಷದ ವಿಷಯವಲ್ಲ. ನಿನ್ನ ಸಂಸಾರ ಈಗ ತಾ
ಕಣ್ಣು ಬಿಡುತ್ತಿರುವಾಗ ನಾನೂ, ನನ್ನ ಮಗ ಬಂದು ಸೇರಿಕೊಂಡ

ನಿನಗೆ ಭಾರವಾಗುವುದು ಯಾವ ನ್ಯಾಯ ?"

"ಹೆತ್ತತಾಯಿ ಭಾರವಾದ ಹೆಂಗಸಿಗೆ, ಹೆರುವ ಮಗುವೂ ಭಾರ ವಾಗುತ್ತದಮ್ಮ." ಎಂದಳು.

ರುಕ್ಮಿಣಿಯ ಮಾತಿಗೆ ರಂಗಮ್ಮನವರು ಅಂಗೀಕಾರಸೂಚಿಸ ದಿರಲು ಗೋದಮ್ಮನವರು ಹೇಳಿ ನೋಡಿದರು. ಅವರ ಮಾತೂ ನಡೆಯಲಿಲ್ಲ. ಮಾಧವರಾಯನೇ ಧೈರ್ಯ ತೆಗೆದುಕೊಂಡು ಅತ್ತೆ ಯನ್ನು ಪ್ರಾರ್ಥಿಸಿಕೊಂಡ. ಅವನ ಪ್ರಾರ್ಥನೆಯನ್ನೂ ರಂಗಮ್ಮನವರು ನಯವಾಗಿ ನಿರಾಕರಿಸಿದರು.

ರಂಗಮ್ಮನವರ ಪ್ರಯಾಣ ಅನಿವಾರ್ಯವಾಯಿತು. ಊರಿಗೆ ಊರೇ ಗುಂಪು ಕಟ್ಟಿಕೊಂಡು ಬಂದು

"ನೀವು ಇಲ್ಲೇ ನಿಂತು ಬಿಡಿ ತಾಯಿ – ನಿಮಗೆ ಯಾವ ಅನುಕೂಲ ಬೇಕಾದರೂ ಮಾಡಿಕೊಡುತ್ತೇವೆ" ಎಂದರು.

ವೃಂದಮ್ಮ ಕಂಬನಿದುಂಬಿ

"ಕನಸಿನಲ್ಲಿ ದೇವತೆ ಬಂದ ಹಾಗೆ ಬಂದು ಹೊರಟು ಹೋಗುತ್ತಿ ದ್ದೀರಲ್ಲಾ ರಂಗಮ್ಮ. ನಿಮ್ಮ ಹಸ್ತಗುಣದಿಂದ ಎಷ್ಟು ಜನಕ್ಕೆ ಗುಣ ವಾಯಿತು ನೋಡಿ. ಈ ಊರು ಮಲೇರಿಯಾ ಕೊಂಪೆ—ಇಲ್ಲಿರುವ ರೋಗಿಗಳ ಮೇಲೆ ಕನಿಕರವಿಟ್ಟಾದರೂ ನಿಲ್ಲಿರಮ್ಮ" ಎಂದರು.

ರಂಗಮ್ಮ ಅವರನ್ನು ಸಮಾಧಾನ ಪಡಿಸುತ್ತಾ

"ವೃಂದಮ್ಮ. ನಾನೇ ಇದ್ದು ರೋಗಿಗಳಿಗೆ ಔಷಧ ಕೊಡಬೇಕಾ ಗಿಲ್ಲ. ರುಕ್ಕೂಗೂ ಎಲ್ಲಾ ಬರುತ್ತದೆ. ನನ್ನ ಹಸ್ತಗುಣಕ್ಕಿಂತ ಅವಳ ಹಸ್ತಗುಣ ಒಳ್ಳೆಯದು. ವಯಸ್ಸು ಚಿಕ್ಕದು—ಅವಳು ಹೆದರುತ್ತಾಳೆ. 'ಹೆದರಬೇಡ—ದೇವರಮೇಲೆ ಭಾರಹಾಕಿ ಔಷಧ ಕೊಡು' ಎಂದು ನಾನು ಹೇಳಿ ಹೋಗುತ್ತೇನೆ. ನಿಶ್ಚಿಂತೆಯಾಗಿರಿ" ಎಂದರು. ತಾಯಿಯ ಮಾತು ಕೇಳಿ ರುಕ್ಮಿಣಿ ಗಾಬರಿಯಾಗಿ

"ಇದೇನು, ನನಗೆ ಅಂಟಿಸುತ್ತಿದ್ದೀಯಮ್ಮ. ಔಷಧ ಕೊಡು ವುದಕ್ಕೆ ನಾನು ಯಾವ ಘನ ಪಂಡಿತಳು. ನನ್ನ ಮನೆ ಕೆಲಸ ಬಿಟ್ಟು

ಇದನ್ನೆಲ್ಲಿ ಹೆಚ್ಚಿಕೊಳ್ಳಲಿ"

"ಹಾಗನ್ನಬಾರದು ರುಕ್ಕೂ. ಔಷಧ ಕೊಡುವುದೂ ನಿನ್ನ ಮನೆಯ ಕೆಲಸವೇ ? ದೇವರಿಗೆ ಹೇಗೆ ಪ್ರಪಂಚವೇ ತನ್ನ ಮನೆಯೋ, ಪ್ರಪಂಚದಲ್ಲಿರುವ ಸಮಸ್ತರೂ ಮಕ್ಕಳೂ ಹಾಗೇ ಅವನ ಮಕ್ಕಳಾದ ನಮಗೂ ಪ್ರಪಂಚವೇ ಮನೆಯಾಗಬೇಕು. ಹತ್ತು ಜನರ ಕಷ್ಟ, ನೋವು, ದುಃಖ ನಿವಾರಿಸುವ ಶಕ್ತಿ ದೇವರು ನಿನಗೆ ದಯೆಪಾಲಿಸಿದರೆ ಬೇಡವೆನ್ನುತ್ತಾರೆಯೇ ? ನಿನಗೇನುಬೇಕು ನಾನು ಬರೆದು ತಿಳಿಸುತ್ತೇನೆ—ನಿನಗೆ ಯಾವ ಔಷಧ ಬೇಕಾದರೂ ಮಾಡಿ ಕಳಿಸುತ್ತೇನೆ. ಧೈರ್ಯವಾಗಿ ಔಷಧಕೊಡು. ಭಗವಂತನನ್ನು ನಂಬಿದವರು ಯಾರೂ ಕೆಡುವುದಿಲ್ಲ." ಎಂದು ಮಗಳಿಗೆ ಧೈರ್ಯ ಹೇಳಿದರು.

ರಂಗಮ್ಮನವರು ಊರಿಗೆ ಹೊರಡುವ ದಿನ ಮಗಳ ಕೈಯಲ್ಲಿ ಒಂದು ದಪ್ಪ ಪುಸ್ತಕವಿಟ್ಟು,

"ಇದು ನಿನ್ನ ತಂದೆ ಆಸ್ತಿ ಕಣೇ ರುಕ್ಕೂ-ನಿನ್ನಲ್ಲಿರಲಿ." ಎಂದರು.

ರುಕ್ಮಿಣಿ ಪುಸ್ತಕದ ಹಾಳೆ ಮಗುಚಿ

"ವೈದ್ಯದ ಪುಸ್ತಕ."

"ಹೌದು - ಅವರೂ ಇದನ್ನೇ ಆಧಾರವಾಗಿಟ್ಟುಕೊಂಡು ಚಿಕಿತ್ಸೆ ಮಾಡುತ್ತಿದ್ದರು, ಎರಡು ತಲೆಮಾರಿನಿಂದ ಈ ಪುಸ್ತಕ ಬಂದಿದೆ. ನಿಮ್ಮ ತಂದೆಯವರೂ ಇದರಲ್ಲಿ ಅನೇಕ ವಿಷಯಗಳನ್ನು ಸೇರಿಸಿದ್ದಾರೆ."

"ಅಂತೂ ನನ್ನ ಪಕ್ಕವೈದ್ಯಳನ್ನಾಗಿ ಮಾಡಿಯೇ ಹೋಗುತ್ತೀ !"

ರಂಗಮ್ಮನವರು ನಸುನಗುತ್ತಾ

"ನಿನ್ನ ತಂದೆಯವರ ಇಚ್ಛೆಗೆ ವಿರುದ್ಧವಾಗಿ ನಾನು ವರ್ತಿಸಲೇ" ಎಂದರು. ಗೋದಮ್ಮನವರು ತಾವು ಸಂಗ್ರಹಿಸಿಟ್ಟದ್ದ ಇಪ್ಪತ್ತು ರೂಪಾಯಿಗಳನ್ನು ಮಗನ ಕೈಯಲ್ಲಿ ಹಾಕಿ, ರೇಷ್ಮೆ ಸೀರೆಯೊಂದನ್ನು ತರಿಸಿ ಬೀಗಿತ್ತಿಗೆ ಓದಿಸಿದರು.

ರಂಗಮ್ಮನವರು, ಮಗನನ್ನು ಕರೆದುಕೊಂಡು ತುಮಕೂರಿಗೆ ಪ್ರಯಾಣ ಬೆಳಸಿದರು.

೧೮

ನಾರಾಯಣಸ್ವಾಮಿ ಅಯ್ಯಂಗಾರ್ಯರ ಆರೋಗ್ಯ ಅವರ ಮನೆಯವರಿಗಷ್ಟೇ ಅಲ್ಲದೆ ಮಾಧವರಾಯನಿಗೂ ತುಂಬ ಆತಂಕಕ್ಕೆ ಕಾರಣವಾಯಿತು. ವಾತನೋವು ಉಲ್ಬಣಾವಸ್ಥೆಗೆ ಬಂದು ಕಾಲು ಊದಿಕೊಂಡಿತು. ಅಯ್ಯಂಗಾರ್ಯರು ಹಾಸಿಗೆ ಹಿಡಿದು ಮಲಗಿಬಿಟ್ಟರು. ಆಫೀಸು, ಕೋರ್ಟಿನ ಎಲ್ಲ ಕೆಲಸವನ್ನೂ ಮಾಧವರಾಯನೇ ನೋಡಿಕೊಂಡು ಹೋಗುತ್ತಿದ್ದ. ರುಕ್ಮಿಣಿ ಪ್ರತಿದಿನ ಹೋಗಿ ಅಲಮೇಲಮ್ಮನವರಿಗೆ ನೆರವಾಗುತ್ತಿದ್ದಳು.

ಕಾಲಿನ ಬಾಧೆಗೆ ಅಯ್ಯಂಗಾರ್ಯರಿಗೆ ಸ್ವಲ್ಪವೂ ನಿದ್ರೆ ಬರುತ್ತಿರಲಿಲ್ಲ. ಒಂದೊಂದು ರಾತ್ರಿ ಮಾಧವರಾಯ ಯಜಮಾನರ ಆರೈಕೆಗೆ ಅವರ ಮನೆಯಲ್ಲಿ ನಿಂತು ಅಲಮೇಲಮ್ಮನವರನ್ನು ವಿಶ್ರಾಂತಿಗೆ ಕಳಿಸುತ್ತಿದ್ದ.

ಡಾ ಸುಂದರಂ ತಾವು ಕಲಿತ ಬುದ್ಧಿಯನ್ನೆಲ್ಲಾ ವ್ಯಯಮಾಡಿ ನೋಡಿದರು. ರೋಗಿಗೆ ಸ್ವಲ್ಪ ಗುಣಕೊಡಲೂ ಅವರಿಗೆ ಸಾಧ್ಯವಾಗಲಿಲ್ಲ. ತಮ್ಮ ಸೋಲನ್ನೊಪ್ಪಿಕೊಂಡು

"ರೇಡಿಯಂ ಟ್ರೀಟ್‌ಮೆಂಟ್ (Radium treatment) ಕೊಟ್ಟು ನೋಡಬೇಕು ಮಾಧವರಾಯರೇ. ಅಯ್ಯಂಗಾರ್ಯರನ್ನು ಕೂಡಲೆ ಮೈಸೂರಿಗೆ ಕರೆದುಕೊಂಡು ಹೋಗುವುದು ಒಳ್ಳೆಯದು."

ಎಂದು ಹೇಳಿದರು.

ಮೈಸೂರಿನಲ್ಲಿ ಅಯ್ಯಂಗಾರ್ಯರ ಅಳಿಯ ವೆಂಕಟಾಚಾಯ ಕಂಟ್ರಾಕ್ಟು ಮಾಡಿಕೊಂಡು ಅನುಕೂಲವಾಗಿದ್ದರು. ಮಾಧವರಾವ ವೆಂಕಟಾಚಾರ್ಯರಿಗೆ ಹೇಳಿಕಳಿಸಿ ಕರಸಿಕೊಂಡು ಅಯ್ಯಂಗಾರ್ಯರನ ಮೈಸೂರಿಗೆ ಕರೆದುಕೊಂಡು ಹೋದ.

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಅಯ್ಯಂಗಾರ್ಯರ ಚಿಕಿ ಆರಂಭವಾಯಿತು. ಪ್ರತಿನಿತ್ಯ ಮಾಧವರಾಯ ಕೋರ್ಟು ಮುಗಿದೊ ನೆಯೇ ಬಸ್ಸಿನಲ್ಲಿಯೋ ಲೋಕಲ್ ಗಾಡಿಯಲ್ಲಿಯೋ ಮೈಸೂರಿ ಹೋಗಿ ಯಜಮಾನರ ಯೋಗಕ್ಷೇಮ ನೋಡಿಕೊಂಡು ರಾ ಬೆಂಗಳೂರು ಕಡೆ ಹೊರಡುವ ಮೇಲ್ ಗಾಡಿಯಲ್ಲಿ ಊರಿಗೆ ಬರುತ್ತಿದ್ದ

ಒಂದು ತಿಂಗಳ ಸತತ ಚಿಕಿತ್ಸೆಯಿಂದಾಗಿ ಅಯ್ಯಂಗಾರ್ಯರಿ ಸ್ವಲ್ಪ ಗುಣ ಕಂಡುಬಂದಿತು. ಆಸ್ಪತ್ರೆಯಿಂದ 'ಡಿಸ್‌ಚಾರ್ಜ್' ಆ ಮೇಲೆ ಅವರು ಒಂಟಿಕೊಪ್ಪಲಿನಲ್ಲಿದ್ದ ತಮ್ಮ ಅಳಿಯನ ಮನೆಯ ಇರತೊಡಗಿದರು.

ತನಗೆ ನಿರ್ದಿಷ್ಟವಾಗಿದ್ದಷ್ಟು ಹಣವನ್ನು ಮಾತ್ರ ತೆಗೆದುಕೊಂ ಉಳಿದ ಸಂಪಾದನೆಯನ್ನೆಲ್ಲಾ ಮಾಧವರಾಯ ಅಲಮೇಲಮ್ಮನ ಕೈಗೆ ಹಾಕುತ್ತಿದ್ದ.

ಅಯ್ಯಂಗಾರ್ಯರು ಆಸ್ಪತ್ರೆಯಿಂದ 'ಡಿಸ್‌ಚಾರ್ಜ್' ಮನೆಗೆ ಬಂದಮೇಲೂ ಪ್ರತಿನಿತ್ಯ ಮೈಸೂರಿಗೆ ಹೋಗಿ ಅವರ ದರ್ಶ ಪಡೆದು ಬರುತ್ತಿದ್ದ.

ಒಂದು ದಿನ ಅಯ್ಯಂಗಾರ್ಯರು ಎದುರಿಗೆ ಕುಳಿತಿದ್ದ ಮಾ ರಾಯನನ್ನು ಹತ್ತಿರ ಕರೆದು ತಮ್ಮ ಹಾಸಿಗೆಯಮೇಲೆ ಕೂಡಿಸಿಕೊಂ ಅವನ ಬೆನ್ನು ಸವರಿದರು. ಅವರ ಒಳಗೆ ಹುದುಗಿದ್ದ ದುಃಖ ಉ ಬಂತು. ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯಿತು.

"ದುಃಖಪಡಬೇಡಿ ಸಾರ್. ಭಗವಂತನ ಕೃಪೆಯಿಂದ ತ ಆರೋಗ್ಯ ಸುಧಾರಿಸಿದೆ. ಬೇಗ ಪೂರ್ಣ ಗುಣವಾಗುತ್ತದೆ." ಎಂದ.

"ಪೂರ್ಣಗುಣವಾಗುವುದಿಲ್ಲ. ಮಾಧವರಾವ್. ಇದು ಹೀಗೇನೇ ! ವಯಸ್ಸೂ ಆಯಿತು. ಇನ್ನೂ ಎಷ್ಟು ದಿನ ಬದುಕಿರಬೇಕು ಹೇಳಿ."

"ದಯೆಯಿಟ್ಟು ಈ ರೀತಿ ಮಾತನಾಡಬೇಡಿ ಸಾರ್. ಅಮ್ಮಾವರು ದುಃಖಪಡುತ್ತಾರೆ."

"ನನಗೆ ಗಂಡುಮಕ್ಕಳಿಲ್ಲ ಎನ್ನುವ ವ್ಯಥೆಯನ್ನು ನಿವಾರಿಸಿದಿರಿ ಮಾಧವರಾವ್. ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೂ ನಿಮ್ಮ ಹಾಗೆ ಇರಲು ಸಾಧ್ಯವಿಲ್ಲ."

"ಸಾರ್. ಇವತ್ತು ನಾನು ತಿನ್ನುತ್ತಿರುವ ಅನ್ನ ನೀವು ಕರುಣಿಸಿದ ಪ್ರಸಾದ. ಶುದ್ಧ ಭಿಕಾರಿಯಾಗಿದ್ದ ನನ್ನ ಕರೆದು ಅಪ್ಪಿಕೊಂಡಿರಿ. ಮಗನಂತೆ ಕಂಡಿರಿ."

"ಈ ತಿಂಗಳ ಹಣವನ್ನೆಲ್ಲಾ ತಂದುಕೊಟ್ಟರಂತೆ ! ಹಾಗೇಕಪ್ಪಾ ಮಾಡಿದಿರಿ. ಒಪ್ಪತ್ತು ಕೂಡ ನಾನು ಆಫೀಸಿನಲ್ಲಿ ಕೂಡಲಿಲ್ಲವಲ್ಲಾ !"

"ಅದು ಎಂದಿದ್ದರೂ ನಿಮ್ಮ ಹಣ ಸಾರ್. ಆಸ್ಪತ್ರೆ ಖರ್ಚು ಸಾಕಷ್ಟು ಆಗಿದೆ."

"ನಾನು ಕೈಯಲ್ಲಿ ಸ್ವಲ್ಪ ಹಣ ಇಟ್ಟುಕೊಂಡಿದ್ದೇನೆ ಮಾಧವ ರಾವ್........ಇನ್ನು ನಾನು ಆಫೀಸಿಗೆ ಬರುವ ಸಂಭವವಿಲ್ಲ. ಪಟ್ಟಣಕ್ಕೂ ಹೋಗಕೂಡದು, ಇಲ್ಲೇ ಇರಬೇಕು ಎಂದು ಡಾಕ್ಟರು ಹೇಳಿದ್ದಾರೆ."

"ಡಾಕ್ಟರು ಹೇಳಿದ ಹಾಗೆ ಮಾಡಿ ಸಾರ್. ಆಫೀಸ್ ನಾನು ನೋಡಿಕೊಂಡು ಹೋಗುತ್ತೇನೆ."

"ಮನೆ ಸುಮ್ಮನೆ ಖಾಲಿ ಬಿದ್ದಿರುತ್ತದೆ – ನೀವು ಅಲ್ಲಿಯೇ ವಾಸವಿದ್ದು ಬಿಡಿ."

ಮಾಧವರಾಯನಿಗೆ ದುಃಖ ಉಮ್ಮಳಿಸಿತು.

"ಪಟ್ಟಣಕ್ಕೆ ತಾವೂ ಅಮ್ಮಾವರೂ ಬಂದು ಮನೆಯನ್ನೊಪ್ಪಿಸಿ ಕೊಳ್ಳಬೇಕು ಸ್ವಾಮಿ. ತಾವು ಬರುವವರೆಗೆ ಮನೆ ಕಾವಲಿರುವ ಕೆಲಸ ನಾನು ಮಾಡುತ್ತೇನೆ." ಎಂದರು.

ಅಯ್ಯಂಗಾರ್ಯರ ಕಾಹಿಲೆಯ ಸುದ್ದಿ ಕೇಳಿ ಪಟ್ಟಣದ

ಪ್ರಮುಖರೆಲ್ಲಾ ಅವರನ್ನು ಕಂಡು ಬಂದರು. ಷರೀಫ್ ಖಾನ್ ಮತ್ತು ಅವರ ತಮ್ಮ ವ-ಸ್ತಾನ್ ಪ್ರತಿದಿನವೂ ಮೈಸೂರಿಗೆ ಹೋಗಿಬರುತ್ತಿದ್ದರು ಜವರೇಗೌಡರು ಮೂರು ನಾಲ್ಕು ಬಾರಿ, ಮಾಧವರಾಯನ ಜತೆಯಲ್ಲಿ ಹೋಗಿ ಅವರ ದರ್ಶನ ಪಡೆದರು. ಒಂದು ದಿನ ಅಯ್ಯಂಗಾರ್ಯರು

"ಎಲ್ಲರೂ ಬಂದು ನೋಡಿಕೊಂಡು ಹೋದರು. ರಾಘವೇಂದ್ರ ರಾಯ ಬರಲೇ ಇಲ್ಲವಲ್ಲ ಗೌಡರೇ." ಎಂದರು.

"ಹೋಗಿ ನೋಡಿಕೊಂಡು ಬರಬೇಕು ಎಂದು ಹೇಳುತ್ತಲೆ ಇದ್ದಾರೆ. ಖಂಡಿತ ಬರುತ್ತಾರೆ ಸ್ವಾಮಿ."

"ಅವನೂ ನನ್ನ ಆಫೀಸಿನಲ್ಲಿದ್ದವನು ಗೌಡರೇ. ಈಗ ಅವನ ಗಣ್ಯನಾಗಿರುವುದು ನೋಡಿ ನನಗೆ ಅಸೂಯೆಯಿಲ್ಲ – ಹೆಮ್ಮೆಯಾಗಿದೆ ನಾನು ನೋಡಲು ಬಯಸಿದೆ ಎಂದು ರಾಘವೇಂದ್ರನಿಗೆ ಹೇಳಿ."

"ಅಗತ್ಯವಾಗಿ ಹೇಳುತ್ತೇನೆ ಸ್ವಾಮಿ."

"ಗೌಡರೇ, ನನ್ನ ಕಾಲ ಮುಗಿಯುತ್ತ ಬಂದಿತು. ಇಷ್ಟು ದಿ ನೀವೆಲ್ಲಾ ನನ್ನ ಬಂಧು ಬಾಂಧವರಂತೆ ಇದ್ದಿರಿ. ಇಲ್ಲಿ ನೋಡಿ ಮಾಧವರಾವ್ – ನನ್ನ ಮಗ – ಈತನನ್ನು ನಿಮ್ಮ ಕೈಯಲ್ಲಿಟ್ಟು ಹೋಗುತ್ತೇನೆ........ ಇವರ ಯೋಗಕ್ಷೇಮ, ಯಶಸ್ಸು ನಿಮ್ಮನ್ನೆ ಸೇರಿದ್ದು."

ಗೌಡರಿಗೆ ಮಾತು ಹೊರಡದೆ ಗಂಟಲುಬ್ಬಿ ಬಂತು. ಎದ್ದುನಿಂ ಅಯ್ಯಂಗಾರ್ಯರಿಗೆ ಕೈಮುಗಿದರು.

ನಾರಾಯಣಸ್ವಾಮಿ ಅಯ್ಯಂಗಾರ್ಯರ ಕಾಹಿಲೆ ಚಿತ್ರವಿಚಿ ರೂಪ ತಳೆಯುತ್ತಿತ್ತು. ನಾಲ್ಕುದಿನ ಗುಣ ಕಂಡುಬಂದರೆ, ಮರುದಿನ ಮತ್ತಷ್ಟು ಪ್ರಕೋಪಕ್ಕೇರುತ್ತಿತ್ತು. ದೇಹದಲ್ಲಿ ತುಂಬ ನಿಶ್ಶ ತಲೆದೋರಿತು ಅತ್ತಿತ್ತ ಹೊರಳಬೇಕಾದರೂ ಯಾರದಾದರ ಸಹಾ ಬೇಕಾಗಿತ್ತು.

ಒಂದುದಿನ ಮಾಧವರಾಯ ಅಯ್ಯಂಗಾರ್ಯರನ್ನು ನೋಡ ಏಕಾಂಗಿಯಾಗಿ ಬಂದಾಗ ಅವನನ್ನು ಹತ್ತಿರಕರೆದು

"ಕೆಲಸ ಹೇಗೆ ನಡೆಯುತ್ತಿದೆ" ಎಂದು ಕೇಳಿದರು.

"ನಡೆಯುತ್ತಿದೆ. ಮನಸ್ಸಿಗೆ ಉಲ್ಲಾಸವಿಲ್ಲ."

"ನನ್ನ ಕಾಹಿಲೆ ವಿಷಯ ನೀವು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಹುಟ್ಟಿದ ಮೇಲೆ ಸಾಯಲೇ ಬೇಕಲ್ಲವೇ ? "

"ನಿಜ........ ಆದರೆ........"

"ನನ್ನ ಲಾ ಲೈಬ್ರರಿ, ಅದರ ಬೀರುಗಳನ್ನೂ ನಿಮಗೆ ಕೊಡಬೇಕೆಂದು ಅಲಮೇಲೂಗೆ ಹೇಳಿದ್ದೇನೆ."

"ಇದೇಕೆ ಸಾರ್ – ಹೀಗೆ ಮಾತನಾಡುತ್ತಿರುವಿರಿ ?"

"ಬುದ್ಧಿ ನೆಟ್ಟಗಿರುವಾಗಲೇ ಎಲ್ಲಾ ವ್ಯವಸ್ಥೆಮಾಡುವುದು ಒಳ್ಳೆಯದು. ನನ್ನ ವಿಲ್ ಬರೆದಿಟ್ಟಿದ್ದೇನೆ. ಇನ್‌ಷ್ಯೂರೆನ್ಸ್ ಹಣ ಬರುತ್ತದೆ. ಎಲ್ಲಾ ನೀವೇ ನೋಡಿಕೊಳ್ಳಬೇಕು."

ಮಾಧವರಾಯ ಮಾತಾಡಲೆತ್ನಿಸಿದ. ಅಯ್ಯಂಗಾರ್ಯರು ಅವನನ್ನು ತಡೆದು

"ನಾನು ಹೇಳುವುದನ್ನು ಪೂರ್ತಿಕೇಳಿ. ಇನ್ನುಮೇಲೆ ನಾನು ಇಷ್ಟು ಮಾತನಾಡಲಾರೆ – ನನ್ನ ತರುವಾಯ ಅಲಮೇಲು ಪಟ್ಟಣದಲ್ಲಿರುವುದಿಲ್ಲ. ಮೈಸೂರಿನಲ್ಲಿ ಮಗಳ ಮನೆಯಲ್ಲಿರುತ್ತಾಳೆ. ನೀವು ನನ್ನ ಮನೆಯಲ್ಲಿ ವಾಸಕ್ಕೆ ಬಂದಿರಬೇಕು. ಇನ್ನು ಮೇಲೆ ಪ್ರಾಕ್ಟೀಸಿನಲ್ಲಿ ಸಂಪಾದನೆಯಾಗುವುದನ್ನು ಇಲ್ಲಿಗೇನೂ ತಂದುಕೊಡಬೇಡಿ. ನಿಮ್ಮದೂ ಚಿಕ್ಕಸಂಸಾರ – ದೇವರು ಒಳ್ಳೆಯದು ಮಾಡುತ್ತಾನೆ, ಯೋಚನೆಮಾಡಬೇಡಿ."

"ನನಗೆ ಬುದ್ಧಿವಾದ ಏನೂ ಹೇಳುವುದಿಲ್ಲವೇ ಸರ್."

"ಬುದ್ಧಿ ಏನು ಹೇಳಲಪ್ಪಾ. ನಿಮ್ಮ ನೀತಿ, ಸೇವೆ, ನಡತೆ ಎಲ್ಲಾ ನನಗೆ ಹೆಚ್ಚಿನ ಆನಂದವನ್ನುಂಟು ಮಾಡಿದೆ. ನಾನು ಕಾಹಿಲೆ ಬಿದ್ದಮೇಲೆ ನೀವು ಮಾಡಿರುವ ಸೇವೆಗೆ ನಾನೇನು ಪ್ರತಿಯಾಗಿ ಮಾಡಬಲ್ಲೆ. ಮನಃಪೂರ್ವಕವಾಗಿ ಆಶೀರ್ವಾದಮಾಡುತ್ತೇನೆ."

"ವೃತ್ತಿಯ ಬಗ್ಗೆ ಏನಾದರೂ ಹೇಳಿ ಸರ್."

K. Srinivas Rao.
S. C. B. H.

"ಏನಿದೆಯಪ್ಪಾ ಹೇಳುವುದಕ್ಕೆ" ಎಂದವರು ಯೋಚಿಸಿಕೊಂಡು "ವೃತ್ತಿಯಲ್ಲಿ ದುಡ್ಡು ಮಾಡುವುದೊಂದೇ ಮುಖ್ಯವಲ್ಲ. ದುಡ್ಡು ನ್ಯಾಯವಾದ ಮಾರ್ಗದಲ್ಲಿ ಸಂಪಾದನೆಯಾಗಬೇಕು. ನಾನೂ ಮೊದಲು ಕ್ರಿಮಿನಲ್ ಪ್ರ್ಯಾಕ್ಟೀಸ್ ಮಾಡುತ್ತಿದ್ದೆ. ಎರಡು ಕೈಯಲ್ಲಿಯೂ ಸಂಪಾದಿಸುತ್ತಿದ್ದೆ. ಆದರದೆಂಥ ಸಂಪಾದನೆ ಎನಿಸಿ ಬಿಟ್ಟುಬಿಟ್ಟೆ. ಸುಳ್ಳನನ್ನು ಸತ್ಯವಂತ ಮಾಡಬೇಕಾಗುತ್ತಿತ್ತು— ಕೊಲೆಗಡಕನನ್ನು ನಿರಪರಾಧಿ ಎನಿಸಬೇಕಾಗುತ್ತಿತ್ತು. ಕಣ್ಣಾರೆ ಕಂಡುದನ್ನು ಇಲ್ಲವೆನಿಸಬೇಕಾಗಿತ್ತು—ಇಲ್ಲದುದನ್ನು ಹುಟ್ಟಹಾಕಬೇಕಾಗಿತ್ತು. ಸುಳ್ಳು ಹೇಳುವುದಕ್ಕಂತೂ ಮೊದಲು ಕೊನೆಯಿರಲಿಲ್ಲ. ಬರಿಯ ಸಿವಿಲ್ ಪ್ರ್ಯಾಕ್ಟೀಸಿನಿಂದ ಲಕ್ಷಾಂತರ ಗಳಿಸುವುದಕ್ಕಾಗದಿದ್ದರೂ ಚಿಂತೆಯಿಲ್ಲ, ಅದನ್ನೇ ಬೆಳಸಿಕೊಳ್ಳಿ. ಆದರಲ್ಲಿಯೂ ಕಕ್ಷಿಗಾರನ ಪಕ್ಷ ನ್ಯಾಯವಾದುದೆಂದು ಮನದಟ್ಟುಮಾಡಿಕೊಂಡೇ ಕೇಸು ತೆಗೆದುಕೊಳ್ಳಿ. ನಾವು ಬದುಕಬೇಕೆಂದು ಯಾರ ಹೊಟ್ಟೆಯಮೇಲೂ ಹೊಡೆಯಬಾರದು—ಯಾರಿಗೂ ಅನ್ಯಾಯಮಾಡಬಾರದು."

"ತಮ್ಮ ಉಪದೇಶ ನನಗೆ ವೇದದ ಸಮಾನ. ಶಿರಸಾವಹಿಸಿ ಪಾಲಿಸುತ್ತೇನೆ." ಎಂದು ಮಾಧವರಾಯ ವಚನವಿತ್ತ.

೧೯

ಡಾ. ಸುಂದರಂ ಮೂರು ತಿಂಗಳು ಮುಗಿಯುವುದನ್ನೇ ಕಾಯುತ್ತಿದ್ದರು. ಮೂರು ತಿಂಗಳ ಅವಧಿಯಲ್ಲಿ ಕ್ಲಬ್ಬಿಗೆ ಮೂವತ್ತು ಸದಸ್ಯರನ್ನು ದೊರಕಿಸಿದ್ದರು. ಮಸ್ತಾನಖಾನ್ ಕೋರ್ಟುಗಳನ್ನು ಸುವ್ಯವಸ್ಥೆಗೊಳಿಸಿ, ಹೊಸ ನೆಟ್, ಚೆಂಡುಗಳನ್ನು ತರಿಸಿ ಆಟವಾಡಲು ಅನುಕೂಲ ಮಾಡಿದ್ದರು. ಕ್ಲಬ್ಬಿನ ಬಗ್ಗೆ ಸದಸ್ಯರ ಉತ್ಸಾಹ ದಿನದಿನಕ್ಕೆ ಹೆಚ್ಚ ತೊಡಗಿತು.

"ಒಂದು ಕೋರ್ಟು ಸಾಲುವುದಿಲ್ಲ ಸಾಹೇಬರೇ. ಇನ್ನೊಂದು ಕೋರ್ಟು ಮಾಡಿಸಬೇಕಾಗುತ್ತದೆ" ಎಂದು ಡಾಕ್ಟರು ಸೂಚಿಸಿದರು.

"ಒಂದಲ್ಲ ಎರಡು ಕೋರ್ಟು ಮಾಡಿಸೋಣ ಸ್ವಾಮಿ." ಎಂದು ಮಸ್ತಾನ್ ಹೇಳುತ್ತಿದ್ದರು.

ಒಂದು ಸಂಜೆ ಅಕಸ್ಮಾತ್ತಾಗಿ ಮಾಧವರಾಯ ಕೋರ್ಟಿಗೆ ಬರಲು ಡಾಕ್ಟರು ಅವನ ಹೆಗಲಿಗೆ ಅಧ್ಯಕ್ಷತೆಯ ನೊಗವೇರಿಸಲು ಹವಣಿಸಿ "ಮೂರು ತಿಂಗಳು ಕಳೆಯಿತು ರಾಯರೇ. ಇನ್ನು ಅಧ್ಯಕ್ಷತೆ ನೀವು ಒಪ್ಪಿಕೊಳ್ಳಬೇಕು." ಎಂದರು.

"ನನಗೆ ಪುರಸತ್ತಿಲ್ಲಿದೆ ಡಾಕ್ಟರೇ. ಪಟ್ಟಣಕ್ಕೂ ಮೈಸೂರಿಗೂ ಓಡಿಯಾಡುವುದೇ ಕೆಲಸವಾಗಿದೆ. ಯಜಮಾನರು ಕಾಹಿಲೆ ವಾಸಿ ಮಾಡಿಕೊಂಡು ಬಂದುಬಿಟ್ಟರೆ ನನ್ನ ಮನಸ್ಸಿಗೆ ನೆಮ್ಮದಿಯಾಗುತ್ತದೆ.

ಆಗ ಧಾರಾಳವಾಗಿ ವಹಿಸಿಕೊಳ್ಳುತ್ತೇನೆ. ಅಲ್ಲಿಯವರೆಗೆ ತಾವೇ ನೋಡಿಕೊಂಡು ಹೋಗಬೇಕು."

ಮಾಧವರಾಯನ ಪರಿಸ್ಥಿತಿಯನ್ನು ಬಲ್ಲ ಡಾಕ್ಟರು ಒತ್ತಾಯ ಮಾಡಲಿಲ್ಲ. ಆಗಲೆಂದು ಒಪ್ಪಿಕೊಂಡರು. ಕ್ಲಬ್ಬು ಮೂರು ತಿಂಗಳಲ್ಲಿ ಮಾಡಿದ್ದ ಪ್ರಗತಿ ಕಂಡು ಮಾಧವರಾಯ ಉತ್ಸಾಹಗೊಂಡು "ಒಂದು ದೊಡ್ಡ ಟೆನಿಸ್ ಟೂರ್ನಮೆಂಟ್ (Tournament) ಮಾಡಬೇಕು ಡಾಕ್ಟರೇ. ಸಂಸ್ಥಾನದ ಎಲ್ಲಾ ಕಡೆಯ ಆಟಗಾರರನ್ನೂ ಆಕರ್ಷಿಸಬೇಕು."

"ಅದಕ್ಕೆ ದೊಡ್ಡ ರೋಲಿಂಗ್ ಕಪ್ ಬೇಕು. ವಿನ್ನರ್ ಮತ್ತು ರನ್ನರ್‌ಗೆ ಕೊಡುವುದಕ್ಕೆ ಕಪ್ಪುಗಳು ಬೇಕು. ಬಂದವರಿಗೆ ಆತಿಥ್ಯ ಮಾಡಬೇಕು. ಬಹಳ ಖರ್ಚಿನ ಬಾಬತ್ತಾಯಿತೇ ?"

"ನಮ್ಮ ಅಣ್ಣಾವರಿಗೆ ಹೇಳಿ ರೋಲಿಂಗ್ ಕಪ್ ನಾನು ಕೊಡಿಸುತ್ತೇನೆ ಸರ್" ಎಂದು ಮುಸ್ತಾನ್ ಹೇಳಿದರು.

"ನೋಡಿದಿರಾ. ಕೆಲಸ ಎಷ್ಟು ಹಗುರವಾಯಿತು. ಆದರೆ ಈ ಗೌರವ ನಾವು ಕ್ಲಬ್ಬಿನ ಸ್ಥಾಪಕ—ಅಧ್ಯಕ್ಷರಾದ (Founder-President) ರಾಘವೇಂದ್ರರಾಯರಿಗೆ ತೋರಿಸಬೇಕಾದುದು ನ್ಯಾಯ."

"ಅಷ್ಟು ವ್ಯಾಜ್ಯ ಕಾದುಕೊಂಡು ಹೋಗಿದ್ದಾರೆ. ಪುನಃ ಹೋಗಿ ಅವರನ್ನೇ ಆಶ್ರಯಿಸುವುದು ಯಾವ ನ್ಯಾಯ ಸರ್."

"ಜನಗಳನ್ನು ದೂರಮಾಡಬಾರದು ಸಾಹೇಬರೇ. ಮಾತು ಬಂತು ಮಾತು ಹೋಯಿತು—ರಾಘವೇಂದ್ರರಾಯರಂಥ ಗಣ್ಯ ಮಹನೀಯರನ್ನು ಬಿಟ್ಟರೆ ಕ್ಲಬ್ಬಿಗೆ ಬೆಲೆ ಬರುವುದಿಲ್ಲ."

"ನಾನು ಹೋಗಿ ಅವರನ್ನು ಕೇಳಲಾರೆ ಸರ್" ಎಂದು ಮುಸ್ತಾನ್ ಖಂಡಿತವಾಗಿ ಹೇಳಿದರು.

"ನಾನೂ ಹೋಗಲಾರೆ" ಎಂದು ಡಾ. ಸುಂದರಂ ಹೇಳಿದರು.

"ಜವರೇಗೌಡರು ಹೇಗೆ ಹೇಳಿದರೆ ಹಾಗೆ ಮಾಡೋಣ." ಎಂದು

ಮಾಧವರಾಯ ಹೇಳಲು ಗೌಡರು "ನಿಮ್ಮ ಯೋಚನೆ ತುಂಬ ಒಳ್ಳೆಯದು ರಾಯರೇ. ಈ ನೆಪದಲ್ಲಿ ನಾವು ರಾಘವೇಂದ್ರರಾಯರನ್ನು ಒಳಕ್ಕೆ ಎಳೆದುಕೊಳ್ಳುವುದು ಒಳ್ಳೆಯದು. ಊರಿನಲ್ಲಿ ಪಾರ್ಟಿಗಳಿರುವುದು ಸರಿಯಲ್ಲ. ನಾನು ರಾಘವೇಂದ್ರರಾಯರಲ್ಲಿ ಹೋಗಿ ಅವರನ್ನು ಒಪ್ಪಿಸಿಕೊಂಡು ಬರುತ್ತೇನೆ. ಉಳಿದ ಎರಡು ಕಪ್ಪುಗಳನ್ನೂ ನಾನು ಕೊಡುತ್ತೇನೆ."

"ಉಳಿದ ಖರ್ಚು ?" ಎಂದರು ಡಾ. ಸುಂದರಂ.

"ಚಂದಾ ವಸೂಲ್ಮಾಡೋಣ." ಎಂದು ಮಾಧವರಾಯ ಉತ್ತರ ಹೇಳಿದ.

ಜವರೇಗೌಡರ ರಾಯಭಾರದ ಪರಿಣಾಮವೇನಾಗುತ್ತದೆಂದು ತಿಳಿಯಲು ಎಲ್ಲರೂ ಕುತೂಹಲಿಗಳಾಗಿದ್ದರು. ಗೌಡರು ಮೂರು ದಿವಸ ಯಾರಿಗೂ ಕಾಣಿಸಿಕೊಳ್ಳಲಿಲ್ಲ. ನಾಲ್ಕನೆಯ ದಿನ ಕೋರ್ಟಿನಲ್ಲಿ ಸಿಕ್ಕಿದಾಗ ಮಾಧವರಾಯನೇ ಕೇಳಿದ.

"ರಾಯರು ಒಪ್ಪಿಕೊಂಡರೇ ಗೌಡರೇ ?"

"ಇಲ್ಲ ಸ್ವಾಮಿ. ಅವರಿಗೆ ಸ್ವಲ್ಪ ತೊಂದರೆ ಇರುವ ಹಾಗೆ ಕಾಣುತ್ತದೆ. ರೋಲಿಂಗ್ ಕಪ್ ನಾನೇ ಕೊಟ್ಟುಬಿಡುತ್ತೇನೆ. ಉಳಿದೆರಡು ಕಪ್ಪುಗಳನ್ನು ಷರೀಫ್ ಸಾಹೇಬರು ಕೊಡಲಿ."

"ಹಾಗೂ ಆಗಬಹುದು." ಎಂದರು. ಕೋರ್ಟು ನಡೆದಿದ್ದಂತೆ ಯಾರೋ ಒಂದು ಚೀಟಿ ತಂದು ಮಾಧವರಾಯನ ಕೈಯಲ್ಲಿಟ್ಟರು. ಚೀಟಿ ನೋಡುತ್ತಿದ್ದಂತೆ ಅವನ ಮುಖ ವಿವರ್ಣವಾಯಿತು. ಕೂಡಲೆ ಎದ್ದು ಹೊರಗೆ ಹೋಗಿಬಂದು ನ್ಯಾಯಮೂರ್ತಿಗಳ ಅಪ್ಪಣೆ ಪಡೆದು ಹೊರಟ. ಅವನನ್ನೇ ಹಿಂಬಾಲಿಸಿ ಜವರೇಗೌಡರು ಬಂದು

"ಏನು ಸಮಾಚಾರ ಸ್ವಾಮಿ."

"ಯಜಮಾನರ ಸ್ಥಿತಿ ಚಿಂತಾಜನಕವಾಗಿದೆಯಂತೆ. ವೆಂಕಟಾಚಾರ್ರು ಕಾರು ಕಳಿಸಿಕೊಟ್ಟಿದ್ದಾರೆ."

"ಹೊರಡಿ ಸ್ವಾಮಿ—ಕೂಡಲೆ ಹೊರಡಿ."

"ಗೌಡರೇ—ದಯೆಯಿಟ್ಟು ಷರೀಫ್ ಸಾಹೇಬರಿಗೆ ಸುದ್ದಿ ಮುಟ್ಟಿಸಿ."

"ಹಾಗೇ ಆಗಲಿ—ನೀವು ಹೊರಡಿ."

ಮಾಧವರಾಯನ ಜಂಘಾಬಲ ಉಡುಗಿಹೋಗಿತ್ತು. ಮನೆಗೆ ಹೋಗಿ ತಾಯಿಯನ್ನೂ, ಹೆಂಡತಿಯನ್ನೂ ಕರೆದುಕೊಂಡು ನೇರವಾಗಿ ಮೈಸೂರಿಗೆ ಬಂದ.

ನಾರಾಯಣಸ್ವಾಮಿ ಅಯ್ಯಂಗಾರ್ಯರ ಹಾಸಿಗೆಯ ಸುತ್ತ ಅವರ ಮಕ್ಕಳು, ಮೊಮ್ಮಕ್ಕಳು, ಬಂಧುಗಳು ಸೇರಿದ್ದರು. ಡಾಕ್ಟರು ಸಪ್ಪೆಮೋರೆ ಹಾಕಿಕೊಂಡು ನಿಂತಿದ್ದರು. ಅಲಮೇಲಮ್ಮ ಪತಿಯ ಮಗ್ಗುಲಲ್ಲಿ ಕುಳಿತು ಕಂಬನಿ ಸುರಿಸುತ್ತಿದ್ದರು.

ಗೋದಮ್ಮ ನೇರವಾಗಿ ಅಲಮೇಲಮ್ಮನವರ ಸಮೀಪದಲ್ಲಿ ಹೋಗಿ ನಿಂತರು.

ಮಾಧವರಾಯನನ್ನು ನೋಡಿದೊಡನೆಯೇ ವೆಂಕಟಚಾರ್ಯರು ದುಃಖದಾವೇಶದಿಂದ

"ನಿಮ್ಮನ್ನು ನೋಡುವುದಕ್ಕಾಗಿ ಜೀವ ಹಿಡಿದುಕೊಂಡಿದ್ದಾರೆ." ಎಂದರು. ಮಾಧವರಾಯ ಯಜಮಾನರ ಮಂಚದ ಬಳಿಗೆ ಹೋಗಿ ನಿಂತುಕೊಂಡು ಮೆಲ್ಲನೆ

"ಸ್ವಾಮಿ—ಸ್ವಾಮಿ." ಎಂದ.

ನಾರಾಯಣಸ್ವಾಮಿ ಅಯ್ಯಂಗಾರ್ಯರು ಮೆಲ್ಲನೆ ಕಣ್ದೆರೆದು ಏನೋ ಹೇಳಲು ಬಾಯಿ ಆಡಿಸಿದರು. ಅಲಮೇಲಮ್ಮನವರು ನೀರಿನ ಲೋಟ ತೆಗೆದು ಮಾಧವರಾಯನ ಕೈಗಿತ್ತರು. ಮಾಧವರಾಯ ಮೆಲ್ಲನೆ ಒಂದು ಗುಟುಕು ನೀರು ಕುಡಿಸಿ, ಹತ್ತಿರದಲ್ಲಿ ಕುಳಿತ.

ಅಯ್ಯಂಗಾರ್ಯರು ತಮ್ಮ ಕೈಯೆತ್ತಲು ಪ್ರಯತ್ನಿಸಿದರು. ಮಾಧವರಾಯ ಅವನ ಕೈಯನ್ನೆತ್ತಿಕೊಂಡ. ಅಯ್ಯಂಗಾರ್ಯರು ಮೆಲ್ಲನೆ ಅವರ ತಲೆನೇವರಿಸಿ, ಮುಗುಳುನಗೆ ನಕ್ಕು, ಸುತ್ತ ಒಮ್ಮೆ ಕಣ್ಣು ಹೊರಳಿಸಿ, ಕಣ್ಣು ಮುಚ್ಚಿದರು.

ಮಾಧವರಾಯ ಮೆಲ್ಲನೆ

"ಸ್ವಾಮಿ—ಸ್ವಾಮಿ." ಎಂದ.

ಆ ವೇಳೆಗಾಗಲೇ ನಾರಾಯಣಸ್ವಾಮಿ ಅಯಂಗಾರ್ಯರ ಆತ್ಮಪಕ್ಷಿ ಬಹುದೂರ ಹಾರಿಹೋಗಿತ್ತು.

ಅಲಮೇಲಮ್ಮ ಮೂರ್ಛಿತರಾಗಿ ಬಿದ್ದುಬಿಟ್ಟರು—ಮಾಧವ ರಾಯನನ್ನು ಸಮಾಧಾನಪಡಿಸಲು ಯಾರಿಗೂ ಸಾಧ್ಯವಾಗಲಿಲ್ಲ. ಗೋಡೆಗಳನ್ನು ಸೀಳುವಂತೆ ದುಃಖಿಗಳ ಆಕ್ರಂದನ ಸ್ವರವೆದ್ದಿತು.

ಅದೇ ಸಮಯಕ್ಕೆ ಜವರೇಗೌಡರು, ಷರೀಫ್ ಸಾಹೇಬರು, ಮಸ್ತಾನ್ ಖಾನ್, ಹುಸೇನ್ ಸಾಹೇಬರು, ರಂಗರಾಯರು ಬಂದರು.

ಸುಖನಿದ್ರೆಯಲ್ಲಿ ಶಾಂತಮುದ್ರೆ ತಳೆದು ಮಲಗಿದ್ದ ಅಯ್ಯಂಗಾರ್ಯರ ಜೀರ್ಣದೇಹಕ್ಕೆ ಎಲ್ಲರೂ ಕೈಮುಗಿದರು.

ಅಲಮೇಲಮ್ಮನವರು ಗೋದಮ್ಮನವರ ವಕ್ಷಸ್ಥಳದ ಮೇಲೆ ಒರಗಿ ಮಂಚದ ತುದಿಯಲ್ಲಿ ಕುಳಿತಿದ್ದರು. ರುಕ್ಮಿಣಿ ಎಡಗೈಯಲ್ಲಿ ಮಗುವನ್ನೆತ್ತಿಕೊಂಡು, ಬಲಗೈಯಲ್ಲಿ ತನ್ನ ಸೆರಗು ತೆಗೆದುಕೊಂಡು ಅಲಮೇಲಮ್ಮನವರ ಕಂಬನಿಯ ಪ್ರವಾಹ ಒರಸುತ್ತಿದ್ದಳು.

* * *

ದಹನ ಸಂಸ್ಕಾರ ಮೈಸೂರಿನಲ್ಲಿಯೇ ಮುಗಿಯಿತು.

ಕರ್ಮಾಂತರವೂ ಮೈಸೂರಿನಲ್ಲಿಯೇ ಆಗಲಿ ಎಂದು ವೆಂಕಟಾಚಾರ್ಯರು ಸೂಚಿಸಿದರು. ಮಾಧವರಾಯ ಅದಕ್ಕೊಪ್ಪದೆ "ಪಟ್ಟಣ ಯಜಮಾನರ ಕರ್ಮಕ್ಷೇತ್ರವಾಗಿತ್ತು. ಪಟ್ಟಣದ ಪುರೋಭಿವೃದ್ಧಿಗಾಗಿ ಅವರು ತಮ್ಮ ಜೀವನವನ್ನೇ ಸವೆಸಿದರು. ಕರ್ಮಾಂತರ ಅಲ್ಲಿಯೇ ಆಗಬೇಕಾದುದು ನ್ಯಾಯವೆಂದು ನನಗೆ ತೋರುತ್ತದೆ." ಎಂದು ಹೇಳಿದ. ಅಲಮೇಲಮ್ಮನವರು ಅಳಿಯನಿಗೆ

"ಮಾಧವರಾಯರು ಹೇಗೆ ಹೇಳುತ್ತಾರೆ ಹಾಗೆ ಮಾಡಿ" ಎಂದುಬಿಟ್ಟರು.

ಮಾಧೂ ಪೂರ್ವಭಾವಿಯಾಗಿ ಕರ್ಮಾಂತರದ ಎಲ್ಲ ವ್ಯವಸ್ಥೆ

ಯನ್ನೂ ಮಾಡಿ ನಾರಾಯಣಸ್ವಾಮಿ ಅಯ್ಯಂಗಾರ್ಯರ ಮನೆಯವರನ್ನೂ ಬಂಧುಬಾಂಧವರನ್ನೂ ಬರಮಾಡಿಕೊಂಡ.

ವೆಂಕಟಾಚಾರ್ಯರೇ ಕರ್ಮಾಂತರಗಳನ್ನು ನೆರವೇರಿಸಿದರು. ಮಾಧವರಾಯ ಅಶ್ರುಬೆರೆತ, ಕಾವೇರಿಯ ಪುಣ್ಯೋದಕವನ್ನು ಕೈಯಲ್ಲಿ ಹಿಡಿದು

"ಗುರುವೇ—ಇದೋ ನನ್ನ ಅಶ್ರುತರ್ಪಣ." ಎಂದು ಹೇಳಿ ಒಪ್ಪಿಸಿದ.

ವೈಕುಂಠ ಸಮಾರಾಧನೆಯ ದಿನ ಎಲ್ಲ ಜನರಿಗೂ ಅನ್ನ ಸಂತರ್ಪಣೆಯಾಯಿತು. ಷರೀಫ್ ಸಾಹೇಬರು ದೊಡ್ಡ ಮಸೀದಿಯಲ್ಲಿ ಪ್ರಾರ್ಥನೆ ಮಾಡಿಸಿ, ಬಡ ಮುಸ್ಲಿಮರಿಗೆ ಅನ್ನ ಹಾಕಿಸಿದರು.

ಧಾರ್ಮಿಕ ವಿಧಿಗಳೆಲ್ಲಾ ಪೂರೈಸಿದಮೇಲೆ ಅಲಮೇಲಮ್ಮನವರು ಮೈಸೂರಿಗೆ ಹೊರಡಲು ಆತುರಪಟ್ಟರು. ದುಃಖದಿಂದ ಹಣ್ಣಾಗಿದ್ದ ಮಾಧವನ ಮುಖನೋಡಿ

"ಯಜಮಾನರ ಅಂತಿಮ ಅಪೇಕ್ಷೆ ನೀವೇ ಕೇಳಿದರಲ್ಲವೇ. ಅವರ ಪುಸ್ತಕಭಂಡಾರ, ಮೇಜುಗಳು, ಬೀರುಗಳನ್ನು ನೀವು ಸ್ವೀಕರಿಸಬೇಕು. ನಾನು ಇನ್ನು ಈ ಮನೆಗೆ ಕಾಲಿಡಲಾರೆ. ನೀವೂ ವೆಂಕಟಾಚಾರ್ಯರೂ ಸಾಮಾನುಗಳನ್ನು ಮೈಸೂರಿಗೆ ಕಳಿಸಿಕೊಡಿ—ಯಜಮಾನರ ಅಪೇಕ್ಷೆಯಂತೆ ನೀವು ಇದೇ ಮನೆಯಲ್ಲಿ ವಾಸಮಾಡಿ." ಎಂದು ಹೇಳಿದರು. ಮಾಧವರಾಯ ವಿಧಿಯಿಲ್ಲದೆ ಒಪ್ಪಿಕೊಳ್ಳಬೇಕಾಯಿತು.

ಮಾಧವರಾಯನ ಮನಸ್ಸಿನಲ್ಲಿ ಅಪರಿಹಾರ್ಯವಾದ ಶೂನ್ಯತೆ ತಲೆದೋರಿತು. ಯಜಮಾನರ ದಯಾರ್ದ್ರತೆ, ಹಿರಿಯತನ, ಉದಾತ್ತ ಸ್ವಭಾವಗಳ ನೆನಪು ಅಚ್ಚಳಿಯದೆ ಅವನ ಚಿತ್ತದಮೇಲೆ ಮೂಡಿದವು.

೨೦

ರಾಘವೇಂದ್ರರಾಯರ ಬಗ್ಗೆ ಜವರೇಗೌಡರ ಹೃದಯದಲ್ಲಿ ಹೊಗೆಯಾಡುತ್ತಿದ್ದ ಅಸಂತುಷ್ಟಿ ನಾರಾಯಣಸ್ವಾಮಿ ಅಯ್ಯಂಗಾರ್ಯರು ಕಾಹಿಲೆಯಿದ್ದಾಗ ಅವರು ತೋರಿದ ವರ್ತನೆಯಿಂದಲೂ, ಟೆನಿಸ್ ಕ್ಲಬ್ಬಿನ ಪ್ರಕರಣದಿಂದಲೂ ಮತ್ತಷ್ಟು ಪುಷ್ಟಿಗೊಂಡಿತ್ತು. ನಾರಾಯಣಸ್ವಾಮಿ ಅಯ್ಯಂಗಾರ್ಯರು ಗತಿಸಿಹೋದಮೇಲೂ ಒಮ್ಮೆಯೂ ಅವರ ಬಗ್ಗೆ ಗೌರವ ವ್ಯಕ್ತಪಡಿಸದಿದ್ದ ರಾಘವೇಂದ್ರ ರಾಯರ ಕಠೋರವೃತ್ತಿಯನ್ನು ಕಂಡು ಗೌಡರ ಮನಸ್ಸು ತೀರ ಕೆಟ್ಟು ಹೋಯಿತು. ವಿನಾಕಾರಣ ರಾಘವೇಂದ್ರರಾಯರ ವೈಮನಸ್ಯ ಕಟ್ಟಿಕೊಳ್ಳಲು ಗೌಡರಿಗೆ ಇಷ್ಟವಿರಲಿಲ್ಲ.

ನಾರಾಯಣಸ್ವಾಮಿ ಅಯ್ಯಂಗಾರ್ಯರು ಕಾಹಿಲೆ ಇದ್ದ ಕಾಲ ದಲ್ಲಿ ಗೌಡರು ತೋರಿಸಿದ ಆಸ್ಥೆ, ಅವರ ಕರ್ಮಾಂತರ ಕಾಲದಲ್ಲಿ ತೋರಿದ ಕಳಕಳಿ ರಾಘವೇಂದ್ರರಾಯರ ಹೃದಯಕ್ಕೆ ಶೂಲ ನೆಟ್ಟಂತಾಗಿತ್ತು.

"ಗೌಡರು ನಮ್ಮ ಸ್ನೇಹಿತರಂತೆ ನಟಿಸುತ್ತಾರಷ್ಟೆ. ನಿಜವಾಗಿ ಅವರ ವಿಶ್ವಾಸ ಅತ್ತಕಡೆಯೇ." ಎಂದು ಕೇಶವಯ್ಯಂಗಾರ್ಯರೂ ಚಿತಾವಣೆಮಾಡಿದರು. ರಾಘವೇಂದ್ರರಾಯರ ನಡೆನುಡಿಯಲ್ಲಿ, ಕ್ರಾಂತಿ ಕಾರಕ ಮಾರ್ಪಾಟುಗಳಾದವು. ಅಂದಿನಿಂದ ಗೌಡರೂ ಒಬ್ಬ 'ಕಕ್ಷಿಗಾರ'

ರಾದರು. ಇತರ ಕಕ್ಷಿಗಾರರಿಂಗೆ ಸಲ್ಲುತ್ತಿದ್ದಷ್ಟೇ ಲಕ್ಷ್ಯ, ಗೌರವ ಅವರಿಗೂ ಸಲ್ಲತೊಡಗಿತು.

ಗೌಡರು ಒಳಗೇ ಕುದಿಯುತ್ತಿದ್ದರೂ ಎಲ್ಲವನ್ನೂ ಸಹಿಸಿಕೊಂಡಿದ್ದರು. ಆದರೆ ತಮ್ಮ ಕೇಸುಗಳ ಬಗ್ಗೆ ರಾಘವೇಂದ್ರರಾಯರು ತೋರುತ್ತಿದ್ದ ತಾತ್ಸಾರ ಅವರಿಗೆ ಅಸಹನೀಯವಾಗುತ್ತ ಬಂತು.

ವಾಯಿದೆ ಕಳೆದುಕೊಳ್ಳುತ್ತಿದ್ದ ಎರಡು ಪ್ರೋನೋಟುಗಳನ್ನು ದಾವೆಗಾಗಿ ಗೌಡರು ರಾಘವೇಂದ್ರರಾಯರ ಕೈಗಿತ್ತಿದ್ದರು. ಅವು ರಾಯರ ಅಸಂಖ್ಯಾತ ಕಾಗದರಾಶಿಯಲ್ಲಿ ಬೆರತು ಹೋದವು. ಪ್ರೋನೋಟುಗಳು ನಿಷ್ಪ್ರಯೋಜಕವಾದವು. ಗೌಡರ ಸಹನೆಮೀರುತ್ತ ಬಂದಿತು. ಒಂದು ದಿನ ಆಫೀಸಿನಲ್ಲಿ ರಾಘವೇಂದ್ರರಾಯರನ್ನು ಕಂಡು

"ಪ್ರೋನೋಟುಗಳ ವಿಷಯ ಏಕೆ ಉದಾಸೀನ ಮಾಡಿದಿರಿ ಸ್ವಾಮಿ. ವಾಯಿದೆ ಮೀರಿ ಹೋಯಿತಲ್ಲ." ಎಂದರು. ಆಫೀಸಿನಲ್ಲಿ ಸೇರಿದ್ದ ಹಲವಾರು ಕಕ್ಷಿಗಾರರ ಮುಂದೆ ತಮ್ಮ ಕರ್ತವ್ಯಲೋಪವನ್ನು ಗೌಡರು ಪ್ರಸ್ತಾಪಿಸಿದುದಕ್ಕೆ ರಾಯರಿಗೆ ಕೋಪ ನೆತ್ತಿಗೇರಿತು.

"ಸಕಾಲದಲ್ಲಿ ನೀವು ಜ್ಞಾಪಿಸಬೇಕಾಗಿತ್ತು ಗೌಡರೇ."

"ಎಷ್ಟುಸಲ ಜ್ಞಾಪಿಸಲಿ ಸ್ವಾಮಿ. ನಿಮ್ಮ ಗುಮಾಸ್ತರಿಗೂ ಹೇಳಿ ಹೋಗಿದ್ದೆ."

"ಅದಕ್ಕೇನು ಮಾಡುವುದು. ಒಮ್ಮೊಮ್ಮೆ ಹೀಗಾಗುತ್ತದೆ."

"ವಕೀಲರ ಆಲಸ್ಯದಿಂದ ಕಕ್ಷಿಗಾರರು ವ್ಯಥೆಪಡಬೇಕೇನು ?"

"ಏನ್ರೀ.... ಬಹಳ ಮಾತಾಡುತ್ತೀರಿ ?"

"ಬಹಳ ಮಾತಾಡುತ್ತಿಲ್ಲ ಸ್ವಾಮಿ. ಎಷ್ಟು ಅವಶ್ಯಕವೋ ಅಷ್ಟೆ ಆಡುತ್ತಿದ್ದೇನೆ."

"ಈಚೆಗೆ ನಿಮ್ಮ ನಡತೆ ಬಹಳ ಬದಲಾಯಿಸಿಹೋಗಿದೆ ಜವರೆ ಗೌಡರೇ."

"ನನ್ನ ನಡತೆ ಕಟ್ಟಿಕೊಂಡು ನಿಮಗೆ ಆಗಬೇಕಾದದ್ದೇನು ಸ್ವಾಮಿ ನಿಮ್ಮ ನಡತೆ ನೀವು ನೋಡಿಕೊಳ್ಳಿ."

"ನನ್ನ ನಡತೆ – ನನ್ನ ನಡತೆಯಲ್ಲಿ ಏನು ಕುಂದುಕಂಡಿರಿ ?"

"ಪಟ್ಟಣಕ್ಕೆಲ್ಲಾ ಗೊತ್ತಿರುವ ವಿಷಯ ನಾನು ಪ್ರಸ್ತಾಪಿಸ ಬೇಕಾದ ಅಗತ್ಯವೇನು ?"

"ಹಲ್ಲುಹಿಡಿದು ಮಾತನಾಡಿ ಗೌಡರೇ."

ಗೌಡರಿಗೆ ಸಹನೆ ಸ್ವಲ್ಪವೂ ಉಳಿಯಲಿಲ್ಲ. ಎದ್ದು ರಾಘವೇಂದ್ರ ರಾಯರ ಮೇಜಿನ ಬಳಿ ಹೋಗಿ

"ಈ ಅಹಂಕಾರವೇ ನಿಮ್ಮನ್ನು ಒಂದಲ್ಲ ಒಂದು ದಿನ ಅಹುತಿ ತೆಗೆದುಕೊಳ್ಳುತ್ತದೆ ಎಂಬುದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡಿರಿ– ಕಕ್ಷಿಗಾರರೆಂದರೆ ನಿಮ್ಮ ಜೀತದ ಆಳುಗಳೆಂದು ತಿಳಿದುಕೊಂಡಿರು ರೇನು? ನಮ್ಮ ಕೆಲಸ ಯಾವದೂ ನೀವು ಸುಮ್ಮನೆ ಮಾಡಿಕೊಡುತ್ತಿಲ್ಲ. ಂತರೆ ಕುಳಿತರೆ ದುಡ್ಡು ಹಿರಿಯುವಿರಿ. ರೂಪಾಯಿ ತೆಗೆದುಕೊಂಡರೆ ಂದಾಣೆ ಭಾಗದಷ್ಟು ಕೆಲಸವಾದರೂ ಮಾಡದಿದ್ದರೆ ಆ ಹಣ ನಿಮ್ಮ ಕೈಗೆ ಹತ್ತುತ್ತದೆಯೇ ? ಶ್ರದ್ಧೆಯಿಟ್ಟು ನನ್ನ ಕೆಲಸ ಮಾಡಲು ಸಾಧ್ಯವಿದ್ದರೆ ಮಾಡಿ – ಇಲ್ಲದಿದ್ದರೆ ನನ್ನ ಕೇಸಿನ ಕಟ್ಟುಗಳನ್ನು ಂದಕ್ಕೆ ಕೊಟ್ಟು ಬಿಡಿ." ಎಂದರು. ರಾಘವೇಂದ್ರರಾಯರು ಕಣ್ಣು ಕೆಂಪಗೆ ಮಾಡಿಕೊಂಡು, ಮೇಜಿನ ಮೇಲಿದ್ದ ಎರಡು ಕವರುಗಳನ್ನು ಗೌಡರ ಮೇಲೆ ಎಸೆದು

"ಇವರ ಕಾಗದಗಳನ್ನೆಲ್ಲಾ ಕೊಟ್ಟು ಬಿಡಿರಿ ಶಾಮಣ್ಣ" ಎಂದು ತಮ್ಮ ಗುಮಾಸ್ತರಿಗೆ ಆಜ್ಞೆಮಾಡಿ ಹೊರಟುಹೋದರು. ರಾಯರ ವರ್ತನೆ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು. ಗೌಡರು ಕ್ಷಣಕಾಲ ದಂಗುಬಡಿದವರಂತೆ ನಿಂತಿದ್ದರು. ಶಾಮಣ್ಣ ಮೆಲ್ಲನೆ ಬಂದು ನೆಲದ ಮೇಲೆ ಬಿದ್ದಿದ್ದ ಕವರುಗಳನ್ನೆತ್ತಿ ರಾಘವೇಂದ್ರರಾಯರ ಮೇಜಿನ ಮೇಲೆ ಇಡಲು ಯತ್ನಿಸಿದರು. ಗೌಡರು ಅವುಗಳನ್ನು ತಮ್ಮ ಕೈಗೆ ತೆಗೆದುಕೊಂಡು

"ಉಳಿದ ಕವರುಗಳನ್ನೂ ಕೊಟ್ಟುಬಿಡಿ ಸ್ವಾಮಿ—ಇನ್ನೊಂದು ಸಲ ನಾನೇತಕ್ಕೆ ಬರಬೇಕು" ಎಂದರು.

ಶಾಮಣ್ಣ ಕವರುಗಳ ರಾಶಿಯಲ್ಲಿ ಹುಡುಕಿ ಗೌಡರ ಕವರುಗ ಳನ್ನು ತೆಗೆದಿಡುತ್ತಾ

"ಕೋಪದ ಹೊತ್ತು, ಹೋಗಲಿ ಬಿಡಿ ಗೌಡರೇ. ರಾಯರ ಸ್ವಭಾವ ನಿಮಗೆ ಗೊತ್ತೇ ಇದೆಯಲ್ಲಾ !"

"ಅವರು ತುಂಬ ದೊಡ್ಡವರು ಸ್ವಾಮಿ—ನಮ್ಮಂಥ ಬಡವರಿಗೆ ಅವರನ್ನು ಪೂರೈಸುವುದು ಸಾಧ್ಯವಿಲ್ಲ. ನನ್ನ ಕವರುಗಳನ್ನು ಕೊಟ್ಟು ಬಿಡಿ—ಫೀಸಿನ ಬಾಬತ್ತು ನಾನು ಏನಾದರೂ ಬಾಕಿ ಕೊಡಬೇಕೇನು?"

"ನೀವು ಕೊಡಬೇಕಾಗಿಲ್ಲ—ನಾವೇ ನಿಮಗೆ ಕೊಡಬೇಕಾಗಿದೆ."

"ಇರಲಿ, ಚಿಂತೆಯಿಲ್ಲ." ಎಂದು ಹೇಳಿ ತಮ್ಮ ಕವರುಗಳನ್ನು ಜೋಡಿಸಿಕೊಂಡು ಹೊರಟುಹೋದರು.

ಎರಡು ದಿವಸ ಯಾರಿಗೂ ಗೌಡರ ಪತ್ತೆ ಸಿಕ್ಕಲಿಲ್ಲ. ಟೆನಿಸ್ ಕ್ಲಬ್ಬಿನ ಕಡೆಯೂ ಅವರು ಸುಳಿಯಲಿಲ್ಲ.

ಮೂರನೆಯ ದಿವಸ ರಾತ್ರಿ ಎಂಟು ಗಂಟೆಯ ವೇಳೆಗೆ ಗೌಡರು ಮಾಧವರಾಯನನ್ನು ಹುಡುಕಿಕೊಂಡು ಬಂದರು.

"ಬನ್ನಿ. ಬನ್ನಿ ಗೌಡರೇ. ಎಲ್ಲಿಗೆ ಹೋಗಿ ಬಿಟ್ಟಿದ್ದಿರಿ. ಕ್ಲಬ್ಬಿನಲ್ಲಿ ಎಲ್ಲರೂ ನಿಮ್ಮನ್ನೇ ಕೇಳುತ್ತಿದ್ದರು."

"ಸ್ವಲ್ಪ ಕೆಲಸವಿತ್ತು—ಬರಲಿಲ್ಲ. ನಿಮ್ಮಲ್ಲಿ ತುರುತು ಮಾತ ನಾಡಬೇಕಾದ ವಿಷಯಗಳಿವೆ. ಪುರಸತ್ತಿದೆ ತಾನೇ ! "

"ಐದು ನಿಮಿಷ ಕುಳಿತುಕೊಳ್ಳಿ—ಮುಗಿಸಿಬಿಡುತ್ತೇನೆ" ಎಂದು ಕಕ್ಷಿಗಾರನಿಗೆ ಹೇಳಬೇಕಾದುದನ್ನು ಹೇಳಿ ಅವರನ್ನು ಕಳುಹಿಸಿ ಗುಮಾ ಸ್ತರ ಕಡೆ ತಿರುಗಿ

"ನೀವೂ ಹೋಗಿಬಿಡಿ ಸುಬ್ಬಯ್ಯ. ಉಳಿದುದನ್ನು ಬೆಳಿಗ್ಗೆ ನೋಡಿಕೊಂಡರಾಯಿತು." ಎಂದ. ಸುಬ್ಬಯ್ಯ ಹೋದಮೇಲೆ

"ಇಲ್ಲೇ ಕೂಡೋಣವೋ—ಮೇಲಕ್ಕೆ ಹೋಗೋಣವೋ ?"

"ಮೇಲಕ್ಕೇ ಹೋಗೋಣ ನಡೆಯಿರಿ ಸ್ವಾಮಿ—ಇಲ್ಲಿ ಕುಳಿತರೆ ಯಾರಾದರೂ ಬರುತ್ತಾರೆ."

ಮಾಧವರಾಯ ತಲೆಬಾಗಿಲು ಹಾಕಿ ಗೌಡರನ್ನು ಮಹಡಿಯ ಮೇಲೆ ಕರೆದುಕೊಂಡು ಹೋದ.

"ಏನು ಗೌಡರೇ—ತುರುತು ವಿಷಯವೆಂದಿರಿ ?"

"ಮೂರು ದಿವಸದ ಹಿಂದೆ ಬಿಡುಗಡೆ ಮಾಡಿಕೊಂಡೆ."

"ಏತರಿಂದ ?"

"ರಾಘವೇಂದ್ರರಾಯರ ಸೆರೆಯಿಂದ." ಎಂದು ತಮ್ಮ ಕಂಕುಳಲ್ಲಿ ವಸ್ತ್ರದಿಂದಾವೃತವಾಗಿದ್ದ ಕೇಸಿನ ಕಟ್ಟುಗಳನ್ನು ತೆಗೆದು ಪಕ್ಕದಲ್ಲಿದ್ದ ಮೇಜಿನಮೇಲೆ ಇಟ್ಟರು.

"ಕವರುಗಳನ್ನೂ ತಂದುಬಿಟ್ಟಿರುವಿರಿ ?"

"ನಾನು ತರಲಿಲ್ಲ ಸ್ವಾಮಿ. ರಾಘವೇಂದ್ರರಾಯರು ಅವುಗಳನ್ನು ನನ್ನ ಮುಖದ ಮೇಲೆ ಎಸೆದರು."

"ಏನು ಗೌಡರೇ ಹೀಗೆ ಹೇಳುವಿರಿ? ಎಲ್ಲಿಯಾದರೂ ಉಂಟೇ?"

ತಮ್ಮ ಅನುಭವವನ್ನು ಗೌಡರು ವಿಶದವಾಗಿ ನಿರೂಪಿಸಿದರು. ಮಾಧವರಾಯ ಚಕಿತನಾಗಿ

"ರಾಯರಿಗೆ ನೀವು ಎಷ್ಟು ಉಪಕಾರಮಾಡಿರುವಿರಿ. ಅವರ ಹಿತಸಂರಕ್ಷಣೆ ಎಷ್ಟು ಮಾಡಿರುವಿರಿ ! ನಿಮ್ಮನ್ನು ಅಪಮಾನಗೊಳಿಸುವು ದೆಂದರೆ ತೀರ ನಾಚಿಕೆಗೇಡು."

"ಈಗವರು ಅಹಂಕಾರದ ತುಟ್ಟತುದಿಯಲ್ಲಿದ್ದಾರೆ ಸ್ವಾಮಿ. ದುಡ್ಡಿನ ಹೆಮ್ಮೆಯಲ್ಲಿ ಯಾರ ಲಕ್ಷ್ಯವೂ ಇಲ್ಲ. ರಾಘವೇಂದ್ರರಾಯ ರನ್ನು ಮನುಷ್ಯರು ಎಂದು ತಿಳಿದಿರುವಿರೇನು—ಅದೊಂದು ದುಡ್ಡು ಮಾಡುವ ಯಂತ್ರ. ಅವರ ಆಫೀಸಿನಲ್ಲಿ ಈ ಪ್ರಕರಣವಾಗದಿದ್ದರೂ ನಾನು ಅವರ ಸಹವಾಸ ಬಿಡಲು ನಿರ್ಧರಿಸಿದ್ದೆ. ದೇವರೇ ಈ ಅವಕಾಶ ಕಲ್ಪನೆ ಮಾಡಿಕೊಟ್ಟ."

"ನಿಮಗೂ ಅವರಿಗೂ ತುಂಬ ವಿಶ್ವಾಸವಿದ್ದಿತಲ್ಲ ಗೌಡರೇ."

"ವಿಶ್ವಾಸ! ರಾಘವೇಂದ್ರರಾಯರ ಹೃದಯದಲ್ಲಿ ವಿಶ್ವಾಸ, ದಯೆ, ಕನಿಕರ, ಕೃತಜ್ಞತೆ ಮೊದಲಾದವುಗಳಿಗೆ ಸ್ಥಳವಿದೆಯೆಂದು

ಭಾವಿಸಿದ್ದೀರಾ—ನಾನೂ ನೀವೂ ಒಂದು ಬಾರಿ ನಾರಾಯಣಸ್ವಾಮಿ ಅಯ್ಯಂಗಾರ್ಯರನ್ನು ನೋಡಲು ಹೋದ ಸಂದರ್ಭ ನಿಮಗೆ ಜ್ಞಾಪಕ ವಿರಬಹುದು. ಅವರು ರಾಘವೇಂದ್ರರಾಯರನ್ನು ನೋಡಬಯಸಿ 'ಅವನೂ ನನ್ನ ಆಫೀಸಿನಲ್ಲಿ ಇದ್ದವನು ಗೌಡರೇ. ಈಗ ಅವನು ಗಣ್ಯ ನಾಗಿರುವುದು ನೋಡಿ ನನಗೆ ಅಸೂಯೆಯಿಲ್ಲ—ಹೆಮ್ಮೆಯಾಗಿದೆ. ನಾನು ನೋಡಲು ಬಯಸಿದೆ ಎಂದು ರಾಘವೇಂದ್ರನಿಗೆ ಹೇಳಿ' ಎಂದು ಅಪ್ಪಣೆ ಕೊಡಿಸಿದುದು ನಿಮಗೆ ಜ್ಞಾಪಕವಿರಬಹುದು."

"ಇದೆ."

"ಮಾರನೆಯ ಬೆಳಿಗ್ಗೆಯೇ ನಾನು ರಾಘವೇಂದ್ರರಾಯರನ್ನು ಕಂಡು ವಿಷಯ ತಿಳಿಸಿ 'ಸ್ವಾಮಿಯವರು ಹೆಚ್ಚು ದಿನ ಬದುಕುವ ಸಂಭವ ಕಾಣೆ—ನೀವು ದಯೆಯಿಟ್ಟು ಒಮ್ಮೆ ಹೋಗಿ ನೋಡಿಬನ್ನಿ' ಎಂದೆ. ಅದಕ್ಕೆ ರಾಘವೇಂದ್ರರಾಯರು 'ಹೋದರೆ ಹೋದ—ಪೀಡೆ ಕಳೆಯಿತು—ಯಾವ ಲೋಕ ಮುಳುಗಿ ಹೋಗುತ್ತದೆ' ಎಂದರು."

"ಹಾಃ ! ಹಾಗಂದರೆ !"

"ನಾನು ಸುಳ್ಳು ಹೇಳುವವನಲ್ಲವಷ್ಟೆ! "

"ನಿಮ್ಮ ಮಾತಿನ ಬಗ್ಗೆ ಸಂದೇಹವಿಲ್ಲ ಗೌಡರೆ. ರಾಘವೇಂದ್ರ ರಾಯರ ಬಾಯಿಂದ ಎಂಥ ಮಾತುಗಳು ಬಂತು ಎಂದು ಆಶ್ಚರ್ಯ ಪಡುತ್ತಿದ್ದೇನೆ."

"ಅಂದೇ ನನ್ನ ಮನಸ್ಸು ಕೆಟ್ಟುಹೋಯಿತು. ಇರಲಿ, ದುಡುಕ ಬಾರದು ಎಂದು ಸಹನೆ ತಂದುಕೊಂಡೆ.—ಸ್ವಾಮಿಯವರ ಕರ್ಮ ನಡೆದಿತ್ತು. ಅವರು ಕಣ್ಣು ಮುಚ್ಚಿಕೊಂಡರಲ್ಲಾ ಎಂದು ಊರಿಗೆ ಊರೇ ಗೋಳಾಡಿತು. ಷರೀಫ್ ಸಾಹೇಬರು, ಮಸ್ತಾರ್—ನಮ್ಮ ಜಾತಿ ಯಲ್ಲ, ಕುಲವಲ್ಲ, ತಂದೆಯನ್ನು ಕಳೆದುಕೊಂಡಂತೆ ಗೋಳಾಡಿದರು. ಈ ರಾಘವೇಂದ್ರರಾಯರ ಕಣ್ಣಲ್ಲಿ ಒಂದು ತೊಟ್ಟು ನೀರು ಬರಬೇಕಲ್ಲ ಸ್ವಾಮಿ—ಕೊನೆಗೂ ಸ್ವಾಮಿಯವರ ಮೇಲೆ ದ್ವೇಷ ಸಾಧಿಸಿದರು. ಇಲ್ಲಿಗೆ ನನ್ನ ತಾಳ್ಮೆ ಮುಗಿದಿತ್ತು."

"ಇನ್ನೂ ಇದೆಯೇನು ?"

"ಇದೆ. ಎಲ್ಲಾ ಕೇಳಿಬಿಡಿ ಸ್ವಾಮಿ.—ಟೆನಿಸ್ ಪಂದ್ಯಾಟಕ್ಕೆ ಕಪ್ ರಾಘವೇಂದ್ರರಾಯರು ಕೊಡಲಿ ಎಂದು ನಿರ್ಧರಿಸಿ ನೀವೆಲ್ಲಾ ನನ್ನನ್ನು ರಾಯರ ಹತ್ತಿರ ಕಳಿಸಿಕೊಟ್ಟಿರಲ್ಲಾ ಆಗೇನಾಯಿತು ಬಲ್ಲಿರಾ?"

"ಏನಾಯಿತು ?"

"ದೊಡ್ಡ ಹಗರಣವಾಯಿತು. ಡಾಕ್ಟರ, ನಿಮ್ಮ, ಮಸ್ತಾರ್ ಸಾಹೇಬರ, ಪುಟ್ಟಯ್ಯನವರ ಕುಲಗೋತ್ರವನ್ನೆಲ್ಲಾ ರಾಯರು ಜಾಲಾಡಿ, ನನಗೂ ಸಾಕಷ್ಟು ಛೀಮಾರಿ ಮಾಡಿದರು."

"ನೀವು ಮಾಡಿದ ಅಪರಾಧವೇನು ?"

"ನಿಮ್ಮ ಜತೆಯಲ್ಲಿರುವುದು. ಕಪ್ಪು ಬೇಕಾದರೆ ನಾನೇ ಕೊಡುತ್ತೇನೆ, ನಿಮ್ಮ ಹೆಸರಿರಲಿ ಎಂದು ಹೇಳಿದೆ. ರಾಯರು ಕೆರಳಿ 'ಕಚಡಾ ಜನಗಳ ಸಹವಾಸ ಮಾಡುವುದಕ್ಕೆ ನನಗೆ ಇಷ್ಟವಿಲ್ಲ ಗೌಡರೇ' ಎಂದು ಹೇಳಿದರು.—ಇಂಥ ಮನುಷ್ಯನ ಜತೆಯಲ್ಲಿ ಹೇಗೆ ವ್ಯವಹಾರ ಮಾಡಬೇಕು ನೀವೇ ಹೇಳಿಸ್ವಾಮಿ ?"

ಮಾಧವರಾಯ ತಲೆಯ ಮೇಲೆ ಕೈಹೊತ್ತು ಕುಳಿತುಕೊಂಡ. ಗೌಡರ ಮಾತು ಕೇಳಿ ಅವನ ಹೃದಯಕ್ಕೆ ಅಪಾರವೇದನೆಯಾಗಿತ್ತು. ಯಜಮಾನರ ಬಗ್ಗೆ ರಾಘವೇಂದ್ರರಾಯರು ಆಡಿದ ಮಾತಿನ ನೆನಪು ಬಂದು ಕಣ್ಣಲ್ಲಿ ನೀರು ಬಂತು.

"ನೀವು ಏಕೆ ಸ್ವಾಮಿ ದುಃಖಪಡಬೇಕು."

"ಗೌಡರೇ—ನಾರಾಯಣಸ್ವಾಮಿ ಅಯ್ಯಂಗಾರ್ಯರನ್ನು ನೀವೂ ಬಲ್ಲಿರಿ. ಅವರು ಯಾರಿಗೆ ಅನ್ಯಾಯ ಮಾಡಿದ್ದಾರೆ ಹೇಳಿ—ಗಟ್ಟಿಯಾಗಿ ಮಾತುಕೂಡ ಆಡಿದವರಲ್ಲವಲ್ಲ. ಅವರ ಮೇಲೇಕೆ ದ್ವೇಷ ?"

"ವಿಷಜಂತುವಿನಲ್ಲಿ ವಿಷವನ್ನಪೇಕ್ಷಿಸಬೇಕಲ್ಲದೆ ಅಮೃತವನ್ನಪೇಕ್ಷಿಸಬಾರದು ಸ್ವಾಮಿ. ಆದರೆ ಇಂಥ ಪುಂಡಾಟ ಬೆಳೆಯಗೊಟ್ಟರೆ ನಮ್ಮ ಊರು ಹಾಳಾಗಿ ಹೋಗುತ್ತದೆ."

"ಊರಿನಲ್ಲಿ ಪಾರ್ಟಿಗಳಾಗಿ ಹಗರಣವಾಗುತ್ತದಲ್ಲಾ ಗೌಡರೇ."

"ಅನಿವಾರ್ಯವಾದರೆ ಆಗಲಿ ಬಿಡಿ ಸ್ವಾಮಿ. ಸಮುದ್ರಮಥನ ವಾದಾಗ ಮೊದಲು ವಿಷ ಹುಟ್ಟಿತು. ಆಮೇಲೆತಾನೆ ಅಮೃತಹುಟ್ಟಿದ್ದು. —ನನ್ನ ಕಟ್ಟುಗಳನ್ನು ನೀವು ಒಪ್ಪಿಸಿಕೊಂಡು, ಇನ್ನುಮೇಲೆ ನನ್ನ ವಕೀಲರಾಗಿರಬೇಕೆಂದು ಕೇಳಿಕೊಳ್ಳುವುದಕ್ಕೆ ಬಂದೆ."

"ನಿಮ್ಮ ಸ್ನೇಹ-ವಿಶ್ವಾಸ ತುಂಬ ಅಮೂಲ್ಯವಾದುದು ಗೌಡರೇ. ಅದನ್ನು ದೊರಕಿಸಿಕೊಳ್ಳುವುದಕ್ಕೆ ನಾನು ಆತುರನಾಗಿದ್ದೇನೆ. ಈ ವಿಷಯ ನೀವು ಇನ್ನೊಮ್ಮೆ ಆಲೋಚಿಸಿ ತಿಳಿಸಿ."

"ಮೂರು ದಿವಸ ಯೋಚನೆ ಮಾಡಿಕೊಂಡೇ ಇವತ್ತು ಇಲ್ಲಿಗೆ ಬಂದಿದ್ದೇನೆ. ನೀವು ನಿರಾಕರಿಸಿದರೆ ನಾನಂತೂ ಬೇರೆ ಲಾಯರಲ್ಲಿ ಹೋಗುತ್ತೇನೆ. ರಾಘವೇಂದ್ರರಾಯರ ಆಫೀಸಿಗೆ ಇನ್ನೊಮ್ಮೆ ಕಾಲಿಡುವುದಿಲ್ಲ."

"ಕೊಡಿಯಪ್ಪ-ಮನೆಗೆ ಲಕ್ಷ್ಮಿ ಬಂದರೆ ನಾನೇಕೆ ಬೇಡವೆನ್ನಲಿ" ಎಂದು ಕಟ್ಟುಗಳನ್ನು ಗೌಡರಿಂದ ತೆಗೆದುಕೊಂಡ. ಗೌಡರ ಮನಸ್ಸಿ ನಿಂದ ದೊಡ್ಡ ಭಾರ ಇಳುಹಿದಂತಾಯಿತು.

"ರಾಘವೇಂದ್ರರಾಯರ ವಿಷಯ ಮರೆತುಬಿಡಿ ಗೌಡರೇ. ಕಳೆದಿದ್ದು ಕಟ್ಟಿಕೊಂಡೇಕೆ ಮನಸ್ಸು ಕೆಡಸಿಕೊಳ್ಳಬೇಕು."

"ಆ ವಿಷಯದಲ್ಲಿ ಮಾತ್ರ ನಿಮ್ಮ ಮಾತು ಕೇಳಲಾರೆ ಮಾಧವ ರಾಯರೇ. ರಾಘವೇಂದ್ರರಾಯರಿಗೆ ಬುದ್ಧಿ ಕಲಿಸಿದ ಹೊರತೂ ನನ್ನ ಮನಸ್ಸಿಗೆ ಸಮಾಧಾನವಿಲ್ಲ" ಎಂದು ಹೇಳಿ ಗೌಡರು ಹೋದರು.

ರಾಘವೇಂದ್ರರಾಯರು ಆಡಿದ ಮಾತಿಗೆಲ್ಲಾ 'ಕೋಲೇ ಬಸವ'ನಂತೆ ತಲೆಯಲ್ಲಾಡಿಸುತ್ತಿದ್ದ ಕೇಶವಯ್ಯಂಗಾರ್ಯರೂ ಗೌಡರನ್ನು ಹೀಯಾಳಿಸಿ ಮಾತನಾಡಿದುದು ಅಲೌಕಿಕವಾಯಿತೆಂದರು. ರಾಘವೇಂದ್ರರಾಯನಿಗೂ ಪಶ್ಚಾತ್ತಾಪವಾಗಿತ್ತು. ಯಾರನ್ನಾದರೂ ಸಂಧಾನಕ್ಕೆ ಬಿಟ್ಟು ಗೌಡರ ಸಖ್ಯವನ್ನು ಮತ್ತೆ ಬೆಳಸಬೇಕೆಂದು ಅವರು ಯೋಚಿಸುತ್ತಿರುವಲ್ಲಿ ಗೌಡರ ಪರವಾಗಿ ಮಾಧವರಾಯ ಕೇಸು ನಡಸುವುದಕ್ಕೆ ನಿಂತದ್ದನ್ನು ನೋಡಿದ ಮೇಲೆ ರಾಘವೇಂದ್ರರಾಯರ ತಳಮಳ

ಚ್ಚಾಯಿತು.

'ಕೆಲವೇ ವರ್ಷಗಳ ಹಿಂದೆ ತನ್ನ ಆಶ್ರಯದ ಯಾಚನೆಗೆ ಬಂದಿದ್ದ ಮಾಧವರಾಯ ನಾರಾಯಣಸ್ವಾಮಿ ಅಯ್ಯಂಗಾರ್ಯರ ಸಹಾಯದಿಂದ ಪಟ್ಟಣದಲ್ಲಿ ನಿಂತ!

'ಅಲ್ಪಾವಧಿಯಲ್ಲಿ ಜನಬಲವನ್ನು ಕೂಡಿಸಿಕೊಂಡ.

'ಟೆನಿಸ್ ಕ್ಲಬ್ಬಿನಿಂದ ತನ್ನನ್ನು ಸ್ಥಾನಭ್ರಷ್ಟನನ್ನಾಗಿ ಮಾಡಿದ.!

'ಈಗ ತನ್ನ ದೊಡ್ಡ ಕಕ್ಷಿಗಾರರನ್ನು ಎಳೆದುಕೊಂಡಿದ್ದಾನೆ!' ಎಂದು ರಾಯರು ಕುದಿಯತೊಡಗಿದರು. ಹೃದಯ ಪ್ರತೀಕಾರಕ್ಕೆ ಹಾತೊರೆಯುತ್ತಿತ್ತು. ಆದರೆ ಅದನ್ನು ಹೇಗೆ ಸಾಧಿಸಬೇಕೆಂಬುದೇ ದೊಡ್ಡ ಸಮಸ್ಯೆಯಾಗಿತ್ತು.

'ಜವರೇಗೌಡರು ನಮ್ಮನ್ನು ಬಿಟ್ಟುಹೋದುದ್ದಕ್ಕಿಂತಲೂ ಹೆಚ್ಚಾಗಿ, ಅವರ ಕಡೆಯಿಂದ ಬರುತ್ತಿದ್ದ ಕೇಸುಗಳೂ ನಿಂತು ಹೋಗುತ್ತ ವಲ್ಲಾ' ಎಂಬ ದುಃಖ ರಾಘವೇಂದ್ರರಾಯರನ್ನು ಪೀಡಿಸತೊಡಗಿತು.

ಕೆಲವು ಸಂದರ್ಭಗಳಲ್ಲಿ ರಾಘವೇಂದ್ರರಾಯರೂ, ಮಾಧವ ರಾಯ ಪ್ರತಿಸ್ಪರ್ಧಿಗಳಾಗಿ ಕೋರ್ಟಿನಲ್ಲಿ ನಿಲ್ಲಬೇಕಾಗುತ್ತಿತ್ತು. ಮಾಧವರಾಯನನ್ನು ಅಪಮಾನಗೊಳಿಸಲು ಕೇಸಿನ ಸಂದರ್ಭದಲ್ಲಿ ಸಿಕ್ಕುತ್ತಿದ್ದ ಯಾವ ಅವಕಾಶವನ್ನೂ ರಾಘವೇಂದ್ರರಾಯರು ಕಳೆದು ಕೊಳ್ಳುತ್ತಿರಲಿಲ್ಲ. ಭರ್ತ್ಸನೆ, ಕುಹಕ, ಕುಚೋದ್ಯಗಳೆಲ್ಲವನ್ನೂ ರಾಘವೇಂದ್ರರಾಯರು ಉಪಯೋಗಿಸಿದರೂ ಕೆಲವು ವೇಳೆ ಪ್ರಯೋ ಜನವಾಗುತ್ತಿರಲಿಲ್ಲ.

ಕಾನೂನು ಭಾಗವನ್ನು ಪಕ್ವಮಾಡಿಕೊಂಡು, ತನ್ನ ಕೇಸನ್ನು ಚೆನ್ನಾಗಿ ಸಿದ್ಧಪಡಿಸಿಕೊಂಡೇ ಮಾಧವರಾಯ ಕೋರ್ಟಿಗೆ ಬರುತ್ತಿದ್ದ. ಹೇಳಬೇಕಾದ ವಿಷಯಗಳನ್ನೂ ನಾಲ್ಕೇ ಮಾತಿನಲ್ಲಿ ವಿವರಿಸಿ ತನ್ನ ವಾದ ಮುಗಿಸುತ್ತಿದ್ದ. ನ್ಯಾಯಮೂರ್ತಿಗಳು ರಾಘವೇಂದ್ರರಾಯರ ದೀರ್ಘವಾದವನ್ನು ಸಹನೆಯಿಂದ ಕೇಳಬೇಕಾಗುತ್ತಿತ್ತು.

ರಾಘವೇಂದ್ರರಾಯರ ಮಾತುಗಾರಿಕೆ, ಡೌಲು, ವಕೀಲವೃಂದ

ದಲ್ಲಿ ಅವರಿಗಿದ್ದ ಸ್ಥಾನ, ಊರಿನಲ್ಲಿದ್ದ ಪ್ರಾಶಸ್ತ್ಯಗಳ ಪ್ರಭಾವಕ್ಕೆ ಸಿಕ್ಕಿ
ಒಮ್ಮೊಮ್ಮೆ ನ್ಯಾಯಮೂರ್ತಿಗಳು ಅವರ ಪರ ನಿರ್ಣಯ ಹೇಳುತ್ತಿದ್ದರು
ಆದರದು ಅಪೀಲ್‌ನಲ್ಲಿ ಮೇಲಿನ ಕೋರ್ಟಿನಿಂದ ನಿರಾಕರಿಸಲ್ಪಟ್ಟು
ಮಾಧವರಾಯನಿಗೆ ಜಯ ದೊರಕುತ್ತಿತ್ತು.

ವಿದ್ಯುತ್-ವೇಗದಲ್ಲಿ ಪ್ರಸರಿಸಿದ ಮಾಧವರಾಯನ ಕೀರ್ತಿಗೆ
ನಾರಾಯಣಸ್ವಾಮಿ ಅಯ್ಯಂಗಾರ್ಯರ 'ಅಂತಿಮ ಸಂದೇಶ'ವೆ
ಕಾರಣವಾಗಿತ್ತು.

'ಸಿವಿಲ್ ಪ್ರ್ಯಾಕ್ಟೀಸಿನಿಂದ ಲಕ್ಷಾಂತರ ಗಳಿಸುವುದಕ್ಕಾಗ
ದಿದ್ದರೂ ಚಿಂತೆಯಿಲ್ಲ. ಅದನ್ನೇ ಬೆಳಸಿಕೊಳ್ಳಿ. ಅದರಲ್ಲಿಯೂ
ಕಕ್ಷಿಗಾರನ ಪಕ್ಷ ನ್ಯಾಯವಾದುದೆಂದು ಮನದಟ್ಟುಮಾಡಿಕೊಂಡೆ
ಕೇಸು ತೆಗೆದುಕೊಳ್ಳಿ. ನಾವು ಬದುಕಬೇಕೆಂದು ಯಾರ ಹೊಟ್ಟೆಯ
ಮೇಲೂ ಹೊಡೆಯಬಾರದು-ಯಾರಿಗೂ ಅನ್ಯಾಯ ಮಾಡಬಾರದು.
ಎನ್ನುವ ವಜ್ರನುಡಿ ಸದಾ ಅವನ ಗಮನದಲ್ಲಿರುತ್ತಿತ್ತು. ಅನ್ಯಾಯಕ್ಕೆ
ಹೋಗಬೇಕೆಂದು ಅಂಜಿ ಅವನು ನೂರಾರು ವರಮಾನ ತರುತ್ತಿದ್ದ
ಹಲವು ಕೇಸುಗಳನ್ನು ನಿರಾಕರಿಸಿದ್ದ.

'ನ್ಯಾಯವಲ್ಲದ ಕೇಸುಗಳನ್ನು ಮಾಧವರಾಯರು ಮುಟ್ಟುವುದಿಲ್ಲ
ಎನ್ನುವ ಪ್ರತೀತಿ ಜನಜನಿತವಾಗಿ ಹಬ್ಬಿದುದಲ್ಲದೆ ನ್ಯಾಯಮೂರ್ತಿಗಳ
ಕಿವಿಗೂ ಮುಟ್ಟಿತ್ತು. ಮಾಧವರಾಯ 'ಅಡ್‌ಜರ್ನ್‌ಮೆಂಟ್, ಸ್ಟೇ
(Adjournment, Stay order) ಇತ್ಯಾದಿ ಸೌಲಭ್ಯಗಳನ್ನು
ಕೇಳಿದರೆ ಕೋರ್ಟು ಕೂಡಲೆ ಸಮ್ಮತಿಸುತ್ತಿತ್ತು.

ಮಾಧವರಾಯ ಹೆಮ್ಮರದಂತೆ ಬೆಳೆಯುತ್ತಿದ್ದ ತನ್ನ ಪ್ರ್ಯಾಕ್ಟೀ
ಸಿನ ಗುಂಗಿನಲ್ಲಿ ಅಲಮೇಲಮ್ಮನವರನ್ನು ಮರೆತಿರಲಿಲ್ಲ. ವಾರಕ್ಕೆ
ಎರಡು ಮೂರಾವರ್ತಿಯಾದರೂ ಮೈಸೂರಿಗೆ ಹೋಗಿ ಅವರನ್ನು ಕಂಡು
ಬರುತ್ತಿದ್ದ. ವಾರಕ್ಕೊಮ್ಮೆ ಗೋದಮ್ಮನವರು, ರುಕ್ಮಿಣಿ ಮೈಸೂರಿಗೆ
ಹೋಗಿ ಅಲಮೇಲಮ್ಮನವರನ್ನು ಮಾತಾಡಿಸಿಕೊಂಡು ಬರುತ್ತಿದ್ದರು
ಒಂದೊಂದು ದಿನ ಕೋರ್ಟಿನ ಕೆಲಸ ಮುಗಿದೊಡನೆಯೇ ಯಾರ

ಂದರೂ ಕಾರು ಸಿಕ್ಕಿದರೆ ಮಾಧವರಾಯ ಮೈಸೂರಿಗೆ ಹೋಗಿಬಿಡು
ದ್ದ. ಅಲಮೇಲಮ್ಮ ಅವನ ಉದ್ವೇಗ ಕಂಡು

"ಕೋರ್ಟಿನಿಂದ ಇತ್ತಲೇ ಬಂದಿರಾ ?" ಎಂದು ಕೇಳುತ್ತಿದ್ದರು.

"ಹೌದು ತಾಯಿ."

"ಮನೆಗೆ ಹೋಗಿ ಬರಬಾರದಾಗಿತ್ತೇ ?"

"ನಿಮ್ಮನ್ನು ನೋಡಬೇಕೆನಿಸಿತು. ಬಂದುಬಿಟ್ಟೆ." ಅಂದು
ಲಮೇಲಮ್ಮನವರು ಕೊಟ್ಟ ಉಪ್ಪಿಟ್ಟು ತಿಂದು ಕಾಫಿ ಕುಡಿದಮೇಲೇ
ಾಧವರಾಯನಿಗೆ ತೃಪ್ತಿ.

ಒಂದು ದಿನ ಮಾಧವರಾಯ ಬಂದಾಗ ಅಲಮೇಲಮ್ಮನವರು
ವನ ಯೋಗಕ್ಷೇಮ ವಿಚಾರಿಸಿಕೊಂಡು

"ಯಜಮಾನರು ಮಾಡಿರುವ ಆಜ್ಞೆ ಪಾಲಿಸಬೇಕಾದುದು ನಿಮ್ಮ
-ನನ್ನ ಕರ್ತವ್ಯವಲ್ಲವೇ ಮಾಧವರಾಯರೇ."

"ಹೌದು ತಾಯಿ—ಅದರಲ್ಲಿ ಅನುಮಾನವೇನಿದೆ ?"

"ಇನ್ನು ಮೇಲೆ ನೀವು ಕಛೇರಿಯ ಸಂಪಾದನೆ ಇಲ್ಲಿ ತಂದುಕೊಡ
ೇಕಾದದ್ದಿಲ್ಲ. ನಿಮ್ಮಿಂದ ಒಂದು ಕಾಸೂ ತೆಗೆದುಕೊಳ್ಳಕೂಡದೆಂದು
ನಗೆ ತಿಳಿಸಿದ್ದಾರೆ."

"ಅದು ನಿಮ್ಮ ಹಣ – ನಿಮ್ಮ ಹಣ ನಿಮಗೆ ತಲುಪಿಸುವುದ
ಪ್ಪೇ ?"

"ಹಿರಿಯಳು ನನ್ನ ಮಾತು ಕೇಳಿ. ನಿಮ್ಮ ವಯಸ್ಸು ಚಿಕ್ಕದು–
ೇವರು ಅನುಗ್ರಹಿಸಿದ್ದಾನೆ – ಕೈ ನಡೆಯುವಾಗ ನಾಲ್ಕು ಕಾಸು
ೂಡಿಟ್ಟುಕೊಳ್ಳಿ. ಮಹರಾಯರು ನನಗೇನೂ ಕಡಿಮೆಮಾಡಿಲ್ಲ –
ಂದು ವೇಳೆ ನನಗೆ ತೊಂದರೆ ಬಂದರೆ ನಾನೇ ಹೇಳಿಕಳಿಸಿ ಹಣ ತರಿಸಿ
ೂಳ್ಳುತ್ತೇನೆ, – ಆಗಬಹುದೋ ?"

"ನನ್ನ ಅಭಿಪ್ರಾಯ ಸೂಚಿಸುವುದಕ್ಕೆ ನೀವು ಅವಕಾಶವೇ
ೂಡುತ್ತಿಲ್ಲ."

"ಹೌದು–ಈ ವಿಷಯದಲ್ಲಿ ನಿಮ್ಮ ಮಾತು ಕೇಳಲು ಸಾಧ್ಯವಿಲ್ಲ."

೨೧

ಪಟ್ಟಣದ ಮುನಸೀಫರಾಗಿದ್ದ ಮಹದೇವಪ್ಪನವರಿಗೆ ಮೈಸೂರಿನಲ್ಲಿ ಸ್ವಂತ ಮನೆಯಿದ್ದುದರಿಂದ ಅವರು ಮೈಸೂರಿನಲ್ಲಿಯೇ ವಾಸವಾಗಿದ್ದರು. ಪ್ರತಿನಿತ್ಯ ತಮ್ಮ ಮೋಟಾರು ಬೈಸಿಕಲ್ಲಿನಲ್ಲಿ ಪಟ್ಟಣಕ್ಕೆ ಬಂದು, ಕೋರ್ಟು ಕೆಲಸ ಮುಗಿಸಿಕೊಂಡು ಮೈಸೂರಿಗೆ ಹಿಂದಿರುಗುತ್ತಿದ್ದರು.

ಮುನಸೀಫರು ಉಪಯೋಗಿಸುತ್ತಿದ್ದ 'ಇಂಡಿಯನ್' ಮೋಟಾರು ಬೈಸಿಕಲ್ ಅವರಿಗೆ ಯಾವದೋ ಕೋರ್ಟು ಆಕ್ಷನ್ನಿನಲ್ಲಿ ಅಗ್ಗಕ್ಕೆ ಸಿಕ್ಕಿತ್ತು. ಅದಕ್ಕೇ ಬಣ್ಣ ಬಳಿಸಿ, ರಿಪೇರಿ ಮಾಡಿಸಿ ಉಪಯೋಗಿಸುತ್ತಿದ್ದರು. ಮಹದೇವಪ್ಪನವರ 'ಇಂಡಿಯನ್' ಕಾಹಿಲೆ ಬೀಳದಿದ್ದ ದಿನವೇ ಇಲ್ಲ. ಮೈಸೂರಿನಿಂದ ನಾಲ್ಕು ಮೈಲಿ ಬಂದು ನಿಂತು ಹೋಗುವುದು ಅದಕ್ಕೆ ವಾಡಿಕೆಯಾಗಿತ್ತು. ಒಂದೊಂದು ದಿನ ಮುನಸೀಫರು ಅದನ್ನು ತಳ್ಳಿಕೊಂಡು, ನಿಟ್ಟುಸಿರು ಬಿಡುತ್ತಾ ಪಟ್ಟಣ ಸೇರುತ್ತಿದ್ದರು; ಒಂದೊಂದು ದಿನ ಗಾಡಿಯಮೇಲೆ ಹೇರಿಸಿಕೊಂಡು ಅದರ ಹಿಂದೆ ನಡೆದುಕೊಂಡು ಬರುತ್ತಿದ್ದರು.

ಕೆಲವು ದಿನ ಮೋಟಾರು ಬೈಸಿಕಲ್ಲು ರಿಪೇರಿಗಾಗಿ ಗ್ಯಾರೇಜ್ ಸೇರಿದಾಗ ಮುನಸೀಫರು ರೈಲ್ವೇ ಇಂಜನ್ನಿನಲ್ಲಿ ನಿಂತುಕೊಂಡು ಬರುತ್ತಿದ್ದರು. ಕೋರ್ಟಿಗೆ ಅವರು ಎಂದೂ ವೇಳೆಗೆ ಸರಿಯಾಗಿ ಬಂದುದೇ

ಇಲ್ಲ. ಮುನಸೀಫರ ವಿಚಾರದಲ್ಲಿ ಲಾಯರುಗಳಿಗೆ, ಕಕ್ಷಿಗಾರರಿಗೆ, ಕೋರ್ಟಿನ ನೌಕರರಿಗೆ ಸಾಕು ಸಾಕಾಗಿ ಹೋಗಿತ್ತು.

ಒಂದು ದಿನ ಬೆಂಗಳೂರಿನ **'ಮೈಸೂರು ಸಮಾಚಾರ'** ಪತ್ರಿಕೆಯಲ್ಲಿ ಪಟ್ಟಣದ ಮುನಸೀಫರ ಬಗ್ಗೆ ಒಂದು ಲೇಖನ ಬಂದಿತ್ತು. ಮುನಸೀಫರ ಮೋಟಾರು ಬೈಸಿಕಲ್ ಸಾಹಸ, ಇಂಜನ್ನಿನಲ್ಲಿ ಪ್ರಯಾಣಮಾಡುವ ವಿಷಯ, ಕೋರ್ಟಿಗೆ ಕ್ರಮವಾಗಿ ತಡಮಾಡಿ ಕೊಂಡು ಬರುವುದು ಎಲ್ಲವೂ ವಿಶದವಾಗಿ ನಿರೂಪಿತವಾಗಿತ್ತು.

ಮುನಸೀಫರು ಬಂದೊಡನೆಯೇ ಪತ್ರಿಕೆಯನ್ನು ತೆಗೆದುಕೊಂಡು ಅವರಿಗೆ ರಾಘವೇಂದ್ರರಾಯರು ತೋರಿಸಿದರು. ಮುನಸೀಫರ ಮುಖ ವಿವರ್ಣವಾಯಿತು.

"ಇದು ಯಾರ ಕಿತಾಪತಿ ರಾಘವೇಂದ್ರರಾಯರೇ?" ಎಂದು ಕೇಳಿದರು.

ರಾಘವೇಂದ್ರರಾಯರು ಸ್ವಲ್ಪವೂ ಅನುಮಾನಿಸದೆ

"ಮಾಧವರಾಯರು ಲೇಖನ ಬರೆದಿದ್ದಾರೆಂದು ಎಲ್ಲರೂ ಆಡಿ ಕೊಳ್ಳುತ್ತಿದ್ದಾರೆ ಸ್ವಾಮಿ." ಎಂದುಬಿಟ್ಟರು. ಮಾಧವರಾಯನ ವಿಷಯದಲ್ಲಿ ಮುನಸೀಫರಿಗಿದ್ದ ಸದಭಿಪ್ರಾಯ ಕೂಡಲೆ ಬದಲಾವಣೆ ಹೊಂದಿತು. ಅವರ ಕೃತಿಯಲ್ಲಿಯೂ ಆ ಬದಲಾವಣೆ ಒಡೆದು ಕಾಣಿಸ ತೊಡಗಿತು.

ಮಾಧವರಾಯನ ಒಂದು ಕೇಸು ಕರೆಯಲ್ಪಟ್ಟಿತು.

"ಪ್ರೋಸೆಸ್ ಹಣ ಕಟ್ಟಿಲ್ಲ ಸ್ವಾಮಿ. ಅಡ್‌ಜರ್ನ್‌ಮೆಂಟ್ ಕೊಡಬೇಕು" ಎಂದು ಪ್ರಾರ್ಥಿಸಿದ. ಮುನಸೀಫರು ಮರುಮಾತ ನಾಡದೆ

"ಸೂಟ್ ಡಿಸ್‌ಮಿಸ್ಡ್ (Suit Dismissed)" ಎಂದು ಬಿಟ್ಟರು, ಅಂದಿನಿಂದ ಮಾಧವರಾಯನ ಕೇಸುಗಳೆಲ್ಲದರ ಹಣೇಬರಹ ಇದೇ ರೀತಿಯಾಗುತ್ತ ಬಂದಿತು.

ಮಾಧವರಾಯನಿಗೆ ಚಿಂತೆ ಹತ್ತಿತ್ತು.

'ನನ್ನ ಬಗ್ಗೆ ವಿಶ್ವಾಸವಾಗಿದ್ದ ಮುನಸೀಫರೇಕೆ ಹೀಗೆ ವಿಪರೀತವಾಗಿ ನಡೆದುಕೊಳ್ಳುತ್ತಿದ್ದಾರೆ' ಎಂದು ವಿಚಾರ ಮಾಡಿದ. ಸಮಸ್ಯೆ ಬಗೆಹರಿಯಲೊಲ್ಲದು. ಮಾಧವರಾಯನ ಅವಸ್ಥೆ ನೋಡಿ ರಾಘವೇಂದ್ರರಾಯನಿಗೆ ಮಹದಾನಂದವಾಯಿತು. ಅವರು ಕೇಳಿದ ಸೌಲಭ್ಯಗಳನ್ನು ಮುನಸೀಫರು ಕೊಡತೊಡಗಿದರು.

ಆಧೇ ಚಿಗುರುತ್ತಿದ್ದ ತನ್ನ ವೃತ್ತಿವೃಕ್ಷಕ್ಕೆ ತಗುಲಿದ ಪೆಟ್ಟು ಕಂಡು ಮಾಧವರಾಯ ಅಧೀರನಾದ. ಮನಸ್ಸು ಅಲ್ಲಕಲ್ಲೋಲವಾಯಿತು.

ಒಂದು ವಾರ ಕಳೆದರೂ ಪರಿಸ್ಥಿತಿ ಸುಧಾರಿಸಲಿಲ್ಲ. ಜವರೇಗೌಡರು ಒಂದು ದಿನ ಬಂದು

"ಸ್ವಾಮಿ—ಕಾರಣ ನಾನು ಪತ್ತೆಮಾಡಿದ್ದೇನೆ" ಎಂದರು.

"ಏನದು ಗೌಡರೇ?"

"ನಡೆಯಿರಿ—ಬೆಂಗಳೂರಿಗೆ ಹೋಗಿ ಬರೋಣ. ಈ ವಿಷಯ ಯಾರಲ್ಲಿಯೂ ಬಾಯಿ ಬಿಡಬೇಡಿ. ರಾತ್ರಿ ಹನ್ನೊಂದಕ್ಕೆ ಮೇಲ್ ಬರುತ್ತದೆ, ಅದರಲ್ಲಿ ಹೊರಡಲು ಸಿದ್ಧರಾಗಿ."

"ಬೆಂಗಳೂರಿಗೆ ಹೋಗಿ ಏನು ಮಾಡುವುದು ಗೌಡರೇ."

"ನೀವು ಹೊರಡಿ ಸ್ವಾಮಿ—ಎಲ್ಲಾ ನಿಮಗೇ ತಿಳಿಯುತ್ತದೆ" ಎಂದು ಹೇಳಿ ಮಾಧವರಾಯನೊಂದಿಗೆ ಬೆಂಗಳೂರಿಗೆ ಬಂದರು.

ಮಾರನೆಯ ದಿನ ಮಾಧವರಾಯನನ್ನು ಜತೆಯಲ್ಲಿ ಕರೆದುಕೊಂಡು ಜವರೇಗೌಡರು 'ಮೈಸೂರು ಸಮಾಚಾರ' ಪತ್ರಿಕೆಯ ಕಾರ್ಯಾಲಯಕ್ಕೆ ಬಂದು ಸಂಪಾದಕರ ಭೇಟಿ ಬಯಸಿದರು.

ಗೌಡರ ಮುಖ ನೋಡಿದೊಡನೆಯೇ ಸಂಪಾದಕ ಹನುಮಂತಯ್ಯನವರು ಹೊರಗೆ ಬಂದು

"ಏನು ಗೌಡ—ಇಷ್ಟು ದೂರ ಬಂದು ಬಿಟ್ಟೆ" ಎಂದು ವಿಶ್ವಾಸಪೂರ್ವಕವಾಗಿ ಆಹ್ವಾನಿಸಿ ಒಳಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿ ಕಾಫಿ ತರಿಸಿದರು.

ಮಾಧವರಾಯನ ಪರಿಚಯ ಹನುಮಂತಯ್ಯನವರಿಗೆ ಮಾಡಿ

ಕೊಟ್ಟು ಗೌಡರು

"ನಿನ್ನಿಂದ ಒಂದು ಕೆಲಸವಾಗಿದೆ ಅದಕ್ಕಾಗಿ ಬಂದಿದ್ದೇನೆ. ನಮ್ಮ ಕೆಲಸ ಬೇಗ ಮುಗಿಸಿ ಬಿಟ್ಟರೆ ಮಧ್ಯಾಹ್ನದ ಗಾಡೀಗೆ ನಾವು ಊರಿಗೆ ಹೋಗುತ್ತೇವೆ."

"ನಿನ್ನ ಕೆಲಸ ಖಂಡಿತ ಬೇಗ ಮುಗಿಸಲ್ಲ. ಇವತ್ತು ನೀನೂ ಮಾಧವರಾಯರೂ ಇಲ್ಲೇ ಇದ್ದು ನಮ್ಮ ಮನೆಯಲ್ಲಿ ಊಟ ಮಾಡಬೇಕು. ಅನಂತರ ನಿಮ್ಮ ಕೆಲಸ ಮಾಡಿಕೊಡುತ್ತೇನೆ. ರಾತ್ರಿ ಗಾಡೀಗೆ ನೀವು ಪ್ರಯಾಣ ಮಾಡಬಹುದು. ಹಳೇ ಸ್ನೇಹಿತ—ಅಪರೂಪಕ್ಕೆ ಬಂದಿದ್ದೀ. ನಮ್ಮ ಮನೆಯಲ್ಲಿ ಒಪ್ಪತ್ತು ಊಟ ಮಾಡದೆ ಹೋಗುವುದೆಂದರೇನಯ್ಯಾ ?"

"ಇನ್ನೊಂದು ಸಾರಿ ಬಂದು ನಾಲ್ಕು ಊಟ ಮಾಡಿ ಹೋಗುತ್ತೇವಪ್ಪಾ. ಈ ಸಾರಿ ಕ್ಷಮಿಸು—ತುಂಬ ಅರ್ಜೆಂಟಾಗಿ ಊರಿಗೆ ಹೋಗಬೇಕಾಗಿದೆ."

"ನಿನ್ನ ಕೆಲಸವೇನು ಹೇಳು."

"ಈಗ್ಗೆ ಒಂದು ವಾರದ ಹಿಂದೆ ಪಟ್ಟಣದ ಮುನಸೀಫರ ಮೇಲೆ ನಿನ್ನ ಪತ್ರಿಕೆಯಲ್ಲಿ ಒಂದು ಲೇಖನ ಬಂದಿತ್ತು."

"ಹೂ—ಬಂದ ಹಾಗಿತ್ತು."

"ಇದೇನಯ್ಯಾ ಬಂದ ಹಾಗಿತ್ತು ಎನ್ನುವೆ—ನಿನ್ನ ಪತ್ರಿಕೆ ನೀನೇ ಓದುವುದಿಲ್ಲವೇ ?"

"ಒಂದು ರಹಸ್ಯ ಹೇಳುತ್ತೇನೆ-ನಿನ್ನಲ್ಲಿಯೇ ಇರಲಿ-ಹೋಟಲ್ ಮಾಲಿಕ ತನ್ನ ಹೋಟಲಿನಲ್ಲಿ ಕಾಫಿ ಕುಡಿಯುವುದಿಲ್ಲ; ಕ್ಷೌರಿಕ ತನ್ನ ಆಯುಸ್ಕರ್ಮ ಶಾಲೆಯಲ್ಲಿ ಕ್ಷೌರ ಮಾಡಿಸಿಕೊಳ್ಳುವುದಿಲ್ಲ; ಸಂಪಾದಕ ತನ್ನ ಪತ್ರಿಕೆ ತಾನು ಓದುವುದಿಲ್ಲ."

ಹನುಮಂತಯ್ಯನವರ ಮಾತಿಗೆ ಎಲ್ಲರೂ ಗಹಗಹಿಸಿ ನಕ್ಕರು.

"ಹೂ—ಬಂದಿತ್ತು, ಅದರಿಂದ ಏನಾಗಬೇಕು."

"ಯಾರು ಬರೆದವರು ?"

"ತಡೀ—ಲೇಖನ ಇದ್ದರೆ ಹುಡುಕಿಸಿ ಕೊಡುತ್ತೇನೆ" ಎಂದು 'ಶಾಸ್ತ್ರೀ' ಎಂದು ಕೂಗಿದರು. ಹರಕಲು ಷರಟು ಹಾಕಿಕೊಂಡು, ಮೂಗಿನ ತುದಿಯಲ್ಲಿ ಬೆಳ್ಳಿಯ ಕಟ್ಟಿನ ಕನ್ನಡಕವನ್ನು ಧರಿಸಿ ಒಂದು ಬರಗಾಲದ ಪ್ರಾಣಿ ಬಂದಿತು.

"ಪಟ್ಟಣದ ಮುನಸೀಫರ ಮೇಲೆ ನಾವು ಒಂದು ಲೇಖನ ಪ್ರಕಟಿಸಿದೆವು ನೋಡಿ—ಅದರ ಒರಿಜಿನಲ್ (Original) ಇದ್ದರೆ ತೆಗೆದುಕೊಂಡು ಬನ್ನಿ."

"ಇದೆ ಸಾರ್—ಫೈಲ್ ಮಾಡಿದ್ದೇನೆ—ತರುತ್ತೇನೆ" ಎಂದು ಶಾಸ್ತ್ರಿ ಅದೃಶ್ಯರಾದರು. ಹೋಟೇಲ್ ಮಾಣಿ ಕಾಫಿ ತಂದಿಡಲು ಹನುಮಂತಯ್ಯ ಬಲವಂತಮಾಡಿ ಗೆಳೆಯರಿಗೆ ಕಾಫಿ ಹುಯ್ದು ಕುಳಿತರು.

"ಅದು ಏಕೆ ಬೇಕಾಗಿತ್ತು."

"ಲೇಖನ ಬರಲಿ ತಡಿ—ಹೇಳುತ್ತೇನೆ" ಎಂದರು ಗೌಡರು. ಶಾಸ್ತ್ರಿ ಲೇಖನ ತಂದು ಸಂಪಾದಕರ ಕೈಗಿತ್ತರು. ಟೈಪಾಗಿದ್ದ ಲೇಖನ ಅದರ ಜತೆಯಲ್ಲಿ 'ಪ್ರಕಟನೆಯ ಕೃಪೆ' ಕೋರಿದ್ದ ರಾಘವೇಂದ್ರರಾಯರ ಪತ್ರ ಎರಡೂ ಇದ್ದವು.

ಗೌಡರು ಕಾಗದದ ಸಂದರ್ಭ ವಿವರಿಸಿ, ಕಾಗದವನ್ನು ಕಿಸೆ ಸೇರಿಸಿದರು.

"ಪತ್ರಿಕಾ ಕಛೇರಿಗಳ ರಹಸ್ಯವಯ್ಯಾ ಅದು. ನಮ್ಮ ಬಾತ್ಮಿ ದಾರರ ಹೆಸರು ನಾವು ಬಿಟ್ಟುಕೊಡಬಾರದು."

"ನಿನ್ನ ಕಾಗದ ನಿನಗೇ ಕಳುಸಿಕೊಡುತ್ತೇನೆ ಸುಮ್ಮನಿರು. ತುಂಬ ಉಪಕಾರವಾಯಿತು ಹನುಮಂತಯ್ಯ." ಎಂದು ಹೇಳಿ ಗೌಡರು ಮಾಧವರಾಯನೊಂದಿಗೆ ಹೊರಟು, ಅಂದಿನ ಮಧ್ಯಾಹ್ನದ ಗಾಡಿ ಯಲ್ಲೇ ಪಟ್ಟಣ ಸೇರಿದರು.

ಮಾರನೆಯ ದಿನ ಮುನಸೀಫರು ಬಂದು ಚೇಂಬರ್ಸಿಗೆ ಹೋದ ಕೂಡಲೆ, ಅವರನ್ನು ಹಿಂಬಾಲಿಸಿ ಮಾಧವರಾಯ ಹೋದ. ಮುನಸಿ

ಫರು ಆವನಿಗೆ ಕೂಡುವುದಕ್ಕೂ ಹೇಳದೆ ಗುರುಗುಟ್ಟುತ್ತಾ

"ಏನ್ರೀ ಬಂದಿರಿ ?" ಎಂದರು.

"ಒಂದು ಅರಿಕೆ ಮಾಡಿಕೊಳ್ಳುವುದಿತ್ತು ಬಂದೆ ಸಾರ್."

"ಕೋರ್ಟಿನಲ್ಲಿಯೇ ಹೇಳಿಕೊಳ್ಳಿ."

"ಅಲ್ಲಿ ಹೇಳಿಕೊಳ್ಳುವ ವಿಷಯವಲ್ಲ—ಅದಕ್ಕೋಸ್ಕರ ಇಲ್ಲಿಗೆ ಬಂದೆ."

"ಏನು ಬೇಗ ಹೇಳಿ."

"ತಮ್ಮ ಕೋರ್ಟಿನಲ್ಲಿ ನನಗೆ ಪೂರ್ಣ ನ್ಯಾಯ ದೊರಕುತ್ತಿತ್ತು ಸ್ವಾಮಿ. ನನ್ನ ವಿಷಯದಲ್ಲಿ ತುಂಬ ವಿಶ್ವಾಸವಾಗಿದ್ದಿರಿ."

"ವಿಶ್ವಾಸಕ್ಕೆ ತಕ್ಕ ಗೌರವ ತೋರಿಸಿದಿರಲ್ಲಾ !"

"ನನ್ನ ಅಪರಾಧವೇನೆಂಬುದು ನನಗೆ ಗೊತ್ತಾಗಿಲ್ಲ ಸ್ವಾಮಿ. ಅದನ್ನು ಕೇಳಿ ತಿಳಿದುಕೊಂಡು, ತಪ್ಪುಮಾಡಿದ್ದರೆ ತಮ್ಮ ಕ್ಷಮಾಪಣೆ ಕೇಳಿಕೊಳ್ಳಬೇಕೆಂದೇ ಇಲ್ಲಿಗೆ ಬಂದೆ."

"ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ಥಿ ಎನ್ನುವಹಾಗೆ ಮಾತನಾಡುತ್ತೀರಲ್ರೀ....'ಮೈಸೂರು ಸಮಾಚಾರ' ಪತ್ರಿಕೆಯಲ್ಲಿ ನನ್ನ ಮೇಲೆ ಆ ಲೇಖನ ಬರೆದವರು ಯಾರು ?"

"ಯಾರೆಂದು ತಮ್ಮ ಅಭಿಪ್ರಾಯ ?"

"ನೀವು—ನೀವೇ ಆ ಕೆಲಸ ಮಾಡಿರಬೇಕು."

ಮಾಧವರಾಯ ಕಿಸೆಯಿಂದ ಕಾಗದ ತೆಗೆದು ಮುನಿಸೀಫರ ಕೈಯಲ್ಲಿಟ್ಟ. ಮಹದೇವಪ್ಪನವರು ಅದನ್ನು ಸಾವಧಾನದಿಂದ ಪರಾಮರ್ಶಿಸಿ

"ಅಯೋಗ್ಯ—ತಾನು ಮಾಡಿ ನಿಮ್ಮಮೇಲೆ ಚಾಡಿ ಹೇಳಿದ್ದಾನಲ್ಲಾ–ಮಾಧವರಾಯರೇ ನನ್ನದು ಸರ್ವಾಪರಾಧವಾಯಿತು–ಕ್ಷಮಿಸಿ. ನಾನು ಈ ಊರಿನಲ್ಲಿರುವವರೆಗೆ ಈ ಕೋರ್ಟು ನಿಮ್ಮದೆಂದು ತಿಳಿದುಕೊಳ್ಳಿ. ನೀವು ದೊಡ್ಡ ಮನುಷ್ಯರೆಂದು ಕೇಳಿದ್ದೆ—ಇವತ್ತು ನನಗೇ ಖಚಿತವಾಗಿ ಗೊತ್ತಾಯಿತು." ಎಂದರು.

ಮಾಧವರಾಯ ಕಾಗದವನ್ನು ಹಿಂದಕ್ಕೆ ತೆಗೆದುಕೊಂಡ.

ಚೇಂಬರ್ಸ್ ಬಿಟ್ಟು ಹೊರಬಂದೊಡನೆಯೇ ಜವರೇಗೌಡರ
ಪಿಸುಮಾತಿನಲ್ಲಿ

"ಏನಾಯಿತು ಸ್ವಾಮಿ" ಎಂದರು.

"ಇನ್ನು ತಮಾಷೆ ನೋಡುವಿರಂತೆ ಗೌಡರೇ." ಎಂದು ಮಾಧ
ರಾಯ ಉತ್ತರವಿತ್ತ.

ಮಾಧವರಾಯನ ಕಡೆ ತಿರುಗಿದ್ದ ಮುನಸೀಫರ ವಕ್ರದೃಷ್ಟಿ
ಅಂದಿನಿಂದ ರಾಘವೇಂದ್ರರಾಯರ ಕಡೆ ತಿರುಗಿತು. ಅವರ ಕೇಸು
ಳಿಲ್ಲಾ ಡಿಸ್‌ಮಿಸ್–ಅಡ್ಜರ್ನ್‌ಮೆಂಟ್ ಸಿಕ್ಕುವಂತಿಲ್ಲ–ಹೆಚ್ಚು ಮಾತ
ಡಿದರೆ ಆಕ್ಷೇಪಣೆ—ಕೋರ್ಟಿಗೆ ನಮಸ್ಕರಿಸುವುದನ್ನು ಮರೆತರೆ ಖಂಡನ
ಆರಂಭವಾಯಿತು.

ತಾವು ಎಸೆದ ಬಾಣ ತಮ್ಮ ಕಡೆಯೇ ತಿರುಗಿದುದನ್ನು ಕಂಡ
ರಾಘವೇಂದ್ರರಾಯರು ಅವಾಕ್ಕಾದರು. ಹೇಗಾದರೂ ಮಾಡಿ ಮುನ
ಸೀಫರನ್ನು ವರ್ಗಮಾಡಿಸಬೇಕೆಂದು ಊರಿನಲ್ಲಿ ತಮಗೆ ಬೇಕಾಗಿದ್ದ
ರನ್ನು ಕೂಡಿಸಿ, ದಿವಾನರಿಗೂ, ಚೀಫ್ ಜಸ್ಟಿಸ್‌ರವರಿಗೂ ಅಜಿ
ಹಾಕಿಸಿದರು.

ರಾಘವೇಂದ್ರರಾಯರ ಸಾರ್ವಜನಿಕಜೀವನಪ್ರಭಾವದಿಂ
ಅಧಿಕಾರಿ ವರ್ತುಲದಲ್ಲಿಯೂ ಅವರಿಗೆ ಸ್ವಲ್ಪ ವರ್ಚಸ್ಸಿತ್ತು. ಒಂದೆ
ತಿಂಗಳಲ್ಲಿ ಮಹಾದೇವಯ್ಯನವರಿಗೆ ಮೈಸೂರಿಗೆ ವರ್ಗವಾಯಿತು.

ಅವರ ಸ್ಥಾನಕ್ಕೆ ಕೋಲಾರದ ಮುನಸೀಫರಾಗಿದ್ದ ಶ್ರೀಕಂ
ಶಾಸ್ತ್ರಿಗಳು ಬಂದರು.

ಮೊದಲೇ ತುಪ್ಪದಲ್ಲಿ ಅದ್ದಿದ್ದ ಮಾಧವರಾಯನ ರೊಟ್ಟಿ ಜಾ
ತುಪ್ಪಕ್ಕೇ ಬಿದ್ದಂತಾಯಿತು.

೨೨

ರುಕ್ಮಿಣಿಗೆ ಒಂದು ದೊಡ್ಡ ಕೆಲಸ ಹಚ್ಚುವುದಕ್ಕೇ ರಂಗಮ್ಮನವರು ಪಟ್ಟಣಕ್ಕೆ ಬಂದು ಹೋದಂತಾಗಿತ್ತು. ಕಮಲೂ ಬೆಳೆದಿದ್ದಳು. ಚಿಕ್ಕಮ್ಮ ಶ್ರೀದೇವಿಗೆ ಕಮಲೂ ಹೊಂದಿಕೊಂಡಿದ್ದಳು. ಮನೆಗೆಲಸಗಳ ಭಾರವನ್ನು ಗೋದಮ್ಮನವರು ತಮ್ಮ ಮೇಲೆ ಹಾಕಿಕೊಂಡಿದ್ದರು. ರುಕ್ಮಿಣಿಗೆ ಸ್ವಲ್ಪ ಪುರಸತ್ತು, ವಿಶ್ರಾಂತಿ ಸಿಕ್ಕಬೇಕೆಂದು ಎಲ್ಲರೂ ಪ್ರಯತ್ನಿಸಿದ್ದರು. ವೈದ್ಯವೃತ್ತಿ ಅವಳಿಗೆ ಗಂಟುಬಿದ್ದು ಎಲ್ಲ ವೇಳೆಯನ್ನೂ ಕಬಳಿಸುತ್ತಿತ್ತು.

ಗೋದಮ್ಮನವರ ದುಡಿಮೆ ನೋಡಿ ಒಮ್ಮೆಮ್ಮೆ ರುಕ್ಮಿಣಿ ಬೇಸತ್ತು

"ಅಮ್ಮ ಒಳ್ಳೆಯ ಕೆಲಸಮಾಡಿ ಹೋದಳು. ನಾನು ಯಾವ ಘನಪಂಡಿತಳು ಎಂದು ವೈದ್ಯಮಾಡಬೇಕು." ಎಂದರೆ ಗೋದಮ್ಮನವರು

"ನೀನು ಘನವೈದ್ಯಳು ಹೌದೋ ಅಲ್ಲವೋ ನಾನು ಕಾಣೆನಮ್ಮ. ನೀನು ಒಂದು ಚಿಟಿಕೆ ಮಣ್ಣುಕೊಟ್ಟರೂ ಅದು ಅಮೃತವಾಗುತ್ತಿದೆಯಲ್ಲಾ; ಬೇಸರಪಟ್ಟುಕೊಳ್ಳಬೇಡ ರುಕ್ಕೂ. ಭಗವಂತ ನಿನಗೆ ಕೊಟ್ಟಿರುವ ವರ ಇದು." ಎಂದು ಹೇಳುತ್ತಿದ್ದರು.

ರುಕ್ಮಿಣಿಗೆ ಐದು ತಿಂಗಳು ತುಂಬುತ್ತ ಬಂದಿತ್ತು. ದೇಹ ಹೆಚ್ಚು ದುಡಿಮೆಯನ್ನೂ ಮನಸ್ಸು ಹೆಚ್ಚು ಚಿಂತೆಯನ್ನೂ ತಡೆಯುತ್ತಿರಲಿಲ್ಲ.

ಆದರೆ ರೋಗಿಗಳು ಬಂದಾಗ ತನ್ನ ಆಯಾಸ; ಚಿಂತೆಯನ್ನು ತೋರ ಗೊಡುತ್ತಿರಲಿಲ್ಲ. ನಸುನಗುತ್ತಾ ರೋಗನಿಧಾನ ಮಾಡಿ ಔಷಧ ಕೊಡುತ್ತಿದ್ದಳು. ತನಗೆ ತಿಳಿಯದಿದ್ದರೆ ತಾಯಿಗೆ ಬರೆದು ತಿಳಿದು ಕೊಂಡು ಚಿಕಿತ್ಸೆ ನಡೆಸುತ್ತಿದ್ದಳು. ಒಮ್ಮೊಮ್ಮೆ ಮಹತ್ವದ ಪರೀಕ್ಷಾ ಪ್ರಸಂಗಗಳು ಬಂದೊದಗುತ್ತಿದ್ದವು. ಡಾಕ್ಟರುಗಳು ಕೈಬಿಟ್ಟ ಕೇಸುಗ ಳನ್ನು ತಂದು, ರುಕ್ಮಿಣಿಗೆ 'ಗುಣಪಡಿಸು' ಎಂದು ಹೇಳುತ್ತಿದ್ದರು. ರುಕ್ಮಿಣಿ ತನ್ನ ಅಸಾಮರ್ಥ್ಯವನ್ನು ಸೂಚಿಸಿದರೆ ಜನ ನಂಬುತ್ತಿರಲಿಲ್ಲ.

"ನಿಮ್ಮ ಕೈಮುಟ್ಟ ಏನಾದರೂ ಕೊಡಿ ತಾಯಿ—ಗುಣವಾಗು ತ್ತದೆ" ಎಂದು ಹೇಳುತ್ತಿದ್ದರು. ರುಕ್ಮಿಣಿ ಭಯಗ್ರಸ್ತಳಾಗಿ

"ನನ್ನ ಗತಿಯೇನಮ್ಮ" ಎಂದು ಕೇಳುತ್ತಿದ್ದಳು.

"ದೇವರನ್ನು ಸ್ಮರಿಸಿಕೊಂಡು ನಿನಗೆ ತಿಳಿದುದು ಕೊಡಮ್ಮ" ಎಂದು ಹೇಳುತ್ತಿದ್ದರು.

ವೃಂದಮ್ಮನವರು ಒಂದು ದಿನ ಡಾಕ್ಟರ ಹೆಂಡತಿ ಸಿಂಗಾರಮ್ಮನ ವರನ್ನು ಕರೆದುಕೊಂಡು ಬಂದಾಗ ರುಕ್ಮಿಣಿಯ, ಜಂಘಾಬಲವೇ ಉಡು ಗಿಹೋಯಿತು. 'ಇದೇನು ಪರೀಕ್ಷೆ ಭಗವಂತ' ಎಂದು ಚಡಪಡಿಸಿದಳು.

ಸಿಂಗಾರಮ್ಮನವರನ್ನು ರುಕ್ಮಿಣಿಯ ಬಳಿಗೆ ಕರೆದುಕೊಂಡು ಹೋಗಬೇಕೆಂದು ವೃಂದಮ್ಮ ಬಹಳ ದಿವಸಗಳಿಂದ ಪ್ರಯತ್ನ ನಡೆಸಿ ದ್ದರು. ರುಕ್ಮಿಣಿಯ ಚಿಕಿತ್ಸಾನೈಪುಣ್ಯದಲ್ಲಿ ಸಿಂಗಾರಮ್ಮನವರಿಗೆ ಸ್ವಲ್ಪವೂ ನಂಬಿಕೆ ಇರಲಿಲ್ಲ.

"ಬೆಂಗಳೂರು, ಮೈಸೂರು ಡಾಕ್ಟರುಗಳೆಲ್ಲಾ ಕೈಬಿಟ್ಟಿರುವಾಗ ಪಾಪ ರುಕ್ಮಿಣಮ್ಮ ಏನು ಮಾಡುತ್ತಾರ್ರೀ. ನನ್ನ ಯಜಮಾನರೇ ಡಾಕ್ಟರು—ಅವರೇ ನನ್ನ ಕಾಹಿಲೆ ಬಗ್ಗೆ ನಿರಾಶರಾಗಿದ್ದಾರೆ."

"ರುಕ್ಮಿಣಿಯ ಚಿಕಿತ್ಸೆಯಿಂದ ನಿಮ್ಮ ಕಾಹಿಲೆ ಗುಣವಾಗುತ್ತದೋ ಇಲ್ಲವೋ ನಾನು ಖಂಡಿತವಾಗಿ ಹೇಳಲಾರೆ. ಆದರೆ ನಿಮ್ಮ ಪರಿಸ್ಥಿತಿ ಈಗ ಇರುವುದಕ್ಕಿಂತ ಹೆಚ್ಚು ಕೆಡುವುದಿಲ್ಲವೆಂದು ಹೇಳಬಲ್ಲೆ. ನಿಮ ಗಾಗುವ ನಷ್ಟವೇನು ?—ಅವಳಿಗೆ ಒಂದುಸಲ ಕೈತೋರಿಸಿ. ಗುಣ

ಕಂಡರೆ ಚಿಕಿತ್ಸೆ ಮುಂದುವರಿಸಿ—ಗುಣ ಕಾಣದಿದ್ದರೆ ಅಲ್ಲಿಗೇ ಬಿಡಬಹುದಲ್ಲ."

"ಗುಣವಾಗಬಾರದು ಎಂದು ನನ್ನ ಮನಸ್ಸಿನಲ್ಲಿದೆಯೇ ವೃಂದಮ್ಮನವರೇ—ಈ ನರಕಯಾತನೆ ಅನುಭವಿಸುವುದಕ್ಕಿಂತ ವಿಷ ಕುಡಿದು ಪ್ರಾಣ ಬಿಡುವುದು ಲೇಸು. ಮುಟ್ಟಿನ ದಿನ ಹತ್ತಿರ ಬಂದಿತೆಂದರೆ ನೈನಡುಗಿ ಹೋಗುತ್ತದೆ. ನೋವು ಎಷ್ಟು ಬೇಕಾದರೂ ಅನುಭವಿಸಬಲ್ಲೆ ಆದರೆ ಮಕ್ಕಳಾಗುವುದಿಲ್ಲ ಎನ್ನುವ ದುಃಖ........"

"ನೀವು ಯೋಚನೆ ಮಾಡಬೇಡ್ರೀ. ಎಲ್ಲಾ ಸರಿಹೋಗುತ್ತದೆ ಎಂದು ನನ್ನ ಅಂತರಾತ್ಮ ಹೇಳುತ್ತಿದೆ. ರುಕ್ಮಿಣಿ ವಯಸ್ಸಿನಲ್ಲಿ ಚಿಕ್ಕವಳು—ಅವಳಿಗೆ ಹೆಚ್ಚು ಅನುಭವವಿಲ್ಲ. ಆದರೆ ಅವಳಿಗೆ ದೈವ ಸಹಾಯವಿದೆ ಸಿಂಗಾರಮ್ಮ."

ವೃಂದಮ್ಮನವರ ಒತ್ತಾಯಕ್ಕೆ ಸಿಂಗಾರಮ್ಮ ರುಕ್ಮಿಣಿಯನ್ನು ಕಾಣಲು ಬಂದರು.

ರುಕ್ಮಿಣಿ ಅವರ ಕಾಹಿಲೆಯ ಲಕ್ಷಣಗಳೆಲ್ಲವನ್ನೂ ತಿಳಿದುಕೊಂಡು

"ನಾಳೆ ಬೆಳಿಗ್ಗೆ ಬರೀ ಹೊಟ್ಟೆಯಲ್ಲಿ ಬನ್ನಿ—ನಾಡಿ ನೋಡುತ್ತೇನೆ. ಈ ಸಾರೆ ನೀವು ಹೊರಗಾದ ಕೂಡಲೆ ತಿಳಿಸಿದರೆ ಔಷಧ ಕೊಡುತ್ತೇನೆ."

"ಗುಣವಾಗಬಹುದೇ ರುಕ್ಮಿಣಮ್ಮ"?

"ಗುಣವಾಗಲಿ ಎಂದು ಔಷಧ ಕೊಡುತ್ತೇನಮ್ಮ. ಉಳಿದದ್ದು ಭಗವಂತನಿಗೆ ಸೇರಿದೆ.—ಇನ್ನೊಂದು ಮಾತು—ನೀವು ಬಹಳ ಕಾಫಿ ಕುಡಿಯುತ್ತೀರಾ ?"

"ಕಾಫಿಯೆಂದರೆ ನನಗೆ ಪಂಚಪ್ರಾಣ."

"ಕಾಫಿ ಕುಡಿಯುವುದನ್ನು ಪೂರ್ತಿ ನಿಲ್ಲಿಸಿಬಿಡಬೇಕು. ಔಷಧ ಆರಂಭಿಸಿದ ಮೇಲಂತೂ ಕಾಫಿ ಮುಟ್ಟಲೇಕೂಡದು."

"ಎಷ್ಟು ದಿನ ತೆಗೆದುಕೊಳ್ಳಬೇಕು."

"ಮೊದಲು ನಲವತ್ತೆಂಟು ದಿನ ತೆಗೆದುಕೊಳ್ಳಿ. ಆವೇಳೆಗೆ ಸ್ವಲ್ಪ

ನಾದರೂ ಗುಣ ಕಂಡು ಬಂದರೆ ಚಿಕಿತ್ಸೆ ಮುಂದುವರಿಸುತ್ತೇನೆ. ಆರು ತಿಂಗಳಾದರೂ ಬಿಡದೆ ಔಷಧ ತೆಗೆದುಕೊಳ್ಳಬೇಕು."

"ಔಷಧದ ಖರ್ಚಿಗೇನಾದರೂ ಹಣ........"

"ಅದೊಂದು ವಿಷಯ ಮಾತ್ರ ನೀವು ಪ್ರಸ್ತಾಪಿಸಲೇ ಕೂಡದು. ಹಣಕ್ಕೂ ನಮ್ಮ ಔಷಧಕ್ಕೂ ಬದ್ಧದ್ವೇಷ."

"ಔಷಧದ ಖರ್ಚು ನೀವು ಕೈಯಿಂದ ಹಾಕುವುದು ಯಾವ ನ್ಯಾಯ ರುಕ್ಮಿಣಮ್ಮನವರೇ ?"

"ನಮ್ಮ ಔಷಧಗಳು ನೂರಾರು ರೂಪಾಯಿ ಖರ್ಚಿನವಲ್ಲ. ಅಲ್ಪ ಸ್ವಲ್ಪ ಖರ್ಚು ಮಾಡುವ ಶಕ್ತಿ ದೇವರು ಕೊಟ್ಟಿದ್ದಾನಮ್ಮ."

ಮಾರನೆಯ ಬೆಳಿಗ್ಗೆ ಹೊತ್ತು ಹುಟ್ಟುವ ವೇಳೆಗೇ ಬಂದ ಸಿಂಗಾರಮ್ಮನವರ ನಾಡಿ ಪರೀಕ್ಷಿಸಿ ರುಕ್ಮಿಣಿ ಒಂದು ಕಷಾಯ ಕೊಟ್ಟು

"ನೀವು ಹೊರಗಾಗುವುದಕ್ಕೆ ಇನ್ನೂ ಎಷ್ಟು ದಿನವಿದೆ ?"

"ಹತ್ತು ದಿನ "

"ಈ ಕಷಾಯ ದಿನಸಕ್ಕೆ ಎರಡುಸಲ ತೆಗೆದುಕೊಳ್ಳಿ.—ಹತ್ತು ದಿವಸಗಳು ಕಳೆದಮೇಲೆ ನೋಡೋಣ" ಎಂದು ಹೇಳಿದಳು. ಅಂದೇ ರುಕ್ಮಿಣಿ ತಾಯಿಗೆ ವಿಶದವಾಗಿ ಕಾಗದ ಬರೆದು ನಾಡಿಯ ಲಕ್ಷಣ, ರೋಗದ ವಿಧಾನ, ತಾನು ಕೈಗೊಂಡ ಚಿಕಿತ್ಸೆಗಳನ್ನು ವಿವರಿಸಿದಳು.

ವಾರಾಂತ್ಯದಲ್ಲಿ ರಂಗಮ್ಮನವರಿಂದ ಮಾರುತ್ತರ, ಪುಡಿಯ ಒಂದು ಪೊಟ್ಟಣ ರುಕ್ಮಿಣಿಯ ಕೈಸೇರಿತು. ರಂಗಮ್ಮನವರು ಚಿಕಿತ್ಸಾ ಕ್ರಮಕ್ಕೆ ಸಮ್ಮತಿಸಿ, 'ನೋವು ಕಾಣಿಸಿಕೊಂಡ ಕೂಡಲೇ ಈ ಪುಡಿಯನ್ನು ಕೊಡು' ಎಂದು ಮಗಳಿಗೆ ಬರೆದಿದ್ದರು.

ಹತ್ತುದಿನ ರುಕ್ಮಿಣಿಯ ಮನಸ್ಸಿಗೆ ವಿಶೇಷ ಆತಂಕವಾಯಿತು. ದೇವರ ಮುಂದೆ ತುಪ್ಪದ ದೀಪ ಹಚ್ಚಿಟ್ಟು 'ಭಗವಂತಾ, ಸಿಂಗಾರಮ್ಮನವರಿಗೆ ಒಳ್ಳೆಯದು ಮಾಡಿ ನನ್ನನ್ನು ಕಾಪಾಡು' ಎಂದು ಮೊರೆಯಿಡುತ್ತಿದ್ದಳು. ಗೋದಮ್ಮನವರು ಎಷ್ಟು ಧೈರ್ಯ ಹೇಳಿದರೂ ಮನಸ್ಸಿಗೆ ಶಾಂತಿ ಬರಲೊಲ್ಲದು.

ಹನ್ನೊಂದನೆಯ ದಿನ ಡಾಕ್ಟರ ಆಳು ಬಂದು 'ಅಮ್ಮಾವರು ರಏಳವ್ರೆ' ಎಂದ. ರುಕ್ಮಿಣಿಯ ಮೈಯ್ಯಲ್ಲಿ ನಡುಕ ಹುಟ್ಟಿತು. ಅತ್ತೆಗೆ ತಿಳಿಸಿ, ಕೈಯಲ್ಲಿ ಪುಡಿಪೊಟ್ಟಣ ಹಿಡಿದುಕೊಂಡು ಸಿಂಗಾರಮ್ಮನವರನ್ನು ಕಾಣಲು ಹೋದಳು.

ಸಿಂಗಾರಮ್ಮ ಮಲಗಿದ್ದರೂ ಅವರ ಮುಖ ಕಳೆಗೆಟ್ಟಿರಲಿಲ್ಲ. ರುಕ್ಮಿಣಿಯನ್ನು ಕಂಡೊಡನೆಯೆ ನಗೆಮುಖದಿಂದ

"ನೋವು ಅಷ್ಟು ಜೋರಿಲ್ಲರೀ. ಅರ್ಧಕ್ಕರ್ಧ ಕಡಿಮೆಯಾಗಿದೆ ಎಂದು ಹೇಳಬಹುದು. ನಿಮ್ಮ ಕಷಾಯ ಸಿದ್ಧೌಷಧಿ ಕಣ್ರೀ ರುಕ್ಮಿಣಮ್ಮ" ಎಂದರು.

ರುಕ್ಮಿಣಿಗೆ ಹೋದಜೀವ ಬಂದಂತಾಯಿತು.

"ಮೂರು ನಾಲ್ಕುದಿವಸ ಹಾಸಿಗೆ ಬಿಟ್ಟು ಏಳಬೇಡಿ. ಈ ಪುಡಿಯನ್ನು ಕ್ರಮವಾಗಿ ತೆಗೆದುಕೊಳ್ಳಿ."

"ಕಷಾಯ ?"

"ಪುಡಿ ತೆಗೆದುಕೊಳ್ಳುವಾಗ ಕಷಾಯ ಬೇಡ. ಇವತ್ತು, ನಾಳೆ, ನಾಡಿದ್ದು ಪುಡಿ ತೆಗೆದುಕೊಂಡು ನೀರು ಆದಕೂಡಲೆ ಕಷಾಯ ತೆಗೆದುಕೊಳ್ಳಿ."

"ಅದು ಏನು ಹಾಕಿದ್ದೀರಿ ಕಷಾಯಕ್ಕೆ. ವಿಷ ಕುಡಿದ ಹಾಗಿರುತ್ತಮ್ಮ, ಬಾಯೆಲ್ಲಾ ಕಷಾಯದ ರುಚಿಯೇ ಆಗಿದೆ."

"ಈ ವಿಷ ಇನ್ನೂ ಆರುತಿಂಗಳು ಕುಡಿಯಬೇಕಮ್ಮ. ಈಗಲೇ ಮನಸ್ಸು ಗಟ್ಟಿಮಾಡಿಕೊಂಡು ಬಿಡಿ. ಕಾಫಿ ಬಿಟ್ಟಿದ್ದೀರಷ್ಟೆ ?"

"ಅದರ ಕಡೆ ಕಣ್ಣೆತ್ತಿ ನೋಡಿ ಹತ್ತುದಿವಸವಾಯಿತು."

"ಯೋಚನೆ ಮಾಡಬೇಡಿ. ನಾಳೆ ಬಂದು ನಾನು ಪುನಃ ನೋಡಿ ಹೋಗುತ್ತೇನೆ" ಎಂದು ಹೇಳಿ ಹೊರಟಳು.

ಸ್ನಾನ ಮಾಡಿದಮೇಲೆ ಸಿಂಗಾರಮ್ಮ ಮತ್ತೆ ಕಷಾಯ ತೆಗೆದುಕೊಳ್ಳಲಾರಂಭಿಸಿದಳು.

ಎರಡನೆಯ ತಿಂಗಳ ಮಟ್ಟಿನ ವೇಳೆಗೆ ನೋವು ಮತ್ತಷ್ಟು

ಕಡಿಮೆಯಾಯಿತು. ರುಕ್ಮಿಣಿಗೆ ಧೈರ್ಯವಾಯಿತು.

"ಕ್ರಮೇಣ ಹೋಗಿ ಬಿಡುತ್ತದೆ ಸಿಂಗಾರಮ್ಮ. ಈಗ ನನಗೂ ಧೈರ್ಯವಾಯಿತು." ಎಂದಳು.

"ನನ್ನ ಪ್ರಾಣ ಸಂಸಾರ ಉಳಿಸಿದಿರಿ ತಾಯೀ. ಮೊದಲು ನಾನ ತಾತ್ಸಾರ ಮಾಡಿದ್ದೆ. ವೃಂದಮ್ಮನವರು ನನ್ನ ಭಾಗದ ದೇವರ ಹಾ ಬಂದರು. ನಿಮ್ಮನ್ನು ಅಲ್ಲಗಳೆದು ಮಾತನಾಡಿದುದಕ್ಕೆ ಕ್ಷಮಿಸಬೇಕು."

"ನೀವು ತಪ್ಪೇನೂ ಮಾಡಿಲ್ಲ ಸಿಂಗಾರಮ್ಮ. ನಿಜವಾಗಿ ನನ ಏನೂ ವೈದ್ಯ ಬರುವುದಿಲ್ಲ. ನನ್ನ ತಂದೆ ಒಳ್ಳೆಯ ವೈದ್ಯರಾಗಿದ್ದರು ತಾಯಿ ಅವರಲ್ಲಿ ಕಲಿತು ಚೆನ್ನಾಗಿ ತಿಳಿದುಕೊಂಡಿದ್ದಾರೆ. ನನ್ನ ಕಲಿಕೆಯೆಲ್ಲಾ ಹರಕುಮುರುಕು – ನಿಮಗೆ ಗುಣವಾಗಿರುವುದು ನನ್ನ ವೈದ್ಯದ ಪ್ರಭಾವದಿಂದಲ್ಲ, ನಿಮ್ಮ ಭಕ್ತಿಯ ಪ್ರಭಾವದಿಂದ." ಎಂದ ತನ್ನ ವಿನಯ ವ್ಯಕ್ತಪಡಿಸಿದಳು.

ಸಿಂಗಾರಮ್ಮನವರಿಗೆ ಗುಣವಾದ ಸುದ್ದಿ ಊರಿನಲ್ಲಿ ಹರಡಲ ಬಹಳ ದಿವಸ ಬೇಕಾಗಲಿಲ್ಲ. ಇದರಿಂದಾಗಿ ರುಕ್ಮಿಣಿಗೆ ಉಳಿದಿದ್ದ ಅಲ್ಪಸ್ವಲ್ಪ ವ್ಯವಧಾನವೂ ಮಾಯವಾಯಿತು.

ರುಕ್ಮಿಣಿಯ ವೈದ್ಯಸೇವೆ ಬೆಳೆದಂತೆ ಮಾಧವರಾಯನ ಆರ್ಥಿ ಪರಿಸ್ಥಿತಿಯೂ ಸುಧಾರಿಸುತ್ತ ಬಂದಿತು. ರುಕ್ಮಿಣಿ ಮೈತುಂಬ ಒಡ ಗಳಾದವು. ಮನೆಯಲ್ಲಿ ಇಬ್ಬರು ಆಳುಗಳು. ಎರಡು ಹಸು, ಒಂದ ಎಮ್ಮೆ. ಮಾಧವರಾಯ ಓಡಿಯಾಡುವುದಕ್ಕೆ ಒಂದು ಬೈಸಿಕಲ ಕೊಂಡುಕೊಂಡ.

ಕ್ಲಬ್ಬಿನ ಅಧ್ಯಕ್ಷಸ್ಥಾನವನ್ನು ಮಾಧವರಾಯ ಬಹಳ ದಿವ ಮುಂದೂಡಲಾಗಲಿಲ್ಲ. ಸುಂದರಂ ಹಟಹಿಡಿದು ಅವನಿಗೆ ಪಟ್ಟಗಟ್ಟಿಯೆ ಬಿಟ್ಟರು.

ಟೆನಿಸ್ ಟೋರ್ನಮೆಂಟಿಗೆ ಬೇಕಾದ ವ್ಯವಸ್ಥೆಯಾಗತೊಡಗಿತ ಅತಿಥಿಗಳಿಗೆ ಪ್ರವಾಸಿಕರ ಬಂಗಲೆಯಲ್ಲಿ(Travelloes Banglow ವಸತಿ, ಊಟ ಏರ್ಪಡಿಸಲಾಗಿತ್ತು. ಹತ್ತುದಿನಗಳು ಸತತವಾ

ಪಂದ್ಯಗಳು ನಡೆದವು. ಟೆನಿಸ್ ಆಟಕ್ಕೆ ಪ್ರಸಿದ್ಧವಾದ ಎಲ್ಲ ಕ್ಲಬ್ಬು ಗಳಿಂದಲೂ ಸ್ಪರ್ಧಿಗಳು ಬಂದಿದ್ದರು. ಹನ್ನೊಂದನೆಯ ದಿನವೇ 'ಫೈನಲ್ಸ್' ಮ್ಯಾಚ್. ಬೆಂಗಳೂರಿನ ಶ್ರೀನಿವಾಸನ್ ಮೈಸೂರಿನ ಭರತರಾಜ್ ಸ್ಪರ್ಧಿಗಳಾಗಿದ್ದರು. ಇಬ್ಬರೂ ಸುಪ್ರಸಿದ್ಧ ಆಟಗಾರರು. ಸಂಸ್ಥಾನದ ಹೊರಗೂ ಕೀರ್ತಿಶಾಲಿಗಳಾಗಿದ್ದವರು. ಅವರ ಆಟ ನೋಡಲು ಮೈಸೂರು, ನಂಜನಗೂಡು, ಚಾಮರಾಜನಗರ, ಹಾಸನ, ಬೆಂಗಳೂರು, ಮಂಡ್ಯ, ಹಿರೋಡೆಗಳಿಂದ ಜನ ಬಂದಿದ್ದರು.

ಪ್ರೇಕ್ಷಕರಲ್ಲಿ ಉಭಯರ ಅಭಿಮಾನಿಗಳೂ ಇದ್ದರು. ಶ್ರೀನಿವಾಸನ್ ಸ್ಕೋರಿನ ಕಡೆ ಲಕ್ಷ್ಯವಿಡದೆ, ಆಟದ ಕಲಾವಂತಿಕೆ, ಚಮತ್ಕಾರಕ್ಕೆ ಪ್ರಸಿದ್ಧರಾಗಿದ್ದರು; ಭರತರಾಜ್ ಆಟ ಗೆಲ್ಲುವ ಕಡೆಗೆ ಹೆಚ್ಚು ಲಕ್ಷ್ಯ ಕೊಡುತ್ತಿದ್ದರು.

ಸಂಜೆ ನಾಲ್ಕರಿಂದ ಆಟ. ಆಟಮುಗಿದೊಡನೆಯೇ ಉಪಾಹಾರ. ತರುವಾಯ ಸಭೆ ಮತ್ತು ಪಾರಿತೋಷಿಕ ವಿನಿಯೋಗ. ರಾತ್ರಿ ಸ್ಪರ್ಧಿ ಗಳಿಗೆ, ಕ್ಲಬ್ಬಿನ ಸದಸ್ಯರಿಗೆ, ಊರಿನ ಗಣ್ಯ ಮಹನೀಯರಿಗೆ ಸೊಗಸಾದ ಔತಣವೆಂದು ಕಾರ್ಯಕ್ರಮ ನಿಶ್ಚಯವಾಗಿತ್ತು.

ರಾಘವೇಂದ್ರರಾಯರು ಪಂದ್ಯಾಟ ನಡೆಯುತ್ತಿದ್ದ ಕಡೆಗೆ ಸುಳಿದಿರಲಿಲ್ಲ. ಟೆನಿಸ್ ಕ್ರೀಡಾಭಿಮಾನಿಗಳಾದ ಮುನಸೀಫರು ಒಂದೆರಡು ಬಾರಿ ಕೇಳಿಯೂ ಇದ್ದರು. ಕೊನೆಯ ದಿವಸದ ಸಮಾರಂಭಕ್ಕೆ ಮುನಸೀಫರೇ ಅಧ್ಯಕ್ಷರು. ಶನಿವಾರ ಕೋರ್ಟು ಮುಗಿದೊಡನೆಯೇ ಮುನಸೀಫರು

"ನಾಳೆ ಫೈನಲ್ಸಿಗೆ ಬರುತ್ತೀರಷ್ಟೆ ರಾಘವೇಂದ್ರರಾಯರೇ" ಎಂದು ಕೇಳಿಬಿಟ್ಟರು.

"ಮಂಡ್ಯದಲ್ಲಿ ಕೆಲಸವಿತ್ತು. ನಾಳೆ ಹೋಗಿ ಬರೋಣವೆಂದು ಕೊಂಡಿದ್ದೆ."

"ಕೆಲಸವಿದ್ದೇ ಇರುತ್ತೆ. ನಾಳೆ ಪುರಸತ್ತು ಮಾಡಿಕೊಳ್ಳಿಯೆಂದ್ರೆ. ಎಲ್ಲರೂ ಸಂತೋಷವಾಗಿ ಒಂದು ದಿನ ಕಳೆಯೋಣ. ನಾಳೆ ಸಂಜೆ

ಮೂರಕ್ಕೆ ನಮ್ಮ ಮನೆಗೇ ಬಂದುಬಿಡಿ. ಅಲ್ಲೇ ಟೀ ತೆಗೆದುಕೊಂಡು ಕ್ಲಬ್ಬಿಗೆ ಹೋಗೋಣ" ಎಂದುಬಿಟ್ಟರು. ರಾಘವೇಂದ್ರರಾಯರಿಗೆ ಉಭಯ ಸಂಕಟಕ್ಕಿಟ್ಟುಕೊಂಡಿತು. ಆಮಂತ್ರಣ ಒಪ್ಪಿಕೊಳ್ಳಲು ಮನಸ್ಸಿಲ್ಲ – ಒಪ್ಪಿಕೊಳ್ಳದಿದ್ದರೆ ಮುನಸೀಫರಿಗೆ ಅಸಮಾಧಾನ ವಾಗುತ್ತದೆ. ಮೀನಮೇಷ ಎಣಿಸಿ

"ಹಾಗೇ ಆಗಲಿ ಸ್ವಾಮಿ" ಎಂದು ಒಪ್ಪಿಕೊಂಡರು.

ಭಾನುವಾರದ ಕಾರ್ಯಕ್ರಮು ಸರಿಯಾಗಿ ನಾಲ್ಕು ಗಂಟೆಗೆ ಆರಂಭವಾಯಿತು. ಆಟ ಪ್ರಾರಂಭವಾದೊಡನೆಯೇ ಭರತರಾಜ್ ಪಾಯಿಂಟುಗಳನ್ನು ಪೇರಿಸುತ್ತ ಬಂದರು. ಎರಡನೆಯ ಸೆಟ್ ವೇಳೆಗೆ ಶ್ರೀನಿವಾಸನ್ ಚೇತರಿಸಿಕೊಂಡರು. ಇಬ್ಬರಿಗೂ ಬಲವಾದ ಸ್ಪರ್ಧೆ ಯೇರ್ಪಟ್ಟಿತು. ಭರತರಾಜರಿಗೆ ವಿಜಯ ಸತ್ವಃಸ್ಸಿದ್ಧವೆಂದು ಎಲ್ಲರೂ ಲೆಕ್ಕ ಹಾಕಿಕೊಂಡಿದ್ದರು.

ಮೊದಲು ಕೆಲವು ಸೆಟ್ಟುಗಳಲ್ಲಿ ಶ್ರೀನಿವಾಸನ್ ಕೇವಲ ಕಲಾ ಪ್ರದರ್ಶನಕ್ಕೆ ನಿಂತರು ಆ ವೇಳೆಗೆ ಭರತರಾಜ್ ಪಾಯಿಂಟುಗಳನ್ನು ಪೇರಿಸಿಬಿಟ್ಟಿದ್ದರು. ಅರ್ಧವೇಳೆಯಾದ ಮೇಲೆ ಶ್ರೀನಿವಾಸನ್, ಒಂದು ಸೋಡಾ ಕುಡಿದು ಸ್ವಲ್ಪ ವಿಶ್ರಾಂತಿ ಪಡೆದು ತಮ್ಮ ಆಟದ ತಂತ್ರವನ್ನು ಬದಲಾಯಿಸಿ ಪಾಯಿಂಟುಗಳನ್ನು ಪೇರಿಸುವುದಕ್ಕೆ ನಿಂತರು. ಭರತ ರಾಜ್ ಹಲವು ಸಾರಿ, ಹಲವು ಸ್ಪರ್ಧೆಗಳಲ್ಲಿ ಶ್ರೀನಿವಾಸನ್ ಜತೆ ಆಡಿದ್ದರೂ ಇಂದವರ ಆಟಗಾರಿಕೆಯ ರಹಸ್ಯ ಭೇದಿಸಲಾಗಲಿಲ್ಲ. ಪ್ರೇಕ್ಷಕರ ಕುತೂಹಲ ನೂರ್ಮಡಿ ಹೆಚ್ಚಿತು.

ಕೊನೆಯ ಸೆಟ್ ಸಂಪೂರ್ಣವಾಗಿ ಶ್ರೀನಿವಾಸನ್ ಅವರ ಸೆಟ್ಟಾಯಿತು. ಭರತರಾಜರು ಸೋಲನ್ನೊಪ್ಪಿಕೊಳ್ಳಬೇಕಾಯಿತು. ಆಟ ಮುಗಿದೊಡನೆಯೇ ಭರತರಾಜರು ಓಡಿಬಂದು ಶ್ರೀನಿವಾಸನ್ ಅವರನ್ನಪ್ಪಿಕೊಂಡು 'ಸೊಗಸಾಗಿ ಆಡಿದಿರಿ. Richly deserved Victory' ಎಂದು ಪ್ರಶಂಸೆಮಾಡಿದರು.

ಉಪಾಹಾರ ಮುಗಿದ ಮೇಲೆ ಕ್ಲಬ್ಬಿನ ಅಧ್ಯಕ್ಷರಾದ ಮಾಧವ

ರಾಯರು ಅಂದಿನ ಸಭಾಧ್ಯಕ್ಷರಾದ ಮುನಸೀಫರನ್ನು ವೇದಿಕೆಯ ಮೇಲೆ ಕರೆದುಕೊಂಡು ಹೋದರು. ಮುನಸೀಫರು ರಾಘವೇಂದ್ರ ರಾಯರನ್ನು ಕರೆದು ತಮ್ಮ ಮಗ್ಗುಲಿನಲ್ಲಿದ್ದ ಕುರ್ಚಿಯ ಮೇಲೆ ಕೂಡಿಸಿದರು.

ಮಾಧವರಾಯ ಸ್ವಾಗತ ಭಾಷಣಮಾಡಿ ಕ್ಲಬ್ಬಿನ ಚರಿತ್ರೆ, ಅದರ ಪ್ರಗತಿಯನ್ನು ವಿವರಿಸಿ, ಕ್ಲಬ್ಬಿನ ಸ್ಥಾಪಕ–ಅಧ್ಯಕ್ಷರಾಗಿದ್ದ ರಾಘವೇಂದ್ರ ರಾಯರು ಕ್ಲಬ್ಬಿಗೆ ಮಾಡಿದ 'ಅಮೋಘ ಸೇವೆ'ಯನ್ನು ಪ್ರಸ್ತಾಪಿಸಿ ಪ್ರಶಂಸೆ ಮಾಡಿದ.

'ಅಮೋಘ ಸೇವೆ'ಯ ಒಳಚರಿತ್ರೆ ತಿಳಿದಿದ್ದ ಸದಸ್ಯರು ನಕ್ಕರು. ರಾಘವೇಂದ್ರರಾಯರ ಹೆಸರೆತ್ತಿಕೊಂಡು, ಅವರನ್ನು ಪ್ರಶಂಸೆ ಮಾಡಿದುದಕ್ಕೆ ಡಾಕ್ಟರೂ, ಗೌಡರೂ, ಪುಟ್ಟಯ್ಯನವರೂ ಗೊಣಗುಟ್ಟಿದರು.

ಮದುಮಗನಂತೆ ಬಿಮ್ಮನೆ ಬೀಗಿಕೊಂಡು ಕುಳಿತಿದ್ದ ರಾಘವೇಂದ್ರರಾಯರ ಕಡೆ ತಿರುಗಿ ಮುನಸೀಫರು

'ನೀವು ನಾಲ್ಕು ಮಾತು ಆಡಬಹುದಲ್ಲ' ಎಂದರು. ರಾಘವೇಂದ್ರರಾಯರು ಮುಜಗರ ಪಟ್ಟುಕೊಂಡು ನಿಂತುಕೊಂಡರು. ಲೋಕಾಭಿರಾಮವಾಗಿ ಔಪಚಾರಿಕ ಮಾತುಗಳನ್ನಾಡಿ, ಕ್ಲಬ್ಬನ್ನು ಹರಸಿ 'ಇದರ ಎಲ್ಲಾ ಕೀರ್ತಿ ಅಧ್ಯಕ್ಷರಾಗಿರುವ ಶ್ರೀಮಾನ್ ಮಾಧವರಾಯರಿಗೇ ಸೇರಬೇಕು. ಇಂಥ ದೊಡ್ಡ ಟೂರ್ನಮೆಂಟ್ ವ್ಯವಸ್ಥೆಮಾಡಿ, ಅವರು ಪಟ್ಟಣದ ಕ್ರೀಡಾಭಿಮಾನಿಗಳ ಚಿರಕೃತಜ್ಞತೆಗೆ ಪಾತ್ರರಾಗಿದ್ದಾರೆ.' ಎಂದು ಹೇಳಿದರು. 'ಎಲ್ಲಾ ತುದಿನಾಲಗೆಯ ಮಾತು' ಎಂದು ಗೌಡರು ಟೀಕಿಸದೆ ಬಿಡಲಿಲ್ಲ.

ರಾಘವೇಂದ್ರರಾಯರು ಊಟಕ್ಕೆ ತಪ್ಪಿಸಿಕೊಳ್ಳಲೆತ್ನಿಸಿದರು. ಮುನಸೀಫರ ಮುಂಗಮುಷ್ಠಿ ಅವರ ಮೇಲೆ ಭದ್ರವಾಗಿ ಬಿದ್ದಿತ್ತು.

"ಜತೆಯಲ್ಲಿ ಬಂದಮೇಲೆ ಜತೆಯಲ್ಲಿ ಹೋಗಬೇಕು. ಇರಿ—ಊಟ ಮಾಡಿಕೊಂಡು ಹೋಗೋಣ." ಎಂದು ಮುನಸೀಫರು ಹೇಳಿಬಿಟ್ಟರು.

'ನೀರಿಳಿಯದ ಗಂಟಲಲ್ಲಿ' ರಾಘವೇಂದ್ರರಾಯರು ಬಲವಂತದಿಂದ ಚಿರೋಟಿ ಇಳಿಸಬೇಕಾಯಿತು. 'ಏನು ಗ್ರಹಚಾರ ಬಂತಪ್ಪಾ' ಎಂದುಕೊಂಡೇ ಊಟ ಮುಗಿಸಿದರು. ತಾಂಬೂಲ ಸೇವಿಸಿ ಮನೆಯ ಕಡೆ ಹೊರಡುವವರೆಗೆ ರಾಘವೇಂದ್ರರಾಯರಿಗೆ ಸ್ವಲ್ಪವೂ ಸಮಾಧಾನವಿಲ್ಲ.

ಅತಿಥಿಗಳೆಲ್ಲಾ ಚೆದುರಿದಮೇಲೆ ಕ್ಲಬ್ಬಿನ ಮುಖ್ಯ ಸದಸ್ಯರು ಹರಟೆಗೆ ಕುಳಿತರು. ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯವಾದುದಕ್ಕೆ ಎಲ್ಲರಿಗೂ ಸಂತೋಷವಾಗಿತ್ತು. ಗೌಡರು ಮಾತ್ರ

"ರಾಘವೇಂದ್ರರಾಯರು ಬರದಿದ್ದರೆ ಉತ್ಸವ ಇನ್ನೂ ಕಳೆಗಟ್ಟುತ್ತಿತ್ತು" ಎಂದರು.

"ಅವರು ಬರುವುದಿಲ್ಲ ಎಂದಿದ್ದೆ" ಎಂದರು ಪುಟ್ಟಯ್ಯ.

"ಮುನಸೀಫರು ಏಕೆ ಅವರನ್ನು ಕಟ್ಟಿಕೊಂಡು ಬಂದರು ?" ಎಂದು ರಂಗಯ್ಯ ಕೇಳಿದರು.

ಮಾಧವರಾಯ ಮೆಲ್ಲನೆ ಗಂಟಲು ಸರಿಮಾಡಿಕೊಂಡು.

"ರಾಘವೇಂದ್ರರಾಯರನ್ನು ಬಿಡದೆ ಕರೆದುಕೊಂಡು ಬರಬೇಕೆಂದು ನಾನೇ ಮುನಸೀಫರಿಗೆ ಸೂಚನೆ ಕೊಟ್ಟಿದ್ದೆ." ಎಂದರು.

"ಹೋಗಿ ಸ್ವಾಮಿ—ನೀವು ಮಾಡುವುದೆಲ್ಲಾ ಇಂಥಾ ಕೆಲಸವೇ! ರಾಘವೇಂದ್ರರಾಯರು ಕ್ಲಬ್ಬಿಗೆ ಯಾವ ಉಪಕಾರ, ಯಾವ ಸಹಾಯ ಮಾಡಿದ್ದಾರೆಂದು ನೀವು ಅವರ ಪ್ರಶಂಸೆ ಮಾಡಿದಿರಿ ?"

"ಅದರಿಂದ ನಮಗೆ ನಷ್ಟವಾಗಲಿಲ್ಲ ಗೌಡರೇ—ಲಾಭವೇ ಆಗಿದೆ. ರಾಘವೇಂದ್ರರಾಯರ ಅವಿವೇಕ ಅವರಿಗೆ ಮನವರಿಕೆ ಮಾಡಿಕೊಟ್ಟಂತಾಯಿತು."

"ಅವರಿಗೆ ಮನವರಿಕೆಯಾದರೆಷ್ಟು—ಬಿಟ್ಟರೆಷ್ಟು ಸ್ವಾಮಿ." ಎಂದು ಡಾ. ಸುಂದರಂ ಕಹಿಮೋರೆ ಮಾಡಿಕೊಂಡೇ ನುಡಿದರು.

ಮಾಧವರಾಯನ ಅಸ್ತ್ರ ರಾಘವೇಂದ್ರರಾಯರನ್ನು ಚೆನ್ನಾಗಿ ಘಾತಿಸಿತ್ತು. ತಮ್ಮನ್ನು ಹೊಗಳುವ ನೆಪದಲ್ಲಿ ಮಾಧವರಾಯ ಕಟು

ವಾಗಿ ಟೀಕಿಸಿದ್ದಾನೆಂದು ರಾಘವೇಂದ್ರರಾಯರು ನಂಬಿದರು. ಇಷ್ಟೆಲ್ಲ ಆದಮೇಲೆ ತಾವು ಸುಮ್ಮನಿರುವುದು ಗಂಭೀರವಲ್ಲ. 'ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂದು ತೋರಿಸಿಕೊಳ್ಳಬೇಕಾಗಿತ್ತು. ಮಾರನೆಯ ದಿನ ಕ್ಲಬ್ಬಿಗೆ ನೂರು ರೂಪಾಯಿ ಕಾಣಿಕೆ ಕಳಿಸಿಕೊಟ್ಟು ಅಭಿನಂದನಾ ಪತ್ರಬರೆದರು.

ಮಾಧವರಾಯ ಅದನ್ನು ತನ್ನ ಗೆಳೆಯರಿಗೆ ತೋರಿಸಿ

"ನಾವು ಸೋತು ಗೆದ್ದಿದ್ದೇವೆ—ಇಲ್ಲಿ ನೋಡಿ, ಇದು ಅಭಿನಂದನಾ ಪತ್ರವಲ್ಲ—ಕ್ಷಮಾಪತ್ರ" ಎಂದ.

೨೩

ಮಾಧವರಾಯನ ಆರ್ಥಿಕಸ್ಥಿತಿ ಸುಧಾರಿಸಿದಷ್ಟೂ, ಅವನ
ಖರ್ಚುವೆಚ್ಚಗಳು ಬೆಳೆಯುತ್ತ ಹೋದವು ಮನೆ 'ಅನ್ನಛತ್ರ'
ವಾಯಿತು. ಕೋರ್ಟು ಕೆಲಸಕ್ಕೆ ಬರುತ್ತಿದ್ದ ಕಕ್ಷಿಗಾರರಿಗೆ ಮಾಧವ
ರಾಯನ ಮನೆಯಲ್ಲಿ ಊಟೋಪಚಾರವಾಗುತ್ತಿತ್ತು. ಪಟ್ಟಣ
ನೋಡಲು ಬರುತ್ತಿದ್ದವರು, ಕಾವೇರಿಸ್ನಾನಕ್ಕೆ ಬರುತ್ತಿದ್ದವರು, ಪಶ್ಚಿಮ
ವಾಹಿನಿಗೆ ಮಂಗಳ, ಅಮಂಗಳ ಕೆಲಸದ ಸಲುವಾಗಿ ಬರುತ್ತಿದ್ದವರು
ಮಾಧವರಾಯನ ಮನೆಯಲ್ಲಿ ತಂಗುತ್ತಿದ್ದರು.

ಮನೆಯಲ್ಲಿ ನಿತ್ಯವೂ ಯಾವದಾದರೂ ಪೂಜೆ, ವ್ರತ, ಹಬ್ಬ
ದೇವತಾ ಕೆಲಸವಿದ್ದೇ ಇರುತ್ತಿತ್ತು. ಹೊತ್ತಿಗೆ ಹತ್ತಿಪ್ಪತ್ತು ಅತಿಥಿ
ಗಳಿಲ್ಲದ ದಿನವೇ ಇರಲಿಲ್ಲ.

ಊರ ಹೊರಗಿನಿಂದ ಚಿಕಿತ್ಸೆಗೆ ಬರುತ್ತಿದ್ದ ರೋಗಿಗಳ ಉಪಚಾ
ರವೂ ಮಾಧವರಾಯನ ಮನೆಯಲ್ಲಿಯೇ ಆಗುತ್ತಿತ್ತು. ರೋಗಿಗಳ
ಆರೈಕೆಮಾಡಿ, ಅವರಿಗೆ ಔಷಧ ಕೊಟ್ಟು, ಅವರು ಹಿಂದಿರುಗಿ ಹೋಗ
ವಾಗ ಗಾಡಿಯ ಖರ್ಚನ್ನೂ ರುಕ್ಮಿಣಿ ಕೊಡುತ್ತಿದ್ದಳು. ನಿರ್ಗತಿಕರಾದ
ರೋಗಿಗಳಿಗೆ ಬಟ್ಟೆ ಬರೆಯನ್ನೂ ಕೊಡುತ್ತಿದ್ದಳು.

ಈ ದಂಪತಿಗಳ ನಿಸ್ವಾರ್ಥಜೀವನ ಕಂಡು ಪಟ್ಟಣಕ್ಕೆ ಪಟ್ಟ
ಣವೇ ಬೆರಗಾಗಿತ್ತು. ಆದರ್ಶ ಸತಿಪತಿಯರೆಂದು ಮಾಧವರಾಯನನ್ನೂ

ರುಕ್ಮಿಣಿಯನ್ನೂ ಜನ ಆದರಿಸುತ್ತಿದ್ದರು. ಜನತೆಯ ಮೆಚ್ಚುಗೆಯ ಮಾತು ಕಿವಿಯಮೇಲೆ ಬಿದ್ದಾಗಲೆಲ್ಲಾ ರಾಘವೇಂದ್ರರಾಯರಿಗೆ ಈರ್ಷೆ ಯುದಿಸುತ್ತಿತ್ತು. 'ಇದೆಲ್ಲಾ ಏನು! ಬರಿಯ ವೇಷ' ಎಂದು ಅವರು ಮಾಧವರಾಯನನ್ನು ನಿರ್ದಾಕ್ಷಿಣ್ಯದಿಂದ ತೆಗಳುತ್ತಿದ್ದರು.

ಅಸೆಂಬ್ಲಿ ಚುನಾವಣೆ ಸಮೀಪಿಸಿತು. ರಾಘವೇಂದ್ರರಾಯರು ತಮ್ಮ ಗುಂಪನ್ನು ಬಲಪಡಿಸಿಕೊಂಡು ಪ್ರಚಾರ ಕಾರ್ಯ ಆರಂಭಿಸಿದ್ದರು. ಕೇಶವಯ್ಯಂಗಾರ್ರು, ಮಹಂತ ದೇವರು, ಶಾಂತರಾಜಪ್ಪ, ರಾಘವೇಂದ್ರರಾಯರು ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದರು. ಈ ಸುದ್ದಿ ತಿಳಿದೊಡನೆಯೇ ಜವರೇಗೌಡರು ತಮ್ಮ ಪಕ್ಷ ಬಲಗೊಳಿಸಲು ಮಾಧವರಾಯನಲ್ಲಿ ಬಂದರು.

"ರಾಘವೇಂದ್ರರಾಯರೂ ಅವರ ಗುಂಪೂ ಚುನಾವಣೆಗೆ ನಿಲ್ಲುತ್ತಾರೆ ಸ್ವಾಮಿ."

"ನಿಲ್ಲಲಿ."

"ನೀವೇನು ಮಾಡುವಿರಿ?"

"ಯಾವ ವಿಷಯ?"

"ಚುನಾವಣೆಗೆ ನಿಲ್ಲುವ ವಿಷಯ!"

"ನನಗೆ ಪುರಸತ್ತಿಲ್ಲಿದೆ ಗೌಡರೇ. ರಾಜಕೀಯ ಕಟ್ಟಿಕೊಂಡು ನನಗೆ ಆಗಬೇಕಾದುದೇನು?"

"ಊರಿನ ಕ್ಷೇಮ ನಿಮಗೂ ಸೇರಿದುದು ತಾನೇ?"

"ನಿಸ್ಸಂದೇಹವಾಗಿ."

"ಹಾಗಾದರೆ ಊರನ್ನು ರಾಘವೇಂದ್ರರಾಯರಿಗೆ ಅವರ ಗುಂಪಿನವರಿಗೆ ದಾನ ಬರೆದು ಕೊಡುತ್ತೀರೇನು!"

"ದಾನದ ಮಾತು ಎಲ್ಲಿಂದ ಬಂತು ಗೌಡರೇ?"

"ರಾಘವೇಂದ್ರರಾಯರು, ಕೇಶವಯ್ಯಂಗಾರ್ರು, ಮಹಂತ ದೇವರು, ಶಾಂತರಾಜಪ್ಪ ಚುನಾಯಿತರಾಗಿ ಬಂದರೆ ಈ ಊರಿನಲ್ಲಿ ಯಾರೂ ಬಾಳುವುದಕ್ಕೆ ಸಾಧ್ಯವೇ ಆಗುವುದಿಲ್ಲ."

"ಮಹಂತದೇವರ ಬಗ್ಗೆ ಹಾಗೇಕೆ ಹೇಳುವಿರಿ. ದೇವರು, ಸ್ವಾಮಿಗಳು ಎಂದರೆ ಅವರಿಗೆಷ್ಟು ಭಕ್ತಿ ಇದೆ! ದಾಸೋಹ, ಗಣಾರಾಧನೆ ಎಷ್ಟು ಖರ್ಚುಮಾಡುತ್ತಾರೆ!"

"ಇದೇಕೆ ರಾಯರೇ, ಬೆಳ್ಳಗಿರುವುದೆಲ್ಲಾ ಹಾಲು ಎಂದು ನಂಬುತ್ತೀರಿ. ಮಹಂತದೇವರಿಗಿಂತ ಕಪಟ ಈ ಜಗತ್ತಿನಲ್ಲಿ ಸಿಕ್ಕುವುದು ಸಾಧ್ಯವೇ? ಅವನೂ ಅವನ ಸ್ವಾಮಿ ಮಾಡುತ್ತಿರುವ ಅತ್ಯಾಚಾ ಕೇಳಿದರೆ ನಿಮ್ಮ ಮೈಮೇಲೆ ಮುಳ್ಳುಗಳೇಳುತ್ತವೆ. ಸಾವಿರಾ ಮಾರವಾಡಿ, ಮುಲ್ತಾನಿಗಳು ಸತ್ತು ಈ ಒಬ್ಬ ಸ್ವಾಮಿ ಹುಟ್ಟಿದ್ದಾನೆ ಲೇವಾದೇವಿ ಅವನ ವೃತ್ತಿ. ಪಟ್ಟಣದ ತಾಲ್ಲೂಕಿನಲ್ಲೇ ೫೦೦-೬೦ ಎಕರೆಗಳಷ್ಟು ಗದ್ದೆಯನ್ನು ಈ ಸ್ವಾಮಿ ಬಡರೈತರಿಂದ 'ಸ್ವಾಹಾ ಮಾಡಿದ್ದಾನೆ. ಒಮ್ಮೆ ಈ ಸ್ವಾಮಿಯಲ್ಲಿ ಸಾಲ ತೆಗೆದುಕೊಂಡ ಮುಗಿದೇ ಹೋಯಿತು—ಅವನು ತನ್ನ ಹೊಲ ಗದ್ದೆ ಮನೆ ಮಠ ಕ ದುಕೊಂಡು ಸ್ವಾಮಿಯ ಜೀತದ ಆಳಾಗಿ ಹೊಟ್ಟೆ ಹೊರೆದುಕೊ ಬೇಕು. ನಮ್ಮ ಮಹಂತದೇವರು ಈ ಸ್ವಾಮಿಯ ಏಜಂಟ್— ಸ್ವಾಮಿಯ ವ್ಯವಹಾರವೆಲ್ಲಾ ಮಹಂತದೇವರ ಮೂಲಕವೇ ಆ ವುದು. ಮಹಂತದೇವರು ಹಕ್ಕಿಗಳನ್ನು ಹಿಡಿದು ಹಿಡಿದು ಸ್ವಾಮಿಯ ಬಲೆಗೆ ತಳ್ಳುತ್ತಿದ್ದಾನೆ.—ಸ್ವಾಮಿ, ಮಹಂತದೇವರ ಎದುರಿಗೆ ಯಾ ಹೆಣ್ಣುಮಗಳೂ ಸುಳಿಯುವ ಹಾಗಿಲ್ಲ. ಅನ್ಯಜಾತೀಯರಿಗೆ ದೀ ಕೊಡುವ ನೆಪದಲ್ಲಿ ಈ ಅಹಿರಾವಣ, ಮಹಿರಾವಣರು, ನೂರಾ ಸಂಸಾರಿ ಹೆಣ್ಣುಮಕ್ಕಳ ಮಾನಭಂಗ ಮಾಡಿದ್ದಾರೆ.—ಈ ಅನ್ಯಾಯ ಅತ್ಯಾಚಾರ ಮುಚ್ಚುವುದಕ್ಕೆ ಮೇಲಿಂದ ಮೇಲೆ ದಾಸೋಹ, ಗಣಾರಾಧನೆ ನಡೆಸಿ ಜನಗಳ ಕಣ್ಣಿಗೆ ಮಣ್ಣೆರಚುತ್ತಿದ್ದಾರೆ. ನನ್ನ ಜತೆ ಎರಡು ದಿನ ಪುರಸತ್ತು ಮಾಡಿಕೊಂಡು ಬನ್ನಿ—ನಿಮಗೆಷ್ಟು ಸಾಕ್ಷಿ, ದಾಖಲೆಗಳು ಬೇಕೋ ಒದಗಿಸುತ್ತೇನೆ."

"ಇಷ್ಟು ಅನ್ಯಾಯ, ಅತ್ಯಾಚಾರ ಸಹಿಸಿಕೊಂಡು ಜನ ಏತ ಸುಮ್ಮನಿದ್ದಾರೆ ಗೌಡರೇ?"

"ಸ್ವಾಮಿ, ಮಹಂತದೇವರು ಅವರ ಶಿಷ್ಯಕೋಟಿ ಜನಗಳಲ್ಲಿ ಅಷ್ಟು ಭಯ ಹುಟ್ಟಿಸಿದ್ದಾರೆ. ರೈತರು ಯಾರಾದರೂ ಸ್ವಲ್ಪ ಎದುರುತ್ತರ ಕೊಟ್ಟರೆ ಸಾಕು—ಈ ಚಂಡಾಲರು ಅವರ ಮೈ ಚರ್ಮ ಸುಲಿಸಿಬಿಡುತ್ತಾರೆ."

"ಹೀಗಾದರೆ ದೇಶ ಬದುಕುವುದು ಹೇಗೆ ಗೌಡರೇ ?—ಸರ್ಕಾರ ಸುಮ್ಮನಿರುವುದು ಹೆಚ್ಚೇ!"

"ಸರ್ಕಾರದ ಅಧಿಕಾರಿಗಳು ಬಂದರೆ ಮಹಂತದೇವರು ತಮ್ಮ ತೋಟದಲ್ಲಿ ಸೊಗಸಾದ ಪಾರ್ಟಿ ಮಾಡಿಬಿಡುತ್ತಾರೆ. ಸ್ಪೆನ್ಸರ್ ಕಂಪೆನಿಯಿಂದ ಬಾಟಲುಗಳು ಬರುತ್ತವೆ—ಮೂಗೂರಿನಿಂದ ಸೂಳೆಯರು ಬರುತ್ತಾರೆ.—ಅಧಿಕಾರಿಗಳ ಕೈಯೂ ಬೆಚ್ಚಗಾಗುತ್ತದೆ. ಅಧಿಕಾರ ವರ್ಗದ ಸಹಕಾರ, ಸಹಾಯ ಇರುವ ಹೊತ್ತಿಗೆ ಇವರು ಇಷ್ಟು ಹೆಚ್ಚಿಕೊಂಡಿರುವುದು."

"ಇದು ಚುನಾವಣೆಯಾಗುವುದಿಲ್ಲ ಗೌಡರೇ – ಧರ್ಮಯುದ್ಧವಾಗುತ್ತದೆ."

"ಈ ಧರ್ಮಯುದ್ಧದ ಸಾರಥ್ಯ ನೀವು ವಹಿಸಲೇಬೇಕು. ನೀವು, ಷರೀಫ್ ಸಾಹೇಬರು, ಡಾಕ್ಟರು, ನಾನು – ನಾವು ನಾಲ್ಕು ಜನರೂ ರಾಘವೇಂದ್ರರಾಯರ ಗುಂಪನ್ನೆದುರಿಸಬೇಕು.—ನೀವು ಚುನಾವಣೆಗೆ ನಿಲ್ಲಲು ಒಪ್ಪಿ ಸರ್, ಮುಂದಿನ ಕೆಲಸವನ್ನು ನಾವು ನೋಡಿಕೊಳ್ಳುತ್ತೇವೆ – ನೀವು ಯಾವ ತೊಂದರೆಯನ್ನೂ ತೆಗೆದುಕೊಳ್ಳಬೇಕಾದುದಿಲ್ಲ."

"ಮಹಂತದೇವರು ನಡಸುವ ಅತ್ಯಾಚಾರಗಳಲ್ಲಿ ರಾಘವೇಂದ್ರ ರಾಯರ ಭಾಗವಿದೆಯೆಂದು ನಂಬುವಿರಾ ಗೌಡರೇ."

"ಅದರಲ್ಲಿ ಸಂದೇಹವೇ ಇಲ್ಲ ಸ್ವಾಮಿ. ಅನೇಕ ವರ್ಷದ ಒಂದಿನ ಮಾತು – ತಾವಿನ್ನೂ ಪಟ್ಟಣಕ್ಕೆ ಬಂದಿರಲಿಲ್ಲ. ಮಹಂತದೇವರ ಮೇಲೆ ಒಂದು ಖೂನಿ ಆಪಾದನೆ ಬಂದಿತು. ಮಹಂತದೇವರು ಮನೆಯನ್ನು ಹೊಲೆಗೇರಿ ಮಾಡಿದ್ದರು. ಸಿಕ್ಕುಸಿಕ್ಕಿದ ಹೆಂಗಸರನ್ನು ಮನೆಗೆ ಕರೆದುಕೊಂಡು ಬರುತ್ತಿದ್ದರು. ಅವರ ಹೆಂಡತಿ

ವೀರಮ್ಮ ಪ್ರತಿಭಟಿಸಿದಳು. ಗಂಡ ಹೆಂಡತಿಗೆ ಬಡಿದಾಟವಾಗುತ್ತಲೇ ಇತ್ತು. ಈ ವಿಷಯ ನೆರೆಹೊರೆಯವರೆಲ್ಲರಿಗೂ ಗೊತ್ತಿತ್ತು. ಒಂದು ದಿವಸ ಮಾತು ಪ್ರಕೋಪಕ್ಕೆ ಹೋಯಿತು. ಮಹಂತದೇವರು ಕರೆದು ತಂದಿದ್ದ ಹೆಂಗಸನ್ನು ವೀರಮ್ಮ ಬೀದಿಗೆಳೆದು ಪರಕೆ ತೆಗೆದುಕೊಂಡು ಹೊಡೆದರು. ಈ ಘಟನೆ ನಡೆದ ನಾಲ್ಕೇ ದಿವಸಗಳಲ್ಲಿ ವೀರಮ್ಮನ ಕಥೆ ಮುಗಿದೇಹೋಯಿತು. ಹೆಣ ಮಹಜರ್ ಆಗಿ, ಆಕೆಯ ಕುತ್ತಿಗೆಯ ಮೇಲೆ ಬೆರಳುಗಳ ಗುರುತಿದೆಯೆಂದು ಡಾಕ್ಟರು ರಿಕಾರ್ಡು ಮಾಡಿದರು. ಕೊಲೆ ನಡೆದಿದೆಯೆಂದು ಸಿದ್ಧಮಾಡಿಕೊಡಲು ನೂರಾರು ಜನ ಸಿದ್ಧರಾಗಿದ್ದರು. ಆದರೆ ಎಲ್ಲಾ ತಲೆಕೆಳಗಾಯಿತು. ಡಾಕ್ಟರ್ ರಿಪೋರ್ಟು, ಪೋಲೀಸಿನವರ ಡೈರಿಗಳು ಎಲ್ಲಾ ಅದಲುಬದಲಾದುವು. ಹೃದಯ ಸ್ತಂಭನದಿಂದ ಸಾವಾಯಿತೆಂದು ಕೋರ್ಟು ಇತ್ಯರ್ಥಮಾಡಿತು. ಮಹಂತದೇವರಂಥ ಲೋಕೋಪಕಾರಿಯನ್ನುಳಿಸಿದ ಕೀರ್ತಿ ರಾಘವೇಂದ್ರರಾಯರಿಗೇ ಸಲ್ಲಬೇಕು.”

ಮಾಧವರಾಯ ಅವಾಕ್ಕಾಗಿ ಬಿಟ್ಟ.

“ಮಹಂತದೇವರ ಚರಿತ್ರೆ ಇಷ್ಟು ಪ್ರಸಿದ್ಧವಾಗಿದ್ದರೂ ಜನ ಅವರನ್ನು ಗೌರವಿಸುವುದು ಹೆಚ್ಚಲ್ಲವೇ ಗೌಡರೇ ?”

“ಈ ಕಾಲದಲ್ಲಿ ಕತ್ತೆಗೂ ಕುದುರೆಗೂ ಏನು ವ್ಯತ್ಯಾಸವಿದೆ ಸಾರ್. ದುಡ್ಡಿದ್ದರೆ ಆಯಿತು. ಯಾರನ್ನು ಬೇಕಾದರೂ ಒಲಿಸಿಕೊಳ್ಳಬಹುದು.”

“ನಾನೇನು ಮಾಡಬೇಕು ?”

“ನಮ್ಮ ಜತೆ ಚುನಾವಣೆಗೆ ನಿಲ್ಲಬೇಕು.”

“ಆಗಬಹುದು. ಹೇಗೂ ನಿಮ್ಮ ಮಾತಿಗೆ ನಾನು ಪ್ರತಿ ಹೇಳುತ್ತಿರಲಿಲ್ಲ; ಈಗ ಮಹಂತದೇವರ ಮಹಾಪುರಾಣ ಕೇಳಿದ ಮೇಲೆ ಚುನಾವಣೆಗೆ ನಿಲ್ಲುವುದು ನನ್ನ ಕರ್ತವ್ಯ ಎಂದು ತೋರುತ್ತಿದೆ.” ಎಂದು ತನ್ನ ಒಪ್ಪಿಗೆ ಸೂಚಿಸಿದ.

ಚುನಾವಣೆಯ ಪ್ರಸಾರ ರಭಸದಿಂದ ಆರಂಭವಾಯಿತು.

ರಾಘವೇಂದ್ರರಾಯರ ಕಕ್ಷಿಗಾರರು, ಮಹಂತದೇವರ ಪರಿವಾರ ಅವಿಶ್ರಾಂತರಾಗಿ ದುಡಿಯತೊಡಗಿದ್ದರು. ಸ್ವಾಮಿಗಳು ಪಟ್ಟಣದಲ್ಲಿ ಮೊಕ್ಕಾಂಮಾಡಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಓಟುಗಳನ್ನು ದೊರಕಿಸ ತೊಡಗಿದ್ದರು.

ಚುನಾವಣೆಗೆ ಒಂದು ವಾರ ಮೊದಲಿನಿಂದಲೂ ಮಹಂತದೇವರು ಊರಿನ ಹೆಂಡದಂಗಡಿಗಳನ್ನೆಲ್ಲಾ ಗುತ್ತಿಗೆಗೆ ತೆಗೆದುಕೊಂಡಿದ್ದರು. ಸುತ್ತಮುತ್ತಲಿನ ಹೊಲೆಯರು, ಮಾದಿಗರು, ರೈತರು ಎಂಟು ದಿವಸ ಹೆಂಡಕ್ಕೆ ಒಂದು ಬಿಡಿಗಾಸೂ ಖರ್ಚುಮಾಡಲಿಲ್ಲ.

ಕೇಶವಯ್ಯಂಗಾರ್, ಶಾಂತರಾಜಪ್ಪ, ಮಹಂತದೇವರು, ರಾಘವೇಂದ್ರರಾಯರು ಒಂದು ಗುಂಪಾಗಿ ಕೆಲಸಮಾಡುತ್ತಿದ್ದರೂ ಪ್ರತಿಯೊಬ್ಬರೂ ಇತರರಿಗೆ ತಿಳಿಯದಂತೆ 'ಸಿಂಗಲ್ ಓಟ'ಗೆ ಪ್ರಯತ್ನಿಸುತ್ತಿದ್ದರು.

ಸ್ಪರ್ಧೆ ದಿನದಿನಕ್ಕೆ ತೀಕ್ಷ್ಣವಾಯಿತು. ಒಂದೆರಡು ಕಡೆ ಉಭಯ ಪಕ್ಷದ ಮತದಾರರಿಗೆ ಬಡಿದಾಟವೂ ಆಯಿತು. ಮಾಧವರಾಯ ತಕ್ಷಣ ಸ್ಥಳಕ್ಕೆ ಹೋಗಿ ಪರಿಸ್ಥಿತಿಯನ್ನು ಹತೋಟಿಗೆ ತಂದ.

ರಾಘವೇಂದ್ರರಾಯರ ಕಛೇರಿಯಲ್ಲಿ ಪ್ರತಿ ಸಂಜೆ ಸಭೆ ಸೇರಿ ಅಂದಿನ ಚಟುವಟಿಕೆಗಳ ವಿಮರ್ಶೆಯಾಗುತ್ತಿತ್ತು.

"ಅವರ ಪೈಕಿ ಜವರೇಗೌಡರು ಬಂದರೆ ಬರಬಹುದು. ಉಳಿದವರು ಡಿಪಾಸಿಟ್ ಕಳೆದುಕೊಳ್ಳುತ್ತಾರೆ ನೋಡಿ" ಎಂದು ರಾಘವೇಂದ್ರ ರಾಯರು ಸಾರಿದರು.

"ಮಿಕ್ಕವರು ಬಂದರೂ ಚಿಂತೆಯಿಲ್ಲ – ಜವರೇಗೌಡನ್ನ ಉರುಳಿಸಬೇಕು ಸ್ವಾಮಿ. ಅವನು ಬಲಿಷ್ಠನಾಗಿಬಿಟ್ಟರೆ ನಮಗೆ ಕಷ್ಟಕ್ಕಿಟ್ಟುಕೊಳ್ಳುತ್ತದೆ."

"ಗೌಡರಿಗೆ ರೈತರ ಬೆಂಬಲ ಬಹಳ ಇದೆ ಮಹಂತದೇವರೇ. ಅವರನ್ನು ಉರುಳಿಸುವುದು ತುಂಬ ಕಷ್ಟ."

ನಾಲ್ಕು ಜನ ತುಂಡಾಂಡಿಗರನ್ನು ಬಿಟ್ಟು ಗೌಡರ ಕಥೆ ಮುಗಿಸಿ

ಬಿಡಬೇಕೆಂದು ಮಹಂತದೇವರ ಮನಸ್ಸಿಗೆ ಬಂತು.

ಮಹಂತದೇವರ ದುರಾಲೋಚನೆ ಮೊದಲು ತಿಳಿದುದು ಷರೀಫ್ ಸಾಹೇಬರಿಗೆ. ಮಹಂತದೇವರ ಪರಮಶಿಷ್ಯ ಹೊಲೆಯರ ಹನುಮ ಕುಡಿದ ವೇಳೆಯಲ್ಲಿ ರಹಸ್ಯವನ್ನು ಹೊರಗೆಡವಿದ್ದ. ಷರೀಫ್ ಸಾಹೇಬರಿಂದ ಉಪಕೃತನಾಗಿದ್ದ ಕರಿಯ ಈ ಸುದ್ದಿ ತಂದು ಸಾಹೇಬರ ಕಿವಿ ಮುಟ್ಟಿಸಿದ.

ಸಾಹೇಬರು ಸ್ವಲ್ಪವೂ ಕಾಲವಿಳಂಬ ಮಾಡಲಿಲ್ಲ. ಗೌಡರ ಮನೆ ಹಗಲು ರಾತ್ರಿ ಕಾಯುವುದಕ್ಕೆ ತುಂಡಾಂಡಿಗರಾದ ಎಂಟು ಜನರನ್ನು ನಿಯಮಿಸಿದರು. ತಮ್ಮ ಮಸ್ತಾನನ್ನು ಕರೆದು

"ಗೌಡರ ಬೆನ್ನು ಬಿಡಬೇಡ. ರಿವಾಲ್ವರ್ ಜೇಬಿನಲ್ಲಿಟ್ಟುಕೊಂಡು ಸದಾ ಗೌಡರ ಜತೆಗಿರಬೇಕು. ಗೌಡರ ಮೇಲೆ ಯಾರಾದರೂ ಕೈಮಾಡಿದರೆ ಹಿಂದೆ ಮುಂದೆ ನೋಡದೆ ರಿವಾಲ್ವಾರ್ ಉಪಯೋಗಿಸು-ಮುಂದಿನ ವಿಷಯ ನಾನು ನೋಡಿಕೊಳ್ಳುತ್ತೇನೆ. ನಿನ್ನ ಅಜಾಗರೂಕತೆಯಿಂದ ಗೌಡರಿಗೆ ಏನಾದರೂ ಅಪಘಾತವಾದರೆ ನಿನ್ನ ಜೀವ ತೆಗೆದುಕೊಳ್ಳುತ್ತೇನೆ" ಎಂದರು.

ಮಹಂತದೇವರ ಪುಂಡುಧೈರ್ಯ ಉಡುಗಿಹೋಯಿತು.

ಎಲೆಕ್ಷನ್ ಹುರುಪಿನಿಂದ, ಸ್ಪರ್ಧೆಯಿಂದ ಸಾಗಿತು. ಸಮಬಲವಿದ್ದ ಉಭಯಪಕ್ಷಗಳಲ್ಲಿ ಜಯಮಾಲೆ ಯಾರ ಕೊರಳಿಗೆ ಬೀಳುವುದೆಂದು ಹೇಳಲು ಸಾಧ್ಯವಿರಲಿಲ್ಲ.

ಫಲಿತಾಂಶ ಹೊರಬೀಳುವ ದಿನವಂತೂ ಜನಗಳ ಉತ್ಸಾಹ ಹೇಳತೀರದು. ಊರಿಗೆ ಊರೇ ತಾಲ್ಲೂಕು ಕಛೇರಿಯ ಮುಂದೆ ನಿಂತಿತ್ತು.

ನಾಲ್ಕು ಸ್ಥಾನಗಳಲ್ಲಿ ಮೊದಲನೆಯ ಸ್ಥಾನ ಜವರೇಗೌಡರದಾಯಿತು. ಎರಡನೆಯ ಸ್ಥಾನ ಮಾಧವರಾಯರದಾಯಿತು. ಮೂರನೆಯ ಸ್ಥಾನ ಷರೀಫ್ ಸಾಹೇಬರದಾಯಿತು, ನಾಲ್ಕನೆಯ ಸ್ಥಾನ ರಾಘವೇಂದ್ರರಾಯರದಾಯಿತು. ಮಾಧವರಾಯನ ಪಕ್ಷಕ್ಕೆ ಒಂದು

ಸೋಲೂ, ರಾಘವೇಂದ್ರರಾಯರ ಪಕ್ಷಕ್ಕೆ ಮೂರು ಸೋಲುಗಳೂ ಆಗಿದ್ದವು.

ಮಹಂತದೇವರು ಕಿಡಿಕಿಡಿಯಾಗಿ

"ಸೂಳೇಮಕ್ಕಳು – ನಾನು ಕೊಡಿಸಿದ ಹೆಂಡ ಕುಡಿದು ಜವರೇ ಗೌಡನಿಗೆ ಓಟು ಹಾಕಿದ್ದಾರೆ" ಎಂದು ರೇಗಾಡಿದರು.

"ನಮ್ಮ ಜತೆ ಇದ್ದ ಶಾಸ್ತ್ರಮಾಡಿ ರಾಘವೇಂದ್ರರಾಯರು ಸಿಂಗಲ್ ಓಟ್ ಹಾಕಿಸಿಕೊಂಡಿದ್ದಾರೆ" ಎಂದು ಶಾಂತರಾಜಪ್ಪ ಟೀಕಿಸಿದ.

ಮಾಧವರಾಯರಿಗೂ ಅವರ ಮಿತ್ರರಿಗೂ ಮಿಗಿಲಾದ ಆನಂದ ವಾಗಿತ್ತು.

ಎಲೆಕ್ಷನ್ ವಿಜಯ ದೊರೆತ ಎರಡು ವಾರಗಳಲ್ಲಿ ಮಾಧವರಾಯ ನಿಗೆ ಪುತ್ರೋತ್ಸವವಾಯಿತು.

ರುಕ್ಮಿಣಿಯ ಆರೈಕೆಗೆ ರಂಗಮ್ಮನವರು ಒಬ್ಬರೇ ಬಂದರು. ತಾವು ಊರಿಗೆ ಹೋಗುವವರೆಗೆ ರಾಮು ಹಾಸ್ಟಲಿನಲ್ಲಿ ಊಟಮಾಡುವುದೆಂದು ವ್ಯವಸ್ಥೆ ಮಾಡಿ ಬಂದಿದ್ದರು.

ಗೋದಮ್ಮನವರ ಸಂತೋಷಕ್ಕೆ ಪಾರವೇ ಇರಲಿಲ್ಲ. ತಮ್ಮ 'ಕುಲದೀಪಕ'ನನ್ನು ಎಷ್ಟು ನೋಡಿದರೂ ತೃಪ್ತಿಯಿಲ್ಲ – ಎಷ್ಟು ಆಡಿ ಸಿದರೂ ಸಾಲದು. ಮಗ್ಗುಲಲ್ಲಿ ಮಗುವನ್ನು ಮಲಗಿಸಿಕೊಂಡು, ಮಲಗಿದ್ದ ರುಕ್ಮಿಣಿಯನ್ನು ನೋಡಿ

"ಯಶೋಧಾ ಕೃಷ್ಣರನ್ನು ಕಣ್ತುಂಬ ನೋಡಿದ ಹಾಗಾಯಿತು" ಎನ್ನುತ್ತಿದ್ದರು. ಒಮ್ಮೊಮ್ಮೆ ತಮ್ಮ ಅತಿ ಮಮತೆಯನ್ನು ತಾವೇ ಖಂಡಿಸುತ್ತಾ

"ಸದ್ಯ–ನನ್ನ ಕಣ್ಣು ಬಿದ್ದು ತಾಯಿ, ಮಗುವಿಗೆ ಎಲ್ಲಿ ದೃಷ್ಟಿ ತಾಕುತ್ತದೋ" ಎನ್ನುತ್ತಿದ್ದರು. ರಂಗಮ್ಮ ಬೀಗಿತ್ತಿಯ ಮಾತು ವಿರೋಧಿಸಿ

"ನಿಮ್ಮ ದೃಷ್ಟಿಕೊಡುವ ಚೈತನ್ಯದಿಂದಲೇ ತಾಯಿ – ಮಗು ಬೆಳೆಯಬೇಕು ಗೋದಮ್ಮನವರೇ." ಎನ್ನುತ್ತಿದ್ದರು.

ಮಗುವಿಗೆ ಏನು ಹೆಸರಿಡಬೇಕೆಂದು ಮನೆಯಲ್ಲಿ ಚರ್ಚೆಯೆದ್ದಿತು
ಕೃಷ್ಣನ ಹೆಸರಿಡಬೇಕೆಂದು ರುಕ್ಮಿಣಿ ; ತಿರುಪತಿ ವೆಂಕಟಾಚಲಪತಿಯ
ಹೆಸರಿಡಬೇಕೆಂದು ಗೋದಮ್ಮನವರು ; ಮುಖ್ಯಪ್ರಾಣದೇವರ ಹೆಸರಿಡ
ಬೇಕೆಂದು ರಂಗಮ್ಮನವರು ಸೂಚಿಸಿದರು.

ಕೊನೆಗೆ ವಿಷಯ ಮಾಧವರಾಯನಲ್ಲಿ ಇತ್ಯರ್ಥಕ್ಕೆ ಬಂತು
ಅವನು ಮೂವರ ಸಲಹೆಯನ್ನೂ ಮನಸ್ಸಿನಲ್ಲಿಯೇ ವಿಚಾರಮಾಡಿ

"ನೀವು ಸೂಚಿಸಿರುವ ಮೂರು ಹೆಸರೂ ಚೆನ್ನಾಗಿದೆ. ಈ
ವಿಷಯದಲ್ಲಿ ನನ್ನದೊಂದು ಸಲಹೆಯಿದೆ" ಎಂದು ಹೇಳಿದ

"ಅದೋನು ಮಾಧೂ........" ಎಂದು ಗೋದಮ್ಮ ಕೇಳಿದರು.

"ನನ್ನ ಗುರುವಾಗಿ, ತಂದೆಯಾಗಿ, ಸ್ನೇಹಿತರಾಗಿ ರಕ್ಷಿಸಿ ಕಾಪಾ
ಡಿದ ಪುಣ್ಯ ಪುರುಷರೊಬ್ಬರಿದ್ದರಷ್ಟೆ. ಇವತ್ತು ನನ್ನ ಶ್ರೇಯಸ್ಸು,
ಗೌರವ, ಸ್ಥಾನಮಾನಗಳೆಲ್ಲಾ ಅವರ ಕೃಪಾವಿಶೇಷ. ಮಗುವಿಗೆ ಅವರ
ಹೆಸರು 'ನಾರಾಯಣಸ್ವಾಮಿ' ಎಂದು ಇಟ್ಟರೆ ನನ್ನ ಮನಸ್ಸಿಗೆ ತುಂಬ
ಸಂತೋಷವಾಗುತ್ತದೆ" ಎಂದು ಹೇಳಿದ. ಯಾರೂ ಭಿನ್ನಾಭಿಪ್ರಾಯ
ವ್ಯಕ್ತಮಾಡಲಿಲ್ಲ. ಅಳಿಯನ ಸ್ವಾಮಿಭಕ್ತಿಯನ್ನು ಮೆಚ್ಚಿಕೊಂಡ
ರಂಗಮ್ಮನವರು ಬೀಗಿತ್ತಿಯೆದುರಿಗೆ

"ಅವರು ಹೇಳುವುದು ನ್ಯಾಯ. ಅನ್ನವಿಟ್ಟ ಧಣಿಯನ್ನು ಸ್ಮರಿಸಿ
ಕೊಳ್ಳದಿದ್ದರೆ ದೇವರು ಮೆಚ್ಚುತ್ತಾನೆಯೇ ?" ಎಂದರು.

೨೪

ರುಕ್ಮಿಣಿ ಬಾಣಂತನ ಮುಗಿಯುವವೇಳೆಗೆ ಶಾಲೆಗಳಿಗೆ ಬೇಸಿಗೆ ರಜಾ ಬಂದುಬಿಟ್ಟಿತು. ರುಕ್ಮಿಣಿ ತಾಯಿಯನ್ನು ಪಟ್ಟಣದಲ್ಲಿಯೇ ಉಳಿಸಿಕೊಂಡು ತಮ್ಮನನ್ನು ಅಲ್ಲಿಗೆ ಕರೆಸಿಕೊಂಡಳು.

ಮಾಧವರಾಯನ ಪ್ರ್ಯಾಕ್ಟೀಸ್ ಬೆಳೆದು ರಾಘವೇಂದ್ರರಾಯರ ಸರಿಜೋಡಿಯಾಗಿ ನಿಂತಿತು. ಕೆಲಸ ಅಳತೆ ಮೀರಿ ಬೆಳೆಯುದರಿಂದ ಅವನು ಬಿ. ಎ., ಎಲ್ ಎಲ್. ಬಿ. ಪಾಸುಮಾಡಿದ್ದ ಶೇಷಪ್ಪನನ್ನು 'ಜೂನಿಯರ್' ಆಗಿ ತೆಗೆದುಕೊಂಡು, ತಿಂಗಳಿಗೆ ನೂರು ರೂಪಾಯಿ ಸಂಬಳ ಕೊಡಲು ಮೊದಲುಮಾಡಿದ.

ಮಾಧವರಾಯನಿಗೆ ಹಣ, ಕೀರ್ತಿ, ಸಮಾಜದಲ್ಲಿ ಘನತೆ ಎಲ್ಲವೂ ಧಾರಾಳವಾಗಿ ಪ್ರಾಪ್ತವಾದವು. ಅವನ ಮನಸ್ಸಿನಲ್ಲಿ ಒಂದು ಚಿಂತೆ ಮೂಡಿತ್ತು. ಒಂದು ದಿನ ರುಕ್ಮಿಣಿಯ ಜತೆ ಮಾತನಾಡುತ್ತಾ

"ಅಮ್ಮನಿಗೂ ಅತ್ತೆಮ್ಮನವರಿಗೂ ನಾನು ಏನೂ ಮಾಡಿದ ಹಾಗಾಗಲಿಲ್ಲ." ಎಂದ. ರುಕ್ಮಿಣಿ ಸೂಕ್ಷ್ಮವಾಗಿ

"ನಾನೊಂದು ವಿಷಯ ಹೇಳುತ್ತೇನೆ ಮಾಡುವಿರಾ ?" ಎಂದು ಕೇಳಿದಳು.

"ಹೇಳು. ಅವಶ್ಯಕವಾಗಿ ಮಾಡುತ್ತೇನೆ."

"ಇಬ್ಬರಿಗೂ ತೀರ್ಥಯಾತ್ರೆ ಮಾಡಬೇಕೆಂದು ಆಸೆಯಿದೆ—

ನಿಮಗೂ ಕೋರ್ಟಿಗೆ ರಜಾ ಬರುತ್ತದೆ. ಅವರನ್ನು ಕರೆದುಕೊಂಡ
ಹೋಗಿ ಉಡುಪಿ, ಧರ್ಮಸ್ಥಳ, ಮಂತ್ರಾಲಯ ತೋರಿಸಿಕೊಂಡ
ಬಂದರೆ ತುಂಬ ಸಂತೋಷಪಡುತ್ತಾರೆ."

"ನೀನು."

"ಅಮ್ಮನನ್ನು ಕೇಳುತ್ತೇನೆ -- ನಾನು ಬರಬಹುದೆಂದ
ಬರುತ್ತೇನೆ."

"ನಿನ್ನ ಸಲಹೆ ತುಂಬ ಯೋಗ್ಯವಾದದ್ದು ರುಕ್ಕೂ. ಪ್ರವಾಸಕ್
ಬೇಕಾಗುವಷ್ಟು ದುಡ್ಡು ಒದಗಿಸಿಕೊಂಡು ನಾನು ಸಿದ್ಧವಾಗಿರುತ್ತೇನೆ
ನೀನು ಯಾವತ್ತು ಹೊರಡು ಎನ್ನುವಿಯೋ ಅವತ್ತು ಹೊರಡಲು ಸಿದ್ಧ
ಎಂದು ಹೇಳಿದ. ರುಕ್ಮಿಣಿ ಅತ್ತೆ, ತಾಯಿ ಇಬ್ಬರಿಗೂ ಈ ವಾರ್ತೆ
ಮುಟ್ಟಿಸಿದಳು.

"ಗುಂಪು ದೊಡ್ಡದಾಗುತ್ತದಲ್ಲೇ ರುಕ್ಕೂ. ಗೋದಮ್ಮನವರು
ಕಮಲೂ, ಶ್ರೀದೇವಿ, ನಾನು, ನೀನು, ನಿನ್ನ ಯಜಮಾನರು, ರಾಮು
ಸಣ್ಣ ಮಗು-ಎಲ್ಲಾ ಒಟ್ಟು ಎಂಟು ಜನ ಆಗುತ್ತೇವೆ. ಗುಂಡಾಚಾರ್ರು
ಜತೆಯಲ್ಲಿ ಬಂದರೆ ನಮ್ಮ ಪೂಜೆ, ಪುರಸ್ಕಾರಕ್ಕೆ ಅನುಕೂಲವಾಗುತ್ತದೆ.
ಎಂದು ರಂಗಮ್ಮನವರು ಸೂಚಿಸಿದರು.

"ಅವರು ಎಲ್ಲಿದ್ದಾರೆ ಕಾಗದ ಬರೆಸಿ, ಕರೆಸೀಂದ್ರೆ—ಅಪರೂಪಕ್
ಹೋಗುತ್ತಾ ಇರುವಾಗ ಯಾರನ್ನು ಬಿಟ್ಟು ಹೋಗುವುದು ?" ಎಂದ
ಗೋದಮ್ಮನವರು ಒತ್ತಾಸೆಕೊಟ್ಟರು.

ಗುಂಡಾಚಾರ್ರು ಇರಬಹುದಾದ ಕಡೆಗಳಿಗೆಲ್ಲಾ ಕಾಗದಗಳ
ಹೋದವು. ಎಂಟು ದಿನಗಳ ತರುವಾಯ ಆಚಾರ್ರು ತಮ್ಮ ಹಸಿ
ಚೀಲ, ದೇವರ ಪೆಟ್ಟಿಗೆ ಹೊತ್ತುಕೊಂಡು ಪಟ್ಟಣದಲ್ಲಿ ಇಳಿದುಬಿಟ್ಟರು

ರಂಗಮ್ಮ, ಗೋದಮ್ಮ ಕುಳಿತುಕೊಂಡು ಆಚಾರ್ರ ಜ
ಚರ್ಚೆಮಾಡಿ 'ತೀರ್ಥಯಾತ್ರೆ' ಹೋಗುವ ಸ್ಥಳಗಳನ್ನು ನಿರ್ಧರಿಸಿದರು.

"ಮೊದಲು ಬೇಲೂರು—ಶೃಂಗೇರಿ—ಉಡುಪಿ—ಅಲ್ಲಿಂದಸುಬ್ರ
ಹ್ಮಣ್ಯ-ಧರ್ಮಸ್ಥಳ-ಅಲ್ಲಿಂದ ಮಂತ್ರಾಲಯ-ಮಲಖೇಡ. ಮಂತ್ರಾ

ಲಯದಿಂದ ತಿರುಪತಿಗೆ ಹೋಗಿ ಬರುವುದು. ಎಲ್ಲಾ ಕಡೆಗಳಲ್ಲಿಯೂ ನನ್ನ ಗುರುತಿನವರಿದ್ದಾರೆ–ಬೇಕಾದ ವ್ಯವಸ್ಥೆ ನಾನು ಮಾಡಿಸುತ್ತೇನೆ." ಎಂದು ಆಚಾರ್ರು ಭರವಸೆಯಿತ್ತರು.

ನಾರಾಯಣಸ್ವಾಮಿಗೆ ಆದೇ ಐದನೆಯ ತಿಂಗಳು ನಡೆಯುತ್ತಿತ್ತು. ಪ್ರಯಾಣದ ಆಯಾಸದಿಂದ ಮಗುವಿಗೆ ಹಿಂಸೆಯಾದೀತು – ನಾನು ಬರುವುದಿಲ್ಲ ಎಂದು ರುಕ್ಮಿಣಿ ಹಿಂದೆಗೆದಳು. 'ನಿನ್ನ ಮಗುವಿನ ಜವಾಬ್ದಾರಿ ನನಗಿರಲಿ. ಅದಕ್ಕೇನಾದರೂ ಆದರೆ ನಾನು ಹೊಣೆ' ಎಂದು ರಂಗಮ್ಮನವರು ಮಗಳನ್ನೊಪ್ಪಿಸಿದರು.

ಒಳ್ಳೆಯ ದಿನ ನೋಡಿಕೊಂಡು ಮಾಧವರಾಯ, ಸಂಸಾರ ಸಮೇತನಾಗಿ ಯಾತ್ರೆ ಹೊರಟ.

ಬೇಲೂರಿನಲ್ಲಿ ಶ್ರೀ ಚನ್ನಕೇಶವಸ್ವಾಮಿಗೆ ಅಭಿಷೇಕ ಮಾಡಿಸಿದ್ದಾಯಿತು. ಸ್ವಾಮಿಯ ಶಿರದಮೇಲೆ ಅಭಿಷೇಕ ಮಾಡಿದ ಹಾಲು, ನೀರು, ಜೇನುತುಪ್ಪ ಮುತ್ತಿನವೃಷ್ಟಿ ಕರೆದುತಿತ್ತು.

ಶೃಂಗೇರಿಯಲ್ಲಿ ಶ್ರೀ ಶಾರದಮ್ಮನವರ ದರ್ಶನ ಮಾಡಿದ್ದಾಯಿತು. ರುಕ್ಮಿಣಿ ಭಕ್ತಿಯಿಂದ

"ತಾಯೀ—ನನ್ನ ಮಕ್ಕಳಿಗೆ ತುಂಬ ವಿದ್ಯಾಬುದ್ಧಿ ಕೊಡು"ಎಂದು ಪ್ರಾರ್ಥಿಸಿಕೊಂಡಳು.

ಸುಬ್ರಹ್ಮಣ್ಯದಲ್ಲಿ ಸೇವೆ ಸಲ್ಲಿಸಿ ಯಾತ್ರಾರ್ಥಿಗಳು ಉಡುಪಿ ಸೇರಿದರು. ಶ್ರೀಕೃಷ್ಣದೇವರಿಗೆ ಪಂಚಾಮೃತ ಅಭಿಷೇಕ, ಮಹಾಪೂಜೆ, ಚಿನ್ನದ ತೊಟ್ಟಿಲು ಸೇವೆ, ಚಿನ್ನದ ಪಲ್ಲಕ್ಕಿ ಸೇವೆಗಳನ್ನು ಮಾಡಿಸಿದ್ದಾಯಿತು. ಎಂಟು ಮಠಗಳಿಗೂ ಹೋಗಿ ಯತಿಗಳಿಗೆ ಭಕ್ತಿಪೂರ್ವಕವಾಗಿ ಕಾಣಿಕೆ ಅರ್ಪಿಸಿದರು, ಗೋದಮ್ಮ ರಂಗಮ್ಮ ಇಬ್ಬರಿಗೂ ಉಡುಪಿಯಲ್ಲಿ ಪುನರ್ಜನ್ಮ ಬಂದಂತಾಯಿತು. ಮಲ್ಪೆಯಲ್ಲಿ ಸಮುದ್ರ ಸ್ನಾನ ಮಾಡಿಕೊಂಡು ಯಾತ್ರಾರ್ಥಿಗಳು ಧರ್ಮಸ್ಥಳ ತಲುಪಿದರು. ಅಲ್ಲಿ ಶ್ರೀ ಮಂಜುನಾಥಸ್ವಾಮಿಗೆ ಮಂಗಳಾರತಿ ಮಾಡಿಸಿ, ಕಾಣಿಕೆ ಅರ್ಪಿಸಿ ಶ್ರೀ ಮಂಜಯ್ಯ ಹೆಗ್ಗಡೆಯವರ ದರ್ಶನ ಪಡೆದರು. ಶ್ರೀ

ಹೆಗ್ಗಡೆಯವರ ವಿನಯ, ಸೌಜನ್ಯ, ಅತಿಥಿ ಸತ್ಕಾರ ಯಾತ್ರಾರ್ಥಿಗಳನ್ನು ಆನಂದಪರವಶರನ್ನಾಗಿ ಮಾಡಿತು. 'ಎಂಥ ದಿವ್ಯ ತೇಜಸ್ಸು' ಎಂದು ಮಾಧವರಾಯ ನುಡಿಯಲು ಗೋದಮ್ಮನವರು

"ನೋಡು ಮಗೂ—ಸದಾ ದುಡ್ಡನ್ನು ಧ್ಯಾನ ಮಾಡುವವ ಮುಖದಮೇಲೆ ದುಡ್ಡಿನ ಮುದ್ರೆಯೇ ಬಿದ್ದಿರುತ್ತದೆ. ಸದಾ ಭಗವಂತನ ಚಿಂತನೆಯಲ್ಲಿರುವವರ ಮುಖದ ಮೇಲೆ ಭಗವಂತನ ತೇಜಸ್ಸುಮೂ ರುತ್ತದೆ." ಎಂದರು.

ಅಲ್ಲಿಂದ ಮಲಖೇಡಕ್ಕೆ ಹೋಗಿ, ಮಲಖೇಡದಿಂದ ಮಂತ್ರಾ ಲಯ ತಲುಪಿದರು. ರಾಯರ ವೃಂದಾವನಕ್ಕೆ ಪೂಜೆ ಸಲ್ಲಿಸಿ ಯಾತ್ರಾರ್ಥಿಗಳು ತಿರುಪತಿ ತಲುಪಿದರು.

ತಿರುಪತಿಯಲ್ಲಿ ಭಗವಂತನ ದರ್ಶನ ಹೃದಯಕ್ಕೆಷ್ಟು ಆಪ್ಯಾಯ ವಾಯಿತೋ ಅಷ್ಟೇ ಪೂಜಾರಿಗಳ ದುರಾಸೆ ಬೇಸರಪಡಿಸಿತು.

ಯಾತ್ರೆ ಸಾಂಗವಾಗಿ ಪೂರೈಸಿದ ಮೇಲೆ ಮಾಧವರಾಯ, ಅವನ ಸಂಸಾರದವರು ಒಂದೂವರೆ ತಿಂಗಳ ತರುವಾಯ ಊರು ತಲುಪಿದರು. ಮನೆಗೆ ಬಂದೊಡನೆಯೇ ರಂಗಮ್ಮನವರು ಮಗಳಿಗೆ

"ನಿನ್ನ ಮಗುವಿಗೆ ಏನಾಯಿತಮ್ಮ" ಎಂದು ಕೇಳಿದರು.

ಯಾರಿಗೂ ಯಾವ ಬಗೆಯ ತೊಂದರೆಯೂ ಆಗದೆ ಯಾತ್ರೆಸುಖ ವಾಗಿ ನೆರವೇರಿತ್ತು. ಗುಂಡಾಚಾರ್ಯರು ಸಮಸ್ತ ವ್ಯವಸ್ಥೆಯನ್ನೂ ಅಚ್ಚುಗಟ್ಟಾಗಿ ಮಾಡಿದ್ದರು.

"ಸಮಾರಾಧನೆ ಮಾಡಿ ಹತ್ತು ಜನಕ್ಕೆ ಅನ್ನ ಹಾಕಿದ ಹೊರತು ಯಾತ್ರೆಯ ಫಲ ಲಭಿಸುವುದಿಲ್ಲ" ಎಂದು ಗುಂಡಾಚಾರ್ಯರು ಎಚ್ಚರಿ ಕೊಟ್ಟರು.

ಊರಿಗೇ ಆಮಂತ್ರಣ ಹೋಯಿತು. ಸಮಾರಾಧನೆ ಮುಗಿ ಮೇಲೆ ಗುಂಡಾಚಾರ್ಯರು ಮರ್ಯಾದೆ ಸ್ವೀಕರಿಸಿ ಪ್ರಯಾಣ ಮಾಡಿದರು.

ಸ್ಕೂಲು ಬಾಗಿಲು ತೆಗೆಯುವುದಕ್ಕೆ ಇನ್ನೂ ವೇಳೆಯಿತ್ತು

'ಸ್ಕೂಲು ತೆಗೆಯುವ ವೇಳೆಗೆ ಊರಿಗೆ ಹೋದರಾಯಿತು' ಎಂದು ರುಕ್ಮಿಣಿ ತಾಯಿಯ ಪ್ರಯಾಣ ನಿಲ್ಲಿಸಿಬಿಟ್ಟಳು.

ಯಾತ್ರೆ ಮುಗಿಸಿಕೊಂಡು ಬಂದಮೇಲೆ ರಂಗಮ್ಮನವರ ಮೈಗೆ ಆಯಾಸವಾಗಿತ್ತು. ಆಗಾಗ್ಗೆ ಜ್ವರ ಕಾಣಿಸಿಕೊಂಡರೂ ಅವರು ಯಾರಲ್ಲಿಯೂ ಬಾಯಿ ಬಿಡಲಿಲ್ಲ. ಬೀಗಿತ್ತಿಯ ಆರೋಗ್ಯ ನೆಟ್ಟಗಿಲ್ಲ ವೆಂದು ತಿಳಿಯಲು ಗೋದಮ್ಮನವರಿಗೆ ಬಹಳ ದಿನ ಬೇಕಾಗಲಿಲ್ಲ.

"ಡಾಕ್ಟರನ್ನು ಕರೆಸುತ್ತೇನೆ. ಸರಿಯಾಗಿ ಔಷಧ ತೆಗೆದುಕೊಳ್ಳಿ." ಎಂದು ಗೋದಮ್ಮ ಬಲವಂತ ಮಾಡಿದರು. ರಂಗಮ್ಮ ಅವರ ಮಾತಿಗೆ ನಕ್ಕು

"ನಾನೇ ವೈದ್ಯಳು—ನನ್ನ ಮಗಳು ವೈದ್ಯಳು. ನಾನೇ ಡಾಕ್ಟರ ಔಷಧ ತೆಗದುಕೊಂಡರೆ ನಾಚಿಕೆಗೇಡಾಗುವುದಲ್ಲವೇ ?" ಎಂದು ಹೇಳಿ ತಾವೇ ಕಷಾಯ ಮಾಡಿಕೊಂಡು ಕುಡಿಯುತ್ತಿದ್ದರು. ಜ್ವರ ಇಳಿಮುಖಕ್ಕೆ ಬರಲೇ ಇಲ್ಲ. ರಂಗಮ್ಮ ಹಾಸಿಗೆ ಹಿಡಿದು ಮಲಗಿ ಬಿಟ್ಟರು.

ರುಕ್ಮಿಣಿಗೆ ಭಾರಿ ಚಿಂತೆಯಾಯಿತು. ತನ್ನ ವೈದ್ಯಜ್ಞಾನವ ನ್ನೆಲ್ಲಾ ಪ್ರಯೋಗಿಸಿ ತಾಯಿಯ ಚಿಕಿತ್ಸೆ, ಆರೈಕೆ ಮಾಡತೊಡಗಿದಳು.

ಎಷ್ಟೇ ಜ್ವರ ಕಾಯುತ್ತಿದ್ದರೂ ರಂಗಮ್ಮನವರು ತಣ್ಣೀರು ಸ್ನಾನ, ತುಲಸೀ ಪೂಜೆ, ರಂಗನಾಥಸ್ವಾಮಿಯ ದರ್ಶನವನ್ನು ಬಿಡು ತ್ತಿರಲಿಲ್ಲ.

"ಜ್ವರ ಕಾಯುತ್ತಿರುವಾಗ ತಣ್ಣೀರು ಸ್ನಾನ ಮಾಡುತ್ತೀಯಲ್ಲೇ ಅಮ್ಮ" ಎಂದು ರುಕ್ಮಿಣಿ ಆಕ್ಷೇಪಿಸಿದಾಗ ರಂಗಮ್ಮನವರು ನಕ್ಕು ಸುಮ್ಮ ನಾಗುತ್ತಿದ್ದರು.

ರಂಗಮ್ಮನವರ ಸ್ಥಿತಿ ಎಲ್ಲರಿಗೂ ಚಿಂತೆಗೆ ಕಾರಣವಾಯಿತು.

ಒಂದು ದಿನ ರುಕ್ಮಿಣಿ ಅತ್ತುಅತ್ತು ಕಣ್ಣೊರಸಿಕೊಂಡು ತಾಯಿಯ ಸಮೀಪಕ್ಕೆ ಬಂದಳು. ರಂಗಮ್ಮನವರು ಮಗಳ ತಲೆನೇವರಿಸಿ

"ಅತ್ತರೇನಾಗುತ್ತದೆ ರುಕ್ಕೂ."

ರುಕ್ಮಿಣಿಯ ಕಣ್ಣೀರೇ ಉತ್ತರವಾಯಿತು.

"ನನ್ನ ಮನಸ್ಸಿಗೆ ಶಾಂತಿಯಾಗಿದೆ. ಜೀವಮಾನದಲ್ಲಿ ಒಮ್ಮೆ ಉಡುಪಿ, ಧರ್ಮಸ್ಥಳ, ಮಂತ್ರಾಲಯ, ತಿರುಪತಿ ನೋಡಬೇಕೆಂದಿದ್ದೆ. ನಿನ್ನ ಯಜಮಾನರು – ಮಹಾರಾಯರು ಕರೆದುಕೊಂಡು ಹೋಗಿ ದೇವರದರ್ಶನ ಮಾಡಿಸಿಕೊಂಡು ಬಂದರು. ನನ್ನ ಮನಸ್ಸಿನಲ್ಲಿ ಯಾವ ಆಸೆ – ಆತಂಕವೂ ಇಲ್ಲ ರುಕ್ಕೂ. ಸ್ವಾಮಿ ಸಾನ್ನಿಧ್ಯಸೇರುವ ಕಾಲ ಸಮೀಪಿಸಿದೆ – ನಿನ್ನ ಸಂಸಾರ ಇಷ್ಟು ಚೆನ್ನಾದುದು ಕಂಡು ನನಗಾಗಿರುವ ಆನಂದ ಹೇಗೆ ವರ್ಣಿಸಲಿ – ಧರ್ಮದೇವತೆಯಂಥ ಅತ್ತೆ, ದೇವರಂಥ ಪತಿ, ಮುತ್ತಿನಂಥ ಮಕ್ಕಳು, ನಂದಗೋಕುಲದ ಹಾಗಿರುವ ಮನೆ ಇನ್ನೇನು ಬೇಕು – ಅವರು ಕಣ್ಣುಮುಚ್ಚಿಕೊಂಡ ಮೇಲೆ, ನಮಗೆ– ಬಡತನ ಬಂತು. ಕೈಯೆತ್ತಿ ನಾಲ್ಕು ಜನಗಳಿಗೆ ಅನ್ನಹಾಕುವ ಶಕ್ತಿ ಹೋಯಿತು. ಆದಕ್ಕಾಗಿ ನಾನು ತುಂಬ ಗೋಳಾಡಿದೆ. ತುಂಬಿದ ಮನೆ ಬರಿದಾಗಿತ್ತು. ಈಗ ಮನೆ ತುಂಬಿತು. ನೀನೂ – ನಿನ್ನ ಯಜಮಾನರು ಕೈಯೆತ್ತಿ ದಾನಧರ್ಮ ಮಾಡುತ್ತಿರುವಿರಿ. ನಾನು ಕಳೆದುಕೊಂಡ ಸಂಪತ್ತೆಲ್ಲಾ ಪುನಃ ನನಗೆ ಸಿಕ್ಕಿದೆ. – ನನಗಾಗಿ ನೀನು ಕಣ್ಣೀರು ಹಾಕಬಾರದು. ಈ ಘಟ ಒಂದಲ್ಲ ಒಂದು ದಿನ ಹೋಗಲೇ ಬೇಕು. ಸಂತೋಷ ತುಂಬಿರುವಾಗಲೇ ಹೋಗುವುದು ಒಂದು ಭಾಗ್ಯವಲ್ಲವೇ? ರಾಮೂನ ನಿನ್ನ ಕೈಗೆ ಹಾಕಿ ಹೋಗುತ್ತೇನೆ. ನೀನು, ನಿನ್ನ ಯಜಮಾನರೇ ಅವನ ತಾಯಿ ತಂದೆಯಾಗಿ ಅವನನ್ನು ಮುಂದಕ್ಕೆ ತರಬೇಕು. ಅವನಿಂದ ನಮ್ಮ ವಂಶದ ಕೀರ್ತಿ – ಅವನ ತಂದೆಯ ಕೀರ್ತಿ ಬೆಳಗಬೇಕು – ಕೊನೆಗೂ ಅನಂತನ್ನ, ಶ್ರೀನಿವಾಸನ್ನ ನೋಡಲಿಲ್ಲ. ಎಲ್ಲಿಯಾದರೂ ಅವರು ಚೆನ್ನಾಗಿದ್ದರೆ ಸಾಕು – ಅವರು ಯಾವಾಗ ಲಾದರೂ ಬಂದರೆ 'ಅಮ್ಮ ನಿಮ್ಮನ್ನು ನೆನಸಿಕೊಳ್ಳುತ್ತಿದ್ದಳು – ನೀವು ಚೆನ್ನಾಗಿರಲೆಂದು ಮನಃಪೂರ್ವಕವಾಗಿ ಹರಸಿದ್ದಾಳೆ' ಎಂದು ತಿಳಿಸು. ಮಕ್ಕಳು ತಾಯಿಯನ್ನು ಬಿಟ್ಟು ಹೋಗಬಹುದು, ತಾಯಿ ಮಕ್ಕಳನ್ನು ಬಿಟ್ಟು ಹೋಗುವುದು ಕಷ್ಟ ರುಕ್ಕೂ......." ಎಂದರು. ರುಕ್ಮಿಣಿ

ಗಾಬರಿಯಾಗಿ ಅತ್ತೆಯನ್ನು ಕರೆದು

"ಅಮ್ಮ ಏನೇನೊ ಮಾತನಾಡುತ್ತಿದ್ದಾಳೆ ನೋಡಿ" ಎಂದಳು.

ಗೋದಮ್ಮ ಪಕ್ಕದಲ್ಲಿ ಕುಳಿತುಕೊಂಡು ರಂಗಮ್ಮನವರನ್ನು ಸ್ಥಿತಿ ನೋಡಿ

"ಮಾಧೂ ಎಲ್ಲಿದ್ದಾನೆ ನೋಡಿ ಕರೆದುಕೊಂಡು ಬಾ ಎಂದು ಹೇಳು" ಎಂದರು.

ಮಾಧವರಾಯ ಬರುವ ವೇಳೆಗೆ ರಂಗಮ್ಮನವರಿಗೆ ಅಸ್ವಾಥವಸ್ಥೆಯಾಗಿತ್ತು. ರಾಮು ತಾಯಿಯ ಪಕ್ಕದಲ್ಲಿ ಕುಳಿತು ಬಿಕ್ಕಿ ಬಿಕ್ಕಿ ಅಳತೊಡಗಿದ್ದ. ರಂಗಮ್ಮ ಅವನನ್ನು ಗದರಿಸಿಕೊಂಡು

"ಅಳುವುದೇಕೋ ಹುಚ್ಚಾ! ದೇವರಂಥ ಭಾವ ಇರುವಾಗ ನೀನು ಏತಕ್ಕೆ ಯೋಚನೆಮಾಡಬೇಕು." ಎಂದರು.

ಗೋಡೆಯ ಪಕ್ಕದಲ್ಲಿ ಕಣ್ಣೀರು ಸುರಿಸುತ್ತ ನಿಂತಿದ್ದ ಮಾಧವ ರಾಯನನ್ನು ಉದ್ದೇಶಿಸಿ

"ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಿಂತಲೂ ಹೆಚ್ಚಾಗಿ ನನ್ನನ್ನು ಆದರಿಸಿದಿರಿ. ನಿಮ್ಮ ಧರ್ಮಬುದ್ಧಿ ದೈವಿಕವಾದುದು. ಗುರುಗಳಲ್ಲಿ, ಹಿರಿಯರಲ್ಲಿ, ನಿಮಗೆ ಉಪಕಾರ ಮಾಡಿದವರಲ್ಲಿ ನೀವಿಟ್ಟಿರುವ ಭಕ್ತಿಯೇ ನಿಮ್ಮನ್ನು ಕಾಪಾಡುತ್ತದೆ. ಎಲ್ಲಾ ತಿಳಿದವರು ನೀವು – ನಿಮಗೆ ನಾನೇನು ಹೇಳಲಿ." ಎಂದರು.

ಗೋದಮ್ಮನವರಿಗೂ ತಡೆಯಲು ಸಾಧ್ಯವಾಗಲಿಲ್ಲ. ಆ ವೇಳೆಗೆ ಶ್ರೀದೇವಿ, ಕಮಲೂ, ರಾಮು, ರುಕ್ಮಿಣಿ ಎಲ್ಲರೂ ಅಳಲುಪಕ್ರಮಿಸಿದ್ದರು. ಗೋದಮ್ಮನವರ ಕಣ್ಣಿನಲ್ಲಿಯೂ ಧಾರೆ ಹೊರಟಿತ್ತು.

ರಂಗಮ್ಮನವರು ಕಣ್ಣುಮುಚ್ಚಿಮಲಗಿದ್ದರು. ಅವರ ತುಟಿಗಳು ಮಾತ್ರ ಅಲುಗಾಡುತ್ತಿದ್ದವು. ಮೆಲ್ಲನೆ ಕಣ್ದೆರೆದು ಗೋದಮ್ಮನವರ ಕಡೆ ತಿರುಗಿ

"ಗುರುದೇವರ ದರ್ಶನ ಮಾಡಿಸಿ" ಎಂದರು.

ಗೋದಮ್ಮನವರು ಶ್ರೀದೇವಿಯನ್ನು ಕಳಿಸಿ ಶ್ರೀ ರಾಘವೇಂದ್ರ

ಗುರುರಾಯರ ಚಿತ್ರ ತರಿಸಿ, ಅದನ್ನು ರಂಗಮ್ಮನವರ ಮುಂದೆ ಹಿ
ದರು. ರಂಗಮ್ಮ ಚಿತ್ರಪಠಕ್ಕೆ ಕೈಮುಗಿದು ಮತ್ತೆ ಕಣ್ಣುಮು
ಮಲಗಿ

"ಗುರುರಾಯ—ಗುರುರಾಯ—ಗುರುರಾಯ" ಎಂದು ಮೆಲ್ಲ
ಜಪಮಾಡತೊಡಗಿದರು

ತುಟಿಗಳ ಅಲುಗಾಟ ಕ್ರಮಕ್ರಮೇಣ ಸಾವಕಾಶವಾಗು
ಬಂದು ನಿಂತೇ ಹೋಯಿತು.

—ಏಕಾದಶಿ ಪುಣ್ಯತಿಥಿಯ ದಿವಸ ರುಕ್ಮಿಣಿ ತಾಯಿದೇವಿಯನ
ಕಳಿಸಿಕೊಡಬೇಕಾಯಿತು. ಸಂಜೆಯವರೆವಿಗೂ ರುಕ್ಮಿಣಿ ಯಾರನ್ನೂ
ತಾಯಿಯ ಬಳಿ ಬಿಟ್ಟುಗೊಡಲಿಲ್ಲ. ಗೋದಮ್ಮ ಸೊಸೆಯನ
ಹತ್ತಿರಕ್ಕೆಳೆದುಕೊಂಡು

"ನಿನ್ನ ತಾಯಿ ಎಲ್ಲಿಗೆ ಹೋಗಿದ್ದಾರೆ ರುಕ್ಕೂ – ಇದೇ
ಹುಚ್ಚಿಯ ಹಾಗಾಡುತ್ತಿರುವೆ. ನಮ್ಮೆಲ್ಲರಲ್ಲಿಯೂ ಈ ಪವಿತ್ರಾ
ಲೀನವಾಗಿಲ್ಲವೇ? ಪತಿಸೇವೆ, ದೇವರ ಸೇವೆ, ಮಕ್ಕಳಸೇವೆ, ಲೋ
ಸೇವೆ ಮಾಡಿದ ತಪಸ್ವಿನಿಗೆ ಸಾವಿದೆಯೇ? ಯಾವ ಯಮಧರ್ಮ
ಈ ಸಾವಿತ್ರಿ ಬಳಿ ಸುಳಿಯಲು ಸಾಧ್ಯ" ಎಂದರು.

ಭೂಮಿಯಲ್ಲಿದ್ದ ಬೆಳಕೊಂದು ಆರಿತೆಂದು ಆಗಸದಲ್ಲಿ ಬೆಳಗ
ತ್ತಿದ್ದ ಬೆಳಕೂ ನಂದಿಹೋಯಿತು.

೨೫

ಮುನಸೀಫ್ ಶ್ರೀಕಂಠಶಾಸ್ತ್ರಿಗಳವರ ಅಧಿಕಾರಾವಧಿ ಮುಗಿಯುತ್ತ ಬಂದಿತ್ತು. ಸರ್ಕಾರದ ಆರ್ಡರ್ ನಿರೀಕ್ಷಿಸುತ್ತ ಅವರು ಕೆಲಸ ಸಾಗಿಸಿದ್ದರು.

"ಎಕ್ಸ್‌ಟೆನ್‌ಷನ್ (Extension) ಕೊಡುವುದಿಲ್ಲವೇ ಸರ್" ಎಂದೊಮ್ಮೆ ಮಾಧವರಾಯ ಕೇಳಿದ. ಶಾಸ್ತ್ರಿಗಳು ಅದಕ್ಕೆ

"ಮೂವತ್ತು ವರ್ಷ ದಾಸ್ಯಜೀವನವಾಗಿದೆ ಮಾಧವರಾಯರೇ. ಇನ್ನೂ ಏಕೆ ಈ ಕರ್ಮ ಬಂಧನ. ಕೆಲಸದಿಂದ ನಿವೃತ್ತಿಯಾಗಿ ನಾಲ್ಕು ದಿನ ಭಗವದ್ಗೀತೆ ಓದಿಕೊಂಡು ಕಾಲಹಾಕಿ ಕಣ್ಣು ಮುಚ್ಚಿಕೊಳ್ಳುತ್ತೇನೆ."

"ನಿಮ್ಮಂಥವರು ಅಧಿಕಾರಿಗಳಾಗಿ ಬರುವುದು ಅಪರೂಪ ಸರ್. ಪಟ್ಟಣ ಎಂದಿಗೂ ನಿಮ್ಮನ್ನು ಮರೆಯುವಹಾಗಿಲ್ಲ."

"ನನ್ನದೇನು ಹೆಚ್ಚುಗಾರಿಕೆ ಬಿಡಿ. ಹಿರಿಯರು ಹಾಕಿಕೊಟ್ಟ ರಾಜಮಾರ್ಗದಲ್ಲಿ ನಾನು ನಡೆದಿದ್ದೇನೆ. ನೀವುಗಳೆಲ್ಲಾ ತುಂಬ ವಿಶ್ವಾಸದಿಂದ ನಡಸಿಕೊಂಡು ಬಂದಿರಿ. ನಿಮ್ಮೆಲ್ಲರನ್ನೂ ಬಿಟ್ಟು ಹೋಗಬೇಕಲ್ಲಾ ಎನ್ನುವುದೊಂದೇ ಚಿಂತೆ" ಎಂದರು.

ಅದೇ ಕಾಲದಲ್ಲಿ ನಡೆದಿದ್ದ ಮೈಸೂರು ಶಾಸನಸಭೆಯ (Mysore Legislative Council) ಚುನಾವಣೆಯಲ್ಲಿ ಮೈಸೂ

ರಿನ 'ತಾತಯ್ಯ'ನವರು (Sri M. Venkatakrishnayya
ಜಯಭೇರಿ ಹೊಡೆದಿದ್ದರು. ತಾತಯ್ಯನವರ ವಿಜಯ ಪ್ರಜಾಪ್ರಭ
ತ್ವವಾದಿಗಳ ದಿಗ್ವಿಜಯವಾಗಿತ್ತು. ತಾತಯ್ಯನವರನ್ನು ಸೋಲಿ
ಬೇಕೆಂದು ಸರ್ಕಾರ ತನ್ನ ಎಲ್ಲಾ ಶಕ್ತಿ ಸಾಹಸಗಳನ್ನು ಉಪಯೋ
ಸಿತ್ತು. ಆದರೆ ಜನತೆ ತನ್ನ ಆರಾಧ್ಯಮೂರ್ತಿ 'ತಾತಯ್ಯ'ನವರನ
ಆರಿಸಿ ಸರ್ಕಾರವನ್ನು ಹಿಮ್ಮೆಟ್ಟಿಸಿತ್ತು. ಪಟ್ಟಣದ ಜನಕ್ಕೂ
ವಿಜಯ ಮಹೋತ್ಸಾಹವನ್ನುಂಟುಮಾಡಿತ್ತು. ಜವರೇಗೌಡರ
ಷರೀಫ್ ಸಾಹೇಬರು, ರಂಗಯ್ಯನವರು ಮಾತನಾಡಿಕೊಂಡು ತಾತಯ
ನವರಿಗೆ ಅಭೂತಪೂರ್ವ ಸ್ವಾಗತ ಬಯಸಿ ಅವರನ್ನು ಯೋಗ್ಯರೀ
ಯಲ್ಲಿ ಸತ್ಕರಿಸಲು ನಿಶ್ಚಯಮಾಡಿಕೊಂಡಿದ್ದರು.

ಗೆಳೆಯರ ಸಲಹೆಯನ್ನು ಮಾಧವರಾಯ ಸಂತೋಷದಿಂದ ಒಪ್ಪಿ
ಕೊಂಡ. ತಾತಯ್ಯನವರನ್ನು ಊರಿನಲ್ಲಿ ಮೆರವಣಿಗೆ ಮಾಡಿ, ಅವರಿ
ರಜತಕರಂಡದಲ್ಲಿ ಮಾನಪತ್ರ ಅರ್ಪಿಸಬೇಕೆಂದು ಜವರೇಗೌಡ
ಸೂಚಿಸಿದರು. ಸಾಹೇಬರು ಮೆರವಣಿಗೆ ಮಾಡುವ ವಿಷಯದಲ್ಲಿ ಒಪ್ಪಿ
ಸೂಚಿಸಿ, ರಜತಕರಂಡದ ಬಗ್ಗೆ ಅಸಮ್ಮತಿಯನ್ನು ವ್ಯಕ್ತಪಡಿಸಿದರು.

"ಏಕೆ ಸಾಹೇಬರೇ ?"

"ನೀವು ಏಳುನೂರೋ ಎಂಟುನೂರೋ ಖರ್ಚುಮಾಡಿ ಒಂದ
ಬೆಳ್ಳಿಡಬ್ಬ ಮಾಡಿಸಿ ಅವರಿಗೆ ಕೊಟ್ಟರೆ ಏನು ಪ್ರಯೋಜನ ಸಂ
'ಸಂಪದಭ್ಯುದಯ'ಕ್ಕೋಸ್ಕರ ವೆಂಕಟಕೃಷ್ಣಯ್ಯನವರು ಜೀವ ತೇ
ದ್ದಾರೆ. ಲೋಕಸೇವೆಗಾಗಿ ಬೇಕಾದಷ್ಟು ತ್ಯಾಗ ಮಾಡಿ, ಕಷ್ಟ ನ
ಗಳನ್ನು ಅನುಭವಿಸಿದ್ದಾರೆ. ಮೊನ್ನೆ ಒಂದು ಸಂಚಿಕೆಯಲ್ಲಿ ಅವರ
ತಮ್ಮ ಪತ್ರಿಕೆ ವಿಷಯ ಬರೆಯುತ್ತಾ 'ಜನರು ಸಹಾಯ ಮಾಡದಿದ್ದ
ಪತ್ರಿಕೆ ನಿಲ್ಲಿಸಿಬಿಡಬೇಕಾಗುತ್ತದೆ' ಎಂದು ತಿಳಿಸಿದ್ದರು. ಈ ಸಮಯ
ದಲ್ಲಿ ನಾವು ಅವರಿಗೆ ಸಹಾಯ ಮಾಡಬೇಕು. ಒಂದು ನಿಧಿ ಸಂಗ್ರ
ಮಾಡಿ ಅವರಿಗೆ ಅರ್ಪಿಸೋಣ" ಎಂದರು.

ಸಾಹೇಬರ ಸಲಹೆಗೆ ಮಾಧವರಾಯ "ಎಷ್ಟು ದೊಡ್ಡ ಮನಸ

ಸಾಹೇಬರೇ ನಿಮ್ಮದು." ಎಂದು ಮೆಚ್ಚುಗೆ ವ್ಯಕ್ತಮಾಡಿ.

"ಚಂದಾ ಯಾರು ವಸೂಲ್ಮಾಡೋದು ?"

"ನೀವು—ನಾನು—ಜವರೇಗೌಡರು—ನಮ್ಮ ಸ್ನೇಹಿತರು."

"ಊಟಾನು ಬೇಡಾ ಅಂತೀರಾ ಸಾಹೇಬರೇ ?"

"ಊಟ ಇರಲಿ ಸ್ವಾಮಿ. ಆಗಾಗ್ಗೆ ಎಲ್ಲರೂ ಸೇರ್ತಿರಬೇಕು. ಒಂದು ದಿನ ಎಲ್ಲರೂ ಸಂತೋಷವಾಗಿ ಕಳೆಯೋಣ."

ಸಾಹೇಬರ ಸಲಹೆ ಸರ್ವಮಾನ್ಯವಾಯಿತು. ತಾತಯ್ಯನವರ ಸತ್ಕಾರ ಸಮಿತಿಯೆಂದು ಏರ್ಪಾಟಾಯಿತು. ಮಾಧವರಾಯನೇ ಅಧ್ಯಕ್ಷ; ಗೌಡರು ಖಜಾಂಚಿಗಳು; ಷರೀಫ್ ಸಾಹೇಬರು, ಡಾ· ಸುಂದರಂ ಕಾರ್ಯದರ್ಶಿಗಳಾಗಿರಬೇಕೆಂದು ನಿಶ್ಚಯವಾಯಿತು. ಚಂದಾ ವಸೂಲಿಯ ಕೆಲಸವೂ ಹುರುಪಿನಿಂದ ಸಾಗಿತು.

ಚಂದಾ ಪಟ್ಟಿ ಮಾಧವರಾಯ ಕೊಟ್ಟ ಇನ್ನೂರು ರೂಪಾಯಿ, ಷರೀಫ್ ಸಾಹೇಬರ ಮುನ್ನೂರು, ಜವರೇಗೌಡರ ಮುನ್ನೂರು, ಡಾ. ಸುಂದರಂ ಅವರ ನೂರು ರೂಪಾಯಿಗಳಿಂದ ಆರಂಭವಾಗಿತ್ತು. ಹತ್ತು ಸಾವಿರ ರೂಪಾಯಿ ಸಂಗ್ರಹ ಮಾಡಬೇಕೆಂದು ಗೌಡರೂ, ಷರೀಫ್ ಸಾಹೇಬರೂ ನಿರ್ಧರಿಸಿದ್ದರು.

ಕೋರ್ಟಿನಲ್ಲಿ ಮೊಖ್ತೇಸರರಾಗಿದ್ದ ಸೋಮೇಶ್ವರ ಅಯ್ಯರ್ ಮಾಧವರಾಯ, ಜವರೇಗೌಡರು ಇಬ್ಬರಿಗೂ ಬೇಕಾದವನಾಗಿದ್ದ. ಲೆಕ್ಕ ವಿಡುವುದರಲ್ಲಿ ಅಯ್ಯರ್ ತುಂಬ ಗಟ್ಟಿಗನೆಂದು ಹೆಸರಾಗಿದ್ದ. ಅಂಗಡಿಗಳಿಗೆ ಲೆಕ್ಕ ಬರೆದುಕೊಟ್ಟೇ ಅಯ್ಯರ್ ಸಾಕಷ್ಟು ಗಳಿಸಿದ್ದ. ಗೌಡರು, ಷರೀಫ್ ಸಾಹೇಬರು ಅವನನ್ನೂ ಆಗಾಗ್ಗೆ ಕರೆಸಿಕೊಂಡೇ ತಮ್ಮ ಲೆಕ್ಕಗಳನ್ನು ಬರೆಸಿಕೊಳ್ಳುತ್ತಿದ್ದರು. ಸತ್ಕಾರ ಸಮಾರಂಭದ ಲೆಕ್ಕ ಪತ್ರಗಳನ್ನಿಡಲು ಸೋಮೇಶ್ವರ ಅಯ್ಯರನ್ನೇ ಗೊತ್ತುಮಾಡಿ, ಅವನಿಗೆ ಯೋಗ್ಯ ಸಂಭಾವನೆ ಕೊಡಲು ಸಮಿತಿ ನಿರ್ಧರಿಸಿತು.

ಗೌಡರು, ಸಾಹೇಬರು, ಮಾಧವರಾಯ ಚಂದಾ ವಸೂಲಿಗೆ ನಿಂತಿದ್ದಾಗ ಹಣ ಸಂಗ್ರಹವಾಗುವುದು ಕಷ್ಟವಾಗಲಿಲ್ಲ. ದೊಡ್ಡ

ಮನುಷ್ಯರು ಮನೆಯತನಕ ಬಂದರಲ್ಲಾ ಎಂದೇ ಎಷ್ಟೋ ಜನ ಅವರು ಕೇಳಿದ ಚಂದಾ ಕೊಟ್ಟಿದ್ದರು. ತಾತಯ್ಯನವರ ಬಗ್ಗೆ ಎಲ್ಲರಿಗೂ ಅನ್ಯಾದೃಶ ಗೌರವ ವಿಶ್ವಾಸವಿದ್ದುದರಿಂದ ಬಡವರು ಬಗ್ಗರು ಕೂಡ ತಮ್ಮ ಶಕ್ತಿಮೀರಿ ನಿಧಿಗೆ ಕಾಣಿಕೆಯಿತ್ತಿದ್ದರು.

ಇಂಥ ಮಹತ್ತ್ವದ ಉತ್ಸವದಲ್ಲಿ ತಮಗೆ ಯಾವ ಸ್ಥಾನವೂ ಸಿಕ್ಕದಿದ್ದುದಕ್ಕೆ ರಾಘವೇಂದ್ರರಾಯರಿಗೆ ತುಂಬ ತಾಪವಾಯಿತು. ಮಾಧವರಾಯನ ಶುಕ್ರದೆಸೆ ಅಬಾಧಿತವಾಗಿ ಸಾಗುತ್ತಿದ್ದುದನ್ನು ಕಂಡು ಅವರಿಗೆ ಸಹಿಸಲಾಗದಷ್ಟು ಸಂಕಟವಾಯಿತು.

ರಾಘವೇಂದ್ರರಾಯರಿಗೆ ದೊಡ್ಡ ಸಮಸ್ಯೆಯಾಯಿತು. 'ಉತ್ಸವಕ್ಕೆ ಹೋಗದೆ ನಿಂತರೆ, ತಮ್ಮ ಪ್ರಾಶಸ್ತ್ಯಕ್ಕೆ ಕುಂದು ಬರುತ್ತದೆ. ಉತ್ಸವಕ್ಕೆ ಹೋಗುವುದಾದರೆ ಅಲ್ಲಿ ಯಾವ ಸ್ಥಾನಮಾನವೂ ಇಲ್ಲ.' ಸಮಿತಿಯವರು ಒಬ್ಬರೂ ಚಂದಾ ಕೇಳುವುದಕ್ಕೂ ರಾಘವೇಂದ್ರರಾಯರ ಬಳಿ ಸುಳಿದಿರಲಿಲ್ಲ.

ರಾಯರು ತಮ್ಮ ಆಪ್ತಮಂತ್ರಿ ಕೇಶವಯ್ಯಂಗಾರ್ಯರ ಜತೆ ಯೋಚನೆ ಮಾಡಿ, ಸೋಮೇಶ್ವರ ಅಯ್ಯರ್ ಮೂಲಕ ನೂರು ರೂಪಾಯಿ ಚಂದಾ ಕಳಿಸಿಕೊಟ್ಟರು. ಕೇಶವಯ್ಯಂಗಾರ್ಯರೂ ಗೊಣಗಿಕೊಂಡು ತಾವೂ ನೂರು ರೂಪಾಯಿ ತೆತ್ತರು.

ಸತ್ಕಾರ ಸಮಾರಂಭಕ್ಕಾಗಿಯೇ ವಿಶಾಲವಾದ ಚಪ್ಪರ ಹಾಕಲಾಗಿತ್ತು. ತಾತಯ್ಯನವರನ್ನು ರೈಲ್ವೆ ಸ್ಟೇಷನ್ನಿನಲ್ಲಿಯೇ ಎದುರುಗೊಂಡು, ಜೋಡುಕುದುರೆ ಕಟ್ಟಿದ ಗಾಡಿಯಲ್ಲಿ, ವಾದ್ಯಸಮೇತ ಊರಿನ ಮುಖ್ಯಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು ಸಭಾಮಂದಿರಕ್ಕೆ ಕರೆದುಕೊಂಡು ಬರುವುದೆಂದು ನಿಶ್ಚಯವಾಯಿತು.

ತಾತಯ್ಯನವರ ಸತ್ಕಾರ ಸಮಾರಂಭ ಊರಿನ ಹಬ್ಬವಾಯಿತು. ಮೈಸೂರಿನ ಪಿತಾಮಹನನ್ನು ನೋಡುವುದಕ್ಕೆ ಹಳ್ಳಿಗಳಿಂದ ಜನ ಗಾಡಿಕಟ್ಟಿಕೊಂಡು ಬಂದರು.

ಭರಮೇಗೌಡ ಹತ್ತಾರು ಜತೆ ಕೊಂಬು ಕಹಳೆ ಊದುವವರನ್ನು

ಕರೆದುಕೊಂಡು ಬಂದಿದ್ದ. ಹರಿಜನರು ತಮ್ಮ ಕೊಂಬು, ಕಹಳೆಗಳನ್ನು ತಂದಿದ್ದರು. ಕೊಂಬು, ಕಹಳೆಗಳ ಮಹಾರವದಲ್ಲಿ ನಾಗಸ್ವರದ ಧ್ವನಿ ಅಡಗಿಹೋಗಿತ್ತು.

ಹಾರಗಳ ಹೊರೆಯಲ್ಲಿ ತಾತಯ್ಯನವರ ಜೀರ್ಣಮುಖ ಅಡಗಿ ಹೋಗಿತ್ತು. ರಸ್ತೆಯುದ್ದಕ್ಕೂ ಜನ ನಿಂತು ಕೈಮುಗಿಯುತ್ತಿದ್ದರು. ಹಲವು ಕಡೆ ಮೆರವಣಿಗೆ ನಿಲ್ಲಬೇಕಾಗಿತ್ತು. ಊರಿನ ಹೆಣ್ಣು ಮಕ್ಕಳು ತಾತಯ್ಯನವರಿಗೆ ಆರತಿ ಬೆಳಗುತ್ತಿದ್ದರು. ಮುಗ್ಧ ರೈತರು ತಮ್ಮ ಮಕ್ಕಳನ್ನು ನೆಲದ ಮೇಲೆ ಮಲಗಿಸಿ ತಾತಯ್ಯನವರಿಗೆ ನಮಸ್ಕಾರ ಮಾಡಿಸುತ್ತಿದ್ದರು.

ಜನಗಳ ಭಕ್ತಿ, ಪ್ರೀತಿ ನೋಡಿ ತಾತಯ್ಯನವರ ಕಣ್ಣುಗಳಿಂದ ಒಂದೇ ಸಮನೆ ಆನಂದಭಾಷ್ಪ ಸುರಿಯುತ್ತಿತ್ತು.

ಮೆರವಣಿಗೆ ಸಭಾಮಂದಿರ ಮುಟ್ಟುವವೇಳೆಗೆ ಸಂಜೆ ಏಳು ಗಂಟೆಯಾಯಿತು.

ತಾತಯ್ಯನವರ ಮೇಲೆ ಅಚ್ಚಪ್ಪನವರು ಬರೆದಿದ್ದ ಪದ್ಯಮಾಲಿಕೆ ಯನ್ನು ಊರಿನ ಗರ್ಲ್ಸ್ ಸ್ಕೂಲಿನ ಹೆಣ್ಣುಮಕ್ಕಳು ಹಾಡಿದರು. ಸಭಾಧ್ಯಕ್ಷರಾದ ಮಾಧವರಾಯರು ಸ್ವಾಗತ ಭಾಷಣ ಮಾಡುತ್ತಾ

"ಮೈಸೂರು ಪ್ರಜೆಗಳ ಹಕ್ಕುಬಾಧ್ಯತೆಗಳಿಗಾಗಿ ಅರ್ಧ ಶತಮಾನ ದಿಂದಲೂ ಹೋರಾಡುತ್ತಾ, ಅನೇಕ ಕಷ್ಟನಷ್ಟಗಳನ್ನು ಅನುಭವಿಸಿರುವ ಪರಮಪೂಜ್ಯ ತಾತಯ್ಯನವರನ್ನು ನಮ್ಮ ಊರಿಗೆ ಸ್ವಾಗತಿಸಲು ನಾನು ಹೆಮ್ಮೆಪಡುತ್ತೇನೆ. ಮೊನ್ನೆ ನಡೆದ ಶಾಸನಸಭೆಯ ಚುನಾವಣೆಯಲ್ಲಿ ತಾತಯ್ಯನವರು ಗಳಿಸಿದ ಅದ್ಭುತ ವಿಜಯ, ಸಂಸ್ಥಾನದ ಎಲ್ಲ ಪ್ರಜೆಗಳ ವಿಜಯ. ಬಲಿಷ್ಠ ಸರ್ಕಾರ ಕೊಟ್ಟ ಸವಾಲಿಗೆ ಜನ ಮರು ಸವಾಲು ಕೊಟ್ಟಂತಾಗಿದೆ.

ತಾತಯ್ಯನವರನ್ನು ನಮ್ಮೂರಿಗೆ ಬರಮಾಡಿಕೊಳ್ಳಬೇಕೆಂದು ನಾವು ಯೋಚನೆಮಾಡಿದ ಕೂಡಲೆ ನಮಗೆ ಸಿಕ್ಕಿದ ಸಹಕಾರ ವರ್ಣ ನಾತೀತವಾದುದು. ತಾತಯ್ಯನವರ ಹೆಸರು ನಮ್ಮ ಜನರಲ್ಲಿ ಎಂಥ

ಸ್ಫೂರ್ತಿ, ಎಂಥ ಚೇತನ ಹುಟ್ಟಿಸುತ್ತಿದೆಯೆನ್ನುವುದಕ್ಕೆ ಇದೇ ಸಾಕ್ಷಿ. ಊರಿನ ಶ್ರೀಮಂತರು, ಅನುಕೂಲಸ್ಥರು ಕೊಡುಗೈಯಿಂದ 'ನಿಧಿ'ಗೆ ಸಹಾಯಮಾಡಿರುವುದಲ್ಲದೆ, ಬಡವರು ಬಗ್ಗರು ಕೂಡ ಶಕ್ತಿಮೀರಿ ಸಹಾಯಮಾಡಿದ್ದಾರೆ. ಅನೇಕ ಜನ ತಾವಾಗಿಯೇ ಹಣ ತಂದುಕೊಟ್ಟು ನಮ್ಮ ಪ್ರಯತ್ನಕ್ಕೆ ಪ್ರೋತ್ಸಾಹ ನೀಡಿದ್ದಾರೆ.

ಪೂಜ್ಯ ತಾತಯ್ಯನವರೇ – ನಮ್ಮ ಪಟ್ಟಣದ ಇತಿಹಾಸದಲ್ಲಿ ಇದು ಅತಿಮುಖ್ಯ ದಿನ. ತಾವು ನಮ್ಮೂರಿಗೆ ಬರಲೊಪ್ಪಿಕೊಂಡು, ನಮ್ಮ ಅಲ್ಪಕಾಣಿಕೆಯನ್ನು ಸ್ವೀಕರಿಸಲು ಅಂಗೀಕರಿಸಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಿದ್ದೀರಿ. ತಮ್ಮ ಸೇವೆ, ತ್ಯಾಗ, ತಪಸ್ಸುಗಳನ್ನು ಗೌರವಿಸುವ ಸಾಮರ್ಥ್ಯ ನಮಗಿಲ್ಲ. ನಾವು ನೀಡುವ ಅಲ್ಪ ಕಾಣಿಕೆಯ ಜತೆಯಲ್ಲಿ ಅಪಾರ ಭಕ್ತಿ, ಪ್ರೇಮ, ಗೌರವವನ್ನೂ ಅರ್ಪಿಸುತ್ತಿದ್ದೇವೆ.

ತಾವು ನಮ್ಮ ಮಾರ್ಗದರ್ಶಕರಾಗಿ ನಮ್ಮೆಲ್ಲರ ಮನೆಯ, ಮನದ '**ತಾತಯ್ಯ**'ನವರಾಗಿ **ಚಿರಕಾಲ** ನಮ್ಮೊಂದಿಗಿರುವಂತೆ ಅನುಗ್ರಹಿಸೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ."

ಎಂದು ಹೇಳಿದ. ಗಂಧದ ಕರಂಡದಲ್ಲಿದ್ದ ಮಾನಪತ್ರವನ್ನು ಡಾ. ಸುಂದರಂ ಓದಿ ಅರ್ಪಿಸಿದರು. ಜವರೇಗೌಡರು ದೊಡ್ಡ ತಟ್ಟೆಯಲ್ಲಿ ಫಲ, ತಾಂಬೂಲದೊಂದಿಗೆ ಏಳು ಸಾವಿರ ರೂಪಾಯಿಗಳ ನಿಧಿಯನ್ನು ಅರ್ಪಿಸಿದರು.

ತಾತಯ್ಯನವರು ಎದ್ದು ನಿಂತು, ಮೆಲ್ಲನೆ ಕೊರಳಿನಲ್ಲಿದ್ದ ಹಾರಗಳನ್ನೆಲ್ಲಾ ತೆಗೆದು ಮೇಜಿನ ಮೇಲಿಟ್ಟು ಕೈಜೋಡಿಸಿ ಜನತೆಯನ್ನು ನೋಡುತ್ತಾ ನಿಂತರು. ಅವರ ಕಣ್ಣಿನಿಂದ ಧಾರೆ ಹೊರಟಿತ್ತು. ತಾತಯ್ಯನವರು ತಮ್ಮ ಭಾವಪ್ರವಾಹಕ್ಕೆ ಅಣೆಕಟ್ಟು ಹಾಕಲು ನಾಲ್ಕಾರು ನಿಮಿಷ ಬೇಕಾಯಿತು. ಮೆಲ್ಲನೆ ಮಾತು ಆರಂಭಿಸಿದರು. ಸಭೆ ನಿಶ್ಶಬ್ದವಾಯಿತು.

"ನಾನು ಮುದುಕ. ವಯೋಧರ್ಮದಿಂದ ನನ್ನ ಚೇತನಗಳು ಉಡುಗಿಹೋಗಿವೆ. ಗಟ್ಟಿಯಾಗಿ ಮಾತನಾಡುವುದೂ ಸಾಧ್ಯವಿಲ್ಲವಾಗಿದೆ.

ನನ್ನ ಸೇವೆ, ತ್ಯಾಗವನ್ನು ಪ್ರಶಂಸಿಸಿದ್ದೀರಿ. ನನ್ನ ಬಾಯಿ ಕಟ್ಟಿಹೋಗಿದೆ. ನಿಮಗೆ ಹೇಗೆ ನನ್ನ ಕೃತಜ್ಞತೆ ಅರ್ಪಿಸಬೇಕೋ ತಿಳಿಯದಾಗಿದೆ. ದಾರಿಯುದ್ದಕ್ಕೂ ಹೆಂಗಸರು, ಮಕ್ಕಳು ನನ್ನನ್ನು ಒಬ್ಬ 'ಗುರು'ವೆಂದು ಭಾವಿಸಿ ಅಡ್ಡಬಿದ್ದರು. ಅಯ್ಯೋ, ನನ್ನ ಜನಕ್ಕೆ ನಾನು ಏನೂ ಮಾಡಲಿಲ್ಲವೇ ಎಂದು ನಾಚುವಂತೆ ಮಾಡಿದರು.

ನಮ್ಮ ಜನ ತುಂಬ ಹಿಂದುಳಿದವರು. ಅವರಿಗೆ ವಿದ್ಯೆಯಿಲ್ಲ. ನಮ್ಮಲ್ಲಿ ನೂರಕ್ಕೆ ಒಂಭತ್ತು ಜನಕ್ಕೆ ಮಾತ್ರ ಓದುಬರಹ ಬರುತ್ತದೆ. ಆ ಒಂಭತ್ತು ಜನರು ಹಳ್ಳಿಯವರಲ್ಲ – ಪಟ್ಟಣಿಗರು. ತಮ್ಮ ಹಕ್ಕು ಬಾಧ್ಯತೆಗಳನ್ನು ಹೇಗೆ ಕಾದುಕೊಳ್ಳಬೇಕೆಂದು ನಮ್ಮ ಜನಕ್ಕೆ ಗೊತ್ತಿಲ್ಲ. ನಮ್ಮ ಜನರ ಅಜ್ಞಾನದ ದುರುಪಯೋಗ ಮಾಡಿಕೊಂಡು ಅಧಿಕಾರ ವರ್ಗದವರು ಅವರನ್ನು ಸುಲಿಯುತ್ತಿದ್ದಾರೆ. ನಾನು ಚಿಕ್ಕವನಾಗಿದ್ದಾಗ ಇಂಥ ಅನ್ಯಾಯಗಳನ್ನು ಪ್ರತಿನಿತ್ಯ ನೋಡುತ್ತಿದ್ದೆ. ಹುಲ್ಲು ಚಕ್ಕಿ ಮಾರಿಕೊಂಡು ಜೀವನ ಮಾಡುತ್ತಿದ್ದ ಬಡವರು, ಜೀತದಲ್ಲಿ ಜೀವ ನಡೆಸುತ್ತಿದ್ದ ರೈತರು, ಕೆಲಸಕ್ಕಾಗಿ ಅಲೆಯುತ್ತಿದ್ದ ವಿದ್ಯಾವಂತರು ಎಲ್ಲರ ಕಷ್ಟ ನೋಡಿ ನೋಡಿ ಇದಕ್ಕೇನು ಪರಿಹಾರ ಎಂದು ಯೋಚಿಸಿದೆ. ಒಂದು ಪತ್ರಿಕೆ ಆರಂಭಿಸಿ, ಅದರಲ್ಲಿ ಜನರ ಪರಿಸ್ಥಿತಿಯನ್ನು ವರ್ಣಿಸುವುದು ಯೋಗ್ಯವೆನಿಸಿತು. **'ಸಂಪದಭ್ಯುದಯ'** ಆರಂಭಿಸಿದೆ. ಸರ್ಕಾರ ಠೇವಣಿ ಕೇಳುತ್ತಿತ್ತು. ಪತ್ರಿಕೆ ನಡೆಸುವುದಕ್ಕೆ ನನ್ನ ಕೈಯಲ್ಲಿ ಹಣವಿಲ್ಲದಿದ್ದಾಗ ಠೇವಣಿ ಎಲ್ಲಿಂದ ತರಲಿ ? ಸರ್ಕಾರ ನನಗೆ, ನನ್ನ ಪತ್ರಿಕೆಗೆ ಕೊಟ್ಟಿರುವ ಕಿರುಕುಳ, ಅಷ್ಟಿಷ್ಟಲ್ಲ. ದೊಡ್ಡ ಅಧಿಕಾರಿಗಳೊಬ್ಬರು ನನ್ನ ಬಳಿಗೆ ಬಂದು 'ನಿಮ್ಮನ್ನು ಹೊಡೆಸಿ ಮೈಸೂರಿನ ಆಚೆಗೆ ಅಟ್ಟುತ್ತೇನೆ' ಎಂದರು. 'ಆಗಬಹುದು–ನಾನು ಹೋಗುವಾಗ ನಿಮ್ಮನ್ನೂ ಜತೆಯಲ್ಲಿ ಕರೆದುಕೊಂಡು ಹೋಗುತ್ತೇನೆ' ಎಂದು ಹೇಳಿದೆ. ಅಂತೂ ಇಂತೂ ಪತ್ರಿಕೆಯನ್ನು ನಡಸಿಕೊಂಡು ಬಂದಿದ್ದೇನೆ.

ನನ್ನ ಕೆಲಸ ಮುಗಿದಿಲ್ಲ – ಆದರೆ ಆಯಸ್ಸು ಮುಗಿಯುತ್ತ ಬಂದಿದೆ. ಸ್ವಾತಂತ್ರ್ಯದ ಹಣತೆ ಹಚ್ಚಿ ನಿಮ್ಮ ಕೈಯಲ್ಲಿಟ್ಟಿದ್ದೇನೆ.

ಅದಕ್ಕೆ ಎಣ್ಣೆ ಹುಯಿದು, ಅದು ದೊಡ್ಡ ಬೆಳಕಾಗಿ ಬೆಳಗಲು ನೀ
ಪ್ರಯತ್ನಿಸಬೇಕು. ಜನಸಾಮಾನ್ಯರ ಕೈಗೆ ಅಧಿಕಾರ ಬಂದ ಹೊರತ
ನಮ್ಮ ಜನ ಬದುಕುವುದಿಲ್ಲ.

ಈ ನಮ್ಮ ಮಾತೃಭೂಮಿ ಇಂದು ಪರಕೀಯರ ವಶವಾಗಿ
ಸಮುದ್ರದಾಚೆಯಿಂದ ಬಂದ ವ್ಯಾಪಾರಿಗಳು, ನಮ್ಮ ದೇಶವನ
ಆಳುತ್ತಿದ್ದಾರೆ; ನಮ್ಮನ್ನು ಬಂಧನದಲ್ಲಿ ಕೆಡಹಿದ್ದಾರೆ – ನಮ್ಮ
ಕಾಲುಗಳಿಗೆ ದಾಸ್ಯದ ಕೋಳ ಹಾಕಿದ್ದಾರೆ. ಭಾರತಸಿಂಹ ಒಂದ
ಒಂದು ದಿನ ನಿದ್ರೆಯಿಂದ ಎಚ್ಚರಗೊಳ್ಳುತ್ತಿದೆ. ಅದರ ಗರ್ಜ
ಬಕಿಂಗ್‌ಹಂ ಅರಮನೆ, ೧೦ ಡೌನಿಂಗ್ ಸ್ಟ್ರೀಟ್‌ಗಳನ್ನು ಅಲ್ಲಾಡಿ
ಬಿಡುತ್ತದೆ. ಬ್ರಿಟಿಷರು ಗಂಟುಮೂಟೆ ಕಟ್ಟಿಕೊಂಡು ತಮ್ಮ ದೇಶ
ಹಿಂದಿರುಗುವ ಕಾಲ ಬಂದೇ ಬರುತ್ತದೆ. ನನ್ನ ಹೃದಯದಲ್ಲಿ – ನಿಮ
ಹೃದಯದಲ್ಲಿ ನೆಲಸಿರುವ ಭಾರತಲಕ್ಷ್ಮೀ ಧೈರ್ಯ ಕೊಡುತ್ತಿದ್ದಾ
ನಮ್ಮ ದೇಶ ಸ್ವತಂತ್ರವಾಗುವ ಸುದಿನದವರೆಗೆ ನಾನು ಬದುಕಿರುವುದಿ
ಆ ಪುಣ್ಯದ ಪಾಲುಗಾರರು ನೀವಾಗುತ್ತೀರಿ. ಆ ಮಹಾದಿನ ಬೇಗ ಬ
ಲೆಂದು ಎಲ್ಲರೂ ದುಡಿಯಿರಿ. **ಎಲ್ಲಿ ಹಿಂಸೆ, ಅತ್ಯಾಚಾರ, ಪರಪೀಡ
ಕಂಡುಬಂದರೂ ಎದುರಿಸಿ.** ಹೆಚ್ಚು ಹೇಳಲು ಬಯಸುವುದಿಲ್ಲ. ನಿಮ
ವಿಶ್ವಾಸಗೌರವಕ್ಕೆ ತುಂಬ ಋಣಿಯಾಗಿದ್ದೇನೆ. ನೀವು ಕೊಟ್ಟಿರು
ನಿಧಿಯನ್ನು ಜನತೆಯ ಸೇವೆಗೇ ಉಪಯೋಗಿಸುತ್ತೇನೆಂದು ವಚ
ಕೊಡುತ್ತೇನೆ." ಎಂದು ಹೇಳಿ ಕುಳಿತರು. ತಾತಯ್ಯನವರ ಭಾಷ
ಎಲ್ಲರನ್ನೂ ಪರವಶರನ್ನಾಗಿ ಮಾಡಿತು.

ಡಾ. ಸುಂದರಂ ವಂದನಾರ್ಪಣೆ ಮಾಡುತ್ತಾ

"ಇಂದಿನ ಸಮಾರಂಭಕ್ಕೆ ಸುಮಾರು ಒಂಭತ್ತು ಸಾವಿರ ರೂಪ
ಯಿಗಳನ್ನು ಕೂಡಿಸಿದ್ದೇವೆ. ಏಳುಸಾವಿರವನ್ನು ನಿಧಿಯ ರೂಪದ
ಪೂಜ್ಯ ತಾತಯ್ಯನವರಿಗೆ ಅರ್ಪಿಸಿದ್ದೇವೆ. ಲೆಕ್ಕ ಮುಗಿದ ಮೇ
ಪೂರ್ಣ ವರದಿಯನ್ನು ತಮಗೆ ಒಪ್ಪಿಸುತ್ತೇವೆ" ಎಂದು ಹೇಳಿದರ
ರಾತ್ರಿ ಭೋಜನ ಮುಗಿಸಿಕೊಂಡು ತಾತಯ್ಯನವರು ಮೈಸೂರಿ

ತೆರಳಿದರು. ಉತ್ಸವ ಯಶಸ್ವಿಯಾಗಿ ನೆರವೇರಿದ ಸಂತೋಷದಲ್ಲಿ ಮಾಧವರಾಯ ಅವನ ಗೆಳೆಯರು ಆಯಾಸವನ್ನು ಮರೆತುಬಿಟ್ಟರು.

'ತಾತಯ್ಯನವರ ಸತ್ಕಾರ ಸಮಾರಂಭ' ದಿಂದ ಮಾಧವರಾಯನ ಯಶಸ್ಸು, ಖ್ಯಾತಿ, ಘನತೆ ವಿಶೇಷವಾಗಿ ವಿಸ್ತರಿಸಿತು. ಅವನ ದೂರ ದೃಷ್ಟಿ, ಸೇವಾನೈಪುಣ್ಯವನ್ನು ಜನ ಕೊಂಡಾಡಿದರು.

ರಾಘವೇಂದ್ರರಾಯರ ದ್ವೇಷಭಂಡಾರ ತುಂಬಿ ತುಳುಕುತ್ತಿತ್ತು. ಮಾಧವರಾಯನನ್ನು ಹಿಂದಕ್ಕೆ ಜಗ್ಗಲು ಪ್ರಯತ್ನಿಸಿದಷ್ಟೂ ಅವನು ಮುನ್ನುಗ್ಗುತ್ತಿರುವುದನ್ನು ಕಂಡು ರಾಯರ ಹೊಟ್ಟೆಯಲ್ಲಿ ತಳಮಳ ವಾಯಿತು.

ಮುನಸೀಫ್ ಶ್ರೀಕಂಠಶಾಸ್ತ್ರಿಗಳು ಕೆಲಸದಿಂದ ರಿಟೈರ್ ಆಗಿ ಬೆಂಗಳೂರಿಗೆ ಪ್ರಯಾಣಮಾಡಿದುದು ರಾಘವೇಂದ್ರರಾಯರಿಗೆ ಸ್ವಲ್ಪ ಸಮಾಧಾನವನ್ನು ತಂದುಕೊಟ್ಟಿತ್ತು. ಹೊಸದಾಗಿ ಅವರ ಸ್ಥಾನಕ್ಕೆ ಬರಲಿದ್ದ ರಾಜರತ್ನಂ ಅವರನ್ನು ಯಾವ ರೀತಿಯಲ್ಲಿ ಬುಟ್ಟಿಗೆ ಹಾಕ ಬಹುದೆಂದು ಯೋಚಿಸತೊಡಗಿದರು.

ಒಂದು ರಾತ್ರಿ, ಸುಮಾರು ಹತ್ತು ಗಂಟೆಯಿರಬಹುದು. ಕೇಶವಯ್ಯಂಗಾರ್ಯರು ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದರು. 'ಈ ಅಯ್ಯರನ್ನೇಕೆ ಕರೆದುಕೊಂಡು ಬಂದಿದ್ದಾರೆ' ಎಂದ ರಾಯರು ಯೋಚಿಸುವಷ್ಟರಲ್ಲಿ ಅಯ್ಯಂಗಾರ್ಯರು

"ಸೋಮೇಶ್ವರ ಅಯ್ಯರವರ ಪರಿಚಯ ತಮಗಿರಬಹುದು!" ಎಂದರು.

"ಅಯ್ಯರವರ ಪರಿಚಯ ಯಾರಿಗಿಲ್ಲ."

"ಅಯ್ಯರವರು ತಮ್ಮ ಅಭಿಮಾನಿಗಳು. ನಮಗೆ ಬೇಕಾದ ಸಹಾಯ ನೀಡಲು ಸಿದ್ಧರಾಗಿದ್ದಾರೆ."

"ತಾತಯ್ಯನವರ ಸತ್ಕಾರಸಮಾರಂಭದ ಲೆಕ್ಕ ನೀವೇ ಬರೆಯು ತ್ತಿರುವಿರಂತೆ!"

"ಹೌದು ಸ್ವಾಮಿ."

"ಲೆಕ್ಕತಂದು ತೋರಿಸಿ ನೋಡೋಣ." ಎಂದು ರಾಯರು ಸೂಕ್ಷ್ಮವಾಗಿ ಸೂಚಿಸಿದರು.

"ನಿಮ್ಮ ಕಷ್ಟ ಸುಖ ನಮಗಿರಲಿ ಅಯ್ಯರೇ – ಯೋಚನೆ ಮಾಡಬೇಡಿ." ಎಂದು ಅಯ್ಯಂಗಾರ್ಯರು ಆಶ್ವಾಸನವಿತ್ತರು.

ಎರಡು ವಾರಗಳಲ್ಲಿ ಹಿರೋಡೆಯ (French Rocks) ಸಬ್ ಡಿವಿಸನ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾಧವರಾವ್, ಜವರೇಗೌಡ, ಷರೀಫ್ ಸಾಹೇಬ್, ಡಾ. ಸುಂದರಂ ಮತ್ತು ರಂಗಯ್ಯನವರ ಮೇಲೆ 'ಸಾರ್ವಜನಿಕ ಹಣದ ದುರುಪಯೋಗ'ದ ಆಪಾದ ಯ ಮೇಲೆ ಕೇಸು ಸೋಮೇಶ್ವರ ಅಯ್ಯರಿಂದ ದಾಖಲ್ ಮಾಡಲ್ಪಟ್ಟಿತು.

ಗೌಡರು, ಷರೀಫ್ ಸಾಹೇಬರಿಂದ ಬದುಕಿಹೋಗಿದ್ದ ಅಯ್ಯರ್, ಅವರ ಮೇಲೇ ಕೈಮಾಡಿದುದನ್ನು ಕಂಡು ಜನ ಕುಪಿತರಾದರು. ಅಯ್ಯರ ಹಿಂದೆ ಪ್ರಬಲಶಕ್ತಿಗಳಿವೆಯೆಂದು ಜನ ಊಹಿಸಲು ಕಷ್ಟ ವಾಗಲಿಲ್ಲ.

ಅಯ್ಯರ್ ವಕಾಲತ್ತನ್ನು ಚನ್ನಪಟ್ಟಣದ ಮಳೂರು ನರಸಿಂಹಯ್ಯಂಗಾರ್ ವಹಿಸಿದಮೇಲಂತೂ ಜನರ ಸಂಶಯ ಬಲಗೊಂಡಿತು. ನರಸಿಂಹಯ್ಯಂಗಾರ್ ಕೇಶವಯ್ಯಂಗಾರ್ಯರ ಷಡ್ಡಕ.

ಆದಷ್ಟು ಬಯಲಿಗೆ ಬರದೆ ರಾಘವೇಂದ್ರರಾಯರು ಒಳಗೇ ಕುಳಿತುಕೊಂಡು ಸೂತ್ರಗಳನ್ನಾಡಿಸುತ್ತಿದ್ದರು.

ಕೇಸು ಹಿರೋಡೆಯ ಕೋರ್ಟಿನಲ್ಲಿ ಆರಂಭವಾಯಿತು. ಕಟಕಟೆಯ (Docks) ಹೊರಗೆ ನಿಂತಿದ್ದ ಅಪರಾಧಿಗಳನ್ನು ಕಟಕಟೆ ಒಳಗೆ ನಿಲ್ಲಿಸಬೇಕೆಂದು ಫಿರ್ಯಾದಿಪರ ಲಾಯರು ಕೋರ್ಟನ್ನು ಪ್ರಾರ್ಥಿಸಿದರು.

ಅಪರಾಧಿಗಳ ಪರ ವಕಾಲತ್ತು ವಹಿಸಿದ್ದ ಮೈಸೂರಿನ ಪ್ರಸಿದ್ಧ ವಕೀಲರಾದ ಸುಂದರರಾಯರು ಎದ್ದು ನಿಂತು

"ಆಪಾದಿತರು ಗಣ್ಯಮಹನೀಯರು. ಅವರು ಕಳ್ಳಕೊರಮರಲ್ಲ.

ಅವರು ಓಡಿ ಹೋಗುವ ಸಂಭವವಿಲ್ಲ. ಫಿರ್ಯಾದಿಗಳ ಲಾಯರು ಇಂಥ ಅನುಚಿತ ಸಲಹೆ ಮಾಡುವುದು ನ್ಯಾಯವಲ್ಲ" ಎಂದರು.

ನರಸಿಂಹಯ್ಯಂಗಾರ್ಯರಿಗೂ ಸುಂದರರಾಯರಿಗೂ ಬಲವಾದ ವಾಗ್ಯುದ್ಧ ಆರಂಭವಾಯಿತು. ಮ್ಯಾಜಿಸ್ಟ್ರೇಟರು ತಲೆಯಮೇಲೆ ಕೈ ಹೊತ್ತು ಕುಳಿತು ಬಿಟ್ಟರು.

ಮಾಧವರಾಯ ತಾನೇ ಮುಂದುವರಿದು, ಕಟಕಟೆಯ ಒಳಗೆ ಹೋಗಿ ನಿಂತು

"ನಾವು ಆಪಾದಿತರು. ನಿರಪರಾಧಿಗಳೆಂದು ನಿರ್ಣಯವಾಗುವ ವರೆಗೆ ಕಟಕಟೆಯ ಒಳಗೆ ನಿಲ್ಲಲು ಅಡ್ಡಿಯಿಲ್ಲ" ಎಂದ.

ಅವರ ಗೆಳೆಯರೂ ಹೋಗಿ ಕಟಕಟೆಯ ಒಳಗೆ ನಿಂತರು.

ಮ್ಯಾಜಿಸ್ಟ್ರೇಟರಿಗೇ ಸಹನೆಯಾಗಲಿಲ್ಲ.

"ಮಾಧವರಾಯರೇ, ತಾವೂ ತಮ್ಮ ಸ್ನೇಹಿತರೂ ಸದ್ಗೃಹಸ್ಥರು. ತಮ್ಮ ಗೌರವ ಕಾಯುವುದು ಕೋರ್ಟಿನ ಕರ್ತವ್ಯ" ಎಂದು ಹೇಳಿ ಐದು ಜನ ಆಪಾದಿತರಿಗೂ ಆಳಿನ ಕೈಯಲ್ಲಿ ಕುರ್ಚಿ ತರಿಸಿ ಹಾಕಿಸಿದರು. ನರಸಿಂಹಯ್ಯಂಗಾರ್ಯರ ಮುಖ ಪೆಚ್ಚಾಯಿತು.

ಸಾಕ್ಷಿಗಳ ವಿಚಾರಣೆ ಆರಂಭವಾಯಿತು. ಒಬ್ಬ ಸಾಕ್ಷಿಯನ್ನು ಮ್ಯಾಜಿಸ್ಟ್ರೇಟರು ಕೇಳಿದರು.

"ತಾತಯ್ಯನವರ ನಿಧಿಗೆ ನೀವು ಎಷ್ಟು ಚಂದಾ ಕೊಟ್ಟಿರಿ ?"

"ಹತ್ತು ರೂಪಾಯಿ ಸ್ವಾಮಿ."

"ಎಷ್ಟು ರೂಪಾಯಿಗೆ ನಿಮಗೆ ರಶೀತಿ ಕೊಟ್ಟಿದ್ದಾರೆ."

"ಹತ್ತು ರೂಪಾಯಿಗೇ ಕೊಟ್ಟಿದ್ದಾರೆ."

"ಕೌಂಟರ್ ಫಾಯಿಲ್‌ನಲ್ಲಿ ನೂರು ರೂಪಾಯಿ ಕೊಟ್ಟಂತೆ ಬರೆದಿದೆಯಲ್ಲ."

"ನಾನು ಕೊಟ್ಟದ್ದು ಹತ್ತೇ ರೂಪಾಯಿ. ಆ ಹಣಕ್ಕೆ ನನಗೆ ರಶೀತಿಯೂ ಬಂದಿದೆ."

ನೂರಾರು ರಶೀತಿಗಳು ಕೋರ್ಟಿಗೆ ಒಪ್ಪಿಸಲ್ಪಟ್ಟವು.

ಸೋಮೇಶ್ವರ ಅಯ್ಯರ್ ವಿಚಾರಣೆ ಆರಂಭವಾಯಿತು. ಸುಂದರ ರಾಯರ ಪ್ರತಿಯೊಂದು ಪ್ರಶ್ನೆಯೂ ಮೊನೆಯಾದ ಬಾಣವಾಯಿತು.

"ನೀವು ಜವರೇಗೌಡರು, ಷರೀಫ್ ಸಾಹೇಬರ ಲೆಕ್ಕಪರಿಶೋಧಕ ರಾಗಿದ್ದಿರೋ ?"

"ಇದ್ದೆ ಸ್ವಾಮಿ."

"ಇಬ್ಬರೂ ನಿಮ್ಮ ಬಗ್ಗೆ ವಿಶ್ವಾಸದಿಂದಿದ್ದು, ನಿಮಗೆ ನೂರಾರು ರೂಪಾಯಿಗಳನ್ನು ಕೊಟ್ಟಿದ್ದಾರಲ್ಲವೇ ?"

"ಕೊಟ್ಟಿದ್ದಾರೆ."

"ನಿಮ್ಮ ಮಗನ ಕಾಲೇಜ್ ಶಿಕ್ಷಣಕ್ಕೆ ಜವರೇಗೌಡರು ಉದಾರೆ ವಾಗಿ ಸಹಾಯ ಮಾಡಿದ್ದಾರಲ್ಲವೇ ?"

"ಮಾಡಿದ್ದಾರೆ."

"ಸತ್ಕಾರ ಸಮಿತಿಯ ಲೆಕ್ಕದಲ್ಲಿ ಹೆಚ್ಚುಕಡಿಮೆ ಆಗಿರುವುದೆಷ್ಟು?"

"ಸುಮಾರು ಆರು ಸಾವಿರ."

"ಸಮಿತಿಯಲ್ಲಿ ಐದು ಜನರಿದ್ದಾರೆ. ಈ ಐದು ಜನ ಹಂಚಿ ಕೊಂಡಿದ್ದರೆ ಒಬ್ಬೊಬ್ಬರಿಗೆ ಒಂದೊಂದು ಸಾವಿರ ರೂಪಾಯಿ ಚಿಲ್ಲರೆ ಸಿಕ್ಕುತ್ತದೆ."

ಸೋಮೇಶ್ವರ ಅಯ್ಯರ್ ಉತ್ತರ ಕೊಡಲಿಲ್ಲ.

"ಜವರೇಗೌಡರ ಆಸ್ತಿ, ಲೇವಾದೇವಿ ಎಲ್ಲಾ ಸೇರಿಸಿದರೆ ಎಷ್ಟಾ ಗಬಹುದು."

"ನನಗೆ ಗೊತ್ತಿಲ್ಲ ಸ್ವಾಮಿ."

"ಹೋಗಲಿ—ಅವರ ಲೇವಾದೇವಿ ವಿಷಯ ನಿಮಗೆ ಗೊತ್ತಿರ ಬೇಕು. ಅವರಿಗೆ ಇತರರಿಂದ ಬರಬೇಕಾದ ಹಣ ಎಷ್ಟು ತಿಳಿಸುವಿರಾ?"

"ಸುಮಾರು ಮೂವತ್ತು ಸಾವಿರ ರೂಪಾಯಿಗಳು."

"ಷರೀಫ್ ಸಾಹೇಬರಿಗೆ ರೈಸ್‌ಮಿಲ್ಲಿದೆ—ಅವರ ಬಳಿ ಕೆಲವು ಲಾರಿ ಗಳಿವೆ. ಇವುಗಳನ್ನು ಮಾರಿದರೆ ಎಷ್ಟು ಬರಬಹುದು ?"

"ಸುಮಾರು ಮೂವತ್ತು ನಲವತ್ತು ಸಾವಿರ ರೂಪಾಯಿಗಳು."

"ಮಾಧವರಾಯರ ಮನೆಗೆ ನೀವು ಯಾವಾಗಲಾದರೂ ಹೋಗಿರಹುದಲ್ಲವೇ ?"

"ಎಷ್ಟೋ ಸಲ ಹೋಗಿದ್ದೇನೆ."

"ಒಂದು ಹೊತ್ತಿಗೆ ಅವರ ಮನೆಯಲ್ಲಿ ಎಷ್ಟು ಜನ ಊಟ ಮಾಡುತ್ತಾರೆ."

"ನಲವತ್ತು ಐವತ್ತು ಜನಗಳಾಗಬಹುದು."

ಸುಂದರರಾಯರು ಮ್ಯಾಜಿಸ್ಟ್ರೇಟರ ಕಡೆ ತಿರುಗಿ

"ಸತ್ಕಾರ ನಿಧಿಯ ಹಣವನ್ನು ಸ್ವಾಹಾ ಮಾಡಿದವರ ಸ್ಥಿತಿಗತಿಯನ್ನು ಫಿರ್ಯಾದಿಗಳ ಬಾಯಿಂದಲೇ ಮಹಾಸ್ವಾಮಿಯವರು ಕೇಳಿದ್ದೀರಿ. ದ್ವೇಷದಿಂದ ಪ್ರೇರಿತವಾದ ಸುಳ್ಳು ಆಪಾದನೆ ಇದು ಎನ್ನುವುದು ಕೋರ್ಟಿಗೂ ಖಚಿತವಾಗಿದೆಯೆಂದು ನಂಬುತ್ತೇನೆ." ಎಂದು ಹೇಳಿ, ಕೋರ್ಟಿಗೆ ನಮಸ್ಕರಿಸಿ ಕುಳಿತರು.

ಮ್ಯಾಜಿಸ್ಟ್ರೇಟರ ಕಣ್ಣುಗಳು ಕಿಡಿಕಾರುತ್ತಿದ್ದವು. ಸಿಡಿಲಿನ ಧ್ವನಿಯಲ್ಲಿ

"ಸೋಮೇಶ್ವರ ಅಯ್ಯರ್, ಐದು ಜನ ದೊಡ್ಡ ಮನುಷ್ಯರಮೇಲೆ ನೀವು ದ್ವೇಷಪೂರಿತವೂ, ಅಯೋಗ್ಯವೂ ಆದ ಆಪಾದನೆ ಮಾಡಿದ್ದೀರಿ. ನೀವು ಹೇಳುವುದೇನಾದರೂ ಉಳಿದಿದೆಯೇ ?"

"ನನಗೆ ಉತ್ತರ ಕೊಡುವುದಕ್ಕೆ ವೇಳೆಬೇಕು ಸ್ವಾಮಿ."

"ವೇಳೆ ಕೊಡಲಾಗುವುದಿಲ್ಲ. ಹೇಳುವುದು ಏನಾದರೂ ಇದ್ದರೆ ಈಗಲೇ ಹೇಳಿ."

ಸೋಮೆಶ್ವರ ಅಯ್ಯರ್ ಗಡಗಡ ನಡುಗುತ್ತ ನಿಂತ. ಅವನ ಆಪಾದಮಸ್ತಕದಿಂದ ಬೆವರಿಳಿಯಿತು.

"ಆಪಾದಿತರು ನಿರಪರಾಧಿಗಳು. ಫಿರ್ಯಾದಿಯ ಆಪಾದನೆ ದ್ವೇಷಪೂರಿತವಾದುದು. ಆಪಾದಿತರೆಲ್ಲರನ್ನೂ ಡಿಸಚಾರ್ಜ್ (Discharge) ಮಾಡಿದ್ದೇನೆ. ಆಪಾದಿತರ ಗೌರವಕ್ಕೆ ಕಳಂಕ ತರುವ ದುರುದ್ದೇಶದಿಂದ ಫಿರ್ಯಾದಿ ಈ ಕೇಸು ದಾಖಲ್ಮಾಡಿರುವುದರಿಂದ

ಅವರಿಗೆ ನೂರು ರೂಪಾಯಿ ದಂಡ ತೆರಬೇಕೆಂದು ವಿಧಿಸುತ್ತೇನೆ.” ಎಂದರು. ಕೋರ್ಟು ಕಿತ್ತುಹೋಗುವಂತೆ ಜಯ ಜಯಕಾರವೆದ್ದಿತು.

ಎಲ್ಲರೂ ಹೊರಗೆ ಬಂದಮೇಲೆ ಜವರೇಗೌಡರ ಕಣ್ಣುಗಳು ಏನನ್ನೋ ಅರಸಿದವು. ತಮ್ಮ ವಕೀಲರ ಹತ್ತಿರ ಮಾತನಾಡುತ್ತಿದ್ದ ಸೋಮೇಶ್ವರ ಅಯ್ಯರ್ ಬಳಿಗೆ ಹೋಗಿ ಗೌಡರು

“ಅಯ್ಯರ್—ಮೂರು ದಿವಸ ಟೈಮ್ ಕೊಟ್ಟಿದ್ದೇನೆ ನಿನ್ನ ಸಾಮಾನು ತೆಗೆದುಕೊಂಡು, ಸಂಸಾರ ಕರೆದುಕೊಂಡು ಪಟ್ಟಣ ಬಿಟ್ಟು ಹೋಗಬೇಕು. ನಾಲ್ಕನೆಯ ದಿವಸ ನೀನು ಪಟ್ಟಣದಲ್ಲಿದ್ದರೆ ಊರ ಮುಂದಿನ ಮಾರಮ್ಮನಿಗೆ ಬಲಿಕೊಟ್ಟು ಬಿಡುತ್ತೇನೆ” ಎಂದು ಸಂದೇಶವಿತ್ತು ನರಸಿಂಹಯ್ಯಂಗಾರ ಕಡೆ ತಿರುಗಿ

“ಇದೇ ಕೊನೆ—ಪಟ್ಟಣಕ್ಕೆ ಕಾಲಿಟ್ಟೀರಾ ಜೋಕೆ. ಬೇಗ ನಿಮ್ಮ ಷಡ್ಡಕಂದಿರನ್ನು ಇಲ್ಲಿಂದ ಕರೆದುಕೊಂಡು ಹೋಗಿ” ಎಂದು ಹೇಳಿದರು.

ಪಟ್ಟಣಕ್ಕೆ ಮಾಧವರಾಯ, ಅವನ ಸ್ನೇಹಿತರು ಬರುವ ವೇಳೆಗೆ ಊರಿನವರು ಮೆರವಣಿಗೆಯ ಏರ್ಪಾಟುಮಾಡಿದ್ದರು. ಬಾಜಾ ಬಜಂತ್ರಿ ಸಹಿತ ಮೆರವಣಿಗೆ ಹೊರಟಿತು.

ಮೆರವಣಿಗೆ ಉದ್ದೇಶಪೂರ್ವಕವಾಗಿಯೇ ರಾಘವೇಂದ್ರರಾಯರ ಮನೆ ಮುಂದೆ ನಿಂತಿತು. ರಾಯರು ಹೊರಗೆ ಹಣಿಕಿ ಹಾಕಲಿಲ್ಲ. ಮುಚ್ಚಿದ ಅವರ ಮನೆಯ ಬಾಗಿಲು ತೆಗೆಯಲಿಲ್ಲ.

೨೬

ಕಾಲಚಕ್ರ ಉರುಳಿದಂತೆ ಮಾಧವರಾಯನ ಸಂಪತ್ತು, ಕೀರ್ತಿ ಬೆಳೆಯುತ್ತ ಬಂದಿತು. ಕ್ರಿಮಿನಲ್ ಕೇಸ್ ಪ್ರಕರಣವಾದ ಮೇಲೆ ರಾಘವೇಂದ್ರರಾಯರ ಹುಟ್ಟಡಗಿ ಹೋಗಿತ್ತು. ರಾಘವೇಂದ್ರರಾಯರ ದುಷ್ಪ್ರವೃತ್ತಿಗೆ ಬೇಸತ್ತ ಅವರ ಪಕ್ಷದವರೇ ದೂರವಾಗಿದ್ದರು. ಸಾರ್ವಜನಿಕ ಜೀವನದಲ್ಲಿ ರಾಘವೇಂದ್ರರಾಯರ ಹೆಸರು ಅಳಿಸಿ ಹೋಗಿದ್ದರೂ ವಕೀಲವೃತ್ತಿಗೆ ಯಾವ ಧಕ್ಕೆಯೂ ತಗುಲಿರಲಿಲ್ಲ. ರಾಘವೇಂದ್ರರಾಯರ ದಕ್ಷತೆಯನ್ನು ಗೌರವಿಸಿ, ಅವರ ವಿರೋಧಿಗಳು ಕೂಡ ಕೆಲವು ಸಾರಿ ಅವರ ಬಳಿಗೇ ಬರಬೇಕಾಗುತ್ತಿತ್ತು. ಕೇಶವಯ್ಯಂಗಾರ್ಯರು ಪಟ್ಟಣ ಬಿಟ್ಟು ಮೈಸೂರು ಸೇರಿಕೊಂಡಿದ್ದರು. ಜವರೇಗೌಡರ ನಿರೂಪ ಬಂದ ಮೂರು ದಿವಸಗಳಲ್ಲಿ ಅಯ್ಯರ್ ಮದರಾಸ್ ಕಡೆ ಹೊರಟು ಹೋಗಿದ್ದ.

ಒಂದು ದಿನ ಗೋದಮ್ಮನವರು ಮಗನ ಜತೆ ಮಾತನಾಡುತ್ತಿದ್ದಾಗ

"ಶ್ರೀದೇವಿಗೆ ಗಂಡು ನೋಡುವುದಿಲ್ಲವೇ ಮಾಧೂ. ಬೆಳೆದ ಹುಡುಗಿಯನ್ನು ಎಷ್ಟು ದಿವಸ ಮದುವೆಯಿಲ್ಲದೆ ಮನೆಯಲ್ಲಿಟ್ಟುಕೊಂಡಿರುವುದು?" ಎಂದರು.

"ಶ್ರೀದೇವಿಗೆಷ್ಟು ವಯಸ್ಸಮ್ಮ?"

"ಜ್ಯೇಷ್ಠಕ್ಕೆ ಹದಿನೇಳು ತುಂಬುತ್ತದೆ."

"ಹದಿನೇಳು ತುಂಬುತ್ತದೆಯೇ—ಮಕ್ಕಳು ಎಷ್ಟು ಬೇಗ ಬೆಳೆದು ಬಿಡುತ್ತಾರೆ."

"ಇನ್ನು ತಡಮಾಡಬಾರದಪ್ಪಾ. ಸ್ವಲ್ಪ ಪುರಸತ್ತು ಮಾಡಿಕೊಂಡು ಗಂಡು ಹುಡುಕಬೇಕು"

"ಆಗಲಮ್ಮ—ಖಂಡಿತವಾಗಿ ಅದೇ ಕೆಲಸ ಮಾಡುತ್ತೇನೆ" ಎಂದು ತಾಯಿಗೆ ವಚನವಿತ್ತ.

ಐದು ವರ್ಷಗಳ ಹಿಂದಿನ ಸ್ಥಿತಿ—ಇಂದಿನ ಸ್ಥಿತಿಯನ್ನು ಮನಸ್ಸಿನಲ್ಲಿಯೇ ತುಲನೆ ಮಾಡುತ್ತಾ ಮಾಧವರಾಯ ಕುಳಿತ. ಅವನು ವಿಚಾರ ಪರವಶನಾದಾಗ ಯಾರೂ ಅವನ ಬಳಿ ಸುಳಿಯುತ್ತಿರಲಿಲ್ಲ. 'ಮಕ್ಕಳಿಗೆ ಗಲಾಟೆ ಮಾಡಬೇಡಿ' ಎಂದು ರುಕ್ಮಿಣಿ ಎಚ್ಚರ ಹೇಳುತ್ತಿದ್ದಳು.

ಅಂದಿನ ಹೋರಾಟ—ಕ್ರಿಮಿನಲ್ ಕೇಸಿನಲ್ಲಿ ಸಿಕ್ಕಿಕೊಂಡು ಕಟಕಟೆಯಲ್ಲಿ ನಿಲ್ಲಬೇಕಾದ ಪ್ರಸಂಗ; ಇಂದಿನ ಶಾಂತಿ, ವೃತ್ತಿಯಲ್ಲಿಯೂ ಸಾರ್ವಜನಿಕ ಜೀವನದಲ್ಲಿಯೂ ದೊರೆತಿದ್ದ ಸ್ಥಾನಮಾನ.

'ಸ್ಥಾನ, ಮಾನ, ಸಂಪತ್ತು ಎಲ್ಲವೂ ದೊರೆತಿತ್ತು. ಅದಕ್ಕೆ ಕಾರಣರಾದವರೆಲ್ಲ ಕಣ್ಣುಮುಚ್ಚಿಕೊಂಡಿದ್ದರು. ರಂಗಮ್ಮನವರು—ಅಲಮೇಲಮ್ಮನವರು—ಅಚ್ಯುತಪ್ಪನವರು—ರಾಮಲಿಂಗಯ್ಯನವರು—ಶಾಮರಾಯರು–ವೆಂಕಟರಮಣಾಚಾರ್ಯರು; ಹೃದಯಭಾರವಾಗಿ ಕಣ್ಣಿನಲ್ಲಿ ನೀರು ಮಿಡಿಯಿತು. ಎಷ್ಟು ಗಳಿಸಿದರೇನು—ಎಷ್ಟು ಉಳಿಸಿದರೇನು—ಸಾವನ್ನು ಮುಂದೂಡಲು ಶಕ್ಯವೇ? ರೋಷ, ಕೋಪ, ದುಃಖ, ಅಭಿಮಾನ, ಪ್ರೇಮ, ಆಸೆ ಆಕಾಂಕ್ಷೆಗಳು ಎಲ್ಲವನ್ನೂ ಬದಿಗೊತ್ತಿ ಒಂದು ದಿನ ಕಣ್ಣುಮುಚ್ಚಿಕೊಳ್ಳಲೇಬೇಕು.

'ಆದರೆ ಇರುವವರೆಗೆ ಸರಿಯಾಗಿ ಬಾಳಬೇಕು—ಮನುಷ್ಯ ಇತರರಿಗೆ ಹಿಂಸೆಯಾಗದ ರೀತಿಯಲ್ಲಿ ಸುಖವಾಗಿರಬೇಕು—ಇತರರಿಗೆ ಕೈಯೆತ್ತಿಕೊಡಬೇಕು—ತನ್ನ ಕರ್ತವ್ಯನಿರ್ವಹಣದಲ್ಲಿ ಉದಾಸೀನನಾಗ

ಬಾರದು ;

'—ಒಂದು ಕರ್ತವ್ಯ ತಾಯಿ ಸೂಚಿಸಿದ್ದರು. ಶ್ರೀದೇವಿ ಲಕ್ಷಣ ವಂತೆ—ಎಸ್. ಎಸ್. ಎಲ್. ಸಿ. ಪಾಸು ಮಾಡಿದ್ದಳು–ಅವಳಿಗೆ ಅನು ರೂಪನಾದ ಪತಿ ಸಿಕ್ಕುವುದರಲ್ಲಿ ಯಾವ ಸಂದೇಹವೂ ಇರಲಿಲ್ಲ.

'ಅಷ್ಟೇ ಮಹತ್ತ್ವದ ಜವಾಬ್ದಾರಿ ರಾಮೂದು. ಹುಡುಗ ತಿಳು ವಳಿಕಸ್ಥ—ಜವಾಬ್ದಾರಿಯ ಅರಿವುಳ್ಳವನು—ರಂಗಮ್ಮನವರು ಸ್ವರ್ಗಸ್ಥ ರಾದ ಮೇಲೆ ತನ್ನ ಆಶ್ರಯದಲ್ಲಿದ್ದರೂ ಹೊರೆಯಾಗಿರಲಿಲ್ಲ—ಹಳ್ಳಿ ಯಿಂದ ಬರುತ್ತಿದ್ದ ವರಮಾನದಲ್ಲಿ ಶಿಕ್ಷಣ ಮುಂದುವರಿಸಿದ್ದ. ಅನಂತ ರಂಗೂನಿನಿಂದ ನಲವತ್ತು ರೂಪಾಯಿ ಕಳಿಸಿಕೊಡುತ್ತಿದ್ದ. ಮುಂದಿನ ವರ್ಷ ರಾಮು ಬಿ. ಎ. ಪಾಸು ಮಾಡುತ್ತಾನೆ. ಅವನ ತಾಯಿ ಈವರೆಗಾದರೂ ಬದುಕಿರಬಾರದಾಗಿತ್ತೇ ?

'ರುಕ್ಮಿಣಿ ತುಂಬಿದ ಬಸುರಿ—ಅವಳ ವೈಕಳೆದ ಮೇಲೆ ಮದುವೆ ಇಟ್ಟುಕೊಳ್ಳಬೇಕು — ಆ ವೇಳೆಗೆ ಗಂಡು ಗೊತ್ತುಮಾಡುವುದು ಒಳ್ಳೆಯದು.'

ಮಾಧವರಾಯ ವರಾನ್ವೇಷಣೆಯನ್ನು ಮುಂದುವರಿಸಿದ. ಆದರೆ ಅವನ ಪ್ರಯತ್ನ ಸಫಲವಾಗಲಿಲ್ಲ. ನೋಡಿದಕಡೆ ಒಂದಲ್ಲ ಒಂದು ಕೊರತೆ ಕಂಡುಬರುತ್ತಿತ್ತು. ರುಕ್ಮಿಣಿ ಥಟ್ಟನೆ ಜ್ಞಾಪಿಸಿಕೊಂಡು

"ಗುಂಡಾಚಾರ್ರು ಎಲ್ಲಿದ್ದಾರೆ ತಿಳಿದು ಅವರಿಗ ಒಂದು ಕಾಗದ ಬರೆದರೆ ಇಲ್ಲಿಗೆ ಬರುತ್ತಾರೆ. ಅವರಿಗೆ ನಮ್ಮ ಜನರ ಗಂಡುಗಳು ಎಲ್ಲಿವೆ ಎನ್ನುವ ವಿಷಯ ಗೊತ್ತಿರುತ್ತದೆ." ಎಂದು ಸೂಚನೆಯಿತ್ತಳು. ಮಾಧವರಾಯ ನಾಲ್ಕಾರು ಕಡೆಗಳಿಗೆ ಕಾಗದ ಬರೆದ.

ಆಚಾರ್ರ ಸವಾರಿ ಚಿತ್ತೈಸುವುದು ತಡವಾಗಲಿಲ್ಲ. ತಮ್ಮನ್ನು ಕರೆಸಿಕೊಂಡು ವಿಷಯ ತಿಳಿದಕೂಡಲೆ ಆಚಾರ್ರು

"ತಮ್ಮ ಜನ ನರಸಿಂಗರಾಯರೂಂತ ಒಬ್ಬರು ಹೆಡ್‌ಮಾಸ್ಟ ರಾಗಿದ್ದು ರಿಟೈರ್ ಆಗಿ ಮೈಸೂರಿನಲ್ಲಿದ್ದಾರೆ – ತಮಗೆ ಗೊತ್ತೇ ?"

"ಕೇಳಿ ಬಲ್ಲೆ."

"ಅವರ ಮಗ ರಾಮಚಂದ್ರರಾಯ ಎಂಜನಿಯರಿಂಗ್ ಪಾಸು ಮಾಡಿಕೊಂಡು ಕೆಲಸದಲ್ಲಿದ್ದಾನೆ. ತುಂಬ ಒಳ್ಳೆಯ ಹುಡುಗ. ನರಸಿಂಗರಾಯರೂ ಸಂಭಾವಿತರು. ಈ ಸಂಬಂಧವಾದರೆ ನೈನವಾಗತ್ತೆ ರಾಯರೇ." ಎಂದರು. ಜಾತಕಗಳ ವಿನಿಮಯವಾಯಿತು. ಮಾತುಕತೆ ಯಾಯಿತು. ಸಂಬಂಧ ಕೂಡಿ ಲಗ್ನಪತ್ರಿಕೆಕಾರ್ಯವೂ ಮುಗಿದು ಹೋಯಿತು!

ರುಕ್ಮಿಣಿ ಮೈಕಳೆದ ಕೂಡಲೆ ಲಗ್ನದ ವ್ಯವಸ್ಥೆ ಹುರುಪಿನಿಂದ ಸಾಗಿತು. ವೃಂದಮ್ಮನವರು ಇತರ ಹೆಣ್ಣುಮಕ್ಕಳು ಬಂದು ನೆರವಾದರು. ಮಾಧವರಾಯನ ಮಿತ್ರರು ಹೊರಗಿನ ಕೆಲಸ ಕಾರ್ಯಗಳನ್ನು ಹಂಚಿಕೊಂಡರು.

ಲಗ್ನಕ್ಕೆ ನಾಲ್ಕುದಿನ ಉಳಿಯಿತು. ಮಾಧವರಾಯನ ಕೈಗೆ ಮೈಸೂರಿನಿಂದ ಒಂದು ಕಾಗದ ಬಂತು. ಬೀಗರಾಗಲಿದ್ದ ನರಸಿಂಗ ರಾಯರು ಕಾಗದ ಬರೆದು 'ನನ್ನ ಅತ್ತೆ ತೀರಿಕೊಂಡರು. ಶಕುನ ಸರಿಹೋಗಲಿಲ್ಲವೆಂದು ಮನೆಯವರೆಲ್ಲಾ ಚಿಂತೆ ಮಾಡುತ್ತಿದ್ದಾರೆ. ತಮ್ಮಂಥವರ ಸಂಬಂಧ ಬೆಳೆಸಲು ದೈವಕ್ಕೆ ಮನಸ್ಸಿಲ್ಲ. ಕ್ಷಮಿಸಬೇಕೆಂದು ಪ್ರಾರ್ಥಿಸುತ್ತೇನೆ' ಎಂದು ತಿಳಿಸಿದ್ದರು.

ಮಾಧವರಾಯನಿಗೆ ಆಕಾಶವೇ ಭೂಮಿಗೆ ಇಳಿದು ಬಂದಂತಾ ಯಿತು. ತಲೆಯ ಮೇಲೆ ಕೈಹೊತ್ತು ಚಿಂತಿಸುತ್ತ ಕುಳಿತುಬಿಟ್ಟ. ಗೋದಮ್ಮನವರು ಕಂಬನಿಗರೆಯುತ್ತಾ

"ಎಂಥಾ ಕಷ್ಟ ತಂದೆ ಭಗವಂತಾ!" ಎಂದು ಮೊರೆಯಿಟ್ಟರು. ಸ್ವಲ್ಪಹೊತ್ತಿಗೆ ಮುಂಚೆ ನಗೆಯ ಬೆಳದಿಂಗಳು ಪಸರಿಸಿದ್ದ ಮನೆಯ ಮೇಲೆ ದುಃಖದ ಕಾರ್ಮೋಡ ಮುಸುಕಿತು.

ಹಿರಿಯರ ದುಃಖದ ಕಾರಣವನ್ನರಿಯದೆ ಮಕ್ಕಳು ಕಕ್ಕಾಬಿಕ್ಕಿ ಯಾಗಿದ್ದರು. ಅಲ್ಲಿಯೇ ಓಡಿಯಾಡುತ್ತಿದ್ದ ರಾಮುವನ್ನು ಕಂಡೊಡ ನೆಯೇ ಆಚಾರ್ರ ತಲೆಯಲ್ಲಿ ಯಾವದೋ ವಿಚಾರ ಹೊಳೆಯಿತು. ಎದ್ದವರೇ ಮಾಧವರಾಯನನ್ನು ಕರೆದುಕೊಂಡು ಮಹಡಿಯ ಮೇಲಕ್ಕೆ

ಂದು

"ಮನೆಯಲ್ಲಿ ಬೆಣ್ಣೆಯಿಟ್ಟುಕೊಂಡು, ತುಪ್ಪಕ್ಕೆ ಊರಲ್ಲೆಲ್ಲಾ ಹುಡುಕಿದೆವಲ್ಲಾ ಸ್ವಾಮಿ."

"ನೀವು ಹೇಳುವುದು ನನಗೆ ಅರ್ಥವಾಗಲಿಲ್ಲ ಆಚಾರ್ರೇ. ಈಗ ನ್ನ ಗತಿಯೇನು?"

"ರಾಮಚಂದ್ರರಾಯನಿಗೇ ಅದೃಷ್ಟವಿಲ್ಲ ಬಿಡಿ – ನಿಮ್ಮ ಭಾವ ೈದುನ ರಾಮರಾಯ ಏನಾಗಿದ್ದಾನೆ? ಆ ರಾಮನಲ್ಲದಿದ್ದರೆ ಈ ಾಮ!"

ಮಾಧವರಾಯ ಬೆಕ್ಕಸ ಬೆರಗಾಗಿ

"ಆಚಾರ್ರೇ – ಏನು ಹೇಳುತ್ತಿರುವಿರಿ?"

"ಏನು ಇಲ್ಲ – ಧೈರ್ಯಮಾಡಿಬಿಡಿ. ಗುರುಪ್ರೇರಣೆಯಾಗಿದೆ. ುಕ್ಮಿಣಮ್ಮನವರಿಗೆ ಹೋಗಿ ತಿಳಿಸಿ – ದೊಡ್ಡ ಅಮ್ಮವರನ್ನು ಒಪ್ಪಿಸುವ ೆಲಸ ನನಗಿರಲಿ."

"ಹುಡುಗ ಒಪ್ಪಬೇಡವೇ ಆಚಾರ್ರೇ."

"ಅಕ್ಕ ಭಾವನ ಮಾತು ಅವನು ಮೀರಲ್ಲ ಸ್ವಾಮಿ. ನೀವು ಹೋಗಿ – ತಡಮಾಡಬೇಡಿ." ಎಂದು ಮಾಧವರಾಯನನ್ನು ಕಳಿಸಿದರು.

ಮಾಧವರಾಯ ಹೆಂಡತಿಯನ್ನು ಒಳಗೆ ಕರೆದು ಆಚಾರ್ರ ಸಲಹೆ ತಿಳಿಸಿದ. ರುಕ್ಮಿಣಿ ಸ್ವಲ್ಪವೂ ಯೋಚನೆಮಾಡದೆ

"ಇದು ಗುರುಪ್ರೇರಣೆ ಅನ್ನುವುದರಲ್ಲಿ ಸಂದೇಹವಿಲ್ಲ. ರಾಮೂನ ಕರದು ನಿಮ್ಮೆದುರಿಗೇ ಕೇಳಿಬಿಡುತ್ತೇನೆ." ಎಂದು ರಾಮುವನ್ನು ಕರೆದರು.

ಅಕ್ಕ ತಿಳಿಸಿದ ವಿಷಯ ಕೇಳಿ ರಾಮು ಕ್ಷಣಕಾಲ ಯೋಚಿಸಿ

"ನನ್ನದೇನಿದೆಯಮ್ಮ – ನೀನೂ ಭಾವ ಹೇಗೆ ಹೇಳಿದರೆ ಹಾಗೆ ಮಾಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ರಂಗೂನಿಗೆ ಬರೆದು ಅಣ್ಣಂದಿರ ಅಭಿಪ್ರಾಯ ತಿಳಿದುಕೊಂಡರೆ ಒಳ್ಳೆಯದಲ್ಲವೇ?"

"ರಂಗೂನಿಗೆ ನಾಸೀಗಲೇ ಪ್ರಿಪೆಯ್ಡ್ – ಎಕ್ಸ್‌ಪ್ರೆಸ್ ಟೆಲಿಗ್ರಾಂ

ಮಾಡಿ ತಿಳಿಸುತ್ತೇನೆ." ಎಂದು ಮಾಧವರಾಯ ಎದ್ದುಹೋದ.

ಲಗ್ನದ ಸಿದ್ಧತೆ ಯಥಾಪ್ರಕಾರ ಮುಂದುವರಿಯಿತು.

ಮಾರನೆಯ ದಿನ ಮತ್ತು ಅದರ ಮರುದಿನ ರಂಗೂನಿನಿಂದ ಮಾರುತ್ತರ ಬರಲಿಲ್ಲ. ಮೂರನೆಯ ದಿನವೇ ದೇವರ ಸಮಾರಾಧನೆ. ಅಂದು ಎಲ್ಲರೂ ಊಟಕ್ಕೆ ಕುಳಿತಿದ್ದರು. ಮಾಧವರಾಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದ. ಅಂಚೆಯಾಳು ಒಂದು ಟೆಲಿಗ್ರಾಂ ತಂದುಕೊಟ್ಟು ಹೋದ.

ರಂಗೂನಿನಿಂದ ಅನಂತ 'ಮದುವೆಗೆ ಸಮ್ಮತಿ ಕೊಡಲಾಗುವುದಿಲ್ಲ' ಎಂದು ತಿಳಿಸಿದ್ದ. ಮಾಧವರಾಯ ಟೆಲಿಗ್ರಾಂ ಮುಚ್ಚಿಟ್ಟು ಊಟವಾದ ಮೇಲೆ ತಾಯಿ, ಹೆಂಡತಿಯನ್ನು ಗುಟ್ಟಾಗಿ ಕರೆದು ಟೆಲಿಗ್ರಾಂ ವಿಷಯ ತಿಳಿಸಿದ. ರುಕ್ಮಿಣಿ ಧೈರ್ಯವಾಗಿ

"ಅವನು ಬೇಕಾದ್ದು ಬರೆಯಲಿ. ಲಗ್ನ ಮುಂದುವರಿಸೋಣ. ಇದರ ಸಂಪೂರ್ಣ ಜವಾಬ್ದಾರಿ ನನಗಿರಲಿ" ಎಂದು ಹೇಳಿದಳು. ಮಾಧವರಾಯನಿಗೆ ಒಂದು ಭಯ ಹುಟ್ಟಿಕೊಂಡಿತು. 'ನನಗೆ ಬಂದ ಟೆಲಿಗ್ರಾಂ ಮುಚ್ಚಿಟ್ಟದ್ದಾಯಿತು. ನಾಳೆ ಹಸೆಯಮೇಲೆ ಕುಳಿತಾಗ ರಾಮೂಗೆ ಟೆಲಿಗ್ರಾಂ ಬಂದರೇನು ಮಾಡುವುದು ?'"

ಹೆಗಲ ಮೇಲೆ ಒಂದು ಟವಲು ಹಾಕಿಕೊಂಡು ಬಿಸಲನ್ನೂ ಲೆಕ್ಕಿಸದೆ ಮಾಧವರಾಯ ಅಂಚೆಯ ಕಛೇರಿಗೆ ಹೋಗಿ ಪುಟ್ಟಯ್ಯನವರನ್ನು ಕಂಡು ಅವರ ಸಲಹೆ ಕೇಳಿದ.

"ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಿಸು ಎಂದು ಗಾದೆ ಇದೆ. ಇಷ್ಟು ದಿವ್ಯವಾಗಿ ಕೂಡಿರುವ ದಾಂಪತ್ಯ ಕೆಡಿಸುವುದು ನ್ಯಾಯವಲ್ಲ ರಾಯರೇ. ರಾಮು ಹೆಸರಿಗೆ ಟೆಲಿಗ್ರಾಂ ಬಂದರೆ ಬರಲಿ ಸುಮ್ಮನಿರಿ—ನಾನು ನೋಡಿಕೊಳ್ಳುತ್ತೇನೆ" ಎಂದು ಹೇಳಿದರು.

ಇಟ್ಟ ಲಗ್ನಕ್ಕೆ ಸರಿಯಾಗಿ ರಾಮು ಶ್ರೀದೇವಿಯರ ಮದುವೆ ಗುರುಹಿರಿಯರ ಪ್ರೇರಣೆಯಿಂದ ನಡೆದೇ ಹೋಯಿತು. ಮದುವೆಗೆ

ಂದಿದ್ದ ಪುಟ್ಟಯ್ಯನವರು ಮಾಧವರಾಯನನ್ನು ಒಂದೆಡೆಗೆ ಕರೆದು
ಬಿಚ್ಚಿ ರಾಮು ಹೆಸರಿಗೆ ಬಂದಿದ್ದ ಟೆಲಿಗ್ರಾಂ ಕೊಟ್ಟರು.

ಮದುವೆ ಮುಗಿದಮೇಲೆ ರಾಮು, ಮದುವೆಗೆ ಬರದಿದ್ದುದಕ್ಕೆ
ಕ್ಷೇಪಿಸಿ ಅಣ್ಣನಿಗೆ ಕಾಗದ ಬರೆದ. ರಂಗೂನಿನಿಂದ ಬಂದ ಉತ್ತರ
ರಾಮುವಿಗೆ ಆಶ್ಚರ್ಯವನ್ನುಂಟುಮಾಡಿತು.

"ಈ ಸಂಬಂಧ ನನಗೆ ಒಪ್ಪಿಗೆಯಿಲ್ಲವೆಂದು ಕೂಡಲೆ ಮಾಧವ
ರಾಯರಿಗೆ ಟೆಲಿಗ್ರಾಂ ಕೊಟ್ಟದ್ದೆ. ಮಾರನೆಯ ದಿನ ನಿನ್ನ ಹೆಸರಿಗೂ
ಟೆಲಿಗ್ರಾಂ ಕೊಟ್ಟದ್ದೆ. ಎರಡೂ ಏಕೆ ತಲುಪಲಿಲ್ಲವೋ ತಿಳಿಯಲಿಲ್ಲ.
ಕೆಲಸ ಮಿಂಚಿತು—ಕೈಮೀರಿತು. ದೈವಚಿತ್ತ. ಇನ್ನು ಮೇಲೆ ನಿನ್ನ
ಸಮಸ್ತ ಜವಾಬ್ದಾರಿಯನ್ನು ಮಾಧವರಾಯರೇ ಹೊರಬೇಕು. ಇದು
ವರೆಗೆ ನಾನು ಕಳುಹಿಸುತ್ತಿದ್ದಂತೆ ಇನ್ನು ಮುಂದೆ ಹಣ ಕಳಿಸಲು ಸಾಧ್ಯ
ವಿಲ್ಲವೆಂದು ತಿಳಿಸಲು ವಿಷಾದಿಸುತ್ತೇನೆ."

ರಾಮು ಕಾಗದವನ್ನು ಭಾವನ ಕೈಗಿತ್ತ.

ಮಾಧವರಾಯ ಓದಿಕೊಂಡು

"ಅನಂತ ಬರೆಯದಿದ್ದರೂ ನಿನ್ನ ಜವಾಬ್ದಾರಿ ಹೊರಲು ಸಿದ್ಧನಾ
ಗಿದ್ದೆ ರಾಮು. ಮುಂದೆ ಓದುವ ಇಚ್ಛೆಯಿದ್ದರೆ ಓದು—ಕೆಲಸಕ್ಕೆ
ಸೇರುವ ಇಚ್ಛೆಯಿದ್ದರೆ ಕೆಲಸಕ್ಕೆ ಸೇರು. ಯಾವದಕ್ಕೂ ನೀನು
ಕಾರ್ಪಣ್ಯ ಪಟ್ಟುಕೊಳ್ಳಬೇಕಾದದ್ದಿಲ್ಲ"

"ನನಗೆ ಮುಂದೆ ಓದುವ ಇಷ್ಟವಿಲ್ಲ ಭಾವ. ಕೆಲಸಕ್ಕೆ ಸೇರು
ತ್ತೇನೆ. ಸರ್ಕಾರಿ ಕೆಲಸವಾದರೆ ಒಳ್ಳೆಯದು."

"ಪ್ರಯತ್ನ ಮಾಡೋಣವಪ್ಪ. ಬಿ. ಎ. ಇನ್ನೂ ಅಗ್ಗವಾಗಿಲ್ಲ.
ಸ್ವಲ್ಪ ಕಷ್ಟಪಟ್ಟರೆ ನೀನು ಬಯಸುತ್ತಿರುವ ಸರ್ಕಾರಿ ಕೆಲಸವೇ ಸಿಕ್ಕ
ಬಹುದು."

ರಾಮೂಗೆ ಕೆಲಸ ದೊರಕಿಸುವುದು ಮಾಧವರಾಯನಿಗೆ ದೊಡ್ಡ
ವಿಷಯವಾಗಲಿಲ್ಲ. ಷರೀಫ್ ಸಾಹೇಬರು ಆ ಹೊಣೆ ಹೊತ್ತುಕೊಂಡು
ಬೆಂಗಳೂರಿಗೆ ಹೋಗಿ ಬಂದರು.

ಮೂರು ತಿಂಗಳಲ್ಲಿ ದಿವಾನರ ಕಛೇರಿಯಲ್ಲಿ ಕ್ಲರ್ಕ್ ಹುದ್ದೆ ರಾಮೂಗೆ ಸಿಕ್ಕಿತು. ತಿಂಗಳಿಗೆ ಅರವತ್ತು ರೂಪಾಯಿ ಸಂಬಳ. 'ಇಲಾಖೆಯ ಕೆಲವು ಪರೀಕ್ಷೆಗಳಿವೆ—ಅವುಗಳನ್ನು ಮುಗಿಸಿಕೊಂಡರೆ ಸಂಬಳ ಹೆಚ್ಚಾಗುತ್ತದೆ....ನಮ್ಮೂರಿಗೇ ರಾಮರಾಯರು ಅಮಲ್ದಾರರಾಗಿ ಕೆಲವು ವರ್ಷಗಳಲ್ಲಿಯೇ ಬರುತ್ತಾರೆ' ಎಂದು ಷರೀಫ್ ಸಾಹೇಬರು ಆಶ್ವಾಸನವಿತ್ತರು.

ರಾಮು ಒಬ್ಬನೇ ಬೆಂಗಳೂರಿಗೆ ಹೋಗಬೇಕಾಗಿ ಬಂತು. ಸದ್ಯಕ್ಕವನು ಹೋಟೆಲಿನಲ್ಲಿದ್ದುಕೊಂಡು ಕಾಲತಳ್ಳಿ, ಆರು ತಿಂಗಳಲ್ಲಿ ಮನೆಮಾಡಿ ಶ್ರೀದೇವಿಯನ್ನು ಕರೆದುಕೊಂಡು ಹೋಗುವುದೆಂದು ಇತ್ಯರ್ಥವಾಯಿತು.

೨೭

ಅಲಮೇಲಮ್ಮನವರು ಬದುಕಿರುವವರೆಗೆ ಮನೆಗೆ ಬಾಡಿಗೆ ತೆಗೆದು
ೂಳ್ಳುತ್ತಿರಲಿಲ್ಲ. ಮಾಧವರಾಯ ಈ ವಿಷಯ ಪ್ರಸ್ತಾಪಿಸಿ ಅಲಮೇ
ಮ್ಮನವರಿಂದ ಛೀಮಾರಿ ಮಾಡಿಸಿಕೊಂಡಿದ್ದ.

ಅಲಮೇಲಮ್ಮನವರು ಸಾಯುವುದಕ್ಕೆ ಮುಂಚೆ ತಮ್ಮ ಸ್ಥಿರ,
ರ ಸ್ವತ್ತುಗಳನ್ನು ಹೆಣ್ಣುಮಕ್ಕಳಿಗೆ ಹಂಚಿದ್ದರು. ಸಿಂಗಾರಮ್ಮನ
ಾಲಿಗೆ ಪಟ್ಟಣದ ಮನೆ ಬಂದಿತ್ತು.

ವೆಂಕಟಾಚಾರ್ಯರು ಬಾಡಿಗೆ ತೆಗೆದುಕೊಳ್ಳುವುದಕ್ಕೆ ಅನು
ಾನಿಸಲಿಲ್ಲ. ಅಲಮೇಲಮ್ಮನವರು ತೀರಿಕೊಂಡ ತಿಂಗಳಿಂದಲೇ
ಾಧವರಾಯ ಮನೆಗೆ ಇಪ್ಪತ್ತು ರೂಪಾಯಿ ಬಾಡಿಗೆ ಕೊಡಲಾರಂ
ಿಸಿದ.

ಮಾಧವರಾಯ ಸ್ವಂತ ಮನೆ ಮಾಡಿಕೊಳ್ಳಬೇಕೆನ್ನುವುದು
ವನ ಎಲ್ಲ ಗೆಳೆಯರ ಉತ್ಕಟೇಚ್ಛೆಯಾಗಿತ್ತು. ಆದರೆ ತನ್ನ ಸಮಸ್ತ
ಯಶಸ್ಸಿಗೆ ಕಾರಣವಾದ ನಾರಾಯಣಸ್ವಾಮಿ ಅಯ್ಯಂಗಾರ್ಯರ ಮನೆ
ಬಿಟ್ಟು ಹೋಗುವುದಕ್ಕೆ ಇಷ್ಟವಿಲ್ಲದೆ ಕಾಲತಳ್ಳುತ್ತ ಬಂದ.

ಒಂದು ದಿನ ಪಟ್ಟಣಕ್ಕೆ ಬಂದ ವೆಂಕಟಾಚಾರ್ಯರು ಪಟ್ಟಣದ
ಮನೆ ಮಾರುವ ವಿಷಯ ಮಾಧವರಾಯನಿಗೆ ತಿಳಿಸಿದರು.

"ಇಷ್ಟು ಚೆನ್ನಾಗಿ ಬದುಕಿ ಬಾಳಿದ ಮನೆ. ಏಕೆ ಮಾರುತ್ತೀರಿ

ವೆಂಕಟಾಚಾರ್ಯರೇ ?"

"ಪಟ್ಟಣದಲ್ಲಿ ಮನೆಯಿಟ್ಟುಕೊಂಡು ನಾನೇನು ಮಾಡಬೇಕು
ವರ್ಷಕ್ಕೊಮ್ಮೆಯೂ ಇಲ್ಲಿಗೆ ಬರುವ ಸಂಭವವಿಲ್ಲ."

ತಾನು ಮನೆ ಕೊಳ್ಳಬೇಕೆಂದಿರುವ ವಿಷಯ ತಿಳಿಸುವಷ್ಟರಲ್ಲಿ
ವೆಂಕಟಾಚಾರ್ಯರೇ

"ನನ್ನ ಭಾವನವರು ತಿರುಮಲೈಂಗಾರ್ ಪರಿಚಯ ನಿಮಗಿರ
ಬಹುದು. ಎಕ್ಸಿಕ್ಯೂಟಿವ್ ಇಂಜಿನೀಯರಾಗಿದ್ದು ಈಗ ತಾನೇ
ರಿಟೈರ್ ಆಗಿದ್ದಾರೆ. ಅವರ ಪೂರ್ವಿಕರ ಸ್ಥಳ ಪಟ್ಟಣ. ಇಲ್ಲಿಯೇ
ಅವರಿಗೆ ಸ್ವಲ್ಪ ಗದ್ದೆಯೂ ಇದೆ. ಮನೆ ಅವರಿಗೆ ಮಾರಿಬಿಡುವ ಎಂದು
ಕೊಂಡಿದ್ದೇನೆ."

"ನಿಮ್ಮವರಿಗೇ ಮನೆ ಹೋಗುವುದು ಕೇಳಿ ನನಗೆ ಸಂತೋಷ
ವಾಯಿತು ವೆಂಕಟಾಚಾರ್ಯರೇ. ಈ ಮನೆ ಕಂಡವರ ವಶವಾಗುವುದು
ನನಗೆ ಸ್ವಲ್ಪವೂ ಇಷ್ಟವಿರಲಿಲ್ಲ. ನಾನೇ ಮನೆ ಕೊಂಡು ಕೊಳ್ಳುವ
ದಕ್ಕೂ ಸಿದ್ಧವಾಗಿದ್ದೆ."

"ಅಯ್ಯೋ ಎಂಥಾ ಕೆಲಸವಾಯಿತು ಮಾಧವರಾಯರೇ ನೀವು
ಒಂದು ಮಾತು ನನಗೆ ಹೇಳಿದ್ದರೆ ಒಪ್ಪಿಕೊಂಡು ಬಿಡುತ್ತಿದ್ದೆ. ಈಗ
ನನ್ನ ಕೈಕಟ್ಟಿಹಾಕಿದಂತಾಗಿದೆ."

"ಚಿಂತೆಯಿಲ್ಲ. ನನ್ನ ಮನೆ ಯಾವದಾದರೂ ಅದು ನಿಮ್ಮ
ಮಾವನವರು, ಅತ್ತಿಮ್ಮನವರ ಕೃಪಾಭಿಕ್ಷವೇ !"

ನಾರಾಯಣಸ್ವಾಮಿ ಅಯ್ಯಂಗಾರ್ಯರ ಮನೆ ಬಿಟ್ಟು ಹೋದು
ದಕ್ಕೆ ಮಾಧವರಾಯನಿಗೆ ತುಂಬ ವಿಷಾದವಾಯಿತು.

ಗೌಡರು, ರಂಗಯ್ಯನವರು ಸುಮ್ಮನೆ ಕೂಡಲಿಲ್ಲ. ರಂಗಯ್ಯ
ನವರ ಕಕ್ಷಿಗಾರರು ದೇವರಾಜ ಅರಸಿನವರ ಖಾಲಿ ನಿವೇಶನವೊಂದು
ರಂಗನಾಥಸ್ವಾಮಿ ದೇವಾಲಯದ ಬೀದಿಯಲ್ಲಿಯೇ ಇತ್ತು. ಉದ್ದಗಲ
೧೬೦ X ೧೨೦ ಅಡಿ.

"ಅರಸಿನವರನ್ನು ಕುದುರಿಸಿದ್ದೇವೆ ಸ್ವಾಮಿ. ನೀವು ಹೂ ಎಂದರೆ

ಖರೀದಿ ಪತ್ರ ಬರೆಸಿಬಿಡುತ್ತೇನೆ."

"ಎಷ್ಟು ಕೇಳುತ್ತಿದ್ದಾರೆ ಗೌಡರೇ?"

"ಎರಡೂವರೆ ಹೇಳುತ್ತಿದ್ದರು. ನಾವು ಸಾವಿರದೆಂಟು ನೂರಕ್ಕೆ ಕುದುರಿಸಿದ್ದೇವೆ."

"ಸೈಟು ತೆಗೆದುಕೊಂಡು ಮನೆಕಟ್ಟುವುದು ದೊಡ್ಡ ರಾಮಾಯಣ ಗೌಡರೇ, ಯಾವದಾದರೂ ಕಟ್ಟಿದ ಮನೆ ತೆಗೆದುಕೊಂಡರಾಯಿತು."

"ಕಟ್ಟಿದ ಮನೆ ಎಲ್ಲಿ ಸಿಕ್ಕತ್ತೆ ಸ್ವಾಮಿ. ಒಂದು ವೇಳೆ ಸಿಕ್ಕಿದರೂ ಬರೀ ಬೊಂಬು ಗಳು ಮಣ್ಣು. ಸೈಟು ತೆಗೆದುಕೊಂಡು ನಿಮಗೆ ಹೇಗೆ ಬೇಕೋ ಹಾಗೆ ಮನೆ ಕಟ್ಟಿಸುವುದೇ ಒಳ್ಳೆಯದು."

"ವ್ಯವಧಾನ ಎಲ್ಲಿಂದ ತರಲಿ?"

"ಅದರ ಯೋಚನೆ ನಿಮಗೇಕೆ? ನಿಮ್ಮ ಆವಶ್ಯಕತೆಗನುಗುಣ ವಾಗಿ ಪ್ಲ್ಯಾನ್ (Plan) ಬರೆಸಿಕೊಡಿ. ಮನೆ ಕಟ್ಟಿಸಿಕೊಡುವ ಭಾರ ನನಗಿರಲಿ."

"ನಿಮಗೆ ನನ್ನಿಂದ ತುಂಬ ತೊಂದರೆ ಗೌಡರೇ."

"ಇಂಥ ತೊಂದರೆ ನೂರು ಇದ್ದರೂ ಯೋಚನೆ ಇಲ್ಲ ಸ್ವಾಮಿ."

ನಿವೇಶನ ಕೊಂಡದ್ದಾಯಿತು. ಮಾಧವರಾಯ ಬೆಂಗಳೂರಿಗೆ ಹೋಗಿ ಪ್ಲ್ಯಾನ್ ಸಿದ್ಧಮಾಡಿಸಿಕೊಂಡು ಬಂದು ಗೌಡರ ಕೈಯಲ್ಲಿಟ್ಟ. ಶುಭ ಮುಹೂರ್ತದಲ್ಲಿ ಶಂಕುಸ್ಥಾಪನೆಯಾಗಿ ಮನೆ ಕೆಲಸ ಆರಂಭ ವಾಯಿತು.

ಹಿಡಿದ ಕೆಲಸ ಸಾಧಿಸುವುದರಲ್ಲಿ ಜವರೇಗೌಡರು ನಿಸ್ಸೀಮರಾಗಿದ್ದರು. ಸ್ವಂತ ಕೆಲಸವೆಲ್ಲವನ್ನೂ ಬದಿಗೊತ್ತಿ ಮನೆ ಕಟ್ಟಿಸುವುದಕ್ಕೆ ನಿಂತರು. ಗೌಡರಿಗೆ ಕಾಫಿ, ತಿಂಡಿ, ಊಟ ಮಾಧವರಾಯನ ಮನೆ ಯಿಂದ ಹೋಗಲಾರಂಭವಾಯಿತು. ಗೌಡರು ಸಂಕೋಚಪಟ್ಟುಕೊಂಡು ಒಲ್ಲೆನೆಂದಾಗ ಮಾಧವರಾಯ ಕಠಿಣವಾಗಿ

"ಬೆಳಿಗ್ಗೆಯಿಂದ ಸಂಜೆಯವರೆವಿಗೂ ಬಿಸಿಲಿನಲ್ಲಿ ನಿಂತುಕೊಂಡು, ಕೂಲಿಯವರ ಜತೆಗೂ ದುಡಿಯುತ್ತೀರಿ. ಕಾಫಿ, ತಿಂಡಿಕೂಡ ನೀವು

ನನ್ನಿಂದ ಸ್ವೀಕರಿಸದಿದ್ದರೆ ಮನೆಗೆಲಸ ನಿಲ್ಲಿಸಿಬಿಡಬೇಕಾಗುತ್ತದೆ."

"ಕೋಪಮಾಡಿಕೊಳ್ಳಬೇಡಿ ಸ್ವಾಮಿ. ನಿಮ್ಮ ಮನೆಯ ಊಟ ವೆಂದರೆ ದೇವರ ಪ್ರಸಾದವಿದ್ದಹಾಗೆ. ಅದನ್ನು ಬೇಡವೆನ್ನಲಿಲ್ಲ—ನಿತ್ಯ ಏಕೆ ಎಂಬೆ ? ಮನೆಗೆ ಹೋಗಿ ಊಟ ಮಾಡಿಕೊಂಡು ಬರುತ್ತೇನೆ."

"ನನ್ನ ಹೊಸಮನೆ ಸೇರಿಸಿ ನೀವು ನಿಮ್ಮ ಮನೆಗೆ ಊಟಕ್ಕೆ ಹೋಗುವಿರಂತೆ."

ನಿರ್ವಾಹವಿಲ್ಲದೆ ಗೌಡರು ಒಪಿಕೊಳ್ಳಬೇಕಾಯಿತು. ಮಾಧವ ರಾಯನ ಬಗ್ಗೆ ಊರಿನವರಿಗಿದ್ದ ವಿಶ್ವಾಸ, ಗೌರವ ಮನೆಕಟ್ಟುವ ಸಮಯದಲ್ಲಿ ಚೆನ್ನಾಗಿ ವ್ಯಕ್ತವಾಯಿತು. ಸ್ನೇಹಿತರು, ಕಕ್ಷಿಗಾರರು ನೆರವು ನೀಡಿದುದಲ್ಲದೆ ಕೇವಲ ಪರಿಚಿತಸ್ಥರ ಸಹಾಯವೂ ದೊರೆಯಿತು.

ತಾರಸಿ ಕೆಲಸ ನಡೆದಿದ್ದಾಗ ಗೋದಮ್ಮನವರು, ರುಕ್ಮಿಣಿ ಬಂದು ದೇವರ ಮನೆ, ಅಡಿಗೆ ಮನೆ, ಬಚ್ಚಲ ಮನೆಗಳಿಗೆ ಬೇಕಾಗುವ ಅನು ಕೂಲಗಳನ್ನೆಲ್ಲಾ ಸೂಚಿಸಿದರು.

ಮಾಧವರಾಯನ ಮನೆ ಸಿದ್ಧವಾಯಿತು. ಅಷ್ಟು ಚೆನ್ನಾಗಿ ಕಟ್ಟಲ್ಪಟ್ಟಿದ್ದ ಮನೆ ಪಟ್ಟಣದಲ್ಲಿ ಬೇರೊಂದಿರಲಿಲ್ಲ. ಮನೆಯ ಪಶ್ಚಿಮ ಮುಖದಲ್ಲಿಯೇ ಹೆಬ್ಬಾಗಿಲು, ಅದೇ ಪ್ರಕಾರ ದಕ್ಷಿಣ ಮುಖಕ್ಕೂ ಬಾಗಿಲಿತ್ತು. ಪಶ್ಚಿಮದ ಕಡೆಯ ಭಾಗ ಸಂಸಾರಕ್ಕೆಂದೂ, ದಕ್ಷಿಣದ ಭಾಗ ಮಾಧವರಾಯನ ಕಛೇರಿಗೆಂದೂ ನಿರ್ದಿಷ್ಟವಾಗಿತ್ತು. ಪಶ್ಚಿಮದ ಕಡೆ ಪ್ರವೇಶಿಸಿದೊಡನೆಯೇ ದೊಡ್ಡ ತೊಟ್ಟಿ, ತೊಟ್ಟಿಯ ಬಲಗಡೆ ಎರಡು ರೂಮುಗಳು. ತೊಟ್ಟಿಯಿಂದಲೇ ಒಳಗೆ ಪ್ರವೇಶ. ದಕ್ಷಿಣಕ್ಕೆ ಬಾಗಿಲಿದ್ದ ಒಂದು ಸಣ್ಣ ಓಣಿ. ಓಣಿಯ ಎದುರಿಗೆ ಮತ್ತೆರಡು ರೂಮುಗಳು. ಓಣಿ ನೇರವಾಗಿ ಹಿಂಬದಿಗೆ ಹೋಗುತ್ತಿತ್ತು. ಅಲ್ಲಿ ಎಡಕ್ಕೆ ಸ್ನಾನಗೃಹ—ಬಲಕ್ಕೆ ಆಡಿಗೆಯ ಮನೆ, ದೇವರ ಮನೆ, ಉಗ್ರಾಣ. ಇವುಗಳ ಎದುರಿಗೆ ಒಂದು ಓಣಿಯಿದ್ದುದರಿಂದ ಸ್ನಾನ ಗೃಹ, ಅಡಿಗೆಯ ಮನೆ, ದೇವರ ಮನೆಗಳಿಗೆ ಪ್ರತ್ಯೇಕ ಬಾಗಿಲು ಗಳಿದ್ದವು. ದಕ್ಷಿಣದ ಬಾಗಿಲಿದ್ದಕಡೆಗೆ ಎಡಗಡೆ ಒಂದು ರೂಮು;

ಎಲಗಡೆ ಒಂದು ರೂಮು. ಬಲಗಡೆಯ ರೂಮು ಮಾಧವರಾಯನ ಕಛೇರಿಯಾಯಿತು. ಎಡಗಡೆಯ ರೂಮು ದಿವಾನಖಾನೆಯಾಯಿತು. ದಿವಾನಖಾನೆಯ ಬದಿಗಿದ್ದ ರೂಮು ಮಾಧವರಾಯನ ಶಯ್ಯಾಗೃಹವಾಗಿತ್ತು. ಅದರ ಪಕ್ಕದಲ್ಲಿದ್ದ ರೂಮನ್ನು ಶ್ರೀದೇವಿ ತೆಗೆದುಕೊಂಡಳು. ತೊಟ್ಟಿಯ ಪಕ್ಕದಲ್ಲಿದ್ದ ಎರಡು ರೂಮುಗಳಲ್ಲಿ ಒಂದನ್ನು ಕಮಲ, ಇನ್ನೊಂದನ್ನು ನಾರಾಯಣಸ್ವಾಮಿ ಆಕ್ರಮಿಸಿಕೊಂಡರು.

ಗೋದಮ್ಮ ತಮಗೆ ದೇವರಮನೆ ಸಾಕೆಂದರು.

ಮನೆಗೆ, ಕಛೇರಿಗೆ ಅವಶ್ಯಕವಾಗಿದ್ದ ಕುರ್ಚಿ, ಮೇಜು, ಮಂಚ, ಡ್ರೆಸಿಂಗ್ ಟೇಬಲ್, ಡ್ರೆಸಿಂಗ್ ಆಲ್ಮೈರಾ ಒದಗಿಸುವ ಜವಾಬ್ದಾರಿ ಷರೀಫ್ ಸಾಹೇಬರು ಹೊತ್ತುಕೊಂಡರು.

ಕೊನೆಯಲ್ಲಿ ಲೆಕ್ಕ ನೋಡಿದಾಗ ಹನ್ನೆರಡು ಸಾವಿರ ರೂಪಾಯಿಗಳು ಖರ್ಚಾಗಿದ್ದವು,

ಗೃಹಪ್ರವೇಶದ ವಿಧಿ ಪೂರೈಸಿಕೊಂಡು ನೂರಾರು ಜನಕ್ಕೆ ಅನ್ನ ಹಾಕಿ ಮಾಧವರಾಯ, ಅವನ ಸಂಸಾರ ಹೊಸಮನೆಗೆ ವಾಸಕ್ಕೆ ಬಂದರು.

ತಮ್ಮ ಸಂತೋಷ ಹೇಗೆ ವ್ಯಕ್ತಮಾಡಬೇಕೆನ್ನುವುದೇ ಗೋದಮ್ಮನವರಿಗೆ ತಿಳಿಯದಾಯಿತು. ಭಗವಂತನ ಅಪಾರ ಕರುಣೆಯ ಭಾರದಿಂದ ಅವರ ಹೃದಯ ತೂಗಿ ತೊನೆಯತೊಡಗಿತು. ಮಾಧವರಾಯನ ಆರ್ಥಿಕಸ್ಥಿತಿ ಸುಧಾರಿಸಿದುದರಿಂದ ಗೋದಮ್ಮನವರ ಜೀವನಕ್ರಮ ವ್ಯತ್ಯಾಸಹೊಂದಲಿಲ್ಲ. ಪತಿ ಜಯರಾಯರು ಬದುಕಿದ್ದಾಗ ಸಣ್ಣ ಮನೆಯಲ್ಲಿಯೇ ವಾಸಮಾಡುವುದಾಗಿತ್ತು. ಅವರ ಸಂಪಾದನೆ ತಿಂಗಳಿಗೆ ಮೂವತ್ತು, ನಲವತ್ತು ರೂಪಾಯಿ ಮೀರಿರಲಿಲ್ಲ. ಮಗನ ಕಾಲಕ್ಕೆ ಭವ್ಯ ನವ್ಯ ಗೃಹದಲ್ಲಿ ವಾಸ. ಮಗ ತಿಂಗಳಿಗೆ ಆರುನೂರರಿಂದ ಸಾವಿರ ರೂಪಾಯಿವರೆಗೆ ಸಂಪಾದಿಸುತ್ತಿದ್ದ. ಬಡತನದಲ್ಲಿದ್ದಾಗ ಗೋದಮ್ಮನವರಿಗೆ ದೊಡ್ಡ ಸೌಭಾಗ್ಯವಿತ್ತು – ಜಯರಾಯರು ಜೀವಂತರಾಗಿದ್ದರು. ಅವರ ಸಾತ್ವಿಕ ಜೀವನ, ನಿಷ್ಕಲ್ಮಷ ಹೃದಯ, ಲೋಕಸೇವೆ

ಒಂದೊಂದೂ ಮಹಾಸಂಪತ್ತಾಗಿತ್ತು. ಮಾಧವರಾಯ, ರುಕ್ಮಿಣಿ ಇಬ್ಬರೂ ಗೋದಮ್ಮನವರ ಜೀವನ ತುಂಬಿದ್ದರು. ಮಗ ತಂದೆಯ ಪವಿತ್ರಜೀವನಕ್ಕೆ ಪರಿಪೋಷಕವಾಗುವ ರೀತಿಯಲ್ಲಿ ಜೀವನ ಸಾಗಿಸಿದ್ದ. ಆದರೆ ಯಾವ ಸಂಪತ್ತು ಪತಿಭಾಗ್ಯಕ್ಕೆ ವಿನಿಮಯವಾಗಬಲ್ಲದು.

ಮಾಧವರಾಯ ಪುಣ್ಯವಂತನಾದುದು ಊರಿಗೇ ತಿಳಿದಿತ್ತು. ಗೋದಮ್ಮನವರೊಬ್ಬರಿಗೆ ಮಾತ್ರ ತಿಳಿದಿರಲಿಲ್ಲ. ಅವರ ಕೆಂಪುಮಡಿ ಸೀರೆ, ಒಪ್ಪತ್ತೂಟ, ದಿನಕ್ಕೆ ಹದಿನಾರು ಗಂಟೆಕಾಲ ದುಡಿಯುವುದು ಕಡಿಮೆಯಾಗಲಿಲ್ಲ.

ರುಕ್ಮಿಣಿಗೂ ಸಂಪತ್ತಿನ ಗಾಳಿ ಸೋಂಕಿರಲಿಲ್ಲ. ಮನೆಗೆ ಬಂದವರಿಗೆ ತಾನೇ ಅಡಿಗೆ ಮಾಡಿ ಬಡಿಸಬೇಕು. ದನಕರುಗಳ ಕೊಟ್ಟಿಗೆಯನ್ನು ತಾನೇ ಗುಡಿಸಬೇಕು. ಯಜಮಾನಿತಿಯ ಕಷ್ಟ ನೋಡಲಾರದೆ ಆಳು ಮಾದ

"ಅನ್ನ ಆ ಮೂಲ್ಯಾಗೆ ಮಡಗಿ ಬಿಡ್ರವ್ವ. ನಾವು ಆಕ್ಕೊಂಡು ಉಣ್ಣಕೋತೀವೆ." ಎಂದರೆ ರುಕ್ಮಿಣಿ

"ಮನೆ ಆಳುಗಳೆಂದರೆ ಮನೆಮಕ್ಕಳಿದ್ದ ಹಾಗೆ ಮಾದಣ್ಣ. ನೀವು ಚೆನ್ನಾಗಿ ಊಟಮಾಡುವುದನ್ನು ಕಣ್ತುಂಬ ನಾನು ನೋಡದಿದ್ದರೆ ನನ್ನ ಗಂಟಲಲ್ಲಿ ಅನ್ನ ಇಳಿಯುತ್ತದೆಯೇ ?" ಎಂದು ಹೇಳುತ್ತಿದ್ದಳು.

ಮಾದನ ಹೆಂಡತಿ ಲಕ್ಕಿ ಹೆರಿಗೆಯಾದಮೇಲೆ ಹಾಸಿಗೆ ಬಿಟ್ಟೇ ಏಳಲಿಲ್ಲ. ಬಾಣಂತನದಲ್ಲಿ ಹೆಚ್ಚುಕಡಿಮೆಯಾಗಿ ಅಪಥ್ಯವಾಗಿತ್ತು. ಲಕ್ಕೀಗೆ ನಿತ್ಯ ಜ್ವರ ಬರುತ್ತಿತ್ತು. ಮಾದ ಆಸ್ಪತ್ರೆ ಔಷಧ ತಂದು ಕುಡಿಸುತ್ತಿದ್ದ. ಕಾಲಕ್ರಮೇಣ, ಬಾಣಂತಿ ಮೈಯಲ್ಲಿ ಬಾವು ಕಾಣಿಸಿಕೊಂಡಿತು. ನೆರೆಹೊರೆಯವರು 'ಮಣ್ಣಿನ ಏರ್ಪಾಟು ಮಾಡ್ಕೋ ಮಾದ' ಎಂದರು. ಮಾದನ ಹಿತೈಷಿಗಳು 'ಕೆಟ್ಟ ನಕ್ಷತ್ರದಲ್ಲಿ ಸತ್ತಾಳು–ಹೊರಗೆ ಮಲಗಿಸು' ಎಂದರು. ಮಾದನ ಸಮೀಪ ಬಂಧುಗಳು ಅವನಿಗೆ ಮದುವೆ ಮಾಡುವ ಪ್ರಯತ್ನಮಾಡುತ್ತಿದ್ದರು.

ಮಾದ ಒಳಗೇ ಕೊರಗಿ ಸವೆಯುವುದಕ್ಕಾರಂಭಿಸಿದ. ಹಿಟ್ಟು

ಂಟಲಲ್ಲಿ ಇಳಿಯದಾಯಿತು. ಒಂದು ದಿನ ಅವನಿಗೆ ಬಡಿಸುತ್ತಾ ಕ್ಮಿಣಿ ಕೇಳಿದಳು.

"ಲಕ್ಕೀಗೆ ಮೈಯಲ್ಲಿ ಹೇಗಿದೆ ಮಾದಣ್ಣ."

"ಏನು ಏಳ್ಲವ್ವಾ........" ಎಂದು ಮಾದ ಬಿಕ್ಕಿಬಿಕ್ಕಿ ಅಳಲು ಕ್ರಮಿಸಿದ. ರುಕ್ಮಿಣಿ ಅವನಿಗೆ ಧೈರ್ಯ ಹೇಳಿ ಲಕ್ಕಿಯ ಸ್ಥಿತಿ, ರೆಹೊರೆಯವರಾಡುತ್ತಿದ್ದ ಮಾತುಗಳನ್ನೆಲ್ಲಾ ಸಂಗ್ರಹಿಸಿಕೊಂಡು

"ನನಗೊಂದು ಮಾತು ಈ ಮೊದಲೇ ಏಕೆ ಹೇಳಲಿಲ್ಲ."

"ಎಂಗೆ ಏಳ್ಲವ್ವಾ. ಆಳುಮಕ್ಕಳಿಗಿಂತ ಎಚ್ಚಾಗಿ ದುಡಿತೀರಿ. ನ್ನ ತಾಪತ್ರಯಾನೂ ನಿಮ್ಮ ಕೊಳ್ಳಿಗೆ ಕಟ್ಟಲಾ – ಲಕ್ಕೀಗೆ ಾಕ್ತರಲ್ಲೇ ನಂಬಿಕೆ. ಅಂಗೂ ನಾನು ಲಕ್ಕೀಗೆ 'ಅಮ್ಮಾವರಿಗೆ ಏಳ್ತೀನಿ, ಅವರು ಒಳ್ಳೆ ಮದ್ದು ಕೊಡ್ತಾರೆ' ಎಂದು ಏಳ್ದೆ. ಅವಳು 'ಬೇಡ ಬುಡು. ಾಕ್ತರು ಚಂದಾಕೆ ಮದ್ದು ಕೊಡ್ತಾರೆ. ಅವರ ಸೂಜಿಮದ್ದು ಎಂಥಾ ಾಹಿಲೇನೂ ವಾಸಿಮಾಡ್ತೈತೆ' ಎಂದಳು."

"ಆಗಲಿ. ಸಾಯಂಕಾಲ ನನ್ನ ನಿಮ್ಮ ಮನೆಗೆ ಕರೆದುಕೊಂಡು ಹೋಗು" ಎಂದಳು.

ಸಂಜೆ ಅತ್ತೆಯನ್ನೂ ಜತೆಗೆ ಕರೆದುಕೊಂಡು ಹೋಗಿ ರುಕ್ಮಿಣಿ ಲಕ್ಕಿಯನ್ನು ನೋಡಿಕೊಂಡು ಬಂದಳು. ಗೋದಮ್ಮನವರು ಸ್ಪಷ್ಟವಾಗಿ

"ಇನ್ನೇನು ಆಸೆಯಿಲ್ಲ ರುಕ್ಮಿಣಿ. ಕೈಮೀರಿ ಹೋಗಿದೆ. ಅನ್ಯಾಯ ಾಗಿ ಡಾಕ್ಟರ ಶೀಷೆ ನೀರು ಕುಡಿಸಿ ಕುಡಿಸಿ ಲಕ್ಕೀನ ಕೊಂದು ಬಿಟ್ಟಿದ್ದಾರೆ." ಎಂದರು. ರುಕ್ಮಿಣಿಯ ಮನಸ್ಸಿಗೆ ಅಪಾರ ಯಾತನೆ ಯಾಗಿತ್ತು. ಮಾದ, ಲಕ್ಕಿ ಸಂಸಾರ ಅಚ್ಚುಗಟ್ಟಾಗಿತ್ತು. ಲಕ್ಕಿ ಯನ್ನು ಕಂಡರೆ ಮಾದನ ಪಂಚಪ್ರಾಣವೂ ಮೇಲೆದ್ದು ಕುಣಿಯುತ್ತಿತ್ತು.

"ಇದು ಚೊಚ್ಚಲು ಬಾಣಂತನ ಅಮ್ಮ."

"ಹೌದು ರುಕ್ಕೂ—ಅದಕ್ಕೇ ನಾನು ನಿರಾಶಳಾದದ್ದು."

"ಲಕ್ಕಿ ಸಾಯಲು ಬಿಡಬಾರದಮ್ಮ. ಮಾದನ ಮುಚ್ಚಟೆ ಸಂಸಾರ ಕೆಟ್ಟುಹೋಗುತ್ತದೆ."

"ಯಮಧರ್ಮರಾಯನ ಕೈಯಲ್ಲಿ ಗುದ್ದಾಡುತ್ತೀಯೇನೇ
ತಾಯೀ."

"ಸಾವಿತ್ರಿ ಗುದ್ದಾಡಿ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾಳೆ."

"ಅದು ಸತ್ಯಯುಗದ ಮಾತು—ಇದು ಕಲಿಕಾಲ."

"ಕಲಿಕಾಲದಲ್ಲಿಯೂ ಸತ್ಯವಿದೆಯಮ್ಮ. ಸತ್ಯವಿಲ್ಲದೆ ಲೋಕ
ಉಳಿಯುವುದೇ ಸಾಧ್ಯವಿಲ್ಲ. ಆದರೆ ಸತ್ಯಸೂರ್ಯನಮೇಲೆ ಮೋಡದ
ತೆರೆ ಬಿದ್ದಿದೆ."

"ಲಕ್ಕೀಗೆ ಔಷಧ ಕೊಡುವೆಯಾ ?"

"ನನಗೇನೂ ಹೊಳೆಯುತ್ತಿಲ್ಲ. ಗುರುರಾಯರನ್ನು ಕೇಳುತ್ತೇನೆ
—ಅವರು ಹೇಗೆ ಹೇಳಿದರೆ ಹಾಗೆ ಮಾಡುತ್ತೇನೆ."

ಮನೆಗೆ ಬಂದವಳೇ ರುಕ್ಮಿಣಿ ತಣ್ಣೀರಿನಲ್ಲಿ ಮಿಂದು, ಒದ್ದೆ ಬಟ್ಟೆ
ಯಲ್ಲಿಯೇ ಪೂಜೆಗಾರಂಭಿಸಿದಳು.

ಗೋದಮ್ಮನವರು ಸೊಸೆಯ ಚಲನವಲನವನ್ನು ಸೂಕ್ಷ್ಮವಾಗಿ
ಗಮನಿಸುತ್ತಾ ತೊಟ್ಟಿಯಲ್ಲಿ ಕುಳಿತಿದ್ದರು.

ಪೂಜೆ ಮುಗಿಸಿಕೊಂಡು ಪ್ರಸನ್ನವದನಳಾಗಿ ಬಂದ ಸೊಸೆಯನ್ನು
ನೋಡಿ ಗೋದಮ್ಮನವರು ಆಶ್ಚರ್ಯಗೊಂಡರು.

ರುಕ್ಮಿಣಿ ಮಾದನನ್ನು ಕೂಗಿ ಅವನ ಕೈಗೆ ಒಂದು ಬೆಳ್ಳಿಗಿಂಡಿ,
ನಾಲ್ಕು ಹೂವು ಕೊಟ್ಟು

"ಲಕ್ಕಿ ಕಣ್ಣಿಗೆ ಹೂವು ಒತ್ತಿ ಅವಳ ತಲೆಯಕೆಳಗಿಡು. ಗಿಂಡಿ
ಯಲ್ಲಿರುವ ತೀರ್ಥ ಅವಳಿಗೆ ಕುಡಿಸು."

"ಮದ್ದು ಕೊಡಾಕಿಲ್ವರಾ ?"

"ಇದೇ ಮದ್ದು. ಡಾಕ್ಟರ ಔಷಧಿ, ಸೂಜಿಮದ್ದು ಯಾವದೂ
ಕೊಡಿಸಬೇಡ."

ಮಾದ ತೀರ್ಥಪ್ರಸಾದ ತೆಗೆದುಕೊಂಡು ಹೋದಮೇಲೆ ರುಕ್ಮಿಣಿ
ಅತ್ತೆಯ ಕಡೆ ತಿರುಗಿ

"ಗುರುರಾಯರು ಅನುಗ್ರಹಮಾಡಿದ್ದಾರಮ್ಮಾ. ಇನ್ನು ನನಗೆ

ಲ್ಪವೂ ಭಯವಿಲ್ಲ. ರಾಯರಿಗೆ ಹೂವೇರಿಸಿ ಧ್ಯಾನಮಾಡಿದೆ — ಬಲಗಡೆ ಪ್ರಸಾದ ಕೊಟ್ಟರು."

"ಲಕ್ಕೀ ಬದುಕಿಕೊಳ್ಳುತ್ತಾಳೆ ಎನ್ನುವೆಯಾ ?"

"ಗುರುರಾಯರು ವಚನ ತಪ್ಪುವವರಲ್ಲ."

ಮೂರು ದಿವಸ ಹಗಲು, ಸಂಜೆ ಮಾದ ತೀರ್ಥಪ್ರಸಾದ ತೆಗೆದು ಕೊಂಡು ಹೋಗಿ ಲಕ್ಕೀಗೆ ಕೊಟ್ಟ. ನಾಲ್ಕನೆಯ ದಿನ ಬಂದು

"ಅಸಿವಾಗತ್ತೆ ಅಂತಾಳ್ರಮ್ಮ" ಎಂದು ತಿಳಿಸಿದ.

ರುಕ್ಮಿಣಿ ತೆಳ್ಳಗೆ ರವೆಗಂಜಿ ಮಾಡಿ ಮಾದನಿಗೆ ಕೊಟ್ಟು

"ಗಂಜಿ ಕೊಡು – ಇನ್ನೇನೂ ಕೊಡಬೇಡ – ಅವಳು ತಿನ್ನುವು ದಕ್ಕೆ ಅದೂ ಇದೂ ಕೇಳಬಹುದು. 'ಈಗ ಗಂಜೀ ಕುಡಿ. ನೀನು ಹುಷಾರಾದ ಮೇಲೆ ಅಮ್ಮಾವರು ಬೇಕಾದ್ದು ತಿಂಡಿ ಮಾಡಿಕೊಡು ತ್ತಾರೆ.' ಎಂದು ತಿಳಿಸು. ಲಕ್ಕೀ ಮೇಲಿನ ಪ್ರೀತಿಗೆ ಅವಳಿಗೆ ಸಿಕ್ಕಿದ್ದು ತಿನ್ನಿಸಿ ಬಿಟ್ಟೀಯಾ – ಜೋಕೆ"

"ಇಲ್ರಮ್ಮ – ನಿಮ್ಮ ಮಾತು ಮೀರಾಕಿಲ್ಲ.' ಎಂದು ಹೇಳಿದ. ಎಲ್ಲ ವಿಜ್ಞಾನಸೂತ್ರಗಳನ್ನೂ ಕಿತ್ತೆಸೆಯುವಂತೆ ರುಕ್ಮಿಣಿಯ ಅಪಾರ ಶಕ್ತಿ ಪವಾಡಮಾಡಿತ್ತು. ಲಕ್ಕೀಗೆ ದಿನದಿನಕ್ಕೆ ಗುಣ ಕಾಣುತ್ತ ಬಂತು. ಜ್ವರ ನಿಂತಿತ್ತು-ಬಾವು ಸ್ವಲ್ಪ ಸ್ವಲ್ಪವಾಗಿ ಇಳಿಯುತ್ತಿತ್ತು- ಹಲವತ್ತು ದಿವಸ ಕಳೆಯುವುದರಲ್ಲಿ ಲಕ್ಕೀ ಮೇಲಕ್ಕೆದ್ದು ಕುಳಿತಳು.

ಮಾದ ಸತೀದ್ವಿತೀಯನಾಗಿ ಬಂದು ಅಮ್ಮಾವರ ಪಾದಗಳಿಗೆ ನಮಿಸಿದ. ಲಕ್ಕಿ ತನ್ನ ತೊಟ್ಟಿಲುಗೂಸನ್ನು ರುಕ್ಮಿಣಿಯ ಪಾದಗಳ ಮೇಲೆ ಹಾಕಿ

"ಇದು ನಿಮ್ಮಗ ಕಣ್ರವ್ವಾ" ಎಂದಳು. ರುಕ್ಮಿಣಿ ಮಗುವಿನ ತಲೆ ನೇವರಿಸಿ ಅದರ ಕೈಗೆ ಒಂದು ರೂಪಾಯಿ ಇಟ್ಟು

"ನನ್ನ ಮೇಲೆ ನಿನಗೆ ತುಂಬ ಕೋಪವೇ ಲಕ್ಕೀ !"

"ಯಾಕ್ರವ್ವಾ ?"

"ನಿನ್ನನ್ನು ಉಪವಾಸ ಕೆಡವಿದೆ ಎಂದು."

"ಹೋಗಿದ್ದ ಜೀವ ತಂದುಕೊಟ್ರಲ್ಲವ್ವಾ !"

"ಲಕ್ಕೀ – ನಿನಗೇನು ತಿನ್ನಬೇಕೆಂದು ಆಸೆಯಿದೆ ಹೇಳು. ನಾಳೆ ಮಾಡುತ್ತೀನೆ – ನೀನೂ ಮಾದ ಇಲ್ಲೇ ಊಟಮಾಡುವಿರಂತೆ !"

ಲಕ್ಕಿ ರುಕ್ಮಿಣಿಯ ಪಾದಗಳ ಮೇಲೆ ಮುಖವಿಟ್ಟು ಅದನ್ನು ಕಣ್ಣೀರಿನಿಂದ ತೊಳೆದು

"ಏನು ಬೇಡ್ರವ್ವಾ – ನಿಮ್ಮ ಅರಕೆ ಒಂದಿದ್ರೆ ಸಾಕು." ಎಂದಳು. ರುಕ್ಮಿಣಮ್ಮ ಸುಮ್ಮನಿರಲಿಲ್ಲ. ಮಾರನೆಯ ದಿನ ಮಾದ, ಲಕ್ಕೀಗೆ ಹೋಳಿಗೆ ಪಾಯಸದ ಔತಣ ಮಾಡಿದಳು.

ಊರಿನಲ್ಲಿ ಗುಲ್ಲು ಆರಂಭವಾಗಿತ್ತು. ಹೊಲೆಗೇರಿಯಲ್ಲಿ ಒಂದೆರಡು ಪ್ಲೇಗ್ ಕೇಸುಗಳಾಗಿ ಜನ ದಿಕ್ಕೆಟ್ಟು ಚದುರಿಹೋಗಿದ್ದರು. ಆದರೆ ಊರಿನಲ್ಲಿಯೇ ಅಕ್ಕಸಾಲೆ ಸುಬ್ಬಾಚಾರೀಗೆ ಪ್ಲೇಗ್ ತಗುಲಿದೆ ಎಂಬ ಸುದ್ದಿ ಹೊರಟಮೇಲೆ ಊರಿನ ಜನ ವಿಶೇಷ ಭಯಗ್ರಸ್ತರಾದರು. ಪ್ಲೇಗಿನಿಂದ ಸಾಯುವವರ ಸಂಖ್ಯೆಗಿಂತ ಪ್ಲೇಗಿನ ಭಯದಿಂದ ಸಾಯುವವರ ಸಂಖ್ಯೆ ಹೆಚ್ಚಾಗುವ ಸಂಭವ ಕಂಡು ಬಂದಿತು. ಊರಿನ ಜನ ಮನೆಗಳನ್ನು ಬಿಟ್ಟು ಊರ ಹೊರಗೆ ಷಡ್ಡುಗಳನ್ನು ಹಾಕ ಲಾರಂಭಿಸಿದರು.

ದೇವಸ್ಥಾನದ ಬೀದಿಯಲ್ಲಿಯೇ ಒಬ್ಬರು ಪ್ಲೇಗು ತಗುಲಿತೆಂದೂ, ಮನೆಯವರು ಮುಚ್ಚಿಟ್ಟರೆಂದೂ ಸುದ್ದಿ ಹರಡಿತು. ಗೋದಮ್ಮ

"ಮಾಧೂ, ಷೆಡ್ಡು ಹಾಕಿಸಿಕೊಂಡು ನಾವೂ ಹೋಗೋಣಪ್ಪ" ಎಂದರು. ಮಾಧವರಾಯ ಪರಿಹಾಸ್ಯಮಾಡುತ್ತಾ

"ಮೂಢರ ಹಾಗೆ ನಾವೂ ಹೆದರುವುದೇನಮ್ಮ" ಎಂದುಬಿಟ್ಟ.

ನಾಲ್ಕುದಿನಗಳಾದವು. ಒಂದು ದಿನ ಮಾಧವರಾಯ ತಲೆ ನೋವೆಂದು ಬಂದು ಮನೆಯಲ್ಲಿ ಮಲಗಿಕೊಂಡ. ರಾತ್ರಿ ವಿಪರೀತ ಜ್ವರ ಬಂದಿತು. ಬೆಳಗಾಗುವುದರೊಳಗೆ ಕುತ್ತಿಗೆಯ ಮೇಲೆ ಒಂದು ಬೊಕ್ಕೆ ಕಾಣಿಸಿಕೊಂಡಿತು.

ಅಂದೇ ಗೋದಮ್ಮನವರು ಮಾದನ ಸಹಾಯದಿಂದ ಊರ

ಹೊರಗೆ ಎರಡು ಷಡ್ಡುಗಳನ್ನು ಹಾಕಿಸಿದರು.

ಮಾಧವರಾಯನನ್ನು ನೋಡಿಕೊಳ್ಳುವವರು ಯಾರು ಎಂಬ ಪ್ರಶ್ನೆ ಹುಟ್ಟಿಕೊಂಡಿತು.

"ನಾನು ನೋಡಿಕೊಳ್ಳುತ್ತೇನೆ ಎಂದಳು ರುಕ್ಮಿಣಿ."

ಗೋದಮ್ಮನವರು ಅವಳ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳದೆ

"ನಾನು ಸತ್ತರೆ ಯಾರು ಅಳಬೇಕು – ನಾನು ನೋಡಿಕೊಳ್ಳುತ್ತೇನೆ ಸುಮ್ಮನಿರು" ಎಂದರು.

ಆದರೆ ಮಾಧವರಾಯನ ಸಮೀಪಕ್ಕೆ ಸುಳಿಯದಂತೆ ರುಕ್ಮಿಣಿಯನ್ನು ತಡೆಗಟ್ಟಲು ಗೋದಮ್ಮನವರಿಗೆ ಸಾಧ್ಯವಾಗಲಿಲ್ಲ.

ಯಾವದೋ ಮಹಾಶಕ್ತಿಯ ಸಮಾವೇಶದಂತಾಗಿ ರುಕ್ಮಿಣಿಗೆ ಅಪೂರ್ವಧೈರ್ಯ ಬಂದಿತ್ತು. ಮಕ್ಕಳ ಯೋಗಕ್ಷೇಮ ಅತ್ತಿಗೆ ವಹಿಸಿ ತಾನು ಪತಿಶುಶ್ರೂಷೆಯಲ್ಲಿ ನಿಮಗ್ನಳಾದಳು.

ಮಾಧವರಾಯನ ಕುತ್ತಿಗೆಯಮೇಲೆ ಕಾಣಿಸಿಕೊಂಡ ಬೊಕ್ಕೆ ಕ್ರಮಕ್ರಮವಾಗಿ ದೊಡ್ಡದಾಗಿ ಗೆಡ್ಡೆಯಾಯಿತು. ಜ್ವರ ಹೆಚ್ಚು ಕಡಮೆಯಾಗುತ್ತಿತ್ತು. ಮೈಕೈಗಳಲ್ಲಿ ಅಸಹನೀಯವೇದನೆ.

ರುಕ್ಮಿಣಿ ತಾನೇ ಚಿಕಿತ್ಸೆ ಕೈಗೊಂಡು, ಗುಡಿಸಿಲ ಮೇಲೆ ಎಕ್ಕದ ಎಲೆ, ರೆಂಜೆಗಳನ್ನು ಹಾಕಿಸಿದಳು. ರಾತ್ರಿ ಹಗಲೂ ಗುಡಿಸಿಲಿನಲ್ಲಿ ಬೇವಿನ ಎಣ್ಣೆಯ ದೊಡ್ಡ ದೀಪ – ಸದಾ ಬೇವಿನ ಕಟ್ಟಿಗೆಯ ಹೊಗೆಯಾಡುತ್ತಿರುವಂತೆ ಒಂದು ಅಗ್ಗಿಷ್ಟಿಕೆಯಲ್ಲಿ ಬೇವಿನ ಕಡ್ಡಿಗಳನ್ನು ಉರಿಸುತ್ತಿದ್ದಳು. ಗಂಟೆಗೊಂದು ಸಲ ಮಾಧವರಾಯನಿಗೆ ಬೇವಿನ ಎಣ್ಣೆ ಅರ್ಧತೊಲದಷ್ಟು ಕುಡಿಸುತ್ತಿದ್ದಳು.

ಪಾಪಾಸು ಕಳ್ಳಿ ತರಿಸಿ ಅದರ ಹೆಡೆಯ ಭಾಗ ಸೀಳಿ, ಅದರೊಳಗೆ ನುಣ್ಣಗೆ ಅರೆದ ಕಸ್ತೂರಿ ಅರಶಿನದ ಚಿಟ್ಟೆಯನ್ನು ದಪ್ಪವಾಗಿ ಲೇಪಿಸಿ, ನಸು ಬೆಚ್ಚಗೆ ಮಾಡಿ ಗೆಡ್ಡೆಯ ಮೇಲೆ ಕಟ್ಟುತ್ತಿದ್ದಳು.

ಲಕ್ಕಿ, ಮಾದ ರಾಯರ ಸೇವೆಗೆ ಬಂದು ನಿಂತಿದ್ದರು. ಪಾಪಾಸು

ಕಳ್ಳಿಯ ಲೇಪನನ್ನು ಮೂರುಗಂಟೆಗೊಮ್ಮೆ ಬದಲಾಯಿಸಬೇಕಾಗಿತ್ತು. ಲಕ್ಕಿ ಅದೇ ಕೆಲಸಕ್ಕೆ ಕುಳಿತಳು. ಅಗ್ಗಿಷ್ಟಿಕೆ ಆರದೆ ಸದಾ ಬೇವಿನ ಹೊಗೆಯಾಡುತ್ತಿರುವಂತೆ ನೋಡಿಕೊಳ್ಳುವ ಜವಾಬ್ದಾರಿಯೂ ಅವಳ ದಾಯಿತು. ಮಾದ ಎರಡು ಗುಡಿಸಲುಗಳನ್ನೂ ನೋಡಿಕೊಂಡು ಮಕ್ಕಳ ಶಿಶ್ರೂಷೆ ಮಾಡುತ್ತಿದ್ದ.

ಮಾಧವರಾಯನಿಗೆ ಅನ್ನ, ಹೆಸರುಬೇಳೆಯ ಕಟ್ಟು ಪಥ್ಯ ವಾಯಿತು. ಬೆಳಿಗ್ಗೆ ರಾತ್ರಿ ಮೊದಲು ಗುರುರಾಯರ ತೀರ್ಥ ಪ್ರಸಾದ ಕೊಟ್ಟು, ತರುವಾಯ ತಾನೇ ಊಟಮಾಡಿಸುತ್ತಿದ್ದಳು.

ಎರಡೇ ದಿನಗಳ ಲೇಪದಲ್ಲಿ ಗೆಡ್ಡೆ ಮೆತ್ತಗಾಗುತ್ತ ಬಂದು ಐದನೆಯ ದಿನ ಒಡೆದು ಹೋಯಿತು. ಮಾಧವರಾಯ ಮೃತ್ಯು ದವಡೆಯಿಂದ ಪಾರಾಗಿದ್ದ.

ಗಂಡ ತನ್ನ ಔಷಧದಿಂದ ಗುಣಗೊಂಡಿದ್ದ ಎಂದು ರುಕ್ಮಿಣಿ ಭಾವಿಸಲೊಲ್ಲಳು. 'ಗುರುರಾಯರು ನನ್ನ ಮೊರೆ ಕೇಳಿ ಪತಿಯನ್ನು ಬದುಕಿಸಿಕೊಟ್ಟರು' ಎಂದು ದೃಢವಾಗಿ ನಂಬಿದ್ದಳು. ಮಾಧವರಾಯ ಕಾಹಿಲೆ ಮಲಗಿದ ದಿನವೇ ರುಕ್ಮಿಣಿ ಗುರುರಾಯರ ಪಟದ ಮುಂದೆ ನಿಂತು

"ಸ್ವಾಮಿ, ಪ್ರತಿ ಗುರುವಾರ ಉಪವಾಸ ಮಾಡುತ್ತೇನೆ. ಇನ್ನು ಮೇಲೆ ಪ್ರತಿನಿತ್ಯ ಒಂದೇ ಹೊತ್ತು ಊಟಮಾಡುತ್ತೇನೆ. ನನ್ನ ಮಾಂಗಲ್ಯ ಉಳಿಸಿಕೊಡಿ – "ಎಂದು ಪ್ರಾರ್ಥಿಸಿದ್ದಳು.

ಬಾಯಿಗೆ ಅಕ್ಕಿಕಾಳು ಹಾಕಿಕೊಂಡು ಕುಳಿತಿದ್ದ ಗೋದಮ್ಮ ಸೊಸೆಯಕಡೆ ಮಮತಾಪೂರ್ಣ ನೋಟ ಬೀರಿ

"ತಾಯೀ, ನೀನೇ ಸಾವಿತ್ರಿ ಕಣಮ್ಮ" ಎಂದರು.

ಮಾಧವರಾಯ ಮೂರು ತಿಂಗಳು ಹಾಸಿಗೆ ಬಿಟ್ಟು ಕದಲಲಾಗ ಲಿಲ್ಲ. ಗಂಡನಿಗೆ ತಾನೇ ಮೈತೊಳೆದು ಒರಸುತ್ತಿದ್ದಳು. ಅವನು ಮಲಗಿದಲ್ಲಿಯೇ ಊಟ ಉಣ್ಣಿಸುತ್ತಿದ್ದಳು.

ಹೇಸಿಗೆ, ಅಸಹ್ಯದ ಭಾವನೆಯೇ ರುಕ್ಮಿಣಿಯ ಮನಸ್ಸಿನ ಬಳಿಗೆ

ಬಾರದಾಯಿತು.

ಮಾಧವರಾಯ ಮಲಗಿದಲ್ಲಿಯೇ ಮರುಗುತ್ತಿದ್ದ.

"ಎಂಥಾ ಕರ್ಮಜೀವಿ ನಾನು. ದೇವತೆಯಂತೆ ಪರಿಶುದ್ಧಳಾದ ರುಕ್ಮಿಣಿಯ ಕೈಯಲ್ಲಿ ಎಂಥೆಂಥ ಸೇವೆ ಶಿಶ್ರೂಷೆ ಮಾಡಿಸಿ ಕೊಳ್ಳುತ್ತಿದ್ದೇನೆ."

ಒಮ್ಮೆ ಕಣ್ಣಲ್ಲಿ ನೀರು ಬರುತ್ತಿದ್ದಂತೆ

"ರುಕ್ಕೂ – ನಿನ್ನ ಗಂಡನಾಗಿದ್ದವನು ಈಗ ನಿನ್ನ ಮಗುವಾಗಿ ಬಿಟ್ಟಿದ್ದಾನೆ. ಎಷ್ಟು ಜನ್ಮಗಳ ಪುಣ್ಯದಿಂದ ನೀನು ಲಭಿಸಿರುವೆಯೋ ಒಂದು ದಿನ ನಿನ್ನ ಯೋಗಕ್ಷೇಮ ನಾನು ವಿಚಾರಿಸಿಕೊಳ್ಳಲಿಲ್ಲ– ನಾನಾಯಿತು ನನ್ನ ಕೆಲಸವಾಯಿತು. ಒಂದು ದಿನ ನೀನು ನನ್ನನ್ನು ಆಕ್ಷೇಪಿಸಲಿಲ್ಲ. ಬಾಯಿಬಿಟ್ಟು ಇಂಥದು ಬೇಕು ಎಂದು ಕೇಳಲಿಲ್ಲ."

"ಇಂಥದು ಬೇಕು ಎಂದು ಕೇಳಲೇ ?"

"ಕೇಳಬೇಕಾದ ಅಗತ್ಯವೇನು ? ನೀನು ಯಾವದಕ್ಕೆ ಖರ್ಚು ಮಾಡಿದರೆ ನಾನು ಬೇಡವೆನ್ನುತ್ತೇನೆ. ನಿನ್ನ ಸ್ವಂತಕ್ಕೆ ನೀನು ಖರ್ಚು ಮಾಡುವುದಿಲ್ಲ ಎನ್ನುವುದೇ ನನ್ನ ಆಕ್ಷೇಪಣೆ."

"ಈಗ ಖರ್ಚುಮಾಡುತ್ತೇನೆ. ಆದರೆ ನಿಮಗೆ ಒಂದು ಮಾತು ತಿಳಿಸದೆ ಖರ್ಚುಮಾಡಲು ಇಷ್ಟವಿಲ್ಲ."

"ಹಾಗಾದರೆ ತಿಳಿಸು."

"ನಾವು ಮನೆಗೆ ಹೋದಕೂಡಲೆ ಅಮ್ಮನಿಗೆ ಒಂದು ಜತೆ ಒಳ್ಳೆಯ ಸೀರೆ ತಂದುಕೊಡಬೇಕು. ಲಕ್ಕೀ ನನಗೆ ಮಾಡಿರುವ ಉಪಕಾರಕ್ಕೆ ನಾನು ಪ್ರತ್ಯುಪಕಾರ ಮಾಡಲು ಸಾಧ್ಯವಿಲ್ಲವಾಗಿದೆ. ಮನೆಯ ಆಳುಗಳು ಮನೆ ಮಕ್ಕಳಿದ್ದಹಾಗೆ ಎಂದು ಒಂದು ಸಲ ಮಾದನಿಗೆ ಹೇಳಿದ್ದೆ. ಲಕ್ಕೀ ಆಮಾತು ಅಕ್ಷರಶಃ ನಿಜವೆಂದು ತೋರಿದಳು."

"ಅವಳಿಗೇನಾದರೂ ಕೊಡಬೇಕೆಂದಿರುವೆಯೇನು ?"

"ಹೂ ! ಸೀರೆ ಕುಪ್ಪಸ ಕೊಡಬೇಕೆಂದಿದ್ದೇನೆ."

"ಆಗಬಹುದು – ನಿನಗೆ ?"

"ನನಗೇನೂ ಬೇಕಿಲ್ಲ."

"ನೀನೂ ಒಂದು ಜತೆ ಒಳ್ಳೆಯ ಸೀರೆ ತೆಗೆದುಕೊಳ್ಳುವಹಾಗಿದ್ದರೆ ಉಳಿದವನ್ನು ಮಾಡಲು ನನ್ನ ಅಡ್ಡಿಯಿಲ್ಲ."

"ಮನೆಯಲ್ಲಿರುವ ಒಳ್ಳೆಯ ಸೀರೆಗಳನ್ನೇ ನಾನು ಉಡುತ್ತಿಲ್ಲ. ಅಂಗಡಿಯಿಂದ ತಂದು ಸುಮ್ಮನೆ ಮನೆಯಲ್ಲಿ ತುಂಬಿಕೊಳ್ಳುವುದೇಕೆ ?"

"ನೀನು ಇನ್ನುಮೇಲೆ ಚಿನಡಿ ಸೀರೆಗಳನ್ನುಡಬೇಡ ರುಕ್ಕೂ"

"ಹಾಗೇ ಆಗಲಿ. ನೀವು ಹೇಳಿದಂತೆ ಮಾಡುತ್ತೇನೆ. ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ಕೊರಗಬೇಡಿ" ಎಂದಳು.

ಮೂರು ತಿಂಗಳ ವನವಾಸ ಕಳೆಯುತ್ತ ಬಂದಿತು. ಕ್ಯಾಂಪಿನಲ್ಲಿ ಇದ್ದವರು ಒಬ್ಬೊಬ್ಬರಾಗಿ ಊರಿಗೆ ಹಿಂದಿರುಗುತ್ತಿದ್ದರು. ಪ್ಲೇಗುಮಾರಿ ಸಾಕಷ್ಟು ಗ್ರಾಸ ಸ್ವೀಕರಿಸಿದ್ದಳು. ಊರಿಗೆ ಹಿಂದಿರುಗುವುದರಿಂದ ಯಾವ ಭಯವೂ ಇಲ್ಲವೆಂಬುದನ್ನು ಮನಸ್ಸಿಗೆ ಖಚಿತಮಾಡಿಕೊಂಡು ಮಾಧವರಾಯ, ಅವನ ಸಂಸಾರ ಸ್ವಗೃಹ ಸೇರಿದರು.

೨೮

ಮಾಧವರಾಯ ನಿತ್ಯ ಚಟುವಟಿಕೆಗಳಲ್ಲಿ ಕೂಡಲೆ ವಿಲೀನ ವಾಗುವಂತಿರಲಿಲ್ಲ. ಮಾರಿಕಾಬೇನೆ ತನ್ನ ಪ್ರಭಾವ ತೋರಿಸಿಯೇ ಕೈಬಿಟ್ಟಿತ್ತು. ಮಾಧವರಾಯನ ಅಸ್ಥಿಪಂಜರಕ್ಕೆ ರಕ್ತ ಮಾಂಸ ತುಂಬಿ ಕೊಳ್ಳಬೇಕಾಗಿತ್ತು. ಅವನು ಹಾಸಿಗೆ ಬಿಟ್ಟು ಏಳುವ ಸ್ಥಿತಿಯಲ್ಲಿರಲಿಲ್ಲ. ರುಕ್ಮಿಣಿಯ ಧಾತ್ರಿವೃತ್ತಿ ಮುಂದುವರಿದಿತ್ತು.

ಮಗ ಪ್ಲೇಗಿನ ಗಂಡಾಂತರದಿಂದ ಪಾರಾಗಿ ಬಂದುದು ಗೋದಮ್ಮ ನವರಿಗೆ ಪುನರ್ಜನ್ಮ ಬಂದಂತಾಗಿತ್ತು. ಭಕ್ತ, ಭಾಗವತ, ಭಗವಂತ ಮೂವ್ವರ ಸೇವೆಯೂ ಆಗುವಂತೆ ಯಾವದಾದರೂ ಧರ್ಮಕೆಲಸ ಕೈಗೊಳ್ಳಬೇಕೆಂಬ ಹಂಬಲ ಅವರಲ್ಲಿ ಹೆಚ್ಚಿತು. ಮನೆಯಲ್ಲಿ ವ್ರತ, ಪೂಜೆಗಳಿಗೆ ಕೊರತೆಯಿರಲಿಲ್ಲ. ರಂಗನಾಥಸ್ವಾಮಿಯ ಸೇವಾಕಾರ್ಯವೂ ಸಾಂಗವಾಗಿ ಸಾಗಿತ್ತು.

ಗೋದಮ್ಮನವರೊಮ್ಮೆ ತಮ್ಮ ವಾಂಛಿತವನ್ನು ವೃಂದಮ್ಮನವರ ಬಳಿಗೆ ವ್ಯಕ್ತಪಡಿಸಿದರು.

"ಮನೆಯಲ್ಲಿ ರಾಮಾಯಣ ಹೇಳಿಸಿದರೆ ಒಳ್ಳೆಯದಮ್ಮ. ಎಲ್ಲಕ್ಕೂ ಮಂಗಳ."

"ಸರಿಯಾಗಿ ಪುರಾಣ ಹೇಳುವವರೇ ಯಾರೂ ಸಿಕ್ಕುವುದಿಲ್ಲ ವೃಂದಮ್ಮ. ಪಾಂಡಿತ್ಯವಿದ್ದರೆ ಆಚಾರವಿಲ್ಲ, ಆಚಾರವಿದ್ದರೆ

ಪಾಂಡಿತ್ಯವಿಲ್ಲ."

"ಒಳ್ಳೆಯವರು ಒಬ್ಬಿಬ್ಬರಿದ್ದಾರಮ್ಮ. ಬೇಕಾದರೆ ನಾನು ಕರೆಸಿ ಕೊಡುತ್ತೇನೆ."

"ಯಾರಿದ್ದಾರೆ ?"

"ಮೈಸೂರಿನಲ್ಲಿ ರಾಮಣ್ಣಾಚಾರ್ಯರು ಇದ್ದಾರೆ. ತುಂಬ ಸಾತ್ತ್ವಿಕರು, ನಿಷ್ಠಾವಂತರು, ಅವರ ಪುರಾಣಶ್ರವಣಕ್ಕೆ ಅರಮನೆ ಯಿಂದಲೂ ಸನ್ಮಾನ ದೊರೆತಿದೆ. ದೊಡ್ಡವರು, ಚಿಕ್ಕವರು, ತಿಳಿದ ವರು, ತಿಳಿಯದವರು ಎಲ್ಲರಿಗೂ ಹಿತವಾಗುವಂತೆ ಪುರಾಣ ಹೇಳ ಬಲ್ಲರು. ಆಚಾರ್ರಿಗೆ ದುರಾಶೆಯಿಲ್ಲ. ಏನು ಕೊಟ್ಟರೂ ಸಂತೋಷವಾಗಿ ಸ್ವೀಕರಿಸುತ್ತಾರೆ. ಹತ್ತು ಜನ ಭಕ್ತಿಯಿಂದ ಪುರಾಣಶ್ರವಣ ಮಾಡಿ ದರೆ ಸಾಕು. ನನಗೆ ಬರಬೇಕಾದುದು ಬಂದಹಾಗಾಯಿತು ಎನ್ನುತ್ತಾರೆ."

"ಅವರನ್ನೇ ಕರೆಸಿ ವೃಂದಮ್ಮ—ಒಳ್ಳೆಯ ದಿವಸ ನೋಡಿ ಪುರಾಣ ಆರಂಭಿಸಿಬಿಡೋಣ-ನೀವೇ ಎಲ್ಲಾ ಮಾತನಾಡಿ ಆಚಾರ್ರನ್ನು ಕರೆಸಿಬಿಡಿ."

ಪ್ರತಿ ಸಾಯಂಕಾಲ ಪ್ರವಚನ ನಡೆಯಬೇಕೆಂಬುದು ಗೋದಮ್ಮ ನವರ ಇಚ್ಛೆಯಾಗಿತ್ತು. ಮಾಧವರಾಯ ತಾಯಿಗೆ.

"ಬೆಳಿಗ್ಗೆ ಆರು ಗಂಟೆಗೆ ಪುರಾಣ ಆರಂಭಿಸಿ ಏಳೂವರೆಗೆ ಮುಗಿ ಸುವುದೊಳ್ಳೆಯದಮ್ಮ. ಸಾಯಂಕಾಲವಾದರೆ ನಮಗೆ ಪುರಸತ್ತು ಆಗು ವುದಿಲ್ಲ. ಬೆಳಿಗ್ಗೆ ನಾವೂ ಕೇಳುತ್ತೇವೆ.—ನನ್ನ ಸ್ನೇಹಿತರೂ ಬಂದು ಕೇಳುತ್ತಾರೆ. ರಾಮಣ್ಣಾಚಾರ್ಯರು ತುಂಬ ಪ್ರಸಿದ್ಧರು — ಘನ ವಿದ್ವಾಂಸರು."

"ಹೆಣ್ಣು ಮಕ್ಕಳು ಬೆಳಿಗ್ಗೆ ಎದ್ದು ಬರುವುದಕ್ಕೆ ತೊಂದರೆಯಾಗು ತ್ತದಲ್ಲೋ ಮಾಧೂ."

"ಆಚಾರ್ರು ಬೆಳಿಗ್ಗೆ ಪುರಾಣ ಆರಂಭಿಸಲಿ. ಹೆಣ್ಣು ಮಕ್ಕಳಿಗೆ ತೊಂದರೆಯಾದರ ಸಾಯಂಕಾಲವೂ ಹೇಳಲಿ."

ಮಗನ ಸಲಹೆ ತಾಯಿಗೆ ಒಪ್ಪಿತವಾಯಿತು.

ಪೌರಾಣಿಕ ಶಿರೋಮಣಿ ರಾಮಣ್ಣಾಚಾರ್ಯರು ವೃಂದಮ್ಮನವರ ಪತಿ ವೆಂಕಟರಮಣಾಚಾರ್ಯರಿಗೆ ತುಂಬ ಉಪಕೃತರಾಗಿದ್ದರು. ರಾಮಣ್ಣಾಚಾರ್ಯರ ಪರಿಸ್ಥಿತಿ ಸುಧಾರಿಸುವುದಕ್ಕೆ ಕೀರ್ತಿ ವಿಸ್ತರಿಸುವುದಕ್ಕೆ ವೆಂಕಟರಮಣಾಚಾರ್ಯರು ಬೇಕಾದಷ್ಟು ದುಡಿಮೆ ಮಾಡಿದ್ದರು.

ವೆಂಕಟರಮಣಾಚಾರ್ಯರು ವೈಕುಂಠವಾಸಿಗಳಾದಮೇಲೂ ಆಚಾರ್ಯರು ಅವರ ಸಂಸಾರದ ಬಗ್ಗೆ ಮೊದಲಿನ ಗೌರವವನ್ನೇ ಇಟ್ಟುಕೊಂಡಿದ್ದರು. ವೃಂದಮ್ಮನವರ ಕಾಗದ ಬಂದೊಡನೆಯೇ ದೇವರ ಪೆಟ್ಟಗೆ, ಬಟ್ಟೆಗಂಟು ಕಂಕುಳಲ್ಲಿಟ್ಟುಕೊಂಟು ಪಟ್ಟಣಕ್ಕೆ ಹೊರಟೇಬಿಟ್ಟರು.

ಆಚಾರ್ಯರು ವೃಂದಮ್ಮನವರ ಮನೆಯಲ್ಲಿಯೇ ನಿಂತರು. ಒಂದು ಒಳ್ಳೆಯ ದಿನ ನೋಡಿ ಮಾಧವರಾಯನ ಮನೆಯಲ್ಲಿ ಶ್ರೀಮದ್ವಾಲ್ಮೀಕಿ ರಾಮಾಯಣ ಪ್ರವಚನ ಆರಂಭಿಸಿದರು. ಹದಿನೈದು, ಇಪ್ಪತ್ತು ಜನಗಳಿಂದ ಆರಂಭವಾದ ಪ್ರವಚನ ಸಭೆ ನೂರಾರು ಜನಗಳವರೆಗೆ ಬೆಳೆಯಿತು. ಸ್ಥಳ ಸಾಲುವುದಿಲ್ಲವೆಂದು ಬೆಳಿಗ್ಗೆ—ಸಂಜೆ ಎರಡು ವೇಳೆ ಪುರಾಣ ಹೇಳಲುಪಕ್ರಮಿಸಿದರು.

ಮೂಲಕಾವ್ಯವನ್ನು ಕಿವಿಗಿಂಪಾಗಿರುವಂತೆ ಓದಿ, ಅರ್ಥವಿವರಣೆ ಮಾಡಿ, ಆಚಾರ್ರು ವ್ಯಾಖ್ಯಾನಮಾಡುತ್ತಿದ್ದರು. ಸಮಯ ಸಂದರ್ಭಕ್ಕನುಗುಣವಾಗಿ ಉಪನಿಷತ್ತುಗಳು, ಭಗವದ್ಗೀತೆ, ಮಹಾ ಭಾರತ, ಪುರಾಣಗಳನ್ನುದಹರಿಸಿ ವಿಷಯ ಎಲ್ಲರಿಗೂ ಮಂದಟ್ಟಾಗುವಂತೆ ಮಾಡುತ್ತಿದ್ದರು.

ಊರಿನಲ್ಲಿ ಎಲ್ಲರ ಬಾಯಲ್ಲಿಯೂ ಆಚಾರ್ರ ಪುರಾಣದ ಮಾತೇ ಮಾತು. ಆಚಾರ್ರ ಪುರಾಣ ಜನತೆಯಲ್ಲಿ ಹುಟ್ಟಿಸಿದ ಉತ್ಸಾಹ, ಮೂಡಿದ ಜಾಗೃತಿ ಕಂಡು ಮಾಧವರಾಯನಿಗೆ ತೃಪ್ತಿಯಾಗಿತ್ತು. ತಾಯಿಗೆ ಈ ವಿಷಯ ವಿವರಿಸುತ್ತಾ

"ಊರು ಶುಚಿಯಾದಂತಾಯಿತಮ್ಮ. ಹೊಲಸು ಮಾತು

ಕೇಳಿ ಕೇಳಿ ಸಾಕಾಗಿತ್ತು. ರಾಮಣ್ಣಾಚಾರ್ಯರು ದಯೆಯಿಂದ ನಾಲ್ಕು ದಿನವಾದರೂ ಎಲ್ಲರ ಬಾಯಲ್ಲಿಯೂ ರಾಮ, ಸೀತೆಯರ ಮಾತು ಬರುತ್ತಿದೆ." ಎಂದು ಹೇಳಿದ.

ಕಾಲಕ್ರಮೇಣ ಮಾಧವರಾಯನ ದೇಹದಲ್ಲಿ ಶಕ್ತಿ ತುಂಬಿಕೊಳ್ಳುತ್ತ ಬಂತು. ಕೋರ್ಟಿನ ಕೆಲಸ ಸಂಪೂರ್ಣವಾಗಿ ತನ್ನ ಜೂನಿಯರಿಗೆ ಒಪ್ಪಿಸಿದ್ದರೂ ಕಛೇರಿಯಲ್ಲಿ ಬಂದು ಕೂಡುತ್ತಿದ್ದ.

ಎರಡು ತಿಂಗಳು ಕಳೆಯುವಲ್ಲಿ ಮಾಧವರಾಯನ ಆರೋಗ್ಯ ಪೂರ್ಣ ಸುಧಾರಿಸಿತು. ಮೈಯಲ್ಲಿ ರಕ್ತ ಕೂಡಿಕೊಂಡಿತು. ರುಕ್ಮಿಣಮ್ಮನ ಚಿಕಿತ್ಸೆಯಿಂದ ದೇಹಕ್ಕೆ ಪುಟವಿಟ್ಟಂತಾಗಿತ್ತು.

ಆಚಾರ್ಯರ ಪುರಾಣ ಕಿಷ್ಕಿಂದಾಕಾಂಡದವರೆಗೆ ಬಂದಿತ್ತು.

ಒಂದು ಭಾನುವಾರ ಊಟಮುಗಿಸಿ ಮಾಧವರಾಯ ಸಣ್ಣಮಗು ಪದ್ಮನೊಂದಿಗಾಡುತ್ತ ತೊಟ್ಟಿಯಲ್ಲಿ ಕುಳಿತಿದ್ದ. ಗೋದಮ್ಮ, ಊಟ ಮುಗಿಸಿಕೊಂಡು ಬಂದು ತೊಟ್ಟಿಯಲ್ಲಿಯೇ ಕುಳಿತರು. ರುಕ್ಮಿಣಿಯ ಊಟವೂ ಮುಗಿದಿತ್ತು, ಉಳಿದಿದ್ದ ಸಣ್ಣಪುಟ್ಟ ಕೆಲಸಗಳನ್ನು ಮುಗಿಸುತ್ತಿದ್ದಳು.

ತಾಯಿ, ಮಗ ರಾಮಾಯಣ ಪ್ರವಚನದ ಬಗ್ಗೆ ಮಾತಾನಾಡುತ್ತ ಕುಳಿತಿದ್ದರು. ಮಾಧವರಾಯ ಉತ್ಸಾಹದಿಂದ

"ನಮ್ಮ ತಾಪತ್ರಯ, ಕೆಲಸಕಾರ್ಯಗಳಲ್ಲಿ ರಾಮಾಯಣ ಓದಬೇಕೆಂದರೂ ಸಾಧ್ಯವಾಗುತ್ತಿರಲಿಲ್ಲ. ನಾವಾಗಿಯೇ ಓದಿದರೆ ಆಗುವ ಲಾಭಕ್ಕಿಂತ ನೂರರಷ್ಟು ಲಾಭವಾಯಿತು. ಹೀಗೇ ಮಹಾಭಾರತ, ಭಾಗವತವನ್ನೂ ಓದಿಸಿ ಬಿಡಬೇಕಮ್ಮ." ಎಂದ.

"ಸ್ವಲ್ಪ ದಿನ ಹೋಗಲಿ ಮಗು—ಈಗಲೇ ಅವಸರವಿಲ್ಲ. ಆಚಾರ್ರ ಶ್ರಮಕ್ಕೆ ತಕ್ಕ ಮರ್ಯಾದೆ ಮಾಡಬೇಕಾದ್ದು ನಮ್ಮ ಧರ್ಮ."

"ಅಗತ್ಯವಾಗಿ ಮಾಡೋಣ."

ರುಕ್ಮಿಣಿ ತಾಂಬೂಲದ ತಟ್ಟೆಯಲ್ಲಿ ಬಣ್ಣ ಕಟ್ಟಿದ ಅಡಿಕೆ, ಸುಣ್ಣ ಹಚ್ಚಿದ ಎಲೆ ತಂದು ಮಾಧವರಾಯನ ಮುಂದಿಟ್ಟಳು. ಮಾಧವರಾಯ

ಅಡಿಕೆ ಹಾಕಿಕೊಂಡು, ಎರಡು ಎಲೆ ಬಾಯಿಗಿಟ್ಟುಕೊಂಡ. ಬಾಯೆಲ್ಲಾ ಒಗಚಾಗಿ ಕಹಿಯಾಯಿತು. ಥಟ್ಟನೆ ಹೆಂಡತಿಯ ಕಡೆ ತಿರುಗಿ

"ಎಲೆಗೇನಾದರೂ ವಿಷಹಾಕಿದ್ದೀಯೇನೇ–ಇಷ್ಟು ಒಗಚಾಗಿದೆ." ಎಂದ. ರುಕ್ಮಿಣಿಯ ಕಣ್ಣಲ್ಲಿ ನೀರು ಕಾಣಿಸಿಕೊಂಡಿತು. ಗೋದಮ್ಮನವರ ಮುಖ ಕೆಂಪಗಾಯಿತು.

"ಏನು ಮಾತೂಂತ ಆಡ್ತೀಯೋ ಮಾಧೂ. ತನ್ನ ಪ್ರಾಣ ಒತ್ತೆಯಿಟ್ಟು ನಿನ್ನ ಉಳಿಸಿಕೊಂಡಿರುವ ಮಹಾಪತಿವ್ರತೆ ನಿನಗೆ ವಿಷ ಹಾಕುತ್ತಾಳೆಯೇ. ರುಕ್ಮಿಣಿಯನ್ನು ಕೆಟ್ಟಮಾತಾಡಿದರೆ ನಿನ್ನ ಬಾಯಲ್ಲಿ ಹುಳು ಸುರಿಯುತ್ತದೆ."

"ಅಮ್ಮ...." ಎಂದು ಮಾಧವರಾಯ ಗಾಬರಿಯಾಗಿ ನುಡಿದು

"ನಾನು ತಮಾಷೆಗಂದೆನಮ್ಮ—ರುಕ್ಮಿಣಿಯನ್ನು ಆಕ್ಷೇಪಣೆ ಮಾಡುವಷ್ಟು ನೀಚನೇ ನಾನು."

"ತಮಾಷೆಗೂ ನೀನು ಅಂಥ ಮಾತಾಡಬಾರದು ಮಾಧೂ."

"ತಪ್ಪಾಯಿತು ಕ್ಷಮಿಸಮ್ಮ. ಇನ್ನೆಂದಿಗೂ ಕೆಟ್ಟಮಾತಾಡುವುದಿಲ್ಲ."

ಗೋದಮ್ಮನವರ ಕೋಪ ಇಳಿದು ಹೋಗಿತ್ತು. ಮಗನಿಗೆ ಶಾಪ ಹಾಕಿದೆನಲ್ಲಾ ಎಂದು ಅವರಿಗೆ ಪಶ್ಚಾತ್ತಾಪವಾಗಿತ್ತು. ಗಲ್ಲ ಬಡಿದುಕೊಂಡು 'ಕೃಷ್ಣ-ಕೃಷ್ಣ' ಎಂದರು.

ತಾಯಿಯ ಬಯ್ಗಳ ಕೇಳಿ ಮಾಧವರಾಯನಿಗೆ ಸಂತೋಷವೇ ಆಗಿತ್ತು. 'ಅಮ್ಮನಿಗೆ ನಾನು ಅತ್ಯಂತ ಪ್ರೀತ್ಯಾಸ್ಪದ. ರುಕ್ಮಿಣಿಯ ಬಗ್ಗೆ ಕೆಟ್ಟಮಾತಾಡಿದೆನೆಂದು ಅಮ್ಮ ಎಷ್ಟು ಕೋಪ ಮಾಡಿಕೊಂಡಳು. ಇವರು ಅತ್ತೆ ಸೊಸೆಯರಲ್ಲ. ಯಾವದೋ ಜನ್ಮದ ತಾಯಿ ಮಕ್ಕಳು' ಎಂದುಕೊಂಡ.

ಮೂರು ತಿಂಗಳ ಪ್ರವಚನ ನಡಸಿ ರಾಮಣ್ಣಾಚಾರ್ಯರು ಮಂಗಳಕ್ಕೆ ಬಂದರು. ಶ್ರೀರಾಮ ಪಟ್ಟಾಭಿಷೇಕದಿಂದ ಮಂಗಳವಾಗಬೇಕಾಗಿತ್ತು. ಪಟ್ಟಾಭಿಷೇಕದ ಪೂರ್ವಸಿದ್ಧತೆ ನಡೆಯಿತು. ಬೆಳಿಗ್ಗೆ

ಪೂಜೆ, ಅಭಿಷೇಕ, ಮಧ್ಯಾಹ್ನ ಶ್ರೋತೃಗಳಿಗೆ ಊರ ಸಂತರ್ಪಣೆ ಮತ್ತು ಪುರಾಣಿಕರ ಸನ್ಮಾನ.

ಶ್ರೋತೃಗಳು ತಮ್ಮ ಶಕ್ತ್ಯನುಸಾರ ಆಚಾರ್ರಿಗೆ ಬೆಳ್ಳಿಯ ತಟ್ಟೆ, ಬಟ್ಟಲುಗಳನ್ನೂ ಶಾಲು, ಧೋತ್ರ, ವಲ್ಲಿಗಳನ್ನೂ ತಂದೊಪ್ಪಿಸಿದರು. ಕೆಲವರು ನಗದು ಹಣಕೊಟ್ಟರು. ಮಾಧವರಾಯ ಒಂದು ಜತೆ ಧೋತ್ರದೊಂದಿಗೆ ಒಂದು ಸಾವಿರ ರೂಪಾಯಿಯನ್ನು ಅರ್ಪಿಸಿ

“ಭಗವಾನ್ ಶ್ರೀರಾಮಚಂದ್ರಸ್ವಾಮಿಯ ಪುಣ್ಯಚರಿತ್ರೆ ಕೇಳಿಸಿ ನಮ್ಮನ್ನು ಪಾವನರಾಗಿ ಮಾಡಿದಿರಿ ಆಚಾರ್ರೇ. ಪ್ರಪಂಚಿಗಳಾದ ನಾವೂ ಹೇಗೆ ನಮ್ಮ ಮುಕ್ತಿಸಾಧಿಸಿಕೊಳ್ಳಬಹುದೆಂಬುದನ್ನು ತೋರಿಸಿ ಕೊಟ್ಟರಿ. ಇದಕ್ಕೆ ನಾವೆಲ್ಲಾ ಚಿರಋಣಿಗಳಾಗಿದ್ದೇವೆ.” ಎಂದ.

ವಿನಯಶೀಲರಾದ ರಾಮಣ್ಣಾಚಾರ್ಯರು ಮಾಧವರಾಯನ ಮೆಚ್ಚುಗೆಯ ಮಾತುಗಳಿಗೆ ನಸುನಾಚಿ

“ಭಗವಂತನ ಕಣ್ಣಲ್ಲಿ ಎಲ್ಲರೂ ಒಂದೇ ಸ್ವಾಮಿ. ಇವನು ಪ್ರಪಂಚಿ ಇವನು ಪರಮಾರ್ಥಿ ಎಂದು ಅವನು ಭೇದವೆಣಿಸುವುದಿಲ್ಲ. ತನ್ನ ಆಶ್ರಮಧರ್ಮವನ್ನು ಯಾವನು ಸರಿಯಾಗಿ ಪಾಲಿಸಿಕೊಂಡು ಹೋಗು ತ್ತಾನೋ ಅವನು ಭಗವಂತನಿಗೆ ಪ್ರಿಯನಾಗುತ್ತಾನೆ. ಭಗವಾನ್ ಶ್ರೀ ಕೃಷ್ಣ ಗೀತೆಯಲ್ಲಿ ಹೇಳಿರುವಂತೆ. ‘ಕರ್ಮಣ್ಯೇವಾಧಿಕಾರಸ್ತೇ ಮಾಫ ಲೇಷು ಕದಾಚನ.’ ಆಶ್ರಮೋಚಿತವಾದ ಕರ್ಮವನ್ನು ಮನುಷ್ಯನಾದ ವನು ಮಾಡಲೇಬೇಕು. ಕರ್ಮಚ್ಯುತಿ ಕರ್ಮಭ್ರಷ್ಟತ್ವದಷ್ಟೇ ಗುರು ತರವಾದುದು. ಆದರೆ ಕರ್ಮಲೋಪವಾಗದಂತೆ ಫಲಾಫಲಗಳನ್ನು ಭಗವಂತನ ಚರಣಕ್ಕರ್ಪಿಸಬೇಕು. ಮನೆಗೆಲಸಕ್ಕೆ ನಾವು ಆಳು ಮಗ ಳನ್ನು ಗೊತ್ತುಮಾಡಿಕೊಳ್ಳುತ್ತೇವೆ. ನಮ್ಮ ಮನೆ ತನ್ನ ಮನೆಯೆಂ ದುಕೊಂಡೇ ಅವಳು ದುಡಿಯುತ್ತಾಳೆ; ನಮ್ಮ ಮಕ್ಕಳನ್ನು ‘ನನ್ನ ರಾಮು, ನನ್ನ ಗೋವಿಂದ, ನನ್ನ ಸೀತಾ’ ಎಂದೇ ಪ್ರೀತಿಸುತ್ತಾಳೆ. ಆದರೆ ಅವಳ ಮನಸ್ಸೆಲ್ಲಾ ತನ್ನ ಮನೆ, ತನ್ನ ಗಂಡ, ತನ್ನ ಮಗುವಿನ ಕಡೆಗೇ ಇರುತ್ತದೆಂಬುದನ್ನು ನಾವು ಮರೆಯಬಾರದು. ಸಂಸಾ

ಯಾದವನು ಈ ಆಳುಮಗಳ ಮೇಲ್ಪಂಕ್ತಿ ಅನುಸರಿಸಬೇಕು. ಲೋಕ ವ್ಯಾಪಾರದಲ್ಲಿ ಅವನು ವಿಲೀನನಾಗಿದ್ದರೂ ಅವನ ಲಕ್ಷ್ಯವೆಲ್ಲಾ ಭಗವಂತನ ಕಡೆಗಿರಬೇಕು. ನನ್ನ ಪುರಾಣ ನಿಮಗೆಲ್ಲಾ ಪ್ರಿಯವಾದುದು ಕೇಳಿ ನನಗೆ ಪರಮಸಂತೋಷವಾಗಿದೆ. ಅದರ ಕೀರ್ತಿ ನನಗೆ ಸೇರಬೇಕಾದುದಿಲ್ಲ. ಭಗವಾನ್ ಶ್ರೀ ರಾಮಚಂದ್ರಸ್ವಾಮಿಯ ಕಡೆ ಯಾರು ಹೇಳಿದರೂ, ಯಾರು ಕೇಳಿದರೂ ಧನ್ಯರಾಗುತ್ತಾರೆ." ಎಂದರು.

ಆಳವಾದ ಪಾಂಡಿತ್ಯದೊಂದಿಗೆ ಸಮಸ್ತಪ್ರಮಾಣದಲ್ಲಿ ಬೆರತಿದ್ದ ಪಾರಮಾರ್ಥಿಕಚಿಂತನೆ ಆಚಾರ್ಯರಲ್ಲಿದ್ದುದನ್ನು ಕಂಡು ಮಾಧವರಾಯ ಸಂತುಷ್ಟನಾಗಿ 'ಸಾರ್ಥಕ ಜೀವನ' ಎಂದುಕೊಂಡ.

೨೯

ನಾರಾಯಣಸ್ವಾಮಿ ಹನ್ನೊಂದನೆಯ ವಯಸ್ಸಿಗೇ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕಟ್ಟುವ ವಿಷಯ ತಾಯಿ ತಂದೆಗೆ ಅಭಿಮಾನಾಸ್ಪದವಾಗಿತ್ತು. ಅವರಿಗಿಂತಲೂ ಹೆಚ್ಚು ಹೆಮ್ಮೆಪಡುತ್ತಿದ್ದವರು ಅಜ್ಜಿ ಗೋದಮ್ಮ. ಮನೆಯವರಿಗೆ ತನ್ನ ಬಗ್ಗೆ ಇದ್ದ ಅಭಿಪ್ರಾಯ ತಿಳಿಯಲು ಸೂಕ್ಷ್ಮಮತಿಯಾದ ನಾರಾಯಣಸ್ವಾಮಿಗೆ ತಡವಾಗಲಿಲ್ಲ. ತನ್ನ ಬೇಡಿಕೆಗಳು—ನ್ಯಾಯವಾಗಿರಲಿ ಅನ್ಯಾಯವಾಗಿರಲಿ, ಅಜ್ಜಿಯ ಕಡೆಯಿಂದ ಪೂರೈಸಲ್ಪಡುತ್ತವೆ ಎಂಬ ಧೈರ್ಯ ನಾರಾಯಣಸ್ವಾಮಿಯನ್ನು ಹಟಮಾರಿಯನ್ನು ಮಾಡಿತ್ತು. ತನಗೆ ಬೇಕಾದುದು ಬರುವುದು ಸ್ವಲ್ಪ ಸಾವಕಾಶವಾದ ಕೂಡಲೆ 'ನಾನು ಊಟ ಮಾಡುವುದಿಲ್ಲ' ಎಂದು ಬ್ರಹ್ಮಾಸ್ತ್ರ ಪ್ರಯೋಗಿಸುತ್ತಿದ್ದ. ಗೋದಮ್ಮನವರು ನಿಂತಗಳಿಗೆಯಲ್ಲಿ ಮೊಮ್ಮಗನ ಈಪ್ಸಿತ ಪೂರೈಸಿ, ಅವನಿಗೆ ಊಟಕ್ಕಿಡುತ್ತಿದ್ದರು.

ನಾರಾಯಣಸ್ವಾಮಿಗೆ ದೊರೆತಿದ್ದ ಪ್ರಾಶಸ್ತ್ಯವೇ ಕಮಲೂಗೂ ದೊರೆತಿದ್ದರೂ ಅವಳು ಅದನ್ನು ದುರುಪಯೋಗಪಡಿಸಿಕೊಳ್ಳುತ್ತಿರಲಿಲ್ಲ. ಮಾಧವರಾಯ ಒಮ್ಮೆ ಬೆಂಗಳೂರಿಗೆ ಹೋಗಿ ಬಂದರೆ ಕಮಲೂ, ನಾರಾಯಣಸ್ವಾಮಿಗೆ ಚಿತ್ರವಿಚಿತ್ರ ಬಟ್ಟೆಬರೆಗಳನ್ನು ತಂದುಕೊಡುತ್ತಿದ್ದರು. ಕಮಲೂಗೆ ಕಣದ ಲಂಗ, ಫರ್ ಹಾಕಿದ ಉದ್ದನೆಯ

ಕೋಟು ಹೊಲೆಸಿದರೆ ನಾರಾಯಣಸ್ವಾಮಿಗೆ 'ಮಹಾರಾಜಾ ಡ್ರೆಸ್' ಹೊಲೆಸುತ್ತಿದ್ದರು. ಕಮಲೂ ತೃಪ್ತಿಪಟ್ಟುಕೊಂಡು ಹಿಗ್ಗಿ ಕುಣಿದಾಡಿ ದರೆ ನಾರಾಯಣಸ್ವಾಮಿ ಮುಖ ಗಂಟು ಹಾಕಿಕೊಂಡು ಮೂಲೆ ಹಿಡಿ ಯುತ್ತಿದ್ದ. 'ಕಮಲೂಗೂ ತನ್ನಷ್ಟೇ ಪ್ರಾಧಾನ್ಯ ಸಿಕ್ಕುತ್ತದೆಯಲ್ಲ' ಎನ್ನುವುದೇ ಅವನ ಸಂಕಟದ ಕಾರಣವಾಗಿತ್ತು.

ಮಗನಲ್ಲಿ ಬೆಳೆಯುತ್ತಿದ್ದ ಈ ಸ್ವಾರ್ಥಪ್ರವೃತ್ತಿ ಕಂಡು ರುಕ್ಮಿಣ ಮ್ಮನಿಗೆ ದುಃಖವಾಗುತ್ತಿತ್ತು. ಗೋದಮ್ಮನವರು ತನ್ನ ಸರಳತೆ, ಮಿತಿ ಮೀರಿದ ಮಮತೆಯಿಂದ ಹುಡುಗನನ್ನು ಕೆಡಿಸುತ್ತಿದ್ದಾರಲ್ಲಾ ಎಂದೂ ಆಲೋಚಿಸುವಳು. ಅತ್ತೆಯನ್ನು ಆಕ್ಷೇಪಿಸುವುದಕ್ಕೆ ಬಾಯೂ ಬಾರದು, ಮನಸ್ಸೂ ಬಾರದು.

ಒಮ್ಮೊಮ್ಮೆ ಮಗನಮೇಲೆ ಸಿಟ್ಟಾಗಿ ಗದರಿಸಿಕೊಳ್ಳುತ್ತಿದ್ದರು. ನಾರಾಯಣಸ್ವಾಮಿ ದೀರ್ಘವಾಗಿ ಅಳಲು ಮೊದಲಿಡುತ್ತಿದ್ದ. ಗೋದ ಮ್ಮನವರು ಬಂದು ಅವನನ್ನಪ್ಪಿಕೊಂಡು ಸಂತೈಸುತ್ತಾ

"ಹೋಗಲಿ ಬಿಡೇ ರುಕ್ಮಿಣಿ—ಮಗೂ, ಅದಕ್ಕೇನು ತಿಳಿಯತ್ತೆ"

"ಎಂಥಾ ಕೆಟ್ಟ ಹಟಮಾಡುತ್ತಾನೆ ನೋಡಿಯಮ್ಮ."

"ಅವನು ಹಟಮಾಡದೆ ನೀನೂ ನಾನು ಹಟಮಾಡುವುದಕ್ಕಾಗು ತ್ತದೆಯೇ. ಮಕ್ಕಳು ಹಟಮಾಡಿದರೇ ಚೆನ್ನಾ."

"ನೀವು ಅವನನ್ನು ವಹಿಸಿಕೊಂಡು ಬರುವಿರೆಂದೇ ಅವನು ಇಷ್ಟು ಹೆಚ್ಚುಕೊಂಡಿದ್ದಾನೆ."

"ಹಾಗಾದರೆ ಶಿಕ್ಷೆಯಾಗಬೇಕಾದುದು ಅವನಿಗಲ್ಲ—ನನಗೆ" ಎಂದು ಗೋದಮ್ಮ ತಮ್ಮ ಸರಳ ಸಹಜ ರೀತಿಯಲ್ಲಿ ನಕ್ಕು ಬಿಡುತ್ತಿ ದ್ದರು. ರುಕ್ಮಿಣಿಯ ಕೋಪ ಕರಗಿ ಹೋಗುತ್ತಿತ್ತು

"ಹೋಗಿ ಅಮ್ಮ—ನಿಮ್ಮ ಹತ್ತಿರ ವಾದಮಾಡಿ ಜಯಿಸೋದೇ ಸಾಧ್ಯವಿಲ್ಲ. ಒಂದಲ್ಲ ಒಂದು ದಿನ ನಿಮ್ಮ ಜತೆ ತುಂಬ ಜಗಳ ಕಾದು ಬಿಡುತ್ತೇನೆ ನೋಡಿ."

"ನಿನಗೆ ಬರಲ್ಲ ಕಣೇ ರುಕ್ಕೂ. ಜಗಳ ಕಾಯುವ ಸೊಸೆಯರ

ರೀತಿಯೆ ಬೇರೆ"

ರುಕ್ಮಿಣಿಯೂ ನಕ್ಕು ಒಳಗೆ ಹೋಗಿ ಬಿಡುತ್ತಿದ್ದಳು.

ಗೋದಮ್ಮನವರ ಅಮಾನುಷ ಸಹನೆಯನ್ನೂ ನಾರಾಯಣ ಸ್ವಾಮಿ ಪರೀಕ್ಷಿಸಿ ಬಿಡುತ್ತಿದ್ದ. ಒಂದು ದಿನ ಶಾಲೆಯ 'ಸರಸ್ವತೀ ಪೂಜೆ' ಗೆಂದು ಒಂದು ರೂಪಾಯಿ ಚಂದಾ ತೆಗೆದುಕೊಂಡು ಹೋಗಿದ್ದ ಅವನ ತರಗತಿಯ ಉಪಾಧ್ಯಾಯರು ಹಂಗಿಸಿ

"ಇದೇನೋ ನಾರಾಯಣಸ್ವಾಮಿ. ದೊಡ್ಡಮನುಷ್ಯರ ಮನೆ ಹುಡುಗ – ನೀನೂ ಎಲ್ಲಾರಂತೆ ಒಂದು ರೂಪಾಯಿ ತಂದುಕೊಡು ತ್ತಿರುವೆ. ಐದು ರೂಪಾಯಿ ನೀನು ಕೊಡಬೇಕು" ಎಂದಿದ್ದರು.

ಮಧ್ಯಾಹ್ನ ಉಪಾಹಾರಕ್ಕೆ ಮನೆಗೆ ಬಂದ ನಾರಾಯಣಸ್ವಾಮಿ ಐದುರೂಪಾಯಿ ಬೇಕೆಂದು ಹಟಹಿಡಿದ. ರುಕ್ಮಿಣಿ, ಗೋದಮ್ಮ ಹೇಳಿದ ಸಮಾಧಾನಕ್ಕೆ ಅವನು ಒಪ್ಪಿಕೊಳ್ಳಲಿಲ್ಲ. ತಿಂಡಿ ತಿನ್ನುವುದಿಲ್ಲವೆಂದು ಹಟಹಿಡಿದ. ರುಕ್ಮಿಣಿ ಮಗನ ಮೊಂಡುತನಕ್ಕೆ ಬೇಸರಗೊಂಡು 'ತಿನ್ನದಿದ್ದರೆ ಬಿಡು. ಹಸಿವಾದರೆ ನೀನೇ ತಿನ್ನುತ್ತೀ' ಎಂದಳು. ಕೆರಳಿದ ನಾರಾಯಣಸ್ವಾಮಿ ನೆಲದ ಮೇಲೆ ಬಿದ್ದಿದ್ದ ಪದ್ಮನ ಮರದ ಗೊಂಬೆ ಕೈಗೆ ತೆಗೆದುಕೊಂಡು ತಾಯಿಯ ಮೇಲೆ ಬೀಸಿದ. ಅದೃಷ್ಟವಶಾತ್ ಅದು ರುಕ್ಮಿಣಿಗೆ ಬಡಿಯದೆ, ಗೋಡೆಯಮೇಲೆ ನೇತುಹಾಕಿದ ನಿಲು ಗನ್ನಡಿಗೆ ತಾಗಿ ಕನ್ನಡಿ ಪುಡಿಪುಡಿಯಾಯಿತು.

ರುಕ್ಮಿಣಿ, ಗೋದಮ್ಮ ಇಬ್ಬರೂ ಸ್ತಂಭೀಭೂತರಾದರು. ರುಕ್ಮಿಣಿ ತನ್ನ ಕೋಣೆಗೆ ಹೋಗಿ ಅಳುತ್ತ ಕುಳಿತಳು. ಗೋದಮ್ಮ ಒಳಗೆ ಮುಚ್ಚಿಟ್ಟಿದ್ದ ಐದುರೂಪಾಯಿ ತಂದು ಮೊಮ್ಮಗನ ಕೈಗೆ ಹಾಕಿ ಅವನನ್ನು ಕಳುಹಿಸಿಕೊಟ್ಟು ಚಿಂತಿಸುತ್ತ ಕುಳಿತರು.

ನಾರಾಯಣಸ್ವಾಮಿಯ ಕೆಟ್ಟ ಹಟ, ಕೆಟ್ಟ ಕೋಪ ಅತ್ತೆಸೊಸೆ ಇಬ್ಬರಿಗೂ ಹೆಚ್ಚಿನ ವ್ಯಸನವನ್ನುಂಟುಮಾಡಿತ್ತು. ಅದಕ್ಕಿಂತ ಹೆಚ್ಚಾಗಿ ಕನ್ನಡಿ ಒಡೆದು ಹೋಗಿತ್ತು!

ಮನೆಯಲ್ಲಿ ಯಾವದಾದರೂ ಅಪಘಾತವಾಗುವುದರ ಪೂರ್ವ

ಚೆನ್ನಾಗಿ ಕನ್ನಡಿ ಒಡೆಯುತ್ತದೆಂಬ ನಂಬಿಕೆಯಲ್ಲಿ ಗೋದಮ್ಮ, ರುಕ್ಮಿಣಿ ಇಬ್ಬರಿಗೂ ಪೂರ್ಣವಿಶ್ವಾಸವಿತ್ತು.

"ಇನ್ನೂ ಯಾವ ಗಂಡಾಂತರ ಕಾದಿದೆ ದೇವರೇ" ಎಂದು ಗೋದಮ್ಮನವರ ಮನಸ್ಸು ತಳಮಳಗೊಂಡಿತ್ತು.

ಅಶುಭ ನಿವಾರಣೆಗಾಗಿ ರುಕ್ಮಿಣಿ ಶಾಂತಿಮಾಡಿಸಿ, ಒಂಭತ್ತು ಜನ ಮುತ್ತೈದೆಯರನ್ನು ಕರೆದು 'ಹೂವೀಳ್ಯ' ಮಾಡಿದಳು. ಆದರೂ ಅವಳ ಮನಸ್ಸಿನಲ್ಲಿ ಭಯ ಹೊಗೆಯಾಡುತ್ತಲೇ ಇತ್ತು.

ನವರಾತ್ರಿ ರಜಕ್ಕೆ ರಾಮು, ಶ್ರೀದೇವಿಯನ್ನು ಕರೆದುಕೊಂಡು ಪಟ್ಟಣಕ್ಕೆ ಬಂದ. ಅವರು ಬಂದುದು ಮಾಧವರಾಯನ ಮನೆಯಲ್ಲಿ ಹಬ್ಬಕ್ಕೆ ಹೆಚ್ಚಿನ ಕಳೆ ಬಂದಿತು.

ರಾಮೂಗೆ ಹೆಚ್ಚು ದಿವಸ ರಜವಿರಲಿಲ್ಲ. ವಿಜಯದಶಮಿ ಮುಗಿದ ಕೂಡಲೆ ಎಲ್ಲರೂ ಪಶ್ಚಿಮವಾಹಿನಿಗೆ ಹೋಗಿ ಅಲ್ಲೇ ಸ್ನಾನ ಊಟ ಮುಗಿಸಿಕೊಂಡು ಬರುವುದೆಂದು ನಿಶ್ಚಯಿಸಿದರು.

ಗೋದಮ್ಮ, ರುಕ್ಮಿಣಿ ಅಡಿಗೆ ವ್ಯವಸ್ಥೆಗೆ ನಿಂತರು. ಶ್ರೀದೇವಿ, ಕಮಲೂ ಅವರಿಗೆ ಸಹಾಯಕರಾದರು. ಬಿಸಿಬೇಳೆ ಹುಳಿಯನ್ನ, ಮೊಸರನ್ನ, ಕಡಲೆಬೇಳೆ ಪಾಯಸ, ಕೊಬ್ಬರಿ ಚಟ್ನಿ, ಹಪ್ಪಳ ಸಂಡಿಗೆ ಬಾಳಕ ಸಿದ್ಧವಾಗುತ್ತಿತ್ತು.

ಮಾಧವರಾಯ, ರಾಮು, ನಾರಾಯಣಸ್ವಾಮಿ ಸ್ನಾನಕ್ಕೆ ನದಿಯ ದಂಡೆಗೆ ಹೋದರು. ರಾಮು, ನಾರಾಯಣಸ್ವಾಮಿ ನದಿಯ ದಂಡೆಯಲ್ಲಿಯೇ ನಿಂತು ಸ್ನಾನಮಾಡಲಾರಂಭಿಸಿದರು. ಮಾಧವರಾಯ ನದಿಯ ಒಳಕ್ಕೆ ಇಳಿದು ಹೋದ. ಪ್ರವಾಹ ಬಲವಾಗಿರಲಿಲ್ಲ. ಅಲ್ಲಲ್ಲಿ ಕಲ್ಲುಗಳು ಎದ್ದು ಕಾಣುತ್ತಿದ್ದವು. ಒಂದು ಸಾವಿರ ಗಜದಷ್ಟು ಒಳಗೆ ಹೋಗುವಲ್ಲಿ ಸ್ನಾನಕ್ಕೆ ಪ್ರಶಸ್ತವಾದ ಸ್ಥಳ ಸಿಕ್ಕಿತು. ಮಾಧವರಾಯ ಸುಖವಾಗಿ ಸ್ನಾನ ತೀರಿಸಿಕೊಂಡು, ಬಟ್ಟೆ ಒದ್ದೆಯಾಗದಂತೆ ಅಲ್ಲಲ್ಲಿ ಹಾಸಿದಂತಿದ್ದ ಕಲ್ಲುಗಳ ಮೇಲೆ ಕಾಲಿಡುತ್ತ ದಂಡೆಗೆ ಬರುತ್ತಿದ್ದ. ಯಾವುದೋ ಕಲ್ಲು ನುಣುಪಾಗಿದ್ದುದರಿಂದ ಕಾಲುಜಾರಿ ಮಾಧವರಾಯ

ಕೆಳಕ್ಕೆ ಬಿದ್ದುಬಿಟ್ಟ.

ಮಾಧವರಾಯ ಸ್ನಾನಮುಗಿಸಿಕೊಂಡು ಸಾವಕಾಶವಾಗಿ ಬರಲಿ ಎಂದು ರಾಮು, ನಾರಾಯಣಸ್ವಾಮಿ ಛತ್ರದ ಕಡೆಗೆ ಹೊರಟು ಹೋಗಿದ್ದರು. ಮಾಧವರಾಯ ಪ್ರಜ್ಞಾಶೂನ್ಯನಾಗಿ ನೀರಿನಲ್ಲಿ ಬಿದ್ದು ಬಿಟ್ಟಿದ್ದ.

ಸ್ನಾನಕ್ಕೆ ಬಂದವರು ಯಾರೋ ಅವನನ್ನು ಗುರುತಿಸಿ ಛತ್ರಕ್ಕೆ ಸುದ್ದಿ ಮುಟ್ಟಿಸಿದರು.

ರಾಮು, ನಾರಾಯಣಸ್ವಾಮಿ, ಗೋದಮ್ಮ, ರುಕ್ಮಿಣಿ, ಶ್ರೀದೇವಿ ಕಮಲೂ ಎಲ್ಲರೂ ಓಡುತ್ತ ದಂಡೆಗೆ ಬಂದರು. ಮಾಧವರಾಯನನ್ನು ಮೆಲ್ಲನೆ ನೀರಿನಿಂದ ಹೊರಗೆಳೆದು ದಡಕ್ಕೆ ತಂದುದೂ ಆಯಿತು.

ಸ್ವಲ್ಪಹೊತ್ತು ಶಿಶ್ರೂಷೆಯಾಗುವುದರಲ್ಲಿ ಮಾಧವರಾಯನಿಗೆ ಪ್ರಜ್ಞೆಬಂದಿತು. ತಲೆಗೆ ಬಲವಾದ ಪೆಟ್ಟುತಾಗಿದ್ದುದಲ್ಲದೆ ತೊಡೆಯ ಮೂಳೆ ಮುರಿದುಹೋಗಿತ್ತು. ರಾಮು ಅಕ್ಕನಿಗೆ

"ಕೂಡಲೆ ಮೈಸೂರು ಆಸ್ಪತ್ರೆಗೆ ಕರೆದುಕೊಂಡು ಹೋಗ ಬೇಕಮ್ಮ." ಎಂದ. ರುಕ್ಮಿಣಿಗೆ ಕಣ್ಣುಗತ್ತಲೆ ಕವಿದುಕೊಂಡು ಬಂದಿತ್ತು. ಏನು ಮಾಡಬೇಕೆಂದು ತೋರದಾಯಿತು. ಗೋದಮ್ಮನವರು ಭಯದಿಂದ ನಡಗುತ್ತಿದ್ದರು. ಮಕ್ಕಳು ಅಳುವುದಕ್ಕೆ ಉಪಕ್ರಮಿಸಿದ್ದರು.

"ಯಾರದಾದರೂ ಕಾರು ತೆಗೆದುಕೊಂಡು ಕೂಡಲೆ ಹೋಗ ಬೇಕಮ್ಮ ತಡಮಾಡಬಾರದು" ಎಂದು ರಾಮು ಎಚ್ಚರಿಸಿದ. ರುಕ್ಮಿಣಮ್ಮ

"ಷರೀಫ್ ಸಾಹೇಬರ ಹತ್ತಿರ ಕಾರಿದೆ" ಎಂದಳು.

ರಾಮು, ನಾರಾಯಣಸ್ವಾಮಿ ಓಡುತ್ತ ಪಟ್ಟಣಕ್ಕೆ ಹೋದರು. ಮಾಧವರಾಯರಿಗಾದ ಅಪಘಾತ ಕೇಳಿ ಮಸ್ತಾನ್ ಕೂಡಲೆ ಕಾರು ತೆಗೆದುಕೊಂಡು ಬಂದ.

ಮಕ್ಕಳಿಗೆ ಊಟವಾಗಿರಲಿಲ್ಲ. ಅವರ ಯೋಗಕ್ಷೇಮ ನೋಡಿ ಕೊಳ್ಳುವುದಕ್ಕೆ ಗೋದಮ್ಮನವರು ನಿಲ್ಲಬೇಕಾಯಿತು. ಮಾಧವರಾಯ ನನ್ನು ಮೆಲ್ಲನೆ ಕಾರಿನಲ್ಲಿ ಮಲಗಿಸಿ, ಅವನ ಜತೆ ರುಕ್ಮಿಣಮ್ಮ, ರಾಮೂ

ಶ್ರೀದೇವಿ ಹೊರಟರು. ಕಾರನ್ನು ಮನೆಯ ಮುಂದೆ ನಿಲ್ಲಿಸಿ ರುಕ್ಮಿಣಮ್ಮ ಮಾದನಿಗೆ 'ಛತ್ರಕ್ಕೆ ಹೋಗು' ಎಂದು ಹೇಳಿಹೋದಳು.

ಶ್ರೀಕೃಷ್ಣರಾಜೇಂದ್ರ ಆಸ್ಪತ್ರೆಯ 'ಸ್ಪೆಷಲ್ ವಾರ್ಡಿಗೆ' ಮಾಧವ ರಾಯನನ್ನು ಸೇರಿಸಿದ್ದಾಯಿತು. ಡಾಕ್ಟರು ಎಕ್ಸ್-ರೇ ಫೋಟೋಗಳನ್ನು ತೆಗೆದುಕೊಂಡು ಮುರಿದ ಕಾಲಿಗೆ ಚಿಕಿತ್ಸೆ ಮಾಡಿದರು. ಪ್ಲಾಸ್ಟರ್ ಆಫ್ ಪ್ಯಾರಿ (Plaster of Paris) ಕಾಲಿನ ತುಂಬ ಮೆತ್ತಿ ಬಂಧಿಸ ಲಾಯಿತು. ಚಿಕಿತ್ಸೆಯ ವೇದನೆ ತಾಳಲಾರದೆ ಮಾಧವರಾಯ ಮೂರ್ಛೆ ಹೋದ. ಇಡಿಯ ವಾರ್ಡೇ ನಡಗುವಂತೆ ರಾತ್ರಿಯೆಲ್ಲಾ ಚೀರುತ್ತಿದ್ದ. ಅವನ ಸಂಕಟ ನೋಡಲಾರದೆ ಡಾಕ್ಟರು ನಿದ್ರೆಬರುವಂತೆ ಇಂಜಕ್ಷನ್ ಕೊಟ್ಟರು.

ಮಾಧವರಾಯನಿಗಿಂತಲೂ ಹೆಚ್ಚಾಗಿ ವೇದನೆ ಅನುಭವಿಸು ತಿದ್ದವಳು ರುಕ್ಮಿಣಮ್ಮ. ಕಣ್ಣಲ್ಲಿ ನೀರು ಮಿಡಿದು ಮಿಡಿದು ಬತ್ತಿ ಹೋಗಿತ್ತು. ಕಣ್ಣುಗುಳಿಗಳು ಒಣಗಿದ ಕೆರೆಯಂತೆ ರುದ್ರಗಂಭೀರ ವಾದವು. 'ನನ್ನ ಮಾಂಗಲ್ಯ ಉಳಿಸು ಭಗವಂತಾ!' ಎಂಬ ಮೊರೆ ಅವಳ ಹೃದಯವನ್ನು ಭೇದಿಸಿಕೊಂಡೆದ್ದಿತ್ತು. ಗುರುಸ್ವಾಮಿಯ ಧ್ಯಾನಾ ಸಕ್ತಳಾಗಿ ಕುಳಿತಳು. ಒಮ್ಮೆ ಮಾಧವರಾಯ ಚೀರಿದನೆಂದರೆ ಧ್ಯಾನಕ್ಕೆ ಭಂಗವಾಗುತ್ತಿತ್ತು. ಎದ್ದು ಬಂದು ಪತಿಯನ್ನು ಕರುಣಾದ್ರ್ರತೆಯಿಂದ ನೋಡುತ್ತ ನಿಲ್ಲುವಳು 'ಮಹಾಮಾರಿಕಾ ಬೇನೆಯಿಂದ ಕಾಪಾಡಿ ಕೊನೆಗೆ ಈ ಅಪಘಾತಕ್ಕೆ ಈಡುಮಾಡಿದೆಯಾ ಸ್ವಾಮಿ' ಎಂದು ಹಲುಬುವಳು.

ಅಣ್ಣನ ಚಿಂತಾಜನಕ ಸ್ಥಿತಿ, ಅತ್ತಿಗೆಯ ಹೃದಯ ವಿದ್ರಾವಕ ಆರ್ತನಾದ ಕೇಳುತ್ತ, ಶ್ರೀದೇವಿ ಅರೆಮೂಕಳಂತೆ ನಿಂತಳು. ಅತ್ತಿಗೆ ಯನ್ನು ಹೇಗೆ ಸಮಾಧಾನ ಪಡಿಸಬೇಕೆಂಬುದೂ ಅವಳಿಗೆ ತಿಳಿಯ ದಾಯಿತು.

ರಾಮು ಆಗಾಗ್ಗೆ ಅಕ್ಕನ ಬಳಿಗೆ ಬಂದು 'ಅಳಬೇಡಮ್ಮ. ದೇವರು ಒಳ್ಳೆಯದು ಮಾಡುತ್ತಾನೆ. ಭಾವ ಗುಣಹೊಂದುತ್ತಾರೆ.

ಚಿಂತೆಮಾಡಬೇಡ' ಎಂದು ಹೇಳಲೆತ್ನಿಸುತ್ತಿದ್ದ. ಅವನಿಗೆ ಗಂಟಲ
ಬಿಗಿದು ಬರುತ್ತಿತು.

ರಾತ್ರಿ ಷರೀಫ್ ಸಾಹೇಬರು ಮನೆಗೆ ಬಂದಕೂಡಲೆ 'ಮಸ್ತಾ
ಎಲ್ಲಿ ?' ಎಂದು ಕೇಳಿದರು. ಮಾಧವರಾಯನಿಗೆ ಅಪಘಾತವಾಗಿ
ಅವನನ್ನು ಮೈಸೂರು ಆಸ್ಪತ್ರೆಗೆ ಕರೆದುಕೊಂಡು ಹೋದ ಸುದ್ದಿ ತಿಳಿ
ಕೂಡಲೆ ಷರೀಫ್ ಮತ್ತೊಂದು ಕಾರ್ ತೆಗೆದುಕೊಂಡು ಜವರೇಗೌ
ರನ್ನು ಹುಡುಕಿಕೊಂಡು ಹೊರಟರು.

ಊಟಕ್ಕೆ ಸಿದ್ಧವಾಗುತ್ತಿದ್ದ ಗೌಡರಿಗೆ ಅಪಘಾತದ ಸುದ್ದಿ ತ
ಮಳವನ್ನುಂಟುಮಾಡಿತು. ಇಬ್ಬರೂ ಹೊರಟು ಡಾ. ಸುಂದರಂ
ರಂಗಯ್ಯನವರನ್ನೂ ಮಾಧವರಾಯನ ಜೂನಿಯರ್ ಶೇಷಪ್ಪನನ್ನೂ
ಕರೆದುಕೊಂಡು ಮೈಸೂರಿಗೆ ಬಂದರು.

ಮಾಧವರಾಯ ಅನುಭವಿಸುತ್ತಿದ್ದ ನರಕಯಾತನೆ ಎಲ್ಲರಿಗ
ದುಃಖ ಚಿಂತೆಯನ್ನುಂಟುಮಾಡಿತು. ಡಾ. ಸುಂದರಂ ಆರ್.ಎಂ.
(Resident Medical Officer) ಅವರನ್ನು ಕಂಡು ರೋಗಿಂ
ಸ್ಥಿತಿಗತಿಯನ್ನು ತಿಳಿದು ಬಂದರು.

ರುಕ್ಮಿಣಮ್ಮ ಆರ್ತಳಾಗಿ

"ಏನಂತೆ ಡಾಕ್ಟರೇ ?" ಎಂದು ಕೇಳಿದಳು.

"ತೊಡೆಯ ಮೂಳೆ ಮುರಿದಿದೆ. ಪ್ಲಾಸ್ಟರ್ ಬ್ಯಾಂಡೇ
ಹಾಕಿದ್ದಾರೆ."

"ಮುಂದೆ........?"

"ಚಿಂತಿಸಬೇಕಾಗಿಲ್ಲಮ್ಮ. ಗುಣವಾಗುವುದಕ್ಕೆ ಸ್ವಲ್ಪಕಾ
ಹಿಡಿಯಬಹುದು. ಮೂಳೆಗಳು ಕೂಡಿಕೊಂಡು, ಅವುಗಳ ಮೇ
ಮೊದಲಿನ ಹಾಗೆ ಮಾಂಸಖಂಡ ಬೆಳೆಯಬೇಕು. ಸಿಂಪಲ್ ಫ್ರಾಕ್ಚ
ಎನ್ನುವುದು ಎಕ್ಸ್-ರೇ ಫೋಟೋದಿಂದ ಗೊತ್ತಾಯಿತು. ಕಾಂಪೌಂ
ಫ್ರಾಕ್ಚರ್ (Compound fracture) ಆಗಿದ್ದರೆ ಕಾಲನ
ಕತ್ತರಿಸ (amputate) ಬೇಕಾಗುತ್ತಿತ್ತು. ದೇವರೇ ಕಾಪಾಡಿದ.

"ಮೊದಲಿನ ಹಾಗೆಯೇ ಕಾಲು ಬರುತ್ತದೆಯೇ ?"

"ಕಾಲು ಬರುವುದರಲ್ಲಿ ಸಂದೇಹವಿಲ್ಲ, ಕೆಲಕಾಲ ಕಾಲು ಸ್ವಲ್ಪ ದುರ್ಬಲವಾಗಿರುತ್ತದೆ."

ಗೆಳೆಯರೆಲ್ಲಾ ರುಕ್ಮಿಣಮ್ಮನಿಗೆ ಸಮಾಧಾನ ಹೇಳಿದರು. ರುಕ್ಮಿಣಮ್ಮ ಶೇಷಪ್ಪನ ಕಡೆ ತಿರುಗಿ

"ಈವೇಳೆಯಲ್ಲಿ ನೀವೆಲ್ಲಾ ಹೇಗೆ ಬಂದಿರಿ." ಎಂದು ಕೇಳಿದಳು.

"ಷರೀಫ್ ಸಾಹೇಬರು ಕಾರಿನಲ್ಲಿ ಕರೆದುಕೊಂಡು ಬಂದರು."

"ನೀವು ಹೋಗುವಾಗ ಜತೆಯಲ್ಲಿ ರಾಮು, ಶ್ರೀದೇವಿಯನ್ನು ಕರೆದುಕೊಂಡು ಹೋಗಿ. ಬೆಳಿಗ್ಗೆಯಿಂದ ಅವರಿಗೆ ಉಪವಾಸವಾಗಿದೆ."

"ನೀವೂ ಮನೆಗೆ ಹೋಗಿಯಮ್ಮ. ಆಸ್ಪತ್ರೆಯಲ್ಲಿ ನಾನಿದ್ದು ನೋಡಿಕೊಳ್ಳುತ್ತೇನೆ."

"ಅವರಿದ್ದಲ್ಲಿಯೇ ನನ್ನ ಮನೆ. ಬೆಳಿಗ್ಗೆ ಅತ್ತೆಮ್ಮನವರನ್ನು ಕಳುಹಿಸಿಕೊಡಿ. ಪಾಪ ! ಆ ಜೀವಕ್ಕೆ ಎಷ್ಟು ತಳಮಳವಾಗಿದೆಯೋ ?"

"ನಿಮಗೆ ಊಟ........?"

"ನನಗೇನೂ ಬೇಡಪ್ಪ."

ಷರೀಫ್ ಸಾಹೇಬರು ಮಸ್ತಾನನನ್ನು ಹತ್ತಿರ ಕರೆದು ಕಿವಿಯಲ್ಲೇನೋ ಉಸುರಿದರು. ಮಸ್ತಾನ್ ಐದು ನಿಮಿಷಗಳಲ್ಲಿ ಬಾಳೆಯ ಹಣ್ಣು, ಕಿತ್ತಲೆ ಹಣ್ಣು, ಸೇಬು, ಚಿಕ್ಕೂ ತಂದುಕೊಟ್ಟ. ರುಕ್ಮಿಣಮ್ಮ ಷರೀಫ್ ಸಾಹೇಬರಕಡೆ ತಿರುಗಿ

"ನಿಮ್ಮ ತಮ್ಮಂದಿರು ತಕ್ಷಣ ನಮ್ಮನ್ನು ಇಲ್ಲಿಗೆ ಕರೆದುಕೊಂಡು ಬರದಿದ್ದರೆ ಅನಾಹುತವಾಗುತ್ತಿತ್ತು. ನೀವೆಲ್ಲಾ ಅಣ್ಣತಮ್ಮಂದಿರಿಗಿಂತಲೂ ಹೆಚ್ಚಾಗಿದ್ದೀರಪ್ಪ."

ಷರೀಫ್ ಏನೋ ಹೇಳಲು ಪ್ರಯತ್ನಿಸಿದರು. ಅವರ ಗಂಟಲು ಕಟ್ಟಿತು.

ಗೆಳೆಯರು ಅಪ್ಪಣೆ ಪಡೆದು ಹೊರಟರು. ಅವರ ಜತೆ ರಾಮು, ಶ್ರೀದೇವಿಯರನ್ನು ರುಕ್ಮಿಣಮ್ಮ ಕಳಿಸಿಕೊಟ್ಟಳು.

ಬೆಳಿಗ್ಗೆ ಏಳುಗಂಟೆಯ ವೇಳೆಗೆ ಗೋದಮ್ಮನವರು ಮಕ್ಕಳನ್ನು ಕರೆದುಕೊಂಡು ಬಂದರು. ಅತ್ತೆಯನ್ನು ಕಂಡಕೂಡಲೆ ರುಕ್ಮಿಣಿ ಅವರಿಗೆ ತೆಕ್ಕೆಬಿದ್ದು ತನ್ನ ಅಳಲನ್ನುಸುರಿದಳು. ಅತ್ತೆ ಸೊಸೆ ಅಪ್ಪಿಕೊಂಡು ಕಣ್ಣೀರ್ಗರೆದರು. ಗೋದಮ್ಮ ತುಸು ಸ್ಥೈರ್ಯ ತೆಂದುಕೊಂಡು

"ಏನೂ ಭಯವಿಲ್ಲವೆಂದು ಡಾ. ಸುಂದರಂ ಹೇಳಿದರು"

"ಇಲ್ಲಿಯ ದೊಡ್ಡ ಡಾಕ್ಟರೂ ಹಾಗೇ ಹೇಳುತ್ತಿದ್ದಾರೆ."

"ರಾತ್ರಿ ಸ್ವಲ್ಪವಾದರೂ ನಿದ್ರೆ ಮಾಡಿದನೇ ?"

"ಮಂಪರು ಬಂದ ಹಾಗಿತ್ತು. ರಾತ್ರಿಯೆಲ್ಲಾ ಕನವರಿಸಿಕೊಳ್ಳು ತ್ತಿದ್ದರು. ಯಾವ ನನ್ನ ಪಾಪಕ್ಕೆ ಈ ಪ್ರಾಯಶ್ಚಿತ್ತ ಅಮ್ಮ ?"

"ಪಾಪ ! ನಿನ್ನ ಪುಣ್ಯದಿಂದ ಮಾಧುವನ್ನು ಬದುಕಿಸಿಕೊಂಡೆ ತಾಯಿ."

ಮಾಧವರಾಯ ಮೆಲ್ಲನೆ ಕಣ್ತೆರೆದು 'ಅಮ್ಮ.......ಅಮ್ಮ' ಎಂದು ನರಳಿದ. ಗೋದಮ್ಮ, ರುಕ್ಮಿಣಿ ಅವನ ಸಮೀಪದಲ್ಲಿ ಕುಳಿತರು. ಮಾಧವರಾಯ ಬಾಯಾರಿಕೆ ಎಂದು ಸೂಚಿಸಿದ. ಗೋದಮ್ಮ ತಾವು ತಂದಿದ್ದ ಥರ್ಮಾಸ್ ಫ್ಲಾಸ್ಕ್‌ನಲ್ಲಿದ್ದ ಕಾಫಿಯನ್ನು ಲೋಟಕ್ಕೆ ಬಗ್ಗಿ ಮಗನಿಗೆ ಕುಡಿಸಿದರು.

ರುಕ್ಮಿಣಿ ಮುಖವನ್ನತ್ತ ತಿರುಗಿಸಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿ ದ್ದಳು. ಅಳುವ ಶಬ್ದವೆಲ್ಲಿ ಗಂಡನ ಕಿವಿಯ ಮೇಲೆ ಬೀಳುವುದೋ ಎಂದು ಹೆದರಿ ದುಃಖವನ್ನು ನುಂಗಿಕೊಳ್ಳಲೆತ್ನಿಸುತ್ತಿದ್ದಳು. ಅವ ಪ್ರಯತ್ನ ಮೀರಿ ಕಣ್ಣೀರು ಕಾಲುವೆಯ ಹಾಗೆ ಹರಿಯುತ್ತಿತ್ತು. ಮಾಧವರಾಯ ಮೆಲ್ಲನೆ

" ರುಕ್ಕು........ " ಎಂದ.

ರುಕ್ಮಿಣಿ ತಕ್ಷಣ ಕಣ್ಣೀರೊಸಿಕೊಂಡು ಅವನ ಕಡೆ ತಿರುಗಿದಳು ಒಲವೇ ಮಾಧವರಾಯನ ಕಣ್ಣುಗಳ ರೂಪ ತಳೆದಿತ್ತು. ಹೆಂಡತಿ ಕಡೆ ಕರುಣೆತುಂಬಿದ ನೋಟ ಬೀರಿ

" ಅಳಬೇಡಪ್ಪಾ........ " ಎಂದ.

ರುಕ್ಮಿಣಿ ಸೆರಗಿನಿಂದ ಮುಖ ಮುಚ್ಚಿಕೊಂಡಳು.

"ನಿಮ್ಮನ್ನೆಲ್ಲಾ ಬಿಟ್ಟು ನಾನು ಸಾಯುತ್ತೇನೇನೆ ಹುಚ್ಚಿ. ನೀನು ಇಷ್ಟು ಅಳ್ಳೆದೆಯವಳಾದರೆ ಹೇಗೆ ಹೇಳು–ನನ್ನ ಕಾಲು ಎಲ್ಲಿ ಊನವಾಗುತ್ತದೋ ಎಂದು ಚಿಂತೆ."

" ಸರಿಹೋಗುತ್ತದೆಂದು ಡಾಕ್ಟರು ಹೇಳಿದರು."

" ನಾನು ಭಗವಂತನನ್ನು ಆಕ್ಷೇಪಿಸುವುದಿಲ್ಲ ರುಕ್ಕೂ. ನನಗೆ ಬುದ್ಧಿಗಲಿಸುವುದಕ್ಕೆ ಈ ಶಿಕ್ಷೆ ವಿಧಿಸಿದ್ದಾನೆ."

"ಬುದ್ಧಿಗೇಡಿಗಳಾಗಿ ನೀವು ವರ್ತಿಸಲಿಲ್ಲವಲ್ಲಾ !"

"ಹತ್ತು ಕಾಸು ಕೈಯಲ್ಲಿ ಓಡಿಯಾಡುವಂತಾದ ಮೇಲೆ ನನಗೆ ಸ್ವಲ್ಪ ಅಹಂಕಾರ ಬಂದಿತ್ತು. ಅದಕ್ಕೆ ದೇವರು ತಲೆಯ ಮೇಲೆ ಮೊಟಕಿದ್ದಾನೆ."

"ಮಾತಾಡಿ ಆಯಾಸಮಾಡಿಕೊಳ್ಳಬೇಡಪ್ಪ" ಎಂದು ಗೋದಮ್ಮನವರು ಎಚ್ಚರಿಕೆ ಇತ್ತರು.

ಮಾಧವರಾಯ ಮಕ್ಕಳನ್ನು ಹತ್ತಿರ ಕರೆದು ಅವರ ತಲೆ ನೇವರಿಸಿದ. ವಾರ್ಡ್‌ಬಾಯ್ (Ward Boy) ಶುಶ್ರೂಷೆಗೆ ಬರಲು ಗೋದಮ್ಮ ಎಲ್ಲರನ್ನೂ ಕರೆದುಕೊಂಡು ಹೊರಗೆ ಬಂದರು.

ಹೊರಗೆ ಬಂದೊಡನೆಯೇ ಗೋದಮ್ಮ

"ಮುಖ ತೊಳೆದುಕೊಂಡೆಯಾ ರುಕ್ಕೂ" ಎಂದು ಕೇಳಿದರು.

"ಆಗಲೇ ತೊಳೆದುಕೊಂಡೆ."

"ಬಿಸಿಯಾಗಿ ಕಾಫಿ, ಉಪ್ಪಿಟ್ಟು ತೆಗೆದುಕೋ. ನಿನ್ನೆಯಲ್ಲಾ ಕಟ್ಟುಪವಾಸವಾಯ್ತು."

"ಹಸಿವೂ ಇರಲಿಲ್ಲಮ್ಮ. ಸ್ನಾನಮಾಡದೆ ಕಾಫಿ ಹೇಗೆ ಕುಡಿಯಲಿ ? "

"ಆಪತ್ಕಾಲದಲ್ಲಿ ಕಟ್ಟಳೆ ಮೀರಿದರೆ ದೋಷವಿಲ್ಲ ರುಕ್ಕೂ."

"ಆಗಲಿ. ಆಮೇಲೆ ತೆಗೆದುಕೊಳ್ಳುತ್ತೇನೆ. ನಿನ್ನೆ ಏನಾಯಿತು?"

"ಮನೆಗೆ ಕರೆದುಕೊಂಡು ಹೋಗಿ ಮಕ್ಕಳಿಗೆ ಊಟಕ್ಕಿಟ್ಟೆ."

"ನೀವು ಉಪವಾಸಮಾಡಿದಿರಿ."

"ನನ್ನ ಗಂಟಲಲ್ಲಿ ಅನ್ನ ಇಳಿಯತ್ತೇನೇ ರುಕ್ಕೂ. ರಾತ್ರಿಯೆಲ್ಲಾ ಆಸ್ಪತ್ರೆಯಲ್ಲಿ ನೀನು ಒಬ್ಬಳೇ ಇರಬೇಕಾಯಿತು."

"ನಾನು ಎಲ್ಲಿದ್ದೆನೋ ಏನು ಮಾಡಿದೆನೋ ಭಗವಂತನಿಗೇ ಗೊತ್ತು."

"ಮಾಧೂಗೆ ಕಾಲುಬಂದರೆ ತಿರುಪತಿ ವೆಂಕಟಾಚಲಪತಿಗೆ ಬೆಳ್ಳಿಯ ಪಾದ ಮಾಡಿಸಿಕೊಡುವುದಾಗಿ ಹರಸಿಕೊಂಡೆ."

"ಬರತ್ತಲ್ಲವೇ ಅಮ್ಮ."

"ಬರತ್ತೆ ತಾಯಿ. ಏಕೆ ಯೋಚನೆಮಾಡುತ್ತೀ."

ಮಾಧವರಾಯನ ನಿತ್ಯವಿಧಿಗಳು ತೀರಿದ್ದವು. ವಾರ್ಡ್ ಬಾಯ್ ಹೊರಗೆ ಹೋದ ಕೂಡಲೆ ಡಾಕ್ಟರು ಬಂದರು. ರೋಗಿಯನ್ನು ಪರೀಕ್ಷಿಸಿ, ಟೆಂಪರೇಚರ್ ಚಾರ್ಟ್ (Temperature chart) ನೋಡಿ

"ರಾತ್ರಿ ಸ್ವಲ್ಪ ನಿದ್ರೆ ಬಂದಿತೇ ಸರ್" ಎಂದು ಕೇಳಿದರು.

"ನನಗೊಂದೂ ಗೊತ್ತಿಲ್ಲ ಡಾಕ್ಟರೇ. ಮೈಮೇಲೆ ಎಚ್ಚರವಿರಲಿಲ್ಲವೆಂದು ಕಾಣುತ್ತದೆ"

"ನಿಮ್ಮದು ವಜ್ರಕಾಯ ಸರ್. ಅಪಘಾತವನ್ನು ಧೈರ್ಯವಾಗಿ ಎದುರಿಸಿದಿರಿ. ಇನ್ನು ಪ್ರಕೃತಿಯ ಅಧೀನ ನಾವು."

"ಆಸ್ಪತ್ರೆಯಲ್ಲಿ ನಾನೆಷ್ಟು ದಿನವಿರಬೇಕು."

"ಎರಡು ತಿಂಗಳಾದರೂ ಇರಬೇಕಾಗುತ್ತದೆ."

ಒಳಗೆ ಬಂದ ಗೋದಮ್ಮ, ರುಕ್ಮಿಣಿಯವರಿಗೆ ಧೈರ್ಯದ ಮಾತು ಹೇಳಿ ಡಾಕ್ಟರು ಮುಂದಿನ ವಾರ್ಡಿಗೆ ಹೋದರು.

ಗೋದಮ್ಮ ಉಪಚರಿಸಿ ಮಗನಿಗೆ ಸ್ವಲ್ಪ ಉಪ್ಪಿಟ್ಟು ತಿನ್ನಿಸಿದರು. ಮಾಧೂ ಕ್ಷೀಣಸ್ವರದಲ್ಲಿ

"ಮಕ್ಕಳಿಗೆ ಊಟ....?" ಎಂದು ಕೇಳಿದ.

"ಮನೆಯಲ್ಲಿ ಅಡಿಗೆ ಮಾಡಿಟ್ಟು ಬಂದಿದ್ದೇನೆ. ರುಕ್ಕೂ ಮಕ್ಕಳನ್ನು

ಕರೆದುಕೊಂಡು ಹೋಗಿ ಊಟಮಾಡಿಕೊಂಡು ಬರಲಿ."

ರುಕ್ಮಿಣಿಗೆ ಹೋಗಲು ಇಷ್ಟವಿಲ್ಲ. ಗೋದಮ್ಮ ಬಲವಂತದಿಂದ ಸೊಸೆಯನ್ನೂ ಮೊಮ್ಮಕ್ಕಳನ್ನೂ ಕಳಿಸಿಕೊಟ್ಟು ಮಗನ ಬಳಿ ಕುಳಿತರು.

ಅತ್ತೆಸೊಸೆಗೇ ಇದೇ ನಿತ್ಯವಿಧಿಯಾಗುತ್ತ ಬಂದಿತು. ರಾಯರ ಮನೆಯವರ ವಶಕ್ಕೆ ಷರೀಫ ಸಾಹೇಬರು ಒಂದು ಕಾರು, ಡ್ರೈವರ್ ಕೊಟ್ಟುಬಿಟ್ಟಿದ್ದರು.

ರಾಮು ರಜ ಮುಗಿಯುತ್ತ ಬಂದಿತ್ತು. ಅವನು ಮೈಸೂರಿಗೆ ಬಂದು ಭಾವನ ದರ್ಶನಾಶೀರ್ವಾದ ಪಡೆದು ಶ್ರೀದೇವಿಯೊಂದಿಗೆ ಬೆಂಗಳೂರಿಗೆ ಪ್ರಯಾಣ ಬೆಳಸಿದ.

ಶೇಷಪ್ಪ ಕಛೇರಿಯ ಕೆಲಸ ನೋಡಿಕೊಂಡು ಹೋಗುತ್ತಿದ್ದರು. ಕ್ಲಿಷ್ಟವಾದ ಕೇಸುಗಳು ಬಂದರೆ ಮೈಸೂರಿಗೆ ಬಂದು ಮಾಧವರಾಯನ ಸಲಹೆಪಡೆದು ಹೋಗುತ್ತಿದ್ದರು.

ಷರೀಫ್ ಸಾಹೇಬರು, ಜವರೇಗೌಡರು, ಡಾ. ಸುಂದರಂ, ರಂಗಯ್ಯ ದಿನಕ್ಕೆ ಎರಡು ಬಾರಿ ಬಂದು ಮಾಧವರಾಯನನ್ನು ಕಂಡು ಮಾತನಾಡಿಸಿಕೊಂಡು ಹೋಗುತ್ತಿದ್ದರು.

ಪತಿಗೆ ಬೇಗ ಗುಣವಾಗಲೆಂಬ ಒಂದೇ ಧ್ಯಾನನಿರತಳಾದ ರುಕ್ಮಿಣಿ ಹಗಲಿರುಳು ದೂಡುತ್ತ ಬಂದಳು. ದಿನದಿನಕ್ಕೆ ನೋವು ಕಡಿಮೆಯಾಗುತ್ತ ಬಂದು ಮಾಧವರಾಯನ ಆರೋಗ್ಯ ಸುಧಾರಿಸುತ್ತ ಬಂದಿತು

೩೦

ಕೆಲವು ದಿವಸಗಳಲ್ಲಿಯೇ ರುಕ್ಮಿಣಿ ಆಸ್ಪತ್ರೆಯ ನರ್ಸುಗಳು, ವಾರ್ಡಬಾಯ್‌ಗಳು, ಸಣ್ಣ ಡಾಕ್ಟರುಗಳ ಗೌರವಾದರಗಳಿಗೆ ಪಾತ್ರ ವಾದಳು. ಎಲ್ಲರಿಗೂ ರುಕ್ಮಿಣಿ 'ಅಮ್ಮಾವರು' ಆದಳು. ಮಾಧವರಾಯನ ಶುಶ್ರೂಷೆಗೆ ನಿಯಾಮಕವಾಗಿದ್ದ ಕೃಷ್ಣವೇಣಿ, ರುಕ್ಮಿಣಿಯನ್ನು ತಾಯಿಯಂತೆ ಭಾವಿಸತೊಡಗಿದ್ದಳು. ಎಲ್ಲರ ಕಷ್ಟವನ್ನೂ ಕೇಳುವುದು, ಅದಕ್ಕೆ ಪರಿಹಾರ ಸೂಚಿಸುವುದು—ಪರರ ಕಷ್ಟದಲ್ಲಿ ಪಾಲುಗೊಂಡು ಸಹಾನುಭೂತಿ ವ್ಯಕ್ತಪಡಿಸುವುದು—ಕೈಯಲ್ಲಿದ್ದುದನ್ನು ನಿರ್ವಂಚನೆಯಿಂದ ದಾನಮಾಡುವುದು ರುಕ್ಮಿಣಿಯ ನಿತ್ಯಚರ್ಯೆಯಾಯಿತು. ರುಕ್ಮಿಣಿಯ ಮುಂದೆ ಒಂದು ಸಣ್ಣ ಮಾತನಾಡುವುದಕ್ಕೆ ಪರರನಿಂದೆ ಮಾಡುವುದಕ್ಕೆ ಆಸ್ಪತ್ರೆಯ ಜನ ಅಂಜಲಾರಂಭಿಸಿದರು.

ವಾರ್ಡುಗಳಲ್ಲಿದ್ದ ಹಲವು ರೋಗಿಗಳ ಪರಿಚಯವೂ ರುಕ್ಮಿಣಿಗಾಯಿತು. ಮಾಧವರಾಯ ಮಲಗಿ ನಿದ್ರಿಸುತ್ತಿದ್ದಾಗ ವಾರ್ಡುಗಳಿಗೆ ಹೋಗಿ ರೋಗಿಗಳನ್ನು ಮಾತನಾಡಿಸಿಕೊಂಡು ಬರುತ್ತಿದ್ದಳು.

ರುಕ್ಮಿಣಿಯ ಮಾತುಕತೆ, ಸೌಜನ್ಯ, ಸಹಾನುಭೂತಿ ರೋಗಿಗಳ ಮೇಲೆ ವಿಚಿತ್ರ ಪರಿಣಾಮವನ್ನುಂಟುಮಾಡುತ್ತಿತ್ತು. ಸೃಷ್ಟಿ, ಸ್ಥಿತಿ, ಲಯ ಮೂರೂ ತಮ್ಮ ಅವಕುಂಠನ ಹರಿದೊಗೆದು ಆಸ್ಪತ್ರೆಯಲ್ಲಿ ನಿಂತಿದ್ದುದನ್ನು ರುಕ್ಮಿಣಿ ಕಾಣುತ್ತಿದ್ದಳು. ದಯೆ, ಕಾರುಣ್ಯ, ಸಹಾನು

ಭೂತಿಗಳಿಗಾಗಿ ಲೋಕ ಎಷ್ಟು ಹಂಬಲಿಸುತ್ತಿದೆಯೆನ್ನುವುದನ್ನರಿತಳು. ರುಕ್ಮಿಣಿಗೆ ಅರಿವಾಗದೆಯೇ ದಯೆ, ಕಾರುಣ್ಯ, ಸಹಾನುಭೂತಿಗಳ ಮೂರ್ತಸ್ವರೂಪವಾದ 'ಮಾತೃತ್ವ' ಅವಳಲ್ಲಿ ಸಮಾವೇಶಗೊಂಡಿತ್ತು. ಸ್ವಲಂತ ಮಾತೃಹೃದಯದ ಬೆಳಕು ಎಲ್ಲ ಜೀವಿಗಳನ್ನು ಚೇತನಗೊಳಿಸಿ, ಕತ್ತಲೆಯಿಂದ ಬೆಳಕಿಗೆ ಒಯ್ಯುತ್ತಿತ್ತು.

ಮಾಧವರಾಯನ ಚಿಕಿತ್ಸೆ ಮುಗಿಯುತ್ತ ಬಂದಿತು. ಕಾಲಿಗೆ ಹಾಕಿದ್ದ ಪ್ಲಾಸ್ಟರ್ ತೆಗೆದು ಡಾಕ್ಟರು ಮತ್ತೆ ಎಕ್ಸ್-ರೇ ಫೋಟೋ ತೆಗೆದು ಪರೀಕ್ಷಿಸಿ

"ಮೂಳೆ ಚೆನ್ನಾಗಿ ಕೂಡಿಕೊಂಡಿದೆ. ಆದರೆ ನೀವು ಒಂದೆರಡು ತಿಂಗಳು ಹಾಸಿಗೆ ಬಿಟ್ಟು ಕದಲಕೂಡದು." ಎಂದರು.

"ಇನ್ನೂ ಎರಡು ತಿಂಗಳು ಆಸ್ಪತ್ರೆಯಲ್ಲಿಯೇ ಇರಬೇಕೇ ?"

"ಬೇಕಿಲ್ಲ. ಮನೆಗೆ ಹೋಗಬಹುದು. ಆದರೆ ಹಾಸಿಗೆ ಬಿಟ್ಟು ಅಲ್ಲಾಡುವುದಿಲ್ಲವೆಂದರೆ ನಾನು ಡಿಸ್‌ಚಾರ್ಜ್ (Discharge) ಮಾಡುತ್ತೇನೆ. ಪ್ರತಿವಾರವೂ ಇಲ್ಲಿಗೆ ಬಂದು ಹೋಗಬೇಕು."

"ಹಾಗೇ ಆಗಲಿ ಡಾಕ್ಟರೇ. ಸದ್ಯ ಡಿಸ್‌ಚಾರ್ಜ್‌ಮಾಡಿ ಪುಣ್ಯಕಟ್ಟಿಕೊಳ್ಳಿ."

ಡಾಕ್ಟರು ರುಕ್ಮಿಣಮ್ಮನ ಕಡೆ ತಿರುಗಿ

"ಅಮ್ಮ—ನಿಮ್ಮ ಯಜಮಾನರನ್ನು ಕಳಿಸಿಕೊಡಲು ನಾನು ಎಷ್ಟು ಸಂತೋಷ ಪಡುತ್ತೇನೆಯೋ ನಿಮ್ಮನ್ನು ಕಳಿಸಲು ಅಷ್ಟೇ ವ್ಯಸನ ಪಡುತ್ತೇನೆ. ಇನ್ನು ನಾಲ್ಕು ದಿವಸ ನೀವು ಇದ್ದಿದ್ದರೆ ನಮ್ಮ ಆಸ್ಪತ್ರೆಯ ಸ್ವರೂಪವೇ ಬದಲಾಯಿಸುತ್ತಿತ್ತು."

ಮಾಧವರಾಯ ಕುತೂಹಲದಿಂದ

"ಏನಾಯಿತು ಡಾಕ್ಟರೇ ?" ಎಂದು ಕೇಳಿದ.

"ನಮ್ಮ ಔಷಧ, ಇಂಜಕ್ಷನ್, ಗುಳಿಗೆಗಳಿಂದ ರೋಗಗಳು ವಾಸಿಯಾಗುತ್ತವೆ ಎಂದು ನಾವು ನಂಬಿದ್ದೆವು. ರೋಗಿಗಳಲ್ಲಿಯೂ ಅದೇ ನಂಬಿಕೆ ಹುಟ್ಟಿಸಿ ಅವರಿಂದ ಹಣ ಸೆಳೆಯುತ್ತಿದ್ದೆವು. ಅಮ್ಮಾ

ವರು ನಮ್ಮ ದೃಷ್ಟಿಯನ್ನೇ ಬದಲಾಯಿಸಿದರು. ಅವರ ಒಂದು ಸ
ಮಾತು ಮಾಡಿದ ಕೆಲಸ ನನ್ನ ನೂರು ಇಂಜಕ್ಷನ್‌ಗಳು ಮಾ
ಲಾಗಲಿಲ್ಲ."

ಡಾಕ್ಟರ ಮಾತು ಮಾಧವರಾಯನ ಹೃದಯಕ್ಕೆ ಪ್ರಿಯವಾಯಿತ

ಆಸ್ಪತ್ರೆಯ ವಾಡಿಕೆಯನ್ನೇ ರುಕ್ಮಿಣಿಯ ನಡತೆ ಬದಲಾಯಿ
ಬಿಟ್ಟಿತ್ತು. ರೋಗಿ ಆಸ್ಪತ್ರೆ ಬಿಡುವ ಮುನ್ನ ಡಾಕ್ಟರುಗಳು, ನಸ
ಗಳು, ವಾರ್ಡ್‌ಬಾಯ್‌ಗಳು, ಆಳುಗಳು, ಅಗಸರು ಎಲ್ಲರಿಗೂ 'ಬ
ಮಾನ' ಕೊಡುವುದು ವಾಡಿಕೆಯಾಗಿತ್ತು. ರುಕ್ಮಿಣಿಯ ಕೈಯ್ಯಿಂ
ಯಾರೂ ಏನೂ ತೆಗೆದುಕೊಳ್ಳಲು ಬಯಸಲಿಲ್ಲ. ಆಸ್ಪತ್ರೆಯ ನೌಕರ
ಕೆಲವು ರೋಗಿಗಳು ರುಕ್ಮಿಣಿಗೆ ಹೂವು, ಹಣ್ಣು ತಂದಿತ್ತು ನಮಸ್ಕ
ದರು. ಆದರೆ ರುಕ್ಮಿಣಿ ಸುಮ್ಮನಿರಲಿಲ್ಲ. ಬಲವಂತದಿಂದ ಎ
ಕೈಗೂ ಸ್ವಲ್ಪ ಹಣ ಹಾಕಿದಳು.

ಮಾಧವರಾಯನನ್ನು ಊರಿಗೆ ಕರೆದೊಯ್ಯಲು ಅವನ ಗೆಳೆಯ
ಬಳಗವೆಲ್ಲಾ ಬಂದಿತ್ತು.

ಮಗ ಮನೆಗೆ ಬಂದುದನ್ನು ಕಂಡು ಗೋದಮ್ಮನವರು ಆನ
ಭಾಷ್ಪಸುರಿಸಿದರು. ಮಸುಕಾಗಿದ್ದ ಮನೆಯ ದೀಪ ಪ್ರಜ್ವಲ
ತೊಡಗಿತು.

ಮಾಧವರಾಯನ ರೂಮಿನಲ್ಲಿ ಅವನನ್ನು ಮಲಗಿಸಿ, ರುಕ್
ಊಟ ತಂದು ಚಮಚದಲ್ಲಿ ತಾನೇ ತಿನ್ನಿಸಿದಳು. ಮಾಧವರಾ
ಊಟ ಮುಗಿದಮೇಲೆ ಹೆಂಡತಿಯ ಕಡೆ ತಿರುಗಿ

"ರುಕ್ಕೂ...."

"ಏನು ?"

"ಇವತ್ತಾದರೂ ಊಟ ಮಾಡುವೆಯಾ ?"

"ಇದೇನು ಹೀಗೆ ಕೇಳುತ್ತಿರುವಿರಿ. ಈ ಎರಡೂವರೆ ತಿಂಗ
ನಾನು ಉಪವಾಸವಿದ್ದೆ ಎಂದು ಕೊಂಡಿರುವಿರಾ ?"

"ನೀನು ಊಟ ಮಾಡುತ್ತಿದ್ದುದು ಇಲ್ಲದ್ದು ನಿನ್ನ ನೋಡಿದ

ಗೊತ್ತಾಗುತ್ತದೆ. ಕೈಹುಣ್ಣಿಗೆ ಕನ್ನಡಿಯೇಕೆ ? ನಿಧಾನವಾಗಿ ಊಟ ಮಾಡಿ ಒಂದು ಗಳಿಗೆ ವಿಶ್ರಾಂತಿ ತೆಗೆದುಕೋ."

"ಹಾಗೇ ಆಗಲಿ. ನೀವು ಮಲಗಿಕೊಳ್ಳಿ—ಆಯಾಸಮಾಡಿಕೊಳ್ಳಬೇಡಿ. ಹಾಸಿಗೆಯಿಂದ ಕದಲಕೂಡದೆಂದು ಡಾಕ್ಟರು ಹೇಳಿದ್ದಾರೆ."

"ನಿನಗೆಂಥ ಗಂಡ ಗಂಟುಬಿದ್ದಂತಾಯಿತು ರುಕ್ಮಿಣಿ."

"ನಿಮ್ಮ ಸೇವೆ ನನಗೆ ಕಷ್ಟವಾಗಿದೆಯೆಂದು ಭಾವಿಸಿರುವಿರಾ ?"

"ಕಷ್ಟವನ್ನೇ ಸುಖವೆಂದು ತಿಳಿಯುವ ನಿನಗೆ ಕಷ್ಟವೆಲ್ಲಿಂದ ಬಂತು ?"

"ನಿಜವಾಗಿ ನನ್ನಷ್ಟು ಸುಖಿಗಳು ಯಾರೂ ಇಲ್ಲ. ಭಗವಂತ ನನಗೆ ಯಾವದಕ್ಕೆ ಕಡಿಮೆ ಮಾಡಿದ್ದಾನೆ."

ಮಾಧವರಾಯ ವಿಚಾರಪರವಶನಾದ. ಅವನ ಮನಸ್ಸು ಶತಮಾನಗಳ ಹಿಂದೆ – ಸಹಸ್ರಮಾನಗಳ ಹಿಂದೆ ಓಡಿತು.

'ಈ ನಿಷ್ಠೆ—ಈ ತಾಳ್ಮೆ—ಈ ಧೈರ್ಯ—ಈ ಉದಾತ್ತದೃಷ್ಟಿ ಒಂದು ಜೀವಮಾನದ್ದಲ್ಲ—ಒಂದು ಯುಗದ್ದಲ್ಲ. ನಾನಾ ಯುಗಗಳಲ್ಲಿ ಸಂಗೃಹೀತವಾದ ಸಂಸ್ಕೃತಿ ಕೆಲವು ವ್ಯಕ್ತಿಗಳಲ್ಲಿ ಪ್ರಕಟವಾಗುತ್ತದೆ. ಆ ಸಂಸ್ಕೃತಿ ಜೀವಂತ ಸಂಸ್ಕೃತಿಯೇ ವಿನಾ ಕನಸಿನ ಗಂಟಲ್ಲ ಎಂಬುದನ್ನು ಆ ವ್ಯಕ್ತಿಗಳು ತಮ್ಮ ಅಮರಜೀವನದಿಂದ ತೋರಿಸುತ್ತಾರೆ. ನನ್ನ ರುಕ್ಮಿಣಿ ಅಂಥ ವ್ಯಕ್ತಿಯೇ ?'

'ರುಕ್ಮಿಣಿ ನನ್ನವಳಾದುದರಿಂದ ನಾನು ಅವಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿಲ್ಲ.'

'ರುಕ್ಮಿಣಿ ಮಾನವಿಯೋ ದೇವತೆಯೋ ?'

'ಅವಳ ಸಹನೆ, ಮರುಕ, ತ್ಯಾಗ, ವೈರಾಗ್ಯ ಮನುಷ್ಯಜೀವಿಗೆ ಸಾಧ್ಯವೇ ?' ಎಂದು ಯೋಚಿಸುತ್ತಿದ್ದಂತೆ ಸುಖವಾದ ನಿದ್ರೆ ಹತ್ತಿತ್ತು. ಸುಮ್ಮ ಹಣಿಕಿ ಹಾಕಿದ ರುಕ್ಮಿಣಿ ಶಬ್ದವಾಗದಂತೆ ಬಾಗಿಲು ಎಳೆದುಕೊಂಡು 'ಗಲಭೆ ಮಾಡಬೇಡಿ—ಅಣ್ಣ ಮಲಗಿದ್ದಾರೆ' ಎಂದು ಮಕ್ಕ

ಳಿಗೆ ಎಚ್ಚರಿಕೆ ಕೊಟ್ಟಳು.

ಮಾಧವರಾಯ ಮನೆಗೆ ಬಂದುದು ರುಕ್ಮಿಣಿಯ ಮನಸ್ಸಿನಿಂದ ದೊಡ್ಡ ಭಾರವನ್ನು ಇಳುಹಿದಂತಾಗಿದ್ದರೂ ಅವಳ ಹೆಗಲಮೇಲೆ ಹೆಚ್ಚಿನ ಜವಾಬ್ದಾರಿಯನ್ನು ಹಾಕಿತ್ತು. ಆಸ್ಪತ್ರೆಯಲ್ಲಿ ಕ್ರಮವಾಗಿ ಪಥ್ಯ, ಚಿಕಿತ್ಸೆ, ಆರೈಕೆ ನಡೆದುಹೋಗುತ್ತಿತ್ತು. ಇಡಿಯ ಆಸ್ಪತ್ರೆ ನಿರ್ವಹಿಸುತ್ತಿದ್ದ ಕೆಲಸವನ್ನು ರುಕ್ಮಿಣಿ ಒಬ್ಬಳೇ ನಿರ್ವಹಿಸಬೇಕಾ ಯಿತು. ಕಾಲಕಾಲಕ್ಕೆ ಔಷಧ, ಊಟ, ಒದಗಿಸಬೇಕಾಗಿತ್ತು.

ಮಾಧವರಾಯನಿಗೆ ಬೇಸರವಾಗದಿರಲೆಂದು ಅವನು ಬಯಸಿ ದಾಗ ರುಕ್ಮಿಣಿ ಯಾವದಾದರೂ ಗ್ರಂಥ ಓದುತ್ತಿದ್ದಳು. ಬೆಳಿಗ್ಗೆ,ಸಂಜೆ ಗೆಳೆಯರು ಬಂದು ಜತೆಗಿರುತ್ತಿದ್ದರು. ಡಾ. ಸುಂದರಂ ಪ್ರತಿದಿನ ಮಾಧವರಾಯನ ಕಾಲು ನೀವುತ್ತಿದ್ದರು.

ಮಲಗಿದ್ದೆಡೆಯಲ್ಲಿಯೇ ಮಲಗಿರುವುದು ; ಮೂರು ತಿಂಗಳ ದರೂ ತನ್ನ ಕೆಲಸ ತಾನು ನೋಡಿಕೊಳ್ಳುವಂತಿಲ್ಲ—ಈ ಅಸಹಾಯ ಸ್ಥಿತಿ ಮಾಧವರಾಯನ ತಾಳ್ಮೆಗೆಡಿಸುತ್ತಿತ್ತು. ಒಮ್ಮೊಮ್ಮೆ ವಿನಾಕಾರಣ ಮಕ್ಕಳ ಮೇಲೋ ರುಕ್ಮಿಣಿಯ ಮೇಲೋ ಕೋಪಿಸಿಕೊಳ್ಳುತ್ತಿದ್ದ.

ಒಂದು ದಿನ ಕಾಫಿ ಬರಲು ಸ್ವಲ್ಪ ತಡವಾಯಿತು. ಕಾಫಿ ಸ್ವಲ್ಪ ಆರಿಯೂ ಹೋಗಿತ್ತು. ಮಾಧವರಾಯ ಕಾಫಿತಂದ ಕಮಲೂ ಮೇಲೆ ರೇಗಿ ಕಾಫಿಯನ್ನು ಹಿಂದಕ್ಕೆ ಕಳುಹಿಸಿಬಿಟ್ಟ. ಕಮಲೂ ಗೊಳೋ ಎಂದು ಅಳುತ್ತ ಬಂದು

"ಅಣ್ಣ ರೇಗುತ್ತಾರಮ್ಮ. ಇನ್ನು ಮೇಲೆ ನಾನು ಅವರಿಗೆ ಕಾಫಿ ತಿಂಡಿ ತೆಗೆದುಕೊಂಡು ಹೋಗಿ ಕೊಡುವುದಿಲ್ಲ" ಎಂದಳು.

ರುಕ್ಮಿಣಿ ಕಾಫಿಯನ್ನು ಬಿಸಿಮಾಡಿ ಕೈಗೆ ತೆಗೆದುಕೊಂಡು ತಾನೆ ಗಂಡನಿಗಿತ್ತು ಕುಡಿಸಿದಳು.ದುಡುಕಿ ಕಮಲೂವನ್ನು ಆಕ್ಷೇಪಿಸಿದುದಕ್ಕೆ ಮಾಧವರಾಯನಿಗೆ ಪಶ್ಚಾತ್ತಾಪವೂ ಆಗಿತ್ತು.

"ಕಮಲೂ ಕಾಫಿ ತಂದಿದ್ದಳು—ನಾನು ರೇಗಿಬಿಟ್ಟೆ. ಕಮಲೂ ಅಳುತ್ತಿದ್ದಾಳೆಯೇ ?"

"ಚಿಂತೆಯಿಲ್ಲ."

"ನನಗೆ ಕೆಟ್ಟ ಪಿರಚಲು ಬಂದು ಬಿಟ್ಟದೆ ರುಕ್ಮಿಣಿ. ಈಚೆಗೆ ಸುಮ್ಮಸುಮ್ಮನೆ ನಾನು ರೇಗುತ್ತಿದ್ದೆನಲ್ಲವೇ ?"

"ನೀವು ಅನುಭವಿಸಿರುವ ಯಾತನೆ ಸಾಮಾನ್ಯವಾದುದೇ ? ನಾಲ್ಕು ದಿನ ಪಿರಚಲಾಗುವುದು ಸ್ವಾಭಾವಿಕ."

"ಈ ಹಾಸಿಗೆ ಬಿಟ್ಟು ನಾನೆದ್ದು ಬಿಟ್ಟರೆ ಸಾಕು—ಎಲ್ಲಾ ಸರಿ ಹೋಗುತ್ತದೆ."

"ಅವಸರ ಪಡಬೇಡಿ. ಹಳೆಯ ನೋವು ನಿಂತು ಬಿಟ್ಟರೆ ಮುಂದೆ ತುಂಬ ಕಷ್ಟವಾಗುತ್ತದೆ. ಇಷ್ಟೇ ದಿವಸ ಕಳೆದದ್ದಾಯಿತು—ಇನ್ನು ನಾಲ್ಕಾರು ದಿವಸಗಳಲ್ಲಿ ಆಗುವುದೇನು ಹೋಗುವುದೇನು ?"

ರುಕ್ಮಿಣಿ ಅಡಿಗೆಯ ಮನೆಗೆ ಹಿಂದಿರುಗಿದಮೇಲೆ, ಮುನಿಸಿ ಕೊಂಡು ಕುಳಿತಿದ್ದ ಮಗಳನ್ನು ಹತ್ತಿರ ಕರೆದು ಕೂಡಿಸಿಕೊಂಡು

"ಕಮಲೂ" ಎಂದಳು.

ಕಮಲೂಗೆ ಕೋಪ, ಅಸಮಾಧಾನ ತುಂಬಿ ತುಳುಕುತ್ತಿತ್ತು.

"ಏನು ?"

"ಅಣ್ಣನ ಮೇಲೆ ತುಂಬ ಕೋಪ ಬಂದಿದೆಯೇ ?"

"ನೋಡಮ್ಮ....ಸುಮ್ಮಸುಮ್ಮನೆ ರೇಗುತ್ತಾರೆ."

"ಅವರು ತುಂಬ ಕಾಹಿಲೆಯಿದ್ದಾರೆ."

"ಕಾಹಿಲೆಯಿದ್ದರೆ ರೇಗಬೇಕೇನೋ ?"

"ದೇಹಕ್ಕೆ ತುಂಬ ನೋವಾದರೆ ಬೇಗ ತಾಳ್ಮೆಕೆಡುತ್ತದೆ.—ನಿನ್ನಣ್ಣನಿಗೆ ನಿನ್ನಕಂಡರೆ ಎಷ್ಟು ಪ್ರೀತಿಯಿದೆ ಗೊತ್ತಿದೆಯೇ ? ಅಣ್ಣನಮೇಲೆ ಕೋಪಮಾಡಿ ಕೊಳ್ಳಬಾರದು. ಹೋಗು—ಅವರನ್ನು ಮಾತನಾಡಿಸಿಕೊಂಡು ಬಾ."

"ನಾನು ಹೋಗಲ್ಲಮ್ಮ."

"ನೀನು ಹೋಗಿ ಮಾತನಾಡಿಸಿಕೊಂಡು ಬರದಿದ್ದರೆ ನಾನೂ ನಿನ್ನ ಮಾತನಾಡಿಸುವುದಿಲ್ಲ. ನಾರಾಯಣಸ್ವಾಮಿ ಹಾಗೆ ನಿನಗೆ ಕೆಟ್ಟ

ಹಟವಿಲ್ಲವೆಂದುಕೊಂಡಿದ್ದೆ."

ಕಮಲೂ ಸ್ವಲ್ಪಹೊತ್ತು ಸೆಟೆದುಕೊಂಡೇ ಕುಳಿತ್ತಿದ್ದಳು. ತಾಯಿ ಮನಸ್ಸು ಬದಲಾಯಿಸುತ್ತಾಳೆಂದು ನಿರೀಕ್ಷಿಸಿದಳು. ತಾಯಿಯ ನಿರ್ಧಾರ ಕಂಡು ಮೆಲ್ಲನೆ

"ಹೋಗಲೇಬೇಕೇನಮ್ಮ"

ರುಕ್ಮಿಣಮ್ಮ ಉತ್ತರಕೊಡಲಿಲ್ಲ.

ಕಮಲೂ ಮೆಲ್ಲನೆದ್ದು ಮಾಧವರಾಯನ ರೂಮಿನ ಬಳಿಗೆ ಹೋಗಿ ನಿಂತಳು.

"ಬಾ ಕಮಲೂ" ಎಂದು ಕರೆದ.

ಹುಬ್ಬಗಂಟಿಕ್ಕಿಕೊಂಡೇ ಕಮಲೂ ಮಾಧವರಾಯನ ಮುಂದೆ ನಿಂತಳು. ಮಗಳನ್ನು ನೋಡಿ ಮಾಧವರಾಯ ನಸುನಕ್ಕು

"ದುರ್ಯೋಧನನ ತಂಗಿ ಕಣೇನೀನು – ಅಬ್ಬಬ್ಬಾ, ಎಷ್ಟು ಮರ್ಯಾದೆ – ಎಷ್ಟು ಗಾಂಭೀರ್ಯ – ಎಂಥ ಆತ್ಮಾಭಿಮಾನ. ಆಡಿಕೋ ಹೋಗು–ಮಾತುಮಾತಿಗೆ ಕೋಪಮಾಡಿಕೊಳ್ಳಬಾರದಮ್ಮ." ಎಂದು ಪ್ರೀತಿಯಿಂದ ಮಗಳ ಗಲ್ಲ ನೇವರಿಸಿದ. ತಾನು ಮಾಡಿದ ತಪ್ಪಿನ ಕಲ್ಪನೆ ಕಮಲನಿಗೆ ಬಂದು ಕಣ್ಣಲ್ಲಿ ನೀರು ತುಂಬಿತು.

"ತಪ್ಪಾಯಿತು ಅಣ್ಣಾ" ಎಂದು ಬಿಟ್ಟು ಅಲ್ಲಿಂದ ಜಿಗಿದಳು.

ಮಾಧವರಾಯನ ಕಾಲು ಪೂರ್ವಸ್ಥಿತಿಗೆ ಬರದಿದ್ದರೂ ಉಪಯೋಗಿಸಲಾಗದಷ್ಟು ನಿಷ್ಪ್ರಯೋಜಕವಾಗಲಿಲ್ಲ. ಒಂದು ತಿಂಗಳ ಮೇಲೆ ಮೆಲ್ಲನೆ ಕೋರ್ಟಿಗೆ ಹೋಗಿಬರಲಾರಂಭಿಸಿದ.

ಅಪಘಾತದ ಬೆನ್ನಿನಲ್ಲಿಯೇ ಮಾಧವರಾಯನ ಪ್ರಾಕ್ಟೀಸೂ ಸುಧಾರಿಸಲಾರಂಭಿಸಿತು. ದೊಡ್ಡ ದೊಡ್ಡ ಕಕ್ಷಿಗಾರರು ಮೊದಲು ಮಾಧವರಾಯನಲ್ಲಿ ಬರತೊಡಗಿದರು. ಅವನ ಸಂಪಾದನೆ ದಿನ ದಿನಕ್ಕೆ ಹೆಚ್ಚುತ್ತ ಹೋಯಿತು.

ಕಮಲನಿಗೆ ಗಂಡು ಗೊತ್ತಾಗಲಿಲ್ಲವೆಂದು ಗೋದಮ್ಮ ಒಂದೇ ಸಮನಾಗಿ ಚಡಪಡಿಸತೊಡಗಿದರು. ಮಾಧವರಾಯ ಆಗಾಗ್ಗೆ

ಪುರುಸತ್ತುಮಾಡಿಕೊಂಡು 'ವರಾನ್ವೇಷಣೆ' ಮಾಡಲಾರಂಭಿಸಿದ. ಯಾವದೂ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ.

ಒಂದು ಸಲ ರಾಮಣ್ಣಾಚಾರ್ಯರನ್ನು ಕಾಣಲು ಹೋಗಿದ್ದಾಗ, ಆಚಾರ್ಯರು

"ತುಂಬ ಯೋಚನೆ ಮಾಡುತ್ತಿರುವ ಹಾಗಿದೆ. ಏನು ವಿಷಯ ಮಾಧವರಾಯರೇ ?" ಎಂದು ಕೇಳಿದರು.

ಮಾಧವರಾಯ ತನ್ನ 'ವರಾನ್ವೇಷಣೆ'ಯ ವಿಷಯ ತಿಳಿಸಿ

"ಈವರ್ಷ ಮದುವೆ ಮಾಡಿಯೇ ಬಿಡಬೇಕೆಂದು ಅಮ್ಮ ಹಟ ಹಿಡಿದಿದ್ದಾಳೆ. ನಮ್ಮ ಜನಗಳಲ್ಲಿ ವರ ಸಿಕ್ಕುವುದೇ ದುರ್ಲಭವಾಗಿದೆ ಆಚಾರ್ಯರೇ ?"

"ದೊಡ್ಡವರ ಮನೆಯ ಮಕ್ಕಳನ್ನು ತಂದುಕೊಳ್ಳುವುದಕ್ಕೆ ಬಡವರು ಹೆದರುತ್ತಾರೆ ಸ್ವಾಮಿ."

"ನಮ್ಮ ಮನೆ ವಿಷಯ ನಿಮಗೆ ಗೊತ್ತೇ ಇದೆಯಲ್ಲಾ ಆಚಾರ್ಯರೇ. ಅನುಕೂಲವಿದೆಯೆಂದು ನಾವು ಮಕ್ಕಳನ್ನು ಅತಿ ಮುದ್ದುಮಾಡಿ ಕೆಡಿಸುವುದಕ್ಕೆ ಹೋಗಿಲ್ಲ. ನಾನು ಹುಟ್ಟಿದ್ದು ಬಡತನ ದಲ್ಲಿ–ಬೆಳೆದದ್ದು ಬಡತನದಲ್ಲಿ. ಈಗ ದೇವರು ಕಣ್ಣುಬಿಟ್ಟು ನೋಡಿದ್ದಾ ನೆಂದು ಅಹಂಕಾರಪಡಲೇ? ಈ ಸಂಪತ್ತು ಸ್ಥಿರವಲ್ಲವೆಂದು ನನಗೆ ಗೊತ್ತಿಲ್ಲವೇ ?"

"ತಮ್ಮ ಮನೆಯ ವಿಷಯ ನನಗೆ ಗೊತ್ತಿಲ್ಲವೇ ಮಾಧವರಾಯರೇ. ತಮ್ಮ ಮಗಳ ಕೈ ಹಿಡಿಯುವವನು ಅಪಾರ ಪುಣ್ಯಶಾಲಿಯಾಗಿರ ಬೇಕು–ಯೋಚನೆಮಾಡಬೇಡಿ. ಯೋಗ್ಯನಾದ ವರನೇ ಸಿಕ್ಕುತ್ತಾನೆ."

"ದೊಡ್ಡವರು ತಮ್ಮ ಆಶೀರ್ವಾದ. ಈ ಕನ್ಯಾಸೆರೆಯಿಂದ ನನ್ನ ಬಿಡುಗಡೆ ಮಾಡಿ ಪುಣ್ಯಕಟ್ಟಿಕೊಳ್ಳಬೇಕು ಆಚಾರ್ಯರೇ."

"ನನ್ನ ದೃಷ್ಟಿಯಲ್ಲಿ ಒಬ್ಬ ವರ ಇದ್ದಾನೆ. ತಾವೇನು ಹೇಳುವಿರೋ ಎಂದು ಅವನ ವಿಷಯ ನಾನೆತ್ತಲಿಲ್ಲ. ಹುಡುಗ ಎಲ್ಲ ವಿಷಯದಲ್ಲಿಯೂ ಯೋಗ್ಯ."

"ಏನು ಮಾಡುತ್ತಿದ್ದಾನೆ."

"ಅವನ ಚರಿತ್ರೆಯನ್ನೇ ಹೇಳಿಬಿಡುತ್ತೇನೆ. ಹುಡುಗ ಅನಾಥ. ಭಿಕ್ಷಾನ್ನ, ವಾರಾನ್ನ ಮಾಡಿಕೊಂಡು ಓದಿದ. ಹೈಸ್ಕೂಲು ಹಾಗೂ ಹೀಗೂ ಮುಗಿಸಿದ. ಮುಂದೆ ಕಾಲೇಜ್ ಸೇರಬೇಕಾಗಿ ಬಂತು. ಸ್ವಪ್ರಯತ್ನದಿಂದ ಅನಾಥಾಲಯದಲ್ಲಿ ಸೀಟು ದೊರಕಿಸಿಕೊಂಡು, ಒಂದೆರಡು ಪಾಠವಿಟ್ಟುಕೊಂಡು ಓದು ಮುಂದುವರಿಸಿ ಬಿ. ಎ. ಪಾಸ್ ಮಾಡಿದ. ಮುಂದೆ ಎಂ. ಎ. ಪ್ಯಾಸೂ ಮಾಡಿದ. ಪ್ರತಿಯೊಂದು ಪರೀಕ್ಷೆಯಲ್ಲಿಯೂ ಮೊದಲನೆಯ ಅಥವಾ ಎರಡನೆಯ ತರಗತಿಯಲ್ಲಿ ತೇರ್ಗಡೆಯಾಗುತ್ತಾ ಬಂದಿದ್ದಾನೆ."

"ಈಗ ಏನು ಮಾಡುತ್ತಿದ್ದಾನೆ."

"ಎಂ.ಎ.ಯಲ್ಲಿಯೂ ರ್‍ಯಾಂಕು ಬಂತು. ಇದೇ ಊರಿನ ಕಾಲೇಜಿನಲ್ಲಿ ಇಂಗ್ಲೀಷ್ ಉಪಾಧ್ಯಾಯನಾಗಿದ್ದಾನೆ. ಹುಡುಗನ ನಡತೆ, ಗುಣದ ವಿಷಯದಲ್ಲಿ ತಾವು ವಿಚಾರಮಾಡಬೇಕಾದ ಅಗತ್ಯವಿಲ್ಲ. ಆದರೆ ಆಸ್ತಿಯಿಲ್ಲ, ಬಂಧು ಬಾಂಧವರಿಲ್ಲ—ಅನಾಥ ಹುಡುಗ ತಮ್ಮ ಸಂಬಂಧಕ್ಕೆ ಸರಿಹೋಗಬಹುದೇ ಎಂದು ಯೋಚಿಸುತ್ತಿದ್ದೆ."

"ಒಳ್ಳೆಯ ನಡತೆ–ಒಳ್ಳೆಯ ಗುಣಕ್ಕಿಂತ ದೊಡ್ಡ ಆಸ್ತಿಯಾವದು ಆಚಾರ್ಯರೇ, ತಾವು ಹುಡುಗನನ್ನು ಕರೆಸಿದರೆ ನೋಡಿದ್ದಾಗುತ್ತದೆ. ಆತನ ಹೆಸರು ಏನೆಂದಿರಿ ?"

"ಗೋವಿಂದರಾವ್ ಎಂದು. ತಮಗೆ ಸಂಜೆ ಪುರಸತ್ತಿದೆಯೇನು?"

"ಏಕೆ ?"

"ತಮಗೆ ಪುರಸತ್ತಿದ್ದರೆ ಸಂಜೆಗೆ ಹುಡುಗನನ್ನು ಬರಮಾಡುತ್ತೇನೆ."

"ಆಗಬಹುದು. ನಮ್ಮ ಕಮಲೂ ಮದುವೆಯ ಜತೆಯಲ್ಲಿ ನಾರಾಯಣಸ್ವಾಮಿ ಬ್ರಹ್ಮೋಪದೇಶವೂ ಮುಗಿಸಬೇಕಾಗಿದೆ."

"ಬಹಳ ಸಂತೋಷ."

ಸಂಜೆ ಮಾಧವರಾಯ ಬರುವ ವೇಳೆಗೇ ರಾಮಣ್ಣಾಚಾರ್ಯರು

ಗೋವಿಂದರಾಯನನ್ನು ಬರಮಾಡಿಕೊಂಡಿದ್ದರು. ಪರಿಚಯದ ಕೆಲಸ ಮುಗಿದ ಮೇಲೆ ಮಾಧವರಾಯ

"ಯಾವ ಕಾಲೇಜಿನಲ್ಲಿದ್ದೀರಿ?" ಎಂದು ಕೇಳಿದ.

"ಸೇಂಟ್ ಫಿಲೋಮೇನಾ ಕಾಲೇಜಿನಲ್ಲಿದ್ದೇನೆ."

"ಮನೆ ಮಾಡಿರುವಿರಾ?"

"ಇಲ್ಲ. ನನ್ನ ಸ್ನೇಹಿತರ ರೂಮಿನಲ್ಲಿದ್ದೇನೆ."

"ಊಟ."

"ಹೊಟೇಲು."

"ಆಚಾರ್ಯರು ನಾನು ಬಂದಿರುವ ವಿಷಯ ತಿಳಿಸಿರಬಹುದು."

"ಸೂಕ್ಷ್ಮವಾಗಿ ತಿಳಿಸಿದ್ದಾರೆ."

"ನಿಮ್ಮ ಅಭಿಪ್ರಾಯವೇನು?"

"ನನ್ನೆಲ್ಲ ಪುರೋಭಿವೃದ್ಧಿಗೆ ಆಚಾರ್ಯರ ಆಶೀರ್ವಾದವೇ ಕಾರಣ. ಅವರು ಹೇಳಿದಂತೆ ಕೇಳಲು ನಾನು ಸಿದ್ಧನಾಗಿದ್ದೇನೆ."

"ಆಚಾರ್ಯರೂ ನೀವೂ ಪಟ್ಟಣಕ್ಕೆ ಬರಬೇಕಾಗುತ್ತದೆ."

"ಎಂದು ಬರೋಣ ಹೇಳಿ ಸ್ವಾಮಿ – ನಾನು ಸಿದ್ಧನಾಗಿದ್ದೇನೆ."

"ನಾಳೆ ನಾಡಿದ್ದು ಬಿಟ್ಟು ಭಾನುವಾರ ಬಂದುಬಿಟ್ಟರೆ ನನಗೂ ಕೋರ್ಟಿನ ಗಲಾಟೆ ಇರುವುದಿಲ್ಲ. ತಾವು ಬೆಳಿಗ್ಗೆಯ ಪೂಜೆ ಅಲ್ಲೇ ಮಾಡಬೇಕು ಆಚಾರ್ಯರೇ."

"ಅವಶ್ಯಕವಾಗಿ. ಕಾವೇರಿಸ್ನಾನ ಗಂಗಾಸ್ನಾನದಷ್ಟೇ ಪವಿತ್ರ. ಬೆಳಿಗ್ಗೆ ಎದ್ದವನೇ ಗೋವಿಂದನನ್ನು ಕರೆದುಕೊಂಡು ಬಂದು ಬಿಡುತ್ತೇನೆ."

ಮಾಧವರಾಯ ಮನೆಗೆ ಹಿಂದಿರುಗಿದ ಕೂಡಲೆ ತಾಯಿಯನ್ನೂ ಹೆಂಡತಿಯನ್ನೂ ಕರೆದು ಮೈಸೂರಿನಲ್ಲಿ ನಡೆದ ಮಾತುಕತೆಯನ್ನು ವಿವರಿಸಿದ. ಗೋದಮ್ಮನವರು ಸ್ವಲ್ಪ ಮೂಗೆಳೆದು

"ಗೋವಿಂದರಾಯನಿಗೆ ಬಂಧು ಬಳಗ ಯಾರೂ ಇಲ್ಲವೇ?" ಎಂದು ಕೇಳಿದರು.

"ರಾಮಣ್ಣಾಚಾರ್ಯರೇ ಎಲ್ಲ ಬಂಧುಬಳಗ."

"ಇನ್ನೂ ಸ್ವಲ್ಪ ಒಳ್ಳೆಯ ಕಡೆ ನೋಡಬಾರದಾಗಿತ್ತೇ ಮಾಧೂ."

ರುಕ್ಮಿಣಿ ಮಧ್ಯೆ ಬಾಯಿ ಹಾಕಿ

"ಭಾನುವಾರ ಬರುತ್ತಾರಲ್ಲ ಬರಲಿ ನೋಡೋಣ. ಒಪ್ಪಿಗೆಯಾದರೆ ಸರಿ – ಆಗದಿದ್ದರೆ ಬೇರೆ ಕಡೆ ನೋಡಿದರಾಯಿತು." ಎಂದಳು.

ಭಾನುವಾರ ಬೆಳಿಗ್ಗೆಯ ಗಾಡಿಗೇ ಆಚಾರ್ಯರು ಗೋವಿಂದರಾಯನ ಜತೆಯಲ್ಲಿ ಪಟ್ಟಣಕ್ಕೆ ಬಂದರು. ಮನೆ ತಲುಪಿದ ಕೂಡಲೆ ಆಚಾರ್ಯರು ಸ್ನಾನಕ್ಕೆ ಹೋದರು. ಮಾಧವರಾಯ ಗೋವಿಂದರಾಯನಿಗೆ ಉಪಾಹಾರ ತರಿಸಿಕೊಟ್ಟು ಮಾತನಾಡಿಸುತ್ತಾ ಕುಳಿತುಕೊಂಡ. ಅವರು ಮಾತನಾಡುತ್ತ ಕುಳಿತಿದ್ದಂತೆ ಮನೆಯವರು ಒಬ್ಬೊಬ್ಬರಾಗಿ ಮೆಲ್ಲನೆ ನೋಡಿ ಹೋದರು.

ಭಾನುವಾರದ ಕ್ರಮದಂತೆ ಜವರೇಗೌಡರು, ಷರೀಫ್ ಸಾಹೇಬರು, ರಂಗಯ್ಯನವರು, ಡಾ. ಸುಂದರಂ ಬಂದರು. ಅವರೆಲ್ಲರಿಗೂ ಗೋವಿಂದರಾಯನ ಪರಿಚಯ ಮಾಡಿಕೊಟ್ಟದ್ದೂ ಆಯಿತು. ಗೆಳೆಯರು ಮಾಧವರಾಯನೊಂದಿಗೆ ಸ್ವಲ್ಪ ಹೊತ್ತು ಹರಟೆಕೊಚ್ಚುತ್ತ ಕುಳಿತಿದ್ದು, ಕಾಫಿ ಕುಡಿದು ಹೋದರು.

ಆಚಾರ್ಯರು ಸ್ನಾನ ಮುಗಿಸಿಕೊಂಡು ಬಂದು ಪೂಜೆಗೆ ಕುಳಿತರು.

ಅವರ ಪೂಜೆ ಮುಗಿಯುವಷ್ಟರಲ್ಲಿ ಎಲೆ ಹಾಕಲಾಗಿತ್ತು. ಎಲ್ಲರಿಗೂ ಸುಗ್ರಾಸಭೋಜನವಾಯಿತು.

ಗೋದಮ್ಮ, ರುಕ್ಮಿಣಿಯರ ಊಟ ಮುಗಿದ ಮೇಲೆ ಎಲ್ಲರೂ ತೊಟ್ಟಿಯಲ್ಲಿ ಸೇರಿದರು. ರುಕ್ಮಿಣಮ್ಮ ಮಗಳನ್ನು ಹತ್ತಿರ ಕರೆದು ಕೂಡಿಸಿಕೊಂಡರು.

ಆಚಾರ್ಯರೇ ವಿಶ್ವಾಸಪೂರ್ವಕವಾಗಿ

"ಒಂದು ಹಾಡು ಹೇಳೇ ತಾಯಿ" ಎಂದರು.

ಕಮಲೂ ಒಂದೆರಡು ಹಾಡು ಹೇಳಿದಳು.

ವಧೂವರರು ಪರಸ್ಪರ ನೋಡಿದ್ದು ಆಯಿತು.

ಮಾಧವರಾಯ ಆಚಾರ್ಯರಿಗೆ

"ನಾನು ತಿಳಿಸುತ್ತೇನೆ ಆಚಾರ್ರೆ." ಎಂದು ಹೇಳಿದ.

ಸಂಜೆಯ ಲೋಕಲ್ ಗಾಡಿಗೆ ಆಚಾರ್ಯರು ತಾಂಬೂಲ ಸ್ವೀಕರಿಸಿ ಗೋವಿಂದರಾಯನೊಂದಿಗೆ ಮೈಸೂರಿಗೆ ಪ್ರಯಾಣಬೆಳೆಸಿದರು.

ಮನೆಯಲ್ಲಿ ಜಿಜ್ಞಾಸೆಯಾರಂಭವಾಗಿತ್ತು.

ಮಾಧವರಾಯ ತನ್ನ ಗೆಳೆಯರ ಸಲಹೆಯನ್ನು ಕೇಳಿದ.

"ಸ್ವಲ್ಪ ಅನುಕೂಲವಾದ ಸಂಬಂಧವಾಗಿದ್ದರೆ ಚೆನ್ನಾಗಿತ್ತು."

ಎಂದು ಗೌಡರು ವ್ಯಕ್ತಪಡಿಸಿದರು.

"ಹುಡುಗ ತುಂಬ ಗಂಭೀರಸ್ಥನ ಹಾಗೆ ಕಾಣುತ್ತಾನೆ ಸಾರ್"

ಎಂದು ಷರೀಫ್ ಸಾಹೇಬರು ಅಭಿಪ್ರಾಯಪಟ್ಟರು.

"ಲಗ್ನದ ಮಾತು ಋಣಾನುಬಂಧ ಅದೃಷ್ಟ ಅವಲಂಬಿಸಿದ್ದು" ಎಂದು ಡಾಕ್ಟರ್ ಸುಂದರಂ ಸೂಚಿಸಿ.

"ಮನೆಯವರು ಏನು ಹೇಳಿದರು ಸರ್." ಎಂದರು.

"ಅವರೂ ವಿಚಾರ ಮಾಡುತ್ತಿದ್ದಾರೆ. ಇನ್ನೂ ನಿರ್ಧಾರಕ್ಕೆ ಬಂದಿಲ್ಲ."

"ಸುಮ್ಮನೆ ಮೀನಾಮೇಷ ಎಣಿಸಿ ಪ್ರಯೋಜನವಿಲ್ಲ ಸಾರ್, ಹುಡುಗಿಯ ಅಭಿಪ್ರಾಯ ಕೇಳಿ-ಹುಡುಗನ ಅಭಿಪ್ರಾಯ ಕೇಳಿ. ಇಬ್ಬರಿಗೂ ಮನಸ್ಸಿದ್ದರೆ ದೇವರ ಮೇಲೆ ಭಾರ ಹಾಕಿ ಮದುವೆ ಮಾಡಿಬಿಡಿ"

ಎಂದು ಡಾಕ್ಟರ್ ಸುಂದರಂ ಹೇಳಿದರು. ಅವರ ಮಾತನ್ನು ಎಲ್ಲರೂ ಅನುಮೋದಿಸಿದರು,

ಮೂರು ದಿವಸ ಸತತವಾಗಿ ಜಿಜ್ಞಾಸೆ ಸಾಗಿತು. ನಾಲ್ಕನೆಯ ದಿನ ಮಾಧವರಾಯ ಹೆಂಡತಿಯನ್ನು ಕರೆದು ಡಾಕ್ಟರ್ ಸುಂದರಂ ಅವರು ಕೊಟ್ಟಿದ್ದ ಸೂಚನೆ ತಿಳಿಸಿ

"ಕಮಲೂ ಏನು ಹೇಳುತ್ತಾಳೆ." ಎಂದು ಕೇಳಿದ.

"ಅವಳಿಗೆ ಮನಸ್ಸಿರುವ ಹಾಗಿದೆ."

"ಸ್ಪಷ್ಟವಾಗಿ ಕೇಳಿ ನೋಡು."

"ಹೆಣ್ಣುಮಕ್ಕಳು ಸ್ಪಷ್ಟವಾಗಿ ಬಾಯಿಬಿಟ್ಟು ಹೇಳುತ್ತಾರೆಯೇ?"

"ಮುಂದೆ ನಾನೇನು ಮಾಡಲಿ."

"ಅಮ್ಮನನ್ನು ಕೇಳಿಬಿಡಿ. ಅವರು ಆಗಬಹುದೆಂದರೆ ನನ್ನ ಅಭ್ಯಂತರವೇನೂ ಇಲ್ಲ."

ಗೋದಮ್ಮನವರೂ ವಿಚಾರಗೋಷ್ಠಿಗೆ ಬರಬೇಕಾಯಿತು.

"ಈಗಾಗಲೇ ಮೂರುದಿವಸವಾಯಿತಮ್ಮ. ಆಚಾರ್ಯರಿಗೆ ಏನಾದರೂ ಸ್ಪಷ್ಟವಾಗಿ ನಾನು ಹೇಳಬೇಕು ಏನು ಹೇಳಲಿ?"

"ಹುಡುಗ ಎಲ್ಲ ರೀತಿಯಲ್ಲಿಯೂ ಅಣಿಯಾಗಿದ್ದಾನೆ ಮಾಧೂ-ವರಸಾಮ್ಯವೂ ಚೆನ್ನಾಗಿದೆ. ಅವನ ಮಾತುಕತೆ ನೋಡಿದರೆ ತುಂಬ ಗಂಭೀರಸ್ಥನೆಂದು ಕಾಣುತ್ತಾನೆ. ಆದರೆ........"

"ಆದರೆ........?"

"ಯಾರೂ ಇಲ್ಲದ ಮನೆಯಲ್ಲ ಎಂಬುದೊಂದೇ ಯೋಚನೆ."

"ಮನೆಮಠ ಎಲ್ಲಾ ನೇರವಾಗಿದ್ದು ಹುಡುಗನೇ ಐಬಾಗಿದ್ದರೆ ಏನು ಮಾಡುವುದಮ್ಮ?"

"ಅದೂ ನ್ಯಾಯವೇ? ಗಂಡಹೆಂಡತಿ ಅನ್ಯೋನ್ಯವಾಗಿರುವುದು ಮುಖ್ಯ. ಕಮಲೂಗೆ ನಾಲ್ಕು ದಿನ ಕಷ್ಟವಾಗುತ್ತದೆ. ರೂಢಿಯಾದ ಮೇಲೆ ಎಲ್ಲಾ ತಾನೆ ಸರಿಹೋಗುತ್ತದೆ. ಸುಮ್ಮನೆ ಯೋಚನೆಮಾಡಿ ಪ್ರಯೋಜನವಿಲ್ಲ ಮಾಧೂ – ದೇವರ ಮುಂದೆ ಚೀಟಿ ಹಾಕೋಣ-ಚೀಟಿಯಲ್ಲಿ ಹೇಗೆ ಬರುತ್ತದೋ ಹಾಗೆ ಮಾಡೋಣ" ಎಂದರು.

ಗೋದಮ್ಮನವರ ನಿರ್ಧಾರ ಎಲ್ಲರಿಗೂ ಸಮಂಜಸವಾಗಿ ಕಂಡು ಬಂದಿತು.

ಅಂದೇ ದೇವರಿಗೆ ಪೂಜೆಮಾಡಿ ಚೀಟಿಹಾಕಿ ಪದ್ಮನ ಕೈಯಲ್ಲಿ ಎತ್ತಿಸಲಾಯಿತು. ಶುಭಪ್ರದವಾದ ಉತ್ತರಬಂದು ಸಮಸ್ಯೆ ಬಗೆಹರಿಯಿತು.

ಜಾತಕ ನೋಡಿಸುವ ಪ್ರಕರಣವೂ ಮುಗಿಯಿತು. ಜೋತಿಷ್ಕರು ಧೂವರರ ಮೈತ್ರಿಯನ್ನು ಹಾಡಿ ಹೊಗಳಿದರು. ಮಾಧವರಾಯ ಮಣ್ಣಾಚಾರ್ಯರಿಗೆ ಕಾಗದ ಬರೆದು ಒಪ್ಪಿಗೆ ಸೂಚಿಸಿದ.

ಅದೇ ವೈಶಾಖಮಾಸದಲ್ಲಿ ಗೋವಿಂದರಾವ್, ಕಮಲಮ್ಮನ ವಾಹ ಗುರುಹಿರಿಯರ ಪ್ರೇರಣೆಯಿಂದ ಪಟ್ಟಣದಲ್ಲಿ ಯಶಸ್ವಿಯಾಗಿ ಂಭ್ರಮದಿಂದ ನೆರವೇರಿತು.

ಗೋವಿಂದರಾಯನ ಸಮಸ್ತ ಹಿತ ಮಾಧವರಾಯನಿಗೆ ಗಂಟು ದ್ದಂತಾಯಿತು. ಪ್ರಸ್ತುದ ಶಾಸ್ತ್ರ ಮುಗಿಸಿದಮೇಲೆ ಮಾಧವರಾಯ ೈಸೂರಿಗೆ ಹೋಗಿ ಮನೆಮಾಡಿ, ಅಳಿಯ ಮಗಳಿಗೆ ಸಂಸಾರಕ್ಕೆ ೇಕಾಗುವ ಎಲ್ಲ ವ್ಯವಸ್ಥೆಮಾಡಿಕೊಡುವುದೆಂದು ಇತ್ಯರ್ಥವಾಯಿತು.

ನಾಲ್ಕಾರು ತಿಂಗಳು ಕಮಲನ ಜತೆಯಲ್ಲಿದ್ದು ಅವಳಿಗೆ ಮಾರ್ಗ ರ್ಶನಮಾಡಲು ಗೋದಮ್ಮನವರು ಒಪ್ಪಿಕೊಂಡರು.

ಮನಸ್ಸಿನ ದೊಡ್ಡ ಹೊರೆ ಇಳಿಯಿತೆಂದು ಮಾಧವರಾಯ ಂತಸಗೊಂಡ. ಗೃಹಕೃತ್ಯದ ಒಂದು ಸಮಸ್ಯೆ ತೃಪ್ತಿಕರವಾಗಿ ಬಗೆ ರಿಯಿತೆಂದು ಅವನು ಆನಂದಿಸುತ್ತಿರುವಲ್ಲಿ ಮತ್ತೊಂದು ಸಮಸ್ಯೆ ಲೆಯೆತ್ತಿಕೊಂಡಿತು.

೩೧

೧೭೯೯ ಮೈಸೂರಿನ ಇತಿಹಾಸದಲ್ಲಿ ಮಹತ್ವದ ವರ್ಷ. ಅದ
ವರ್ಷ ಮೈಸೂರು ಹುಲಿ ಟಿಪ್ಪುಸುಲ್ತಾನ್ ಬ್ರಿಟಿಷರ ಮೇಲೆ ಯು
ಮಾಡುತ್ತ ವೀರಸ್ವರ್ಗವನ್ನು ಸೇರಿದ. ಟಿಪ್ಪುವಿನ ಮರಣಾನಂತ
ಬ್ರಿಟಿಷರು ಶ್ರೀರಂಗಪಟ್ಟಣವನ್ನು ಸೂರೆಹೊಡೆದು ಅಲ್ಲಿದ್ದ ಸಕ
ಸಂಪತ್ತನ್ನೂ ದೋಚಿದರು. ಜನತೆಗೆ ಟಿಪ್ಪುವಿನ ನೆನಪೂಬಾರದಂ
ಅರಮನೆ, ಕೋಟೆಕೊತ್ತಲುಗಳನ್ನು ನಾಶಮಾಡಿದರು. ಟಿಪ್ಪುವಿ
ರಾಜಧಾನಿಯಾಗಿ ವೈಭವಯುತವಾಗಿ ಮೆರೆಯುತ್ತಿದ್ದ ಪಟ್ಟಣ ರು
ಭೂಮಿಯಾಯಿತು. ರೋಗ ರುಜಿನಾದಿಗಳ ಬಾಧೆಯೂ ಹೆ
ತೊಡಗಿತು. ಶ್ರೀರಂಗಪಟ್ಟಣದ ನಿವಾಸಿಗಳನೇಕರು ಮೈಸೂರ
ಬೆಂಗಳೂರು ಸೇರಿದರು. ವಿಧಿಯಿಲ್ಲದೆ ಕೆಲವು ಕೃಷೀವಲರು, ವ್ಯಾಪಾ
ಗಳು, ಸರ್ಕಾರಿ ನೌಕರರು ಶ್ರೀರಂಗಪಟ್ಟಣದಲ್ಲಿಯೇ ಉಳಿ
ಕೊಂಡರು.

ಶ್ರೀರಂಗಪಟ್ಟಣದ ಪತನದ ತರುವಾಯ ಬೆಳೆದ ನಗರಗಳ
ಮಂಡ್ಯವೂ ಒಂದು. ಕಾಲಕ್ರಮೇಣ ಮಂಡ್ಯದಲ್ಲಿ ದೊಡ್ಡ ಸಕ್ಕ
ಕಾರ್ಖಾನೆ ಸ್ಥಾಪನೆಯಾಗಿ ಅದರ ಪ್ರಾಶಸ್ತ್ಯ ಹೆಚ್ಚಿತು. ಸಕ್ಕ
ಕಾರ್ಖಾನೆ ಕೂಲಿಗಾರ, ಬಂಡವಳಿಗ; ಕೂಲಿಕಾರ, ಕೃಷೀವಲ ಸಮು
ಗಳಿಗೆ ಬುನಾದಿಹಾಕಿತು. ಆಡಳಿತವರ್ಗ ಮಂಡ್ಯದ ಬಗ್ಗೆ ಹೆಚ್ಚು ಲಕ್ಷ

ಕೊಡಬೇಕಾದುದು ಅನಿವಾರ್ಯವಾಯಿತು. ಮಂಡ್ಯಕ್ಕೆ ಜಿಲ್ಲೆಯ ಸ್ಥಾನಸಿಕ್ಕಿ, ಅಲ್ಲಿಯೇ ಒಂದು ಜಿಲ್ಲಾ ನ್ಯಾಯಸ್ಥಾನವೂ ಏರ್ಪಾ ಡಾಯಿತು. ಮಂಡ್ಯದಲ್ಲಿ ಜಿಲ್ಲಾ ನ್ಯಾಯಸ್ಥಾನ ವ್ಯವಸ್ಥೆಯಾದ ಮೇಲೆ ಶ್ರೀರಂಗಪಟ್ಟಣದಲ್ಲಿದ್ದ ಮುನಸೀಫ್ ಕೋರ್ಟನ್ನು ಅಲ್ಲಿಗೇ ವರ್ಗಾ ಯಿಸಲು ಸರ್ಕಾರ ನಿರ್ಧರಿಸಿತು.

ಶ್ರೀರಂಗಪಟ್ಟಣದಲ್ಲಿ ವಕೀಲಿ ವೃತ್ತಿಯನ್ನವಲಂಬಿಸಿದವರಿಗೆ ಮುನಸೀಫ್ ಕೋರ್ಟಿನ ಬದಲಾವಣೆ ಪ್ರಬಲ ಸಮಸ್ಯೆಯನ್ನು ತಂದೊಡ್ಡಿತು. ಸರ್ಕಾರದ ನಿರ್ಧಾರವನ್ನು ಬದಲಾಯಿಸಲು ಶ್ರೀರಂಗ ಪಟ್ಟಣದ ಜನ ಪ್ರಯತ್ನಿಸಿ ವಿಫಲರಾದರು.

ಶ್ರೀರಂಗಪಟ್ಟಣದ ವಕೀಲರು ಗಂಟುಮೂಟೆ ಕಟ್ಟದೆ ಗತ್ಯಂತರವೇ ಉಳಿಯಲಿಲ್ಲ.

ಮಾಧವರಾಯನಿಗೂ 'ಮುಂದೇನು?' ಎನ್ನುವ ಯೋಚನೆ ಆರಂಭವಾಯಿತು. 'ಮಂಡ್ಯಕ್ಕೆ ಹೋಗಿ ನಿಲ್ಲುವುದೇ ವಿಹಿತ' ಎಂದು ಜವರೇಗೌಡರು ಸಲಹೆಯಿತ್ತರು. 'ಪಟ್ಟಣದಲ್ಲಿಯೇ ಇದ್ದುಕೊಂಡು ನಿತ್ಯ ಮಂಡ್ಯಕ್ಕೇಕೆ ಹೋಗಿಬರಬಾರದು' ಎಂದು ಡಾ. ಸುಂದರಂ ಸೂಚಿಸಿದರು. 'ಜಿಲ್ಲಾ ಕಛೇರಿ ಮಂಡ್ಯದಲ್ಲಿರುವಾಗ ಮಾಧವರಾಯರು ಪಟ್ಟಣದಲ್ಲಿ ನಿಂತರೇನು ಪ್ರಯೋಜನ. ಸ್ಥಾನಮಾನ ಸಂರಕ್ಷಣೆಗಾದರೂ ಮಂಡ್ಯಕ್ಕೆ ಹೋಗುವುದು ಒಳ್ಳೆಯದು' ಎಂದು ರಂಗಯ್ಯನವರು ಅಭಿಪ್ರಾಯಪಟ್ಟರು.

ಮಂಡ್ಯಕ್ಕೆ ಹೋದರೆ ಮಾಧವರಾಯ ಹೊಸದಾಗಿ ಜೀವನ ಆರಂಭಿಸಬೇಕಾಗಿತ್ತು. ಆಫೀಸು, ಮನೆ, ಕಕ್ಷಿಗಾರರ ವರ್ಗವೆಲ್ಲವನ್ನು ಹೊಸದಾಗಿ ಸ್ಥಾಪಿಸಿಕೊಳ್ಳಬೇಕಾಗಿತ್ತು.

ಮಾಧವರಾಯ ಹಿತೈಷಿಗಳಾದ ಮಿತ್ರರ ಸಲಹೆ ಕೇಳಿ ಒಂದು ನಿರ್ಧಾರಕ್ಕೆ ಬಂದ. 'ಪಟ್ಟಣದ ಆಫೀಸು ಮುಂದೆಯೂ ನಡೆದುಕೊಂಡು ಹೋಗಬೇಕು. ಪಟ್ಟಣದ ಆಫೀಸನ್ನು ಜೂನಿಯ ರಾಗಿದ್ದ ಶೇಷಪ್ಪನವರ ವಶಕ್ಕೆ ಬಿಟ್ಟು ತಾನು ಸಂಸಾರಸಮೇತನಾಗಿ

ಮಂಡ್ಯಕ್ಕೆ ಹೋಗಿ ನೆಲಸುವುದು.'

ಮಂಡ್ಯದ ಹೊಸ ವಿಸ್ತರಣದಲ್ಲಿ ಐವತ್ತು ರೂಪಾಯಿಗೆ ಒಂದ ಮನೆ ಬಾಡಿಗೆಗೆ ಗೊತ್ತುಮಾಡಿಕೊಂಡು ಮಾಧವರಾಯ ಸಂಸಾ ಸಮೇತವಾಗಿ ಮಂಡ್ಯಕ್ಕೆ ಪ್ರಯಾಣ ಬೆಳಸಿದ. ಪಟ್ಟಣದ ಮನೆ ಶೇಷಪ್ಪ ಬಂದು ನಿಂತು, ಮಾಧವರಾಯನ ಕಛೇರಿ ನಡೆಸು ಜವಾಬ್ದಾರಿ ಹೊತ್ತುಕೊಂಡ.

ಮಂಡ್ಯದ ವಿಸ್ತರಣದಲ್ಲಿ ಸಿಕ್ಕಿದ್ದ ಮನೆ ಹೊಸಮನೆಯಾಗಿದ್ದರ ಪಟ್ಟಣದ ಮನೆಯಷ್ಟು ವಿಶಾಲವಾಗಿರಲಿಲ್ಲ. ಪ್ರವೇಶಮಾ ದೊಡನೆಯೇ ಒಂದು ರೂಮು, ವೆರಾಂಡ, ಒಳಗೆ ತೊಟ್ಟಿ-ತೊಟ್ಟಿಯ ಅತ್ತಿತ್ತ ನಾಲ್ಕು ರೂಮುಗಳು, ಅದರ ಒಳಗೆ ಅಡಿಗೆ ಮನೆ, ಸ್ನಾನ ಮನೆ ಇತ್ಯಾದಿ.

ತಾವು ಕಷ್ಟಪಟ್ಟು ಬೆಳೆಸಿದ್ದ ಹೂ ಗಿಡಗಳನ್ನು, ತುಳಸಿಯ ವನವನ್ನು ಬಿಟ್ಟುಹೋಗಲು ಗೋದಮ್ಮ ರುಕ್ಮಿಣಿ ದುಃಖಿಸಿದರು.

ಮಾಧವರಾಯ ಮಂಡ್ಯಕ್ಕೆ ಬಂದು ನೆಲಸಿದ ಆರು ತಿಂಗಳ 'ಕುದುರಿ' ಕೊಳ್ಳುವುದಕ್ಕೆ ವ್ಯಯವಾಯಿತು. ಜವರೇಗೌಡ ಷರೀಫ್ ಸಾಹೇಬರ ಕೇಸುಗಳು, ಅವರು ತಂದು ಕೊಡುತ್ತಿದ್ದ ಇತರ ಕೇಸುಗಳನ್ನು ಬಿಟ್ಟು ಬೇರೆ ಕೇಸುಗಳು ತಾವಾಗಿಯೇ ಬರಲಿ ಮಾಧವರಾಯನ ವರಮಾನಕ್ಕೆ ಸ್ವಲ್ಪ ಧಕ್ಕೆ ತಗುಲಿತು. ಪಟ್ಟಣ ಆಫೀಸಿನಲ್ಲಿ ಬರುತ್ತಿದ್ದುದು ಶೇಷಪ್ಪನಿಗೆ ಸಾಕಾಗುತ್ತಿತ್ತು.

ಈ ವೇಳೆಗೆ ಮಾಧವರಾಯನ ಖರ್ಚು ವೆಚ್ಚ, ಆದಾಯವನ ಮೀರಿತ್ತು. ಗೃಹನಿರ್ವಣದ ಖರ್ಚಲ್ಲದೆ, ಪೂಜೆ, ಪುರಸ್ಕಾರ, ದಾ ಧರ್ಮದ ಖರ್ಚುಗಳು. ಪ್ರತಿ ತಿಂಗಳೂ ಕಮಲೂಗೆ ಕಳಿ ಕೊಡುತ್ತಿದ್ದ ಹಣ-ಇವುಗಳ ಜತೆಗೆ ರುಕ್ಮಿಣಿಯ 'ವೈದ್ಯ ಸೇವೆ'ಯ ಖರ್ಚು.

ರುಕ್ಮಿಣಿಯ ವೈದ್ಯಜಾಣ್ಮೆಯ ಸುದ್ದಿ ಮಂಡ್ಯದಲ್ಲಿ ಹಬ್ಬಲು ತ ವಾಗಲಿಲ್ಲ. ಮಹಾಭಾರತ ಪ್ರವಚನಕ್ಕೆ ಬಂದ ರಾಮಣ್ಣಾಚಾರ್ಯ

ಇಡಿಯ ಮಂಡ್ಯಪಟ್ಟಣಕ್ಕೆ ರುಕ್ಮಿಣಿಯ 'ಹಸ್ತಗುಣ'ದ ಬಗ್ಗೆ ಡಂಗುರ ಸಾರಿದ್ದರು.

ಮಂಡ್ಯದಲ್ಲಿಯೂ ರೋಗಿಗಳ 'ಜಾತ್ರೆ' ಆರಂಭವಾಗಿತ್ತು. ರುಕ್ಮಿಣಿ ಸ್ವಲ್ಪವೂ ಬೇಸರಪಟ್ಟುಕೊಳ್ಳದೆ ತನ್ನ ಸೇವೆ ಸಾಗಿಸಿದ್ದಳು.

ಮಾಧವರಾಯ ಎರಡು ಮೂರು ದಿನಕ್ಕೊಮ್ಮೆ ಪಟ್ಟಣಕ್ಕೆ ಹೋಗಿಬರಬೇಕಾಗಿತ್ತು, ಬಸ್ಸು ರೈಲುಗಳನ್ನು ಕಾಯುತ್ತಾ ಕುಳಿತರೆ ಕೋರ್ಟಿನ ಕೆಲಸ ಹೋಗುವುದೆಂದು ಒಂದು ಬಿ.ಎಸ್.ಎ. ಮೋಟಾರ್ ಬೈಸಿಕಲ್ ಕೊಂಡುಕೊಂಡ.

ಮಂಡ್ಯದ ಕೋರ್ಟುಗಳಲ್ಲಿ ಮಾಧವರಾಯನ ಕೀರ್ತಿ ವಿಸ್ತರಿಸುವುದಕ್ಕೆ ತಡವಾಗಲಿಲ್ಲ. 'ಮಾಧವರಾಯರು ಅನ್ಯಾಯದ ಕೇಸುಗಳನ್ನು ಮುಟ್ಟುವುದಿಲ್ಲ – ದುಡ್ಡಿಗೆ ದುರಾಶೆಪಡುವುದಿಲ್ಲ – ಕಕ್ಷಿಗಾರರನ್ನು ಹಿಂಜುವುದಿಲ್ಲ' ಎಂಬ ಪ್ರತೀತಿ ಹಬ್ಬಿತ್ತು. ಮಾಧವರಾಯನ ಧರ್ಮದೃಷ್ಟಿ ಅವನಿಗೆ ಸಾರ್ವಜನಿಕರು ಹಾಗೂ ಸರ್ಕಾರದವರ ವಿಶ್ವಾಸ ದೊರಕಿಸಿಕೊಟ್ಟಿತ್ತು.

ಮಂಡ್ಯದ ಪ್ರಶಾಂತ ಸಾರ್ವಜನಿಕ ಜೀವನವನ್ನು ಆಗಾಗ್ಗೆ ಕೆಲವು ಸಂಸ್ಥೆಗಳ ಚುನಾವಣೆಗಳು ಕದಡುತ್ತಿದ್ದವು. ಬಾರ್ ಅಸೋಸಿಯೇಷನ್ನಿನ (Bar Association) ಚುನಾವಣೆ ಸಾರ್ವಜನಿಕರಿಗೆ ನೇರವಾಗಿ ಸಂಬಂಧಪಡದಿದ್ದರೂ ಅದರ ಬಗ್ಗೆ ಊರಿನಲ್ಲಿ ವಿಶೇಷ ಕೋಲಾಹಲವಾಗುತ್ತಿತ್ತು. ಪದ್ಧತಿಯಂತೆ ಆವರ್ಷವೂ ಮಂಡ್ಯದ ಹಳೆಯಹುಲಿ ವೆಂಕಣ್ಣನವರು ಬಾರ್ ಅಸೋಸಿಯೇಷನ್ನಿನ ಚುನಾವಣೆಗೆ ಸ್ಪರ್ಧಿಸಿದ್ದರು.

ವಕೀಲಿ ವೃತ್ತಿಯನ್ನು 'ಹರವೆಸೊಪ್ಪಿನ ವ್ಯಾಪಾರ' ಮಾಡಿದ ಕೀರ್ತಿ ವೆಂಕಣ್ಣನವರದಾಗಿತ್ತು. ಒಮ್ಮೆ ಅವರ ಆಫೀಸು ಮೆಟ್ಟಿದ ಕಕ್ಷಿಗಾರ ಕೇಸು ಗೆಲಿಯಲಿ ಸೋಲಲಿ ನಿರ್ಗತಿಕನಾಗಿಯೇ ಮನೆಗೆ ಹಿಂದಿರುಗುತ್ತಿದ್ದ. ಹಿಡಿದ ಕೇಸುಗಳಲ್ಲಿ ವಿಜಯಗಳಿಸುವ ಸಾಮರ್ಥ್ಯ ವೆಂಕಣ್ಣನವರಿಗೆ ಸಾಧಿಸಿದ್ದಂತೆ ಮತ್ತೆ ಯಾರಿಗೂ ಸಾಧಿಸಿರಲಿಲ್ಲ.

ನ್ಯಾಯವಾದ ಮಾರ್ಗದಲ್ಲಿ ಜಯ ಲಭಿಸದಿದ್ದರೆ ಸಾಕ್ಷಿಗಳನ್ನು ನ್ಯಾಯಾಧೀಶರನ್ನೂ, ಎದುರು ಪಕ್ಷದ ವಕೀಲರನ್ನು ಕ್ರಯಕ್ಕೆ ತೆಗೆ ಕೊಂಡಾದರೂ ವೆಂಕಣ್ಣ ಜಯಭೇರಿ ಹೊಡೆಯುತ್ತಿದ್ದರು.

ವೆಂಕಣ್ಣನವರ ರೀತಿನೀತಿ ಯಾರಿಗೂ ತೃಪ್ತಿಯನ್ನು ಕೊ ದಿದ್ದರೂ ಅವರ ವಕೀಲಿವೃತ್ತಿಗೆ ಲವಲೇಶವಾದ ಬಾಧಕವೂ ತಗುಲ ಲಿಲ್ಲ. ಇದರ ಮುಖ್ಯ ಕಾರಣವೆಂದರೆ ವೆಂಕಣ್ಣನವರಲ್ಲಿ ಬರುತ್ತಿ ಕಕ್ಷಿಗಾರರು ಬಹಳಮಟ್ಟಿಗೆ 'ಹಟಸಾಧನೆ'ಗಾಗಿಯೇ ಬರುತ್ತಿದ್ದರ ತಮ್ಮ ಮನೆ ಹಾಳಾದರೂ ಚಿಂತೆಯಿಲ್ಲ – ಎದುರಾಳಿಯನ್ನು ನಾ ಮಾಡಬೇಕು, ಅವನನ್ನು ಆರುತಿಂಗಳಾದರೂ ಸಿವಿಲ್ ಜೈಲಿಗೆ ಕಳ ಕೊಡಬೇಕು. ಅವನು ಊರಿನಲ್ಲಿ ತಲೆಯೆತ್ತದಂತೆ ಮಾಡಬೇ ಎನ್ನುವ ಕಕ್ಷಿಗಾರರ ಕೆಟ್ಟಹಟಕ್ಕೆ ವೆಂಕಣ್ಣನವರು ಇಂಬುಗೊ ಇಬ್ಬರು ಮೂರ್ಖರ ಸಮಾಧಿಯಮೇಲೆ ತಮ್ಮ ಹೂದೋಟ ಬೆಳ ತ್ತಿದ್ದರು.

ಅವರ ಸಮಕಾಲೀನರೂ, ಸಮವಯಸ್ಕರೂ ಆದ ಹಿರಿ ವಕೀಲರು ತಾತ್ಸಾರ ತಳೆದು 'ಎಲ್ಲಿಯಾದರೂ ಹೋಗಲಿ-ನಮಗೇತಕ್ಕೆ ಎನ್ನುತ್ತಿದ್ದರು. ತಾತ್ಸಾರದ ಜತೆಗೆ ಭಯವೂ ಅವರನ್ನು ವ್ಯಾಪಿಸಿತ ಯಾವ ದೌರ್ಜನ್ಯಕ್ಕೂ ಹೇಸದ ವೆಂಕಣ್ಣನವರು ತಮ್ಮನ್ನೇನು ಮಾ ಬಿಡುವರೋ ಎಂದು ಹಿರಿಯ ವಕೀಲರು ಅಂಜುತ್ತಿದ್ದರು. ಅ ತಲೆಯೆತ್ತುತ್ತಿದ್ದ ಕಿರಿಯ ವಕೀಲರು ಅತೃಪ್ತಿ ಅಸಂತೋಷದ ಬೇಗೆಯ ಬೇಯುತ್ತಿದ್ದರೂ ವೆಂಕಣ್ಣನವರನ್ನು ಪ್ರತಿಭಟಿಸಲು ಅಸಮ ರಾಗಿದ್ದರು.

ಮಾಧವರಾಯ ಮಂಡ್ಯಕ್ಕೆ ಹೋದುದು ಪಂಗುಗಳಾಗಿದ್ದ ಕಿರಿ ವಕೀಲರಿಗೆ ರೆಕ್ಕೆ ಬಂದಂತಾಯಿತು. ಮಂಡ್ಯದ ವಕೀಲವೃಂದ ಮಾಧವರಾಯ ಅಪರಿಚಿತನಾಗಿರಲಿಲ್ಲ. ಅವನ ಪರಿಚಯಕ್ಕಿ ಹೆಚ್ಚಾಗಿ ಅವನ ಕೀರ್ತಿ ವಿಸ್ತರಿಸಿತ್ತು.

ಬಾರ್ ಅಸೋಸಿಯೇಷನ್ ಚುನಾವಣೆಯ ಮುನ್ನ ಕೆಲ

ಹಿರಿಯ ವಕೀಲರು ಮಾಧವರಾಯನಲ್ಲಿ ಬಂದು, ವೆಂಕಣ್ಣನವರ ವಿರೋಧವಾಗಿ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ಪ್ರಾರ್ಥಿಸಿಕೊಂಡರು.

"ವಯೋವೃದ್ಧರೂ ಜ್ಞಾನವೃದ್ಧರೂ ಆದ ವೆಂಕಣ್ಣನವರನ್ನು ಪ್ರತಿಭಟಿಸುವುದು ಯಾವ ನ್ಯಾಯ ?"

"ಅವರು ವಯೋವೃದ್ಧರೆನ್ನುವುದು ನಿಜ – ಜ್ಞಾನವೃದ್ಧರೆಂದು ನಾವು ಒಪ್ಪಿಕೊಳ್ಳುವುದಿಲ್ಲ."

"ನಾನೂ ವಯಸ್ಸಿನಲ್ಲಿ ಚಿಕ್ಕವನು. ನಿಮಗೆ ವೆಂಕಣ್ಣನವರು ಬೇಡದಿದ್ದರೆ ಬೇರೆ ಯಾರಾದರೂ ಹಿರಿಯರನ್ನು ಆರಿಸುವುದು ಒಳ್ಳೆಯದು."

"ಅವರ ಕೈಯಲ್ಲಿ ಕೆಲಸವಾಗುವುದಿಲ್ಲ ಸರ್. ಈ ಹಿರಿಯ ಲಾಯರುಗಳು ನಮ್ಮನ್ನು ತುಳಿದು ಮೆಟ್ಟಿದ್ದಾರೆ. ನಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವವರೇ ನಮ್ಮ ಅಧ್ಯಕ್ಷರಾಗಿರಬೇಕು."

"ಸಂಘದ ಅಧ್ಯಕ್ಷನಾಗದೆಯೇ ಆ ಕೆಲಸ ನಾನು ಮಾಡಬಹುದಲ್ಲ."

"ಸ್ಥಾನಬಲದಿಂದ ಹೆಚ್ಚಿನ ಕೆಲಸಗಳಾಗುತ್ತವೆ ಸರ್. ನೋಡಿ ದೃಷ್ಟಾಂತಕ್ಕೆ – ನಮ್ಮ ಬಾರ್ ಅಸೋಸಿಯೇಷನ್ನಿಗೆ ಒಂದು ಕಟ್ಟಡವಿಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೆ ನಾವು ಮರಗಳ ಕೆಳಗೆ ಕಾಲಕಳೆಯಬೇಕಾಗಿದೆ."

"ಆ ಕೆಲಸ ವೆಂಕಣ್ಣನವರೇ ನಿರ್ವಹಿಸಬಹುದಲ್ಲ !"

"ಸ್ವಾರ್ಥಬಿಟ್ಟು ಅವರಿಗೇನೂ ಬೇಡವಾಗಿದೆ. ಕೋರ್ಟಿಗೆ ಸಮೀಪವಾಗಿ ಸೊಗಸಾದ ಕಟ್ಟಡವಿದೆ. ಅದನ್ನು ಉದ್ಯೋಗಶಾಲೆಗೆ ಕೊಡಬೇಕೆಂದು ಜಿಲ್ಲಾಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಜಿಲ್ಲಾಧಿಕಾರಿಗಳನ್ನು ಕಂಡು, ಮಾತನಾಡಿ ಬಾರ್ ಅಸೋಸಿಯೇಷನ್ನಿಗೆ ಕಟ್ಟಡ ಸಿಕ್ಕುವಂತೆ ಮಾಡಿ ಎಂದು ನಾವು ವೆಂಕಣ್ಣನವರನ್ನು ಪದೇ ಪದೇ ಕೇಳಿಕೊಂಡೆವು."

"ಅವರು ಏನು ಹೇಳಿದರು ?"

"ಹೂ ಆಗಲಿ ಎಂದರು – ಪ್ರಯತ್ನಮಾಡಲಿಲ್ಲ. ತಮ್ಮ ಸ್ವಂತ ಕೆಲಸಕಾರ್ಯಗಳಿಗೆ ಅವರಿಗೆ ಜಿಲ್ಲಾಧಿಕಾರಿಗಳ ದಾಕ್ಷಿಣ್ಯಬೇಕು. ಈಗ

ಜಿಲ್ಲಾಧಿಕಾರಿಗಳ ಜತೆ ಹೋರಾಡಿದ ಹೊರತೂ ಈ ಕಟ್ಟಡ ನಮಗೆ ಸಿಕ್ಕುವಹಾಗಿಲ್ಲ. ಮುಸ್ಲಿಮರಾದ ಜಿಲ್ಲಾಧಿಕಾರಿಗಳು ಉರ್ದುಶಾಲೆಗೆ ಕಟ್ಟಡ ಕೊಡಲು ನಿರ್ಧರಿಸಿದ್ದಾರೆ."

"ವೆಂಕಣ್ಣನವರಿಗೆ ಸಾಧ್ಯವಾಗದುದು ನನಗೆ ಹೇಗೆ ಸಾಧ್ಯವಾಗುತ್ತದೆ."

"ಸಾಧ್ಯವಾಗುತ್ತದೆ. ದಿವಾನ್ ಸಾಹೇಬರನ್ನು ಮರೆಹೊಕ್ಕರೆ ಈ ಕೆಲಸ ಸಾಧಿಸುತ್ತದೆ."

"ದಿವಾನಸಾಹೇಬರೂ ಮುಸ್ಲಿಮರೆನ್ನುವುದನ್ನು ನೀವು ಮ ತಿರುವ ಹಾಗೆ ಕಾಣುತ್ತದೆ."

ಆದರೆ ಅವರು ನ್ಯಾಯಪರರು. ಈಗ ಉರ್ದುಶಾಲೆ ಇರುವ ಕಟ್ಟಡ ಸಾಕಷ್ಟು ವಿಶಾಲವಾಗಿದೆ. ಉರ್ದುಶಾಲೆಗೆ ಯಾ ತೊಂದರೆಯೂ ಆಗಿಲ್ಲ. ಹೊಸ ಕಟ್ಟಡ ಒಳ್ಳೆಯ ಸ್ಥಳದಲ್ಲಿದೆ ಎನ್ನು ಕಾರಣಕ್ಕೆ ಜಿಲ್ಲಾಧಿಕಾರಗಳು ಈ ಕುಹಕಯೋಜನೆ ತೆಗೆದಿದ್ದಾರೆ."

"ನಿಮ್ಮ ವಾದದಲ್ಲಿ ಹುರುಳಿಲ್ಲದಿಲ್ಲ. ದಿವಾನಸಾಹೇಬರನ ಕಂಡು ನಾವು ಪ್ರಯತ್ನಪಟ್ಟರೆ ಈ ಕೆಲಸವಾದರೂ ಆಗಬಹುದು ಆದರೆ ವೃಥಾ ವೆಂಕಣ್ಣನವರ ದ್ವೇಷ ಕಟ್ಟಿಕೊಳ್ಳಬೇಕಲ್ಲಪ್ಪಾ!"

"ಅವರ ಪುಂಡು ಪಾಳೆಯಗಾರಿಕೆಯ ವಿರುದ್ಧ ನೀವೂ ನಿಂತು ಕೊಳ್ಳದಿದ್ದರೆ ನಮಗೆ ಯಾರು ದಿಕ್ಕು ಮಾಧವರಾಯರೇ?"

"ನಾನು ಚುನಾವಣೆಗೆ ನಿಂತರೆ ಆರಿಸಿಬರುವ ಸಂಭವವಿದೆಯೇನು ವೆಂಕಣ್ಣನವರು ಹೇಳಬರು – ಹಿರಿಯ ವಕೀಲರ ಬೆಂಬಲವೆಲ್ಲಾ ಅವರಿಗೆ ಇರುತ್ತದೆ."

"ವಸ್ತುಸ್ಥಿತಿ ಹಾಗಿಲ್ಲ ಸರ್. ಹಿರಿಯವಕೀಲರೂ ನಿಮಗೇ ಮ ಕೊಡುತ್ತಾರೆ. ವೆಂಕಣ್ಣನವರ ಸಹವಾಸ ಹಿರಿಯವಕೀಲರಿಗ ಸಾಕುಸಾಕಾಗಿದೆ."

ಮಾಧವರಾಯ ಒಪ್ಪಲೊಲ್ಲ–ಕಿರಿಯ ವಕೀಲರು ಬಿಡಲೊಲ್ಲರ ಹಿಗ್ಗಾಟ ಜಗ್ಗಾಟವಾಗಿ ಕೊನೆಗೆ ಮಾಧವರಾಯ ಕಿರಿಯವಕೀಲರ

ಸೋಲಬೇಕಾಯಿತು.

ಚುನಾವಣೆಯ ಪ್ರಚಾರ ಬಿರುಸಾಯಿತು. ಎಂದೂ ಯಾರೊಬ್ಬರ ಮನೆಯ ಬಾಗಿಲಿಗೂ ಹೋಗದಿದ್ದ ವೆಂಕಣ್ಣನವರು ತಾವೇ ಮತದಾರರನ್ನು ಕಂಡು ಪ್ರಾರ್ಥಿಸತೊಡಗಿದರು. ಮಾಧವರಾಯ ಪ್ರಸಾರ ಕೆಲಸಕ್ಕೆ ಹೋಗಬೇಕಾದ ಅಗತ್ಯವಿರಲಿಲ್ಲ. ಕಿರಿಯವಕೀಲರು ಅವನ ಕೆಲಸವನ್ನು ತಾವೇ ನಿರ್ವಹಿಸತೊಡಗಿದರು. ಜಿಲ್ಲಾಧಿಕಾರಿಗಳೂ ಪ್ರಚ್ಛನ್ನವಾಗಿ ಚುನಾವಣೆಯಲ್ಲಿ ಭಾಗವಹಿಸಿ ವೆಂಕಣ್ಣನವರಿಗಾಗಿ ಮತಗಳಿಸಲಾರಂಭಿಸಿದರು.

ತಮಗೆ ಸಂಬಂಧವಿಲ್ಲದ ವ್ಯವಹಾರದಲ್ಲಿ ಜಿಲ್ಲಾಧಿಕಾರಿಗಳು ಕೈ ಹಾಕಿದುದಕ್ಕೆ ವಕೀಲವೃಂದ ಸಿಡಿಮಿಡಿಗೊಂಡಿತು. ಕಿರಿಯ ವಕೀಲರನ್ನು ಖಂಡಿಸುತ್ತಿದ್ದ ಕೆಲವು ಹಿರಿಯ ವಕೀಲರೂ ಮಾಧವರಾಯನಿಗೇ ಮತಕೊಡಲು ನಿರ್ಧರಿಸಿಕೊಂಡರು.

ಮತದಾನ ಮುಗಿದ ಎರಡು ಗಂಟೆಯೊಳಗಾಗಿ ನಿರ್ಣಯ ಹೊರಬಿತ್ತು. ಅರವತ್ತಾರು ಮಂದಿ ಮತದಾರರಲ್ಲಿ ಒಂಭತ್ತು ಜನ ತಾಟಸ್ಥ್ಯ ತಳೆದಿದ್ದರು, ನಾಲ್ಕು ಜನ ಚುನಾವಣೆಗೆ ಬರದೆ ತಪ್ಪಿಸಿಕೊಡಿದ್ದರು. ಉಳಿದಿದ್ದ ಐವತ್ತುಮೂರು ಮತಗಳಲ್ಲಿ ಒಂಭತ್ತು ವೆಂಕಣ್ಣನವರಿಗೂ ನಲವತ್ತೈದು ಮಾಧವರಾಯನಿಗೂ ಬಂದಿತ್ತು. ಬಹುಮತ ಗಳಿಸಿಕೊಂಡ ಮಾಧವರಾಯನನ್ನು ವೆಂಕಣ್ಣನವರು ಲೋಕಾಭಿರಾಮವಾಗಿ ಅಭಿನಂದಿಸಿದರು. ಕಿರಿಯ ವಕೀಲವೃಂದ ತಮಗೆ ದೊರೆತ ಅಪೂರ್ವ ವಿಜಯಕ್ಕೆ ಹಿರಿಹಿಗ್ಗಿದರು.

ಬಾರ್ ಅಸೋಸಿಯೇಷನ್ನಿಗೆ ಹೊಸ ಕಟ್ಟಡವನ್ನು ದೊರಕಿಸಿಕೊಡುವ ಭಾರ ಅವ್ಯಕ್ತವಾಗಿ ನೂತನ ಅಧ್ಯಕ್ಷರ ಹೆಗಲಮೇಲೆ ಬಿದ್ದಿತ್ತು.

ಮಾಧವರಾಯ ಕಾಲಹರಣಮಾಡದೆ ವಕೀಲವೃಂದದಲ್ಲಿ ಖ್ಯಾತರಾಗಿದ್ದ ನಾಲ್ವರು ವೃತ್ತಿಬಂಧುಗಳೊಡನೆ ದಿವಾನ ಸಾಹೇಬರನ್ನು ಕಾಣಲು ಬೆಂಗಳೂರಿಗೆ ಹೋದ.

ಸುಸಂಸ್ಕೃತಿಯ ಮೂರ್ತಿವಂತ ಸ್ವರೂಪದಂತಿದ್ದ ದಿವಾನ ಸರ್
ಮಿರ್ಜಾ. ಎಂ. ಇಸ್ಮೇಯಿಲರು ನಿಯೋಗಗೋಷ್ಠಿಗೆ ಆದರದ ಸ್ವಾಗ
ಬಯಸಿ ಅವರ ವಾದವನ್ನು ತಾಳ್ಮೆಯಿಂದ ಕೇಳಿಕೊಂಡು,

"ಆ ಕಟ್ಟಡವೇ ಬೇಕೆಂದು ಏಕೆ ಹಟಹಿಡಿಯುವಿರಿ? ನಿಮ
ಹೊಸದಾಗಿ ಒಂದು ಕಟ್ಟಡ ಕಟ್ಟಿಸಿ ಕೊಡುತ್ತೇನೆ. ನಿಮ್ಮ ಅನ
ಕೂಲಕ್ಕೆ ತಕ್ಕಂತೆ ನೀವೇ ನಕ್ಷೆ ಸಿದ್ಧಮಾಡಿಸಿಕೊಡಿ" ಎಂದರು.

"ಈ ಕಟ್ಟಡ ಕೋರ್ಟಿಗೆ ಸಮೀಪವಾಗಿದೆ. ಕೋರ್ಟಿನಲ್ಲಿ ನಮ
ಕೆಲಸವಿಲ್ಲದ ವೇಳೆಯಲ್ಲಿ ಕಾನೂನು ಗ್ರಂಥಗಳನ್ನು ಓದುವುದಕ
ವಿಶ್ರಾಂತಿಗೂ ಅನುಕೂಲವಾಗುತ್ತದೆ."

"ಉರ್ದುಶಾಲೆಗೆ ಕೊಡಬಾರದೆಂದು ನಿಮ್ಮ ಆಕ್ಷೇಪಣೆಯಂತೆ !

"ಜಿಲ್ಲಾಧಿಕಾರಿಗಳು ತಮ್ಮಲ್ಲಿ ಆ ಭಾವನೆಯನ್ನುಂಟುಮಾಡಿದ್ದ
ಶುದ್ಧ ತಪ್ಪು. ಯಾವ ಶಾಲೆಗೂ ಇದು ಯೋಗ್ಯವಾದ ಸ್ಥಳವಲ್ಲ
ಈಗ ಉರ್ದುಶಾಲೆ ಇರುವಕಡೆ ವಿಶಾಲವಾದ ಆಟದ ಬಯಲಿ
ಕಟ್ಟಡವೂ ಅನುಕೂಲವಾಗಿದೆ. ಶಾಲೆಯನ್ನು ಸ್ಥಳಾಂತರ ಮಾಡುವು
ರಿಂದ ಉರ್ದುಶಾಲಾ ಬಾಲಕರಿಗೆ ತೊಂದರೆಯಾಗುತ್ತದೆಯೇ ವಿನ
ಪ್ರಯೋಜನವಾಗುವುದಿಲ್ಲ."

"ಆಗಲಿ ಮಿ. ಮಾಧವರಾವ್. ಮುಂದಿನವಾರ ನಿಮ್ಮ ಜಿ
ಯಲ್ಲಿ ಪ್ರವಾಸಮಾಡುತ್ತೇನೆ. ಆಗ ಮಂಡ್ಯಕ್ಕೂ ಬಂದು, ಸಾ
ಖುದ್ದಾಗಿ ಪರಿಶೀಲಿಸಿ ಇತ್ಯರ್ಥ ಮಾಡುತ್ತೇನೆ." ಎಂದರು.

ನಿಯೋಗಗೋಷ್ಠಿ ಸಂತೃಪ್ತರಾಗಿ ಊರಿಗೆ ಹಿಂದಿರುಗಿದರು.

ಮಾಧವರಾಯ ಮಾರನೆಯ ದಿನ ಜಿಲ್ಲಾಧಿಕಾರಿಗಳ ಭೇ
ಯಾಗಿ ದಿವಾನರವರನ್ನು ಕಂಡು ಬಂದ ಸುದ್ದಿ, ಅವರ ಅಭಿಪ್ರಾ
ನಿವೇದಿಸಿ

"ದಿವಾನ ಸಾಹೇಬರು ಬರುವ ತಾರೀಖು ನಮಗೆ ತಿಳಿಸಿ
ನಾವು ಬಂದು ನೋಡುತ್ತೇವೆ" ಎಂದ.

ಜಿಲ್ಲಾಧಿಕಾರಿಗಳು ಮುಖ ಸಿಂಡರಿಸಿಕೊಂಡು

"ನಾನು ತಿಳಿಸುವುದು ಸಾಧ್ಯವಿಲ್ಲ. ದಿವಾನ ಸಾಹೇಬರು ಸರ್ಕಾರಿ ಕೆಲಸದಮೇಲೆ ಬರುತ್ತಾರೆ. ಅವರನ್ನೇ ಕೇಳಿ ನೀವು ಸಂದರ್ಶನ ವೇಳೆಯನ್ನು ಗೊತ್ತು ಮಾಡಿಕೊಳ್ಳಿ" ಎಂದರು.

ವಾರ ಕಳೆಯುತ್ತ ಬಂತು. ಒಂದು ದಿನ ಮಾಧವರಾಯ ಕೋರ್ಟಿನಲ್ಲಿ ವಾದಮಾಡುತ್ತಿದ್ದಾಗ ಕಿರಿಯ ವಕೀಲರೊಬ್ಬರು ಸಮೀಪಕ್ಕೆ ಬಂದು ಪಿಸುಮಾತಿನಲ್ಲಿ

"ದಿವಾನ ಸಾಹೇಬರು ಬಂದಿದ್ದಾರೆ ಸರ್. ಇನ್‌ಸ್ಪೆಕ್ಷನ್ ಮಾಡುತ್ತಿದ್ದಾರೆ" ಎಂದು ಹೇಳಿದರು. ಮಾಧವರಾಯ ಕೋರ್ಟಿನ ಅಪ್ಪಣೆ ಪಡೆದು ವಾದ ನಿಲ್ಲಿಸಿ, ನಾಲ್ಕಾರು ವಕೀಲ ಗೆಳೆಯರೊಂದಿಗೆ ದಿವಾನ ಸಾಹೇಬರವರನ್ನು ಕಾಣಲು ಹೊರಟ.

ದಿವಾನ ಸಾಹೇಬರು ಹೊಸ ಕಟ್ಟಡದ ಬಳಿಯಿದ್ದ ನಿವೇಶನ, ಕಛೇರಿಗಳನ್ನು ನೋಡಿಕೊಂಡು ಕಟ್ಟಡದ ಬಳಿಗೇ ಬರುತ್ತಿದ್ದರು. ಎದುರಿಗೆ ಬಂದ ಮಾಧವರಾಯನನ್ನು ನೋಡಿ

"ಬನ್ನಿ. ಮಿ. ಮಾಧವರಾವ್" ಎಂದು ಮಾಧವರಾಯನನ್ನೂ ಕರೆದುಕೊಂಡು ಹೊಸ ಕಟ್ಟಡ ಪ್ರವೇಶಿಸಿ, ಅದನ್ನು ಕೂಲಂಕಷವಾಗಿ ಪರಾಮರ್ಶಿಸಿ ಜಿಲ್ಲಾಧಿಕಾರಿಗಳ ಕಡೆ ತಿರುಗಿ

"ಬಾರ್ ಅಸೋಸಿಯೇಷನ್ನಿಗೆ ಈ ಕಟ್ಟಡಬೇಕೆಂದು ಮಿ. ಮಾಧವರಾಯರು ಕೇಳುತ್ತಿದ್ದಾರೆ. ಅವರಿಗೆ ಕೊಡಲು ನಿಮ್ಮದೇನಾದರೂ ಅಭ್ಯಂತರವಿದೆಯೇ ?"

"ಉದರ್ೂಶಾಲೆಗೆ ಕೊಡುವುದಾಗಿ ನಾನು ವಾಗ್ದಾನಮಾಡಿದ್ದೇನೆ ಸ್ವಾಮಿ."

"ಇಲ್ಲಿ ಶಾಲೆಯ ಹುಡುಗರಿಗೆ ಆಟದ ಬಯಲಿಲ್ಲವಲ್ಲಾ!"

"ಹಳೆಯ ಆಟದ ಬಯಲನ್ನೇ ಉಪಯೋಗಿಸಿಕೊಳ್ಳುತ್ತಾರೆ."

ದಿವಾನ ಸಾಹೇಬರು ಹೆಚ್ಚು ಮಾತು ಬೆಳೆಸಲಿಲ್ಲ. ಇನ್‌ಸ್ಪೆಕ್ಷನ್ ಮುಗಿಸಿ, ಕಾರು ಹತ್ತುವ ಮುನ್ನ ಮಾಧವರಾಯನನ್ನು ಒಂದು ಬದಿಗೆ ಕರೆದು

"ಈ ಕಟ್ಟಡ ನಿಮ್ಮ ಅಸೋಸಿಯೇಷನ್ನಿಗೆ ಕೊಡುತ್ತೇನೆ. ನೀವು ನಿಶ್ಚಿಂತರಾಗಿರಿ ಮಿ. ಮಾಧವರಾವ್." ಎಂದು ಹೇಳಿ ಹೊರಟು ಹೋದರು.

ನಾಲ್ಕು ದಿವಸಗಳ ತರುವಾಯ ಜಿಲ್ಲಾಧಿಕಾರಿಗಳೇ ಕಟ್ಟಡವನ್ನು ಬಾರ್ ಅಸೋಸಿಯೇಷನ್ನಿನ ಅಧ್ಯಕ್ಷರಾದ ಮಾಧವರಾಯರಿಗೆ ಒಪ್ಪಿಸಿ ಕೊಡಬೇಕಾಯಿತು.

ಮಾಧವರಾಯ ಗಳಿಸಿದ ಯಶಸ್ಸು ಕಿರಿಯ ವಕೀಲರನ್ನು ಆನಂದ ಪರವಶರನ್ನಾಗಿ ಮಾಡಿತು. ವೆಂಕಣ್ಣನವರೂ ಅವರ ಕೆಲವು ಮಿತ್ರರೂ ಮಾಧವರಾಯನ ಉಚ್ಛ್ರಾಯ ಕಂಡು ಕರುಬಲಾರಂಭಿಸಿದರು.

೩೨

ಹೊರಗೆ ನಿಂತು ನೋಡುವವರಿಗೆ ರುಕ್ಮಿಣಮ್ಮನಂಥ ಭಾಗ್ಯಶಾಲಿ ಯಾರೂ ಇರಲಿಲ್ಲ. ಪತಿ ಕೀರ್ತಿಶಾಲಿಯಾಗಿದ್ದುದು ಮಾತ್ರವಲ್ಲದೆ ಕೈ ತುಂಬ ಸಂಪಾದಿಸುತ್ತಿದ್ದ. ರುಕ್ಮಿಣಮ್ಮನ ಕೈಗೆ ಯಾವ ಅಡ್ಡಿಯೂ ಇರಲಿಲ್ಲ. ಅವಳೆಷ್ಟು ಖರ್ಚುಮಾಡಿದರೂ ಒಂದು ದಿನವೂ ಮಾಧವ ರಾಯ ಲೆಕ್ಕ ಕೇಳಿದವನಲ್ಲ—ಏತಕ್ಕೆ ಖರ್ಚುಮಾಡಿದೆ ಎಂದು ತನಿಖೆ ಮಾಡಿದವನಲ್ಲ. ಊರಿನ ಜನರೆಲ್ಲರಿಗೂ ಮಾಧವರಾಯ ಅಚ್ಚು ಮೆಚ್ಚಿನವನಾಗಿದ್ದ.

ಅತ್ತೆ ಪ್ರತ್ಯಕ್ಷ ದೇವತೆಯಾಗಿದ್ದರು. ಸೊಸೆಯನ್ನು ಗೃಹಲಕ್ಷ್ಮಿ ಯೆಂದು ಪರಿಗಣಿಸಿ ಪೂಜಿಸುತ್ತಿದ್ದರು. ಅತ್ತೆ ಸೊಸೆಯರಲ್ಲಿ ಮೂಡಿದ್ದ ನಿರ್ವ್ಯಾಜ ಅಂತಃಕರಣ ಮನೆಯಲ್ಲಿ ಅಲೌಕಿಕ ಶಾಂತಿ, ತೃಪ್ತಿಗಳನ್ನು ಸ್ಥಾಪಿಸಿತ್ತು.

ಕಮಲೂ ಗಂಡುಮಗುವಿನ ತಾಯಿಯಾಗಿದ್ದಳು. ಮರಿಮಗನಾ ದುದಕ್ಕೆ ಗೋದಮ್ಮನವರ ಸಂತೋಷಕ್ಕೆ ಎಣೆಯೇ ಇರಲಿಲ್ಲ. ಕೊನೆಯ ಮಗಳು ಪದ್ಮ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಳು.

ನಾರಾಯಣಸ್ವಾಮಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾದಮೇಲೆ ಅವನನ್ನು ಮುಂದಿನ ವಿದ್ಯಾಭ್ಯಾಸಕ್ಕೆ ಎಲ್ಲಿಗೆ

ಕಳುಹಿಸುವುದು ಎಂಬ ಪ್ರಶ್ನೆಯೆದ್ದಿತು.

"ಕಮಲೂ ಮನೆಯಲ್ಲಿಯೇ ಇರಲಿ. ಅವಳ ಯಜಮಾ
ಹೇಗೂ ಕಾಲೇಜಿನ ಮೇಷ್ಟ್ರು. ಅವರೂ ಅವನ ಶಿಕ್ಷಣದ
ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ" ಎಂದು ರುಕ್ಮಿಣಮ್ಮ ಸ
ಯಿತ್ತಿದ್ದಳು.

ಅಕ್ಕನ ಮನೆಯಲ್ಲಿರುವುದಕ್ಕೆ ನಾರಾಯಣಸ್ವಾಮಿಗೆ ಸ್ವಲ್ಪ
ಮನಸ್ಸಿರಲಿಲ್ಲ. ಆದರಾಬಗ್ಗೆ ತಂದೆ, ತಾಯಿ ಇಬ್ಬರೂ ಏಕಾಭಿಪ್ರಾ
ತಳೆದಿದ್ದರು. ಅಜ್ಜಿಯನ್ನು ಪುಸಲಾಯಿಸಿ ನೋಡಿದ. ಈ ವಿಷ
ದಲ್ಲಿ ತಾವು ಬಾಯಿ ಹಾಕಿ, ಮಗ ಸೊಸೆಯ ಮನಸ್ಸಿಗೆ ವಿರುದ್ಧ
ವರ್ತಿಸುವುದಕ್ಕೆ ಗೋದಮ್ಮನವರು ಸಮ್ಮತಿಸಲಿಲ್ಲ.

ನಾರಾಯಣಸ್ವಾಮಿ ಮೈಸೂರಿನಲ್ಲಿ ಕಮಲೂ ಮನೆಯಲ್ಲಿ
ನಿಂತು ಫಿಲೋಮೇನಾ ಕಾಲೇಜ್ ಸೇರಬೇಕಾಯಿತು. ಒಂದೇ ವ
ದಲ್ಲಿ ಅವನ ಸಹವಾಸ ಕಮಲೂ, ಗೋವಿಂದರಾಯರಿಬ್ಬರಿಗೂ ಸ
ಸಾಕಾಗಿ ಹೋಯಿತು. ಅವನ ಕೋಪ, ರೋಷ, ಆಭ
ಅಸೂಯೆ, ಅಸಹನೆಗಳಿಗೆ ಹೊಂದಿಕೊಳ್ಳುವುದು ಅವರಿಗೆ ಸ
ವಾಗಲಿಲ್ಲ.

ಬೇಸಿಗೆ ರಜಕ್ಕೆ ನಾರಾಯಣಸ್ವಾಮಿ ಊರಿಗೆ ಬಂದಾಗ ತ

"ಕಮಲೂ ಮನೆಯಲ್ಲಿದ್ದುಕೊಂಡು ಓದುವುದಿಕ್ಕಾಗುವುದಿಲ್ಲ
ಎಂದು ಹೇಳಿದ.

"ಏಕೆ? ಅಲ್ಲಿ ನಿನಗೇನು ಕಷ್ಟವಾಗಿರುವುದು?"

"ಅವಳ ಮನೆ ಕಾಲೇಜಿಗೆ ದೂರ. ಕಾಲೇಜಿಗೆ ಹೋಗಿ ಬ
ದಕ್ಕೇ ಎಲ್ಲಾ ಹೊತ್ತೂ ಕಳೆದು ಹೋಗುತ್ತದೆ. ನನಗೆ ಆಟಕ್ಕೆ
ಪುರಸತ್ತೇ ಸಿಗುವುದಿಲ್ಲ."

"ನಿನ್ನೊಬ್ಬನನ್ನೇ ಎಲ್ಲಿಡುವುದೋ ನಾರಾಯಣ?"

"ಕಾಲೇಜ್ ಹಾಸ್ಟಲ್ಲಿನಲ್ಲಿ."

"ಕಾಲೇಜ್ ಹಾಸ್ಟಲ್ ನಿಮ್ಮ ಕಾಲೇಜಿನ ಮಗ್ಗುಲಿಗೇ

ಯುಲ್ಲವೇ ?”

“ಫಿಲೋಮೇನಾ ಕಾಲೇಜ್ ಬಿಟ್ಟು ಇಂಟರ್‌ಕಾಲೇಜ್ ಸೇರು ತ್ತೀನೆ.”

“ಈ ವರ್ಷ ಹೇಗೂ ಪರೀಕ್ಷೆಗೆ ಕಟ್ಟುತ್ತೀ—ಮುಂದಿನ ವರ್ಷ ಮಹಾರಾಜಾ ಕಾಲೇಜ್ ಸೇರಬೇಕಾಗುತ್ತದೆ. ಆಗಲೇ ಹಾಸ್ಟಲ್ಲಿಗೆ ಬದಲಾಯಿಸಿಕೊಂಡರಾಯಿತು.”

“ನಾನು ಇಲ್ಲಿಯೇ ಇದ್ದರೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಸಂಭವವೇ ಇಲ್ಲ.”

ನಾರಾಯಣಸ್ವಾಮಿಯ ನಡತೆ ಅಲ್ಪಸ್ವಲ್ಪ ರುಕ್ಮಿಣಮ್ಮನ ಕಿವಿ ಯಮೇಲೂ ಬಿದ್ದಿತ್ತು. ನಾರಾಯಣಸ್ವಾಮಿಯ ಕಿರುಕುಳದಿಂದ ಕಮಲೂ, ಗೋವಿಂದರಾಯರನ್ನು ಪಾರುಮಾಡಬೇಕಾದುದಗತ್ಯವೆಂದು ತಿಳಿದುಕೊಂಡು ಗಂಡನಿಗೆ

“ಅವನಿಗೆ ಹೇಗೆ ಬೇಕೋ ಹಾಗೇ ಮಾಡಿಬಿಡಿ. ಕಾಲೇಜ್ ಹಾಸ್ಟಲ್ಲೇ ಸೇರಿಸಿಬಿಡಿ” ಎಂದಳು.

ನಾರಾಯಣ ಕಾಲೇಜ್ ಹಾಸ್ಟಲ್ಲಿಗೆ ಸೇರಿದಮೇಲೆ ರುಕ್ಮಿಣಮ್ಮನ ಸಮಸ್ಯೆ ಬಗೆ ಹರಿಯಲಿಲ್ಲ. ಪ್ರತಿವಾರವೂ ಅವನಿಂದ ಕಾಗದ ಬರು ತ್ತಿತ್ತು. ಅದರಲ್ಲಿ ಒಂದೇ ಒಕ್ಕಣೆ—ಕೂಡಲೆ ೫೦ ರೂ. ಕಳಿಸಿಕೊಡಿ, ೭೦ ರೂ. ಕಳಿಸಿಕೊಡಿ. ಪ್ರತಿಸಲ ಹಣ ಬೇಡುವಾಗಲೂ ಸಮಂಜಸ ವಾದ ಕಾರಣವನ್ನೂ ಸೂಚಿಸುತ್ತಿದ್ದ. ಒಂದೊಂದು ಸಲ ಮಾಧವ ರಾಯನಿಗೆ ಬೇಸರವಾಗಿ

“ಈ ಭಡವ ನಮ್ಮನ್ನು ಹಣ ಕಕ್ಕುವ ಯಂತ್ರಗಳು ಎಂದು ತಿಳಿದು ಕೊಂಡಿದ್ದಾನೆ. ತಂದೆ, ತಾಯಿ, ಅಕ್ಕ ತಂಗಿ ಎನ್ನುವ ಮಮತೆ ಎಳ್ಳಷ್ಟೂ ಇಲ್ಲ. ತಿಂಗಳಿಗೆ ರೂ. ೧೫೦ ಕಳಿಸಿದರೂ ಸಾಲದು. ತಾನು ಕಾಲೇಜಿನಲ್ಲಿ ಓದುತ್ತಿರುವುದು ನಮ್ಮ ಉದ್ಧಾರಕ್ಕೆ ಎಂದು ತಿಳಿದು ಕೊಂಡಿದ್ದಾನೆ. ಈ ಸಾರಿ ಪರೀಕ್ಷೆ ಮುಗಿದ ಮೇಲೆ ಕಾಲೇಜು ಬಿಡಿಸಿ ಬಿಡುತ್ತೇನೆ.”

"ಬಿಡಿಸಿ ಮುಂದೆ....?"

"ಮನೆಯಲ್ಲಿ ತಿಂದುಕೊಂಡು ಬಿದ್ದಿರಲಿ."

"ಏನೋ ಹುಡುಗತನ—ಅವನು ಅವಿವೇಕವಾಗಿ ಆಡುತ್ತಾನೆ ದರೆ ನಾವೂ ಅವನ ಹಾಗೇ ಆಡಿದರೆ ಚೆನ್ನಾಗಿರುತ್ತದೆಯೇ?"

"ಅದು ಸರಿ ರುಕ್ಕೂ, ಹೀಗೆ ಯದ್ವಾತದ್ವಾ ಖರ್ಚುಮಾಡು ದನ್ನು ಇವನು ಕಲಿತರೆ ನಾಳೆ ಗತಿ?"

"ಸರೀಕ ಹುಡುಗರ ಜತೆಯಲ್ಲಿದ್ದಮೇಲೆ ಖರ್ಚುಮಾಡಬೇಕಾ ತ್ತದೆ. ಅವರೂ ಖರ್ಚುಮಾಡುತ್ತಾರೆ."

"ಕಾಲ ವಿಚಿತ್ರವಾಯಿತು ರುಕ್ಕೂ. ನಾವು ಸಾಕಿ ಸಲಹಿ ಮಕ್ಕಳು ನಮ್ಮ ಕಷ್ಟಸುಖಕ್ಕೆ ಆಗುತ್ತಾರೆ ಎಂದು ತಿಳಿಯುವುದ ತಪ್ಪು. ನಾನು ದುಡ್ಡು ಕಳಿಸುವುದಕ್ಕೆ ಯೋಚನೆಮಾಡುವುದಿಲ್ಲ— ಇವನು ಇಲ್ಲದ ದುರಭ್ಯಾಸಕ್ಕೆ ಹಣ ಖರ್ಚುಮಾಡಿದರೆ ಏನು ಗ ಎಂದು ಯೋಚನೆ ಮಾಡುತ್ತಿದ್ದೇನೆ. ಕಮಲೂ ಮನೆಯಲ್ಲಿದ್ದ ಸ್ವಲ್ಪವಾದರೂ ಹದ್ದುಬಸ್ತಿರತ್ತೆ ಎಂದುಕೊಂಡೇ ಹಾಸ್ಟಲ್ಲಿಗೆ ಸೇ ಕೊಂಡ. ನನ್ನ ಗುರುಗಳ ಸದ್ಗುಣ ಮಗನಲ್ಲಿ ಮೂಡಲಿ ಎಂ 'ನಾರಾಯಣಸ್ವಾಮಿ' ಎಂದು ಹೆಸರಿಟ್ಟೆ. ಆ ಹೆಸರಿಗೇ ಅಪಮಾ ಮಾಡುತ್ತಿದ್ದಾನೆ."

"ನ್ಯಾಯ, ಸತ್ಯ ಎಂದು ತಿಳಿದುದನ್ನು ಮಾಡಿಕೊಂಡು ಹೋ ವುದು. ಅದರ ಪರಿಣಾಮ ಭಗವಂತನಾಧೀನ."

ಗಂಡನಿಗೆ ಧೈರ್ಯದ ಮಾತು ಹೇಳಿದರೂ ರುಕ್ಮಿಣಮ್ಮ ಮನಸ್ಸಿನಲ್ಲಿ ಧೈರ್ಯವಿರಲಿಲ್ಲ. ಹಗಲಿರುಳೂ ಮಗನಿಗಾಗಿ ಮರು ವಳು. ತನ್ನ ದುಃಖವನ್ನು ಬಾಯಿಬಿಟ್ಟು ಯಾರಲ್ಲಿಯೂ ಹೇಳಿಕೊ ಲೊಲ್ಲಳು.

ಅತ್ತೆಗೂ ಸೊಸೆಯ ದುಃಖದ ಕಾರಣ ಗೊತ್ತಾಗಲಿಲ್ಲ. ರು ಣಿಯ ಒಳಗುದಿಯನ್ನು ನೋಡಲಾರದೆ ಗೋದಮ್ಮನವರು ಒಂದು ದಿ

"ಏನೇ ತಾಯಿ, ತುಂಬ ಚಿಂತೆಮಾಡುತ್ತಿದ್ದೀ?"

"ಏನೂ ಇಲ್ಲಮ್ಮ. ನನಗೆಂಥ ಚಿಂತೆ. ಯಾವದಕ್ಕೆ ಕಡಿಮೆಯಾಗಿದೆ ಎಂದು ಚಿಂತೆಮಾಡಬೇಕು."

"ಗಂಡ ಕೈತುಂಬ ಸಂಪಾದಿಸಿ ತಂದರೂ ಒಂದು ದಿನ ನೀನು ಸರಿಯಾಗಿ ಉಟ್ಟು ತೊಟ್ಟುದನ್ನು ನಾನು ನೋಡಲಿಲ್ಲ ರುಕ್ಕೂ."

"ನಾನು ರಾಜರಾಜೇಶ್ವರಿ ಅಲಂಕಾರಮಾಡಿಕೊಂಡು ಯಾರನ್ನು ಮೆಚ್ಚಿಸಬೇಕಮ್ಮ. ಮಹಾರಾಯರು ಅವರು ಎಂದೋ ನನ್ನ ಮೆಚ್ಚಿಕೊಂಡಿದ್ದಾರೆ."

"ಅಯ್ಯೋ ನಮ್ಮಮ್ಮ—ನೀನು ಅಲಂಕಾರಮಾಡಿಕೊಳ್ಳದಿದ್ದರೂ ರಾಜರಾಜೇಶ್ವರೀನೇ ಕಣೇ ತಾಯಿ—ಜಗನ್ಮಾತೆಯೇ ನನ್ನ ಸೊಸೆಯಾಗಿ ಹುಟ್ಟಿದ್ದಾಳೆ. ರುಕ್ಕೂ—ಮನಸ್ಸಿನಲ್ಲಿ ಯಾವದನ್ನೂ ಇಟ್ಟುಕೊಂಡು ಕೊರಗಬೇಡಪ್ಪ. ನಿನ್ನ ಮುಖ ಸ್ವಲ್ಪ ಸಪ್ಪಗಾದರೂ ನನ್ನ ಕರುಳುಕಿತ್ತು ಬರುತ್ತದೆ. ಈ ಮುದುಕಿ ಮೇಲೆ ದಯೆಯಿಟ್ಟಾದರೂ ಮನಸ್ಸು ಬಿಚ್ಚಿ ಮಾತನಾಡು."

"ಹೀಗೆ ಮಾತನಾಡ ಬೇಡಿಯಮ್ಮ." ಎಂದು ನುಡಿಯುತ್ತಿದ್ದಳು.

ರುಕ್ಮಿಣಿಯ ದುಃಖದ ಕಾರಣವನ್ನು ಸೂಕ್ಷ್ಮವಾಗಿ ಗೋದಮ್ಮನವರು ಮಗನಿಂದ ತಿಳಿದುಕೊಂಡರು. ನಾರಾಯಣಸ್ವಾಮಿಯ ಸ್ವೇಚ್ಛಾಪ್ರವೃತ್ತಿಗೆ ತಮ್ಮ ಅತಿಮಮತೆಯೂ ಕಾರಣವಾಗಿದ್ದುದನ್ನು ಜ್ಞಾಪಿಸಿಕೊಂಡು ಒಳಗೇ ಮಮ್ಮಲ ಮರುಗಿದರು. ಆದರೆ ಗೋದಮ್ಮನವರ ಮನಸ್ಸಿನಲ್ಲಿ ಯಾವದೋ ಮೂಕಧೈರ್ಯ. ನಾರಾಯಣಸ್ವಾಮಿ ರುಕ್ಕೂ ಮಗನಲ್ಲವೇ—ತಾಯಿಯ ಸದ್ಗುಣದ ಒಂದು ಅಂಶವಾದರೂ ಮಗನಲ್ಲಿ ಬೆಳಗದಿರುತ್ತದೆಯೇ ?"

"ನಾಣಿ ವಿಷಯ ನೀನು ಯೋಚನೆಮಾಡಿ ಕೊರಗಬೇಡ ರುಕ್ಕೂ. ಹುಡುಗು—ನಾಲ್ಕುದಿವಸ ಯದ್ವಾತದ್ವಾ ಆಡುತ್ತದೆ. ಸ್ವಲ್ಪ ಜವಾಬ್ದಾರಿ ಅರ್ಥವಾದ ಕೂಡಲೆ ಎಲ್ಲವೂ ಸರಿಹೋಗುತ್ತದೆ."

"ಅವನು ಖರ್ಚುಮಾಡುವ ವಿಷಯದಲ್ಲಿ ನಾನು ಯೋಚಿಸುವುದಿಲ್ಲ ಅಮ್ಮ. ತಾಯಿ, ತಂದೆ, ತಂಗಿ ಎನ್ನುವ ವಾತ್ಸಲ್ಯವೇ ಅವನಿಗಿಲ್ಲ

ವಲ್ಲ—ತಾನಾಯಿತು, ತನ್ನ ವಿಲಾಸವಾಯಿತು—ಇದಕ್ಕಾಗಿ ನಾನ
ಯೋಚಿಸುತ್ತಿದ್ದೇನೆ."

"ರಕ್ತಗುಣ ಅಳಿಸಲು ಯಾರಿಂದಲೂ ಸಾಧ್ಯವಾಗುವುದಿ
ರುಕ್ಕೂ. ಭಗವದ್ಭಕ್ತಿ, ದೀನಸೇವೆ, ಸತ್ಯಪ್ರಿಯತೆ ನಾಣಿಯ ರಕ್ತಗುಣ
ವಾಗಿದೆ. ಕೆಲಕಾಲ ಅದು ವಿಕಾಸವಾಗದಿರಬಹುದು. ಅಲ್ಲಿಯವರೆ
ನಾವು ಧೈರ್ಯತಳೆದಿರಬೇಕು. ತಾಳ್ಮೆಯಿಂದರಬೇಕು."

ಅತ್ತೆಯ ಮಾತು ರುಕ್ಮಿಣಿಯ ಮನಸ್ಸಿನಿಂದ ದೊಡ್ಡ ಭಾ
ವನ್ನಿಳುಹಿದಂತಾಯಿತು. 'ದೇವರೇ, ಅತ್ತೆಯ ಮಾತು ಸತ್ಯಮಾಡಪ್ಪಾ
ನಾಣಿ ದಯಾಧರ್ಮ ಪರಾಯಣನಾಗಿ, ಹತ್ತು ಜನಕ್ಕೆ ಬೇಕಾದವನಾಗಿ
ಬಾಳುವಂತೆ ಮಾಡು' ಎಂದು ರುಕ್ಮಿಣಿ ಭಗವಂತನಲ್ಲಿ ಮೊರೆಯಿಟ್ಟಳು.

ನಾರಾಯಣಸ್ವಾಮಿಗೆ ಯಾವ ದುಷ್ಟ ಚಟವೂ ಇರಲಿಲ್ಲ
ತಾಯಿ, ತಂದೆ, ಅಜ್ಜಿಯ ಲಾಲನೆ ಪಾಲನೆಯಲ್ಲಿ, ಮಿತವರಿಯದ
ಮಮತೆಯ ವಾತಾವರಣದಲ್ಲಿ ಬೆಳೆದ ಅವನಿಗೆ ಹಣದ ಬೆಲೆ ಸ್ವಲ್ಪವೂ
ಗೊತ್ತಿರಲಿಲ್ಲ. ಇದರ ಜತೆಗೆ ತಾನು 'ದೊಡ್ಡವರ ಮಗ'ನೆಂಬ ನಿಸ್ಸೀಮ
ಅಹಂಕಾರವೂ ಅವನಲ್ಲಿ ಮನೆಮಾಡಿಕೊಂಡಿತ್ತು. ಸ್ವಭಾವತ
ಉದಾರಿಯಲ್ಲದಿದ್ದರೂ ಜಂಬಕ್ಕಾಗಿ ಎಷ್ಟೇ ಹಣವಾದರೂ ಚಿಂತೆಯಿಲ್ಲದ
ಖರ್ಚುಮಾಡಲು ಅವನು ಹಿಂದೆಮುಂದೆ ನೋಡುತ್ತಿರಲಿಲ್ಲ ನಾರಾಯಣ
ಸ್ವಾಮಿಯ ದೌರ್ಬಲ್ಯವನ್ನರಿತ್ತಿದ್ದ ಗೆಳೆಯರು ಅವನಿಗೆ ಜಿಗಣೆಗಳಂತೆ
ಅಂಟಿಕೊಂಡು, ಅವನ ರಕ್ತವನ್ನು ಹೀರುತ್ತಿದ್ದರು. ಶ್ರೀಧರ, ಚಿನ್ನ
ಸ್ವಾಮಿ ಇಲ್ಲದೆ ನಾರಾಯಣಸ್ವಾಮಿ ಊಟಕ್ಕೆ ಹೋಗುತ್ತಿರಲಿಲ್ಲ
ಹೊಟೇಲಿಗೆ ಹೋಗುತ್ತಿರಲಿಲ್ಲ. ಸಿನೀಮಾಕ್ಕೆ ಹೋಗುತ್ತಿರಲಿಲ್ಲ.

ನಾರಾಯಣಸ್ವಾಮಿಗೆ ಎಲ್ಲ ಹುಚ್ಚಿಗಿಂತ ಬಟ್ಟೆಯ ಹುಚ್ಚು
ಬಲವಾಗಿ ಹಿಡಿದಿತ್ತು. ಯಾವದಾದರೂ ಸಿನೀಮಾದಲ್ಲಿ ರೊನಾಲ್
ಕೋಲ್ಮನ್, ವಾರ್ನರ್ ಬಾಕ್ಸ್ಟರ್, ಟೈರಾನ್‌ಪವರ್ ಧರಿಸಿದ್ದ ಸೂಟ
ಕಂಡರೆ ಸಾಕು. ಮಾರನೆಯ ದಿನ ಮೈಸೂರು ಪೇಟೆಯನ್ನೆಲ್ಲಾ ಜಾಲಾಡಿ
ಅದೇ ಬಟ್ಟೆಯನ್ನೊ, ಅಥವಾ ಅಂಥದೇ ಬಟ್ಟೆಯನ್ನೊ ಆರಿಸಿ ಸೂಟ

ಹೊಲೆ ಹಾಕುತ್ತಿದ್ದ. ಅವನು ಸೂಟು ಹೊಲೆಸಲು ಪ್ರೋತ್ಸಾಹಿಸುತ್ತಿದ್ದ ಗೆಳೆಯರು ಜತೆಯಲ್ಲಿ ಹೋಗಿ ಒಂದು ಟೈ, ಒಂದು ಷರಟು, ಒಂದು ಕೋಟು ಗಿಟ್ಟಿಸಿಕೊಳ್ಳುತ್ತಿದ್ದರು. ಬರೆದ ಕಾಗದಕ್ಕೆ ಮಂಡ್ಯದಿಂದ ಸಲೀಸಾಗಿ ಹಣ ಬರುತ್ತಿದ್ದುದರಿಂದ ನಾರಾಯಣಸ್ವಾಮಿಗೆ ಯಾವ ಚಿಂತೆಯೂ ಇರಲಿಲ್ಲ. ತಾನಿರುವುದು ಸೂಟು ಹೊಲೆಸುವುದಕ್ಕೆ ತಂದೆ ಇರುವುದು ಸೂಟಿಗೆ ಹಣ ಒದಗಿಸುವುದಕ್ಕೆ ಎಂದವನು ನಂಬಿದ್ದ.

ತಂದೆಯಿಂದ ಹಣ ಬರುವುದು ಸ್ವಲ್ಪ ತಡವಾದರೆ ನಾರಾಯಣ ಸ್ವಾಮಿಯ ಬುದ್ಧಿಯೇ ಕೆಟ್ಟುಹೋಗುತ್ತಿತ್ತು. ಮನೆಯವರಿಗೆಲ್ಲಾ ಹಿಡಿ ಶಾಪ ಹಾಕಲು ಅವನು ಹಿಂಜರಿಯುತ್ತಿರಲಿಲ್ಲ. ನಾರಾಯಣಸ್ವಾಮಿಯ ಪ್ರತಿ ಮಾತಿಗೂ 'ಅಸ್ತು' ಎನ್ನುವುದನ್ನು ಶ್ರೀಧರ ಚೆನ್ನಾಗಿ ಅಭ್ಯಾಸ ಮಾಡಿಕೊಂಡಿದ್ದ. ಈ ಅಸ್ತುಮಂತ್ರಪಠನೆಯಿಂದ ಶ್ರೀಧರನಿಗೆ ವಿಶೇಷ ಲಾಭವೂ ಆಗುತ್ತಿತ್ತು. ಚಿನ್ನಸ್ವಾಮಿಗೆ ಶ್ರೀಧರನ ಕಪಟಾಚರಣೆ ಜಿಗುಪ್ಸೆಯನ್ನುಂಟುಮಾಡುತ್ತಿತ್ತು. ಒಂದು ದಿನ ಹಣ ಬಾರದಿದ್ದುದರ ಕಾರಣ ವಿವರಿಸುತ್ತಾ ನಾರಾಯಣಸ್ವಾಮಿ

"ತಂದೆ ತುಂಬ ಒಳ್ಳೆಯವರು. ಅಜ್ಜೀಗೆ ನನ್ನ ಕಂಡರೆ ವಿಶೇಷ ಪ್ರೀತಿ. ನಾನು ಹಣಕ್ಕೆ ಬರೆದರೆ ಇಲ್ಲವೆನ್ನುವುದು ತಂದೆಯವರಿಗೆ ಸಾಧ್ಯವೇ ಇಲ್ಲ. ಆದರೆ ನನ್ನ ತಾಯಿ........"

"ನಿನ್ನ ತಾಯಿ........" ಎಂದು ಚಿನ್ನಸ್ವಾಮಿ ಕುತೂಹಲದಿಂದ ಕೇಳಿದ.

"ನನ್ನ ತಾಯಿ ಕೈ ಸ್ವಲ್ಪ ಹಿಡಿತ. ನೂರಕ್ಕೆ ನಾನು ಬರೆದರೆ ಐವತ್ತು ಕಳುಹಿಸಿ ಎಂದು ತಂದೆಯವರಿಗೆ ಹೇಳಿಕೊಡುತ್ತಾರೆ."

"ನಿಮ್ಮ ತಾಯಿ ಜಿಪುಣಿಯೆಂದು ನಿನ್ನ ಅಭಿಪ್ರಾಯವೇ ?"

"ಜಿಪುಣಿ ಏನಲ್ಲ! ಕಂಡವರಿಗೆ ಕೈಯೆತ್ತಿ ಧಾರಾಳವಾಗಿ ಕೊಡುತ್ತಾರೆ. ಮನೆಮಕ್ಕಳಿಗೆ ಕೊಡಬೇಕೆಂದರೆ ಅವರಿಗೆ ಕೈಯೇ ಬರುವುದಿಲ್ಲ."

"ನಿನ್ನ ಹಿತಾಹಿತ ನಿನ್ನ ತಾಯಿಯವರಿಗೂ ಸೇರಿದ್ದಲ್ಲವೇ

ನಾಣಿ."

"ನಿಜ—ಆದರೆ ಅವರಿಗೆ ನನ್ನ ಕಷ್ಟಸುಖ ಹೇಗೆ ಅರ್ಥವಾಗ
ಬೇಕು."

"ನೀನು ತಿಂಗಳಿಗೊಂದು ಸೂಟು ಹೊಲೆಸುವುದರ ರಹಸ್ಯ ನಿಮ್ಮ
ತಾಯಿಯವರಿಗೆ ಅರ್ಥವಾಗಿಲ್ಲ—ಯಾರಿಗೂ ಅರ್ಥವಾಗಿಲ್ಲ ನಾಣಿ."

"ನನ್ನ ದುಡ್ಡಿನಿಂದ ನಾನು ಹೊಲೆಸಿಕೊಳ್ಳುತ್ತೀನಯ್ಯಾ!"

"ನಿಸ್ಸಂದೇಹವಾಗಿ. ನೀನು ಸೂಟು ಹೊಲೆಸುವುದಕ್ಕೆ
ನಾನೇನೂ ಹಣ ಕೊಟ್ಟಿಲ್ಲ; ನಿನ್ನ ತಂದೆಯವರೇ ಕೊಟ್ಟಿದ್ದಾರೆ. ಆದರ
ನೀನು ಖರ್ಚು ಮಾಡುತ್ತಿರುವ ಹಣ ಅವರ ಕಷ್ಟಾರ್ಜಿತ ಸ್ವತ್ತೆಂಬ
ದನ್ನು ಮರೆತಂತೆ ಕಾಣುತ್ತದೆ. ಅನವಶ್ಯಕವಾಗಿ ಖರ್ಚು ಮಾಡಬಾ
ದೆಂದು ಹೇಳಿದ ತಾಯಿಯವರನ್ನು ಆಕ್ಷೇಪಿಸುವುದಕ್ಕೂ ನೀನು ಹಿಂ
ಮುಂದೆ ನೋಡಲಿಲ್ಲ."

"ನನ್ನ ತಾಯಿಯವರ ಬಗ್ಗೆ ನನಗಿರುವ ವಿಶ್ವಾಸ ಗೌರವಕ್ಕಿಂತ
ನಿನಗೇ ಹೆಚ್ಚು ಇರುವಂತೆ ಕಾಣುತ್ತದೆ!"

"ನಿನ್ನ ಮಾತು ನಿಜವಾದರೆ ನಾನು ಧನ್ಯ. ನಿನ್ನ ತಾಯಿ
ಸಾಕ್ಷಾತ್ ಭಗವತೀ ಸ್ವರೂಪರು. ಅವರನ್ನು ಒಮ್ಮೆ ನೋಡಿದವರ
ಕೂಡ ಅವರ ಬಗ್ಗೆ ಅಪರಿಮಿತ ಭಕ್ತಿ ವಿಶ್ವಾಸ ತಳೆಯುವುದೇನೂ
ಆಶ್ಚರ್ಯವಲ್ಲ. ನಾನು ಶ್ರೀಧರ್ ನಾಲ್ಕಾರು ದಿನ ನಿಮ್ಮ ಮನೆಯಲ್ಲ
ದ್ದೆವು. ನಿನ್ನನ್ನು ಕಾಣುವಂತೆ ನಮ್ಮನ್ನೂ ಕಂಡು, ನಮ್ಮ ಜೀವನವನ್ನ
ಬೆಳಗಿದ ಆ ತಾಯಿ ದೇವಿಯನ್ನು ಹೇಗೆ ಮರೆಯಲಿ ?"

ಸಂಭಾಷಣೆ ಕ್ರಮಕ್ರಮೇಣ ಕೋಪೋದ್ರೇಕಗಳಿಗೆ ಪೀಠಿ
ಹಾಕುತ್ತಿದ್ದುದನ್ನು ಕಂಡ ಶ್ರೀಧರ ಮಧ್ಯೆ ಬಾಯಿಹಾಕಿ

"ನೀನು ನಾಣಿ ವಿಷಯ ತುಂಬ ತಪ್ಪು ತಿಳಿದುಕೊಂಡಿರು
ಚಿನ್ನಸ್ವಾಮಿ." ಎಂದ.

"ಹೇಗೆ ? ತಪ್ಪು ನನ್ನದಾದರೆ ಒಪ್ಪಿಕೊಳ್ಳಲು ನಾನು ಸಿದ್ಧನಾಗ
ದ್ದೇನೆ."

"ನಾಣಿಗೆ ತಾಯಿಯ ಬಗ್ಗೆ ಪ್ರೀತಿ ಗೌರವವಿಲ್ಲ ಎಂದು ನೀನು ಹೇಳಬಾರದಾಗಿತ್ತು."

"ಹಾಗೆ ನಾನು ಹೇಳಲಿಲ್ಲ. ಮಗನ ಉತ್ಕರ್ಷಕ್ಕಾಗಿ ತಾಯಿ ಹೇಳಿದ ಮಾತನ್ನು ಮಗ ನಿರಾಕರಿಸಬಾರದೆಂದು ಹೇಳಿದೆ."

"ನಾಣಿ ತಾಯಿಯ ಮಾತನ್ನು ನಿರಾಕರಿಸಿಲ್ಲ."

"ಬಹಳ ಸಂತೋಷ. ತಾಯಿ ತಂದೆಯ ಮಾತನ್ನು ಗೌರವಿಸದ ಮಗನನ್ನು ನಾನು ಗೌರವಿಸಲಾರೆ ನಾಣಿ—ಅಂಥ ವ್ಯಕ್ತಿಯನ್ನು 'ಗೆಳೆಯ' ಎಂದು ಕರೆಯಲು ನಾನು ಹೆದರುತ್ತೇನೆ."

"ನನ್ನ ಗೆಳೆತನ ನಿನಗೆ ಬೇಡವಾದರೆ ಬಿಡಬಹುದು. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ."

"ನನಗೆ ಬೇಡವಾಗಿದ್ದರೆ ನಿನ್ನೊಂದಿಗೆ ಇಷ್ಟು ಚರ್ಚೆಮಾಡುವ ತೊಂದರೆಯೇಕೆ ತೆಗೆದುಕೊಳ್ಳುತ್ತಿದ್ದೆ. ಪರಸ್ಪರ ಪ್ರಶಂಸೆಮಾಡಿಕೊಂಡು ಕಾಲ ಕಳೆಯುವುದಲ್ಲ ಗೆಳೆಯರ ಕೆಲಸ. ಪರಸ್ಪರ ಲೋಪ ದೋಷಗಳನ್ನು ತೋರಿಸಿಕೊಟ್ಟು, ತಿದ್ದಿಕೊಳ್ಳುವುದಕ್ಕೆ ನೆರವಾಗುವುದೂ ಗೆಳೆಯರ ಕರ್ತವ್ಯ. ನಿನ್ನ ಮನಸ್ಸಿಗೆ ಬೇಸರವಾಗುವುದೆಂದು ನಾನು ಸತ್ಯ ಹೇಳಲು ಹಿಂಜರಿದರೆ ನನ್ನ ಜೀವನವೇ ಸುಳ್ಳಾಗುತ್ತದೆ. ಆಗ ನಾನು ಗೆಳೆತನಕ್ಕೆ ಅನರ್ಹವಾಗುವುದು ಮಾತ್ರವೇ ಅಲ್ಲ – ಮನುಷ್ಯನೆನಿಸಿಕೊಳ್ಳಲೂ ಅನರ್ಹವಾಗುತ್ತೇನೆ."

"ಹೋಗಲಿ ಬಿಡಪ್ಪ. ವಾದ ಸಾಕು" ಎಂದು ಶ್ರೀಧರ ಭರತ ವಾಕ್ಯ ನುಡಿದ.

ಹೊರಗೆ ತೋರಿಸಿಕೊಳ್ಳದಿದ್ದರೂ ನಾಣಿಯ ಮನಸ್ಸಿನಲ್ಲಿ ಚಿನ್ನಸ್ವಾಮಿಯ ಬಗ್ಗೆ ಅಸಂತೋಷಮೂಡಿತು. ನಾಣಿಯ ಮನೋಗತವನ್ನರಿತ ಚಿನ್ನಸ್ವಾಮಿ ಅವನ ಸ್ನೇಹವನ್ನು ಸಂಪೂರ್ಣವಾಗಿ ಕಡಿದು ಹಾಕದಿದ್ದರೂ, ದೂರವಿರುತ್ತಿದ್ದ.

ನವರಾತ್ರಿ ರಜೆಗೆ ನಾರಾಯಣಸ್ವಾಮಿ ಊರಿಗೆ ಬರುವಾಗ ಚಿನ್ನಸ್ವಾಮಿ, ಶ್ರೀಧರ ಇಬ್ಬರನ್ನೂ ಕರೆದುಕೊಂಡು ಬರಬೇಕೆಂದು ರುಕ್ಮಿಣಮ್ಮ

ಬರೆದು ತಿಳಿಸಿದ್ದಳು. ಬೇಸಿಗೆಯ ರಜದಲ್ಲಿ ನಾಣಿಯೊಂದಿಗೆ ಮಂಡ್ಯಕ್ಕೆ ಹೋಗಿದ್ದ ಚಿನ್ನಸ್ವಾಮಿ ವಿಶೇಷ ಆಸ್ಥೆಯಿಂದ ನವರಾತ್ರಿ ರಜವನ್ನೆದುರುನೋಡುತ್ತಿದ್ದ. ನಾಣಿ ತನ್ನನ್ನು ಖಂಡಿತವಾಗಿ ಜತೆಯಲ್ಲಿ ಕರೆದುಕೊಂಡು ಹೋಗುತ್ತಾನೆಂದು ಅವನು ಆಸೆಪಟ್ಟು ಕೊಂಡಿದ್ದ.

ರಜೆ ಆರಂಭವಾಗುವ ಮುನ್ನ ರುಕ್ಮಿಣಮ್ಮ ಮತ್ತೊಮ್ಮೆ ಮಗನಿಗೆ ಕಾಗದ ಬರೆದು ಗೆಳೆಯರನ್ನು ಅವಶ್ಯಕವಾಗಿ ಕರೆದುಕೊಂಡು ಬರಬೇಕೆಂದು ತಿಳಿಸಿದ್ದರು.

ರಜಾ ಬರುವುದಕ್ಕೆ ಒಂದು ದಿವಸ ಮುಂಚಿತವಾಗಿಯೇ ನಾಣಿ ಶ್ರೀಧರನೊಂದಿಗೆ ಮಂಡ್ಯಕ್ಕೆ ಪ್ರಯಾಣ ಬೆಳಸಿಬಿಟ್ಟ. ಜತೆಯಲ್ಲಿ ಬಾರೆಂದು ಚಿನ್ನಸ್ವಾಮಿಯನ್ನು ಕರೆಯಲಿಲ್ಲ.

ಚಿನ್ನಸ್ವಾಮಿ ಮನಸ್ಸಿಗೆ ಕಟುಯಾತನೆಯಾಯಿತು. ಸದುದ್ದೇಶ ದಿಂದ ತಾನು ಆಡಿದ ಮಾತನ್ನು ಅಪಾರ್ಥಮಾಡಿಕೊಂಡು ನಾಣಿ ಈ ರೀತಿ ಹಟ ಸಾಧಿಸುತ್ತಾನೆಂದು ಅವನು ಕನಸುಮನಸಿನಲ್ಲಿಯೂ ಎಣಿಸಿರಲಿಲ್ಲ. ನಾಣಿಯ ತಾಯಿಯವರನ್ನು ಕಂಡು ಅವರ ಪಾದ ರಜವನ್ನು ತಲೆಯಲ್ಲಿ ಮುಡಿಯಲು ತನಗೆ ಅವಕಾಶವಿಲ್ಲವಾಯಿತಲ್ಲಾ ಎಂದು ಚಿನ್ನಸ್ವಾಮಿ ಮರುಗಿದ.

ನಾಣಿ, ಶ್ರೀಧರ ಮಂಡ್ಯ ತಲುಪಿದ ಕೂಡಲೆ ರುಕ್ಮಿಣಮ್ಮ

"ಚಿನ್ನಸ್ವಾಮಿ ಏಕೆ ಬರಲಿಲ್ಲ ?" ಎಂದು ಕೇಳಿದರು.

" 'ನಾನು ಓದಿಕೊಳ್ಳಬೇಕು, ಬರಲಾಗುವುದಿಲ್ಲ' ಎಂದವನು ತಿಳಿಸಿದನಮ್ಮ."

"ಇಲ್ಲೇ ಓದಿಕೊಳ್ಳ ಬಹುದಾಗಿತ್ತಲ್ಲ !"

"ನಾನು ಅದೇ ಹೇಳಿದೆ. ನನ್ನ ಮಾತು ಕೇಳಲಿಲ್ಲ,"

"ನವರಾತ್ರಿಗೆ ಇಲ್ಲಿಗೆ ಖಂಡಿತ ಬರುವುದಾಗಿ ತಿಳಿಸಿದ್ದ."

"ಅವನ ರೀತಿನೀತಿಯೇ ಒಮ್ಮೊಮ್ಮೆ ಅರ್ಥವಾಗುವುದಿಲ್ಲ."

"ನಾಣಿ ನಿಜ ಹೇಳು. ನೀನೂ ಚಿನ್ನಸ್ವಾಮಿ ವ್ಯಾಜ

ಕಾದಿರುವಿರಾ ?"

"ವ್ಯಾಜ್ಯ ಏಕಮ್ಮ ಕಾಯಬೇಕು."

"ಚಿನ್ನಸ್ವಾಮಿ ತುಂಬ ಒಳ್ಳೆಯ ಹುಡುಗ. ನೀನು ಅವನ ಸ್ನೇಹಬಿಟ್ಟರೆ ನನ್ನ ಮನಸ್ಸಿಗೆ ವ್ಯಸನವಾಗುತ್ತದೆ. ಈಗಲೂ ಸಾಧ್ಯ ವಾದರೆ ಅವನಿಗೊಂದು ಕಾಗದ ಬರೆದು ಕರೆಸು."

"ನಾನು ಸುಳ್ಳು ಹೇಳುತ್ತೇನೇನಮ್ಮ. ಬೇಕಾದರೆ ಶ್ರೀಧರನನ್ನು ಕೇಳು."

"ನಾಣಿ ಹೇಳುವುದು ನಿಜ ಕಣ್ರಮ್ಮ. ಚಿನ್ನಸ್ವಾಮಿ ಬರಲಾಗು ವುದಿಲ್ಲವೆಂದು ತಿಳಿಸಿದ" ಎಂದು ಶ್ರೀಧರ ಸುಳ್ಳು ಸಾಕ್ಷ್ಯ ನುಡಿದ.

ಇವರಿಬ್ಬರೂ ಏನನ್ನೋ ಮರೆಮಾಚುತಿದ್ದಾರೆಂದು ರುಕ್ಮಿಣಮ್ಮನ ಮನಸ್ಸಿಗೆ ಹೊಳೆಯಿತು. ಸದ್ಯಕ್ಕೆ ವಿಷಯವನ್ನು ಕೆಣಕಿ ಕೆದಕಿ ಪರೀಕ್ಷಿಸುವುದಕ್ಕಿಂತ ಸುಮ್ಮನಿದ್ದು ಕಾಲಕ್ರಮೇಣ ತಿಳಿಯುವುದೇ ಲೇಸೆಂದು ಭಾವಿಸಿದರು. ತಾಯಿ ವಿಷಯವನ್ನು ಕೆಣಕಿ ಕೇಳದಿದ್ದುದಕ್ಕೆ ನಾಣಿ ಮನಸ್ಸಿನಲ್ಲಿಯೇ ಅವಳನ್ನು ಅಭಿನಂದಿಸಿದ.

೩೩

ವೆಂಕಣ್ಣನವರು ಮಂಡ್ಯದಲ್ಲಿ ಪುರಾತನ ಆಲದಮರದಂತೆ ಬೇರು ಬಿಟ್ಟಿದ್ದರು. ವಕೀಲವೃತ್ತಿ ಅವರ ಸರ್ವಸ್ವಾಮ್ಯವಾಗಿತ್ತು. ಈ ವೃತ್ತಿಯ ಆವರಣದೊಳಗೆ ಬರಲು ಮತ್ತೆಯಾರಿಗೂ ಅಧಿಕಾರವಿಲ್ಲವೆಂಬ ಅಭಿಪ್ರಾಯ ವೆಂಕಣ್ಣನವರ ಮನಸ್ಸಿನಲ್ಲಿ ದೃಢವಾಗಿ ನೆಟ್ಟಿತ್ತು. ಮಾಧವರಾಯ ಮಂಡ್ಯ ಸೇರಿದಕೂಡಲೆ ತನ್ನ ಪ್ರತಿಷ್ಠೆ ಬೆಳಸಿಕೊಂಡಿದ್ದುದು ವೆಂಕಣ್ಣನವರಿಗೆ ನುಂಗಲಾರದ ತುತ್ತಾಗಿತ್ತು. ಬಾರ್ ಅಸೋಸಿಯೇಷನ್ನಿನ ಕಟ್ಟಡದ ಪ್ರಕರಣದಲ್ಲಿ ಮಾಧವರಾಯನಿಗೆ ದೊರೆತ ವಿಜಯ ವೆಂಕಣ್ಣನವರ ಸರ್ವಮಾನ್ಯಕ್ಕೆ ಪ್ರಬಲ ಧಕ್ಕೆ ಕೊಟ್ಟದ್ದುದಲ್ಲದೆ ಅವರ ಅಹಂಕಾರವನ್ನೂ ಹಿಡಿದಲುಗಾಡಿಸಿತ್ತು.

ರುಕ್ಮಿಣಿಯಮ್ಮನ ದೀನಸೇವೆಯೂ ಪರ್ಯಾಯವಾಗಿ ಮಾಧವರಾಯನ ಉಚ್ಛ್ರಾಯಕ್ಕೆ ಕಾರಣವಾಗಿತ್ತು. ಕಕ್ಷಿಗಾರರನ್ನು ಮಾಧವರಾಯ ವೆಂಕಣ್ಣನವರಂತೆ ಹಿಂಜಿ ಹೀರದಿದ್ದರೂ ಅವರೇ ಕೈತುಂಬ ಹಣ ಕೊಡುತ್ತಿದ್ದರು. ಹಣವನ್ನು ಕೂಡಿಟ್ಟು, ದೊಡ್ಡ ಆಸ್ತಿಮಾಡಬೇಕೆಂಬ ಯೋಚನೆ ಪತಿಪತ್ನಿಯರಿಬ್ಬರಿಗೂ ಬರಲೊಲ್ಲದು. ಇಬ್ಬರೂ ಧಾರಾಳವಾಗಿ ಖರ್ಚುಮಾಡುತ್ತಿದ್ದರು. ಮಾಧವರಾಯನ ಬಳಿಗಾಗಲಿ ರುಕ್ಮಿಣಿಯಮ್ಮನ ಬಳಿಗಾಗಲಿ ಬಂದು 'ದೇಹಿ' ಎಂದವರು ಯಾರೂ ಬರಿಗೈಯಲ್ಲಿ ಹಿಂದಿರುಗಿ ಹೋಗುತ್ತಿರಲಿಲ್ಲ.

ವಕೀಲವೃತ್ತಿಯಲ್ಲಿ ಹಿರಿಯನೆನಿಸಿಕೊಂಡು ವೆಂಕಣ್ಣನವರಿಗೆ
ಸಮನಾಗಿದ್ದರೂ ಮಾಧವರಾಯ ಹಿರಿಯವಕೀಲರ ಗೋಷ್ಠಿ ಸೇರು
ರಲಿಲ್ಲ. ಹಿರಿಯವಕೀಲರ ಆಸಕ್ತಿಯೆಲ್ಲಾ ಮೂರೇ ವಿಷಯಗಳಿಗೆ
ತಕವಾಗಿತ್ತು. ಕೋರ್ಟಿನ ವ್ಯವಹಾರದ ಮಾತುಕತೆ ; ಮನೆಸಂಸಾರದ
ಪತ್ರಯ ; ತಮ್ಮ ರೋಗರುಜಿನಾದಿಗಳ ವರ್ಣನೆ.

"ಇವರ ಜತೆ ಮೂರು ತಿಂಗಳಿದ್ದರೆ ಸಾಕು, ಮೂವತ್ತು ವರ್ಷಗಳ
ುವಾಯ ಬರುವ ವೃದ್ಧಾಪ್ಯ ಇಂದೇ ಬರುತ್ತದೆ."
ಂದು ಮಾಧವರಾಯ ಹೇಳುತ್ತಿದ್ದ. ಅವನ ಒಲವು ಸಹಜ
ಗಿ ಕಿರಿಯವಕೀಲರ ಕಡೆಗಿದ್ದು, ಹಿರಿಯವಕೀಲರ ಆಗ್ರಹಕ್ಕೆ
ತ್ರವಾಗಿತ್ತು. ಸರಸ ಮಾತುಕತೆ, ರುಚಿರುಚಿಯಾದ ಊಟ
ಪಚಾರ, ಒಳ್ಳೆಯ ಸಂಗೀತ ಶ್ರವಣ, ಟೆನಿಸ್ ಆಟಗಳೆಲ್ಲದರಲ್ಲಿಯೂ
ಾಧವರಾಯ ಮುಂದಾಳುತನ ವಹಿಸುತ್ತಿದ್ದ. ಕಿರಿಯವಕೀಲರು
ದಾ ಅವನನ್ನು ಸುತ್ತಿಕೊಂಡಿರುತ್ತಿದ್ದರು.

ಪ್ರತಿಭಾನುವಾರ ಯಾವದಾದರೂ ಉತ್ಸವವಿರಲೇ ಬೇಕು.
ರದಿಯ ಪ್ರಕಾರ ಒಬ್ಬೊಬ್ಬರ ಮನೆಯಲ್ಲಿ ಸೇರಿ ಸುಖಭೋಜನ
ಾಡಿ ಬ್ರಿಡ್ಜ್ (Bridge) ಆಡಬೇಕು. ಕೋರ್ಟಿಗೆ ಒಂದೆರಡು
ನಗಳು ರಜಾಸಿಕ್ಕಿದರೆ ಅಕ್ಕಪಕ್ಕದ ಊರುಗಳಿಗೆ ಪ್ರವಾಸ ಹೋಗಿ
ರಬೇಕು.

ನವರಾತ್ರಿ ರಜಾಕಾಲದಲ್ಲಿ ಶ್ರವಣಬೆಳಗೊಳಕ್ಕೆ ಬೈಸಿಕಲ್
ಪ್ರವಾಸ ಹೋಗುವುದೆಂದು ಮಾಧವರಾಯನ ಮಿತ್ರಮಂಡಳಿ ನಿರ್ಧರಿಸಿ
ವನಿಗೆ ತಿಳಿಸಿದರು.

"ವರ್ಷಾವಧಿ ಹಬ್ಬ, ಮನೆಯಲ್ಲಿ ಅಭಿಷೇಕ ಪೂಜೆಯಾಗಬೇಕು.
ಗ ನಾನು ಬಂದರೆ ಮನೆಯವರು ಸುಮ್ಮನಿರುತ್ತಾರೆಯೇ ?"

"ರಜಾ ಬಂದ ಕೂಡಲೆ ಹೊರಟು ಬಿಡೋಣ. ದುರ್ಗಾಷ್ಟಮಿ
ೇಳಿಗೆ ಊರು ಸೇರಿದರಾಯಿತು. ಇದರಿಂದ ಪ್ರವಾಸವೂ ಆಗುತ್ತದೆ,
ೂಜೆ ಪುರಸ್ಕಾರಗಳಿಗೂ ತೊಂದರೆಯಾಗುವುದಿಲ್ಲ."

ಮಾಧವರಾಯ ಗೆಳೆಯರ ಸಲಹೆಗೆ ಒಪ್ಪಿಗೆ ಕೊಡ
ಬೇಕಾಯಿತು.

ರಜೆಕಾಲದಲ್ಲಿ ಮನೆಗೆ ಬಂದ ಮಗನನ್ನೂ ಅವನ ಗೆಳ
ಶ್ರೀಧರನನ್ನೂ ಮಾಧವರಾಯ ಸ್ವಾಗತಿಸಿ ತಾನು ಶ್ರವಣಬೆಳಗೊಳ
ಹೋಗಿ ಬರುವ ವಿಷಯ ತಿಳಿಸಿ

"ನೀವು ಸುಖವಾಗಿರಿ. ಎರಡು ಮೂರು ದಿವಸಗಳಲ್ಲಿ ಬಂ
ಬಿಡುತ್ತೇನೆ." ಎಂದು ಹೇಳಿದ.

"ಶ್ರವಣಬೆಳಗೊಳಕ್ಕೆ ಹೋಗಿಬರುವದು ಸುಮಾರು ನೂ
ಮೈಲಿಗಳಾಗುತ್ತವೆ. ಹಿಂದಾದ ಅಪಘಾತದಿಂದ ನಿಮ್ಮ ಕಾಲುಗ
ಇನ್ನೂ ಪೂರ್ಣವಾಗಿ ಬಲಪಡೆದಿಲ್ಲ. ಇಷ್ಟುದೂರ ಬೈಸಿಕಲ್ಲಿ
ಹೋಗಿ ಬರುವುದಕ್ಕಾಗುತ್ತದೆಯೇ ?" ಎಂದು ರುಕ್ಮಿಣಿಯ
ಕೇಳಿದಳು.

"ಕಾಲಿನ ಬಾಧೆಯಿಲ್ಲ ರುಕ್ಕೂ. ಹೋಗಿ ಬರಬಲ್ಲೆ ನೀ
ಯೋಚನೆಮಾಡಬೇಡ." ಎಂದು ಪತ್ನಿಯನ್ನು ಸಮಾಧಾನಗೊಳಿಸಿ

ಮಾಧವರಾಯ, ಅವನ ನಾಲ್ವರು ಗೆಳೆಯರು ಸೋಮವಾ
ಬೆಳಿಗ್ಗೆ ಐದು ಗಂಟೆಗೇ ಹೊರಟರು. ಪ್ರತಿಯೊಬ್ಬರೂ ಮನೆಯ
ಒಂದೊಂದು ಪದಾರ್ಥಮಾಡಿಸಿ ತರಬೇಕೆಂದು ನಿಷ್ಕರ್ಷೆಯಾಗಿತ್ತ
ರಾಮಸ್ವಾಮಿಅಯ್ಯಂಗಾರ್ ಪುಳಿಯೋಗರೆ, ಕೃಷ್ಣಮೂರ್ತಿ ಉದ್
ವಡೆ, ಶಿವಸ್ವಾಮಿ ಮೊಸರನ್ನ, ಬಿಳಿಗಿರಿ ಸಕ್ಕರೆ ಪೊಂಗಲು, ಮಾಧ
ರಾಯ ಬಿಸಿ ಬೇಳೆ ಹುಳಿಯನ್ನ ತಂದಿದ್ದರು.

ದಾರಿಯಲ್ಲಿ ಮಧ್ಯೆ ಮಧ್ಯೆ ಕಾಫಿಯಾಗುತ್ತಿತ್ತು. ಮಧ್ಯಾ
ಒಂದು ಹಾಳುಮಂಟಪದಲ್ಲಿ ತಂಗಿ ಊಟ ತೀರಿಸಿಕೊಂಡು, ಸ್ವ
ಹೊತ್ತು ವಿಶ್ರಾಂತಿಪಡೆದು ಸಂಜೆ ಆರರ ವೇಳೆಗೆ ಶ್ರವಣಬೆಳಗೊ
ತಲುಪಿ ಟ್ರಾವಲರ್ಸ್ ಬಂಗ್ಲೋದಲ್ಲಿ ಬೀಡುಬಿಟ್ಟರು. ಬುತ್ತಿ ಸಾಕಷ
ಉಳಿದಿದ್ದುದರಿಂದ ರಾತ್ರಿ ಊಟದ ಯೋಚನೆ ಇರಲಿಲ್ಲ.

ಕೃಷ್ಣಮೂರ್ತಿ, ಶಿವಸ್ವಾಮಿ ಊರೊಳಗೆ ಹೋಗಿ ದೇವಸ್ಥಾನ

ೂಜಾರಿಗಳನ್ನು ಕರೆದುಕೊಂಡು ಬಂದರು. ಅವರ ಜತೆ ಗೆಳೆಯರು ಟ್ಟವೇರಿದರು. ಪೂಜಾರಿಗಳು ಫ್ಲಡ್ ಲೈಟುಗಳ ಬೆಳಕಿನಲ್ಲಿ ಬಾಹು ಲಿಸ್ವಾಮಿಯ ದರ್ಶನ ಪಡೆಯಲು ಅನುಕೂಲ ಮಾಡಿಕೊಟ್ಟರು.

ಬೆಟ್ಟ ಇಳಿದು ಬರುವ ವೇಳೆಗೆ ರಾತ್ರಿ ಹತ್ತು ಗಂಟೆಯಾಯಿತು.

ಟ್ರಾವಲರ್ಸ್ ಬಂಗ್ಲೋ ಹೊರಗೆ ಹುಲ್ಲಿನಮೇಲೆ ಕುಳಿತು ಎಲ್ಲರೂ ುಳಿದಿದ್ದ ಬುತ್ತಿಯನ್ನು ತಿಂದು ಮುಗಿಸಿದರು. ಮಾಧವರಾಯ ೂಟಮುಗಿಸಿ ಕೈತೊಳೆದುಕೊಳ್ಳಲು ಹತ್ತು ಅಡಿ ಮುಂದಕ್ಕೆ ಹೋದ. ತೊಳೆದುಕೊಂಡು ಹಿಂದಿರುಗುತ್ತಿರುವಂತೆ ಯಾವದೋ ಹುಳು ಕಾಲು ಚ್ಚಿದಂತಾಯಿತು. ಕಚ್ಚಿದ ಕಡೆ ಸ್ವಲ್ಪ ಉರಿಯೆದ್ದಿತು, ಒಂದು ಳ್ಳೆ ಕಾಣಿಸಿಕೊಂಡಿತು.

ಗೆಳೆಯರು ಟಾರ್ಚ್‌ಬಿಟ್ಟು ನೋಡಿದರು. ಯಾವ ಹುಳುವೂ ಣ್ಣಿಗೆ ಬೀಳಲಿಲ್ಲ. ಮಾಧವರಾಯನಿಗೆ ಕ್ಷಣಕ್ಷಣಕ್ಕೆ ಉರಿ, ಹೆಚ್ಚು ತ್ತು. ನಾಲ್ಕಾರು ನಿಮಿಷಗಳಲ್ಲಿ ಮೈಬೆವತು ಹೋಯಿತು. ಉರಿ, ಳುಕಿನ ವೇದನೆ ಸಹಿಸಲಸಾಧ್ಯವಾಯಿತು. ಪ್ರವಾಸದ ಸಂತೋಷ, ುತ್ಸಾಹದಲ್ಲಿದ್ದ ಗೆಳೆಯರೆಲ್ಲರಿಗೂ ಮಂಕುಕವಿಯಿತು.

ರಾಮಸ್ವಾಮಿ, ಬಿಳಿಗಿರಿ ಊರೊಳಗೆ ಹೋಗಿ ಡಾಕ್ಟರನ್ನು ರೆದುಕೊಂಡು ಬಂದರು. ಡಾಕ್ಟರು ಒಂದು ಇಂಜಕ್ಷನ್ ಚುಚ್ಚಿ, ುಳ್ಳೆಯಮೇಲೆ ಮುಲಾಮು ಲೇಪಿಸಿದರು. ಮಾಧವರಾಯನನ್ನು ೂರಿಗೆ ಕಳುಹಿಸಿಕೊಡುವುದೊಂದೇ ಮಾರ್ಗವೆಂದು ಗೆಳೆಯರು ರ್ಧರಿಸಿದರು.

ಡಾಕ್ಟರ ಸಹಾಯದಿಂದ ಎತ್ತಿನಗಾಡಿ ಗೊತ್ತುಮಾಡಿ, ತುಂಬ ುಲ್ಲು ಹಾಕಿ ಮಾಧವರಾಯನನ್ನು ಮಲಗಿಸಿದರು. ಗಾಡಿಯಮೇಲೆ ೈಸಿಕಲ್ ಕಟ್ಟಲಾಯಿತು. ಗಾಡಿಯ ಜತೆಯಲ್ಲಿಯೇ ಗೆಳೆಯರು ೈಸಿಕಲ್ ಮೇಲೆ ಹೊರಟರು.

ಮಾಧವರಾಯನ ಗಾಡಿ ಮಂಡ್ಯ ತಲುಪುವ ವೇಳೆಗೆ ಬೆಳ ಾಯಿತು.

ಮನೆಮುಂದೆ ಸಾರಿಸಿ ರಂಗವಲ್ಲಿ ಇಡುತ್ತಿದ್ದ ರುಕ್ಮಿಣಮ್ಮ ಗಾ
ಬಂದು ನಿಂತುದನ್ನು ಕಂಡು ಆಶ್ಚರ್ಯಗೊಂಡಳು. ಗೆಳೆಯ
ಮಾಧವರಾಯನನ್ನು ಹೊತ್ತು ತಂದು ಒಳಗೆ ಮಲಗಿಸಿದರು.

ರುಕ್ಮಿಣಮ್ಮ, ಗೋದಮ್ಮನವರ ಜಂಘಾಬಲವೇ ಉಡುಗಿ
ತಾಯಿತು. ಡಾಕ್ಟರು ಬಂದು ನೋಡಿ

"ಯಾವದೋ ವಿಷ ಜಂತು ಕಡಿದಿದೆ. ಉರಿ, ಗಾಯದವೇ
ದ್ದಿರುವ ಗುಳ್ಳೆನೋಡಿದರೆ ಉರಿಮಂಡಲ ಕಡಿದಿರಬೇಕೆನಿಸುತ್ತದೆ
ಎಂದರು. ಡಾಕ್ಟರ ಮಾತು ಗೋದಮ್ಮ, ರುಕ್ಮಿಣಮ್ಮನವರನ
ಮತ್ತಷ್ಟು ಅಧೀರರನ್ನಾಗಿ ಮಾಡಿತು. ಗೋದಮ್ಮ ಕಂಬನಿದುಂಬಿ

"ಪ್ರಾಣಕ್ಕೆ ಅಪಾಯವಿಲ್ಲವೇ ?" ಎಂದು ಕೇಳಿದರು.

"ಈ ಜಾತಿ ಹಾವುಗಳಲ್ಲಿ ಎರಡು ವಿಧ—ಉರಿಮಂಡಲ, ಕೊಳ
ಮಂಡಲ, ಕೊಳಕು ಮಂಡಲ ಕಡಿದರೆ ಆ ಜಾಗವೆಲ್ಲಾ ಕೊಳೆಯು
ಒರುತ್ತದೆ. ಪ್ರಾಣವುಳಿಯುವುದು ದುಸ್ತರ. ರಾಯರನ್ನು ಕಡಿದಿ
ವುದು ಉರಿಮಂಡಲ—ಪ್ರಾಣಕ್ಕೆ ಭಯವಿಲ್ಲ. ಆದರೆ ಅಸಾಧ್ಯ ಉ
ನೋವು, ಚಳಕು ಸಹಿಸಬೇಕಾಗುತ್ತದೆ" ಎಂದು ಹೇಳಿದರು.

ಮಾಧವರಾಯನಿಗಾದ ಅಪಘಾತದಿಂದ ಮನೆಯಲ್ಲಿ ದುಃ
ತುಂಬಿತು. ಹಬ್ಬದ ನೆನಪೂ ಹಾರಿಹೋಯಿತು. ದಸರಾ ರಜವಿಂತ
ಆಭಾಸದಲ್ಲಿ ಪರ್ಯವಸಾನ ಹೊಂದಿದುಕ್ಕೆ ನಾರಾಯಣಸ್ವಾಮಿ ಸಿ
ಗುಟ್ಟಿದ.

ಡಾಕ್ಟರು ಹತ್ತಾರು ಇಂಜಕ್ಷನ್ ಚುಚ್ಚಿದರು. ಲೇಪ, ಕಾವು
ಗಳೂ ಆದವು. ಮಾಧವರಾಯನಿಗೆ ಯಾವ ಗುಣವೂ ಕಂಡು ಬ
ಲಿಲ್ಲ. ಮಗನ ಸಂಕಟ ನೋಡಲಾರದೆ ಒಂದು ದಿನ ಗೋದಮ್ಮ

"ರುಕ್ಕೂ, ಡಾಕ್ಟರುಗಳ ಕೈಯಲ್ಲಿ ಇದು ಬಗೆಹರಿಯಲ್ಲವ
ನೀನೇ ಏನಾದರೂ ಔಷಧ ಕೊಟ್ಟು ಗುಣಪಡಿಸಬೇಕು." ಎಂದರು.

"ವಿಷ ಜಂತು ಕಡಿದುದಕ್ಕೆ ನಾನು ಯಾವಾಗಲೂ ಚಿಕಿತ್ಸೆಮಾ
ಲ್ಲವಲ್ಲಮ್ಮಾ."

"ದೇವರ ಮೇಲೆ ಭಾರಹಾಕಿ ನಿನಗೆ ತಿಳಿದುದನ್ನು ಮಾಡು. ನಿನ್ನ ಔಷಧದಿಂದಲೇ ಗುಣವಾಗುತ್ತದೆ ಎಂದು ನನ್ನ ಅಂತರಾತ್ಮ ಹೇಳುತ್ತಿದೆ" ಎಂದರು. ರುಕ್ಮಿಣಮ್ಮ ದೀರ್ಘವಾಗಿ ಆಲೋಚಿಸಿ ತಂದೆಯ ಆಶೀರ್ವಾದದಿಂದ ದೊರೆತಿದ್ದ ಪುಸ್ತಕ ತೆಗೆದು ಹುಡುಕಿ ನೋಡಿದಳು. ಅದರಲ್ಲಿದ್ದ ವಿಷ ಚಿಕಿತ್ಸೆಯ ಭಾಗ ಓದಿಕೊಂಡು ಚಿಕಿತ್ಸೆಯನ್ನು ತಾನೇ ರೂಪಿಸಿಕೊಂಡಳು.

ಕಾಲಿನಮೇಲೆ ಕಾಣಿಸಿಕೊಂಡ ಗುಳ್ಳೆ ಕ್ರಮಕ್ರಮೇಣ ಬೆಳೆದು ಒಂದು ನಿಂಬೆಯ ಹಣ್ಣಿನ ಗಾತ್ರಕ್ಕಾಗಿತ್ತು. ರುಕ್ಮಿಣಿ ನಾಲ್ಕಾರು ಸೊಪ್ಪುಗಳನ್ನು ಸಂಗ್ರಹಿಸಿ, ಅವುಗಳನ್ನು ಅರೆದು ಗುಳ್ಳೆಯಮೇಲೆ ಲೇಪಿಸಿ, ಹಗುರವಾಗಿ ಕಾವುಟ ಕೊಟ್ಟು ಕಟ್ಟುತ್ತಿದ್ದಳು. ಕೆಲವು ಮೂಲಿಕೆಗಳು, ಸೊಪ್ಪುಗಳಿಂದ ತೆಗೆದ ಕಷಾಯವನ್ನು ನಿತ್ಯ ಮೂರು ಸಲ ಮಾಧವರಾಯನಿಗೆ ಕುಡಿಸುತ್ತಿದ್ದಳು.

ರುಕ್ಮಿಣಿ ಕಟ್ಟಿದ ಲೇಪದಿಂದ ಮಾಧವರಾಯನಿಗೆ ಗುಣಕಂಡು ಬರುವುದರ ಬದಲು ಸಂಕಟ ಅಧಿಕವಾಯಿತು. ಗುಳ್ಳೆಯೆದ್ದಿದ್ದ ಭಾಗದಲ್ಲಿ ವಿಶೇಷ ಉರಿ, ಚಳಕು ಕಾಣಿಸಿಕೊಂಡಿತು. ರುಕ್ಮಿಣಿಯನ್ನು ಭಯ, ಶೋಕ ಆವರಿಸಿತು. ತನ್ನ ವೈದ್ಯವಿಜ್ಞಾನದಲ್ಲಿ ಅಪನಂಬಿಕೆ, ತಿರಸ್ಕಾರ ಹುಟ್ಟಿತು.

ಗೋದಮ್ಮನವರ ಕಣ್ಣುಗಳು ಪ್ರಶ್ನೆ ಕೇಳುತ್ತಿದ್ದವು

"ನಿನ್ನ ಚಿಕಿತ್ಸೆಯಿಂದ ಏನೂ ಪ್ರಯೋಜನವಾಗಲಿಲ್ಲವಲ್ಲ ರುಕ್ಮಿಣಿ. ಡಾಕ್ಟರನ್ನಾದರೂ ಕರೆಸೋಣ"

ಎರಡು ದಿನಗಳು ಕಳೆದವು. ಮೂರನೆಯ ದಿನ ರುಕ್ಮಿಣಿ ಪೂಜೆ ಮುಗಿಸಿಕೊಂಡು ಬಂದು ಅತ್ತೆಗೆ

"ಅಮ್ಮಾ, ಇವತ್ತು ಗುಳ್ಳೆಯೊಡೆದು ಅವರಿಗೆ ಗುಣ ಕಂಡು ಬರದಿದ್ದರೆ ನಾನು ವೈದ್ಯಮಾಡುವುದನ್ನೇ ಬಿಟ್ಟುಬಿಡುತ್ತೇನೆ." ಎಂದಳು.

"ಹಾಗನ್ನಬೇಡ ತಾಯಿ—ನೂರಾರು ಜನಕ್ಕೆ ಉಪಯೋಗವಾಗುವ ವೈದ್ಯಸೇವೆ ಬಿಡಬೇಡ. ಮಾಧೂ ಕರ್ಮಕ್ಕೆ ಯಾರು

ಹೊಣೆ."

"ನನ್ನ ಸ್ವಾಮಿಗೆ ಸ್ವಲ್ಪವಾದರೂ ಹಿತವನ್ನುಂಟುಮಾಡದ ವೈ
ದಿಂದೇನು ಪ್ರಯೋಜನ—ನನ್ನಿಂದ ಏನು ಪ್ರಯೋಜನ ?"

"ನಿರಾಶಳಾಗಬೇಡ ರುಕ್ಕೂ. ದೇವರ ಮೇಲೆ ಭಾರ ಹ
ತೆಪ್ಪಗಿರೋಣ" ಎಂದು ಹೇಳಿದರು. ರಾತ್ರಿ ಮಲಗುವ ಮು
ರುಕ್ಮಿಣಿ ಮಾಧವರಾಯನ ಪಟ್ಟಬಿಚ್ಚಿ ಮತ್ತೆ ಲೇಪ ಹಾಕಿ, ಕಾಷ
ಕೊಟ್ಟು ಮಲಗಿಸಿದಳು. ಮಾಧವರಾಯ ಬಹಳ ಹೊತ್ತು ನರಳುತ್ತ
ಮಲಗಿದ್ದ. ರಾತ್ರಿ ಯಾವದೋ ಝಾವದಲ್ಲಿ ಅವನಿಗೆ ಸ್ವಲ್ಪ ನಿ
ಹತ್ತಿತು. ಬಾಗಿಲ ಬಳಿ ಮಲಗಿದ್ದ ರುಕ್ಮಿಣಿ ಎದ್ದು ಹೋಗಿ ಗಂ
ನನ್ನು ನೋಡಿದಳು. ಸುಖವಾದ ನಿದ್ರೆ ಹತ್ತಿತ್ತು. ರುಕ್ಮಿಣಿ ಹಿಂ
ರುಗಿ ಬಂದು ತನ್ನ ಹಾಸಿಗೆಯಮೇಲೆ ಕುಳಿತು ಗುರುಧ್ಯಾನ ಮಾಡುತ
ರಾತ್ರಿ ದೂಡಿದಳು.

ಬೆಳಗಾದರೂ ಮಾಧೂರಾಯ ಮಲಗಿ ನಿದ್ರಿಸುತ್ತಿದ್ದ. ರುಕ್ಮಿ
ನಿತ್ಯಗೆಲಸಗಳಲ್ಲಿ ಉದ್ಯುಕ್ತಳಾದಳು. ಬೆಳಿಗ್ಗೆ ಸುಮಾರು ಒಂಭತ
ಗಂಟೆಗೆ ಮಾಧವರಾಯನಿಗೆ ಎಚ್ಚರವಾಯಿತು. ನಾಣಿ ಬಂ
ತಾಯಿಗೆ ಸುದ್ದಿ ಮುಟ್ಟಿಸಿದ. ರುಕ್ಮಿಣಿ, ಗೋದಮ್ಮ ಇಬ್ಬರ
ಮಾಧೂರಾಯನ ಹಾಸಿಗೆಯ ಬಳಿಗೆ ಹೋದರು.

ಮಾಧೂರಾಯನ ಮುಖ ಪ್ರಫುಲ್ಲವಾಗಿತ್ತು.

"ರಾತ್ರಿ ಚೆನ್ನಾಗಿ ನಿದ್ರೆ ಬಂದಿತು ರುಕ್ಕೂ" ಎಂದ.

"ಈಗ ಉರಿ, ಚಳಕು ಹೇಗಿದೆ ?"

"ಬಹಳ ಕಡಿಮೆಯಾಗಿದೆ. ಪ್ರಾಯಶಃ ಗುಳ್ಳೆ ಒಡೆದಿರಬಹುದು

ರುಕ್ಮಿಣಿ ಪಟ್ಟುಬಿಚ್ಚಿ ನೋಡಿದಳು. ಗುಳ್ಳೆ ಒಡೆದು ಹೋ
ಅದರಲ್ಲಿ ಸಂಗ್ರಹವಾಗಿದ್ದ ವಿಷಮಿಶ್ರ ರಕ್ತವೆಲ್ಲಾ ಹೊರಗೆ ಬಂದಿತ
ಗಾಯವನ್ನು ಚೆನ್ನಾಗಿ ತೊಳೆದು, ಮತ್ತೆ ಔಷಧ ಲೇಪಿಸಿ ಪಟ
ಬಿಗಿದಳು.

"ಇನ್ನು ಭಯವಿಲ್ಲ ಕಣೇ ತಾಯಿ. ಮಾಧೂ ಗಂಡಾಂತರದಿಂ

ಪಾರಾದ" ಎಂದು ಗೋದಮ್ಮನವರು ಸಂತೋಷ ವ್ಯಕ್ತಮಾಡಿದರು. ರುಕ್ಮಿಣಿಯ ಬಾಯಲ್ಲಿ ಮಾತು ಹೊರಡಲಿಲ್ಲ—ಅವಳ ಕಣ್ಣುಗಳಿಂದ ನಾಲ್ಕು ಹನಿಗಳುದುರಿದವು.

ನಾರಾಯಣಸ್ವಾಮಿ ಬೆಳಿಗ್ಗೆ, ಸಂಜೆ ಒಂದೊಂದು ಸಲ ಕ್ರಮವಾಗಿ ತಂದೆಯ ರೂಮಿಗೆ ಹೋಗಿ ಅವರ ಆರೋಗ್ಯ ವಿಚಾರಿಸಿಕೊಳ್ಳುತ್ತಿದ್ದ. ತಂದೆ ಕಾಹಿಲೆ ಮಲಗಿದುದು ನಾರಾಯಣಸ್ವಾಮಿಗೆ ತುಂಬ ಬೇಸರವನ್ನುಂಟುಮಾಡಿತ್ತು. ಶ್ರೀಧರನೊಂದಿಗೆ

"ನಾವು ಇಲ್ಲಿಗೆ ಬರಲೇ ಬಾರದಾಗಿತ್ತು." ಎಂದೂ ನುಡಿದಿದ್ದ.

ದಸರಾ ರಜಾ ಮುಗಿಯುತ್ತ ಬಂದಿತ್ತು. ಕಾಲೇಜು ಬಾಗಿಲು ತೆಗೆಯುವ ದಿನ ಸಮೀಪಿಸಿತು. ನಾರಾಯಣಸ್ವಾಮಿ ತಾನು ಮೈಸೂರಿಗೆ ಹೊರಡುವ ವಿಷಯ ತಾಯಿಗೆ ತಿಳಿಸಿದ.

"ನಾಲ್ಕು ದಿನವಿದ್ದು ಅವರು ಎದ್ದು ಓಡಿಯಾಡುವಂತಾದಮೇಲೆ ಹೋಗಬಾರದೇ ನಾಣಿ" ಎಂದು ರುಕ್ಮಿಣಮ್ಮ ಕೇಳಿದಳು.

"ಇಲ್ಲಮ್ಮ ಟರ್ಮ್ (Term) ಹೋಗಿಬಿಡುತ್ತದೆ. ಈಗ ಪಾಠ ತಪ್ಪಿಸಿಕೊಂಡರೆ ಮುಂದೆ ನನಗೇ ಕಷ್ಟವಾಗುತ್ತದೆ."

ರುಕ್ಮಿಣಿ ಗಂಡನ ಬಳಿಗೆ ಬಂದು

"ನಾಣಿ ? ರಜಾ ಮುಗಿದಿದೆ. ಮೈಸೂರಿಗೆ ಹೋಗುತ್ತಾನಂತೆ" ಎಂದಳು.

"ಹೋಗಲಿ."

"ನಾಲ್ಕುದಿನ ಇದ್ದು ಹೋಗು ಎಂದು ಹೇಳಿ."

"ಏಕೆ ?"

"ಏಕೆಯೆಂದು ಕೇಳುವಿರಲ್ಲಾ ! ಮಗ ಹತ್ತಿರ ಇರಬೇಡವೇ ?"

"ಇರಬೇಕು. ಅದನ್ನು ಮಗನೇ ತಿಳಿದುಕೊಳ್ಳಬೇಕು. ನನ್ನ ಕಾಹಿಲೆ ವಿಷಯ ಕಮಲೂಗೆ ತಿಳಿಸಬೇಡವೆಂದು ಹೇಳು – ಹುಡುಗಿ ಗಾಬರಿಯಾದಾಳು."

ಮಾಧವರಾಯನ ಮನಸ್ಸಿನಲ್ಲಿದ್ದುದನ್ನು ರುಕ್ಮಿಣಿ ಅರ್ಥಮಾಡಿ

ಕೊಂಡಳು ; ರುಕ್ಮಿಣಿ ಮನಸ್ಸಿನಲ್ಲಿದ್ದುದು ಮಾಧವರಾಯನಿ
ಚೆನ್ನಾಗಿ ಅರ್ಥವಾಗಿತ್ತು. ಹೆಚ್ಚು ಮಾತಿನ ಅವಶ್ಯಕತೆ ಇಬ್ಬರಿಗು
ಕಂಡು ಬರಲಿಲ್ಲ.

ನಾರಾಯಣಸ್ವಾಮಿ ತಂದೆ, ತಾಯಿ, ಅಜ್ಜಿಯ ಅಪ್ಪಣೆ ಪಡೆದ
ಶ್ರೀಧರನೊಂದಿಗೆ ಮೈಸೂರಿಗೆ ಪ್ರಯಾಣಮಾಡಿದ.

ನಾರಾಯಣಸ್ವಾಮಿ ಹಾಸ್ಟೆಲ್ಲಿಗೆ ಬಂದ ದಿನವೇ ಚಿನ್ನಸ್ವಾಮಿ
ಮಾಧವರಾಯರ ಕಾಹಿಲೆಯ ಸುದ್ದಿ ಶ್ರೀಧರನಿಂದ ಗೊತ್ತಾಯಿತು
ಅವನು ಕೂಡಲೆ ನಾಣಿ ಬಳಿಗೆ ಬಂದು

"ನಿನ್ನ ತಂದೆಯವರಿಗೆ ಹೇಗಿದೆ ?" ಎಂದು ಕೇಳಿದ.

"ಈಗ ಆರೋಗ್ಯವಾಗಿದ್ದಾರೆ."

"ಉರಿಮಂಡಲ ಕಡಿಯಿತಂತೆ !"

"ಹೌದು."

"ಪ್ರಾಣಕ್ಕೆ ಭಯವಿಲ್ಲವಷ್ಟೆ !"

"ಇಲ್ಲ – ನಮ್ಮ ತಾಯಿಯೇ ಚಿಕಿತ್ಸೆ ಮಾಡುತ್ತಿದ್ದಾರೆ. ಗುಳ್ಳೆ
ಒಡೆಯಿತು."

"ನೀನು ನಾಲ್ಕುದಿನವಿದ್ದು ಬರಬೇಕಾಗಿತ್ತು ನಾಣಿ. ನಿಮ್ಮ
ತಾಯಿ ಒಬ್ಬರೇ ಆಗುತ್ತಾರೆ. ಅವರಿಗೆ ಧೈರ್ಯ ಹೇಳವುದಕ್ಕಾದರೂ
ನೀನು ನಿಂತಿದ್ದರೆ ಚೆನ್ನಾಗಿತ್ತು."

"ಏನೂ ಅವಶ್ಯಕವಿಲ್ಲ ನೀನು ಮೈಸೂರಿಗೆ ಹೋಗು ಎಂದವರೆ
ಹೇಳಿ ಕಳಿಸಿದರು."

ನಾಣಿಯ ಉತ್ತರ ಚಿನ್ನಸ್ವಾಮಿಗೆ ಸಮಾಧಾನವನ್ನುಂಟು
ಮಾಡದಿದ್ದರೂ ಅವನು ಚರ್ಚೆ ಬೆಳೆಸಲಿಲ್ಲ.

ಮೂರನೆಯ ಬೆಳಿಗ್ಗೆ ಮಾಧವರಾಯನ ಮನೆಬಾಗಿಲನ್ನು
ಯಾರೋ ಮೃದುವಾಗಿ ತಟ್ಟಿದಂತಾಯಿತು. ಗೋದಮ್ಮನವರು ಪೂಜೆ
ಮಾಡುತ್ತಿದ್ದರು. ರುಕ್ಮಿಣಿ ಮಾಧವರಾಯನ ಚಿಕಿತ್ಸೆ ಮುಗಿಸಿ ಕೈ
ತೊಳೆದುಕೊಳ್ಳಲು ಹೋಗುತ್ತಿದ್ದಳು. ಪದ್ಮಾ ಪಕ್ಕದ ಮನೆಯ

ಡಿಕೊಳ್ಳುತ್ತಿದ್ದಳು 'ಬಂದೇ' ಎಂದು ಉತ್ತರಿಸಿ ರುಕ್ಮಿಣಿ ಕೈತೊಳೆದು ಕೊಂಡು ಬಂದು ಬಾಗಿಲು ತೆಗೆದಳು. ಎದುರಿಗೆ ಚಿನ್ನಸ್ವಾಮಿ. ರುಕ್ಮಿಣಿ ಆಶ್ಚರ್ಯದಿಂದ

"ಏನು ಚಿನ್ನಸ್ವಾಮಿ! ಹಾಸ್ಟೆಲ್ಲಿನಲ್ಲಿ ಎಲ್ಲರೂ ಕ್ಷೇಮವಷ್ಟೆ!" ಎಂದಳು.

"ಎಲ್ಲರೂ ಕ್ಷೇಮ ಕಣ್ರಮ್ಮ. ರಾಯರ ಕಾಹಿಲೆ ವಿಷಯ ಗೊತ್ತಾಯಿತು. ನೋಡಿಕೊಂಡು ಹೋಗೋಣ ಎಂದು ಬಂದೆ."

"ಒಳಕ್ಕೆ ಬಾಪ್ಪ." ಎಂದು ಮಾಧವರಾಯನ ರೂಮಿಗೆ ಕರೆದು ಕೊಂಡು ಹೋಗಿ

"ನಿಮ್ಮನ್ನು ನೋಡಲು ಚಿನ್ನಸ್ವಾಮಿ ಬಂದಿದ್ದಾನೆ" ಎಂದು ಹೇಳಿದಳು. ಮಾಧವರಾಯ ಕಣ್ಣು ತೆರೆದು ಚಿನ್ನಸ್ವಾಮಿಯನ್ನು ಹತ್ತಿರ ಕರೆದ

"ನನಗೆ ಈಗ ಆರೋಗ್ಯವಾಗಿದೆ ಮಗೂ."

"ಹಾವು ಕಚ್ಚಿದ ವಿಷಯ ಕೇಳಿ ನನಗೆ ಗಾಬರಿಯಾಯಿತು ಸರ್."

"ನನಗೆ ಗುಣವಾಗಿದೆ ಎಂದು ನಾಣಿ ಹೇಳಲಿಲ್ಲವೇ ?"

"ಹೇಳಿದ. ಆದರೆ........"

ರುಕ್ಮಿಣಮ್ಮ ಮೆಲ್ಲನೆ ಅಲ್ಲಿಂದ ಜಾರಿದಳು.

ಮಾಧವರಾಯ ಚಿನ್ನಸ್ವಾಮಿಯನ್ನು ತನ್ನ ಹಾಸಿಗೆಯ ಮೇಲೆ ಕೂಡಿಸಿಕೊಂಡು ತನ್ನ ಕಾಹಿಲೆಯ ಐತಿಹ್ಯವನ್ನು ವರ್ಣಿಸಿ

"ರುಕ್ಮಿಣಿ ನನ್ನ ಕಾಪಾಡಿದಳು ಚಿನ್ನಸ್ವಾಮಿ."

"ಎದ್ದು ನಿಲ್ಲುವುದಕ್ಕೂ ಆಗುವುದಿಲ್ಲವೇ ಸರ್."

"ಇಲ್ಲಪ್ಪ. ಕಾಲಿನ ತ್ರಾಣ ಉಡುಗಿ ಹೋಗಿದೆ. ಹಾಸಿಗೆಬಿಟ್ಟು ಏಳುವಂತಿಲ್ಲ."

"ಅಮ್ಮಾವರಿಗೆ........"

"ಅವಳು ಮಾನವಿಯಲ್ಲ ದೇವತೆ ಚಿನ್ನಸ್ವಾಮಿ. ನನಗೆ ಬೆಡ್ ಪ್ಯಾನ್ (Bed-Pan) ಕೊಡುವುದು ಮೊದಲುಗೊಂಡು ಎಲ್ಲಾ ಕೆಲ

ಸವನ್ನೂ ಮಾಡುತ್ತಾಳೆ. ನನ್ನದು ಬಹು ಪಾಪಿ ಜನ್ಮ – ರುಕ್ಮಿಣಿ
ಕೈಯಲ್ಲಿ ಹೊಲೆಗೆಲಸ ಮಾಡಿಸುತ್ತಿದ್ದೇನೆ."

"ಆ ಬಗ್ಗೆ—ನೀವು ದುಃಖಪಟ್ಟರೆ ಅಮ್ಮಾವರು ತುಂಬ ನೊಂ
ಕೊಳ್ಳುತ್ತಾರೆ ಸರ್."

"ನಿಜ – ನಿಜ."

"ಸರ್. ನಾನೊಂದು ಮಾತು ಹೇಳಲೇ ?"

"ಹೇಳಪ್ಪಾ."

"ನಾಲ್ಕು ದಿವಸ ನಾನು ನಿಂತು ನಿಮ್ಮ ಶಿಶ್ರೂಷೆ ನೋಡಿಕೊಳ್ಳ
ಅನುಮತಿ ಕೊಡಿ. ನನ್ನ ಹಾಜರಿ (Attendance) ಚೆನ್ನಾಗಿ
ಟರ್ಮ್ ಹೋಗುವ ಭಯವಿಲ್ಲ."

ಮಾಧವರಾಯನಿಗೆ ಉತ್ತರ ಹೊಳೆಯಲಿಲ್ಲ. ಹೃದಯದ
ವಿಚಿತ್ರ ವೇದನೆಯಾಯಿತು.

ರುಕ್ಮಿಣಮ್ಮ ಕಾಫಿ ತಿಂಡಿ ತಂದು ಚಿನ್ನಸ್ವಾಮಿಯ ಕೈಗಿ
ಉಪಚರಿಸಿದಳು. ಚಿನ್ನಸ್ವಾಮಿ ತಿನ್ನುತ್ತಿದ್ದಂತೆ ಮಾಧವರಾಯ

"ಚಿನ್ನಸ್ವಾಮಿ ಹೇಳಿದ್ದು ಕೇಳಿದೆಯಾ ರುಕ್ಕೂ." ಎಂದ.

"ಏನು ಹೇಳಿದ ?"

"ಇಲ್ಲೇ ಇದ್ದು ನನ್ನ ಶಿಶ್ರೂಷೆ ನೋಡಿಕೊಳ್ಳುತ್ತಾನಂತೆ."

"ಕಾಲೇಜು."

"ಹಾಜರಿ ಚೆನ್ನಾಗಿದೆ. ಟರ್ಮ್ ಹೋಗುವುದಿಲ್ಲ ಎಂದು ಹೇ
ತ್ತಿದ್ದಾನೆ."

"ನಿನಗೇಕೆ ಮಗೂ ತೊಂದರೆ – ನಾನು ನೋಡಿಕೊಳ್ಳುತ್ತೇನೆ
ಎಂದು ರುಕ್ಮಿಣಿಯಮ್ಮ ಹೇಳಿದಳು. ಚಿನ್ನಸ್ವಾಮಿ ತನ್ನ ಲೋ
ತಟ್ಟೆ ತೆಗೆದುಕೊಂಡು ಹೊರಗೆ ಹೋದ. ಮಾಧವರಾಯ ಹೆಂಡತಿ
ಕಡೆ ತಿರುಗಿ

"ಇದು ಯಾವ ಜನ್ಮದ ಋಣಾನುಬಂಧ ರುಕ್ಕು."

"ಯಾವದೋ ಜನ್ಮದಲ್ಲಿ ಈ ಹುಡುಗ ನಮ್ಮ ಮಗನಾಗಿದ್ದ

ಬೇಕು." ಎಂದಳು.

ಮಂಡ್ಯದಲ್ಲಿ ಚಿನ್ನಸ್ವಾಮಿ ಇದ್ದ ಎರಡು ದಿನವೂ ಮಾಧವರಾಯ ನನ್ನು ಬಿಟ್ಟು ಕದಲಲಿಲ್ಲ. ಮೂರನೆಯ ದಿನ ಹೊರಡಲನುವಾಗಿ ಮಾಧವರಾಯನ ಬಳಿಗೆ ಬಂದು ಅವನ ಪಾದ ಮುಟ್ಟಿ ನಮಸ್ಕರಿಸಿ, ರುಕ್ಮಿಣಮ್ಮನ ಪಾದ ಮುಟ್ಟಿ ನಮಸ್ಕರಿಸಿ

"ನಾನೂ ನಿಮ್ಮ ಮಗನೆಂದು ತಿಳಿದುಕೊಂಡು ನನ್ನ ಜನ್ಮ ಪಾವನ ಮಾಡಿ ತಾಯೀ. ನೀವು ಯಾವಾಗ ಬರೆದರೂ ಬರಲು ನಾನು ಸಿದ್ಧವಾಗಿದ್ದೇನೆ." ಎಂದು ಹೇಳಿದ. ರುಕ್ಮಿಣಿಯಮ್ಮ ಚಿನ್ನಸ್ವಾಮಿಯ ತಲೆಯ ಮೇಲೆ ಕೈಯಿಟ್ಟು ಹರಸಿದಳು. ಚಿನ್ನಸ್ವಾಮಿ ಊರಿಗೆ ಪ್ರಯಾಣ ಬೆಳಸಿದ. ಅಂದೆಲ್ಲಾ ಮನೆಯಲ್ಲಿ ಅವನ ಮಾತೇ ಆಯಿತು. ರುಕ್ಮಿಣಮ್ಮ ಸಂತೋಷದಿಂದ

"ಈ ಹುಡುಗನಿಗೆ ನಾನು ಯಾವ ಚಿನ್ನದ ಕಿರೀಟವನ್ನೂ ಇಡ ಲಿಲ್ಲ. ಆದರೂ ಎಂಥ ಭಕ್ತಿ ವಿಶ್ವಾಸ ಇಟ್ಟುಕೊಂಡಿದ್ದಾನೆ" ಎಂದಳು.

"ನಿನ್ನನ್ನು ನೋಡಿದರೆ ಯಾರಿಗಾದರೂ ಭಕ್ತಿ ವಿಶ್ವಾಸ ಹುಟ್ಟುತ್ತದೆ ರುಕ್ಕೂ" ಎಂದು ಮಾಧವರಾಯ ನುಡಿದ.

"ನೀವೂ ನನ್ನನ್ನು ಹೊಗಳುವಿರೇನು ?"

"ನಾನು ಹೊಗಳಬಾರದೆಂದು ನಿಷೇಧಾಜ್ಞೆ ವಿಧಿಸುವೆಯೇನು ? ...ನಾನು ಮಹಾ ಭಾಗ್ಯಶಾಲಿ ರುಕ್ಕೂ."

"ಅದರಲ್ಲಿ ಸಂದೇಹವೇನು ?"

"ಆ ಭಾಗ್ಯ ನಿನ್ನ ಕೈಹಿಡಿದುದರ ಫಲ."

"ನಾನು ಸಣ್ಣವಳು – ಅಜ್ಞೆ – ನನ್ನನ್ನೇಕೆ ದೊಡ್ಡದು ಮಾಡುವಿರಿ ? ನನ್ನ ಗಂಡ, ಮಕ್ಕಳ ಯೋಗಕ್ಷೇಮ ನಾನು ನೋಡಿ ಕೊಳ್ಳುವುದೇ ಒಂದು ಹೆಚ್ಚುಗಾರಿಕೆಯೇ. ಪ್ರತಿಯೊಬ್ಬ ಭಾರತ ಸ್ತ್ರೀ ಮಾಡುವ ಕೆಲಸವನ್ನೇ ನಾನೂ ಮಾಡುತ್ತಿದ್ದೇನೆ."

"ಎಲ್ಲ ಭಾರತಸ್ತ್ರೀಯರೂ ನಿನ್ನ ಹಾಗಿರಲು ಸಾಧ್ಯವಿಲ್ಲ ರುಕ್ಕೂ. ನನ್ನ ಅಸಹಾಯಕ ಸ್ಥಿತಿಯನ್ನು ನೆನೆದಾಗ ನಿನ್ನ ಯೋಗ್ಯತೆ –

ಸೇವೆ ಎಷ್ಟು ದೊಡ್ಡದೆಂಬುದರ ಅರಿವಾಗುತ್ತದೆ.....ನಿನ್ನೊಳಗಿರು
ಬೆಳಕು ನಿನ್ನ ಮನೆಯನ್ನು ಬೆಳಗಿಸುವುದು ಮಾತ್ರವಲ್ಲದೆ ದೇಶವನ್ನ
ಬೆಳಗಿಸುತ್ತದೆ. ಅದಕ್ಕೇ ಚಿನ್ನಸ್ವಾಮಿ ನಿನ್ನನ್ನು ದೇವತೆಯಂ
ಪೂಜಿಸುವುದು."

ವಿನಮ್ರಳಾಗಿ ರುಕ್ಮಿಣಿ ತಲೆತಗ್ಗಿಸಿ ನಿಂತಳು. ಗಂಡನ ಪ್ರ
ವಾಕ್ಕುಗಳು ಅವಳ ಮನಸ್ಸಿಗೆ ಸಂತೋಷವನ್ನುಂಟುಮಾಡಿದ್ದರ
ಇವುಗಳಿಗೆ ತಾನು ಅರ್ಹಳಲ್ಲವಲ್ಲಾ ಎನ್ನುವ ಸಂತಾಪವನ್ನ
ಉಂಟುಮಾಡಿತ್ತು.

ಮಾಧವರಾಯ ತನ್ನ ವಿಚಾರದ ಗುಂಗಿನಲ್ಲೇ

"ಚಿನ್ನಸ್ವಾಮಿಯ ವಿವೇಕ ನಾಣಿಗೆ ಬಂದರೆ ಸಾಕು." ಎಂ
ಹೇಳಿದ. ರುಕ್ಮಿಣಿಯನ್ನು ಹೊಡೆದೆಬ್ಬಿಸಿದಂತಾಯಿತು.

"ನಾಣಿ ಮನಸ್ಸು ಒಳ್ಳೆಯದು. ಆದರೆ ಅವನ ವಿಚಾರಶ
ಕುದುರಿಲ್ಲ. ಚಿನ್ನಸ್ವಾಮಿಯಲ್ಲಿ ವಯಸ್ಸಿಗೆ ಮೀರಿದ ವಿಚಾರಶಕ್ತಿ ಬೆ
ಳೆದಿದೆ" ಎಂದಳು.

"ಇದು ಕೇವಲ ವಿಚಾರದ ಮಾತಲ್ಲ ರುಕ್ಕೂ – ಆತ್ಮಸಂಸ್ಕಾರ
ಮಾತು. ಗಿಡವಾಗಿರುವಾಗಲೇ ಮುಂದೆ ಬೆಳೆಯುವ ವೃಕ್ಷದ ಸ್ವರೂ
ವನ್ನರಿಯಬಹುದು. ಪ್ರಪಂಚವೆಲ್ಲಾ ತನ್ನ ಸುಖಕ್ಕಾಗಿ – ತನ್ನ ವಿಲ
ಸಕ್ಕಾಗಿ ಸೃಷ್ಟಿಯಾಗಿದೆ ಎನ್ನುವ ಭಾವನೆ ನಾಣಿಯ ಮನಸ್ಸಿನ
ಬೇರೂರಿದೆ. ಇದಕ್ಕಾಗಿ ನಾನು ವಿಷಾದಪಡುತ್ತೇನೆ."

"ನಾಣಿಯೂ ವಿವೇಕಶಾಲಿಯಾಗುತ್ತಾನೆಂಬ ಧೈರ್ಯ ನನಗಿ
ನೀವು ಮನಸ್ಸಿನಲ್ಲಿ ಕೊರಗಬೇಡಿ." ಎಂದು ಗಂಡನಿಗೆ ಸಮಾಧಾ
ಹೇಳಿದಳು.

ಜವರೇಗೌಡರು, ಮಸ್ತಾನ್, ಡಾ. ಸುಂದರಂ ಮತ್ತಿತ
ಗೆಳೆಯರು ಮೇಲಿಂದ ಮೇಲೆ ಬಂದು ಮಾಧವರಾಯನನ್ನು ನೋ
ಕೊಂಡು ಹೋಗುತ್ತಿದ್ದರು. ರುಕ್ಮಿಣಿಗೆ ಯಾರ ನೆರವೂ ಬೇಕಾಗಿರಲಿಲ್ಲ
ರುಕ್ಮಿಣಿಯ ಚಿಕಿತ್ಸೆಯ ವಿವರ ಕೇಳಿ ಆಶ್ಚರ್ಯಪಟ್ಟುಕೊಂಡರು.

"ನೀವೇನೊ ಮಂತ್ರಹಾಕಿ ವಾಸಿಮಾಡುತ್ತೀರಮ್ಮ. ಇದು ...ಷಧ, ಸೊಪ್ಪುಸದೆಗಳಿಗೆ ಸಗ್ಗುವ ವ್ಯಾಧಿಯಲ್ಲ" ಎಂದು ಸುಂದರಂ ...ುಡಿದಿದ್ದರು.

ಮಾಧವರಾಯ ಹಾಸಿಗೆ ಬಿಟ್ಟಿದ್ದು ತನ್ನ ನಿತ್ಯಗೆಲಸಗಳಿಗೆ ...ೊಡಗಬೇಕಾದರೆ ಎರಡು ತಿಂಗಳು ಹಿಡಿಯಿತು. ರುಕ್ಮಿಣಮ್ಮನ ...ಷ್ಕಳಂಕ ಸೇವೆಯಿಂದಾಗಿ ಅವನಿಗೆ ಪೂರ್ಣ ಗುಣವಾಯಿತು. ಹಾವು ...ಚ್ಚಿದಡೆ ಗುರುತಿದ್ದರೂ ಅದರಿಂದ ಯಾವ ಹಿಂಸೆಯೂ ಆಗುತ್ತಿರಲಿಲ್ಲ.

ಎರಡು ತಿಂಗಳ ಕಾಲ ಮಾಧವರಾಯನ ಆಫೀಸನ್ನು ...ೂನಿಯರ್‌ಗಳು ನಡೆಸಿಕೊಂಡು ಹೋಗಿದ್ದರೂ ಅದು ಸಾಕಷ್ಟು ಅಸ್ತ ...್ಯಸ್ತವಾಗಿತ್ತು. ದೊಡ್ಡ ದೊಡ್ಡ ಕಕ್ಷಿಗಾರರು ದೊಡ್ಡಲಾಯರ ...ರುವನ್ನೇ ಎದುರು ನೋಡುತ್ತಿದ್ದರು. ಮಾಧವರಾಯ ಆಫೀಸಿಗೆ ...ರುವುದೇ ತಡ ಹೊರೆಹೊರೆಯಾಗಿ ಕೆಲಸ ಮೇಲೆ ಬಿದ್ದಿತು. ...ಾಧವರಾಯ ಸಂತೋಷವಾಗಿ ತನ್ನ ನೊಗವನ್ನು ಹೊತ್ತುಕೊಂಡ.

ಮಾಧವರಾಯ ಮೇಲಿಂದ ಮೇಲೆ ಕಾಹಿಲೆ ಬೀಳುತ್ತಿದ್ದುದೂ, ...ಪಘಾತಗಳಿಗೆ ಸಿಕ್ಕುತ್ತಿದ್ದುದೂ ಜವರೇಗೌಡರಿಗೆ ತುಂಬ ಚಿಂತೆ ...ುನ್ನುಂಟುಮಾಡಿತ್ತು. ರಾಯರ ಖರ್ಚಿನ ವೈಖರಿ ಬಲ್ಲ ಗೌಡರು ...ಂಥ ಸಮಯಗಳಲ್ಲಿ ರಾಯರಿಗೆ ನೆರವಾಗಲು ಕೆಲವೊಂದು ಹಣವನ್ನು ...ೇಸಲಾಗಿರಿಸಬೇಕೆಂದು ಮನಸ್ಸು ಮಾಡಿಕೊಂಡರು. ಗೌಡರು ಈ ...ಷಯ ಸೂಕ್ಷ್ಮವಾಗಿ ಪ್ರಸ್ತಾಪಿಸಿದಾಗ ಮಾಧವರಾಯ ನಕ್ಕು ...ುಂಡದ್ದು ತನಗೆ ಬೈಚಿಟ್ಟದ್ದು ಪರರಿಗೆ' ಎಂದುಬಿಟ್ಟ. ರಾಯನ ...ಾತಿಗೆ ಗೌಡರು ಮಣಿಯಲಿಲ್ಲ.

೩೪

ಮನೆಯಲ್ಲಿ ಪದ್ಮನ ವಿಷಯ ಎಲ್ಲರಿಗಿಂತ ಹೆಚ್ಚು ಯೋಚಿಸುತ್ತಿ ವರು ಗೋದಮ್ಮ. ಪದ್ಮ ಹೈಸ್ಕೂಲು ಮೊದಲನೆಯ ತರಗತಿ ಮುಗಿ ಕೊಂಡು ಎರಡನೆಯ ತರಗತಿಗೆ ಅಡಿಯಿಟ್ಟಿದ್ದಳು. ಅವಳ ವಯಸ್ ಹದಿನಾಲ್ಕಾಗಿದ್ದರೂ, ವಯಸ್ಸು ಮೀರಿದ ಬೆಳವಣಿಗೆ ಕಂಡುಬರುತ್ತಿತ್ತು ಲಂಗ ಬಿಟ್ಟು ಅದೇ ಸೀರೆ ಉಡುವುದಕ್ಕಾರಂಭಿಸಿದ್ದ ಪದ್ಮನನ್ನು ಕಂಡ ಯಾರಾದರೂ ಹದಿನೆಂಟು ವಯಸ್ಸೆಂದು ಭಾವಿಸಬಹುದಾಗಿತ್ತು ಗೋದಮ್ಮ ಯೋಚನೆ ಮಾಡಿ ಮಾಡಿ ಕೊನೆಗೊಂದು ದಿ ಸೊಸೆಯೆದುರಿಗೆ ವಿಷಯ ಪ್ರಸ್ತಾಪಿಸಿದರು.

"ಪದ್ಮನ ವಿಷಯ ಏನು ಯೋಚನೆ ಮಾಡಲೇ ಇಲ್ಲವಲ ರುಕ್ಕೂ."

"ಮಾಡೋಣಮ್ಮ ಏನವಸರ."

"ಅವಳಿಗೆ ಹದಿನಾಲ್ಕು ತುಂಬತ್ತೆ – ಹುಡುಗಿ ಚೆನ್ನಾ ಬೆಳೆದು ನಿಂತಿದ್ದಾಳೆ. ಕನ್ಯಾಸೆರೆ ಬೇಗ ಬಿಡಿಸಿಕೊಳ್ಳಬೇಕವ ಈ ವಿಷಯ ಮಾಧೂನೂ ಮನಸ್ಸಿಗೆ ತಂದುಕೊಂಡ ಹಾಗೆ ಕಾಣಲಿಲ್ಲ

"ಹದಿಮೂರು ಹದಿನಾಲ್ಕಕ್ಕೆ ಮದುವೆ ಮಾಡುವ ಕಾಲ ಆ ಹೋಯಿತಲ್ಲಮ್ಮ. ಮಗು ಇನ್ನೂ ಎರಡು ಮೂರು ವರ್ಷವಾದರ ನಮ್ಮ ಮನೆಯಲ್ಲಿರಲಿ ಎಂದು ನನ್ನ ಅಪೇಕ್ಷೆ."

"ಮಕ್ಕಳನ್ನು ಮನೆ ಬಿಟ್ಟು ಕಳಿಸಬೇಕಾದರೆ ಹೆತ್ತ ಹೊಟ್ಟೆ ಸಂಕಟಪಡುವುದು ನ್ಯಾಯ ರುಕ್ಕೂ. ಆದರೆ ಮಕ್ಕಳ ಹಿತಚಿಂತನೆ ನಾವು ಮಾಡಬೇಡವೇ? ಕೈ ನಡೆಯುತ್ತಿರುವಾಗ ಪದ್ಮನ ಮದುವೆ ಮಾಡಿಬಿಟ್ಟರೆ ಮನಸ್ಸಿಗೆ ನೆಮ್ಮದಿಯಾಗುತ್ತದೆ – ಅಲ್ಲದೆ, ನನ್ನ ಬಾಳು ಶಾಶ್ವತವಲ್ಲ. ಪದ್ಮನ ಮದುವೆ ನೋಡಿ ಬಿಟ್ಟಮೇಲೆ ನಾನು ನಿರಾತಂಕವಾಗಿ ಕಣ್ಣು ಮುಚ್ಚಿಕೊಳ್ಳಬಹುದು."

"ಆ ಕಾರಣಕ್ಕಾಗಿಯಾದರೂ ನಾವು ಪದ್ಮನ ಮದುವೆ ತಡ ಮಾಡಬೇಕಾಗುತ್ತದಮ್ಮ."

"ಹುಚ್ಚು ಹುಡುಗಿ – ಈ ಮುದಿಕೊರಡು ಇನ್ನೂ ಎಷ್ಟು ದಿವಸ ಇರಬೇಕೆಂದು ನಿನ್ನ ಅಪೇಕ್ಷೆ."

"ಶ್ರೀಗಂಧದ ಮರ ಮುದಿಯಾದಷ್ಟು ಒಳ್ಳೆಯದಂತೆ!"

"ಅಜ್ಜಿಯಾದರೂ ನಿನಗೆ ಬುದ್ಧಿ ಬರಲಿಲ್ಲವಲ್ಲೇ ರುಕ್ಕೂ – ಶುದ್ಧ ಮಗುವಿನಂತೆ ಆಡುವೆಯಲ್ಲಾ."

"ನನ್ನಮ್ಮ ನೀವು ಮಗುವಿನ ಹಾಗೆ ಸಾಕಿದರೆ ನಾನೇಕೆ ಮಗು ವಾಗಿಯೇ ಇರಬಾರದು!"

"ನಿನ್ನಮ್ಮ ನಿನಗೋಸ್ಕರ ಬಹು ಕಷ್ಟಪಟ್ಟದ್ದಾಳೆ ಬಿಡು."

"ನೀವು ಕಷ್ಟಪಡದೆ, ಹಗಲೂ ರಾತ್ರಿ ಚಿಂತೆಮಾಡದೆ ಈ ಸಂಸಾರ ಇಷ್ಟು ನೇರವಾಗುತ್ತಿತ್ತೇ ಅಮ್ಮ.... ಈಗಲೂ ನೋಡಿ, ಪದ್ಮ ವಿಷಯ ಯೋಚನೆಮಾಡುತ್ತಿರುವವರು ಯಾರು?"

"ಅದಿರಲಿ – ಕಮಲೂನ ಯಾವಾಗ ಕರೆದುಕೊಂಡು ಬರುತ್ತೀರಿ"

"ಈ ಸಾರೆ ಬಾಣಂತನ ಮೈಸೂರಿನಲ್ಲೇ ಆಗಲಿ ಎಂದು ಅವಳ ಯಜಮಾನರು ಹೇಳಿದರಂತೆ."

"ಎಲ್ಲಿಯಾದರೂ ಉಂಟೇ? ಅಲ್ಲಿ ಬಾಣಂತನ ಮಾಡುವವರು ಯಾರು? ಗೋಪಾಲೀನ ನೋಡಿಕೊಳ್ಳುವವರು ಯಾರು?"

"ಹೆರಿಗೆಗೆ ಆಸ್ಪತ್ರೆಗೆ ಕಳಿಸಬಹುದೆಂದು ಅಳೀಮಯ್ಯ ಹೇಳಿದ ರಂತೆ!"

"ಎಳೀವ್ಮೈ....ಆಸ್ಪತ್ರೆ ಬಾಣಂತನಕ್ಕೆ ನಾನು ಖಂಡಿತಾ ಒಪ್ಪು
ದಿಲ್ಲಮ್ಮ. ನೀನು ಇದಕ್ಕೆ ಒಪ್ಪಿದೆಯಾ ರುಕ್ಕೂ."

"ಇಲ್ಲಮ್ಮ."

"ನಾನು ಮಾಧೂಗೆ ಹೇಳುತ್ತೇನೆ. ನೀನೂ ಅವನೂ ಹೋ
ಕಮಲೂನ ಕರೆದುಕೊಂಡು ಬನ್ನಿ. ಈ ಬಾಣಂತನ ನಾನ
ಮಾಡುತ್ತೇನೆ. ಅಳೀಮಯ್ಯನಿಗೆ ಅಸಮಾಧಾನವಾಗದಂತೆ ಒಪ್ಪಿ
ಕಮಲೂನ ಕರೆದುಕೊಂಡು ಬರುವುದು ನಿಮ್ಮ ಭಾರ."

ಗೋದಮ್ಮ ಅಧಿಕಾರವಾಣಿಯಿಂದ ಮಗನಿಗೆ ಆಜ್ಞೆವಿಧಿಸಿ
ಮಗನನ್ನೂ ರುಕ್ಕಿಣಿಯನ್ನೂ ಮೈಸೂರಿಗೆ ಕಳುಹಿಸಿಕೊಟ್ಟರು.

ಅಳಿಯನನ್ನು ಒಪ್ಪಿಸುವುದು ಮಾಧವರಾಯನಿಗೆ ಕಷ್ಟವಾಗಲಿಲ್ಲ
ವಾರಕ್ಕೊಮ್ಮೆಯಾದರೂ ಮಂಡ್ಯಕ್ಕೆ ಬಂದು ಹೋಗಲು ಗೋವಿಂದ
ರಾಯ ಮಾತು ಕೊಟ್ಟ ಮೇಲೆ, ಕಮಲೂ ತಾಯಿ ತಂದೆಯ ಜತೆ
ಹೊರಡಲು ಸಮ್ಮತಿಸಿದಳು.

ಅಜ್ಜಿ ತನ್ನ ಬಾಣಂತನ ಮಾಡುವ ವಿಷಯ ಕೇಳಿ ಕಮಲೂ
ಬೆಚ್ಚಿ

"ಮಂಡ್ಯದ ಕತ್ತಲೆ ಕೋಣೆ (Black – hole of
Mandya) ಯಲ್ಲಿ ನಾನು ಕೊಳೆಯಬೇಕೇನಮ್ಮ" ಎಂದಳು.
ರುಕ್ಕಿಣಮ್ಮ ನಗುತ್ತಾ

"ಅಜ್ಜಿ ಬಾಣಂತನವೆಂದರೆ ಅಷ್ಟು ಹೆದರಿಕೆಯೋ ಕಮಲೂ."

"ಹೂ – ಸ್ವಲ್ಪ ಹೆದರಿಕೆಯೇ !"

"ಏನೂ ಯೋಚನೆಮಾಡಬೇಡ – ನಾನಿದ್ದೇನೆ. ಖಾರ ತೆಗೆದು
ಕೊಳ್ಳಬೇಕಾಗುತ್ತದೆ. ಅದರಿಂದ ನಿನಗೆ ಬಾಧಕವೇನೂ ಆಗುವುದಿಲ್ಲ."

"ಆಸ್ಪತ್ರೆಯಲ್ಲಿ ಸುಖವಾಗಿ ಹೆರಿಗೆಯಾಗುತ್ತಿತ್ತಲ್ಲಾ !"

"ಆಸ್ಪತ್ರೆ ಹೆರಿಗೆ ಮಾಡಿಕೊಂಡು ಬಂದಿರುವವರ ಅವಸ್ಥೆ ನೋಡು.
ಹೆರಿಗೆಯಾದ ಮೇಲೆ ಹೆಣ್ಣಿನ ದೇಹ ರಕ್ತ ಮಾಂಸ ಹೀನವಾಗಿ
ಬೆಂಡಾಗುತ್ತದೆ. ಆದಕ್ಕೆ ಪುಷ್ಟಿಯೂ ಬೇಕು, ಕಾವೂ ಬೇಕು.

ಳೆಯ ಪದ್ಧತಿ – ಈಗಿನ ಕಾಲದ ನಿಮಗೆ – ಸ್ವಲ್ಪ ಒರಟಾಗಿ ಕಾಣ
ಹುದು. ಅದರ ಸಮಾನಿಲ್ಲವೆನ್ನುವುದು ಮುಂದೆ ನಿನಗೇ
ೂತ್ತಾಗುತ್ತದೆ."

"ವಿಧಿಯಿಲ್ಲ. 'ಬಂದದ್ದು ಬರಲಿ ಗೋವಿಂದ' ಎನ್ನುವುದೇ
ಾಣತನ."

"ಗೋವಿಂದ! ನಿನ್ನ ಗಂಡನ ಹೆಸರು ಹೇಳಿಬಿಟ್ಟೆಯಲ್ಲೇ!"

"ಹೋಗಮ್ಮ....ನೀನೊಬ್ಬಳು." ಎಂದು ಕಮಲೂ ನಸುನಾಚಿ
ಳು.

ಮರಿ ಮಗ ಗೋಪಾಲ ಬಂದುದು ಗೋದಮ್ಮನವರಿಗೆ ಎಂಟು
ುಜ ಬಂದಂತಾಯಿತು. ಎಲ್ಲಿಗೆ ಹೋದರೂ ಅವರು ಗೋಪಾಲನನ್ನು
ೊತ್ತುಕೊಂಡೇ ಹೋಗಬೇಕು. ಸಂಜೆ ಪುರಾಣಕ್ಕೆ ಹೋದರೂ
ೋಪಾಲ ಜತೆಯಲ್ಲಿರಲೇ ಬೇಕು. ಗೋದಮ್ಮ ಹತ್ತಿಬತ್ತಿಗಳನ್ನು
ೊಸೆದಿಟ್ಟರೆ ಗೋಪಾಲ ಅವುಗಳನ್ನು ಹರಿದು ಬುಟ್ಟಿ ತುಂಬುತ್ತಿದ್ದ.
ೋಪಾಲ ಏನು ಮಾಡಿದರೂ ಗೋದಮ್ಮನವರಿಗೆ ಸಂತೋಷ –
ಶ್ಚರ್ಯ.

ಗೋಪಾಲನಿಗಾಗುತ್ತಿದ್ದ ರಾಜೋಪಚಾರ ನೋಡಿ ಒಂದು
ನ ಊಟಕ್ಕೆ ಕುಳಿತಿದ್ದ ಮಾಧವರಾಯ

"ನಾರಾಯಣಸ್ವಾಮಿಯನ್ನು ಮುದ್ದು ಮಾಡಿ ಮಾಡಿ ಅಮ್ಮ
ಅವನನ್ನು ಕೆಡಿಸಿದಳು. ಈಗ ಗೋಪಾಲನನ್ನು ಮುದ್ದು ಮಾಡುವುದ
ಕ್ಕಾರಂಭಿಸಿದ್ದಾಳೆ" ಎಂದ.

ಪಕ್ಕದಲ್ಲಿ ಊಟಕ್ಕೆ ಕುಳಿತಿದ್ದ ಕಮಲೂ

"ಗೋಪಾಲೂಗೆ ಹತ್ತಿ ಹೊಸೆಯುವುದನ್ನು ಅಜ್ಜಿ ಪಾಠ ಮಾಡಿ
ಸುತ್ತಿದಾಳಣ್ಣಾ" ಎಂದಳು ಎಲ್ಲರೂ ಗೊಳ್ಳನೆ ನಕ್ಕುಬಿಟ್ಟರು.
ಗೋದಮ್ಮನವರು ನಗುತ್ತಾ

"ಈಗ ಅಜ್ಜೀನ ಹಾಸ್ಯಮಾಡು. ನಾಳೆಯದಿನ ನಿನ್ನ ಮಗ
ದೊಡ್ಡ ಪ್ಯಾಸು ಮಾಡಿ ದೊಡ್ಡ ಚಾಕರಿ ಮಾಡೋವಾಗ ಅಜ್ಜಿ

ಹೂಬತ್ತಿ ಮಹಿಮೆ ಗೊತ್ತಾಗುತ್ತದೆ" ಎಂದರು.

ಊಟ, ಕೆಲಸ ಮುಗಿದ ಮೇಲೆ ರೂಮಿನಲ್ಲಿ ಕಮಲ ಒಬ್ಬಳೇ ಇದ್ದುದನ್ನು ನೋಡಿಕೊಂಡು ರುಕ್ಮಿಣಮ್ಮ ಒಳಗೆ ಬಂದು

"ಕಮಲೂ" ಎಂದಳು.

"ಏನಮ್ಮ!"

"ನಿನಗೆ ಕೋಪ ಬರದಿದ್ದರೆ ಒಂದು ಮಾತು ಹೇಳುತ್ತೇನೆ."

"ಹೇಳಮ್ಮ – ನಿನ್ನ ಮಾತಿಗೆ ನಾನು ಕೋಪಮಾಡಿಕೊಳ್ತ್ತೇನೆಯೇ ?"

"ಊಟಕ್ಕೆ ಕುಳಿತಿದ್ದಾಗ ಗೋಪಾಲನ ಮಾತಿಗೆ ಅಜ್ಜಿಯನ್ ಹಾಸ್ಯಮಾಡಿದೆ."

"ಹೂ !"

"ಹಾಗನ್ನಬಾರದಮ್ಮಾ. ಅವರ ತ್ಯಾಗ, ಪ್ರೀತಿಯ ಪ್ರಭಾ ದಿಂದಲ್ಲವೇ ಈ ಮನೆಯ ದೀಪ ಬೆಳಗುತ್ತಿರುವುದು."

"ನಾನು ತಮಾಷೆಗಂದನಮ್ಮ. ಅಜ್ಜಿ ಮನಸ್ಸಿಗೆ ವ್ಯಥೆಯಾ ದ್ದರೆ ನಾನು ಅವಳ ಕ್ಷಮೆ ಬೇಡಿಕೊಳ್ಳುತ್ತೇನೆ."

"ನಿಮ್ಮಜ್ಜಿ ಮನಸ್ಸು ಆಕಾಶದಷ್ಟು ವಿಸ್ತಾರವಾದುದು ಕಮಲ ಏನಂದರೂ ನುಂಗಿಕೊಳ್ಳುವ ಸಹನೆಯ ಮೂರ್ತಿ ಅವರು. ನಿ ಮಾತಿಗೆ ಅವರೂ ನಕ್ಕುದನ್ನು ನೀನೇ ನೋಡಲಿಲ್ಲವೇ ?"

"ತಪ್ಪಾಯಿತಮ್ಮ. ಇನ್ನು ಮೇಲೆ ಹಾಗೆ ಮಾತನಾಡುವುದಿಲ್ ಎಂದಳು.

ಏಕಾಂಗಿಯಾಗಿರಲು ಗೋವಿಂದರಾಯನ ಮನಸ್ಸು ಒಪ್ಪಲಿಲ್ ಶುಕ್ರವಾರ ಕಾಲೇಜಿನ ಪಾಠ ಎರಡು ಗಂಟೆಗೇ ಮುಗಿದುಹೋಗಲ ನಾಲ್ಕು ಗಂಟೆಯ ಎಕ್ಸ್‌ಪ್ರೆಸ್ ಗಾಡಿಯಲ್ಲಿ ಮಂಡ್ಯಕ್ಕೆ ಬಂದಿಳಿದ.

ಮನೆಯ ಹೊರಬಾಗಿಲಿನಲ್ಲಿ ಆಡುತ್ತಿದ್ದ ಪದ್ಮ ಗೋವಿಂ ರಾಯನ ಮುಖ ಕಂಡಕೂಡಲೆ

"ಭಾವಯ್ಯ ಬಂದರು – ಭಾವಯ್ಯ ಬಂದರು." ಎಂದು ಕೂ

ಕೊಂಡು ಒಳಗೆ ಹೋದಳು.

"ಯಾರೇ ಭಾವಯ್ಯ ?" ಎಂದು ಕಮಲೂ ಗದರಿಸಿಕೊಂಡಳು.

"ನನ್ನ ಭಾವಯ್ಯ – ನಿನ್ನ ಯಜಮಾನರು."

"ಹೋಗೇ ಬರೀ ಸುಳ್ಳು" ಎನ್ನುತ್ತಿರುವಂತೆ ಗೋವಿಂದರಾಯನೇ ಒಳಕ್ಕೆ ಬಂದ. ಕಮಲೂ ನಾಚಿಕೆಯಿಂದ ಒಳಗೆದ್ದು ಹೋದಳು. ಗೋವಿಂದರಾಯನನ್ನು ಸ್ವಾಗತಿಸುವ ಕೆಲಸ ಪದ್ಮನ ಮೇಲೇ ಬಿತ್ತು.

"ಮಾವನವರೆಲ್ಲಿ ?" ಎಂದು ಕೇಳಿದ.

"ಇನ್ನೂ ಆಫೀಸಿನಿಂದ ಬಂದಿಲ್ಲ."

"ಗೋಪಾಲೀ"

"ಅಜ್ಜಿ ಜತೆ ಪುರಾಣ ಕೇಳುವುದಕ್ಕೆ ಹೋಗಿದ್ದಾನೆ."

ರುಕ್ಮಿಣಮ್ಮ ಒಳಗಿನಿಂದ ಬಂದು ಅಳಿಯನನ್ನು ಮಾತನಾಡಿಸಿ, ಅವನ ಯೋಗಕ್ಷೇಮ ವಿಚಾರಿಸಿದರು. ಪದ್ಮ ಒಳಗೆ ಹೋಗಿ ಭಾವಯ್ಯನಿಗೆ ಕಾಫಿ ತಿಂಡಿ ತಂದುಕೊಟ್ಟಳು. ಪದ್ಮ ಹರಟೆಗಾರಂಭಿಸಿದುದನ್ನು ಸೂಕ್ಷ್ಮವಾಗಿ ಕಂಡುಕೊಂಡ ರುಕ್ಮಿಣಮ್ಮ ಅವಳನ್ನು ಒಳಗೆ ಕರೆದು

"ಆಚಾರ್ರ ಮನೆಗೆ ಹೋಗಿ ಏಕಾದಶಿ ಎಂದು ಕೇಳಿಕೊಂಡು ಬಾ" ಎಂದಳು.

ಪದ್ಮ ನಸುನಗುತ್ತಾ

"ಬೆಳಿಗ್ಗೆ ಹೋಗಿ ವಿಚಾರಿಸಿಕೊಂಡು ಬರುತ್ತೀನಮ್ಮ. ಭಾವಯ್ಯ ಒಬ್ಬರೇ ಕುಳಿತಿರುತ್ತಾರೆ—ಅವರಿಗೂ ಬೇಸರವಾಗುತ್ತದೆ" ಎಂದಳು.

ರುಕ್ಮಿಣಮ್ಮ ಸುಳ್ಳುಕೋಪ ನಟಿಸುತ್ತಾ

"ಮಕ್ಕಳು ಹೇಳಿದ ಮಾತು ಕೇಳುವುದನ್ನು ಅಭ್ಯಾಸಮಾಡಿಕೊಳ್ಳಬೇಕು. ಈಗಲೇ ಹೋಗಿ ಬಾ" ಎಂದಳು. ಪದ್ಮ ನಿರುಪಾಯಳಾಗಿ ತಾಯಿಯಾಜ್ಞೆ ಪರಿಪಾಲಿಸಲು ಹೊರಟಳು.

ಅವಳು ಹಿಂದಿರುಗಿ ಬರುವಷ್ಟರಲ್ಲಿ ಭಾವಯ್ಯ ಕಾಣೆಯಾಗಿದ್ದ.

ಪದ್ಮ ನಸುನಗುತ್ತಾ ಒಳಕ್ಕೆ ಬಂದು

"ಭಾವಯ್ಯ ಎಲ್ಲೋ ತಪ್ಪಿಸಿಕೊಂಡು ಬಿಟ್ಟಿದ್ದಾರಮ್ಮ. ಯಾ
ನ್ನಾದರೂ ಬಿಟ್ಟು ಹುಡುಕಿಸಬೇಕು."

"ಮೆಲ್ಲಗೆ ಮಾತಾಡೇ ಪುಣ್ಯಾತ್ಗಿತ್ತಿ. ನಿನ್ನ ಭಾವಯ್ಯ ಎಲ್ಲ
ಓಡಿಹೋಗಿಲ್ಲ. ಒಳಗೆ ಕಮಲೂ ಕೈಯಲ್ಲಿ ಮಾತಾಡುತ್ತಿದ್ದಾರೆ."

"ಓಹೋ ! ಅದಕ್ಕೋ ನೀನು ನನ್ನ ಏಕಾದಶಿ ಮನೆಗೆ ಅಟ್ಟಿದ್ದು
ಎಂದು ಪದ್ಮ ಟೀಕೆಮಾಡಿದಳು.

ತುಂಬುಗರ್ಭಿಣಿಯಾಗಿದ್ದ ಹೆಂಡತಿಯನ್ನು ಗೋವಿಂದ ಎವೆ
ಕ್ಕದೆ ನೋಡುತ್ತ ಕುಳಿತ. ಮಾತರಿಯದ ಮೌನ ಅವನ ಮನಸ್ಸಿ
ಭಾವನೆಗಳನ್ನು ಹೆಚ್ಚು ಸ್ಪಷ್ಟವಾಗುಸುರುತ್ತಿತ್ತು. ಗಂಡನ ಹುಚ
ಕಂಡು ಕಮಲೂಗೆ ತುಸುನಗೆಬಂದಿದ್ದರೂ ಅಭಿಮಾನ ತುಂಬಿ ತುಳುಕ
ತ್ತಿತ್ತು. ಗಂಡನ ಬಾಯಲ್ಲಿ ಮಾತು ಹೊರಡದಿದ್ದುದನ್ನು ಕಂಡು

"ನಾನು ಇಲ್ಲಿಗೆ ಬಂದುದು ಸೋಮವಾರವಲ್ಲವೇ ?" ಎಂದಳು.

"ಹೌದು."

"ಇವತ್ತು ಶುಕ್ರವಾರ."

"ಹೌದು."

"ನಾನು ಬಂದು ಮೂರೇ ದಿವಸಗಳಾದುದು."

"ಹೌದು" ಎನ್ನುತ್ತಾ ಗೋವಿಂದ ನಕ್ಕು

"ಇವನು ಎಂಥ ಹುಚ್ಚ ಎಂದುಕೊಳ್ಳುವೆಯಲ್ಲವೇ ?"

"ನಿಜ ಹೇಳಲೇ ?"

"ಹೇಳು."

"ನಾಳೆ ನಾಡಿದ್ದು ಕಾಲೇಜಿಗೆ ರಜಾ, ನೀವು ಬಂದರೆ ಎಷ್ಟ
ಚೆನ್ನಾಗಿರುತ್ತದೆ ಎಂದು ಕನಸು ಕಾಣುತ್ತಿದ್ದೆ."

"ಹಾಗಾದರೆ ನಾನೊಬ್ಬನೇ ಹುಚ್ಚನಲ್ಲ."

"ಹುಚ್ಚೋ ಬೆಪ್ಪೋ ಎಲ್ಲದರಲ್ಲಿಯೂ ನಾನು ನಿಮ್ಮ ಜತೆಗಾತಿ.

"ಗೋಪಾಲಿ ರಗಳೆ ಮಾಡುತ್ತಾನೆಯೇ ?"

"ಅಜ್ಜಿ ಅವನ ಜವಾಬ್ದಾರಿ ಹೊತ್ತುಕೊಂಡಿದ್ದಾರೆ—ಸ್ವಲ್ಪವೂ ರಗಳೆಮಾಡುವುದಿಲ್ಲ....ನೀವು ಬರುವಾಗ ನಾರಾಯಣಸ್ವಾಮಿಯನ್ನು ನೋಡಿದ್ದಿರಾ ?"

"ಇಲ್ಲ—ನೋಡಲು ಪುರಸತ್ತಾಗಲಿಲ್ಲ."

"ಮೇಲಿಂದ ಮೇಲೆ ಅವನನ್ನು ನೋಡುತ್ತಿರಿ."

"ಏಕೆ ?"

"ಅವನ ವಿಷಯ ಇಲ್ಲಿ ಎಲ್ಲರಿಗೂ ಚಿಂತೆಯಾಗಿದೆ."

"ನಾರಾಯಣಸ್ವಾಮಿ ಕೆಟ್ಟದಾರಿಗೆ ಬಿದ್ದಿಲ್ಲವಲ್ಲಾ !"

"ಅವನ ಸ್ವಭಾವ ನಿಮಗೆ ಗೊತ್ತೇ ಇದೆಯಲ್ಲಾ."

"ಮುಂಗೋಪ—ಹಟಮಾರಿತನಗಳಿವೆ. ವಯಸ್ಸಾಗುತ್ತಾ ತಾನೇ ಸರಿಹೋಗುತ್ತದೆ. ಅದಕ್ಕಾಗಿ ಇಷ್ಟೊಂದು ಯೋಚನೆಮಾಡಬೇಕೇ ? – ಅಮ್ಮ ಮನಸ್ಸಿಗೆ ವ್ಯಥೆಮಾಡಿಕೊಂಡಿದ್ದಾರೆಯೇ ?"

"ಅಮ್ಮನ ವಿಷಯ ನಿಮಗೆ ಗೊತ್ತೇ ಇದೆಯಲ್ಲಾ. ಒಳಗೇ ಕೊರಗುತ್ತಿದ್ದಾಳೆ."

"ನಾರಾಯಣಸ್ವಾಮಿಗೆ ವಿವೇಕವಿಲ್ಲ—ಎಷ್ಟು ಜನ್ಮಗಳ ಪುಣ್ಯ ಮಾಡಿ ಇಂಥ ತಾಯಿಯನ್ನು ಪಡೆದಿದ್ದಾನೆಯೊ ! – ಈಗವರನ್ನು ನೋಯಿಸುವುದು ಮಹಾಪಾಪ !"

"ನಿಮಗೆ ಕಾಲೇಜ್ ಯಾವಾಗ ?"

"ಸೋಮವಾರ ಹೋಗಬೇಕು. ಏಕೆ ? – ನಾನು ಬಂದದ್ದರಿಂದ ಬೇಸರವಾಯಿತೇ ?"

"ಒರಟು ಮಾತನಾಡದಿದ್ದರೆ ಗಂಡಸರಿಗೆ ತೃಪ್ತಿಯೇ ಇಲ್ಲ."

ಹೊರಗಡೆ ಮಾವನವರ ಧ್ವನಿಕೇಳಿಬರಲು ಗೋವಿಂದರಾಯ ಎದ್ದು ಹೋದ.

ಗೋಡಮ್ಮನವರು ಮರಿಮಗನನ್ನೆತ್ತಿಕೊಂಡು ಬಂದರು. ಗೋವಿಂದರಾಯನನ್ನು ಮಾತನಾಡಿಸಿ ಅವನ ಕೈಗೆ ಗೋಪಾಲಿಯನ್ನಿತ್ತರು. ಗೋಪಾಲಿ ಅಜ್ಜಿಯ ಬಳಿಗೆ ಹೋಗಲು ಹವಣಿಸಿದ.

ಗೋವಿಂದರಾಯ ಅವನನ್ನು ಕಮಲೂ ಬಳಿಗೆ ಕರೆದೊಯ್ದು

"ನೋಡಿದೆಯಾ ಈ ತುಂಟನ್ನ—ಮೂರೇ ದಿವಸದಲ್ಲಿ ನ
ಗುರುತೇ ಮರೆತುಬಿಟ್ಟಿದ್ದಾನೆ. ಅಜ್ಜಿಯಿದ್ದರೆ ಅವನಿಗೆ ಯಾರ
ಬೇಡ."

"ಅಜ್ಜಿ ಅವನ ಬಾಯಿಗೆ ದ್ರಾಕ್ಷಿ, ಕಲ್ಲುಸಕ್ಕರೆ ತುಂಬುತ್ತಿ
ತ್ತಾರೆ."

"ನೀನೂ ನನ್ನನ್ನು ಮರೆತುಬಿಡುತ್ತೀಯೇನೋ ?"

"ಏನು ಮಾತೆಂದು ಆಡುವಿರಿ. ನಾನು ಕಣ್ಣೀರು ಹಾಕುವುದನ
ನೋಡಲು ಇಷ್ಟವೆ ?"

"ಬೇಡ ಮಹಾರಾಯಿತಿ—ತಮಾಷೆಗಂದೆ." ಎಂದು ಗಲ
ಮಾಡುತ್ತಿದ್ದ ಗೋಪಾಲಿಯನ್ನು ಕರೆದುಕೊಂಡು ಹೊರಗೆ ಬಂದ.

ಮಾಧವರಾಯ ಅಳಿಯನನ್ನು ವಿಶ್ವಾಸಪೂರ್ವಕವಾ
ಸ್ವಾಗತಿಸಿ, ಕುಶಲಪ್ರಶ್ನೆ ಮಾಡುತ್ತ ಕುಳಿತ.

ಶನಿವಾರ, ಭಾನುವಾರ ಕಣ್ಣವೆ ಹಾಕುವುದರೊಳಗಾಗಿ ಕಳೆದ
ಹೋದವು. ಸೋಮವಾರ ಗೋವಿಂದರಾಯ ಮೈಸೂರಿಗೆ ಹೊರಡಲ
ಬೇಕಾಗಿತ್ತು. ಕಣ್ತುಂಬ ನೀರು ತಂದುಕೊಂಡ ಹೆಂಡತಿಯನ
ಗೋವಿಂದ ಸಂತೈಸುತ್ತಾ

"ಭಯ ಪಡಬೇಡ. ಸುಖವಾಗಿ ಮೈಕಳೆದು ಹೋಗುತ್ತದೆ."

"ನೀವು ಯಾವಾಗ ಬರುವಿರಿ ?"

"ವಾರದ ಕೊನೆಗೆ ಬರುತ್ತೇನೆ."

"ಅಲ್ಲಿಯವರೆಗೆ ತಡೆಯುವ ಹಾಗಿಲ್ಲ."

"ಮಾವನವರು ತಂತೀ ಕೊಟ್ಟರೆ ಬಂದುಬಿಡುತ್ತೇನೆ."

"ಆ ವೇಳೆಗೆ ನೀವು ಇಲ್ಲಿರಬೇಕೆಂದು ನನ್ನ ಆಸೆ."

"ಬರುತ್ತೇನೆ—ಯೋಚನೆ ಮಾಡಬೇಡ." ಎಂದು ಸಮಾಧಾ
ಹೇಳಿ ಹೆಂಡತಿಯಿಂದ ಬೀಳ್ಕೊಂಡ. ಮಾಧವರಾಯ ಸ್ಟೇಷನ್‌ವರೆ
ಬಂದು ಅಳಿಯನನ್ನು ರೈಲು ಹತ್ತಿಸಿದ.

ಗೋವಿಂದನ ಮನಸ್ಸು ಏಕೋ ಭಾರವಾಗಿತ್ತು. ಹೆಂಡತಿಯನ್ನು ಬಿಟ್ಟುಹೋಗಬೇಕಾದ ಬಂದ ಪ್ರಸಂಗದ ಚಿಂತೆಯ ಜತೆಗೆ ತನ್ನ ಅಸಹಾಯಕಸ್ಥಿತಿಯ ಅರಿವುಂಟಾಯಿತು. 'ನನ್ನ ಹೆಂಡತಿಯ ಬಾಣಂತನ ನನ್ನ ಮನೆಯಲ್ಲಿ ಮಾಡಿಸಲಾಗಲಿಲ್ಲವಲ್ಲ' ಎಂದು ಯೋಚಿಸಿದ. ಮರುಕ್ಷಣವೇ ರುಕ್ಮಿಣಮ್ಮನವರ ದಿವ್ಯವ್ಯಕ್ತಿತ್ವಎದುರು ಬಂದು ನಿಲ್ಲುತ್ತಿತ್ತು.

"ನಿಮ್ಮ ಮನೆ—ನಮ್ಮ ಮನೆ ಎಂದೇಕೆ ಭೇದ ಎಣಿಸುವಿರಿ. ಲೋಕಛತ್ರಕ್ಕೆ ನಾಲ್ಕು ದಿವಸ ಬಂದು ತಂಗುತ್ತೇವೆ. ಅದು ಮೈಸೂರಾದರೇನು—ಮಂಡ್ಯವಾದರೇನು?' ಎಂದು ಹೇಳಿದಂತಾಯಿತು."

ಕಮಲೂ ಚೊಚ್ಚಲು ಹೆರಿಗೆ ಸುಖಕರವಾಗಿರಲಿಲ್ಲ. ಗರ್ಭದಲ್ಲಿದ್ದ ಪಿಂಡ ಚೆನ್ನಾಗಿ ಬೆಳೆದಿತ್ತು. ತಾಯಿ, ಮಗು ಇಬ್ಬರೂ ಉಳಿಯುಲು ಸಾಧ್ಯವಿಲ್ಲ ಎಂದು ಎಲ್ಲರೂ ಭಾವಿಸಿಕೊಂಡಿದ್ದರು. ಆದರೆ ಗೋದಮ್ಮನವರ ಆರೈಕೆ ಗಂಡಾಂತರದಿಂದ ಅವಳನ್ನು ಪಾರುಮಾಡಿತ್ತು.

ಈ ಸಾರಿಯ ಹೆರಿಗೆ ಸ್ವಲ್ಪವೂ ಕಷ್ಟವಾಗದಂತೆ ಗೋದಮ್ಮ, ರುಕ್ಮಿಣಮ್ಮ ಎಲ್ಲ ಎಚ್ಚರಿಕೆ ತೆಗೆದುಕೊಂಡಿದ್ದರು. ಹೊತ್ತಿಗೆ ಸರಿಯಾಗಿ ಊಟ, ಕಷಾಯ, ಲೇಹ್ಯಗಳನ್ನು ಕೊಟ್ಟಿದ್ದರು. ಬಸುರಿ ಆರೋಗ್ಯವಾಗಿ ದೃಢಕಾಯಳಾಗಿದ್ದುದರಿಂದ ಕಷ್ಟವಿಲ್ಲದೆ ಹೆರಿಗೆಯಾಗುವ ವಿಷಯದಲ್ಲಿ ಗೋದಮ್ಮ, ರುಕ್ಮಿಣಮ್ಮ ಅಧೀರರಾಗಿರಲಿಲ್ಲ.

ಕಮಲೂಗೆ ನೋವು ಆರಂಭವಾಯಿತು.

"ತುಂಬ ನೋವಾಗುತ್ತಿದೆಯೇ?" ಎಂದು ರುಕ್ಮಿಣಮ್ಮ ಕೇಳಿದಳು.

"ಇಲ್ಲಮ್ಮ. ಹೋದಸಲದಷ್ಟು ನೋವಿಲ್ಲ."

"ಯಜಮಾನರಿಗೇನು ಬೇಕಂತೆ!"

"ಹೆಣ್ಣು ಬೇಕಂತೆ. ಒಂದು ಗಂಡು ಒಂದು ಹೆಣ್ಣು—ಇನ್ನು ಸಾಕು—ಮಕ್ಕಳು ಬೇಡ. ಇಬ್ಬರನ್ನು ಚೆನ್ನಾಗಿ ನೋಡಿಕೊಳ್ಳೋಣ ಎಂದು ಹೇಳಿದರು."

"ಭಗವಂತ ಕೊಟ್ಟರೆ ಬೇಡವೆನ್ನುವುದಕ್ಕಾಗುತ್ತದೆಯ
ಕಮಲೂ. ಅದಕ್ಕೆ ನೀನೇನು ಹೇಳಿದೆ."

"ಮನೆತುಂಬ ಮಕ್ಕಳಿದ್ದರೇ ಚೆನ್ನಮ್ಮ."

ರುಕ್ಮಿಣಿಯಮ್ಮ ಮಗಳ ಮಾತು ಕೇಳಿ ನಕ್ಕರು.

ನೋವು ದಿನದಿನಕ್ಕೆ ಹೆಚ್ಚುತ್ತಿದ್ದರೂ ಪ್ರಸವವಾಗುವ ಸೂ
ನೆಯೇ ಕಂಡು ಬರಲಿಲ್ಲ. ರುಕ್ಮಿಣಿಯಮ್ಮನ ಮನಸ್ಸಿನಲ್ಲಿ ಕಳ
ಮೂಡಿತು.

ಒಂದು ದಿನ ಮಧ್ಯಾಹ್ನ ಉರಿಬಿಸಿಲಿನಲ್ಲಿ ಮಾಧವರಾಯ ನಿಸ್ತೇ
ಮುಖ ಹೊತ್ತುಕೊಂಡು ಮನೆಗೆ ಬಂದ. ಮೆಲ್ಲನೆ ಕಮಲೂ ರೂವಿ
ಹಣಿಕಿ ಹಾಕಿ ಹೆಂಡತಿಯನ್ನು ಕರೆದ. ರುಕ್ಮಿಣಿ ಆಫೀಸ್‌ರೂವಿ
ಬರಲು.

"ಅಮ್ಮನನ್ನು ಕರಿ" ಎಂದು ಹೇಳಿದ.

ರುಕ್ಮಿಣಿಯೇ ಅತ್ತೆಯನ್ನು ಕರೆದುಕೊಂಡು ಬಂದಳು. ಮಾಧ
ರಾಯನ ರಹಸ್ಯವರ್ತನೆ ಅವರಿಬ್ಬರ ಹೃದಯದಲ್ಲಿಯೂ ಭಯವನ
ಬಿತ್ತಿತ್ತು.

"ಏನಾಯಿತು ಮಗೂ" ಎಂದು ಗೋದಮ್ಮ ಕೇಳಿದರು.

"ನಾನು ಕೂಡಲೆ ಮೈಸೂರಿಗೆ ಹೋಗಬೇಕಾಗಿದೆಯಮ್ಮ."

"ಏಕೆ ?"

"ಕೃಷ್ಣರಾಜೇಂದ್ರ ಆಸ್ಪತ್ರೆಯಿಂದ ತಾರು ಬಂದಿದೆ."

"ಯಾರ ವಿಷಯ."

"ಗೋವಿಂದನಿಗೆ ಅಪಘಾತವಾಗಿದೆಯಂತೆ. ಆಸ್ಪತ್ರೆಂ
ಡಾಕ್ಟರೇ ತಾರು ಮಾಡಿದ್ದಾರೆ. ಭಯಪಡುವ ಕಾರಣವಿಲ್ಲವೆಂ
ತಿಳಿಸಿದ್ದಾರೆ."

"ನಮ್ಮನ್ನು ಎಷ್ಟು ಪರಿಯಲ್ಲಿ ಪರೀಕ್ಷಿಸಿದರೂ ಭಗವಂತನಿ
ತೃಪ್ತಿಯಿಲ್ಲ ಮಾಧೂ—ಈ ಕೂಡಲೆ ಹೊರಡಪ್ಪ."

ರುಕ್ಮಿಣಿ ನೆಲದಮೇಲೆ ಕುಕ್ಕರಿಸಿಬಿಟ್ಟಿದ್ದಳು. ಗೋದವ

ವಳ ಬಳಿ ಕುಳಿತು, ಮುಂದಲೆ ನೇವರಿಸುತ್ತಾ

"ಭಯಪಡಬೇಡ ತಾಯಿ. ಎಲ್ಲಾ ಸರಿ ಹೋಗುತ್ತದೆ."

"ನಾನೂ ಜತೆಯಲ್ಲಿ ಬರಲೇ."

"ಕಮಲೂ ಬಿಟ್ಟು ನೀನು ಹೇಗೆ ಬರುತ್ತೀ. ನಾನು ನೋಡಿ ೂಂಡು ಬರುತ್ತೇನೆ. ಅಲ್ಲಿ ನಾನಿರಬೇಕಾದ ಸಂದರ್ಭವಿದ್ದರೆ ಯಾರ ್ರಯಲ್ಲಾದರೂ ಸುದ್ದಿ ತಿಳಿಸುತ್ತೇನೆ. ಕಮಲೂ ಕಿವಿಯ ಮೇಲೆ ಯಾರೂ ಈ ವಿಷಯ ಹಾಕಬೇಡಿ." ಎಂದು ಊಟವನ್ನು ಮಾಡದೆ ಾಧವರಾಯ ಹೊರಟುಬಿಟ್ಟ.

ತಂದೆಯನ್ನು ಕಾಣದಿದ್ದ ಕಮಲೂ ಸಂಜೆ ಕೇಳಿದಳು.

"ಅಮ್ಮಾ – ಅಣ್ಣಾ ಎಲ್ಲಿ ?"

"ಏನೋ ಅರ್ಜಂಟ್ ಕೆಲಸವಂತೆ; ಮೈಸೂರಿಗೆ ಹೋಗಿ ್ಕರಮ್ಮ."

"ಯಾವಾಗ ಬರುತ್ತಾರೆ."

"ರಾತ್ರಿ ಗಾಡೀಗೆ ಬರಬಹುದು."

ರಾತ್ರಿ ಗಾಡೀಗೆ ಮಾಧವರಾಯ ಮಂಡ್ಯಕ್ಕೆ ಹಿಂದಿರುಗಲಿಲ್ಲ. ವನ ಬದಲು ನಾರಾಯಣಸ್ವಾಮಿ ಗೆಳೆಯ ಚಿನ್ನಸ್ವಾಮಿ ಬಂದ.

ಮಾಧವರಾಯ ಬರದಿದ್ದುದನ್ನು ಕಂಡೇ ಗೋದಮ್ಮ, ರುಕ್ಮಿಣ ್ಮನ ಧೈರ್ಯ ಉಡುಗಿಹೋಯಿತು.

"ಏನಾಯಿತಪ್ಪಾ ಗೋವಿಂದನಿಗೆ" ಎಂದು ಗೋದಮ್ಮ ಗಾಬರಿ ಯಾಗಿ ಕೇಳಿದರು.

"ಬೈಸಿಕಲ್ ಮೇಲೆ ಕಾಲೇಜಿಗೆ ಹೋಗುತ್ತಿದ್ದರು. ಎದುರಿಗೆ ಂಬಿದ ಫುಡ್ ಲಾರಿ ಬಂದಿತು. ಲಾರಿಯ ಡ್ರೈವರ್ ಹತೋಟಿಮೀರಿ ಾರಿ ರಾಂಗ್ ಸೈಡ್ (Wrong Side) ಹೋಗಿ ಗೋವಿಂದರಾಯರ ್ಯಸಿಕಲ್ಲಿಗೆ ಡಿಕ್ಕಿ ಹೊಡೆಯಿತು. ಅವರು ಬೈಸಿಕಲ್ಲಿನಿಂದ ಬಿದ್ದುಬಿಟ್ಟರು.

"ತುಂಬ ಘಾಯವಾಗಿದೆಯೇ ?

"ಆಗಿದೆ – ತಲೆಗೆ ಪೆಟ್ಟುಬಿದ್ದು ರಕ್ತಸ್ರಾವವಾಗಿದೆ."

"ಡಾಕ್ಟರು ಏನು ಹೇಳುತ್ತಾರೆ."

"ಚಿಕಿತ್ಸೆಮಾಡಿ, ತಲೆಯ ಹಿಂಭಾಗ ಹೊಲೆದಿದ್ದಾರೆ. ವೈವೆ
ಪ್ರಜ್ಞೆಯಿಲ್ಲ.

"ಪ್ರಾಣಕ್ಕೆ. "

"ಭಯವಿಲ್ಲವೆಂದು ಡಾಕ್ಟರು ಹೇಳುತ್ತಿದ್ದಾರೆ."

"ಆಸ್ಪತ್ರೆಯಲ್ಲಿ ಯಾರಿದ್ದಾರೆ."

"ನಾಣಿ, ಶ್ರೀಧರ, ಮಾಧವರಾಯರು ಇದ್ದಾರೆ."

"ಏನು ಮಾಡುವುದಮ್ಮ" ಎಂದು ರುಕ್ಮಿಣಮ್ಮ ದುಃಖಿಸಿದ
ಗೋದಮ್ಮನವರು

"ಯಾರು ಏನು ಮಾಡುವುದಕ್ಕಾಗುತ್ತದಮ್ಮ.......ನಿನಗೇ
ಸುತ್ತದೆ ಚಿನ್ನಸ್ವಾಮಿ."

"ಏಟು ತುಂಬ ತಗುಲಿದೆ. ಪ್ರಾಣಕ್ಕೆ ಮೋಸವಿಲ್ಲವೆ
ಕಾಣುತ್ತದಮ್ಮ. ನಾನು ಮೈಸೂರಿಗೆ ಹೋಗುತ್ತೇನೆ – ಬೆಳಿಗ್ಗೆ ಬಂ
ಕಾಣುತ್ತೇನೆ." ಎಂದು ಹೇಳಿಹೋದ.

ಅತ್ತೆ, ಸೊಸೆ ಇಬ್ಬರಿಗೂ ದಿಕ್ಕೇ ತೋರದಂತಾಯಿತು. ತಲೆ
ಮೇಲೆ ಕೈಹೊತ್ತು ಕುಳಿತಿದ್ದ ರುಕ್ಮಿಣಿಯಕಡೆ ತಿರುಗಿ ಗೋದ

"ಕಮಲೂನ ನೋಡಿಕೋ ಹೋಗು ತಾಯಿ. ಈ ಸುದ್ದಿ ಮ
ಅವಳ ಕಿವಿಯಮೇಲೆ ಬೀಳಕೂಡದು" ಎಂದು ಹೇಳಿದರು.

ರಾತ್ರಿ ಕಮಲೂಗೆ ವೇದನೆ ಹೆಚ್ಚಾಯಿತು. ಅತ್ತೆ, ಸೆ
ಇಬ್ಬರೂ ಅವಳ ಮಗ್ಗಲು ಬಿಟ್ಟು ಕದಲಲಿಲ್ಲ. ರಾತ್ರಿ ಸುಮ
ಮೂರು ಗಂಟೆಯವೇಳೆಗೆ ಕಮಲೂ ಹೆಣ್ಣು ಮಗುವಿಗೆ ಜನನವಿತ್ತ

ಸುಖಪ್ರಸವವಾದ ಸಂತೋಷವನ್ನು ಅನುಭವಿಸುವುದಕ
ಗೋದಮ್ಮ, ರುಕ್ಮಿಣಿಯರಿಗೆ ಸಾಧ್ಯವಾಗಲಿಲ್ಲ. ಅವರ ಧ್ಯಾನವೆ
ಮೈಸೂರಿನಲ್ಲಿ ಸಾವುಜೀವಗಳ ಮಧ್ಯೆ ತೂಗಾಡುತ್ತಿದ್ದ ಗೋವಿ
ರಾಯನ ಮೇಲಿತ್ತು.

ಮಧ್ಯಾಹ್ನ ಮೈಸೂರಿನಿಂದ ಬಂದ ಚಿನ್ನಸ್ವಾಮಿಯ ಮುಖ

ಜೀವಕಳೆಯೇ ಇರಲಿಲ್ಲ. ಗೋದಮ್ಮ, ರುಕ್ಮಿಣಿಯಮ್ಮನನ್ನು ಮನೆಯ ಒಂದು ಪಕ್ಕಕ್ಕೆ ಕರೆದೊಯ್ದು

"ನೀವು ಧೈರ್ಯ ತೆಗೆದುಕೊಳ್ಳಬೇಕು" ಎಂದ.

ಅವನ ಬಾಯಲ್ಲಿ ಮುಂದೆ ಹೊರಡಬಹುದಾದ ಮಾತುಗಳನ್ನು ನಿರೀಕ್ಷಿಸುವುದು ಅತ್ತೆ ಸೊಸೆಗೆ ಕಷ್ಟವಾಗಲಿಲ್ಲ.

"ಏನಾಯಿತು."

"ನಿನ್ನೆ ರಾತ್ರಿ ನಾಲ್ಕು ಗಂಟೆಯ ವೇಳೆಗೆ........"

ರುಕ್ಮಿಣಮ್ಮ ನಿಶ್ಚೇತನಳಾಗಿ ಬಿದ್ದು ಬಿಟ್ಟಳು.

ಗೋದಮ್ಮ ಅವಳನ್ನುಪಚರಿಸಿ ಮೆಲ್ಲನೆ ಒಳಕ್ಕೆ ಕರೆದೊಯ್ದರು.

೩೫

ಶವಸಂಸ್ಕಾರ ವಿಧಿಯನ್ನು ಪೂರೈಸಿಕೊಂಡು ಅದೇ ಸಂ
ಮಾಧವರಾಯ ಮಂಡ್ಯ ತಲುಪಿದ. ಮನೆಯಲ್ಲಿ ಗಾಢಾಂಧಕಾರ
ದುಃಖವನ್ನುಸುರಲು, ಗಟ್ಟಿಯಾಗಿ ಮಾತಾಡಲೂ ಯಾರಿಗೂ
ಸಾಧ್ಯವಿಲ್ಲ. ಮಗನನ್ನು ಸೊಸೆಯನ್ನು ಸಮಾಧಾನ ಮಾಡುವ ಹೊ
ಗಾರಿಕೆ ಗೋದಮ್ಮನವರ ಮೇಲೆ ಬಿತ್ತು.

ಕಮಲೂ ಕಣ್ಣು ಬಿಟ್ಟೊಡನೆಯೇ ತಾಯಿಯ ಕಡೆ ತಿರುಗಿ

"ಅವರು ಬರಲಿಲ್ಲವೇ ?" ಎಂದು ಕೇಳಿದಳು.

ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ರುಕ್ಮಿಣಮ್ಮ ಸಹಿಸಿಕೊಂ

"ಬರುತ್ತಾರೆ" ಎಂದಳು.

"ಅವರಿಗೆ ಸುದ್ದಿ ಹೋಯಿತೇ ?"

"ಹೋಗಿದೆ. ಕಾಲೇಜಿನಲ್ಲಿ ತುಂಬ ಕೆಲಸವಂತೆ !"

"ಗಂಡಸರೇ ಹೀಗೆ. ಬರೀ ಸುಳ್ಳು."

"ಗೋವಿಂದ ಸುಳ್ಳು ಹೇಳುವವನಲ್ಲ ಕಮಲೂ."

"ನಿನ್ನ ಅಳಿಯನನ್ನ ನೀನು ವಹಿಸಿಕೊಂಡು ಮಾತನಾ
ಬೇಡಮ್ಮ ... ೇನೆಂದವರು ಇನ್ನೂ
ಮುಖ ತ...

"...

"ಅವರಿಗೆ ತಾರು ಕೊಡಲಿ."

"ಆಗಲಿ ತಾರು ಕೊಡಿಸುತ್ತೇನೆ. ನೀನು ಮನಸ್ಸಿಗೆ ಆತಂಕ ಟ್ಟುಕೊಳ್ಳಬೇಡ."

"ಅಮ್ಮ – ಈ ತುಂಟಿ ಹೆಸರೇನು ಗೊತ್ತೆ ?"

"ಏನು ?"

ಕಮಲೂ ಮುಖದಲ್ಲಿ ಸೂಕ್ಷ್ಮವಾದ ನಗೆ ಬಿತ್ತರಿಸಿತು. ಹಿಂದಿನ ಾವುದೊ ನೆನಪು ಅವಳ ಹೃದಯವನ್ನು ಅರಳಿಸಿತ್ತು.

"ನನಗೆ ಐದು ತಿಂಗಳಾಗಿತ್ತು. ಒಂದು ದಿನ ನಾನು ಅವರನ್ನು ಮಗೆ ಈ ಸಾರೆ ಮಗ ಬೇಕೊ ಮಗಳು ಬೇಕೋ' ಎಂದು ಕೇಳಿದೆ. ವರು ನನ್ನ ಪ್ರಶ್ನೆಗೆ ನೇರವಾಗಿ ಉತ್ತರ ಕೊಡದೆ 'ನಿನಗೇನು ಬೇಕು ೀಳು.' ಎಂದರು. ನಾನು ಥಟ್ಟನೆ 'ಮಗ ಬೇಕು.' ಎಂದೆ. 'ಮಗ ದ್ದಾನಲ್ಲ.' ಎಂದವರು ಹೇಳಿದರು. 'ಮನೆಯಲ್ಲಿ ಒಬ್ಬನೇ ಮಗನಿದ್ದರೆ ್ವಾರ್ಥಿಯಾಗುತ್ತಾನೆ. ನಾಣಿ ನೋಡಿದ್ದೀರಲ್ಲಾ ಹಾಗೆ.'– 'ಇಬ್ಬರು ಂಡು ಮಕ್ಕಳಿದ್ದರೆ ಇಬ್ಬರೂ ಸ್ವಾರ್ಥಿಗಳಾಗಬಹುದು.' – 'ಆದರೂ ಷ್ಟೋ ವಾಸಿ' ಎಂದು ನಾನು ಹೇಳಿ 'ನಿಮಗೆ !' ಎಂದು ಕೇಳಿದೆ. ನನಗೆ ಮಗಳು ಬೇಕು. ತಂದೆಗಾಗಿ ಮರಗುವವಳು ಮಗಳಲ್ಲದೆ ಾಗನಲ್ಲ' ಎಂದರು. 'ಹೆಣ್ಣುಮಕ್ಕಳು ಕಂಡವರ ಮನೆಗೆ ಹೆಸರು ೀಳತಕ್ಕವರು. ಯಾವ ಸೌಭಾಗ್ಯಕ್ಕೆ ಅವರನ್ನು ಪಡೆಯಬೇಕು ೀಳಿ' 'ಎಂದೆ.' ನಮ್ಮ ಮನೆ ಮಗು ಇನ್ನೊಬ್ಬರ ಮನೆ ಬೆಳಗಿಸುತ್ತದೆ. ನ್ನೊಬ್ಬರ ಮನೆ ಮಗು ನಮ್ಮನೆ ಬೆಳಗಿಸುತ್ತದೆ. ಇದು ೌಭಾಗ್ಯವಲ್ಲವೇನು – ನೋಡು ಕಮಲೂ ನಮ್ಮ ಮಗಳಿಗೆ ಸೌಭಾಗ್ಯ ಂದೇ ಹೆಸರಿಡೋಣ ಎಂದರು.

ಬಹು ಪ್ರಯಾಸದಿಂದ ರುಕ್ಮಿಣಮ್ಮ ತಡೆದಿದ್ದ ದುಃಖದ ಕಟ್ಟೆ ಡೆದು ಬಂದಿತು.

"ಯಾಕಮ್ಮ ಅಳುತ್ತೀ ?"

"ಸಂತೋಷವಾಯಿತು."